ಕನ್ನಡ ಸಾಹಿತ್ಯ ಪರಿಷತ್ತು

ಮನುಷ್ಯ ಜಾತಿ ತಾನೊಂದೆ ವಲಂ

ದಲಿತ ಸಾಹಿತ್ಯ ಸಂಪುಟ

# ಅಂಕಣ ಬರಹ



ಪ್ರಧಾನ ಸಂಪಾದಕರು
**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು
**ಡಾ.ಅಣ್ಣಮ್ಮ**

# ದಲಿತ ಸಾಹಿತ್ಯ ಸಂಪುಟ

# ಅಂಕಣ ಬರಹ

ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು

**ಡಾ. ಅಣ್ಣಮ್ಮ**

**ಕನ್ನಡ ಸಾಹಿತ್ಯ ಪರಿಷತ್ತು**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು ೫೬೦ ೦೧೮.

DALITA SAHITYA SAMPUTA ANKANA BARAHA - Edited by: Dr. Annamma Published by: Nadoja Dr. Manu Baligar, President, Kannada Sahitya Parishattu, Pampa Mahakavi Road, Chamarajapete, Bengaluru - 560018 Pages: xii+272 Price: Rs.300-00: 2020

ಪ್ರಥಮ ಮುದ್ರಣ : ೨೦೨೦

ಪ್ರತಿಗಳು : ೫೦೦

ಬೆಲೆ : ಮುನ್ನೂರು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

**ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿ**

---

**ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು**

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಸಂಚಾಲಕರು

ಡಾ. ಮೂಾಕೂಡು ಚಿನ್ನಸ್ವಾಮಿ, ಸದಸ್ಯರು

ಡಾ. ಅರ್ಜುನ ಗೊಳಸಂಗಿ, ಸದಸ್ಯರು

ಡಾ. ಬಿ.ಟಿ. ಲಲಿತಾ ನಾಯಕ್, ಸದಸ್ಯರು

**ಪ್ರಕಟಣಾ ಸಮಿತಿ**

**ನಾಡೋಜ ಡಾ. ಮನು ಬಳಿಗಾರ್**

ಅಧ್ಯಕ್ಷರು

ಸಮ್ಮೇಳನಾಧ್ಯಕ್ಷರು ಡಾ. ಹೆಚ್.ಎಸ್. ವೆಂಕಟೇಶಮೂರ್ತಿ

೮೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ ಡಾ. ಪದ್ಮರಾಜ ದಂಡಾವತಿ

**ಸದಸ್ಯರು**

ಶ್ರೀ ಜರಗನಹಳ್ಳಿ ಶಿವಶಂಕರ

ಡಾ. ಮೂಡಾಕೂಡು ಚಿನ್ನಸ್ವಾಮಿ

ಪ್ರೊ ಧರಣೇಂದ್ರ ಕುರಕುರಿ

ಶ್ರೀ ರಂಜಾನ್ ದರ್ಗಾ

ಡಾ. ಬಿ.ಕೆ. ರವಿ

ಡಾ. ತಮಿಳ್ ಸೆಲ್ವಿ

ಡಾ. ದೊಡ್ಡಮಲ್ಲಯ್ಯ

ಡಾ. ಎಚ್.ಎಲ್. ಪುಷ್ಪ

ಶ್ರೀ ಎ.ಆರ್. ಉಜ್ಜನಪ್ಪ

ಶ್ರೀ ಸಂಜಯ ಅಡಿಗ

ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

ಗೌರವ ಕಾರ್ಯದರ್ಶಿಗಳು

ಡಾ. ರಾಜಶೇಖರ ಹತಗುಂದಿ

ಶ್ರೀ ವ.ಚ. ಚನ್ನೇಗೌಡ

ಗೌರವ ಕಾರ್ಯದರ್ಶಿಗಳು

ಶ್ರೀ ಪಿ. ಮಲ್ಲಿಕಾರ್ಜುನಪ್ಪ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಎಲಾಖೆ

ಮುದ್ರಣ : **ಬಿ.ಎಂ.ಶ್ರೀ, ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು**

# ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಾಡು, ನುಡಿ, ನೆಲ, ಜಲ ಹಾಗೂ ಸಾಹಿತ್ಯ-ಸಂಸ್ಕೃತಿಗೆ ಪ್ರೇರಕ ಶಕ್ತಿಯಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೧೯೧೫ನೇ ಇಸವಿ ಮೇ ೫ ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ದೂರದೃಷ್ಟಿಯ ಫಲವಾಗಿ ಅಸ್ತಿತ್ವಕ್ಕೆ ಬಂದಿತು. ಅಂದಿನ ಮೈಸೂರು ಸಂಸ್ಥಾನದ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯ ಅವರ ಒತ್ತಾಸೆಯೂ ಇಲ್ಲಿ ಜೊತೆಗೂಡಿತ್ತು. ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ನನ್ನನ್ನೂ ಸೇರಿ ೨೫ ಅಧ್ಯಕ್ಷರನ್ನು ಕಂಡಿದೆ. ೮೪ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಿ ಕನ್ನಡದ ಕಹಳೆ ಮೊಳಗಿಸಿದೆ. ಇಲ್ಲಿಯವರೆಗೆ ೧೫೦೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ-ಸಂಸ್ಕೃತಿ ಪ್ರಸಾರದಲ್ಲಿ ಮಹತ್ತರ ಸಾಧನೆಗೈದಿದೆ. ೧೦೫ನೇ ವರ್ಷಕ್ಕೆ ಕಾಲಿಟ್ಟ ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು: 'ದಲಿತ ಸಾಹಿತ್ಯ ಸಂಪುಟ'ದ ಯೋಜನೆ ರೂಪಿಸಿ ಕಾರ್ಯಗತಗೊಳಿಸುತ್ತಿರುವುದು ಚರಿತ್ರಾರ್ಹ ಸಂಗತಿಯೆಂದೇ ಭಾವಿಸಿದ್ದೇನೆ. 'ದಲಿತ ಸಾಹಿತ್ಯ ಸಂಪುಟ' ರಚನಾ ಸಮಿತಿಯ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು "ಭಾರತೀಯ ಯಾವ ಭಾಷೆಗಳಲ್ಲೂ ಈ ಬಗೆಯ ಸಂಪುಟಗಳು ಪ್ರಕಟಗೊಂಡಿಲ್ಲ" ಎಂದು ಹೇಳಿರುವುದು ಈ ಯೋಜನೆಯ ಐತಿಹಾಸಿಕ ಮಹತ್ವವನ್ನು ಎತ್ತಿ ತೋರಿಸುತ್ತದೆ.

'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ಮಾತನ್ನು ತನ್ನ ಘೋಷ ವಾಕ್ಯವಾಗಿ ಸ್ವೀಕರಿಸಿರುವ ಕನ್ನಡ ಸಾಹಿತ್ಯ ಪರಿಷತ್ತು, ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ನನ್ನ ಅವಧಿಯಲ್ಲಂತೂ ಒಂದು ವ್ರತದಂತೆ ಪಾಲಿಸುತ್ತಾ ಬಂದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಬಗೆಯ ಚಟುವಟಿಕೆಗಳಲ್ಲಿ ಸಮಸ್ತರನ್ನು ಒಳಗೊಳ್ಳುತ್ತಾ ನಿಜವಾದ ಅರ್ಥದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಲಾಗಿದೆ. ಅದರ ಭಾಗವಾಗಿಯೇ 'ದಲಿತ ಸಾಹಿತ್ಯ ಸಂಪುಟ'ದ ಈ ಚರಿತ್ರಾರ್ಹ ಯೋಜನೆ ಕಾರ್ಯಗತಗೊಂಡಿದ್ದು, ಸಮಾರಂಭವೊಂದರಲ್ಲಿ ಕರ್ನಾಟಕ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಅರ್ಜುನ ಗೊಳಸಂಗಿಯವರು 'ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು ಹೊರತಂದರೆ ಒಳ್ಳೆಯದು. ಅದು ನಿಮ್ಮ ಅವಧಿಯಲ್ಲೇ ಕಾರ್ಯಗತಗೊಂಡರೆ ಚರಿತ್ರಾರ್ಹ ಸಂಗತಿ ಎನಿಸಿಕೊಳ್ಳುತ್ತದೆ' ಎಂದು ಪ್ರಸ್ತಾವನೆ ಇಟ್ಟರು. ತಕ್ಷಣವೇ ಕಾರ್ಯಪ್ರವೃತ್ತನಾದ ನಾನು ಕಾರ್ಯಕಾರಿ ಸಮಿತಿ ಅನುಮೋದನೆ ಪಡೆದು ಅಗತ್ಯದ ಆರ್ಥಿಕ ಸಂಪನ್ಮೂಲದ ವ್ಯವಸ್ಥೆ ಮಾಡಿಕೊಂಡು

'ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿ' ಅಸ್ತಿತ್ವಕ್ಕೆ ಬರುವಂತೆ ನೋಡಿಕೊಂಡೆ. ಅಷ್ಟು ಮಾತ್ರವಲ್ಲ; ಕಾಲಮಿತಿಯಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುವಂತೆ ಪ್ರಯತ್ನಿಸಿರುವೆ. ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿಯ ಸಂಚಾಲಕರಾಗಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ನಿರೀಕ್ಷೆಗೂ ಮೀರಿದ ವೇಗದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಒಟ್ಟು ಹತ್ತು ಸಂಪುಟಗಳನ್ನು ಹೊರತರಲು ಯೋಜನೆ ರೂಪಿಸಲಾಗಿದೆಯಾದರೂ ಮೊದಲ ಕಂತಿನಲ್ಲಿ ಐದು ಸಂಪುಟಗಳು ನಿಮ್ಮ ಕೈ ಸೇರುತ್ತಿವೆ. ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿಯ ಸದಸ್ಯರಾಗಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಡಾ. ಅರ್ಜುನ ಗೊಳಸಂಗಿ, ಡಾ. ಬಿ.ಟಿ. ಲಲಿತಾ ನಾಯಕ್ ಅವರು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ದಲಿತ ಸಂವೇದನೆ' ಒಳ ವಿದ್ಯುತ್ತಿನಂತೆ ಪ್ರವಹಿಸುತ್ತಲೇ ಇದೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತು ಪರೋಕ್ಷವಾಗಿ ಜಾತ್ಯತೀತ ಸಮಾಜದ ಕನಸನ್ನೇ ಪ್ರತಿಪಾದಿಸುತ್ತದೆ. ದಲಿತ ಸಂವೇದನೆಯ ಅಭಿವ್ಯಕ್ತಿಗೆ ಮತ್ತು ದಲಿತ ಪರ ಕಾಳಜಿಗೆ ಬಹುದೊಡ್ಡ ವೇದಿಕೆ ದೊರೆತದ್ದು ೧೨ನೇ ಶತಮಾನದ ವಚನ ಚಳವಳಿಯ ಕಾಲದಲ್ಲಿ, ಹಾಗೆ ನೋಡಿದರೆ ವಚನ ಚಳವಳಿಯ ಮುಖ್ಯ ಕಾಳಜಿಯೇ 'ದಲಿತ ಲೋಕ', ಅಸಂಖ್ಯಾತ ದಲಿತ ಶರಣರ ಅಭಿವ್ಯಕ್ತಿಗೆ ಮಾಧ್ಯಮವಾಗಿದ್ದು ಅನುಭವ ಮಂಟಪ, ಬಸವೋತ್ತರ ಯುಗದ ಮಹಾಕವಿ ಹರಿಹರನು, ಮಾದಾರ ಚನ್ನಯ್ಯ ಸೇರಿದಂತೆ ದಲಿತ ಹಾಗೂ ತಳ ಸಮುದಾಯದ ಶಿವಭಕ್ತರ 'ಭಕ್ತಿಯ ಪಾರಮ್ಯವನ್ನೇ', ಕಾವ್ಯವಾಗಿಸಿದ ಹರಿಹರನ ರಗಳೆಗಳು 'ದಲಿತ ಸಂವೇದನೆ'ಯ ಪ್ರತಿಬಿಂಬದಂತಿವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ೭೦-೮೦ರ ದಶಕ ದಲಿತ ಸಂವೇದನೆಯ ಪುನರುತ್ಥಾನದ ಯುಗ, ಹಾಗೆ ನೋಡಿದರೆ ಕಳೆದ ಶತಮಾನದ ೭೦-೮೦ರ ದಶಕ ಚಳವಳಿಗಳ ಕಾಲ, ದಲಿತ-ಬಂಡಾಯ ಚಳವಳಿಯ ಪ್ರಭಾವಳಿಯಲ್ಲಿ ಅಂದಿನ ಬಹುಪಾಲು ದಲಿತೇತರ ಸಾಹಿತಿಗಳೂ 'ದಲಿತ ಸಂವೇದನೆ'ಯೊಂದಿಗೆ ಮುಖಾಮುಖಿಯಾಗುವ ಸಂದರ್ಭ ಸೃಷ್ಟಿಯಾಯಿತು. ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಸೇರಿದಂತೆ ಹಲವರ ಸಾಹಿತ್ಯ ಒಂದು ಪರಂಪರೆಯ ಹುಟ್ಟಿಗೆ ಕಾರಣವಾದದ್ದು ಇತಿಹಾಸ, ದಲಿತ ಸಾಹಿತ್ಯ ಸಂಪುಟಗಳ ಪ್ರಕಟಣೆಯನ್ನು 'ದಲಿತ ಅಸ್ಮಿತೆ'ಯ ಭಾಗವಾಗಿ ನೋಡಬೇಕು. ದಲಿತ ಸಂವೇದನೆ; ಸೃಜನಶೀಲ ಪ್ರಕಾರಗಳಾದ ಕತೆ, ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಢಾಳಾಗಿ ಎದ್ದು ಕಾಣುತ್ತದೆ. ಸೃಜನೇತರ ಪ್ರಕಾರಗಳಲ್ಲಿ ದಲಿತ ಸಂವೇದನೆಯ ಹೆಜ್ಜೆ ಗುರುತುಗಳನ್ನು ಪತ್ತೆ ಹಚ್ಚಲು ಹಾಗೂ ಒಟ್ಟು ಕನ್ನಡ ಕಟ್ಟುವ ಕಾಯಕದಲ್ಲಿ ದಲಿತ ವಿದ್ವಾಂಸರ ಪಾಲ್ಗೊಳ್ಳುವಿಕೆಯನ್ನು ಈ ಸಂಪುಟಗಳ ಮೂಲಕ ಗುರುತಿಸಬಹುದಾಗಿದೆ. ದಲಿತ ಅಸ್ಮಿತೆಯ ಚಹರೆಯನ್ನು ಈ ಎಲ್ಲ ಸಂಪುಟಗಳು ಹೆಚ್ಚು ಸ್ಪಷ್ಟಗೊಳಿಸುತ್ತವೆ.

ದಲಿತ ಸಾಹಿತ್ಯ ಸಂಪುಟಗಳನ್ನು ಪ್ರಾತಿನಿಧಿಕವಾಗಿ ರೂಪಿಸಲಾಗಿದೆ. ಹಾಗೂ ಇಲ್ಲಿ ಪ್ರಾದೇಶಿಕ ನ್ಯಾಯ ಮತ್ತು ಲಿಂಗ ಸಮಾನತೆಯನ್ನು ಪಾಲಿಸಲಾಗಿದೆ. ಕತೆ, ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಅಭಿವ್ಯಕ್ತಿಗೊಂಡ 'ದಲಿತ ಸಂವೇದನೆ'ಯ ವಿಭಿನ್ನ ಆಯಾಮವನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ. ಸೃಜನೇತರ ಪ್ರಕಾರಗಳಲ್ಲಿ ದಲಿತ ಯುಗ ತಡವಾಗಿ



ಆರಂಭವಾಗಿದೆಯಾದರೂ ಬೆರಗು ಹುಟ್ಟಿಸುವ ಸಾಧನೆ ಕಾಣಬಹುದಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿನ ದಲಿತ ಸಂವೇದನೆಯ ಸ್ಥಿತ್ಯಂತರದ ನೆಲೆಗಳನ್ನು ಶೋಧಿಸುವ ಅಧ್ಯಯನಗಳು ಸಾಕಷ್ಟು ನಡೆದಿದ್ದವು. ಆದರೆ ದಲಿತ ಸಾಹಿತ್ಯದ ಪ್ರಾತಿನಿಧಿಕ ಪಠ್ಯಗಳ ಮಾದರಿಗಳನ್ನು ಒಂದೆಡೆ ಸಂಗ್ರಹಿಸಿ ಸಂಪುಟಗಳಲ್ಲಿ ಪ್ರಕಟಿಸುತ್ತಿರುವುದು ಇದೇ ಮೊದಲು, ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಹೆಮ್ಮೆ ಪಡುತ್ತದೆ. ದಲಿತ ಸಾಹಿತ್ಯ ಸಂಪುಟ ಯೋಜನೆ ಯಶಸ್ವಿಯಾಗಿ ಕಾರ್ಯಗತವಾಗಲು ಶ್ರಮಿಸಿದ ಸಮಿತಿಯ ಸಂಚಾಲಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ವಿಶೇಷ ಕೃತಜ್ಞತೆ ಸಲ್ಲಿಸುತ್ತೇನೆ. ಸಮಿತಿಯ ಸದಸ್ಯರಾದ ಡಾ. ಮೂಡಾಕೂಡು ಚಿನ್ನಸ್ವಾಮಿ, ಡಾ. ಅರ್ಜುನ ಗೊಳಸಂಗಿ, ಡಾ. ಬಿ.ಟಿ. ಲಲಿತಾನಾಯಕ್ ಅವರಿಗೂ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಕಾಲಮಿತಿಯಲ್ಲಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟ ಎಲ್ಲ ಸಂಪಾದಕರಿಗೆ ಕೃತಜ್ಞತೆಗಳು, ದಲಿತ ಸಾಹಿತ್ಯ ಸಂಪುಟ ಯೋಜನೆಯಡಿ ಪ್ರಕಟಗೊಳ್ಳುತ್ತಿರುವ 'ಅಂಕಣ ಬರಹ' ಸಂಪುಟವನ್ನು ಅದರ ಸಂಪಾದಕರಾದ ಡಾ. ಅಣ್ಣಮ್ಮ ಅವರು ಅಚ್ಚುಕಟ್ಟಾಗಿ ಸಿದ್ಧಪಡಿಸಿ ಕೊಟ್ಟಿದ್ದಾರೆ. ಅಷ್ಟು ಮಾತ್ರವಲ್ಲ; ಅಂಕಣ ಬರಹ ಸಂಪುಟದ ಎಲ್ಲ ಲೇಖಕರ ಅನುಮತಿಯನ್ನೂ ಪಡೆದಿರುವುದಾಗಿ ತಿಳಿಸಿದ್ದಾರೆ. ಈ ಸಂಪುಟದ ಸಂಪಾದಕರಿಗೆ ಮತ್ತು ಎಲ್ಲ ಲೇಖಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಯೋಜನೆಯಡಿಯ ಎಲ್ಲ ಸಂಪುಟಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಬಿ.ಎಂ.ಶ್ರೀ ಆಫ್‌ಸೆಟ್ ಅಚ್ಚುಕೂಟದ ಸಿಬ್ಬಂದಿಗೆ ಹಾಗೂ ಪ್ರಕಟಣೆಗೆ ಸಹಕರಿಸಿದ ಪ್ರಕಟಣಾ ಸಮಿತಿಯ ಸದಸ್ಯರಿಗೆ ನನ್ನ ಕೃತಜ್ಞತೆಗಳು.

೧೬-೬-೨೦೨೦ **ನಾಡೋಜ ಡಾ. ಮನು ಬಳಿಗಾರ್**

ಅಧ್ಯಕ್ಷರು

## ಸಂಪಾದಕರ ಮಾತು

ಕನ್ನಡ ಸಾಹಿತ್ಯ ಪರಿಷತ್ತಿನ ಮಹತ್ತರ ಯೋಜನೆಯಾದ ದಲಿತ ಸಾಹಿತ್ಯ ಸಂಪುಟಗಳ ಪ್ರಕಟಣೆಯ ಯೋಜನೆಯೇ ಅದ್ಭುತವಾದದ್ದು. ದಲಿತರು ತಾವು ಆಗಾಗ ಬರೆದ, ಬರೆದದ್ದನ್ನು ಪ್ರಕಟಪಡಿಸಿದ, ಬರೆಯಲು ಪ್ರೇರೇಪಣೆ ಪಡೆದ ಸಂದರ್ಭಗಳು ಕಡಿಮೆ ಎನ್ನಬಹುದು. ೧೯೭೦ರ ದಶಕದಲ್ಲಿ ದಲಿತ ಸಾಹಿತ್ಯ ಮುಂಚೂಣಿಗೆ ಬಂದ ಸಂದರ್ಭ. ಆ ಸಂದರ್ಭಕ್ಕಾಗಲೇ ಗಟ್ಟಿ ಬರಹಗಳನ್ನು ರೂಪಿಸಿಕೊಂಡು, ದಲಿತ ಲೋಕಕ್ಕೊಂದು ಅಥೆಂಟಿಕ್ಕಾದ ರೂಪವನ್ನು ಕೊಟ್ಟ ಅನೇಕ ಹಿರಿಯ ಸಾಹಿತಿಗಳಿಗೆ ಪ್ರಮುಖ ಪತ್ರಿಕೆಗಳಲ್ಲೋ, ದಿನ ಪತ್ರಿಕೆಗಳಲ್ಲೋ ಬರೆಯುವ ಅವಕಾಶದ ಕೊರತೆ ಇಲ್ಲದಿದ್ದರೂ, ಇವರಾರೂ ಅಂಕಣಗಳನ್ನು ಬರೆಯುತ್ತಿರಲಿಲ್ಲ. ಕ್ರಮೇಣ ೮೦ರ ದಶಕದ ಆಸುಪಾಸಿನಲ್ಲಿ ಅಕಾಡೆಮಿಕ್ ವಲಯದ ಸಾಹಿತಿಗಳು ಎಲ್ಲ ವಿಚಾರಗಳಲ್ಲೂ ಪ್ರಬುದ್ಧರಾಗಿ ಬರೆಯತೊಡಗಿದಾಗ ಅವರು ಅಂಕಣ ಬರಹ ಬರೆಯುವುದಕ್ಕೂ 'ಅವಕಾಶ' ಪಡೆದುಕೊಂಡರು.

ಪತ್ರಿಕೆಗೂ, ಅಂಕಣಕ್ಕೂ ನಂಟು. ಸ್ಥೂಲವಾಗಿ ಹೇಳುವುದಾದರೆ, ಮುದ್ರಣ ದೃಷ್ಟಿಯಿಂದ ಹಾಗೂ ಓದುಗರ ವಾಚನ ಸೌಲಭ್ಯಕ್ಕಾಗಿ ಮಾಡಿದ ವಿಭಾಗಗಳು ಅಂಕಣಗಳು. ವಿಶಿಷ್ಟವಾದ ಅರ್ಥದಲ್ಲಿ ಅಂಕಣಗಳು ಪತ್ರಿಕೆಯಲ್ಲಿ ವಿಷಯಾನುಗುಣವಾಗಿ ವಿಷಯವನ್ನು ಕುರಿತ ಅಥವಾ ನಿರ್ದಿಷ್ಟ ವ್ಯಕ್ತಿಯೊಬ್ಬರು ಬರೆಯುವ ಲೇಖನ ಎಂಬುದು ಅಂಕಣಕ್ಕೆ ನಿಘಂಟು ನೀಡುವ ವ್ಯಾಖ್ಯೆ. ಇದನ್ನು ಇಂಗ್ಲಿಷಿನಲ್ಲಿ 'ಕಾಲಂ' ಎಂದು ಕರೆಯುವುದುಂಟು.

ಕನ್ನಡದಲ್ಲೂ ಅಂಕಣ ಎನ್ನುವುದು ಹಳೆಯ ಪದ. ಪತ್ರಿಕೆಯ ಉಗಮವಾಗುವುದಕ್ಕೂ ಮುಂಚೆನಿಂದಲೂ ಬಳಕೆಯಲ್ಲಿರುವಂಥದ್ದು, ಇದು ಮನೆಯ ಎರಡು ಕಂಬಗಳ ಅಥವಾ ಎರಡು ತೊಲೆಗಳ ನಡುವೆ ಇರುವ ಪ್ರದೇಶದ ಮಿತಿ. ಇದು ಒಂದು ನಿರ್ದಿಷ್ಟವಾದ ಅಳತೆ. ಇದು ಇಷ್ಟು ಚದರಗಳ(ಸ್ಕ್ವೇರ್) ಮನೆ ಎಂದು ಹೇಳುವ ಹಾಗೆ, ಇಷ್ಟು ಅಂಕಣಗಳ ಮನೆ ಎಂದು ಹೇಳುವುದು ಹಿಂದೆ ಸಾಮಾನ್ಯವಾಗಿತ್ತು. ಹಾಗೆಯೇ "ಒಂದು ಪತ್ರಿಕೆಯಲ್ಲಿ" ನಿರ್ದಿಷ್ಟ ವ್ಯಕ್ತಿಯೊಬ್ಬರು, ಒಂದು ನಿರ್ದಿಷ್ಟ ಜಾಗದ ಅಳತೆಯಲ್ಲಿ ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಬರೆಯುವ ಬರಹವೇ ಅಂಕಣ ಬರಹ,

ಸಾಹಿತ್ಯ ಕ್ಷೇತ್ರದ ಅನೇಕ ಪ್ರಕಾರಗಳಲ್ಲಿ ಗುರುತಿಸಿಕೊಂಡಿರುವ ಹಿರಿಯ ಸಾಹಿತಿಗಳೇ ಕೆಲವರು 'ತಮಗೆ' ಅಂಕಣ ಬರೆಯಲು ಅವಕಾಶವಾಗಲಿಲ್ಲ. ಪತ್ರಿಕಾ ಮಾಧ್ಯಮಕ್ಕೆ ತಾವುಗಳು ಹೇಗೆ ಅಸ್ಪೃಶ್ಯರಾಗಿಯೇ ಉಳಿದುಕೊಂಡರು ಎನ್ನುವುದನ್ನು ಹೇಳಿಕೊಂಡಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮನು ಬಳಿಗಾರ್ ಅವರೊಬ್ಬ ಸಾಹಿತ್ಯ ಪ್ರೇಮಿ. ಅವರಿಗೆ ನಾನು ಧನ್ಯವಾದ ಹೇಳಿದರೆ ಮುಖಸ್ತುತಿಯಾಗಬಹುದು. ಏಕೆಂದರೆ ಅವರು ಇತರರನ್ನೆಂತೋ ಅದಕ್ಕಿಂತಲೂ ಮಿಗಿಲಾಗಿ

ದಲಿತ ಸಾಹಿತಿಗಳನ್ನು ಅಂತಃಕರಣದಿಂದ ಗೌರವಿಸುವ ವಿದ್ವತ್ತುಳ್ಳ ಸಹೃದಯಿ! ಇಂಥ ಸಹೃದಯರು ನನಗೆ ದೂರವಾಣಿ ಕರೆ ಮಾಡಿ, ಸಭೆಗೆ ಕರೆಸಿಕೊಂಡು, ದಲಿತ ಸಾಹಿತ್ಯ ಸಂಪುಟದ ಅಮೋಘ ಯೋಜನೆಯಲ್ಲಿ 'ಅಂಕಣ' ಬರಹವನ್ನು ಸಂಪಾದಿಸಿಕೊಡಬೇಕೆಂದು ಕೇಳಿದಾಗ ನನಗೆ ಅಚ್ಚರಿ ಆಯಿತು, ನಾನು ಈ ಕೆಲಸವನ್ನು ಖುಷಿಯಿಂದ ಒಪ್ಪಿಕೊಂಡೆ. ಪ್ರಕಟಣಾ ವಿಭಾಗದ ಸಂಚಾಲಕರಾದ ಡಾ.ಪದ್ಮರಾಜ ದಂಡಾವತಿಯವರು, 'ದಲಿತ ಸಾಹಿತ್ಯ ಸಂಪುಟಕ್ಕೆ ಉಳಿದ ಪ್ರಕಾರಗಳ ಕೊರತೆ ಇಲ್ಲವಾದರೂ, 'ಅಂಕಣ ಬರಹದ ಕೊರತೆ ಇದೆ. ನೀವಿದನ್ನು ಛಾಲೆಂಜ್ ಆಗಿ ತೆಗೆದುಕೊಳ್ಳಬೇಕು. ಮತ್ತು ಈ ಸಂಪುಟದಲ್ಲಿ ಮಹಿಳೆಯರ ಬರಹ ಇರಲೇಬೇಕು ಎಂದು ಷರತ್ತು ವಿಧಿಸಿದರು. ಅವರ ಕಾಳಜಿಗೆ ನಾನು ಸದಾಋಣಿ. ದಲಿತ ಸಾಹಿತ್ಯ ಸಂಪುಟದ ಸಂಚಾಲಕರೂ, ನನ್ನ ಮಾನಸ ಗುರುಗಳೂ ಆದ ಪ್ರೊಮಲ್ಲೇಪುರಂ ಜಿ.ವೆಂಕಟೇಶ್ ಅವರು ಈ ಕಾರ್ಯಕ್ಕೆ ನನ್ನನ್ನು ಆಯ್ಕೆ ಮಾಡಿದ್ದು ಹೆಮ್ಮೆ ಎನಿಸಿತು. ಒಬ್ಬ ಸಮರ್ಥ ಗುರುವಿಗೆ ಮಾತ್ರ ಸಮರ್ಥ ಶಿಷ್ಯ ಕಾಣಿಸುತ್ತಾಳೆ ಎನಿಸಿತು.

ಮಲ್ಲೇಪುರಂ ಅವರು ಸದಾ ವೈಚಾರಿಕತೆಯನ್ನು ಧ್ಯಾನಿಸುತ್ತಿರುವ ಪ್ರಮುಖ ಚಿಂತಕರು. ಸಂಸ್ಕೃತ ಭಾಷೆ, ಸಾಹಿತ್ಯದ ವಿದ್ವತ್ತಿರುವ ಇವರು ನನ್ನಂಥ ಎಷ್ಟೋ ಶಿಷ್ಯರನ್ನು ಪ್ರೋತ್ಸಾಹಿಸಿದ್ದಾರೆ, ಅವರ ಶಿಷ್ಯ ವಾತ್ಸಲ್ಯ ಅಪಾರವಾದದ್ದು. ಅವರಿಗೆ ನನ್ನ ಅನಂತ ಧನ್ಯವಾದಗಳು.

ಇಂಥ ದಲಿತ ಸಂಪುಟಗಳನ್ನು ಹೊರತರುವ ಕೆಲಸ ವಿಶ್ವವಿದ್ಯಾನಿಲಯಗಳು ಮಾಡುವ ಗುರುತರ ಕೆಲಸವೇ ಆದರೂ, ಅಂಥ ಜವಾಬ್ದಾರಿಯುತ ಕೆಲಸವನ್ನು ಕೈಗೆತ್ತಿಕೊಂಡು ಪೂರೈಸುವುದು ಅತ್ಯಂತ ಶ್ರೇಯಸ್ಕರವಾದದ್ದು, ಅದರಲ್ಲೂ ಅಂಕಣದಂತಹ ಪ್ರಕಾರವನ್ನು ಸಂಪಾದಿಸುವುದೂ ಸಹ ಒಂದು ಶಾಶ್ವತ, ಅಮೂಲ್ಯ ಕಾರ್ಯ ಎಂದು ನನಗೆ ಅರಿವಾಯಿತು. ಒಬ್ಬ ಸಾಹಿತಿ ಕಷ್ಟಪಟ್ಟರೆ, ತನ್ನ ಕಾಲಮಿತಿಯೊಳಗೆ ಒಂದು ಉತ್ತಮ ಪುಸ್ತಕ ಬರೆಯಬಹುದು. ಆದರೆ ಕಾಲಮಿತಿಯಲ್ಲಿ ಒಂದು ಪುಸ್ತಕ ಸಂಪಾದಿಸುವುದು ತುಂಬಾ ಶ್ರಮದ ಕೆಲಸ ಎನ್ನುವುದು ಅರಿವಾಯಿತು. ಇದೊಂದು ಮಧುಕರ ವೃತ್ತಿ. ಲೇಖಕರನ್ನು Convince ಮಾಡುವುದಕ್ಕೆ ತುಂಬಾ ಬುದ್ಧಿಶಕ್ತಿ ಇರಬೇಕು. ಅವರಿಗಾಗಿ ಕಾಯಬೇಕು. ಕಲಿತ ಜಾಣೆಯನ್ನೆಲ್ಲಾ ಖರ್ಚು ಮಾಡಬೇಕು. ಆಗ ಮಾತ್ರ ಇಂಥ ಕಾರ್ಯದಲ್ಲಿ ವಿಜಯಶಾಲಿಗಳಾಗಬಹುದು.

ನಾನು ಈ ಕೆಲಸಕ್ಕೆ ಕೈ ಹಾಕಿದಾಗ, ಅಂಕಣವನ್ನು ಯಾವ ದಲಿತ ಸಾಹಿತಿಗಳು ಬರೆಯುತ್ತಾರೆ, ಯಾವ ವಿಷಯದ ಬಗ್ಗೆ ಬರೆಯುತ್ತಾರೆ, ಯಾರನ್ನು ಈ ಬಗ್ಗೆ ಕೇಳುವುದು ಎಂದುಕೊಂಡಾಗ ತಕ್ಷಣ ಈ ಕಾರ್ಯದಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರೂ, ಹಿರಿಯರೂ, ಆತ್ಮೀಯರೂ ಆದ ಪ್ರೊ.ಸಣ್ಣರಾಮ ಅವರು

ಸಹಾಯಕ್ಕೆ ಬಂದರು. ಅನೇಕ ಸಾಹಿತಿಗಳ ವಿಳಾಸ, ಫೋನ್ ನಂಬರ್ ಇತ್ಯಾದಿ ಕೊಟ್ಟು ಉಪಕರಿಸಿದರು. ಹಾಗೆಯೇ ಕುವೆಂಪು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಮಿತ್ರರಾದ ಪ್ರೊ.ಶಿವಾನಂದ



ಕೆಳಗಿನಮನಿಯವರು ತಮ್ಮ ಅಮೂಲ್ಯವಾದ ಅಂಕಣ ಬರಹ ಕೊಟ್ಟಿದ್ದಲ್ಲದೆ, ನನಗೆ ಇನ್ನಷ್ಟು ಒತ್ತಾಸೆಯಾಗಿ ನಿಂತರು. ಈ ಮಹತ್ತರ ಯೋಜನೆಯ ರೂಪುರೇಷೆಯನ್ನು ತಿಳಿದಿದ್ದ ಅವರು ವಿಶ್ವವಿದ್ಯಾನಿಲಯದ ದಲಿತ ಸಾಹಿತಿಗಳ ಮಾಹಿತಿಯನ್ನು ಒದಗಿಸಿ, ಈ ಕೃತಿ ಇನ್ನಷ್ಟು ಚೆನ್ನಾಗಿ ರೂಪು ತಳೆಯಲು ಸಹಕರಿಸಿದ್ದಕ್ಕೆ ಅವರನ್ನು ಹೃತ್ಪೂರ್ವಕವಾಗಿ ಸ್ಮರಿಸುತ್ತೇನೆ.

ಕುವೆಂಪು ವಿವಿಯ ಸಹೋದರ ಡಾ.ಜಿ.ಪ್ರಶಾಂತ ನಾಯಕ್ ಅವರ ಸಹಕಾರವನ್ನೂ ಈ ಸಂದರ್ಭದಲ್ಲಿ ಮರೆಯಲಾರೆ. ನಾನು ಅಂಕಣ ಬರಹ ಕೇಳಿದೊಡನೆಯೇ ಕೊಟ್ಟು ಉಪಕರಿಸಿದ ಹಿರಿಯರಾದ ಬಿ.ಟಿ.ಲಲಿತಾನಾಯಕ್, ಪ್ರೀತಿಯ ಗುರುಗಳಾದ ಡಾ. ಸಿದ್ಧಲಿಂಗಯ್ಯ, ಡಾ.ಕಮಲಾ ಹಂಪನಾ, ಆತ್ಮೀಯರಾದ ಡಾ.ಸಮತಾ ಬಿ. ದೇಶಮಾನೆ, ದು.ಸರಸ್ವತಿ ಮೊದಲಾದವರನ್ನು ಈ ಸಂದರ್ಭದಲ್ಲಿ ನೆನೆಯಲು ಹರ್ಷವೆನಿಸುತ್ತದೆ. ಹಿರಿಯ ಪತ್ರಕರ್ತರಾದ ಶಿವಾಜಿ ಗಣೇಶನ್ ಲೇಖನ ಕೊಟ್ಟಿದ್ದು ತುಂಬಾ ಖುಷಿ ಎನಿಸಿತು. ನನ್ನ ಗುರುಗಳಾದ ಡಾ.ಬರಗೂರು ರಾಮಚಂದ್ರಪ್ಪ, ಮಾನಸ ಗುರುಗಳಾದ ಕೆ.ಬಿ.ಸಿದ್ದಯ್ಯ, ಡಾ.ಎಲ್.ಹನುಮಂತಯ್ಯ, ಖ್ಯಾತ ಕವಿಗಳಾದ ಡಾ.ಮೂಡಾ ಕೂಡು ಚಿನ್ನಸ್ವಾಮಿ ಮೊದಲಾದವರನ್ನು ಆತ್ಮೀಯವಾಗಿ ಸ್ಮರಿಸುತ್ತೇನೆ.

ಪ್ರಾಧ್ಯಾಪಕರಾದ ಎಚ್.ಟಿ.ಪೋತೆ, ಡಾ.ಬಿ.ಎಂ.ಪುಟ್ಟಯ್ಯ, ಡಾ.ವೆಂಕಟಗಿರಿ ದಳವಾಯಿ, ಡಾ.ಬಿ.ಗಂಗಾಧರ, ಓಂಪ್ರಕಾಶ್ ನಾಯಕ್, ಡಾ.ಅರುಣ್ ಜೋಳದಕೂಡ್ಲಿಗಿ, ಪ್ರದೀಪ್.ಎಲ್ ಮಾಲ್ಗುಡಿ, ಶಿವರಾಜು ಬ್ಯಾಡರಹಳ್ಳಿ, ರವಿಕುಮಾರ್ ಎನ್. ಇವರೆಲ್ಲರ ಸಹೃದಯ ಸ್ಪಂದನೆಗೆ ನಮನಗಳು. ಏಕೆಂದರೆ ಇವರೆಲ್ಲರೂ ವಿಭಿನ್ನ ಪ್ರಕಾರದ ಅಂಕಣ ಕೊಟ್ಟು ಸಹಕರಿಸಿದ್ದಕ್ಕೆ ತುಂಬಾ ತುಂಬಾ ಆಭಾರಿಯಾಗಿದ್ದೇನೆ.

ನನ್ನನ್ನು ಕಾಯಿಸಿ, ಸತಾಯಿಸಿ ಅಂತಿಮವಾಗಿ ಲೇಖನ ಕೊಡುವ ಮನಸ್ಸು ಮಾಡಿದ ಡಾ. ಓ. ನಾಗರಾಜು, ಡಾ. ಬಾಲಗುರುಮೂರ್ತಿ, ಡಾ. ವಡ್ಡಗೆರೆ ನಾಗರಾಜಯ್ಯ, ಹಿರಿಯರಾದ ಬಿ. ಆರ್. ಭಾಸ್ಕರ ಪ್ರಸಾದ್, ಮತ್ತು ಗುರುಪ್ರಸಾದ್ ಆತ್ಮೀಯರಾದ ಅಪ್ಪಗೆರೆ ಸೋಮಶೇಖರ್, ಎಸ್.ಕೆ. ಮಂಜುನಾಥ್, ಮಂಜುನಾಥ ವಿ. ಎಂ., ಲಕ್ಷ್ಮೀಕಾಂತ ಎಲ್. ವಿ. ಮೊದಲಾದವರಿಗೆ ನನ್ನ ಧನ್ಯವಾದಗಳು

ಅಂತಿಮವಾಗಿ ಡಾ. ನಾಗಭೂಷಣ, ಡಾ. ಆಶಾರಾಣಿ, ಕೆ. ತ್ಯಾಗರಾಜಪ್ಪ, ಬಿ. ತಿಪ್ಪೇಸ್ವಾಮಿ, ಜಿ. ಪಳನಿಸ್ವಾಮಿ ಜಾಗೇರಿ ಅರವಿಂದ ಇ. ಶ್ರೀಧರ ಆರ್. ವಿ. ಮೊದಲಾದವರನ್ನು ಆತ್ಮೀಯವಾಗಿ ಸ್ಮರಿಸುತ್ತೇನೆ.

ಈ ಕಾರ್ಯದಲ್ಲಿ ನಾನು ಧ್ಯಾನಸ್ಥಳಾಗಿದ್ದಾಗ ನನ್ನ ಪತಿ ಆಂಜನಪ್ಪನವರ ವಿವಿಧ ರೀತಿಯ ಸಹಕಾರಕ್ಕೆ ಕೃತಜ್ಞತೆ ಹೇಳಲೇಬೇಕು. ಅನೇಕ ಅಂಕಣಕಾರರಿಗೆ ಪತ್ರಮುಖೇನ ಮನವಿ ಕಳಿಸಿ, ಲೇಖನ ತರಿಸಿಕೊಟ್ಟಿದ್ದಾರೆ. ಲೇಖನಗಳು ಅಚ್ಚಾದಾಗ ಅವುಗಳ ದ್ರೂಫ್ ನೋಡಿದ್ದಾರೆ. ನಾನು ಕುಳಿತಲ್ಲಿಯೇ ಅನೇಕ ಸಣ್ಣ ಪುಟ್ಟ ಸಹಾಯ ಮಾಡಿ, ಈ ಯೋಜನೆಯ 'ಅಂಕಣ' ಕೃತಿ ಈ ರೂಪಿನಲ್ಲಿ ಕಾಣಿಸಲು ಸಹಕರಿಸಿದ್ದು ಅತ್ಯಂತ ಸ್ಮರಣೀಯವಾದದ್ದು. ಈ ಸಂದರ್ಭದಲ್ಲಿ ನನಗೆ ನೆರವಾದ ನನ್ನ ಮಕ್ಕಳು ರಮ್ಯ ಮತ್ತು ರಶ್ಮಿಯವರನ್ನು ನೆನೆಯುವುದು ಖುಷಿಯ ವಿಚಾರ ಎನಿಸುತ್ತದೆ.

ಈ ಮಹತ್ತರ ಯೋಜನೆಯಲ್ಲಿ ಸಕಾಲಕ್ಕೆ ಅಂಕಣಗಳನ್ನು ಕೊಟ್ಟಿದ್ದಲ್ಲದೆ, ಇದನ್ನು ಬಳಸಿಕೊಳ್ಳಲು ಮೌಖಿಕವಾಗಿ ತಮ್ಮ ಅನುಮತಿ ಕೊಟ್ಟು, ಉಪಕರಿಸಿದ ಎಲ್ಲ ಹಿರಿಯ ಮತ್ತು ಸಮಕಾಲೀನ ಅಂಕಣ ಬರಹಗಾರರಿಗೆ ನಾನು ಋಣಿಯಾಗಿದ್ದೇನೆ.

ಇಂಥ ಸಂಪುಟಗಳನ್ನು ಪ್ರಕಟಿಸಲು ಧೀಶಕ್ತಿ ತೋರಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರನ್ನು ಅಭಿಮಾನಪೂರ್ವಕವಾಗಿ ವಂದಿಸುತ್ತೇನೆ. ಈ ಸಂಪುಟದ ಸಿದ್ಧತೆಯಲ್ಲಿ ಸಹಕರಿಸಿ ನೆರವಾದ ಡಾ.ಪದ್ಮರಾಜ ದಂಡಾವತಿ, ಶ್ರೀ ವ.ಚ. ಚನ್ನೇಗೌಡ, ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಡಾ. ರಾಜಶೇಖರ ಹತಗುಂದಿ, ಶ್ರೀಮತಿ ಬಿ.ಎಂ. ನಾಗರತ್ನ ಮತ್ತು ಇತರ ಸಿಬ್ಬಂದಿ ವರ್ಗದವರಿಗೆ ನನ್ನ ನಮನಗಳು. ಇಲ್ಲಿಯ ಹಲವಾರು ಲೇಖನಗಳನ್ನು ಅಕ್ಷರ ಜೋಡಣೆ ಮಾಡಿಕೊಟ್ಟ ಶ್ರೀ ಸುರೇಶ್ ಆಚಾರಿಯವರಿಗೂ ಮತ್ತು ಸಂಗೀತ ಸುರೇಶ್ ಆಚಾರಿಯವರಿಗೂ ನನ್ನ ಅನಂತ ನಮನಗಳು.

**ಡಾ. ಅಣ್ಣಮ್ಮ**

ಪ್ರಾಧ್ಯಾಪಕರು

ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ

ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು

## ಪರಿವಿಡಿ


೦೧. ಸರ್ವಜ್ಞನ ನೀತಿಮಾರ್ಗ ೦೧

ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ

೦೨. ದಲಿತ ಚಳವಳಿ ಮತ್ತು ರಾಜಕಾರಣ ೦೬

• ಡಾ. ಸಣ್ಣರಾಮ

೦೩. ಒಳ ಮೀಸಲಾತಿ : ಒಳಗಣ್ಣು ತೆರೆಯಲಿ ೧೬

• ಕೆ.ಬಿ. ಸಿದ್ದಯ್ಯ

೦೪. ಊರುಕೇರಿ ೨೦

· ಪ್ರೊ. ಸಿದ್ಧಲಿಂಗಯ್ಯ

೦೫. ಹಿಂದಿ ಹೇರಿಕೆ: ದೇಶದ ವೈವಿಧ್ಯತೆಗೆ ಅಪಾಯ ೨೫

ಶಿವಾಜಿ ಗಣೇಶನ್

೦೬. ಸಂವಿಧಾನದ ಮೂಲ ಆಶಯಗಳು ಮತ್ತು ಓಡುತ್ತಿರುವ

'ಪ್ರಜಾಪ್ರಭುತ'ವೆಂಬ ಗಾಲಿಯಿಲ್ಲದ ರಥ ೩೦

·ಡಾ. ಮೂಡಾಕೂಡು ಚಿನ್ನಸ್ವಾಮಿ

೦೭. 'ಭಾರತಿ' (ತಿರುಮಲೆ ರಾಜಮ್ಮ ೩೬

· ಡಾ. ಕಮಲಾ ಹಂಪನಾ

೦೮. ಕನಕದಾಸ ನಾಟಕದ ಒಂದು ವಿಶ್ಲೇಷಣೆ ೪೭

· ಶ್ರೀಮತಿ. ಬಿ.ಟಿ. ಲಲಿತಾನಾಯಕ್

೦೯. ವ್ಯಕ್ತಿ ಉಲ್ಲೇಖ, ದೈವಸ್ಮರಣೆ ಇಲ್ಲದೆ ಸಂವಿಧಾನ ಸ್ಮರಣೆಯೊಂದೇ ೫೪

ಮುಖ್ಯವಾಗಲಿ

· ಡಾ. ಬರಗೂರು ರಾಮಚಂದ್ರಪ್ಪ,

೧೦. ಜನಪದ ಒಗಟುಗಳಲ್ಲಿ ಹಾಸ್ಯ ೫೭

· ಡಾ. ಶಿವಾನಂದ ಕೆಳಗಿನಮನಿ

೧೧. ಅಪ್ಪನೆಂದರೆ ... ಭರವಸೆ ೬೬

· ಡಾ. ಪ್ರಶಾಂತ ನಾಯಕ ಜಿ.

೧೨. ಭ್ರಷ್ಟಾಚಾರ ವಿರೋಧಿ ಹೋರಾಟ: ಅಸಲಿ ಹೋರಾಟ ೭೧

ಮತ್ತು ನಕಲಿ ಹೋರಾಟಗಳ ನೆಲೆಯಿಂದ

· ಡಾ. ಬಿ.ಎಂ. ಪುಟ್ಟಯ್ಯ

೧೩. ಕಂಗಳೊಳಗಣ ಕತ್ತಲೆ... ೮೦

· ಡಾ. ಎಚ್ ಟಿ ಪೋತೆ

೧೪. ಓಲೆ ಕಳ್ಳಿ ಅತ್ತೆ ೮೫

· ಡಾ. ಎಲ್. ಹನುಮಂತಯ್ಯ

೧೫. ಹಿಂದಣ ಗಾಂಧಿ-ಮುಂದಣ ಮಂಡೇಲಾ ೯೦

• ಡಾ. ವೆಂಕಟಗಿರಿ ದಳವಾಯಿ

೧೬. ಹಣತೆಯ ಬೆಳಕಿನಿಂದ ೯೩

· ಡಾ. ಸಮತಾ ಬಿ. ದೇಶಮಾನೆ

೧೭. ಪರಂಪರೆ ಮತ್ತು ಹೊಲೆಮಾದಿಗರ ಹಾಡು ೯೮

· ಡಾ. ಬಿ. ಗಂಗಾಧರ

೧೮. ಸಖೀಗೀತ - ಅಂಬೇಡ್ಕರ್ ಎಂಬ ಬೆಳಕಿಗೆ ಎಣ್ಣೆಯಾಗಿ ೧೧೩

ಉರಿದ ರಮಾಬಾಯಿ

· ಡಾ. ದು.ಸರಸ್ವತಿ

೧೯. ೩೧ ರ ರಾತ್ರಿಯ ಭ್ರಮೆಗಳು ೧೨೧

· ಓಂ ಪ್ರಕಾಶ್ ನಾಯಕ್

90. ಭಾಷೆ, ಬದುಕಿನ ಮೇಲೆ ಜಾಗತೀಕರಣದ ಸವಾರಿ ೧೨೬

· ಡಾ. ಶಿವರಾಜ ಬ್ಯಾಡರಹಳ್ಳಿ

೨೧. ಅಸ್ಪೃಶ್ಯ ಕಥನ-ಊರ ಬಾಗಿಲು ತೆರೆದಿದೆ, ಎದೆಯ ೧೩೩

ಬಾಗಿಲುಗಳು ಮಾತ್ರ ಮುಚ್ಚಿಯೇ ಇವೆ...!

· ಎನ್. ರವಿಕುಮಾರ್

೨೨. ಹಳ್ಳಿಯಲ್ಲಿ ದಲಿತರಿಗೆ ಕೇರಿಗಳು, ಪಟ್ಟಣಗಳಲ್ಲಿ ಕೊಳೆಗೇರಿಗಳು

ಬೆಂಗಳೂರು ನಗರದ ಕೊಳೆಗೇರಿಗಳು, ಧ್ವಂಸ ಹಾಗೂ ಸ್ಥಳಾಂತರ :

ಒಂದು ನೋಟ ೧೩೬

· ಐಸಕ್ ಅರುಳ್ ಸೆಲ್ವ

೨೩. ಅಂಚಿನ ಸಮುದಾಯಗಳ ಕಣ್ಣುಗಳಲ್ಲಿ ಮೂಡಬೇಕಿದೆ

ಸ್ವಾತಂತ್ರ್ಯದ ಬೆಳಕು ೧೪೨

· ಹುಲಿಕುಂಟೆ ಮೂರ್ತಿ

೧೪. ಅಭಿವೃದ್ಧಿಯಲ್ಲಿ ಅಗೋಚರವಾಗಿ ಉಳಿದವರು ೧೪೭

· ಡಾ. ಆರ್. ವಿ. ಚಂದ್ರಶೇಖರ್ ರಾಮೇನಹಳ್ಳಿ

೧೫. ಕನ್ನಡ ಶಾಸ್ತ್ರೀಯ ಭಾಷೆ: ಆಗಬೇಕಿರುವುದೇನು? ೧೫೫

· ಪ್ರದೀಪ್ ಎಲ್ ಮಾಲ್ಗುಡಿ

೧೬. ಶಿಕ್ಷಣ ಮತ್ತು ಉದ್ಯೋಗದ ಜನಪದೀಕರಣ ೧೬೦

· ಡಾ. ಅರುಣ್ ಜೋಳದಕೂಡ್ಲಿಗಿ

೧೭. ಗುಣಗಾನವಿಲ್ಲದ ಕವಿ ಮತ್ತು ಕವಿತೆಗಳ ಸುತ್ತ ೧೬೯

· ಗುರುಪ್ರಸಾದ್

೧೮. ಮಾಂಸ, ಎಂಜಲು, ಮಿಲನ ಮತ್ತು ಭಕ್ತಿಯ ಅನುಸಂಧಾನ ೧೭೩

· ಗೋವಿಂದರಾಜು ಎಂ ಕಲ್ಲೂರು

೧೯. ವಿಳಾಸವಿಲ್ಲದ ಪತ್ರ : ಎನ್.ಕೆ. ಕಾವ್ಯ ೧೭೮

· ಎಸ್.ಕೆ. ಮಂಜುನಾಥ್

೨೦. ವೆಂಕಟಾಲದ ಚರ್ಚ್ : ಒಂದು ನೆನಪು ೧೮೬

· ಮಂಜುನಾಥ ವಿ ಎಂ

೨೧. ಹರಿಹರನ ರಗಳೆಗಳಲ್ಲಿ ಮಾದರ ಚನ್ನಯ್ಯ ೧೯೦

· ಬಿ.ಆರ್. ಭಾಸ್ಕರ ಪ್ರಸಾದ್

೨೨. ಶರೀಫ ಮತ್ತು ಕೋಮು ಸೌಹಾರ್ದತೆ ೧೯೪

· ಡಾ. ನಾಗಭೂಷಣ ಬಗ್ಗನಡು

೨೩. ಕನ್ನಡ ದಲಿತ ಸಾಹಿತ್ಯ ಮೀಮಾಂಸೆಯನ್ನು ಕಟ್ಟುವಾಗಿನ

ಕೆಲವು ಬಿಕ್ಕಟ್ಟುಗಳು ೨೦೧

ಅಪ್ಪಗೆರೆ ಸೋಮಶೇಖರ್

೨೪. ಪರಂಪರೆ ಮತ್ತು ಆಧುನಿಕ ಸಂಸ್ಕೃತಿಯ ಜ್ಞಾನದ ನೆಲೆಗಳು ೨೦೮

·ಡಾ.ವಡ್ಡಗೆರೆ ನಾಗರಾಜಯ್ಯ

೨೫. ಮ್ಯಾಡಳ್ಳಿ ಗಿಡೇಗೌಡ ೨೨೨

· ಡಾ.ಬಾಲಗುರುಮೂರ್ತಿ

೨೬. ತುಮಕೂರು ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ೨೨೭

· ಡಾ.ಓ.ನಾಗರಾಜು

೨೭. ಕೊರೋನಾ ಕತ್ತಲಿಗೆ ಮನದ ಬೆಳಕು ೨೩೭

· ಆಶಾರಾಣಿ

೨೮. ಅಭಿವ್ಯಕ್ತಿ ಸ್ವಾತಂತ್ರ್ಯದ ಗ್ರಹಿಕೆ ೨೪೧

· ಅರವಿಂದ, ಇ

೩೯. ಪಂಪನ ಪದ್ಯವೊಂದರ ಎರಡು ನೋಟ ಕ್ರಮಗಳು:

ಕುಂತಿಯೆಂಬ ಕನ್ಯ ೧೪೪

· ಶ್ರೀಧರ.ಆರ್.ವಿ

೪೦. ಕೊರೋನಾ; ಲಾಕ್‌ಡೌನ್ ಮತ್ತು ಕಾವ್ಯಧ್ಯಾನ ೧೪೮

· ಲಕ್ಷ್ಮೀಕಾಂತ.ಎಲ್.ವಿ

೪೧. ದೀಪಾವಳಿ ಬಂಜಾರರಿಗೆ ಪವಿತ್ರ ಹಬ್ಬ ೧೫೩

ಜಿ.ಪಳನಿಸ್ವಾಮಿ ಜಾಗೇರಿ

೪೨. ದಲಿತ ಚಳವಳಿಯ ಒಡನಾಟ ಒಂದು ಅವಲೋಕನ ೧೬೧

ಟಿ.ತಿಪ್ಪೇಸ್ವಾಮಿ ಕೆರೆಯಾಗಲಹಳ್ಳಿ

೪೩. ಅರಸರ ಕಾಲದ ವೈಭವ ಕಣ್ಮರೆ ೧೬೬

· ಕೆ.ತ್ಯಾಗರಾಜಪ್ಪ

***

**ಸರ್ವಜ್ಞನ ನೀತಿಮಾರ್ಗ**

**- ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್**

ಪ್ರಾಚೀನ ಭಾರತದಲ್ಲಿ 'ನೀತಿ'ಗೆ ಪ್ರಾಮುಖ್ಯವಾದ ಸ್ಥಾನವಿತ್ತು. ಅದು ಜನಜೀವನಕ್ಕೂ ರಾಜ್ಯಧರ್ಮಕ್ಕೂ ಕೊಂಡಿಯಂತೆ ಕೆಲಸ ಮಾಡುತ್ತಿತ್ತು. ನೀತಿಯು ಹೇರುವ ಕ್ರಮವಾಗಿರಲಿಲ್ಲ. ಅದು ಸಹಜ ಪ್ರಕ್ರಿಯೆಯಾಗಿತ್ತು. ಜನರ ಬದುಕಿನಲ್ಲಿ ನೀತಿಗೊಂದು ಪ್ರಾಧಾನ್ಯವಿತ್ತು. ಇದಕ್ಕೆ ಮತವಾಗಲಿ, ಜಾತಿಯಾಗಲಿ, ಕುಲವಾಗಲಿ ಹೊರತಾಗಿರಲಿಲ್ಲ. ಇದಕ್ಕೆ ಹೆಣ್ಣು, ಗಂಡು ಎಂಬ ಭೇದವೂ ಇರಲಿಲ್ಲ. ಇಷ್ಟು ಮಾತ್ರವಲ್ಲ ಬಡವ-ಶ್ರೀಮಂತ ಎಂಬ ಭಿನ್ನತೆಗೂ ಅವಕಾಶ ಇರಲಿಲ್ಲ. ಆಗ ರಾಜನೇ ಪ್ರಜೆಗಳಿಗೆ ದೈವ ಆಗಿದ್ದುದರಿಂದ 'ಪ್ರಭುನೀತಿ' ಇತ್ತು. ಅದು ಜನರಿಗೊಪ್ಪಿತವೂ ಆಗಿತ್ತು. ರಾಜ ಮತ್ತು ದೈವ ಸಮಾನ ಪಾತಳಿಯ ಪ್ರತಿಮೆಗಳೇ ಆಗಿದ್ದವು. ಇದನ್ನು ಸಮಾಜ ಒಪ್ಪಿತ್ತು. ಸಾಮಾಜಿಕ, ಸಾಂಸ್ಕೃತಿಕ ನೀತಿಯನ್ನು ಪ್ರಭು ಆದವನು ಪೂರ್ವದ ಸ್ಮೃತಿ-ಶಾಸ್ತ್ರಗಳಿಂದ ರೂಪಿಸುತ್ತಿದ್ದನು. ಧಾತ್ಮಿಕ ನೆಲೆಯು ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ನಡೆಯುತ್ತಿತ್ತು. 'ಪ್ರಜಾನೀತಿ' ಎಂಬುದು ಎಲ್ಲರಿಗೂ ಒಪ್ಪಿತವೇ ಆಗಿತ್ತು. ಪ್ರಭುನೀತಿ ಮತ್ತು ಪ್ರಜಾನೀತಿ ಪರಸ್ಪರ ಅಭಿಮುಖ ಆಗಿತ್ತೇ ಹೊರತು ಅದು ವಿರುದ್ಧವಾಗಿರಲಿಲ್ಲ. ಏಕೆಂದರೆ 'ಧರ್ಮವಿರುದ್ಧ'ಕ್ಕೆ ಅಲ್ಲಿ ಅವಕಾಶವೇ ಇರುತ್ತಿರಲಿಲ್ಲ.

ಪ್ರಾಚೀನ ಭಾರತದ ರಾಜ್ಯವ್ಯವಸ್ಥೆ, ಪ್ರಜಾವ್ಯವಸ್ಥೆಗಳು ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ಮಗ್ನವಾಗಿದ್ದುವಷ್ಟೆ? ಉಪನಿಷತ್ತು ಮತ್ತು ಇತರ ಗ್ರಂಥಗಳಲ್ಲೂ ಸೂಚ್ಯವಾಗಿ 'ನೀತಿ'ಯ ಕಲ್ಪನೆಗಳಿರುವುದನ್ನು ನಾವು ಕಾಣಬಹುದು. 'ಧರ್ಮಾಧರ್ಮ' ಎಂಬ ಪರಿಕಲ್ಪನೆಯ ಆಳದಲ್ಲಿ 'ನೀತಿಮಾರ್ಗ'ದ ಸೂಚನೆಗಳುಂಟು. 'ಸದಸದ್ವಿವೇಕ' ಎಂಬ ಮಾತುಗಳಲ್ಲಿಯೂ ಮನುಷ್ಯನು ನೋಡಬೇಕಾದ ಮತ್ತು ಅನುಸರಿಸಬೇಕಾದ ಸೂಚನೆಗಳಿದ್ದುವು. ಇವುಗಳನ್ನು ಆಳವಾಗಿ ಪರಿಭಾವಿಸುವವರು ಶುಕ್ರಾಚಾರ್ಯ, ಬೃಹಸ್ಪತ್ಯಾಚಾರ್ಯ, ಕಾಮಂದಕಿ, ಚಾಣಕ್ಯ ಮುಂತಾದವರಿಂದ ಪ್ರಜಾಕ್ಷೇಮಕ್ಕಾಗಿ ರಚಿತವಾದ ಗ್ರಂಥಗಳನ್ನು ಆಸಕ್ತರು ನೋಡಬಹುದು.

ನೀತಿ' ಎಂಬುದಕ್ಕೆ ಹೊಂದಿಸುವುದು, ತಲುಪಿಸುವುದು ಎಂಬುದು ಮುಖ್ಯಾರ್ಥ ಆಗಿದ್ದರೂ ನಡತೆ, ವರ್ತನೆ, ನಡವಳಿಕೆ, ನಯ-ವಿನಯ, ಸಭ್ಯತೆ ಎಂಬ ಅರ್ಥಗಳೂ ಉಂಟು. ಕಾಳಿದಾಸನು ರಘುವಂಶದಲ್ಲಿ 'ಕಾಲೇ ಖಲು ಸಮಾರಬ್ಧಾಃ ಫಲಂ ಬಂತಿ ನೀತಯಃ' (೧೨-೬೧) ಎಂಬ ಮಾತನ್ನು ಆಡುತ್ತಾನೆ. ಈ ಮಾತಿನಲ್ಲಿ ವಿವೇಕದಿಂದ ಕೂಡಿದ ವರ್ತನೆಯನ್ನು ಪ್ರಾಕಟ್ಯವಾಗಿ ಅವನು ಹೇಳಿದ್ದಾನೆ. ಇದು ರಾಜ್ಯಾಡಳಿತ ಶಾಸ್ತ್ರದ ಭಾಗವಾಗಿತ್ತೆಂಬುದಕ್ಕೆ ನಿದರ್ಶನ ಎನಿಸಿದೆ.

ಮನುಷ್ಯನು ನೀತಿಯನ್ನು ಬೋಧಿಸುವ ಗ್ರಂಥಗಳಿಂದ ಧರ್ಮಾಧರ್ಮ, ನಯ ವಿವೇಕ, ಕಾರ್ಯನಿರ್ವಹಣೆಯಲ್ಲಿ ಚಾತುರ್ಯ, ಇವೇ ಮುಂತಾದ ಅನೇಕ ವಿಷಯಗಳಲ್ಲಿ ಪ್ರಾವೀಣ್ಯ ಪಡೆದು ಸಮಾಜದಲ್ಲಿ ಆದರ್ಶಪ್ರಾಯನಾಗಲು ಸಾಧ್ಯ. ನೀತಿಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಲೋಕಕ್ಕೂ ಮಾರ್ಗದರ್ಶನ ಮಾಡಿ ಜನತೆಯ ಜೀವನವನ್ನು ಸುಖಮಯವನ್ನಾಗಿ ಮಾಡಬಹುದು. ಇದು ನಮ್ಮ ದೇಶದ ಜನ ಇಟ್ಟುಕೊಂಡ ನಂಬುಗೆ, ರಾಮಾಯಣ-ಮಹಾಭಾರತ ಹಾಗೂ ಅನೇಕ ಕಾವ್ಯ- ಪುರಾಣಗಳನ್ನು ನೋಡಿದರೆ 'ನೀತಿ'ಯ ಪ್ರಾಮುಖ್ಯತೆ ನಮ್ಮ ಅರಿವಿಗೆ ಬರುತ್ತದೆಯಷ್ಟೆ? 'ನೀತಿ'ಯು ಎಲ್ಲರಿಗೂ ಸಮಾನವಾಗಿತ್ತು. ಅದು 'ರಾಜಧರ್ಮ'ದ ತಳಹದಿಯಾಗಿತ್ತು.

ಈ ಮೇಲಿನ ಮಾತುಗಳು ವಿಶಾಲವಾದ ಭಾರತದೇಶಕ್ಕೆ ಮಾತ್ರ ಅನ್ವಯ ಮಾತ್ರವಲ್ಲ ಬೇರೆ ಬೇರೆ ದೇಶಗಳಲ್ಲೂ 'ನೀತಿ'ಗೂ 'ನೀತಿಶಾಸ್ತ್ರ'ಕ್ಕೂ ಪ್ರಾಮುಖ್ಯತೆ ಇತ್ತು. ನೀತಿ ಎಂಬುದಕ್ಕೆ moral ಎಂಬ ಪದ ಪೂರ್ವದೇಶದಲ್ಲಿ ಬಳಕೆಯಾಗಿದೆ. ಗ್ರೀಕ್ ದೇಶದಲ್ಲಿ 'ರಾಜ್ಯನೀತಿ' ಎಂಬುದೇ ಪ್ರಧಾನವಾಗಿತ್ತು. ಅಲ್ಲಿ ethics ಎಂಬುದು ರಾಜಧರ್ಮ ಮತ್ತು ಪ್ರಜಾಧರ್ಮದ ಏ ಕಾಂಡ ಭಾಗವಾಗಿತ್ತು. ಪ್ರಾಚೀನ ಕರ್ನಾಟಕವೂ ಇದಕ್ಕೆ ಹೊರತಲ್ಲ. ಶ್ರೀವಿಜಯದ 'ಕವಿರಾಜಮಾರ್ಗ'ದ ಮೊದಲ ಪರಿಚ್ಛೇದದಲ್ಲಿಯೇ 'ನೀತಿಮಾರ್ಗ' 'ನೀತಿವಿದ' ಎಂಬ ಪರಿಕಲ್ಪನೆಗಳಿವೆ. 'ಹಿತಮಿದು, ಅಹಿತಮಿದು' ಎಂಬ ಮಾತುಗಳೂ ಅಲ್ಲಿವೆ. ಪಂಪಕವಿ ತನ್ನ ಆದಿಪುರಾಣದಲ್ಲಿ 'ನೀತಿಶಾಸ್ತ್ರಂಗಳೊಡನೆ ಅನೇಕ ಶಾಸ್ತ್ರಗಳುಂ' (೧೫-೩ ವಚನ) ಎಂಬ ಮಾತಿನಲ್ಲಿ ನೀತಿ-ನೀತಿಶಾಸ್ತ್ರದ ಮಹತ್ತ್ವವನ್ನು ಹೇಳಿದ್ದಾನೆ. ಇದನ್ನು ಹೇಳುವವರು 'ನೀತಿವಿದರು. ಕವಿರಾಜಮಾರ್ಗ ದಲ್ಲಿ 'ನೀತಿವಿದ ಅಮಳಕವಿತಾನೀತಿಯುತ ಕೆಲರೆ ಪರಮಕವಿವೃಷಭರ್ಕಳ್' (೧.೧೭) ಎಂಬ ಮಾತುಂಟು.

ಸರ್ವಜ್ಞಕವಿಯು ಜನತೆಯ ಕವಿಯಷ್ಟೆ. ಅವನು “ಲೋಕಾನುಭವ'ದ ಮೂಲಕ “ನೀತಿ'ಯನ್ನು ಹೇಳುತ್ತಿದ್ದರೂ ಅನೇಕ ನೀತಿಶಾಸ್ತ್ರ ಗ್ರಂಥಗಳನ್ನು ನೋಡಿರಬೇಕು. ಸ್ವಾನುಭವದ ವಿವೇಕಕ್ಕೆ ಹಿರಿಯರ ಮಾತುಗಳೂ ಗ್ರಂಥಗಳ ವ್ಯಾಸಂಗವೂ ಪರಿಣಾಮತರವೆಂದು ಅವನು ತಿಳಿದಿದ್ದನೆಂದು ತೋರುತ್ತದೆ. ತೆಲುಗಿನ ವೇಮನನ ವಚನ'ಗಳಲ್ಲಿ ಮತ್ತು ತಮಿಳಿನ 'ತಿರುಕ್ಕುರುಳ್' ಗ್ರಂಥದಲ್ಲಿ ಪ್ರಧಾನವಾಗಿ ನೀತಿಯೇ ಸಾರ್ವಭೌಮಿಕೆಯನ್ನು ಪಡೆದಿದೆ. ಸರ್ವಜ್ಞನ ವಚನಗಳಲ್ಲೂ ನೀತಿ, ನಡತೆ, ಸಭ್ಯತೆ, ವಿವೇಕ, ಸದಸದ್ವಿಚಾರಗಳು ಎಲ್ಲೆಲ್ಲೂ ತುಂಬಿವೆ. ಅದಕ್ಕಾಗಿಯೇ ಕನ್ನಡ ಜನತೆ ತಮ್ಮ ಮಾತುಗಳಲ್ಲಿ ಸರ್ವಜ್ಞನ ವಚನಗಳನ್ನು ಐಸ್ವೀಕರಿಸಿಕೊಳ್ಳುತ್ತಿದ್ದರು. ಹಳ್ಳಿಯ ಜನ ಸರ್ವಜ್ಞನ ವಚನಗಳನ್ನು ಓದದೆ ಇದ್ದರೂ ತಿಳಿದವರಿಂದ ಕಲಿತು ಅದನ್ನು ತಮ್ಮ ಮಾತಿನಲ್ಲಿ ನುಡಿಯುತ್ತಿದ್ದರು. ನ್ಯಾಯ- ಪಂಚಾಯಿತಿಗಳಲ್ಲಿ ತಿಳಿದ 'ಧರ್ಮಿಷ್ಠ'ರು ವಚನಗಳಿಂದಲೂ ನೀತಿಶಾಸ್ತ್ರಗಳಿಂದಲೂ ಉದ್ಧರಿಸಿ ಮಾತನಾಡುತ್ತಿದ್ದುದೂ ಉಂಟು.

ಸರ್ವಜ್ಞನು ಸುಮಾರು ನೂರು ಪದ್ಯಗಳಲ್ಲಿ 'ನೀತಿ ಪದ್ಧತಿ'ಯ ಹಲವು ಮುಖಗಳನ್ನು ತೆರೆದಿಟ್ಟಿದ್ದಾನೆ. ಅಲ್ಲಿ ಬರುವ ಒಂದೊಂದು ಮಾತುಗಳು ಜನಜೀವನದ



ಪ್ರತಿಬಿಂಬವನ್ನೂ ಅದರ ಫಲಿತವನ್ನೂ ತಿಳಿಸುತ್ತವೆ. ಅಲ್ಲಿ ಹಿರಿಯರೂ ತರುಣರೂ ಸಮಾಜದ ಎಲ್ಲಾ ವಯಸ್ಸಿನವರೂ ಬರುತ್ತಾರೆ. ಸರ್ವಜ್ಞನ ಕಣ್ಣಿಗೆ ಹೆಣ್ಣು-ಗಂಡುಗಳೆಂಬ ಭೇದವೂ ಇಲ್ಲ; ಶ್ರೀಮಂತ-ಬಡವ ಎಂಬ ಕಿರುತನವೂ ಇಲ್ಲ. ಲೋಕದ ಒಳಿತು ಮಾತ್ರ ಅವನ ಗಮನದಲ್ಲಿದೆ. ಮಾತು ಮತ್ತು ನಡವಳಿಕೆಗಳ ಅನ್ಯೋನ್ಯಾಶ್ರಯದಲ್ಲಿ ಬದುಕಿನ ಮಹತ್ತ್ವವನ್ನು ಅವನು ತೋರಿಸುತ್ತಾನೆ.

**ಹೊಲಬನರಿಯದ ಮಾತು ತಲೆಬೇನೆ ಹಿಡಿದಂತೆ**

**ಹೊಲಬರಿದೊಂದ ನುಡಿದರೆ ಅದು ದಿವ್ಯ**

**ಫಲಪಕ್ವದಂತೆ ಸರ್ವಜ್ಞ**

'ಹೊಲಬು' ಎಂಬುದಕ್ಕೆ ದಾರಿ, ಮಾರ್ಗ, ನೀತಿ-ರೀತಿ ಎಂಬ ಅರ್ಥಗಳಿವೆ. ನಾವು ಆಡುವ ಮಾತು ಸರಿಯಾದ ಮಾರ್ಗದಲ್ಲಿ ಇರಬೇಕು. ಅಂಥ ಮಾತಿಲ್ಲದಿದ್ದರೆ ಯಾರಿಗಾದರೂ 'ತಲೆಬೇನೆ'ಯೇ ಸರಿ. ಆದರೆ, ಸರಿಯಾದ ದಾರಿ ಹಿಡಿದು ಮಾತನಾಡಿದರೆ ಅದು 'ದಿವ್ಯಫಲ'. ಹೀಗಾಗಿ, ಅವನ ಮಾತಿನಲ್ಲಿ, ನೀತಿಯನ್ನೂ ಅದರಿಂದ ರೂಪಿತಗೊಂಡ ನೀತಿಶಾಸ್ತ್ರವನ್ನು ಮನಂಬುಗುವಂತೆ ನಿರೂಪಿಸಲು ಸರ್ವಜ್ಞನಿಗೆ ಸಾಧ್ಯವಾಗಿದೆ. ಜನಜೀವನದ ಹಾಸು-ಹೊಕ್ಕಿನಲ್ಲಿ 'ನೀತಿ'ಯದೇ ಪ್ರಾಮುಖ್ಯ. ಅದನ್ನು ಬಿಟ್ಟು ನಡೆದರೆ ಜನಜೀವನವೇ ಅಸ್ತವ್ಯಸ್ತ. ಹೀಗಾಗಿ ಆ ಪ್ರಜ್ಞೆ ಆ ತಿಳಿವಳಿಕೆ, ಆ ಅರಿವು, ಸರ್ವಜ್ಞನ ವಚನಗಳಲ್ಲಿ 'ದಿವ್ಯಫಲ'ದಂತೆ ಪರಿಣಾಮರಮಣೀಯತೆಯನ್ನು ಉಂಟು ಮಾಡಿದೆ!

ಸರ್ವಜ್ಞನ ವಚನಗಳಲ್ಲಿ ನೀತಿವಾಕ್ಯಗಳು ತುಂಬಿವೆ. ಅವು ಉಪದೇಶಾತ್ಮಕ ಎಂಬಂತೆ ಮೇಲುಮಟ್ಟದಲ್ಲಿ ತೋರಿಬರುತ್ತವೆ. ಆದರೆ, ಅವನ ಎದುರಿಗೆ ನಾನಾ ಸ್ವಭಾವದ ಜನರು ಬಂದು ಹಾದುಹೋಗುತ್ತಾರೆ. ಅವನು ಅಂಥವರನ್ನು ಕಂಡಾಗ 'ನೀತಿ'ಯು ನುಡಿಯಾಗಿ ಪರಿಣಮಿಸುತ್ತದೆ. ಮಾತು 'ಪಕ್ವಫಲ'ದಂತೆ ನಮ್ಮೆದುರು ನಿಲ್ಲುತ್ತದೆ. ಈ ಮೊದಲು ತಿಳಿಸಿದಂತೆ ಅವನಿಗೆ ಗಂಡು-ಹೆಣ್ಣುಗಳೆಂಬ ಭೇದವಿಲ್ಲ; ಕುಲ-ಜಾತಿಗಳ ಸಂಬಂಧವಿಲ್ಲ; ಮೇಲು-

ಕೀಳುಗಳೆಂಬ ಭಾವನೆಗಳಿಲ್ಲ. ಅವನು ಸಮದರ್ಶಿ, ಅವನ ಭಾವನೆಗಳು ಸ್ವಚ್ಛ, ಅವನು ದೇಶದೇಶಗಳನ್ನು ಸುತ್ತಿದವನು. ಅನುಭವವು ಅನುಭಾವವಾಗಿ ಅರಳುವ ಒಂದು ಬಗೆ ಉಂಟಷ್ಟೆ? ಇಲ್ಲಿ ಅವೆಲ್ಲವೂ ಅನುಭವದ ನುಡಿಮುತ್ತುಗಳಾಗಿವೆ; ಇಲ್ಲಿ ಅವೆಲ್ಲವೂ ಹೇರಳವಾಗಿವೆ.

ಸರ್ವಜ್ಞನು ತನ್ನ ಕಾಲದಲ್ಲಿ ಆಡುತ್ತಿದ್ದ 'ನಾಣ್ಣುಡಿ' ಅಥವ 'ನಾಟುನುಡಿ'ಯನ್ನು ತನ್ನ ವಚನಗಳ ಶರೀರದಲ್ಲಿ ಸೇರಿಸಿಕೊಂಡಂತೆ ತೋರುತ್ತದೆ. ಪ್ರತಿಯೊಬ್ಬ ಕವಿಯೂ ಲೋಕದ ಮಾತುಗಳನ್ನು ತನ್ನ ವಿಚಾರದ ಅಭಿವ್ಯಕ್ತಿಗೆ ತೆಗೆದುಕೊಳ್ಳುವುದು ಬಲು ಹಿಂದಿನಿಂದಲೂ ಬಂದ ಸಂಪ್ರದಾಯವೇ. ಇದಕ್ಕೆ ಸರ್ವಜ್ಞನೂ ಹೊರತಲ್ಲ. ಲೋಕೋಕ್ತಿಗಳು ಕಾವೋಕ್ತಿಗಳಾಗಿ ಪಡಿನುಡಿಯುವುದನ್ನು ವಿದ್ವಾಂಸರು ಈಗಾಗಲೇ ತಿಳಿಸಿದ್ದಾರೆ. ಅಂಥ ಕೆಲವು ಮಾತುಗಳನ್ನು ಗಮನಿಸಬಹುದು: 'ವಿದ್ಯವೆ ತಾಯ್ತುಂದೆ, ಬುದ್ಧಿ ಸೋದರ ಮಾವ', 'ಜಾಣೆಯ ನುಡಿಲೇಸು; ವೀಣೆಯ ದನಿಲೇಸು,' 'ಪ್ರಸ್ತವ ನುಡಿದರೆ ಬಿಟ್ಟಂತೆ ಇರಬೇಕು', 'ಕೊಟ್ಟಲ್ಲಿ ಬಾರದು; ಬೈಚಿಟ್ಟಲ್ಲಿ ಇರುವುದು', ಇಂಥ ಹತ್ತಾರು ನುಡಿರತ್ನಗಳು ಸರ್ವಜ್ಞನ ವಚನಗಳಲ್ಲಿವೆ.



ಸರ್ವಜ್ಞನ ಮುಂದೆ ಸಮಾಜದ ಸಮಸ್ತರು ಬಂದು ಹೋಗುತ್ತಾರಷ್ಟೆ ಸರ್ವಜ್ಞನಿಗೆ ಸಂಗೀತದ ಬಗೆಗೆ ಅಕ್ಕರೆ ಉಂಟು. ಗೀತ, ವಾದ್ಯ, ನೃತ್ಯ ಇವು ಮೂರು ಸಂಗೀತವೇ. ಒಲುಮೆ, ಪ್ರೀತಿಯ ಮಾತು, ಒಳನುಡಿ ಇವು ಮೂರು ಜೀವನಕ್ಕೆ ಬೇಕು. ಸಂಗೀತದ ಸೊಗಸನ್ನು ತಿಳಿಯಲು ಯಾರಿಗಾದರೂ ಒಲುಮೆ ಬೇಕು. ತಮ್ಮ ಪ್ರೀತಿಯ ಮಾತಿನಿಂದ ಸಂಗೀತಗಾರನಲ್ಲಿ ಸ್ಫೂರ್ತಿ ತುಂಬಲು ಅಂಥವರಿಗೆ ಸಾಧ್ಯವಿದೆ. ಇಷ್ಟಲ್ಲದೆ, ಅಂತರಂಗದ ಮಾತು ಅಗತ್ಯ. ಮಾತು ಪರಕೀಯ; ಒಳನುಡಿ ಸ್ವಕೀಯ. ಮಾತು ಪರಕೀಯವಾಗದಂತೆ ನೋಡಿಕೊಳ್ಳಬೇಕು ಅಷ್ಟೆ. 'ಮಾತೇ ಮುತ್ತು, ಮಾತೇ ಮಾಣಿಕ್ಯ' ಎಂಬ ಮಾತುಗಳನ್ನು ನಾವು ಕೇಳಿದ್ದೇವಷ್ಟೆ? ಸರ್ವಜ್ಞನೂ ಕೂಡಾ ಇದನ್ನು ಅನುಮೋದಿಸುತ್ತಾನೆ.

ಗೀತವಾದ್ಯವು ನೃತ್ಯ ಓತವರ ಒಲುಮೆಯು

ಪ್ರೀತಿಯ ಮಾತು ಒಳನುಡಿ ಯೆಗ್ಗರಡೆ

ಮಾತಿನಿಂ ಕೆಡುಗು ಸರ್ವಜ್ಞ (೭೯೧)

ಎಲ್ಲರೂ ಗೀತದಲ್ಲಿಯೇ ಸಾಧನೆ ಮಾಡಲಾರರು! ಕೆಲವರು ವಾದ್ಯದಲ್ಲಿ ಸಿದ್ಧಿ ಪಡೆಯಬಹುದು. ನೃತ್ಯವೂ ಹಾಗೆಯೇ. ಇಂಥವರನ್ನು ಲೇವಡಿ ಮಾಡುವ ಜನ ಅಥವ ಆಡಿಕೊಳ್ಳುವವರು ಇರುತ್ತಿದ್ದರು. ಅವರು ಎಗ್ಗರು' ಇಂಥ ದಡ್ಡವರ ಮಾತಿನಿಂದ ಸಂಗೀತವು ಹಾಳಾಗಬಹುದು. ಆದರೆ, ಆ ಕುರಿತ ಕಟ್ಟೆಚ್ಚರ ನಮಗಿರಬೇಕು.

ಸಮಾಜದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಛಲ ಇರುವವರು ಇದ್ದೇ ಇರುತ್ತಾರಷ್ಟೆ? ಒಬ್ಬ ವಚನಕಾರ 'ಚಲವಿಲ್ಲದವರ ಮೆಚ್ಚ' ಎನ್ನುತ್ತಾನೆ. ಪ್ರತಿಯೊಬ್ಬನಿಗೂ ಆತ್ಮಪ್ರತ್ಯಯ ಬೇಕು.

ನರಳುವಂಗೆ ಕಡುರೋಗ, ಮೊರೆವಂಗೆ ರಾಗವು,

ಬರೆವಂಗೆ ಓದು ಬರುವಂತೆ ಸಾಧಿಪಂಗೆ

ಬಾರದುದೊಂದುಂಟೆ ಸರ್ವಜ್ಞ (೭೯೪)

ಎನ್ನುತ್ತಾನೆ. ಸಾಧಕನಾದವನು ಸಾಧಿಸುತ್ತಾನೆ. 'ಕೂಗಿ ಕೂಗಿ ರಾಗ, ನರಳಿ ನರಳಿ ರೋಗ' ಎಂಬುದು ಲೋಕೋಕ್ತಿಯ ಮಾತಷ್ಟೆ? ಸಾಧಕನು ಸಾಧಿಸಿದರೆ ಅವನು ಏನನ್ನಾದರೂ ಮಾಡಬಲ್ಲ. ತನ್ನಿಂದ ಏನೂ ಆಗುವುದಿಲ್ಲವೆಂಬುದು ಕೈಲಾಗದವರ, ಸೋಮಾರಿಗಳ ಮಾತು.

ನಮ್ಮ ಶರೀರದಲ್ಲಿ ಕಣ್ಣು-ನಾಲಗೆ-ಮನಸ್ಸು ಉಂಟಷ್ಟೆ: ಇವು ನಮ್ಮ ಅಧೀನದಲ್ಲಿ ಇರಬೇಕು. ಅದರ ಅಧೀನಕ್ಕೆ ನಾವು ಒಳಗಾದರೆ ಬದುಕಿಗೇ ಕೇಡು, ಕಣ್ಣು, ನಾಲಗೆ, ಮನವು ತನ್ನವೆಂದೆನಬೇಡ | ಅನ್ಯರು ಕೊಂದರೆನಬೇಡ ಇವು ಮೂರು | ತನ್ನನೆ ಕೊಲಗು ಸರ್ವಜ್ಞ (೭೯೫)

ನಾವು ಕಣ್ಣು, ನಾಲಗೆ, ಮನಸ್ಸನ್ನು ಬಳಸುತ್ತೇವೆ. ಅವುಗಳನ್ನು ಎಚ್ಚರದಿಂದಲೂ ಬಳಸುತ್ತಿರುತ್ತೇವೆ. ಆದರೆ, ಯಾವುದೋ ವಿಷಘಳಿಗೆಯಲ್ಲಿ ಈ ಮೂರು ಇಂದ್ರಿಯಗಳನ್ನು 'ಯಪರಾ-ತಪರಾ' ಬಳಸಿದರೆ ಯಾರು ಬಳಸುತ್ತಾನೋ ಅಂಥವನಿಗೇ ಅವು ಕೇಡನ್ನು ತರುತ್ತವೆ. ಸ್ವಸ್ಥಮನಸ್ಸಿನಲ್ಲಿ ಇವನ್ನು ನಾವು ಉಳಿಸಿಕೊಳ್ಳಬೇಕು; ಬಳಸಿಕೊಳ್ಳಬೇಕು.

ಆಗ ಉಪನಿಷತ್ತು ಹೇಳಿದಂತೆ 'ಇಂದ್ರಿಯಾಣಿ ಹಯಾನಾಹುಃ' ಎಂಬ ಸಂಕೇತ ನಿಜವಾಗುತ್ತದೆ.

ಲೋಕದಲ್ಲಿ ಹಿರಿಯರು ಉಂಟಷ್ಟೆ. ಆದರೆ, ಗುರುವು ಲೋಕಕ್ಕೆ ಮಾರ್ಗದರ್ಶಕ ನಾಗಿರುತ್ತಾನೆ. ಇವರೊಡನೆ ಬರೆವವರೂ ಉಂಟು. ಈ ಮೂವರು ಲೋಕದ ಸ್ವಾಸ್ಥ್ಯಕ್ಕೆ ಕಾರಣರಾಗಿರುತ್ತಾರೆ.

**ಹಿರಿಯರ ನೆನಬೇಡ ಗುರುವ ನಿಂದಿಸಬೇಡ**

**ಬರೆವವನೊಡನೆ ಹಗೆಬೇಡ ಬಂಗಾರ**

**ದೆರವು ಬೇಡೆಂದ ಸರ್ವಜ್ಞ (೭೯೮)**

ಈ ವಚನದಲ್ಲಿ ಸರ್ವಜ್ಞ ಬರೆವವನೊಡನೆ ಹಗೆಬೇಡ' ಎಂದಿದ್ದಾನೆ. ಇದು ಮಹತ್ತ್ವದ ಮಾತು. ಹಿರಿಯರು, ಗುರುಗಳು, ಬರೆವವರು ಸಮಾಜಕ್ಕೆ ಎಂದೆಂದೂ ಬೇಕು. ಇವರ ಮೂಲಕ ಸಮಾಜವು ವೃದ್ಧಿ ಪಡೆಯುತ್ತಾ ಹೋಗುತ್ತದೆ. ಸಣ್ಣಪ್ರಾಯ ದಿಂದಲೂ ಈ ಮೂವರ ಸಹವಾಸದಲ್ಲಿ ಜನ ಇರಬೇಕು. ಆದರೆ, 'ಬಂಗಾರ'ಕ್ಕೆ ಯಾವಾತನು ಬಲಿಬೀಳುತ್ತಾನೋ ಅವನ ಬದುಕೇ ಕೆಡುತ್ತದೆ. ಈ ಎಚ್ಚರವನ್ನು ಜತನದಿಂದ ಸರ್ವಜ್ಞನುಡಿಯುತ್ತಾನೆ. ನಮ್ಮ ಕಾಲದಲ್ಲಿ ಮಹಾತ್ಮಗಾಂಧೀಜಿಯವರು ಅಸಂಗ್ರಹ, ಅಪರಿಗ್ರಹ ಮುಂತಾದವುಗಳನ್ನು ಹೇಳಿದರಷ್ಟೆ, ಮನುಷ್ಯನು ಲೋಭಕ್ಕೆ ದಾಸನಾದರೆ ಅವನ ಜೀವನವೇ ಕೇಡು. ಅಂಥವನಿಂದ ಅಸತ್ಯವನ್ನು ಲೋಭವು ನುಡಿಸುತ್ತದೆ. ಅದು ಧರ್ಮವನ್ನು ಕೆಡಿಸುತ್ತದೆ. ಇಷ್ಟು ಮಾತ್ರವಲ್ಲ ಅವನ ಒಡಲನೆ ಕಟ್ಟಿ ಹಿಡಿಸುತ್ತದೆ. 'ಲೋಭದ ಗಡಣ ಕಾಣಯ್ಯ' ಎನ್ನುತ್ತಾನೆ. ಸರ್ವಜ್ಞನ ಒಂದೊಂದು ವಚನಗಳನ್ನು ಹಿಡಿದು, ತೂಗಿ ನೋಡಿದರೆ ಅಲ್ಲಿ ಬೆಳಕಿನ ನೀತಿ ಮಾರ್ಗವೇ ನಮ್ಮ ಮುಂದೆ ಕಾಣುತ್ತದೆ. ಅವನ ನೀತಿಯುತ ಮಾತುಗಳು ನಮ್ಮ ಕಣ್ಣು-ಮನಸ್ಸು-ಬುದ್ಧಿಗೆ ಕವಿದಿರುವ ಕತ್ತಲೆಯನ್ನು ಕಳೆಯುತ್ತದೆ. ಇದು ನೀತಿಯ ಪರಿಣಾಮ; ಇದು ನೀತಿಮಾರ್ಗದ ಅನುಸರಣೆಯೇ ಸರಿ.

**[ವಿಜಯವಾಣಿ - ೨೦೧೮]**

# ದಲಿತ ಚಳವಳಿ ಮತ್ತು ರಾಜಕಾರಣ

**- ಪ್ರೊ. ಸಣ್ಣರಾಮ**

ಭಾರತ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ, ಭಾರತದ ಪ್ರಜಾಪ್ರಭುತ್ವದ ಮಾದರಿ ವಿಶಿಷ್ಟವಾದುದಲ್ಲದೆ ಬೇರಾವ ರಾಷ್ಟ್ರಗಳಲ್ಲಿಯೂ ಇಲ್ಲ. ಭಾರತದ ಸಂವಿಧಾನದಲ್ಲಿ ೧) ಶಾಸಕಾಂಗ ೨) ನ್ಯಾಯಾಂಗ ೩) ಕಾರ್ಯಾಂಗ ಎಂಬ ಮೂರು ಮುಖ್ಯ ಅಂಗಗಳಿವೆ. ದೇಶಕ್ಕೆ ಯಾವ ಬಗೆಯ ಶಾಸನಗಳ ಅಗತ್ಯವಿದೆ ಎಂಬುದನ್ನು ಪರಾಮರ್ಶಿಸಿ ರೂಪಿಸುವುದು ಶಾಸಕಾಂಗ, ಈ ಶಾಸನಗಳನ್ನು ಕಾರ್ಯರೂಪಕ್ಕೆ ತರುವುದು ಕಾರ್ಯಾಂಗ ಸಂವಿಧಾನದ ಆಶಯದಂತೆ ನ್ಯಾಯ ಸಂರಕ್ಷಣೆ ಮಾಡುವುದು ನ್ಯಾಯಾಂಗ, ಈ ಶಾಸನಗಳನ್ನು ರೂಪಿಸಿದವರನ್ನು ಆಯ್ಕೆ ಮಾಡುವವರು ಪ್ರಜೆಗಳು, ಅಂದರೆ ಪ್ರಜೆಗಳೇ ಭಾರತದ ನಿಜವಾದ ಪ್ರಭುಗಳು, ಒಬ್ಬ ಪ್ರಜೆಯ ಚಲಾಯಿಸುವ ಒಂದೊಂದು ಓಟು ಅತ್ಯಂತ ಮಹತ್ವವಾದುದು. ಒಂದೊಂದೇ ಓಟಿನಲ್ಲಿ ಅಧಿಕಾರ ಕಳೆದುಕೊಂಡ ಪಕ್ಷಗಳು, ಒಂದೇ ಓಟಿನಲ್ಲಿ ಆಯ್ಕೆಯಾದ ಪ್ರಜಾಪ್ರತಿನಿಧಿಗಳು ಇದ್ದಾರೆ. ಇದೇ ಭಾರತದ ಪ್ರಜಾಪ್ರಭುತ್ವದ ಬಹುದೊಡ್ಡಶಕ್ತಿ. ಈ ಮಾದರಿಯ ಸಂವಿಧಾನವನ್ನು ರೂಪಿಸಿಕೊಟ್ಟ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರದು ಅದ್ಭುತ ಪ್ರತಿಭೆ. ಅವರ ಪ್ರತಿಭಾ ಮೂಷೆಯಲ್ಲಿ ಜಗತ್ತಿನ ಸಂವಿಧಾನಗಳೆಲ್ಲಾ ಕರಗಿ ಉತ್ಕೃಷ್ಟ ರೂಪವನ್ನು ಪಡೆದು ಭಾರತೀಯ ಸಂವಿಧಾನ ರಚನೆಯಾಗಿದೆ. ಪ್ರಜೆಗಳಿಗೆ ನಮ್ಮ ಸಂವಿಧಾನದಲ್ಲಿ ಸಿಕ್ಕಷ್ಟು ಮಹತ್ವದ ಸ್ಥಾನ ಜಗತ್ತಿನ ಇನ್ನಾವುದೇ ಸಂವಿಧಾನದಲ್ಲಿ ದೊರೆತಿಲ್ಲ.

ಭಾರತದಲ್ಲಿ ಹಲವಾರು ಸಾಮಾಜಿಕ ಚಳವಳಿಗಳು ಹುಟ್ಟಿ ನಶಿಸಿ ಹೋಗಿದ್ದರೆ ಮತ್ತೆ ಕೆಲವು ಗುಟುಕು ಜೀವ ಹಿಡಿದುಕೊಂಡು ಉಸಿರಾಡುತ್ತಿವೆ. ಸಾಮಾಜಿಕ ಚಳವಳಿಗಳಲ್ಲಿ ಒತ್ತಡದ ಗುಂಪು, ಶಕ್ತಿ ಕೇಂದ್ರಿತ ಗುಂಪು ಮತ್ತು ಯಾಚಕ ಗುಂಪುಗಳಾಗಿ ವಿಂಗಡಿಸಬಹುದು. ಕಾರ್ಯಾಂಗ ಮತ್ತು ಶಾಸಕಾಂಗಗಳ ಮೇಲೆ ಒತ್ತಡವನ್ನು ಹೇರುವುದರ ಮೂಲಕ ಜನರ ಅಶೋತ್ತರಗಳನ್ನು ಈಡೇರಿಸಲು ಹೋರಾಡುವ ಗುಂಪುಗಳು ಒತ್ತಡ ರೂಪದ ಚಳುವಳಿಗಳು. ಶಕ್ತಿ ಕೇಂದ್ರಿತ ಗುಂಪುಗಳಾಗಿ ಕಾರ್ಯ ನಿರ್ವಹಿಸುವ ಚಳವಳಿಗಳು ಶಾಸಕಾಂಗದ ಒಂದು ಭಾಗವಾಗಿ ಜನಪರ ಕಾರ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಿರುತ್ತವೆ. ಆರ್.ಎಸ್.ಎಸ್‌ನಂತಹ ಸಂಘಟನೆಗಳು, ಬಾಂಬ್‌ಸೇಪ್‌ನಂತಹ ನೌಕರ ವರ್ಗದವರು ಹುಟ್ಟು ಹಾಕಿರುವ ಉತ್ತರ ಪ್ರದೇಶದ ಸಂಘಟನೆಗಳನ್ನು ಈ ಗುಂಪಿಗೆ ಸೇರಿಸಬಹುದು. ಮೂರನೇಯ ಯಾಚಕ ಗುಂಪು. ಬಹುಪಾಲು ಜಾತಿ ಕೇಂದ್ರಿತವಾಗಿ ಹುಟ್ಟಿಕೊಂಡ ಸಂಘಟನೆಗಳು. ಶಾಸಕಾಂಗ ಮತ್ತು ಕಾರ್ಯಾಂಗಕ್ಕೆ ಮನವಿ ಸಲ್ಲಿಸಿ ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸುವ ಸಂಘಟನೆಗಳು. ಇವುಗಳ ಕಾರ್ಯ ವ್ಯಾಪ್ತಿಯೂ ಸೀಮಿತವಾಗಿರುತ್ತದೆ.

೧೯೮೬ರವರೆಗೆ ಕದಸಂಸ ಒತ್ತಡದ ಗುಂಪಾಗಿ ಕ್ರಿಯಾಶೀಲವಾಗಿತ್ತು. ಸರ್ಕಾರದ ಮೇಲೆ ಒತ್ತಡವನ್ನು ಹೇರುವುದರ ಮೂಲಕ ಜನಪರ ಕಾರ್ಯವನ್ನು ಮಾಡುತ್ತಿತ್ತು. ದಲಿತ ಸಂಘರ್ಷ ಸಮಿತಿಗೆ ಪ್ರಾರಂಭದಲ್ಲಿ ರಾಜಕಾರಣದ ಬಗ್ಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ. ರಾಜಕಾರಣವೆಂದರೆ ಕೆಲಸಕ್ಕೆ ಬಾರದ ಸೋಮಾರಿಗಳ, ಅಶಿಕ್ಷಿತರ ಕೂಟ, ಜನಪರವಾಗಿರದ ಜನವಿದ್ರೋಹಿಗಳ ಗುಂಪೆಂದು ಭಾವಿಸಲಾಗಿತ್ತು. ಆದ್ದರಿಂದಲೇ ೧೯೭೮ ರಲ್ಲಿ ಚುನಾವಣೆ ಬಹಿಷ್ಕರಿಸಲು ತನ್ನ ಕಾರ್ಯಕರ್ತರಿಗೆ ಕರೆ ಕೊಟ್ಟಿತ್ತು. ಆದರೆ ದಸಂಸದ ಅನೇಕ ಕಾರ್ಯಕರ್ತರು ಸಮಿತಿಯ ನಿರ್ಣಯವನ್ನು ಗಮನಿಸಿದಂತೆ ಓಟನ್ನು ಚಲಾಯಿಸಿದ್ದರು.

೧೯೭೪ ರಲ್ಲಿ ಹುಟ್ಟಿದ ದಸಂಸ ೧೯೮೩ರ ವರೆಗೆ ರಾಜಕಾರಣವನ್ನು ತಿರಸ್ಕರಿಸುತ್ತಲೇ ಬಂದಿತ್ತು. ೧೯೮೩ರಕ್ಕೆ ತನ್ನ ನಿರ್ಧಾರದಿಂದ ಹಿಂದಕ್ಕೆ ಸರಿಯಿತು. ಚುನಾವಣೆಯಲ್ಲಿ ಕದಸಂಸ ಪಾಲ್ಗೊಳ್ಳುವುದು ತಪ್ಪಲ್ಲ ಎಂಬ ನಿರ್ಧಾರಕ್ಕೆ ಬಂದಿತು. ಇದಕ್ಕೆ ಕಾರಣ ಕಂಡುಕೊಳ್ಳುವುದು ಸುಲಭವಲ್ಲ. ಆದರೆ ಒತ್ತಡದ ಗುಂಪಾಗಿ ರಾಜಕಾರಣಿಗಳ, ಅಧಿಕಾರಿಗಳ, ಭೂಮಾಲೀಕರ ಎದೆಯಲ್ಲಿ ನಡುಕವನ್ನುಂಟು ಮಾಡಿದ್ದ ದಲಿತ ಚಳವಳಿ ಇದ್ದಕ್ಕಿದ್ದಂತೆ ಶಕ್ತಿ ಗುಂಪಾಗಿ ಮಾರ್ಪಾಡಾಗಲು ಅದಕ್ಕೆ ಇರಬಹುದಾದ ಬಾಹ್ಯ ಮತ್ತು ಆಂತರಿಕ ಒತ್ತಡಗಳು ಏನು? ನಿಜಕ್ಕೂ ಚಿಂತಕರನ್ನು ಕಾಡುವ ಪ್ರಶ್ನೆ ಇದು.

ನಾನು ಕಂಡಂತೆ ಪ್ರೊ.ಬಿ ಕೃಷ್ಣಪ್ಪ ಅದ್ಭುತ ಚಿಂತಕ. ಮಗುವಿನಂತಹ ಮುಗ್ಧ ಮನಸ್ಸಿನಲ್ಲಿ ಸಮಾಜದ ಸ್ತರ ಸ್ತರಗಳ ವಿದ್ರೋಹವನ್ನು ಗ್ರಹಿಸುವ ಚಿಕಿತ್ಸಕ ಬುದ್ದಿ, ಮೇಲುನೋಟದ ಮೃದು ಧೋರಣೆಯಲ್ಲಿ ಗಟ್ಟಿ ನಿರ್ಧಾರ ತೆಗೆದುಕೊಳ್ಳುವ ದೃಢ ಚಿತ್ತ, ದಲಿತರ ಹಿತಚಿಂತನೆಗೆ ಧಕ್ಕೆ ಬರುವ ಸಂದರ್ಭ ಬಂದರೆ ಎಂತಹ ಪ್ರತಿರೋಧವಿದ್ದರೂ ಎದೆಗುಂದದೆ ಮುನ್ನುಗ್ಗುವ ಧೈರ್ಯ. ಈ ಎಲ್ಲ ಗುಣಗಳಿಗೆ ಕಿರೀಟಪ್ರಾಯವೆಂಬಂತೆ ತಾಯಿ ಕರುಳು. ಇಂತಹ ಕೃಷ್ಣಪ್ಪ ೧೯೮೩ರ ವೇಳೆ ದಲಿತರ ವಿಮೋಚನೆಗೆ ಮಾರ್ಗವನ್ನು ಹುಡುಕುತ್ತ ಡಾ. ಅಂಬೇಡ್ಕರ್ ಸಿದ್ದಾಂತ ದಟ್ಟ ಪ್ರಭಾವಕ್ಕೆ ಒಳಗಾಗುತ್ತಾರೆ. ಇದರಿಂದ ಅವರು ಚುನಾವಣೆಯನ್ನು ನೋಡುವ ದೃಷ್ಟಿಕೋನ ಬದಲಾಯಿತು. ಕೃಷ್ಣಪ್ಪ ರಾಜಕಾರಣದಿಂದ ದೂರವಿರುವ ತಮ್ಮ ನಿರ್ಧಾರವನ್ನು ಮರುಪರಿಶೀಲನೆಗೆ ಒಳಪಡಿಸಿದರು. ಪ್ರಜಾಪ್ರಭುತ್ವದ ಶಕ್ತಿ ಇರುವುದು ಚುನಾವಣೆಯಲ್ಲಿಯೆ ಎಂಬುದು ಕೃಷ್ಣಪ್ಪನವರು ಗ್ರಹಿಸಿಕೊಂಡರು. ೯೦ರ ದಶಕದ ಆರಂಭದಲ್ಲಿ ದಸಂಸ ಒಂದು ಪ್ರಬಲ ಶಕ್ತಿಯಾಗಿ ಬೆಳೆದಿತ್ತು. ಕಾಂಗ್ರೆಸ್ ಪಕ್ಷ ಮತ್ತು ಭಾರತೀಯ ಜನತಾ ಪಕ್ಷಗಳೆರಡು ೧೯೮೩ರ ಚುನಾವಣೆಯಲ್ಲಿ ಪೈಪೋಟಿಗಿಳಿದಿದ್ದವು. ಮೂರನೇಯ ಶಕ್ತಿಯಾಗಿ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾದಳ ಚುನಾವಣೆಗಿಳಿಯಿತು.

ಕಾಂಗ್ರೆಸ್ ಪಕ್ಷ ಭಾರತದಾದ್ಯಂತ ನಿರಂತರವಾಗಿ ೩೦ ವರ್ಷಗಳ ಆಡಳಿತದಲ್ಲಿ ಶೋಷಿತ ಸಮುದಾಯಗಳಿಗೆ ಕೊಟ್ಟಿದ್ದೇನು ಎಂಬ ಪ್ರಶ್ನೆಗೆ ಉತ್ತರ ಶೂನ್ಯವಾಗಿತ್ತು. ಬಿ ಜೆ ಪಿ ಮೂಲಭೂತವಾದಿಗಳ ಪಕ್ಷ, ವರ್ಗ-ವರ್ಣಗಳನ್ನು ಬೆಂಬಲಿಸಿ ಹಿಂದುತ್ವವನ್ನು ಭಾವನಾತ್ಮಕ ನೆಲೆಯಲ್ಲಿ ಬಿಂಬಿಸುತ್ತ ಸಮುದಾಯಗಳನ್ನು ಒಡೆದು ಹಾಕುತ್ತಿರುವುದರಿಂದ



ಆ ಪಕ್ಷವನ್ನು ಬೆಂಬಲಿಸಲು ಸಾಧ್ಯವಿಲ್ಲ. ಆದ್ದರಿಂದ ರಾಮಕೃಷ್ಣ ಹೆಗಡೆಯವರ ಜನತಾ ದಳ ಪಕ್ಷಕ್ಕೆ ಕದಸಂಸ ಬೇಷರತ್ತು ಬೆಂಬಲವನ್ನು ಕೊಡಲು ನಿರ್ಧರಿಸಿತು. ಕದಸಂಸದ ಬೆಂಬಲ ಪಡೆದ ಜನತಾ ಪಕ್ಷ ೧೯೮೩ರ ಚುನಾವಣೆಯಲ್ಲಿ ಪೂರ್ಣ ಮೆಜಾರಿಟಿಯನ್ನು ಪಡೆಯದಿದ್ದರು ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಜನತಾದಳ ಸರ್ಕಾರವನ್ನು ರಚನೆ ಮಾಡಿತು. ಆದರೆ ದಲಿತರನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಅಲ್ಪಸಂಖ್ಯಾತ ಸರ್ಕಾರ ಎರಡು ವರ್ಷ ಪೂರೈಸುವುದರಲ್ಲಿ ಬಿದ್ದು ಹೋಯಿತು. ೧೯೮೫ರಲ್ಲಿ ಮತ್ತೆ ಚುನಾವಣೆ ಘೋಷಣೆಯಾಯಿತು.

ಪ್ರಜಾಪ್ರಭುತ್ವವನ್ನು ಆಳವಾಗಿ ಪ್ರೀತಿಸುತಿದ್ದ ಪ್ರೊ. ಬಿ.ಕೃಷ್ಣಪ್ಪ ೧೯೮೫ರಲ್ಲಿ ಸರ್ವ ಸದಸ್ಯರ ಸಭೆಯನ್ನು ಕರೆಯುತ್ತಾರೆ. ಬೆಂಗಳೂರಿನಲ್ಲಿ ಸೇರಿದ ಆ ಸಭೆಯಲ್ಲಿ ಪ್ರೊ. ಬಿ. ಕೃಷ್ಣಪ್ಪ ಹತ್ತು ವರ್ಷ ರಾಜ್ಯ ಸಂಚಾಲಕರಾಗಿ ಕಾರ್ಯ ನಿರ್ವಹಿಸಿದ್ದು, ಮುಂದೆಯೂ ಅವರೇ ಸಂಚಾಲಕರಾಗಿರಬೇಕೆಂಬ ಬಹು ಸದಸ್ಯರ ಒತ್ತಡದ ನಡುವೆಯು ಸಂಚಾಲಕತ್ವಕ್ಕೆ ರಾಜೀನಾಮೆಯನ್ನು ಕೊಡುತ್ತಾರೆ. ಸಮಿತಿಯಲ್ಲಿ ತಮ್ಮಷ್ಟೇ ಅನುಭವವಿರುವ ದೇವನೂರು ಮಹಾದೇವ ಅವರನ್ನು ರಾಜ್ಯ ಸಂಚಾಲಕರಾಗಿ ಸರ್ವಾನುಮತದಿಂದ ಆಯ್ಕೆಯಾಗುತ್ತಾರೆ.

ಪ್ರೊ ಬಿ ಕೃಷ್ಣಪ್ಪ ಅಪರೂಪದ ಸಮಾಜ ಚಿಂತಕ, ಕಳೆದ ಹತ್ತು ವರ್ಷದ ಅವಧಿಯಲ್ಲಿ ಕದಸಂಸದ ಆಂತರ್ಯದಲ್ಲಿ ಏನೇನು ಸಂಭವಿಸುತ್ತಿದೆ ಎಂಬುದನ್ನು ಬಲ್ಲವರಾಗಿದ್ದರು. ೧೯೭೮ರ ಚುನಾವಣೆಯನ್ನು ಬಹಿಷ್ಕರಿಸಲು ಅವರು ಕರೆಕೊಟ್ಟಿದ್ದು ನಿಜವಾದರೂ ಕದಸಂಸದ ಕಾರ್ಯಕರ್ತರು ಅವರ ಮಾತನ್ನು ಪಾಲಿಸಿರಲಿಲ್ಲವೆಂಬುದು ಅವರ ಅರಿವಿಗಿತ್ತು. ಕದಸಂಸದಲ್ಲಿ ಪಳಗಿದ ಕಾರ್ಯಕರ್ತರು ಹತ್ತು ವರ್ಷದಲ್ಲಿ ನಿಧಾನಕ್ಕೆ ಪಕ್ಷರಾಜಕಾರಣದ ಕಡೆಗೆ ಸರಿಯತೊಡಗಿದ್ದರು. ರಾಜಕೀಯ ಪಕ್ಷಗಳು ಬುದ್ಧಿವಂತ ಕದಸಂಸದ ಕಾರ್ಯಕರ್ತರನ್ನು ತಮ್ಮ ಬುಟ್ಟಿಗೆ ಹಾಕಿಕೊಂಡು ರಾಜಕೀಯದ ರುಚಿಯುಣಿಸಲು ತೊಡಗಿದ್ದರು.

ಭಾರತೀಯ ರಾಜಕಾರಣವೆಂಬುದು ಕಾಡುಕುದುರೆಯಂತೆ, ನಿಯಂತ್ರಣವಿಲ್ಲದೆ ಸಿಕ್ಕ ಸಿಕ್ಕಕಡೆ ನುಗ್ಗಿ ಧೂಳಿಪಟಮಾಡುವ ಸ್ವಭಾವ ಅದರದು. ಸಂವಿಧಾನ ಪ್ರದತ್ತ ಅಧಿಕಾರವನ್ನು ಬಳಸಿಕೊಳ್ಳುವುದು ಗೊತ್ತು ಅದರ ದುರುಪಯೋಗ ಪಡೆದುಕೊಳ್ಳುವ ಎಲ್ಲ ಕಲೆಗಳನ್ನು ಇವರು ಕರಗತ ಮಾಡಿಕೊಂಡಿರುತ್ತಾರೆ. ಪರಿಣಾಮ ದೇಶದ ಅಭಿವೃದ್ಧಿಯ ಬದಲು ಅವನತಿಯಾಗುತ್ತದೆ. ಇದರ ಬಗ್ಗೆ ಕಿಂಚಿತ್ತು ಯೋಚನೆ ಮಾಡದ ಪ್ರಜ್ಞಾಶೂನ್ಯರೇ ಭಾರತೀಯ ರಾಜಕಾರಣದಲ್ಲಿ ತುಂಬಿದ್ದಾರೆ. ರಾಜಕೀಯದ ರುಚಿ ಎಂಥವರನ್ನಾದರೂ ಬದಲಾಯಿಸಿ ಬಿಡುತ್ತದೆ. ತತ್ವಚಿಂತನೆ, ಸಿದ್ಧಾಂತದಲ್ಲಿ ಗಟ್ಟಿಯಾಗಿದ್ದರೂ ಅನೇಕ ಅಧಿಕಾರ ಕದಸಂಸದ ಕಾರ್ಯಕರ್ತರು ರಾಜಕೀಯ ಪಕ್ಷಗಳ ಕಡೆಗೆ ಸರಿಯಲಾರಂಭಿಸಿದರು. ಇದನ್ನು ಅರಿತೇ ಪ್ರೊ. ಬಿ ಕೃಷ್ಣಪ್ಪ ಒತ್ತಡದ ಗುಂಪಾಗಿದ್ದ ಕದಸಂಸದವನ್ನು ಶಕ್ತಿ ಗುಂಪಿನತ್ತ ಕರೆದೊಯ್ಯುವುದು ಸೂಕ್ತವೆಂದು



ಚಿಂತಿಸಿದರ ಫಲವೇ ೧೯೭೮ರ ಚುನಾವಣೆಯಲ್ಲಿ ಜನತಾ ಪಕ್ಷವನ್ನು ಬೆಂಬಲಿಸುವ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ.

೧೯೭೯ರಲ್ಲಿ ಜನತಾ ಪಕ್ಷ ಅಧಿಕಾರವನ್ನು ಕಳೆದುಕೊಂಡಾಗ ಉಪಚುನಾವಣೆ ಘೋಷಣೆಯಾದಾಗ ಕರ್ನಾಟಕ ದಲಿತ ಸಂಘರ್ಷ ಸಮಿತಿಯಲ್ಲಿ ದೇವನೂರು ಮಹಾದೇವ ಸಂಚಾಲಕರಾಗಿದ್ದರು. ಅವರು ಬೆಂಗಳೂರಿನಲ್ಲಿ ಸರ್ವ ಸದಸ್ಯರ ಸಭೆಯನ್ನು ಕರೆದು ಯಾವ ಪಕ್ಷಕ್ಕೆ ಬೆಂಬಲ ಸೂಚಿಸಬೇಕೆಂದು ಚಿಂತನೆ ಪ್ರಾರಂಭಿಸಿದರು. ಪ್ರೊ. ಬಿ.ಕೆ ೧೯೭೮ರಲ್ಲಿ ಜನತಾ ಪಕ್ಷಕ್ಕೆ ಒಮ್ಮೆ ಬೇಷರತ್ ಬೆಂಬಲವನ್ನು ಸೂಚಿಸಿದ್ದಾಗಿದೆ. ಮತ್ತೆ ಅದೇ ಪಕ್ಷಕ್ಕೆ ಬೆಂಬಲ ಸೂಚಿಸುವುದಾದರೇ ಸೀಟು ಹಂಚಿಕೆಯಾಗಬೇಕು. ಕದಸಂಸದಕ್ಕೆ ಕೆಲವು ಸ್ಥಾನಗಳನ್ನು ಜನತಾ ಪಕ್ಷ ಬಿಟ್ಟು ಕೊಡುವುದಾದರೇ ಹೊಂದಾಣಿಕೆ ಅಭ್ಯಂತರವಿಲ್ಲವೆಂದರು.

ಕೃಷ್ಣಪ್ಪನವರ ಈ ನಿಲುವಿಗೆ ಕಾರಣವಿಲ್ಲದಿಲ್ಲ. ಯಾವ ಸರ್ಕಾರವನ್ನು ಅಧಿಕಾರಕ್ಕೆ ತರಲು ಕದಸಂಸ ಶ್ರಮಿಸಿತ್ತೋ ಅದೇ ಜನತಾ ಪಕ್ಷದ ಸರ್ಕಾರ ದಲಿತರ ಮೇಲೆ ದೌರ್ಜನ್ಯ ನಡೆಸಿತ್ತು. ಮಲ್ಪೆಯಲ್ಲಿ ನಡೆದ ದಲಿತರ ಮೇಲಿನ ದೌರ್ಜನ್ಯವನ್ನು ಪ್ರಸ್ತಾಪಿಸುತ್ತ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಾರೆ. "ಜನತಾದಳ ಸರಕಾರದ ಅವಧಿಯಲ್ಲಿ ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ಅದರಲ್ಲೂ ದ.ಕ ಜಿಲ್ಲೆಯಲ್ಲಿ ನಮಗೆ ರಕ್ಷಣೆ ಕೊಡಬೇಕಾದ

ಆರಕ್ಷಕರೇ ದೌರ್ಜನ್ಯ ನಡೆಸುತ್ತಿದ್ದಾರೆಂದರೆ ಬೇಲಿಯೇ ಹೊಲ ಮೇಯ್ದಂತೆ" – (ಪ್ರೊ. ಬಿ ಕೆ ಬರಹ ಭಾ-ಸೋ. ಇಂದಿರಾ ಕೃಷ್ಣಪ್ಪ : ಪು-೫೮) ಈ ಮಾತುಗಳಲ್ಲಿ ಜನತಾದಳ ದಲಿತರನ್ನು ನಿರ್ಲಕ್ಷಿಸಿದ ಸ್ಪಷ್ಟ ಚಿತ್ರಣವಿದೆ.

ಮುಂದುವರೆದು ಕೃಷ್ಣಪ್ಪ ಅವರು ಜನತಾದಳ ಅಧಿಕಾರದಲ್ಲಿದ್ದಾಗ ದಸಂಸ ದಲಿತರ ಹಿತರಕ್ಷಣೆಗೆ ಯೋಜನೆಗಳನ್ನು ರೂಪಿಸಿ ಅವುಗಳನ್ನು ಜಾರಿ ಮಾಡುವಂತೆ ನಿರಂತರವಾಗಿ ಒತ್ತಡವನ್ನು ಹೇರಿತ್ತು. "ವಸತಿ ಶಾಲೆ, ಬಗರ್ ಹುಕುಂ ಸಾಗುವಳಿಯ ಸಕ್ರಮ, ಹೆಂಡ ಸಾರಾಯಿ ನಿಷೇಧ, ದಲಿತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹೆಚ್ಚಳ ಇತ್ಯಾದಿ ಯಾವುದನ್ನೂ ಜನತಾ ಸರ್ಕಾರ ತನಗೆ ಸಾಧ್ಯವಿದ್ದರೂ ಜಾರಿ ಮಾಡಲಿಲ್ಲ." (ಅದೇ ಪು-೮೯) ಕೃಷ್ಣಪ್ಪನವರ ದಲಿತ ಪರ ಕಾಳಜಿ ಪ್ರಶ್ನಾತೀತ. ದಲಿತ ವಿರೋಧಿ ಧೋರಣೆಯನ್ನು ಯಾವ ಮುಲಾಜು ಇಲ್ಲದೆ ಖಂಡಿಸುವ ರಾಜಿಯಿಲ್ಲದ ನಿರ್ಧಾರ ಅವರದು. ಆದ್ದರಿಂದಲೇ ಜನತಾ ದಳಕ್ಕೆ ಬೇಷರತ್ ನಿರ್ಧಾರವನ್ನು ವಿರೋಧಿಸುತ್ತಾರೆ. ಬಹುಪಾಲು ಸದಸ್ಯರು ಅವರ ಮಾತಿಗೆ ಬೆಂಬಲವನ್ನು ಸೂಚಿಸುತ್ತಾರೆ. ಆದರೆ ಜನತಾ ಪಕ್ಷದೊಂದಿಗೆ ಸಖ್ಯ ಹೊಂದಿದ್ದ ದೇವನೂರು ಸ್ಥಾನ ಹೊಂದಾಣಿಕೆಯ ಅಗತ್ಯವಿಲ್ಲ ಬೇಷರತ್ ಬೆಂಬಲ ಘೋಷಣೆ ಮಾಡಿದರೆ ಅನುಕೂಲವೆಂಬ ನಿಲುವಿಗೆ ಬದ್ಧರಾಗುತ್ತಾರೆ. ಸಂಚಾಲಕರ ತೀರ್ಮಾನಕ್ಕೆ ವಿರೋಧ ಸೂಚಿಸುವುದು ಸೂಕ್ತವಲ್ಲವೆಂದು ಯಾತನೆಯಿಂದ ಪ್ರೊ.ಬಿ ಕೃಷ್ಣಪ್ಪ ಅಂದಿನ ತೀರ್ಮಾನ ಒಪ್ಪಬೇಕಾಯಿತು. ಪ್ರೊ.ಬಿ ಕೃಷ್ಣಪ್ಪ ಮನಸ್ಸು ಮಾಡಿದರೆ ಅಂದೇ ದಲಿತ ಸಂಘರ್ಷ ಸಮಿತಿಯನ್ನು ಒಡೆದು



ಬಿಡಬಹುದಾಗಿತ್ತು. ಆದರೆ ಕರ್ನಾಟಕವನ್ನು ಒಟ್ಟುಮಾಡಿ ಬೃಹದ್ ಚಳವಳಿಯನ್ನು ರೂಪಿಸಿದ ಅವರ ಮನಸ್ಸಿನಲ್ಲಿ ಒಂದು ಸಣ್ಣ ಒಡಕು ಸುಳಿಯಲಿಲ್ಲ.

೧೯೯೧ ರಂದು ಲೋಕ ಸಭೆ ಘೋಷಣೆಯಾಯಿತು. ಜನತಾ ಪಕ್ಷ ದಲಿತರ ಮೇಲೆ ಬಹಳ ಉದಾರತೆಯನ್ನು ತೋರಿಸುವಂತೆ ಕೋಲಾರದ ಮೀಸಲು ಲೋಕಸಭಾ ಸ್ಥಾನವನ್ನು ಕದಸಂಸದಕ್ಕೆ ಬಿಟ್ಟು ಕೊಟ್ಟಿತು. ಬೆಂಗಳೂರಿನ ರಾಜ್ಯ ಸಮಿತಿ ಸರ್ವಾನುಮತದಿಂದ ಪ್ರೊ. ಬಿ ಕೃಷ್ಣಪ್ಪನವರನ್ನು ಆಸ್ಥಾನಕ್ಕೆ ಸ್ಪರ್ಧಿಸಲು ತೀರ್ಮಾನಿಸಿತು. ಅದುವರೆಗೆ ದಲಿತರ ಪ್ರಶ್ನಾತೀತ ನಾಯಕರಾಗಿ ಅಧಿಕಾರ, ಆಸ್ತಿ, ಅಂತಸ್ತುಗಳನ್ನು ಲಕ್ಕಿಸದೇ ದಲಿತರ ಏಳಿಗೆಯನ್ನೇ ಪರಮ ಧ್ಯೆಯವನ್ನಾಗಿ ಮಾಡಿಕೊಂಡಿದ್ದ ಪ್ರೊ.ಬಿ.ಕೆ ಅವರನ್ನು ಕಾರ್ಯಕರ್ತರು ಯಾವ ಅನುಮಾನವೂ ಇಲ್ಲದೇ ಲೋಕಸಭೆಗೆ ಸ್ಪರ್ಧಿಸಲು ಆಯ್ಕೆ ಮಾಡಿದ್ದರಲ್ಲಿ ಆಶ್ಚರ್ಯವಿಲ್ಲ.

ಪ್ರೊ. ಬಿ ಕೃಷ್ಣಪ್ಪ ರಾಜಕಾರಣದಲ್ಲಿ ಯಳಸಾಗಿದ್ದರೂ, ರಾಜಕೀಯವನ್ನು ಅರಿಯದವರೇನೂ ಆಗಿರಲಿಲ್ಲ. ಸಮಾಜವಾದಿ ರಾಜಕಾರಣಿಗಳ ಒಳಮರ್ಮ ಬೇರೆನೇ ಆಗಿರುತ್ತದೆ ಎಂಬುದು ಬಲ್ಲವರಾಗಿದ್ದರು. ಅವರು ಕೋಲಾರದ ಲೋಕ ಸಭೆಗೆ ಸ್ಪರ್ಧಿಸಲು ತಕ್ಷಣಕ್ಕೆ ಒಪ್ಪಿಕೊಳ್ಳುವುದಿಲ್ಲ. ಇಷ್ಟ ಪಡುವುದಿಲ್ಲ. ಆದರೆ ಕಾರ್ಯಕರ್ತರು ತಾವುಗಳೆಲ್ಲರೂ ತನು-ಮನ-ಧನ ಸಹಾಯದೊಂದಿಗೆ ಒಗ್ಗಟ್ಟಾಗಿ ಶ್ರಮಿಸುವುದಾಗಿ ಭರವಸೆಯನ್ನು ಕೊಟ್ಟಮೇಲೆ ಒಪ್ಪಿಕೊಳ್ಳುತ್ತಾರೆ. ಪ್ರಯೋಗಶೀಲ ಮನಸ್ಸಿನ ಪ್ರೊ, ಬಿ ಕೃಷ್ಣಪ್ಪ ಕೋಲಾರದ ಲೋಕ ಸಭಾ ಸ್ಪರ್ಧೆಯನ್ನು ಒಂದು ಪ್ರಯೋಗವಾಗಿ ಸ್ವೀಕರಿಸುತ್ತಾರೆ. ಆ ವೇಳೆಗಾಗಲೇ ದಲಿತ ಸಂಘರ್ಷ ಸಮಿತಿ ಹುಟ್ಟಿ ೧೭ ವರ್ಷಗಳಾಗಿದ್ದವು. ಕೃಷ್ಣಪ್ಪನವರು ಸಂಚಾಲಕತ್ವವನ್ನು ತೊರೆದು ಆಗಲೇ ೭ವರ್ಷಗಳಾಗಿದ್ದವು, ಸಂಚಾಲಕತ್ವವನ್ನು ಬಿಟ್ಟಿದ್ದರೂ ಅದರ ಹೊಕ್ಕಳು ಬಳ್ಳಿ ಸಂಬಂಧವನ್ನು ಕಡೆದುಕೊಂಡಿರಲಿಲ್ಲ. ದೇವನೂರು ಮಹಾದೇವ, ಚಂದ್ರಪ್ರಸಾದ ತ್ಯಾಗಿ, ಮುನಿವೆಂಕಟಪ್ಪ ಈ ಮೂವರು ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದನ್ನು ತುಂಬಾ ಹತ್ತಿರದಿಂದಲೇ ನೋಡಿದವರಾಗಿದ್ದರು. ಈ ಎಲ್ಲಾ ಅನುಭವಗಳಿಂದ ಅವರು ಒಂದು ಸ್ಪಷ್ಟ ನಿರ್ಧಾರಕ್ಕೆ ಬಂದಿರುತ್ತಾರೆ. ಚಳವಳಿಗಳು ಎಲ್ಲಿವರೆಗೆ ಒತ್ತಡದ ಗುಂಪಾಗಿರುತ್ತದೆಯೋ ಅಲ್ಲಿಯವರೆಗೆ ಈ ಸಮಾಜದಲ್ಲಿ ಪರಿವರ್ತನೆ ಸಾಧ್ಯವಿಲ್ಲ. ಚಳವಳಿ ರಾಜಕೀಯ ಶಕ್ತಿಕೇಂದ್ರಗಳಾದರೇ ಮಾತ್ರ ಸಮಾಜದಲ್ಲಿ ಪರಿವರ್ತನೆ ಸಾಧ್ಯವೆಂಬ ನಿರ್ಧಾರಕ್ಕೆ ಆಗಲೇ ಬಂದಿರುತ್ತಾರೆ. ಕೋಲಾರದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಇದು ಒಂದು ಕಾರಣ. "ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚಳವಳಿ ಹೋರಾಟಗಳಿಂದ ಕ್ರಾಂತಿ ಮಾಡುವುದು ಸಾಧ್ಯವಿಲ್ಲ. ರಾಜಕೀಯ ಅಧಿಕಾರವಿದ್ದರೆ ಮಾತ್ರ ವ್ಯವಸ್ಥೆಯ ಬದಲಾವಣೆ ಸಾಧ್ಯ" .(ಪ್ರೊಬಿ ಕೃಷ್ಣಪ್ಪ ಪು-೧೩) ಎಂಬ ಅವರ ಅಚಲ ನಿರ್ಧಾರ ರಾಜಕೀಯ ಹಾದಿಯನ್ನು ತುಳಿಯುವಂತೆ ಮಾಡಿತ್ತು.

೧೯೯೧ರ ಕೋಲಾರ ಲೋಕ ಸಭೆಯ ಫಲಿತಾಂಶ ಎಲ್ಲರಿಗೂ ತಿಳಿದೆ ಇದೆ. ಸ್ವತಃ ಕೃಷ್ಣಪ್ಪನವರು ಸ್ಪರ್ಧಿಸುವಾಗಲೇ ಅವರಿಗೆ ಫಲಿತಾಂಶದ ಅರಿವಿತ್ತು. ಆದ್ದರಿಂದಲೆ ತಮ್ಮ ಸೋಲನ್ನು ಅವರು ತುಂಬಾ ಸರಳವಾಗಿಯೇ ಸ್ವೀಕರಿಸುತ್ತಾರೆ. ಇದರೊಂದಿಗೆ

ದಲಿತರ ಸ್ವಾರ್ಥ, ಸಮಾಜವಾದಿಗಳ ಕುತಂತ್ರ ಅನಾವರಣವಾಯಿತು. ಈ ಚುನಾವಣೆಯಿಂದ ಪ್ರೊ.ಬಿ ಕೃಷ್ಣಪ್ಪ ದೊಡ್ಡ ಪಾಠವನ್ನೇ ಕಲಿತರು. ಮುಂದೆ ತಮ್ಮದೇ ಪಕ್ಷದ ಅಗತ್ಯವನ್ನು ಕಂಡುಕೊಂಡರು. ಕೋಲಾರದಲ್ಲಿ ಒಂದು ಟಿಕೆಟ್ ಕೋಟು, ಒಂದು ಬೇಷರತ್ ಬೆಂಬಲವನ್ನು ತಕೋಳ್ತಾರೆ. ಇನ್ನೊಂದು ಕುರ್ಚಿ ಹಂಚಿಕೆ ಬಂದಾಗ ನಿಮ್ಮ ಜೊತೆಗೆ ಹಂಚಿಕೊಳ್ಳೋಕೆ ತಯಾರಾಗೊದಿಲ್ಲ. ಮೂರನೇ ಬಾರಿಗೆ ಟಿಕೆಟ್ ಕೋಡೇಬೇಕು ಅಂದಾಗ ನಿಮ್ಮನ್ನು ಸೋಲಿಸೋ ಪ್ರಯತ್ನ ಮಾಡ್ತಾರೆ. ನಿಮ್ಮನ್ನು ಗೆಲ್ಲಿಸೋ ಪ್ರಯತ್ನ ಮಾಡಲ್ಲ ಅವರು. ನನಗೆ ಅಲ್ಲಿ ಮಾಡಿದ್ದು ಅದೇ ಪ್ರಯತ್ನ. ಇವತ್ತು ಕೃಷಿ ಮಂತ್ರಿ ಬೃರೇ ಗೌಡ, ಸಮಾಜ ಕಲ್ಯಾಣ ಮಂತ್ರಿ ಕೃಷ್ಣಾರೆಡ್ಡಿ, ಆಮೇಲೆ ಸ್ಪೀಕರ್ ರಮೇಶ್ ಕುಮಾರ, ಶ್ರೀನಿವಾಸಗೌಡ ಇವರೆಲ್ಲ ಕೂಡ ನನ್ನನ್ನು ಅಭ್ಯರ್ಥಿಯಾಗಿ ನಿಲ್ಲಿಸಿ ಒಳಗೊಳಗೆ ಬಿಜೆಪಿಗೆ ಸಪೋರ್ಟ ಮಾಡಿಟ್ಟು ನನ್ನ ಸೋಲಿಸೋ ಕೆಲಸ ಮಾಡಿದ್ರು, ಯಾಕೆ ಅಂತ ಹೇಳಿದ್ರೆ ಕೃಷ್ಣಪ್ಪ ಗೆದ್ದರೆ, ದಲಿತ ಶಕ್ತಿ ಗೆದ್ದಾಂತಾಗುತ್ತೇ" - (ಪ್ರೊ ಬಿ ಕೆ ಪು-೨೧)ಅವರ ಈ ಮಾತುಗಳಲ್ಲಿ ಕೋಲಾರದ ಸೋಲಿನ ಸ್ಪಷ್ಟ ಚಿತ್ರಣವಿದೆ. ಪ್ರೊ ಬಿ. ಕೃಷ್ಣಪ್ಪನವರು ಕದಸಂಸ ಸ್ಥಾಪನೆಯ ಮೊದಲು ಸಮಾಜವಾದಿ ಯುವಜನ ಸಭಾದಲ್ಲಿದ್ದಾಗ ಯಾವ ಬಗೆಯ ಅನುಭವವಾಗಿತ್ತೋ ಅದೇ ಬಗೆಯ ಇಲ್ಲಿಯೂ ಅದೇ ಬಗೆಯ ಅನುಭವವಾಗಿತ್ತು. ಮುಂದೆ ಈ ಅನುಭವಗಳೇ ಬಿ.ಎಸ್.ಪಿ ಪಕ್ಷವನ್ನು ಕರ್ನಾಟಕದಲ್ಲಿ ಕರೆತರಲು ಮುಖ್ಯ ಕಾರಣಗಳಾದವು.

ಕದಸಂಸಕ್ಕೆ ರಾಜಕೀಯ ಬೇಕೇ ಬೇಡವೇ?ಎಂಬುದನ್ನು ಚರ್ಚಿಸಲು ಬೆಂಗಳೂರಿನ ಕೇಂದ್ರ ಕಛೇರಿಯಲ್ಲಿ ಮೂರು ಬಾರಿ ಸಭೆ ಸೇರಿ ಸುದೀರ್ಘ ಚರ್ಚೆ ನಡೆಸಿತು. ಅವರ ಮುಂದಿದ್ದ ಮುಖ್ಯ ಸಮಸ್ಯೆಗಳೆಂದರೇ ೧)ಕದಸಂಸಕ್ಕೆ ರಾಜಕೀಯ ಬೇಕೆ? ೨)ರಾಜಕೀಯ ಬೇಕೆನ್ನುವುದಾದರೇ ಅದು ಯಾವ ರೀತಿಯ ರಾಜಕೀಯ ಹೊಸಪಕ್ಷವನ್ನು ಕಟ್ಟಬೇಕೆ ಅಥವಾ ಯಾವುದಾದರೂ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕೆ? ೩)ರಾಜಕೀಯ ಪಕ್ಷ ಮತ್ತು ಕದಸಂಸದ ಸಂಬಂಧಗಳು ಹೇಗಿರಬೇಕು? ಈ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬೇಕಾದ ಬಹುದೊಡ್ಡ ಸವಾಲು ಕದಸಂಸದ ನಾಯಕರುಗಳ ಮೇಲಿತ್ತು. ಅವರ ನಿರ್ಧಾರ ಕದಸಂಸದ ಅರಿವು ಉಳಿವಿನ ಪ್ರಶ್ನೆಯಾಗಿತ್ತ.

ಕದಸಂಸ ರಾಜಕಾರಣ ಮಾಡಲೇಬೇಕೆಂಬುದು ಪ್ರೊಬಿ ಕೃಷ್ಣಪ್ಪನವರ ಖಚಿತ ನಿಲುವು ಆಗಿತ್ತು. ೧೯೭೪ ರಲ್ಲಿ ಸ್ಥಾಪನೆಯಾದ ಕದಸಂಸ ಹದಿನೈದು ವರ್ಷಗಳ ನಿರಂತರ ಹೋರಾಟದಿಂದ ಸಾಧಿಸಿದ್ದು ಏನೂ? ಎಂಬ ಪ್ರಶ್ನೆಗೆ ಉತ್ತರ ಶೂನ್ಯವೇ ಆಗಿತ್ತು. ಸುಮಾರು ೧೯೯೨ ರಲ್ಲಿ ದಲಿತ ನೌಕರರ ಒಕ್ಕೂಟ ಭದ್ರಾವತಿ ಶಾಖೆಯಲ್ಲಿ ಏರ್ಪಡಿಸಿದ್ದ ಡಾ. ಅಂಬೇಡ್ಕರ್ ಜನ್ಮದಿನಾಚರಣೆಯ ಸಂದರ್ಭದಲ್ಲಿ ಪ್ರೊ.ಬಿ. ಕೃಷ್ಣಪ್ಪ ಮಾತನಾಡುತ್ತ ದಸಂಸದ ಚರಿತ್ರೆಯನ್ನು ತೆರೆದಿಡುತ್ತಾರೆ. "ದಸಂಸ ಕರ್ನಾಟಕದಾದ್ಯಂತ ಅನೇಕ ಹೋರಾಟವನ್ನು ಮಾಡಿದೆ ಎಂಬುದು ನಿಜ ! ಆದರೆ ಹಿಂದಿರುಗಿ ನಾವು ಕ್ರಮಿಸಿದ ದೂರವನ್ನು ನೋಡಿದರೆ ನಾವು ಎಲ್ಲಿ ನಿಂತಿದ್ದೇವೋ ಈಗಲೂ ಅಲ್ಲಿಯೇ ನಿಂತಿದ್ದೇವೆ. ಹೆಜ್ಜೆಯನ್ನು ಮಾತ್ರ ಮೇಲೆತ್ತಿದ್ದೇವೆ. ಹಾಗಂದುಕೊಂಡು ನಮ್ಮ ಸಾಧನೆ

ನಗಣ್ಯವೆಂದು ಹೇಳಲಾಗುವುದಿಲ್ಲ. ಆದರೆ ನಾವು ಸಾಧಿಸಲು ಹೊರಟಿದ್ದನ್ನು ಸಾಧಿಸಲಾಗಿಲ್ಲ ಎಂಬ ನೋವು ನನ್ನನ್ನು ನಿರಂತರವಾಗಿ ಕಾಡುತ್ತಿದೆ" – ಎಂದಿದ್ದರು. ಅವರ ಆತ್ಮಾವಲೋಕನದಂತಿದ್ದ ಅವರ ಮಾತುಗಳಲ್ಲಿ ರಾಜಕಾರಣ ದತ್ತ ದೃಷ್ಟಿ ಹೊರಳುತ್ತಿದ್ದುದ್ದರ ಸುಳಿವಿದೆ.

ಪ್ರೊ. ಬಿ ಕೃಷ್ಣಪ್ಪ ಅಪ್ಪಟ ಅಂಬೇಡ್ಕರ್‌ವಾದಿ, ದಸಂಸವನ್ನು ಸಂಸ್ಥಾಪನೆ ಮಾಡಿದ ಮೇಲೆ ಅವರು ಅಂಬೇಡ್ಕರ್ ಅವರನ್ನು ಆಳವಾಗಿ ಅಧ್ಯಯನ ಮಾಡಿದ ಪರಿಣಾಮ ದಲಿತರ ಬಿಡುಗಡೆ ಅಂಬೇಡ್ಕರ್ ವಾದದಲ್ಲಿದೆ ಎಂಬುವುದನ್ನು ಮನಗಂಡರು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಾಜಕಾರಣವನ್ನು ಎಂದೂ ತಿರಸ್ಕರಿಸಲಿಲ್ಲ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಎಂಬುದು ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ. ಸಮಾಜದ ಪುನರ್ ರಚನೆಯ ಮಹತ್ವದ ನಿರ್ಣಯಗಳು ಶಾಸನ ಮಾಡುವ ಅಧಿಕಾರದಲ್ಲಿರುವ ಅದರಿಂದ ದೂರ ಸರಿದರೇ ಸಮಾಜ ಪುನರ್ ರಚನೆಯ ಗುರಿ ಈಡೇರುವುದಾದರೂ ಹೇಗೆ? ಅದಕ್ಕೆ ಅಂಬೇಡ್ಕರ್ ಹೇಳಿರುವ “Political power is a master key which open all the gates of change" ಎಂಬ ಮಾತು ಅವರ ಮನದಾಳದಲ್ಲಿ ನಿಂತಿತ್ತು. ಪ್ರೊ ಬಿ.ಕೆ ಅವರು ರಾಜಕಾರಣವನ್ನು ಕುರಿತು ಮಾತನಾಡುವಾಗಲೆಲ್ಲಾ ಈ ಮಾತನ್ನು ಉಚ್ಚರಿಸಿದೇ ಇರುತ್ತಿರಲಿಲ್ಲ. ರಾಜಕೀಯ ಶಕ್ತಿಯನ್ನು ಪಡೆದುಕೊಳ್ಳುವುದರಲ್ಲಿಯೇ ದಲಿತರ ಬಿಡುಗಡೆ ಅಡಗಿದೆ ಎಂಬ ಖಚಿತ ನಿಲುವಿಗೆ ಅವರು ಬರುತ್ತಾರೆ.

ರಾಜಕೀಯವನ್ನು ದ್ವೇಷಿಸುತ್ತಿದ್ದ ಪ್ರೊಬಿ ಕೃಷ್ಣಪ್ಪ ೧೯೯೦ರ ವೇಳೆಗೆ ದಲಿತರನ್ನು ರಾಜಕೀಯ ಶಕ್ತಿಯನ್ನಾಗಿ ಪರಿವರ್ತಿಸದೇ ಅನ್ಯಮಾರ್ಗವಿಲ್ಲವೆಂಬುದನ್ನು ಕಂಡುಕೊಳ್ಳುತ್ತಾರೆ. ಅವರಿಗೆ ರಾಜಕಾರಣ ಎಂಬುದು ತಮ್ಮ ಪರವಾಗಿ ಬಂದ ಆಸ್ತಿಯ ಸಂರಕ್ಷಣೆಗಾಗಿ ಅಲ್ಲ. ಸ್ವಜನ ಪಕ್ಷಪಾತ, ಸ್ವಕುಟುಂಬ ಹಿತಸಾಧನೆಗೆಲ್ಲ ಅಥವಾ ಭ್ರಷ್ಟಾಚಾರದಿಂದ ಅಪಾರ ಧನವನ್ನು ಸಂಪಾದಿಸಿ ವಿದೇಶಿ ಬ್ಯಾಂಕುಗಳಲ್ಲಿ ಠೇವಣಿಯಾಗಿ ಇಡುವುದಕ್ಕಲ್ಲ. ಪ್ರೊಬಿ ಕೃಷ್ಣಪ್ಪನವರಿಗೆ ರಾಜಕಾರಣ ಎಂಬುದು ದಲಿತರ ಬಿಡುಗಡೆಗೆ, ಮತ್ತು ಸಮಸಮಾಜದ ನಿರ್ಮಾಣಕ್ಕೆ ಇದು ಅವರ ಧ್ಯೆಯ.

ನಿರಂತರವಾಗಿ ೨೦ ವರ್ಷಗಳ ಹೋರಾಟದಿಂದ ಸಾಧಿಸಿದ್ದು ತುಂಬಾ ಅಲ್ಪ ಎಂಬುದನ್ನು ಅರಿತುಕೊಂಡಿದ್ದ ಕೃಷ್ಣಪ್ಪ “ಈಗ ನಾವು ದೇವಸ್ಥಾನವನ್ನು ಪ್ರವೇಶ ಮಾಡುವುದಕ್ಕಿಂತ ಪಾರ್ಲಿಮೆಂಟನ್ನು ಪ್ರವೇಶಿಸಬೇಕು. ಅಧಿಕಾರ ಶಕ್ತಿಯನ್ನು ಪಡೆದುಕೊಳ್ಳಬೇಕು. ಎಲ್ಲಿಯವರೆಗೆ ದಲಿತರು ಅಧಿಕಾರ ಶಕ್ತಿಯನ್ನು ಕೈಗೆ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸ್ಥಿತಿ-ಗತಿ ಬದಲಾಗುವುದಿಲ್ಲ. ಇದನ್ನು ಪಡೆದುಕೊಂಡರೆ ಎಲ್ಲಾ ಪರಿವರ್ತನೆಗೆ ಬರಲು ಸಾಧ್ಯ.

ರಾಜಕೀಯ ಶಕ್ತಿ ಒಂದು ಮಹತ್ವದ ಉಪಕರಣವಿದ್ದಂತೆ”  (ಬರಹ ಮತ್ತು ಭಾಷಾಣ ಇಂದಿರಾ ಕೃಷ್ಣಪ್ಪ ಪ-೬) ಎಂಬ ಅವರ ಮಾತುಗಳಲ್ಲಿ ದಲಿತರ ಏಳಿಗೆಗೆ ರಾಜಕೀಯ ಶಕ್ತಿಯಾಗಬೇಕೆಂಬ ದೃಢ ನಿರ್ಧಾರವಿದೆ.



ಕದಸಂಸದ ರಾಜಕಾರಣ ಪರಿಶೀಲನಾ ಸಭೆಯಲ್ಲಿ ದೇವನೂರು ಮಹಾದೇವ ಅವರು ಕದಸಂಸ ರಾಜಕಾರಣ ಪ್ರವೇಶವನ್ನು ಬಲವಾಗಿ ವಿರೋಧಿಸುತ್ತಾರೆ. ಕದಸಂಸ ಅದೊಂದು ಸಾಂಸ್ಕೃತಿಕ ಸಂಘಟನೆಯಾಗಿ, ಅದೊಂದು ಹೋರಾಟದ ಚಳವಳಿಯಾಗಿ ಒತ್ತಡದ ಗುಂಪಾಗಿಯೆ ಇರಬೇಕೆಂಬುದು ಅವರ ವಾದವಾಗಿತ್ತು. ಹೋರಾಡಬಹುದು ಎಂಬುದು ಅವರ ನಿಲುವಾಗಿತ್ತು. ಆದರೆ ಹೋರಾಟ ಎಲ್ಲಿಯವರೆಗೆ? ಎಂಬುದಕ್ಕೆ ಅವರ ಬಳಿ ಉತ್ತರವಿರಲಿಲ್ಲ. ಈಗಾಗಲೇ ಕಟ್ಟಾ ಹೋರಾಟಗಾರರಾಗಿದ್ದ ಹಲವು ಕಾರ್ಯಕರ್ತರನ್ನು ರಾಜಕೀಯ ಪಕ್ಷಗಳು ಗಾಳ ಹಾಕಿ ತಮ್ಮ ಕಡೆಗೆ ಸೆಳೆದುಕೊಳ್ಳುವಲ್ಲಿ ಸಫಲರಾಗಿದ್ದರು. ಇನ್ನು ಕೆಲವರು ಅಂಬೇಡ್ಕರ್ ವಾದವನ್ನು ಮರೆತು ಮೂಲಭೂತವಾದ ವನ್ನು ಪೋಷಿಸುತ್ತಿರುವ ಬಿ.ಜೆ.ಪಿ ಪಕ್ಷದೊಂದಿಗೆ ಕೈಜೋಡಿಸುತ್ತಿದ್ದಾರೆ. ಹೀಗಾದಲ್ಲಿ ಕದಸಂಸ ರಾಜಕೀಯ ಕಾರ್ಯಕರ್ತರನ್ನು ಸೃಷ್ಟಿ ಮಾಡುವ ಕಾರ್ಖಾನೆಯಾಗುವುದರಲ್ಲಿ ಸಂಶಯವಿಲ್ಲ. ಅಷ್ಟೇ ಏಕೆ? ದೇವನೂರರ ಒಡಹುಟ್ಟಿದ ತಮ್ಮ ಶಿವಮಲ್ಲು ಜನತಾ ಪಕ್ಷದಲ್ಲಿ MLC ಆಗುತ್ತಾರೆಂಬ ದಟ್ಟ ವದಂತಿ ಇತ್ತು. ಹೀಗಿರುವಾಗ ರಾಜಕೀಯದಿಂದ ದೂರವಿದ್ದು ಸಂಘಟನೆಯಿಂದ ಸಮಾಜ ಪರಿವರ್ತನೆ ಸಾಧ್ಯವಿಲ್ಲವೆಂಬುದು ಕೃಷ್ಣಪ್ಪನವರ ಅನುಭವದ ಮಾತಾಗಿತ್ತು. “ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚಳವಳಿ ಹೋರಾಟಗಳಿಂದ ಕ್ರಾಂತಿ ಮಾಡುವುದು ಸಾಧ್ಯವಿಲ್ಲ. ರಾಜಕೀಯ ಅಧಿಕಾರವಿದ್ದರೆ ಮಾತ್ರ ವ್ಯವಸ್ಥೆ ಬದಲಾವಣೆ ಸಾಧ್ಯ”  ಎಂಬ ಅವರ ಮಾತುಗಳು ನನ್ನ ಅಭಿಪ್ರಾಯಕ್ಕೆ ಪೂರಕವಾಗಿದೆ. ಕಟ್ಟಕಡೆಗೆ ಸರ್ವಸದಸ್ಯರ ಸಭೆಯು ಕದಸಂಸದ ರಾಜಕೀಯ ಪ್ರವೇಶವನ್ನು ಕುರಿತು ಸಾಧಕ-ಬಾದಕಗಳನ್ನು ಚರ್ಚಿಸಿ ತೀರ್ಮಾನಕ್ಕೆ ಬರಲು ಒಂದು ಸಮಿತಿಯನ್ನು ರಚಿಸುತ್ತಾರೆ. ಆ ಸಮಿತಿಯಲ್ಲಿ ಪ್ರೊ.ಬಿ.ಕೃಷ್ಣಪ್ಪ, ಪ್ರೊ. ಸಿ.ಕೆ. ಮಹೇಶ್, ಶ್ರೀಧರಕಲವೀರ, ಸದಸ್ಯರಾಗಿರುತ್ತಾರೆ. ಕದಸಂಸದ ರಾಜಕಾರಣ ಪ್ರವೇಶವನ್ನು ಕುರಿತಂತೆ ಮೂರು ಸದಸ್ಯರ ಸಮಿತಿಯು ಹಲವು ಬಾರಿ ಸಭೆ ಸೇರಿ ಚರ್ಚಿಸುತ್ತಾರೆ. ಅವರ ಮುಂದಿದ್ದ ಸವಾಲು ಸಣ್ಣದ್ದೇನಾಗಿರಲಿಲ್ಲ. ದಲಿತರ ಭವಿಷ್ಯವೇ ಅದರಲ್ಲಿ ಅಡಗಿತ್ತು. ಕದಸಂಸ ರಾಜಕಾರಣ ಮಾಡಬೇಕೆ ಬೇಡವೇ? ಎಂಬುದು ಅವರ ಮುಂದಿದ್ದ ಮೊದಲ ಪ್ರಶ್ನೆ, ರಾಜಕಾರಣ ಮಾಡಬೇಡವೆನ್ನುವುದಾದರೆ ಹೊಸಪಕ್ಷವನ್ನು ಕಟ್ಟಬೇಕೆ? ಅಥವಾ ಸ್ಥಳೀಯ ಅಥವಾ ರಾಷ್ಟ್ರೀಯ ಪಕ್ಷಗಳಿಗೆ ಸೇರಬೇಕೆ? ಎಂಬುದು ಅವರ ಮುಂದಿದ್ದ ಎರಡನೆಯ ಪ್ರಶ್ನೆ?

ಸಮಿತಿಯ ಸದಸ್ಯರು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಸುದೀರ್ಘ ಚರ್ಚೆಯನ್ನು ಪ್ರಾರಂಭಿಸುತ್ತಾರೆ. ಕಟ್ಟಕಡೆಗೆ ಮೊದಲ ಪ್ರಶ್ನೆಗೆ ರಾಜಕಾರಣ ಪ್ರವೇಶ ಅನಿವಾರ್ಯವೆಂಬ ನಿಲುವಿಗೆ ಬರುತ್ತಾರೆ. ರಾಜಕಾರಣ ಮಾಡುವುದಾದರೆ ಯಾವ ಬಗೆಯ ರಾಜಕಾರಣ? ಪ್ರತ್ಯೇಕ ಪ್ರಾದೇಶಿಕ ಪಕ್ಷದ ಸ್ಥಾಪನೆ ಇತರೆ ಪ್ರಾದೇಶಿಕ ಪಕ್ಷಗಳೊಂದಿಗೆ ಕೈಜೋಡಿಸುವುದೇ ಅಥವಾ ಯಾವುದಾದರೂ ರಾಷ್ಟ್ರೀಯ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದೇ ಇನ್ನು ಮುಂತಾದ ಪ್ರಶ್ನೆಗಳನ್ನು ಕುರಿತು ಚರ್ಚೆ ಪ್ರಾರಂಭಿಸುತ್ತಾರೆ. ಪ್ರಾದೇಶಿಕವಾಗಿ ಆ ಕಾಲದಲ್ಲಿ ಯಾವುದೇ ಪಕ್ಷಗಳು ಪ್ರಬಲವಾಗಿರಲಿಲ್ಲ. ರೈತಸಂಘ, ಸಾಹಿತಿಗಳು ಚಿಂತಕರು ಸೇರಿ ಪ್ರಗತಿರಂಗವೆಂಬ ಪ್ರಾದೇಶಿಕ ಪಕ್ಷವನ್ನು ನೊಂದಣಿ ಮಾಡಿಸಿಕೊಂಡು ಪ್ರಚಾರಕ್ಕೆ ತೊಡಗಿದರು. ಈ ಪಕ್ಷದ ನೇತಾರರು ಲಂಕೇಶ್‌ರೇ ಆಗಿದ್ದರು.



ಲಂಕೇಶರ ಮೇಲಿನ ಅಭಿಮಾನಕ್ಕೂ ಹೊಸ ಪಕ್ಷವನ್ನು ಕರ್ನಾಟಕದಲ್ಲಿ ಹೆಚ್ಚಿನ ಪ್ರಚಾರಕ್ಕೆ ತರುವ ಉತ್ಸಾಹದಿಂದಲೋ ದೇವನೂರು ಮಹಾದೇವ ಪ್ರಗತಿರಂಗದಲ್ಲಿ ಕದಸಂಸವನ್ನು ಸೇರಿಸಿದರೆ ಸೂಕ್ತವೆನ್ನುತ್ತಾರೆ. ಆದರೆ ರೈತಸಂಘ ಮತ್ತು ಪ್ರಗತಿಪರರನ್ನು ಮೊದಲಿಂದಲು ಅನುಮಾನದಿಂದಲೇ ನೋಡುತ್ತಾ ಬಂದ ಕೃಷ್ಣಪ್ಪ ಅದಕ್ಕೆ ಹಿಂದೇಟು ಹಾಕುತ್ತಾರೆ. ಪ್ರಗತಿರಂಗವನ್ನು ಸೇರಿದರೆ ಮತ್ತೆ ದಲಿತರಿಗೆ ಮೇಲ್ವರ್ಗದ ಜೀತ ತಪ್ಪುವುದಿಲ್ಲವೆಂಬುದು ಅವರ ನಿಲುವಾಗಿತ್ತು. ಆದ್ದರಿಂದ ದೇವನೂರರ ಅಭಿಪ್ರಾಯವನ್ನು ಸಮಿತಿಯ ಸದಸ್ಯರು ಖಡಾಖಂಡಿತವಾಗಿ ನಿರಾಕರಿಸಿಬಿಡುತ್ತಾರೆ.

ಈ ಪ್ರಕರಣದಿಂದ ಕೃಷ್ಣಪ್ಪನವರ ಮೇಲೆ ಲಂಕೇಶರಿಗೆ ಇನ್ನಿಲ್ಲದ ಸಿಟ್ಟಿತ್ತು. ಅದರ ಹೆಚ್ಚಿನ ವಿಚಾರವನ್ನು ಮುಂದೆ ಪ್ರಸ್ತಾಪಿಸುತ್ತೇನೆ. ಪ್ರಾದೇಶಿಕ ಪಕ್ಷವನ್ನು ತಿರಸ್ಕರಿಸಿದ ಮೇಲೆ ರಾಷ್ಟ್ರೀಯ ಪಕ್ಷವನ್ನು ಕುರಿತು ಸಮಿತಿಯು ಜಿಜ್ಞಾಸೆಯನ್ನು ಪ್ರಾರಂಭಿಸುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ ಬಂದು ಚುನಾವಣೆಗಳು ಪ್ರಾರಂಭವಾದ ದಿನದಿಂದ ದಲಿತ ಸಮುದಾಯ ಕಾಂಗ್ರೆಸನ್ನು ಪ್ರಶ್ನಾತೀತವಾಗಿ ಬೆಂಬಲಿಸುತ್ತ ಬಂದಿದೆ. ಸರಿ ಸುಮಾರು ೪೦ ವರ್ಷಗಳು ನಿರಂತರವಾಗಿ ಭಾರತವನ್ನು ಆಳ್ವಿಕೆ ಮಾಡಿದ ಕಾಂಗ್ರೆಸ್ಸು ದಲಿತರನ್ನು ತನ್ನ ಓಟ್ ಬ್ಯಾಂಕ್ ಎಂದು ಭಾವಿಸಿತ್ತೆ ಹೊರತು ದಲಿತರಿಗಾಗಿ ಇಂದಿರಾಗಾಂಧಿ ಕಾಂಗ್ರೆಸ್ ಪಕ್ಷ ಮಾಡಿದ್ದೇನೂ ಇರಲಿಲ್ಲ. ದಲಿತರ ರಕ್ಷಕಳೆಂದೇ ಮೇಲ್ವರ್ಗದವರು

ಭಾವಿಸಿದ್ದರು. ಆದರೆ ದಲಿತರಿಗಾಗಿ ಇಂದಿರಾಗಾಂಧಿಯನ್ನು ದಲಿತರಿಗಾಗಿ ಏನನ್ನೂ ಮಾಡಿರಲಿಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದು ಸುತಾರಾಮ ಸಾಧ್ಯವಿಲ್ಲ ಎಂದು ಸಮಿತಿ ನಿರ್ಣಯಕ್ಕೆ ಬಂತು. ಇನ್ನೂ ಮೂಲಭೂತವಾದಿ ಪಕ್ಷ ಬಿ.ಜೆ.ಪಿಯನ್ನು ಬೆಂಬಲಿಸುವ ಪ್ರಶ್ನೆಯಂತೂ ಉದ್ಭವಿಸುವುದಿಲ್ಲ. ಹಾಗಾದರೆ ಯಾವ ಪಕ್ಷಕ್ಕೆ ಸೇರಬೇಕು?

ಉತ್ತರ ಪ್ರದೇಶದಲ್ಲಿ ಕಾನ್ಸಿರಾಮ್ ಅವರಿಂದ ಸ್ಥಾಪಿಸಲ್ಪಟ್ಟ ಬಹುಜನ ಸಮಾಜಪಕ್ಷವನ್ನು ಕುರಿತು ಪರಿಶೀಲನೆ ಎತ್ತಿಗೊಂಡರು. ಕಾನ್ಸಿರಾಮ್ ಉತ್ತರ ಪ್ರದೇಶದ ಅಸ್ಪೃಶ್ಯ ಸಮುದಾಯಕ್ಕೆ ಸೇರಿದವರು. ಸರ್ಕಾರಿ ಉದ್ಯೋಗಿಯಾಗಿದ್ದ ಅವರು ಅಂಬೇಡ್ಕರ್ ಜಯಂತಿಯನ್ನು ಕಛೇರಿಯಲ್ಲಿ ಆಚರಿಸಲು ತಡೆಯೊಡ್ಡಿದರೆಂಬ ಕಾರಣಕ್ಕೆ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟು ಬಾಂಬ್‌ಸೇಪ್ ಎಂಬ ಉದ್ಯೋಗಿಗಳ ಒಕ್ಕೂಟವನ್ನು ಸ್ಥಾಪಿಸಿ ಆ ಮೂಲಕ ಬಹುಜನಸಮಾಜ ಪಕ್ಷ ಎಂಬ ರಾಜಕೀಯ ಪಕ್ಷವನ್ನು ಕಟ್ಟಿ ರಾಷ್ಟ್ರ ವ್ಯಾಪ್ತಿಯಲ್ಲಿ ವಿಸ್ತರಿಸಿದರು. ಅಂಬೇಡ್ಕರ್ ಸಿದ್ಧಾಂತ ಬಹು ಜನ ಸಮಾಜವಾದಿ ಪಕ್ಷಕ್ಕೆ ತಳಹದಿ, ದೇಶದ ಸಂಪತ್ತು ಎಲ್ಲಾ ಸಮುದಾಯಗಳು ಸಮನಾಗಿ ಹಂಚಿಕೊಂಡು ಸರಿಸಮನಾಗಿ ಬಾಳುವುದೇ ಅದರ ತತ್ವ, ಆದರ್ಶಗಳಾಗಿದ್ದವು. ಕಾನ್ಸಿರಾಮ್ ಅವರು ಮಾತನಾಡುವಾಗ ತಮ್ಮ ಜೇಬಿನಲ್ಲಿದ್ದ ಪೆನ್ನನ್ನು ತೆಗೆದುಕೊಂಡು ಹಿಡಿದುಕೊಂಡು ಭಾರತೀಯ ಸಮಾಜ ಈಗ ಹೀಗಿದೆ. ಅದೇ ಪೆನ್ನನ್ನು ಅಡ್ಡಡ್ಡ ಹಿಡಿದು ಅದನ್ನು ಹೀಗೆ ಮಾಡಬೇಕಾಗಿದೆ ಎನ್ನುತ್ತಿದ್ದರು. ಅಂದರೆ ಶ್ರೇಣಿಕೃತವಾಗಿರುವ ಸಮಾಜವನ್ನು ಸಮಸಮಾಜವನ್ನಾಗಿ ಮಾಡಬೇಕಾಗಿದೆ ಎಂದರ್ಥ. ಎಲ್ಲ ಜನರು ಆರ್ಥಿಕ, ರಾಜಕೀಯ,



ಸಾಮಾಜಿಕವಾಗಿ ಸಮಾನರನ್ನಾಗಿಸಬೇಕು ಎಂಬುದು ಅವರ ಸಿದ್ಧಾಂತವಾಗಿತ್ತು. ಇದು ಭಾರತೀಯ ಸಮಾಜದ ಪುನರ್ ನಿರ್ಮಾಣ ತತ್ವವೇ ಆಗಿದೆ.

ಕರ್ನಾಟಕದಲ್ಲಿ ಸಮಾಜ ಪರಿವರ್ತನೆಯ ಕನಸುಕಂಡ ಕದಸಂಸದ ನಾಯಕ ಪ್ರೊಬಿ ಕೃಷ್ಣಪ್ಪನವರಿಗೆ ಕಾನ್ಸಿರಾಮ್ ಅವರ ತತ್ವಾದರ್ಶಗಳು ಗಮನ ಸೆಳೆದವು. ಅಷ್ಟೇ ಅಲ್ಲದೆ ನೂರಕ್ಕೆ ನೂರು ಅಂಬೇಡ್ಕರ್ ಸಿದ್ಧಾಂತವನ್ನು ಒಪ್ಪಿಕೊಂಡಿರುವ ಭಾರತದ ಏಕೈಕ ರಾಜಕೀಯ ಪಕ್ಷ. ಆದ್ದರಿಂದ ಬಿಎಸ್‌ಪಿ ಪಕ್ಷವೇ ಕದಸಂಸಕ್ಕೆ ತಾತ್ವಿಕವಾಗಿ ಸರಿಹೊಂದು ಪಕ್ಷವೆಂಬುದಾಗಿ ಸಮಿತಿಯು ನಿರ್ಣಯಿಸುತ್ತದೆ. ತಮ್ಮ ನಿರ್ಧಾರವನ್ನು ಸ್ಪಷ್ಟಪಡಿಸಿಕೊಳ್ಳಲು ಮತ್ತು ಇರಬಹುದಾದ ಅಲ್ಪಸ್ವಲ್ಪ ಗೊಂದಲಗಳನ್ನು ನಿವಾರಿಸಿಕೊಳ್ಳಲು ಪ್ರೊ ಬಿ. ಕೃಷ್ಣಪ್ಪ ಹಲವಾರು ಬಾರಿ ಕಾರಾಮ್ ಅವರನ್ನು ಸಂದರ್ಶಿಸುತ್ತಾರೆ. ಕಾನ್ಸಿರಾಮ್ ಅವರು ಪಕ್ಷ ಕಟ್ಟಲು ಪಟ್ಟ ಶ್ರಮ 'ಏಕ್

ನೋಟ್ ಔರೇಕ್ ಓಟ್'- ಎಂಬ ಘೋಷ ವಾಕ್ಯ, ಸಂಘಟನಾ ಚಾತುರ ಇವೆಲ್ಲವೂ ಅವರನ್ನು ಇನ್ನಿಲ್ಲದಂತೆ ಆಕರ್ಷಿಸಿದವು. ಆದರೂ ಪ್ರಜಾಪ್ರಭುತ್ವದಲ್ಲಿ ಗಾಢವಾದ ನಂಬಿಕೆ ಇಟ್ಟಿದ್ದ ಪ್ರೊ.ಬಿ ಕೃಷ್ಣಪ್ಪ ಸರ್ವಸದಸ್ಯರ ಸಭೆಯ ಮುಂದೆ ತಮ್ಮ ಅದುವರೆಗಿನ ತರ್ಕ, ಚರ್ಚೆಯ ಪೂರ್ಣ ವರದಿಯನ್ನು ಮಂಡಿಸಿದರು. ಸರ್ವಸದಸ್ಯರ ಸಭೆ ಕರೆಯಲು ಕದಸಂಸಕ್ಕೆ ಸೂಚಿಸುತ್ತಾರೆ. ಆಗಿನ ಕದಸಂಸದ ರಾಜ್ಯ ಸಂಘಟನಾ ಸಂಚಾಲಕರಾಗಿದ್ದ ಡಿ.ಜಿ.ಸಾಗರ ಇವರು ಸರ್ವಸದಸ್ಯರ ಸಭೆಯನ್ನು ಕರೆಯುತ್ತಾರೆ. ಸಭೆಯು ಸರ್ವಾನುಮತದಿಂದ ಸಮಿತಿಯ ನಿರ್ಣಯವನ್ನು ಅನುಮೋದಿಸಿತು. ಬಿಎಸ್‌ಪಿ ಪಕ್ಷಕ್ಕೆ ಕದಸಂಸ ಸೇರಬೇಕೆಂದು ಒಮ್ಮತದ ನಿರ್ಧಾರಕ್ಕೆ ಬರಲಾಯಿತು.

[ಮೂಕನಾಯಕ ೨೦೧೫]

**ಒಳ ಮೀಸಲಾತಿ : ಒಳಗಣ್ಣು ತೆರೆಯ**

**- ಕೆ.ಟಿ. ಸಿದ್ದಯ್ಯ**

ಕರ್ನಾಟಕದ ಅಸ್ಪೃಶ್ಯ ಜಾತಿಗಳಲ್ಲಿ ಒಂದಾದ ಮಾದಿಗ ಜಾತಿ ಸಂಘಟನೆಗಳು ಕರ್ನಾಟಕದಲ್ಲಿ ಮೀಸಲಾತಿ ವರ್ಗೀಕರಣದ ಹೋರಾಟ ಕೈಗೆತ್ತಿಕೊಂಡಿವೆ. ಮಾದಿಗ ಜಾತಿಯೇ ಮುಂಚೂಣಿಯಲ್ಲಿರುವುದಕ್ಕೆ ಕಾರಣವೇನೆಂಬುದು ಯಕ್ಷಪ್ರಶ್ನೆಯೇನಲ್ಲ. ಹಸಿದವನು ಅನ್ನಕ್ಕೆ, ಬಾಯಾರಿದವನು ನೀರಿಗೆ ಬೊಗಸೆಯೊಡ್ಡುವಂತೆ ಮಾದಿಗ ಜಾತಿ ಸಾಮಾಜಿಕ ನ್ಯಾಯಕ್ಕಾಗಿ ಎದ್ದುನಿಂತಿದೆ. ಮಾದಿಗ ಜಾತಿಯ ಸಾಮಾಜಿಕ ಬದುಕಿನ ಅಧ್ಯಯನದಿಂದ ಬೆಳಕಿಗೆ ಬಂದ ಚಾರಿತ್ರಿಕ ಅಂಶಗಳು ಒಳಮೀಸಲಾತಿ ಹೋರಾಟದ ಆಶಯವನ್ನು ವಿವರಿಸಿಕೊಳ್ಳಲು ನೆರವಾಗುತ್ತದೆ.

ಆದಿಯಿಂದಲೂ ಮಾದಿಗ ಜಾತಿ ಜನರು ಸತ್ತ ದನ ಹೊರುವುದು, ಅದರ ಚರ್ಮ ಸುಲಿಯುವುದು, ಮಾಂಸ ತಿನ್ನುವುದಲ್ಲದೆ, ಪ್ರಮುಖವಾಗಿ ಚಮ್ಮಾರಿಕೆ ಕಾಯಕವನ್ನು ನಂಬಿ ಬದುಕುತ್ತಿದ್ದರು. ವೈದಿಕ ಚಹರೆಗಳ ಸೋಂಕಿಲ್ಲದ ಕಾಯಕ ಇದಾಗಿತ್ತು. ಇದು ಅತ್ಯಂತ ಕೀಳು ವೃತ್ತಿ ಎಂಬ ಸಾಮಾಜಿಕ ನಿಲುವು ಮಾದಿಗ ಜಾತಿಯನ್ನು ಮಾನವ ಘನತೆಯಿಂದ ವಂಚಿಸಿತ್ತು. ಇದು ಜಾತಿ ವ್ಯವಸ್ಥೆಯ ಚರಿತ್ರೆಯ ಭಾಗ, ವರ್ತಮಾನದಲ್ಲಿ ಮಾದಿಗ ಜಾತಿಯ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿನ ಬದುಕು ಮತ್ತು ಸ್ಥಾನಮಾನದಲ್ಲಿ ಅಂತಹ ಗಮನಾರ್ಹ ಬದಲಾವಣೆ ಏನೂ ಆಗಿಲ್ಲವೆಂಬುದು ಒಳಮೀಸಲಾತಿ ಹೋರಾಟಕ್ಕೆ ಹಿಡಿದ ಕನ್ನಡಿ (ಮೇಲಿನ ಎಲ್ಲಾ ವಿವರಗಳು ಮಾದಿಗ ಜಾತಿಯ ಕಾಯಕದ ಘನತೆಯನ್ನು ಹೇಳುತ್ತವಲ್ಲದೆ ಕೀಳರಿಮೆಯನ್ನಲ್ಲ).

ಈಗ ಒಂದು ರೂಪಾಯಿ ನಮ್ಮ ಕೈಯಲ್ಲಿದೆ ಎಂದು ತಿಳಿಯಿರಿ. ಒಂದು ರೂಪಾಯಿಯನ್ನು ಇಬ್ಬರಿಗೆ ಸಮನಾಗಿ ಹಂಚಿದರೆ ತಲಾ ಎಂಟಾಣೆ ಬರುತ್ತದೆ. ಬದಲಿಗೆ ಒಬ್ಬನಿಗೆ ನಾಲ್ಕಾಣೆ, ಇನ್ನೊಬ್ಬನಿಗೆ ಹನ್ನೆರಡಾಣೆ

ಎಂದಾದರೆ ಇದು ತಾರತಮ್ಯ ನೀತಿಯಲ್ಲವೇ? ಸಂವಿಧಾನದತ್ತವಾದ ಶೇ ೧೫ರ ಪ್ರಮಾಣದ ಮೀಸಲಾತಿ ಹಂಚಿಕೆಯಲ್ಲಿ ಹೊಲೆಮಾದಿಗರ ನಡುವೆ ಈ ಬಗೆಯ ತಾರತಮ್ಯ ಇದೆ ಎಂಬ ಅತೃಪ್ತಿ ಒಳಮೀಸಲಾತಿ ಹುಟ್ಟಿಗೆ ಕಾರಣವಾಗಿದೆ. ಜಾತಿವಾರು ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಅವಕಾಶ ಸಮನಾಗಿ ಹಂಚಿಕೆಯಾಗಬೇಕೆಂಬುದು ಒಳಮೀಸಲಾತಿ ಹೋರಾಟದ ಹಿಂದಿನ ತರ್ಕ ಮತ್ತು ತತ್ವ

ಕರ್ನಾಟಕದ ಅಸ್ಪೃಶ್ಯ ಜಾತಿಗಳ ಜನಸಂಖ್ಯೆಯಲ್ಲಿ ಮಾದಿಗ ಜಾತಿ ಸಂಖ್ಯಾಬಲ ಹೊಲೆಯ ಜಾತಿಗಿಂತಲೂ ಹೆಚ್ಚಿದೆ. ಆದರೆ, ಶಿಕ್ಷಣ, ವಾಣಿಜ್ಯ, ರಾಜಕೀಯ ಅಧಿಕಾರ,



ಭೂಒಡೆತನ ಮುಂತಾದ ಕ್ಷೇತ್ರಗಳಲ್ಲಿ ಮಾದಿಗ ಜಾತಿಗೆ ಸಂಖ್ಯೆಗೆ ಅನುಗುಣವಾಗಿ ಅವಕಾಶಗಳು ಸಿಕ್ಕಿಲ್ಲ. ಮಾದಿಗ ಜಾತಿಗಿಂತ ಕಡಿಮೆ ಇರುವ ಹೊಲೆಯ ಸಮುದಾಯಕ್ಕೆ ಮೇಲೆ ಹೇಳಿದ ಎಲ್ಲಾ ಕ್ಷೇತ್ರಗಳಲ್ಲೂ ಹೆಚ್ಚು ಅವಕಾಶಗಳು ಹೇಗೆ ದಕ್ಕಿದವು? ಇದು ನಾಲ್ಕಾಣೆ, ಹನ್ನೆರಡಾಣೆ ಹಂಚಿಕೆಯ ಕಥೆಯಲ್ಲದೆ ಮತ್ತೇನು? ಆದ್ದರಿಂದ, ಜಾತಿವಾರು ಜನಗಣತಿಯಾಗಬೇಕು. ಶೇ ೧೫% ಪ್ರಮಾಣದ ಮೀಸಲಾತಿ ಎರಡು ಜಾತಿಗಳ ನಡುವೆ ಸಮಾನವಾಗಿ ಹಂಚಿಕೆಯಾಗಬೇಕು ಮಾತ್ರವಲ್ಲದೆ ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ ನೂರೊಂದು ಜಾತಿಗಳಿಗೂ ಸಮಪಾಲು ಸಿಗಬೇಕೆಂದು ಎರಡು-ಮೂರು ದಶಕಗಳಿಂದಲೂ ಮಾದಿಗ ಜಾತಿ ಸಂಘಟನೆಗಳು ನಡೆಸಿದ ಒಳಮೀಸಲಾತಿ ಹೋರಾಟದ ಫಲ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ.

ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಜಾರಿಯಾದರೆ ಕಳೆದುಕೊಂಡಿರುವ ಶೇ ೬% ರ ಅವಕಾಶಗಳನ್ನು ಶಿಕ್ಷಣ, ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿ ವಾಪಸ್ ಪಡೆಯಬಹುದೆಂಬ ಆಸೆಗಣ್ಣಿನಿಂದ ಮಾದಿಗ ಜಾತಿ ಸಮುದಾಯವು ಸದಾಶಿವ ವರದಿ ಜಾರಿಗೆ ಹಟ ಹಿಡಿದು ಕುಳಿತಿದೆ. ಇದಕ್ಕೆ ಪೂರಕವಾಗಿ ಧರಣಿ, ಜನಶಕ್ತಿ ಸಮಾವೇಶ, ವಿಚಾರ ಸಂಕಿರಣಗಳನ್ನು ಸಂಘಟಿಸುತ್ತಿದೆ ಮಾತ್ರವಲ್ಲದೆ ಹಿಂದೆ ಬೆಳಗಾವಿ ಅಧಿವೇಶನದ ಸಮಯದಲ್ಲಿ ವಿಧಾನಸೌಧ ಚಲೋ' ನಡೆಸಿ ಪೊಲೀಸ್ ದೌರ್ಜನ್ಯಕ್ಕೆ ಒಳಗಾಗಿದ್ದ ಘಟನೆಗೆ, ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಕ್ಷಿಯಾಗಿದ್ದಾರೆ. ಮೀಸಲಾತಿಯಲ್ಲಿ ಸಮಪಾಲುಬೇಕೆಂದು ಹಟ ಹಿಡಿಯುವಂತೆ ಕಣ್ಣುತೆರೆಸಿದ ಮತ್ತಷ್ಟು ಸಂಗತಿಗಳನ್ನು ಗಮನಿಸಬೇಕಾಗಿದೆ.

ಈ ಮೀಸಲಾತಿ ನೀತಿಗೆ ಮೇಲ್ಜಾತಿಯ ವಿರೋಧ ಒಂದು ರೀತಿಯಾದರೆ, ಕೆಳಜಾತಿಯವರದು ಮತ್ತೊಂದು ರೀತಿಯದು. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಅಸ್ಪೃಷ್ಯರ ಒಂದು ಜಾತಿಯಾದ ಹೊಲೆಯ ಮತ್ತು ಪಟ್ಟಿಯಲ್ಲಿರುವ ಸ್ಪಶ್ಯ ಜಾತಿಗಳೆಂದು ಗುರುತಿಸಿರುವ ಇತರೆ ಜಾತಿಗಳು ಸದಾಶಿವ ಆಯೋಗದ ವರದಿ ಜಾತಿಗೆ ವಿರೋಧ ವ್ಯಕ್ತಪಡಿಸಿರುವುದು ಅಲ್ಲಲ್ಲಿ ಕೇಳಿಬರುತ್ತಿದೆ. ಈ ನಿಲುವು ಸಂವಿಧಾನ ವಿರೋಧಿಯಾದುದು. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಮಾಡುವ ಅಪಚಾರ.

ಪ್ರಮುಖವಾಗಿ ಒಳಮೀಸಲಾತಿ ವಿರೋಧಿ ನಿಲುವಿನ ಸಾರಾಂಶ ಇಲ್ಲಿದೆ: ಸದಾಶಿವ ಆಯೋಗದ ವರದಿ ಅವೈಜ್ಞಾನಿಕ, ಹೊಲೆಮಾದಿಗ ಜಾತಿಗಳ ನಡುವೆ ಒಳಜಗಳಕ್ಕೆ ಕಾರಣವಾಗುತ್ತದೆ. ಪರಿಶಿಷ್ಟರ ಪಟ್ಟಿಯಲ್ಲಿರುವ ಸ್ಪೃಶ್ಯ ಜಾತಿಗಳಿಗೆ ಅನ್ಯಾಯವಾಗಿದೆ. ಒಳಮೀಸಲಾತಿ ಒತ್ತಾಯ ದಲಿತ ಏಕತೆಗೆ ಮಾರಕ, ಖಾಸಗೀಕರಣದ ಸಂದರ್ಭದಲ್ಲಿ ಒಳಮೀಸಲಾತಿ ಮೀಸಲಾತಿ ಅಪ್ರಸ್ತುತ.

ಈ ಎಲ್ಲಾ ಕಾರಣಗಳೂ ಅವೈಜ್ಞಾನಿಕವಾದವು. ತಾತ್ವಿಕ ಆಧಾರ ಮತ್ತು ನೈತಿಕ ಹೊಣೆಗಾರಿಕೆಯಿಲ್ಲದವು. ಮೊದಲನೆಯದಾಗಿ, ಅವಿವೇಕ ಮತ್ತು ಸ್ವಹಿತಾಸಕ್ತಿಯಲ್ಲಿ ಹುಟ್ಟಿದ ಅಭಿಪ್ರಾಯಗಳಾಗಿವೆ. ಆಯೋಗ ವರದಿಯ ಪ್ರತಿ ಯಾರ ಕೈಗೂ ಸಿಕ್ಕಿಲ್ಲ.



ವಿಧಾನಸಭೆಯಲ್ಲಿ ಮಂಡಿಸುವವರೆಗೆ, ಮುಕ್ತ ಚರ್ಚೆಗೆ ಒಳಗಾಗುವವರೆಗೆ ವರದಿಯ ಯಾವ ಅಂಶವೂ ಬೆಳಕಿಗೆ ಬರುವುದಿಲ್ಲ. ಪತ್ರಿಕೆಯಲ್ಲಿ ವರದಿಯಾದ ಮುಖ್ಯಾಂಶಗಳ ಆಧಾರದ ಮೇಲೆ ಎಲ್ಲರೂ ಮಾತನಾಡುತ್ತಿದ್ದಾರೆ. ಆದ್ದರಿಂದ ವರದಿ ಅವೈಜ್ಞಾನಿಕ ಎನ್ನುವುದು ಒಳಮೀಸಲಾತಿ ವಿರೋಧಿಗಳ ಸ್ವ-ಕಲ್ಪನೆ.

**ಒಳಜಗಳಕ್ಕೆ ಮದ್ದೆಲ್ಲಿದೆ?**

ಹೊಲೆಮಾದಿಗ ಜಾತಿಗಳ ನಡುವಿನ ಜಗಳ ಸದಾಶಿವ ಆಯೋಗ ರಚನೆಯಾಗುವುದಕ್ಕಿಂತ ಮೊದಲಿನಿಂದಲೂ ಇದೆ. ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಟ್ಟುವ ಕಾಲದಲ್ಲೂ ಇತ್ತು. 'ದಲಿತ ಚಳುವಳಿ' ಎಂಬ ಮಹಾ ಆದರ್ಶ ಈ ವಾಸ್ತವವನ್ನು ಮರೆಮಾಚಿತ್ತು ಅಥವಾ ಚರ್ಚಿಸಿ ಸ್ವ-ವಿಮರ್ಶೆಯ ಮೂಲಕ ಇಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಲ್ಲಿ ಸಂಘಟನೆ ವಿಫಲವಾಗಿತ್ತು. ಅಸ್ಪೃಶ್ಯತೆಯ ಸಂಕಟದ ಅನುಭವದಲ್ಲಿ ಹೊಲೆಮಾದಿಗ ಜಾತಿಗಳು ಸಮಾನ ದುಃಖಿಗಳು. ಆದರೂ, ಭಿನ್ನ ಸಾಂಸ್ಕೃತಿಕ ನೆಲೆಯವರು. ಬೂದಿಮುಚ್ಚಿದ

ಕೆಂಡದಂತಿದ್ದ ಇವರ ಒಳಜಗಳ ಜ್ವಾಲೆಯಾಗಿದೆ. ಸಾಂಕ್ರಾಮಿಕ ರೋಗದಂತೆ ಹರಡುತ್ತಿದೆ. ಈ ರೋಗಕ್ಕೆ ತಕ್ಕಮದ್ದು ಕಂಡುಹಿಡಿದು ರೋಗ ನಿರೋಧಿಸುವುದು ಹೊಲೆ ಮಾದಿಗ ಸಂಘಟನೆಗಳಿಗಿರುವ ಪ್ರಸ್ತುತ ಕಠಿಣವಾದ ಸವಾಲು. ಸದ್ಯಕ್ಕೆ ಕೈಯಲ್ಲಿರುವ ಮದ್ದು ಎರಡು ರೀತಿಯದು. ಒಂದು, ಸದಾಶಿವ ಆಯೋಗದ ವರದಿ ಅನುಷ್ಠಾನ. ಎರಡನೆಯದು, ಜಾತಿವಾರು ಜನಗಣತಿಯನ್ನು ಕೂಡಲೇ ಬಹಿರಂಗಪಡಿಸುವಂತೆ ಸರ್ಕಾರವನ್ನು ಕೇಳುವುದು.

ಎಲ್ಲಾ ಜಾತಿಗಳು ತಮ್ಮೊಳಗಿನ ಕಚ್ಚಾಟ ಮರೆತು ಒಮ್ಮತದಿಂದ ವರದಿ ಜಾರಿಗೆ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಒಳಮೀಸಲಾತಿ ತಾತ್ವಿಕ ಅಡಿಪಾಯ ರೂಪಿಸಬೇಕು. ಜಾತಿ ಹೆಸರಿನಲ್ಲಿ ಅವಮಾನಿತರಾದ ಎಲ್ಲಾ ಜಾತಿಗಳಿಗೂ ಸಮಾನತೆ, ಸೋದರತ್ವದ ಬದುಕು, ಸ್ವಾಭಿಮಾನ ತಂದುಕೊಡುವುದು ಮೀಸಲಾತಿ ಅಥವಾ ಒಳಮೀಸಲಾತಿಯ ಆಶಯ. ಕೆಳಜಾತಿಗಳನ್ನು ಸಾಮಾಜಿಕವಾಗಿ ಬೆಸೆಯಲು ಇರುವ ಅಹಿಂಸಾತ್ಮಕ ಸಮನ್ವಯ ಅಸ್ತ್ರ ಒಳಮೀಸಲಾತಿ. ಈ ಒಳಮೀಸಲಾತಿಯೇ ಕೆಳಜಾತಿಗಳನ್ನು ಒಡೆದಾಳುತ್ತದೆ. ಒಳಜಗಳಕ್ಕೆ ಕಾರಣವಾಗಿದೆ ಮುಂತಾಗಿ ವಾದ ಮಂಡಿಸುವುದು ಜಾತಿಗಳನ್ನು ಬೆಸೆಯುವ ಬದಲು, ಬೇರ್ಪಡಿಸುವ ರಾಜಕೀಯ ಪಿತೂರಿಯಾಗುತ್ತದೆ.

ಶೇ ೧೫ ಪ್ರಮಾಣ ಮೀಸಲಾತಿಯನ್ನು ಜಾತಿವಾರು ಜನಸಂಖ್ಯೆಗೆ ಅನುಗುಣವಾಗಿ ಹಂಚುವುದರಿಂದ ಜಾತಿ ಜಾತಿಗಳ ನಡುವೆ ಒಂದು ಹಂತದ ಸಮಾನತೆ ಸಾಧಿಸಿದಂತಾಗುತ್ತದೆ. ಜಾತಿಗಳ ನಡುವಿನ ಸಮಾನತೆ ಸಾಧನೆಯು ಜಾತಿ ವಿನಾಶದ ಮೊದಲ ಹೆಜ್ಜೆ. ಆಯೋಗದ ವರದಿ ಜಾತಿಯಿಂದಾಗಬಹುದಾದ ಪರಿಣಾಮವೆಂದರೆ ಪರಿಶಿಷ್ಟ ಜಾತಿಗಳ ಎದೆಯಲ್ಲಿ ಕನಿಷ್ಠ ಸ್ವಾಭಿಮಾನದ ಹಣತೆ ಹಚ್ಚಬಹುದು. ಇದು ಸಮಾನತೆಯ ಆಶಯದ ದಿಕ್ಕಿನತ್ತ ಚಲನೆ ಜಡವಾಗಿ ಬಿದ್ದಿರುವ ಕೆಳಜಾತಿಗಳಿಗೆ ಚಲಿಸುವ ಶಕ್ತಿ ತುಂಬಿದರೆ ಜಾತಿಗೋಡೆಗಳು ತಾನಾಗಿ ಉದುರಿ ಬೀಳುತ್ತವೆ. ಇದೊಂದು

ತಾತ್ವಿಕ ಹೋರಾಟ. ಅಂತಿಮವಾಗಿ ರಾಜಕೀಯ ಹೋರಾಟ. ಈ ಹೋರಾಟಕ್ಕೆ ಇಡೀ ಒಳಮೀಸಲಾತಿ ದಾರಿಯಾಗಬೇಕು. ಜಾತಿವಿನಾಶ ಗುರಿಯಾಗಬೇಕು.

**ಒಡೆದಾಳುವ ಚಿಂತನೆ ಭಗ್ನಗೊಳಿಸಿ:**

ಪರಿಶಿಷ್ಟ ಜಾತಿಯಲ್ಲಿರುವ ಬೋವಿ, ಲಂಬಾಣಿ, ಕೊರಮ, ಕೊರಚ ಜಾತಿಗಳಿಗೆ ಸದಾಶಿವ ಆಯೋಗದ ವರದಿಯಲ್ಲಿ ಅನ್ಯಾಯವಾಗಿದೆ ಎಂಬ ಕೂಗು ಎದ್ದಿದೆ. ಇವು ಸ್ಪಶ್ಯ ಜಾತಿಗಳಾಗಿದ್ದು, ಪರಿಶಿಷ್ಟ ಜಾತಿ ಪಟ್ಟಿಯಿಂದ ಕೈಬಿಡಬೇಕೆಂದು ಕರ್ನಾಟಕ ಹೈಕೋರ್ಟ್ ವಿಭಾಗೀಯ ಪೀಠ ಸರ್ಕಾರಕ್ಕೆ ಸೂಚನೆ ನೀಡಿದೆ. ಅಗಸ ಮುಂತಾದ ಜಾತಿಗಳು ಪರಿಶಿಷ್ಟ ಪಟ್ಟಿಗೆ ಸೇರ್ಪಡೆಯಾಗಬೇಕೆಂದು ಸರ್ಕಾರಕ್ಕೆ ಮನವಿ ಮಾಡಲು ಸರತಿಯಲ್ಲಿ ನಿಂತಿವೆ. ಆದ್ದರಿಂದ ಸದಾಶಿವ ಆಯೋಗದ ವರದಿ ಜಾರಿಯನ್ನು ವಿರೋಧಿಸುತ್ತಿರುವವರು 'ಸ್ಪಶ್ಯ' ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಿಂದ ಕೈಬಿಡಬಾರದೆಂದು ಒತ್ತಾಯಿಸಬೇಕು. ಇವರನ್ನು ಪರಿಶಿಷ್ಟ ಪಟ್ಟಿಯಿಂದ ಕೈಬಿಟ್ಟರೆ ಮೀಸಲಾತಿ ಸೌಲಭ್ಯದಿಂದ ದೂರ ಉಳಿಯುತ್ತಾರೆ. ಹಾಗೆ ನೊಡಿದರೆ ತಲೆ ಮೇಲೆ ಮಲ ಹೊತ್ತ ಅಸ್ಪೃಶ್ಯರು, ಮುಟ್ಟಾದ ಬಟ್ಟೆ ಒಗೆಯುವ ಅಗಸರಿಗಿಂತ ಹೀನಾಯ ಜಾತಿ ಸಂಕಟ ಅವಮಾನ ಭೋವಿ, ಲಂಬಾಣಿಗಳಿಗಿಲ್ಲ.

ವಿಶೇಷವಾಗಿ ಲಂಬಾಣಿ ಸಮುದಾಯ ಪರಿಹಾರ ಕಂಡುಕೊಳ್ಳಬೇಕಾದ ಸಮಸ್ಯೆಗಳು ಭಿನ್ನ ರೀತಿಯಾದವು. ಉದಾಹರಣೆಗೆ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾರ್ಪಡಿಸುವುದು, ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿರುವ ಲಂಬಾಣಿ ತಾಂಡಾಗಳಿಂದ ಮಕ್ಕಳು, ಸ್ತ್ರೀಯರ ಮಾರಾಟ ನಡೆಯುವುದನ್ನು ತಡೆಯುವಂತಹ ಕಾರ್ಯಕ್ರಮಗಳು, ವಸತಿ ಶಾಲೆಗಳನ್ನು ಪ್ರಾರಂಭಿಸುವುದು. ಸಾಂಸ್ಕೃತಿಕ ರಾಜಕಾರಣದ ಮುಖ್ಯವಾಹಿನಿಗೆ ಲಂಬಾಣಿ, ಬೋವಿ, ಕೊರಮ, ಕೊರಚ ಜಾತಿಗಳನ್ನು ತರುವ ಕೆಲಸ ಮಾಡಬೇಕಲ್ಲದೆ, ವರದಿ ಜಾತಿ ವಿರೋಧ ಅನಗತ್ಯ, ರಾಜಕೀಯ ಪ್ರೇರಿತ. ಬಹು ಸಂಖ್ಯೆಯಲ್ಲಿರುವ ಹೊಲೆಮಾದಿಗರೂ ಈ ಒತ್ತಾಯದ ಬೆಂಬಲಕ್ಕೆ ನಿಲ್ಲಬೇಕು. ಎಲ್ಲಾ ೧೦೧ ಜಾತಿಗಳಿಗೂ ಸಮಪಾಲು ಸಿಗಬೇಕಾದದ್ದು ಸಂವಿಧಾನಾತ್ಮಕವೂ, ಪ್ರಜಾಪ್ರಭುತ್ವ ವ್ಯವಸ್ಥೆ ಭದ್ರಗೊಳಿಸುವ ಕಾರ್ಯಕ್ರಮವೂ ಆಗುತ್ತದೆ. ಮಾತ್ರವಲ್ಲದೆ ಮತೀಯ ಶಿಕ್ತಿಗಳು ಕೆಳಜಾತಿಗಳನ್ನು ಒಡೆದಾಳುವ ಚಿಂತನೆ, ಕಾರ್ಯಕ್ರಮಗಳನ್ನು ಭಗ್ನಗೊಳಿಸಿ ದಂತಾಗುತ್ತದೆ.

**[ಪ್ರಜಾವಾಣಿ - ೨೦೧೮]**

**ಊರುಕೇರಿ**

**- ಡಾ. ಸಿದ್ಧಲಿಂಗಯ್ಯ**

**ಐನೋರ ಹೊಲ:**

ಕೇರಿಯಲ್ಲಿ ಕೊನೆಯ ಮನೆ ನಮ್ಮದು. ನಮ್ಮ ಮನೆಗೂ ಕೊನೆಯಲ್ಲಿ ಇನ್ನೊಂದು ಮನೆ ಇತ್ತೇನೋ? ಅದರ ಛಾವಣಿ ಕುಸಿದು ಕೇವಲ ಮೂರು ನಾಲ್ಕು ಅಡಿ ಎತ್ತರದ ಮಣ್ಣಿನ ಗೋಡೆ ಮಾತ್ರ ಇದ್ದವು. ನಾನಲ್ಲದೆ ಬೇರೆ ಮನೆಗಳ ಹುಡುಗರು ಆ ಮೋಟುಗೋಡೆಗಳ ಮೇಲೆ ನಿಂತು ಕೆಲಸಕ್ಕೆ ಹೋಗಿರುವ ಅಪ್ಪ ಅವ್ವರನ್ನು ದೂರಕ್ಕೆ ಕಣ್ಣುಹಾಯಿಸಿ ಹುಡುಕುತ್ತಿದ್ದೆವು. ಕೆಲವು ಸಲ ಮನೆಗೆ ಬೇಗ ಬರಬೇಕೆಂದು ಹೆತ್ತವರಿಗೆ ಕೂಗಿ ಹೇಳುತ್ತಿದ್ದೆವು. ಆ ಕೂಗು ಅವರಿಗೆ ಕೇಳಿಸುತ್ತಿತ್ತೋ ಇಲ್ಲವೊ, ನಾವು ಅವರಿಗೆ ಕಾಣಿಸುತ್ತಿದ್ದೆವೂ ಇಲ್ಲವೊ? ಅದೊಂದೂ ನಮಗೆ ಗೊತ್ತಿರಲಿಲ್ಲ. ಈ ಮೋಟುಗೋಡೆಗಳಿಗೆ ಐನೂರು ಆರುನೂರು ಅಡಿ ಅಂತರದಿಂದ ಐನೋರ ಜಮೀನು ಪ್ರಾರಂಭವಾಗುತ್ತಿತ್ತು. ಆ ಜಮೀನಿನಲ್ಲಿ ಐನೋರ ಚಂದವಾದ ಮನೆ, ದೊಡ್ಡದಾದ ಬಾವಿ, ಪಂಪ್‌ಸೆಟ್ ಮನೆ ಇದ್ದವು. ಈ ಬಾವಿಯಿಂದ ಅವರ ಹೊಲಗದ್ದೆಗಳಿಗೆ ನೀರು ಹರಿಯುತ್ತಿತ್ತು. ನಮ್ಮ ಕೇರಿಯ ಜನಕ್ಕೆ ಕುಡಿಯಲು ನೀರು ಸಿಕ್ಕರೆ ಅದೇ ದೊಡ್ಡ ಸಂಗತಿ. ನಮ್ಮ ಜನ ಸ್ವಲ್ಪ ದೂರದಲ್ಲಿದ್ದ ಹೂವಿನ ತೋಟದ ಪಕ್ಕದ ಬಾವಿಯಿಂದ ನೀರು ತರುತ್ತಿದ್ದರು. ದಲಿತರನ್ನು ಬಿಟ್ಟರೆ ಉಳಿದವರು ಆ ಬಾವಿಯಿಂದ ನೀರು ತರುವುದನ್ನು ನಾನು ನೋಡಲಿಲ್ಲ.

ಎಂದಿನಂತೆ ಹುಡುಗರೆಲ್ಲ ನಮ್ಮ ಮನೆಯ ಪಕ್ಕದ ಮೋಟುಗೋಡೆಯ ಮೇಲೆ ನಿಂತು ಅಪ್ಪ ಅವ್ವಂದಿರನ್ನು ಕೂಗುತ್ತಿದ್ದಾಗ ನಮಗೆ ಒಂದು ನೋಟ ಕಾಣಿಸಿತು. ಐನೋರ ಹೊಲದಲ್ಲಿ ಇಬ್ಬರು ಮನುಷ್ಯರ ಹೆಗಲ ಮೇಲೆ ನೊಗ ಹೂಡಿ ಇನ್ನಿಬ್ಬರು ಹೊಲ ಉಳುತ್ತಿದ್ದರು. ನೊಗಹೊತ್ತ ಆ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ ಇನ್ನೊಬ್ಬ ಹಿಂದಿನಿಂದ ಚಾಟಿ ತಿರುಗಿಸುತ್ತಾ ಉಳುಮೆ ಮಾಡುತ್ತಿದ್ದ ದೃಶ್ಯ ಮೋಜಿನಂತೆ ಕಂಡರೂ ನೊಗ ಹೊತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಪ್ಪ ಎಂದು ಗೊತ್ತಾದ ಕ್ಷಣದಿಂದ ನನ್ನಲ್ಲಿ ವಿಚಿತ್ರವಾದ ಸಂಕಟ ಶುರುವಾಯಿತು. ಹುಡುಗರಿದ್ದ ಜಾಗಕ್ಕೆ ಬಂದ ಕೆಲವು ಹೆಂಗಸರು 'ಪಾಪ ದ್ಯಾವಣ್ಣನಿಗೆ ಎಂಥ ಕಷ್ಟ ಬಂತು' ಎಂದದ್ದು ನನ್ನ ಕಿವಿಗೆ ಬಿದ್ದು ಮನಸ್ಸಿನ ನೋವು ಇಮ್ಮಡಿಯಾಯಿತು. ಗದ್ದೆಯಲ್ಲಿ ಎತ್ತಾಗಿ ದುಡಿದ ನಮ್ಮಪ್ಪ ಸಂಜೆ ಮನೆಗೆ ಬಂದಾಗ ಅವ್ವ ಅವನ ಭುಜಕ್ಕೆ ಎಣ್ಣೆ ಕಾಯಿಸಿ ಹಚ್ಚುತ್ತಿದ್ದಳು.

ಅಪ್ಪನಿಗೆ ಮೂರು ಕಡೆ ಚೂರು ಚೂರು ಭೂಮಿಯಿತ್ತು. ಮನೆಗೆ ಹತ್ತಿರದಲ್ಲಿದ್ದ ಹೊಲ ಪಾಲಿಗೆ ಮಾಡುತ್ತಿದ್ದ ಹೊಲ. ಅದರ ಒಡೆಯರು ಮಾಗಡಿ ಪೇಟೆಯಲ್ಲಿದ್ದ ಬ್ರಾಹ್ಮಣರು. ಅವರನ್ನೂ ನಾವು ಐನೋರು ಎನ್ನುತ್ತಿದ್ದೆವು. ಈ ಹೊಲವನ್ನು ಮಾವಿನ ಮರದ ಹೊಲ ಎನ್ನುತ್ತಿದ್ದರು. ಆ ಹೊಲದಲ್ಲಿ ಬಹುಕಾಲದ ಒಂದು ಮಾವಿನ ಮರವಿತ್ತು. ಈ ಹೊಲಕ್ಕೆ ಹೋಗಬೇಕಾದರೆ ಮನೆಯ ಹಿಂಭಾಗದಲ್ಲಿದ್ದ ದೊಡ್ಡ ಹುಣಸೇ ಮರವನ್ನು ದಾಟಿ ಹೋಗಬೇಕಾಗಿತ್ತು. ಹುಣಸೇಮರದ ಕೆಳಗೆ ವಿಶಾಲವಾದ ಅರೆಕಲ್ಲು ಬಂಡೆಯಿತ್ತು. ಹೊಲಕ್ಕೆ ಹೋಗುವಾಗ, ಬರುವಾಗ ಹುಣಸೇಮರದ ಬಳಿ ಬಂದಕೂಡಲೇ ನಮಗೆ ಭಯವಾಗುತ್ತಿತ್ತು. ಹುಣಸೇಮರದಲ್ಲಿ ದೆವ್ವ ಇದೆಯೆಂದೂ, ಅದು ದಾರಿಹೋಕರನ್ನು ಚಪ್ಪಾಳೆ ತಟ್ಟಿ ಕರೆಯುತ್ತದೆಂದೂ ಜನ ಹೇಳುತ್ತಿದ್ದರು. ಹುಣಸೇಮರದ ಕಡೆಯಿಂದ ಟಪ್‌ಟಸ್ ಎಂಬ ಸದ್ದು ಆಗಾಗ ಕೇಳಿ ಬರುತ್ತಿದ್ದುದರಿಂದ ಜನ ಈ ದೆವ್ವದ ಬಗ್ಗೆ ಗಾಬರಿಗೊಂಡಿದ್ದರು. ಒಂದು ಸಲ ಸಂಜೆ ನಾನೊಬ್ಬನೇ ಈ ಮರದ ಕಡೆಯಿಂದ ಮನೆಗೆ ಹೋಗುತ್ತಿದ್ದಾಗ ಚಪ್ಪಾಳೆಯ ಸದ್ದು ಕೇಳಿ ದಂಗುಬಡಿದಂತಾಗಿ ಬಿದ್ದಂಬೀಳ ಓಟ ಹೊಡೆದು ಮನೆ ತಲುಪಿ, ಸುಧಾರಿಸಿಕೊಂಡೆ.

### ಬ್ರಾಹ್ಮಣರ ಮನೆ ರುಚಿ ರುಚಿ ತಂಗಳು

ಮಾವಿನ ಮರದ ಹೊಲದ ಒಡೆಯರು ಬಹು ಉದಾರಿಗಳು. ಪೇಟೆಯಲ್ಲಿದ್ದ ಅವರ ಮನೆಗೆ ಹೋಗಿ ಅಪ್ಪ, ಅವ್ವ, ನಾನು ಅವರ ಬಾಗಿಲ ಮುಂದೆ ನಿಂತಾಗ ಅವರು ಮನೆಯಲ್ಲಿ ಉಳಿದಿದ್ದ ಚಿತ್ರಾನ್ನ, ಪೂರಿ ಇತ್ಯಾದಿಗಳನ್ನು ಕೊಡುತ್ತಿದ್ದರು. ಈ ತಿಂಡಿಗಳನ್ನು ನಾನು ಎಂದೂ ತಿಂದಿರಲಿಲ್ಲ. ಅವುಗಳ ರುಚಿಯೋ ರುಚಿ. ನಮ್ಮಲ್ಲಿ ವಿಚಿತ್ರವಾದ ಕೃತಜ್ಞತಾಭಾವ ಮೂಡುತ್ತಿತ್ತು. ಇದಲ್ಲದೆ ಐನೋರು ಹಳೆಯದಾದ, ಸ್ವಲ್ಪ ಹರಿದುಹೋದ ತಮ್ಮ ಮಗನ ಷರಾಯಿ, ಅಂಗಿಯನ್ನು ನನಗೆ ಕೊಡುತ್ತಿದ್ದರು. ಅವರ ಮಗ ನನಗಿಂತ ದೊಡ್ಡವನಾದುದರಿಂದ ಅವು ನನಗೆ ದೊಗಳೆ ಆಗುತ್ತಿದ್ದವು. ಆದರೂ ಅವುಗಳನ್ನು ಮಡಿಚಿಕೊಂಡು ನಾನು ಧರಿಸುತ್ತಿದ್ದೆ. ಈ ಬಟ್ಟೆಗಳನ್ನು ಧರಿಸುತ್ತಿದ್ದರಿಂದ ನಾನು ನನ್ನ ಓರಗೆಯ ಇತರ ಹುಡುಗರಿಗಿಂತ ವಿಚಿತ್ರವಾಗಿ ಕಾಣುತ್ತಿದ್ದೆ.

ಪೂರಿ, ಚಿತ್ರಾನ್ನದ ಸಂಬಂಧದಲ್ಲಿ ಇನ್ನೊಂದು ಪ್ರಸಂಗ ನನ್ನ ಮನಸ್ಸಿನಲ್ಲಿದೆ. ನನ್ನ ತಂದೆ ಅತಿ ಚಿಕ್ಕದಾದ ಒಂದು ಜಾಗದಲ್ಲಿ, ಹೂವು, ತರಕಾರಿ ಬೆಳೆಯುತ್ತಿದ್ದನು. ಇದನ್ನು ಸಂಜೀವಯ್ಯನ ತೋಟ ಎನ್ನುತ್ತಿದ್ದರು. ಈ ತೋಟ ಕೆರೆಯ ಏರಿಯ ಮೇಲಿತ್ತು. ಇಲ್ಲಿ ಬೆಳೆದ ಹೂವುಗಳನ್ನು ಮಾಗಡಿ ಸಂತೆಯಲ್ಲಿ ಮಾರಿ ನಾನು ಎರಡಾಣೆ ಸಂಪಾದಿಸಿದ್ದೆ. ಆದಿನ ನಾನು ತೋಟದಿಂದ ಬಂದು ಕೆರೆಯ ಏರಿಯ ಮೇಲೆ ನಿಂತಿದ್ದೆ. ಕೆರೆಯ ಅಕ್ಕಪಕ್ಕ ಕೆಲವು ಜನ ಕೆಲಸ ಮಾಡುತ್ತಿದ್ದರು. ಯಾರೋ ಒಂದು ಕೂಗು ಹಾಕಿದ್ದೇ ತಡ ಹೆಂಗಸರು, ಗಂಡಸರು, ಮಕ್ಕಳು ಪಂಪ್‌ಸೆಟ್ ಇದ್ದ ಬ್ರಾಹ್ಮಣರ ಮನೆಯ ಕಡೆ ಶರವೇಗದಲ್ಲಿ ಓಡತೊಡಗಿದರು. ನನಗೆ ಗಾಬರಿಯಾದರೂ ಓಡಲಾರದೆ ಕೊಂಚ ತಡವಾಗಿಯೇ ಬ್ರಾಹ್ಮಣರ ಮನೆ ತಲುಪಿದೆ. ಅವರ ಮನೆಯ ಮುಂದೆ ಕೊಂಚ ದೂರದಲ್ಲಿ ದಲಿತರು ಸಾಲುಗಟ್ಟಿ ಕುಳಿತಿದ್ದರು. ಐನೋರ ಮನೆಯವರು

ಅವರ ಮನೆಯಲ್ಲಿ ಉಳಿದಿದ್ದ ಪೂರಿ, ಚಿತ್ರಾನ್ನವನ್ನು ಇವರಿಗೆ ಹಂಚುತ್ತಿದ್ದರು. ನಾನು ಕೊನೆಯಲ್ಲಿ ಹೋದದ್ದರಿಂದ ನಿರಾಶೆ ಮೂಡಿತು. ಆದರೆ ಎಲ್ಲರಿಗಿಂತ ಮೊದಲೇ ನನ್ನ ತಂದೆ ತಾಯಿ ತಿಂಡಿಯನ್ನು ಪಡೆದು ಬರುತ್ತಿದ್ದುದನ್ನು ನೋಡಿ ಅಪಾರ ಸಂತೋಷವಾಯಿತು.

**ನೊರೆನೊರ ಹಲ್ಲು ಕಡಿಯುವ ಜಲಗೆರೆ ಅಮ್ಮ**

ಕೇರಿಯಲ್ಲಿ ನಮ್ಮದೇ ಆದ ಒಂದು ಮಾರಿಗುಡಿ ಇತ್ತು. ದೇವತೆಯ ಪೂಜಾರಿಣಿ ಒಬ್ಬ ಮುದುಕಿ. ಆಕೆ ನನಗೆ ದೂರದಿಂದ ಅಜ್ಜಿಯಾಗಬೇಕಾಗಿತ್ತು. ಮಾರಿಯ ಹಬ್ಬವನ್ನು ಬಹಳ ಆಸ್ಥೆಯಿಂದ ಮಾಡುತ್ತಿದ್ದರು. ಮಾರಮ್ಮ ಅಜ್ಜಿಯ ಮೈದುಂಬಿ ಬರುತ್ತಿದ್ದಳು. ಆಗ ನಮಗೆಲ್ಲ ಬಹಳ ಭಯ, ಗಾಬರಿ. ಪೂಜಾರಿಣಿ ನಮ್ಮ ಸಂಬಂಧಿಕಳಾಗಿದ್ದರಿಂದ ನನಗೆ ನನ್ನ ಬಗ್ಗೆಯೇ ಬಹಳ ಅಭಿಮಾನ. ಅಲ್ಲದೆ ದೇವತೆ ನಮಗೇನು ಕೆಟ್ಟದ್ದು ಮಾಡಲಾರಳು ಎಂಬ ಧೈರ್ಯ ಮೂಡುತ್ತಿತ್ತು.

ಮೇಗಳ ಹಟ್ಟಿಯಲ್ಲಿ ಇನ್ನೊಂದು ದೇವತೆ ಮೈದುಂಬಿ ಬರುತ್ತಿತ್ತು. ಆ ದೇವತೆಯ ಹೆಸರು ಜಲಗೆರೆ ಅಮ್ಮ. ವಾರಕ್ಕೊಮ್ಮೆ ಮೈದುಂಬುವ ಆ ದೇವತೆಗೆ ಭಕ್ತರು ಬಹಳ. ನನ್ನ ತಾಯಿಯೂ ದೇವತೆಯ ಭಕ್ತಿಯರಲ್ಲಿ ಒಬ್ಬಳು. ಮೈದುಂಬುವ ಸಮಯಕ್ಕೆ ಮೊದಲೇ ನಾವೆಲ್ಲ ಹೋಗಿ ಕೂರುತ್ತಿದ್ದೆವು. ಆಕೆಯ ಹಾವಭಾವ ಭಯ ಹುಟ್ಟಿಸುತ್ತಿತ್ತು. ಆಕೆ ಒಮ್ಮೆ ನೊರನೊರ ಹಲ್ಲು ಕಡಿದರೆ ಜನ ಗಡಗಡ ನಡುಗಿ ಬೆವೆತು ಹೋಗುತ್ತಿದ್ದರು. ಅವ್ವ ದೇವತೆ ಮೈದುಂಬುವ ಹೆಂಗಸನ್ನು ಅಕ್ಕ ಎಂದು ಕರೆಯುತ್ತಿದ್ದರು. ನಾನು ದೊಡ್ಡಮ್ಮ ಎಂದು ಕರೆಯುತ್ತಿದ್ದೆ. ಆಕೆಯೂ ನಮ್ಮನ್ನು ಅಕ್ಕರೆಯಿಂದ ಕಾಣುತ್ತಿದ್ದಳು. ಆದ್ದರಿಂದ ದೇವರು ಮೈದುಂಬಿದ ಸಂದರ್ಭದಲ್ಲಿ ನನಗೆ ಅಷ್ಟೊಂದು ಭಯವಾಗುತ್ತಿರಲಿಲ್ಲ. ದೇವತೆ ಮೈದುಂಬುತ್ತಿದ್ದ ಹೆಂಗಸು ಬಹಳ ಒಳ್ಳೆಯವಳು. ನೋಡಲು ಮೈಕೈ ತುಂಬಿಕೊಂಡು ಸುಂದರವಾಗಿದ್ದಳು. ಈಕೆಯ ಗಂಡ ಇವಳನ್ನು ತೊರೆದು ಇನ್ನೊಬ್ಬ ಹೆಣ್ಣಿನೊಂದಿಗೆ ಹೊರಟು ಹೋದ ಮೇಲೆ ದೇವತೆ ಮೈದುಂಬುವುದು ಪ್ರಾರಂಭವಾಗಿತ್ತು.

ಕೇರಿಯ ಜನ ನಾನಾ ರೀತಿಯ ಕನಸುಗಳನ್ನು ಕಾಣುತ್ತಿದ್ದರು. ಸತ್ತು ಹೋಗಿರುವ ಅಜ್ಜ ಅಜ್ಜಿಯರು, ತಂದೆತಾಯಂದಿರು, ಸೋದರ ಸೋದರಿಯರು ಇವರ ಕನಸಿನಲ್ಲಿ ಬಂದು ಕಾಡುತ್ತಿದ್ದರು. ಸತ್ತು ಹೋಗಿರುವ ಗೆಳತಿ ಬದುಕಿರುವ ಗೆಳತಿಯ ಕನಸಿನಲ್ಲಿ ಕಾಣಿಸಿಕೊಂಡು ಮರವೊಂದರ ಮೇಲೆ ಕುಳಿತು ನನ್ನ ಜೊತೆ ಬಾ ಎಂದು ಕೈಬೀಸಿ ಕರೆಯುತ್ತಿದ್ದಳು. ಇದರ ಜೊತೆ ಜಡೆಮುನಿ ಸಂಚಾರ ಬೇರೆ. ನಡುರಾತ್ರಿಯಲ್ಲಿ ಮನೆಗೆ ಬರುವ ಗಂಡಸರು ಸರೊತ್ತಿನಲ್ಲಿ ಜಡೆಮುನಿಯನ್ನು ಕಂಡುದಾಗಿಯೂ, ಅವನ ಮುಖ ನೋಡಿದ್ದರೆ ರಕ್ತ ಕಾರಿಕೊಂಡು ಸಾಯಬೇಕಾಗಿತ್ತೆಂದೂ, ಹೇಗೊ ಪಾರಾಗಿ ಬಂದುದಾಗಿ ಹೇಳುತ್ತಿದ್ದರು. ಇದನ್ನು ಕೇಳಿದ ಹೆಂಗಸರು, ಮಕ್ಕಳು

ಭೀತರಾಗುತ್ತಿದ್ದರು. ದಾರಿಯಲ್ಲಿ ಒಬ್ಬರೇ ಹೋಗುವಾಗ ಪಿಶಾಚಿಗಳು ಚಪ್ಪಾಳೆ ತಟ್ಟುವುದು, ಕೇಕೆ ಹಾಕುವುದು ಮಾಡುತ್ತಿದ್ದವು. ಧೈರ್ಯವಾಗಿ ಮುಂದೆ ಹೋದರೆ 'ಈ ಸಲ ಬದುಕಿದೇ ಹೋಗು



ಎಂದು ಹೇಳುತ್ತಿದ್ದವು. ಜನ ಈ ಸಂಗತಿಗಳನ್ನು ಗಂಭೀರವಾಗಿ ನಂಬಿದ್ದರು. ಈ ತೊಂದರೆಗಳಿಂದ ಪಾರಾಗಲೂ ದೇವರುಗಳನ್ನು ಅವಲಂಬಿಸಿದರು.

ಈ ಸಂದರ್ಭದಲ್ಲೇ ಊರಿನಲ್ಲಿ ಕೂಗುಮಾರಿಯ ಗಲಾಟೆ ಶುರುವಾಯಿತು. ರಾತ್ರಿ ಹೊತ್ತು ಕೂಗುಮಾರಿ ಮನೆಯ ಮುಂದೆ ನಿಂತು ಮನೆಯೊಳಗಿರುವ ಒಬ್ಬರ ಹೆಸರನ್ನು ಕೂಗುತ್ತಾಳೆ. ಅವರು ಮುಗ್ಧತೆಯಿಂದ 'ಓ' ಎಂದರೆ ಸ್ಥಳದಲ್ಲೇ ರಕ್ತಕಾರಿ ಸಾಯುತ್ತಾರೆ ಎಂಬ ವಿಚಾರ ಹಬ್ಬಿತು. ರಾತ್ರಿ ನಮ್ಮ ಮನೆಯ ಹತ್ತಿರ ಕೂಗಿದ ಹಾಗಾಯಿತು. ನನಗೆ ಮೊದಲೇ ವಿಷಯ ಗೊತ್ತಿದ್ದರಿಂದ ನಾನು 'ಓ' ಎನ್ನಲಿಲ್ಲ ಎಂದು ಬಹಳ ಜನ ಹೇಳಲು ಶುರು ಮಾಡಿದರು. ಅಂಥವರು ನಮ್ಮ ಕಣ್ಣಿಗೆ ಬಹಳ ಬುದ್ಧಿವಂತರಂತೆ ಕಂಡರು. ಎಲ್ಲರೂ ಮನೆ ಬಾಗಿಲ ಮುಂದೆ 'ನಾಳೆ ಬಾ' ಎಂದು ಬರೆಸತೊಡಗಿದರು. ಆಕಾಶದಲ್ಲಿ ಬೆಳಗಿನ ಜಾವ ಧೂಮಕೇತು ಕಾಣಿಸಿಕೊಂಡಿರುವುದೇ ಇದಕ್ಕೆಲ್ಲ ಕಾರಣವೆಂದು ಕೆಲವರು ಹೇಳಿದ್ದರಿಂದ ಜನರೆಲ್ಲ ಬೆಳಗಿನ ಜಾವ ಎದ್ದು ಧೂಮಕೇತುವನ್ನು ನೋಡಿ ಇನ್ನೂ ಭಯಪಟ್ಟರು.

ಈ ಸಂದರ್ಭದಲ್ಲಿ ಊರಿಗೆ ಒಬ್ಬ ಗುರುಗಳು ಬಂದು ಇನ್ನು ಹದಿನಾಲ್ಕು ದಿನಕ್ಕೆ ಭೂಮಿಯ ಮೇಲೆ ಬೆಂಕಿಮಳೆ ಸುರಿಯುವುದೆಂದು, ಪ್ರಳಯವಾಗುವುದೆಂದು ಹೇಳಿ ಹೋದರು. ಇಂಥ ಸಮಯವನ್ನೇ ಕಾಯುತ್ತಿದ್ದ ಕೆಲವು ಕಿಲಾಡಿಗಳು ಜನವೆಲ್ಲ ಬೇಕಾದ ಅಡುಗೆಯನ್ನು ಮಾಡಿಕೊಂಡು ಊಟಮಾಡಿ 'ಆಸೆ ತೀರಿಸಿಕೊಳ್ಳಬೇಕೆಂದೂ, ಬಂಧುಬಳಗದವರನ್ನು ಕರೆಸಿ ಕೊನೆಯ ಸಲ ಮುಖ ನೋಡಿಕೊಳ್ಳಬೇಕೆಂದೂ ಸಲಹೆ ಮಾಡಿದರು. ಸಾವಿನ ಭಯದಿಂದ ಬಡವರೂ ಹಬ್ಬ ಮಾಡಿದರು. ಶ್ರೀಮಂತರಂತೂ ಅನ್ನ ಸಂತರ್ಪಣೆ ಏರ್ಪಡಿಸಿದರು. ಇದರ ಪ್ರಯೋಜನವನ್ನು ನಮ್ಮ ಕೇರಿಯ ಜನ ಚೆನ್ನಾಗಿಯೇ ಪಡೆದರು.

ಊರು ಧೂಮಕೇತುವಿನ ಗೊಂದಲದಲ್ಲಿರುವಾಗಲೇ ಮಾಗಡಿಗೆ ಮೈಸೂರು ಮಹಾರಾಜರು ದಯಮಾಡಿಸಿದರು. ಅವರು ಯಾಕೆ ಬಂದರು ಎಂಬುದು ನನಗೆ ನೆನಪಿಲ್ಲ. ಆಗಲೂ ಬಹಳ ಜನಕ್ಕೆ ಗೊತ್ತಿರಲಿಲ್ಲ. ಅವರನ್ನು ನೋಡಲು ದೊಡ್ಡ ಜಾತ್ರೆಯೇ ನೆರೆಯಿತು. ನಮ್ಮಂಥ ಪುಟ್ಟ ಹುಡುಗರೆಲ್ಲ ತಂದೆ ತಾಯಂದಿರ ಹೆಗಲೇರಿ ಮಹಾರಾಜರನ್ನು ಬಹುದೂರದಿಂದ ಮಂಕಾಗಿ ನೋಡಿದೆವು.

ತಂದೆ ತಾಯಿ ಇಬ್ಬರೂ ಕೆಲಸಕ್ಕೆ ಹೋದಾಗ ನಾನೊಬ್ಬನೇ ಮನೆ ಕಾಯುತ್ತಿದ್ದೆ. ಸಂಜೆ ಆದಕೂಡಲೇ ಕೋಳಿಗಳನ್ನು ಹುಡುಕಿ ಕವುಚುತ್ತಿದ್ದೆ. ಪುಟ್ಟದಾದ ಸೀಮೆಣ್ಣೆ ದೀಪ ಹಚ್ಚಿಡುತ್ತಿದ್ದೆ. ತಂದೆ ತಾಯಿ ಬಂದವರೇ ಅಡುಗೆಗೆ ಸಿದ್ಧತೆ ಮಾಡುತ್ತಿದ್ದರು. ಕೆಲವು ದಿನ ಗೆಣಸನ್ನು ಬೇಯಿಸಿ ತಿನ್ನುತ್ತಿದ್ದೆವು. ಕೆಲವು ದಿನ ಕಡಲೆಪುರಿ ತಿಂದು ನೀರು ಕುಡಿದು ಮಲಗುತ್ತಿದ್ದೆವು. ಚೂರು ಹೊಲದಲ್ಲಿ ಬೆಳೆದದ್ದು ತಂದೆಯ ಮೇಲಿದ್ದ ಸಾಲದ ಬಡ್ಡಿಗೆ ಸಾಕಾಗುತ್ತಿತ್ತು. ಕೂಲಿಯ ಹಣ ಕುಟುಂಬದ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಕೆಲವು ದಿನ ನನ್ನ ತಾಯಿ ಸಾವನದುರ್ಗಕ್ಕೆ ಕಾಡಿನಲ್ಲಿ ಸೌದೆ ತರಲು ಹೋಗುತ್ತಿದ್ದಳು. ಸಂತೆಯಲ್ಲಿ ಈ ಸೌದೆ ಹೊರೆಯನ್ನು ಮಾರುತ್ತಿದ್ದಳು. ಸೌದೆ



ಹೊರೆಯನ್ನು ಮನೆಯ ಮುಂದೆ ಎಸೆದವಳೇ ಒಂದಕ್ಕೆ ಹೋಗಬೇಕೆಂದು ಓಡುತ್ತಿದ್ದಳು. ನಂತರ ಹೊರೆಯೊಳಗಿದ್ದ ಕಬ್ಬಿನ ಜಲ್ಲೆಯನ್ನು ತೆಗೆದು ನಮಗೆ ಕೊಡುತ್ತಿದ್ದಳು. ಸಾವನದುರ್ಗದಿಂದ ಕೆಲವೇ ಮೈಲಿ ದೂರದಲ್ಲಿರುವ ಮಂಚನಬೆಲೆಯೇ ನನ್ನ ತಾಯಿಯ ತೌರು. ಬೆಟ್ಟ ಹತ್ತಿ ಊರನ್ನು ನೋಡಿದೆನೆಂದೂ, ನಿಮ್ಮ ಅಜ್ಜಿ ತಾತನ ನೆನಪಾಯಿತೆಂದೂ ಹೇಳಿ ಕಣ್ಣೀರು ಒರೆಸಿ ಕೊಳ್ಳುತ್ತಿದ್ದಳು. ಆಗ ಕೊಂಚ ಕಾಲ ಮಂಚನಬೆಲೆಯ ಮೋಹಕ್ಕೆ ನಾನು ಒಳಗಾಗುತ್ತಿದ್ದೆ.

**ಹಿಂದಿ ಹೇಲಿಕೆ: ದೇಶದ ವೈವಿಧ್ಯತೆಗೆ ಅಪಾಯ**

**ಶಿವಾಜಿ ಗಣೇಶನ್**

ಒಂದು ದೇಶ, ಒಂದೇ ಭಾಷೆ, ಒಂದೇ ಧರ್ಮ, ಒಂದೇ ಸಂಸ್ಕೃತಿ. ಹೀಗೆ ಹೊಸದೊಂದು ರಾಗ ದೇಶದಲ್ಲಿ ಶುರುವಾಗಿದೆ. ಭಾರತ ಬಹು ಭಾಷೆ, ಹಲವು ಧರ್ಮ, ಸಾವಿರಾರು ಜಾತಿ, ಹತ್ತಾರು ಬಗೆಯ ಸಂಸ್ಕೃತಿಯಿಂದ ಕೂಡಿದ ದೇಶ. ಬಹು ಸಂಸ್ಕೃತಿ ನಮ್ಮ ದೇಶದ ವೈಶಿಷ್ಟತೆ, ಈ ವೈವಿಧ್ಯತೆಯಲ್ಲಿಯೆ ನಾವು ಏಕತೆ ಕಾಣುತ್ತಾ ಬಂದಿದ್ದೇವೆ. ಹಾಗಾಗಿ ನಾವೆಲ್ಲ ಭಾರತೀಯರು ಎನ್ನುವ ತಿಳುವಳಿಕೆ ಮತ್ತು ಬದ್ಧತೆ ನಮ್ಮನ್ನು ಮತ್ತು ನಮ್ಮ ದೇಶವನ್ನು ಒಟ್ಟಾಗಿ ಕಾಪಾಡಿಕೊಂಡು ಬಂದಿದೆ. ಒಬ್ಬರ ಭಾಷೆ, ಮತ್ತೊಬ್ಬರ ಧರ್ಮ ಮತ್ತು ಸಂಸ್ಕೃತಿಯನ್ನು ಮತ್ತೊಬ್ಬರ ಮೇಲೆ ಹೇರಲು ಹೊರಟರೆ ದೇಶದ ಭವಿಷ್ಯ ಏನಾಗುವುದೋ ಊಹಿಸಲೂ ಅಸಾಧ್ಯ. ಅದಕ್ಕಾಗಿ ಈ ಬಹುಸಂಸ್ಕೃತಿಯ ವೈವಿಧ್ಯತೆಗೆ ಧಕ್ಕೆ ತರದಂತೆ ದೇಶವನ್ನು ನಾವು ಕಾಪಾಡಿಕೊಳ್ಳಬೇಕಾಗಿರುವುದು ತುರ್ತು ಅಗತ್ಯ. ಆಗ ದೇಶವೂ ಉಳಿದೀತು ನಾವೂ ಉಳಿದೇವು.

ಯಾವುದೇ ಒಂದು ರಾಜ್ಯದ ಮೇಲೆ ತನ್ನದಲ್ಲದ ಭಾಷೆ, ಧರ್ಮ ಮತ್ತು ಸಂಸ್ಕೃತಿಯನ್ನು ಬಲವಂತವಾಗಿ ಹೇರಲು ಹೊರಟರೆ ಪ್ರತಿಭಟನೆ, ಅಶಾಂತಿ ಕಟ್ಟಿಟ್ಟ ಬುತ್ತಿ ಎನ್ನುವುದಕ್ಕೆ ಇತ್ತೀಚೆಗೆ ಬೆಂಗಳೂರಿನ 'ನಮ್ಮ ಮೆಟ್ರೊ' ನಿಲ್ದಾಣಗಳ ಫಲಕಗಳಲ್ಲಿ ಹಿಂದಿಯನ್ನು ಬಳಸಿದವರ ವಿರುದ್ಧ ಎದ್ದ ಕನ್ನಡ ಸಂಘಟನೆಗಳ ಪ್ರತಿಭಟನೆ. ಇದಲ್ಲದೆ ಡಾ. ಕಸ್ತೂರಿ ರಂಗನ್ ನೇತೃತ್ವದ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡುವಿನಲ್ಲಿ ಮಾತೃಭಾಷೆಯಲ್ಲದೆ ಹಿಂದಿ ಭಾಷೆ ಕಲಿಕೆಯನ್ನು ಕಡ್ಡಾಯ ಮಾಡಿದ್ದು, ಆದರೆ ದಕ್ಷಿಣ ರಾಜ್ಯಗಳಾದ ಮುಖ್ಯವಾಗಿ ತಮಿಳುನಾಡಿನ ದ್ರಾವಿಡ ಮುನ್ನೇತ್ರ ಕಳಹಂ ಪಕ್ಷ ಹಿಂದಿ ಕಡ್ಡಾಯದ ವಿರುದ್ಧ ದನಿ ಎತ್ತಿತು. ಇದೇ ದನಿಯನ್ನು ಎತ್ತಿದ್ದು ಮರಾಠಿ ಭಾಷೆಯನ್ನಾಡುವ ಮಹಾರಾಷ್ಟ್ರ, ನಂತರ ಕರ್ನಾಟಕದಲ್ಲೂ ಹಿಂದಿ ಹೇರಿಕೆಗೆ ವಿರೋಧ ವ್ಯಕ್ತವಾಯಿತು. ದಕ್ಷಿಣ ರಾಜ್ಯಗಳ ಹಿಂದಿ ವಿರೋಧಿ ಭಾವನೆಯನ್ನು ಅರ್ಥ ಮಾಡಿಕೊಂಡ ಕೇಂದ್ರ ಸರ್ಕಾರ ಕರಡು ಕೇವಲ ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಕಟಿಸಲಾಯಿತು. ಆದರೆ ಹಿಂದಿಯೇತರ ರಾಜ್ಯಗಳ ಮೇಲೆ ಹಿಂದಿ ಕಡ್ಡಾಯವಿಲ್ಲ ಎಂಬ ಸ್ಪಷ್ಟನೆಯನ್ನು ಮಾನವ ಸಂಪನ್ಮೂಲ ಸಚಿವಾಲಯದ ಪ್ರಕಟಣೆ ಹೊರಡಿಸಿತು.

**ಆ ಪ್ರಕಟಣೆ ಹೀಗಿದೆ:**

The Ministry of Human Resourse Development in a clarification on 1st June 2019 clarrified that the draft National Education Policy document submitted to the Minister for HRD by

the Chairman Dr. K. Kasturirangan and the members of the Committee yesterday.

The following clarified in this regard: 1. This is a draft submitted by the Committee is placed for views of the general public. It is not the policy announced by government. After getting feedback from general public, and after constulting state governments, National Education Policy will be finalized by the government.

2. Government under the leadership of Shri Narendra Modi is committed equal development and promotion of all Indian languages. There will be no imposition of any language in educational institutions, nor discrimination of any language.

ಈ ಸ್ಪಷ್ಟನೆ ನೀಡಿದ ನಂತರವೂ, ಕೇಂದ್ರ ಸರ್ಕಾರವು ವಿಶ್ವ ವಿದ್ಯಾಲಯಗಳ ಧನಸಹಯೋಗದ ಮೂಲಕ ಈಗ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಿ ಕಾಲೇಜುಗಳಲ್ಲಿ ಹಿಂದಿ ಕಲಿಕೆಯನ್ನು ಕಡ್ಡಾಯಗೊಳಿಸುವ ಬಗೆಗೆ ೯೦೦ ಕಾಲೇಜುಗಳಿಗೆ ಸೂಚಿಸಿರುವುದು ಮತ್ತೆ ಹಿಂದಿನ ಬಾಗಿಲಿನಿಂದ ಹಿಂದಿ ಹೇರಿಕೆಯನ್ನು ತರಲು ಹೊರಟಂತಿದೆ. ಈ ನಿಲುವು ದೇಶದ ಬಹುಭಾಷೆಯ ಸಂಸ್ಕೃತಿಯ ಮೇಲೆ ಸವಾರಿ ಮಾಡಿದಂತಲ್ಲದೆ ಬೇರೇನೂ ಅಲ್ಲ.

ಭಾಷೆ, ಧರ್ಮ ಮತ್ತು ಜಾತಿ ತುಂಬಾ ಸೂಕ್ಷ್ಮವಾದ ವಿಚಾರಗಳು. ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನ ನಮ್ಮನ್ನಾಳಿದ ಬ್ರಿಟೀಷರು ಸಹಾ ಈ ಸೂಕ್ಷ್ಮವನ್ನು ಅರ್ಥಮಾಡಿಕೊಂಡಿದ್ದರು. ಹಾಗಾಗಿ ಅವರು ಯಾವುದೇ ಭಾಷೆ ಮತ್ತು ಧರ್ಮವನ್ನು ಯಾರ ಮೇಲೂ ಹೇರಲು ಹೋಗಲಿಲ್ಲ. ಹಾಗೆಯೇ ಸ್ವಾತಂತ್ರ್ಯ ಬಂದ ಬಳಿಕ ಆಡಳಿತ ನಡೆಸಲು ನಮಗೊಂದು ಸಂವಿಧಾನ ಬೇಕೆಂದು ಸಂವಿಧಾನ ರಚನೆಗೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯೂ ದೇಶದ ಬಹು ಭಾಷೆ, ಬಹು ಧರ್ಮ ಮತ್ತು ಬಹುಸಂಸ್ಕೃತಿಯನ್ನು ಗೌರವಿಸಲು ದಿನಗಟ್ಟಲೆ ಚರ್ಚಿಸಿ ಸೂಕ್ತ ಕಾಯ್ದೆಗಳನ್ನು ರಚಿಸಿದೆ. ನಮ್ಮ ವೈವಿಧ್ಯತೆಯನ್ನು ಕಾಪಾಡಲು ಸಂವಿಧಾನ ನಮಗೆ ಹತ್ತಾರು ಮಾರ್ಗಗಳನ್ನು ಹುಡುಕಿಕೊಟ್ಟಿದೆ. ಆದರೂ ಕೆಲವು ಶಕ್ತಿಗಳು ರಾಜಮಾರ್ಗವನ್ನು ಬಿಟ್ಟು ಅಡ್ಡದಾರಿ ಹಿಡಿದು ಜನರ ದಾರಿ ತಪ್ಪಿಸುವ ಪ್ರಯತ್ನ ನಿರಂತರವಾಗಿ ನಡೆಸಿಕೊಂಡು ಬಂದಿದೆ. ಇದೇ ನಮ್ಮ ದುರಂತ,

ನಾನೀಗ ಇಲ್ಲಿ ಪ್ರಸ್ತಾಪಿಸುವುದು ಭಾಷೆಯ ಪ್ರಶ್ನೆಯೊಂದನ್ನೆ: ನಮ್ಮ ದೇಶದ ವಿವಿಧ ಭಾಗಗಳಲ್ಲಿ ಸುಮಾರು ೩೨೫ ಭಾಷೆಗಳನ್ನಾಡುವ ಜನರಿದ್ದಾರೆ. ಹಾಗೆಯೇ ಅವರು ವಾಸಿಸುವ ಪ್ರಾಂತ್ಯ ಹಲವು ವೈವಿಧ್ಯದಿಂದ ಕೂಡಿದೆ. ಅವರ ಸಂಸ್ಕೃತಿಯೂ ಬೇರೆ ಬೇರೆ ಆಗಿರುತ್ತದೆ. ಈ ೩೨೫ ಭಾಷೆಗಳ ಪೈಕಿ ಶೇ ೪೦ರಷ್ಟು ಮಂದಿ ಹಿಂದಿ ಭಾಷೆಯನ್ನಾಡುತ್ತಾರೆ. ಹಿಂದಿ ಮಾತನಾಡುವ ಜನರ ಪ್ರದೇಶ ದೇಶದ ಅರ್ಧ ಭಾಗದಷ್ಟಿದೆ.

ಉಳಿದಂತೆ ಬೇರೆ ಬೇರೆ ಪ್ರಾಂತ್ಯ ಮತ್ತು ರಾಜ್ಯಗಳಲ್ಲಿ ಬೇರೆ ಬೇರೆ ಭಾಷೆಗಳನ್ನಾಡುತ್ತಾರೆ.ಈ ಎಲ್ಲ ಭಾಷೆಗಳು ಸ್ಥಳೀಯವಾಗಿ ಅವರವರ ಮಾತೃ ಭಾಷೆಯಾಗಿರುತ್ತದೆ.

ಈ ಬಹು ಭಾಷೆ ಇರುವ ಜನರಿಗೆ ಯಾವ ಭಾಷೆಯಲ್ಲಿ ಆಡಳಿತ ನೀಡುವುದು? ಎನ್ನುವ ಪ್ರಶ್ನೆ ಸಂವಿಧಾನ ರಚನಾ ಸಭೆಯಲ್ಲಿ ವ್ಯಾಪಕ ಚರ್ಚೆ ನಡೆದಿದೆ. ಬ್ರಿಟಿಷರು ನಮ್ಮನ್ನಾಳಿದ್ದರ ಪರಿಣಾಮವಾಗಿ ಯಾರು ಒಪ್ಪಲಿ ಬಿಡಲಿ ನಮಗೆ ಇಂಗ್ಲಿಷ್ ಎನ್ನುವುದು ಒಂದು ಸಂಪರ್ಕ ಭಾಷೆಯಾಗಿ ದೇಶದ ಉದ್ದಗಲಕ್ಕೂ ಬೆಳೆಯಿತು. ಹಿಂದಿ ಕೇವಲ ಉತ್ತರ ಭಾರತದ ರಾಜ್ಯಗಳಲ್ಲಿ ಮಾತ್ರ ಭಾಷೆಯಾಗಿತ್ತು. ಉಳಿದ ಭಾಗಗಳಲ್ಲಿ ಸಂಪರ್ಕ ಭಾಷೆ ಎಂದರೆ ಇಂಗ್ಲಿಷ್ ಮಾತ್ರ ಸಂವಿಧಾನದ ೩೪೩ನೇ ವಿಧಿ ಮತ್ತು ಆಡಳಿತ ಭಾಷೆಗಳ ಕಾಯ್ದೆ ಪ್ರಕಾರ ಹಿಂದಿಯನ್ನು ಕೇಂದ್ರ ಸರ್ಕಾರ ಆಡಳಿತ ಭಾಷೆಯನ್ನಾಗಿ ಘೋಷಿಸಿತು. ಈ ನಿರ್ಧಾರಕ್ಕೆ ತಮಿಳುನಾಡು ಮತ್ತು ಇತರೆ ಹಿಂದಿಯೇತರ ರಾಜ್ಯಗಳಿಂದ ತೀವ್ರ ವಿರೋಧ ವ್ಯಕ್ತವಾಯಿತು. ಆಗ ಕೇಂದ್ರ ಸರ್ಕಾರವು ೧೫ ವರ್ಷಗಳವರೆಗೆ ಕೇಂದ್ರ ಸರ್ಕಾರ, ಸಂಸತ್ ಕಲಾಪದಲ್ಲಿ ಮತ್ತು ಹೈಕೋರ್ಟುಗಳಲ್ಲಿ ಆಡಳಿತ ಭಾಷೆಯನ್ನಾಗಿ ಇಂಗ್ಲೀಷನ್ನು ಜಾರಿಗೆ ತಂದಿತು. ಈ ಅವಧಿ ಮುಗಿದ ಬಳಿಕ ೧೯೬೫ರಲ್ಲಿ ಹಿಂದಿ ಭಾಷೆಯನ್ನೇ ಆಡಳಿತ ಭಾಷೆಯನ್ನಾಗಿ ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದಾಗ ತಮಿಳುನಾಡಿನಲ್ಲಿ ಹಿಂದಿ ವಿರೋಧಿ ಭಾಷಾ ಚಳುವಳಿ ಭುಗಿಲೆದ್ದಿತು.ಈ ವಿರೋಧವನ್ನು ತಡೆಯಲು ೧೯೬೭ರಲ್ಲಿ ಆಡಳಿತ ಭಾಷಾ ಕಾಯ್ದೆಗೆ ತಿದ್ದುಪಡಿ ತಂದು ಹಿಂದಿಯ ಜೊತೆಗೆ ಇಂಗ್ಲೀಷನ್ನೂ ಕೇಂದ್ರ ಸರ್ಕಾರದ ಆಡಳಿತ ಭಾಷೆಯನ್ನಾಗಿ ಘೋಷಿಸಿತು. ಆಡಳಿತದಲ್ಲಿ ದ್ವಿಭಾಷಾ ನೀತಿ ಜಾರಿಗೆ ಬಂದದ್ದರಿಂದ ಹಿಂದಿ ವಿರೋಧಿ ಚಳವಳಿಯ ಕಾವು ತಗ್ಗಿತು. ಹಿಂದಿಯೇತರ ರಾಜ್ಯಗಳು ತಮ್ಮ ನೆಲದ ಭಾಷೆ ಇಲ್ಲವೇ ಇಂಗ್ಲೀಷನ್ನು ಆಡಳಿತ ಭಾಷೆಗಳನ್ನಾಗಿ ಮಾಡಿಕೊಳ್ಳಲು ಈ ಕಾಯ್ದೆ ಅನುವು ಮಾಡಿಕೊಟ್ಟಿತು.

ಸಂವಿಧಾನದಲ್ಲಿ ಹಿಂದಿ ಸೇರಿದಂತೆ ೨೨ ಭಾಷೆಗಳಿಗೆ ಆಡಳಿತ ಭಾಷೆಯ ಸ್ಥಾನಮಾನ ನೀಡಲಾಗಿದೆ. ಅವುಗಳೆಂದರೆ ಅಸ್ಸಾಮಿ (ಅಸ್ಸಾಂ) ಬೆಂಗಾಲಿ (ಪಶ್ಚಿಮ ಬಂಗಾಳ), ಬೋಡೊ (ಅಸ್ಸಾಂ), ಡೋಗ್ರಿ (ಜಮ್ಮು ಮತ್ತು ಕಾಶ್ಮೀರ), ಗುಜರಾತಿ (ದಾದ್ರ, ನಗರ ಹವೇಲಿ, ದಾಮನ್, ಡಿಯೂ ಮತ್ತು ಗುಜರಾತ್), ಹಿಂದಿ (ದೆಹಲಿ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ,ಬಿಹಾರ) ಕನ್ನಡ (ಕರ್ನಾಟಕ) ಕಾಶೀರಿ (ಜಮ್ಮು ಮತ್ತು ಕಾಶ್ಮೀರ) ,ಕೊಂಕಣಿ (ಗೋವಾ), ಮೈಥಿಲಿ (ಬಿಹಾರ), ಮಲಯಾಳಂ (ಕೇರಳ ಮತ್ತು ಲಕ್ಷದೀಪ), ಮಣಿಪುರಿ (ಮಣಿಪುರ), ಮರಾಠಿ (ಮಹಾರಾಷ್ಟ್ರ ಮತ್ತು ಗೋವಾ), ನೇಪಾಳಿ (ಸಿಕ್ಕಿಂ), ಒರಿಯಾ (ಒಡಿಸ್ಸಾ), ಪಂಜಾಬಿ (ಪಂಜಾಬ್, ಚಂಡೀಗಢ, ಎರಡನೇ ಆಡಳಿತ ಭಾಷೆಯಾಗಿ ದೆಹಲಿ ಮತ್ತು ಹರಿಯಾಣ), ಸಂಸ್ಕೃತ (ಹಿಂದೂ, ಜೈನ ಮತ್ತು ಭೌದ್ಧ ಧರ್ಮಗಳ ಬೋಧನೆ), ಸಂಥಾಲಿ (ಬಿಹಾರ, ಜಾಖಂಡ, ಒಡಿಸ್ಸಾ, ಚತಿಸ್ಥಢ ಮತ್ತು ಚೋಟಾ ನಾಯ್ದುರ), ಸಿಂಧಿ (ಸಿಂಧಿ ಜನರಾಡುವ ಭಾಷೆ), ತಮಿಳು (ತಮಿಳುನಾಡು ಮತ್ತು ಪುದುಚೇರಿ), ತೆಲುಗು (ಆಂಧ್ರ ಪ್ರದೇಶ

ಇದುವರೆಗೆ ಇಂಗ್ಲಿಷಿನಲ್ಲಿ ನೀಡುತ್ತಿದ್ದ ತೀರ್ಪುಗಳನ್ನು ಕನ್ನಡ ಸೇರಿದಂತೆ ಒಂಬತ್ತು ಭಾಷೆಗಳಲ್ಲಿ ನೀಡಲು ನಿರ್ಧರಿಸಿರುವುದು ಸ್ವಾಗತಾರ್ಹ ಬೆಳವಣಿಗೆ

ಹಿಂದಿ ಭಾಷೆಯ ಬಳಕೆಗೆ ಮೊದಲಿನಿಂದಲೂ ತೀವ್ರವಾಗಿ ವಿರೋಧ ಒಡ್ಡುತ್ತಲೇ ಬಂದಿರುವ ತಮಿಳುನಾಡು, ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಭಾಗಿಯಾಗಿದ್ದಾಗ ಡಿಎಂಕೆ ಸಚಿವ ಎಂ.ಕೆ ಅಳಗಿರಿ ಹಿಂದಿ ಬದಲಿಗೆ ತಮಿಳಿನಲ್ಲೇ ಮಾತನಾಡುವುದಾಗಿ ಹಠ ಹಿಡಿದಾಗ ಸಭಾಧ್ಯಕ್ಷರು ಅದನ್ನು ಒಪ್ಪಲಿಲ್ಲ. ಸದಸ್ಯರು ದುಭಾಷಿಕರ ನೆರವನ್ನು ಮಾತ್ರ ಬಳಸಿಕೊಳ್ಳಬಹುದು. ಈ ಅವಕಾಶ ಸಚಿವರಿಗೆ ನೀಡಲಾಗದು. ಹಿಂದಿ ಬಳಕೆ ಮಾಡದಿದ್ದರೆ ಇಂಗ್ಲೀಷನ್ನು ಧಾರಾಳವಾಗಿ ಬಳಸಬಹುದೆಂದು ಸಭಾಧ್ಯಕ್ಷರು ತೀರ್ಪು ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಆದರೂ ಕೇಂದ್ರ ಸರ್ಕಾರ ಹಿಂದಿಯೇತರ ರಾಜ್ಯಗಳ ಮೇಲೆ ಹಿಂದಿ ಭಾಷೆಯ ಬಳಕೆಯನ್ನು ಹತ್ತಾರು ದಾರಿಯ ಮೂಲಕ ಹೇರುತ್ತಲೇ ಬಂದಿರುವುದು ಒಕ್ಕೂಟ ವ್ಯವಸ್ಥೆಯ ನಮ್ಮ ಜನತಂತ್ರ ನೀತಿಗೆ ವಿರೋಧ ಎನ್ನುವ ವಾದ ಹಲವರದ್ದು. ಕೇಂದ್ರ ಸರ್ಕಾರ ಹಿಂದಿ ಭಾಷೆಯ ಬಳಕೆ ಮತ್ತು ಅಭಿವೃದ್ಧಿಗೆ ಮಾಡುತ್ತಿರುವ ಭಾರೀ ಮೊತ್ತದ ಹಣವನ್ನು ನೋಡಿದಾಗ ಉಳಿದ ಭಾರತೀಯ ಭಾಷೆಗಳಿಗೆ ನೀಡುತ್ತಿಲ್ಲ. ಈ ಧೋರಣೆಗೆ ಹಿಂದಿಯೇತರ ಭಾಷೆಗಳ ರಾಜ್ಯ ಸರ್ಕಾರಗಳ ಪ್ರತಿಭಟನೆ ಹಲವು ರೀತಿಯಲ್ಲಿ ವ್ಯಕ್ತವಾಗುತ್ತಲೇ ಇದೆ.

ದೇಶದ ತನ್ನ ಎಲ್ಲ ಕಚೇರಿಗಳಲ್ಲಿ ಹಿಂದಿ ಸಪ್ತಾಹ ಮತ್ತು ಈ ಭಾಷೆಯ ಬೆಳವಣಿಗೆಗೆ ವಿಶೇಷ ಒತ್ತು ನೀಡುತ್ತಲೇ ಬಂದಿದೆ. ಜನರು ಹೆಚ್ಚು ಹೆಚ್ಚು ಭಾಷೆಗಳನ್ನು ಕಲಿತಷ್ಟು ಅವರಿಗೆ ಒಳ್ಳೆಯದು ಎನ್ನುವುದರಲ್ಲಿ ಎರಡು ಮಾತಿಲ್ಲ. ಹಿಂದಿ ಕಲಿತರೆ ದೇಶದ ಎಲ್ಲ ಭಾಗಗಳಲ್ಲಿಯೂ ಸುಲಭವಾಗಿ ವ್ಯವಹರಿಸಬಹುದೆನ್ನುವುದೂ ಸತ್ಯ. ಆದರೆ ಈ ಭಾಷೆ ಗೊತ್ತಿರದ ಜನರ ಮೇಲೆ ಹೇರಬಾರದೆನ್ನುವುದು ಅಷ್ಟೇ ಸತ್ಯ. ಹಿಂದಿಯನ್ನು ಹಿಂದಿಯೇತರ ಭಾಷೆಗಳ ಮೇಲೆ ಹೇರಿಕೆ ಮಾಡಿದರೆ ಅಲ್ಲಿನ ಸ್ಥಳೀಯ ಭಾಷೆಗಳು ಮತ್ತು ಸಂಸ್ಕೃತಿ ಕ್ರಮೇಣ ನಾಶವಾಗುತ್ತಾ ಬರುತ್ತದೆ. ಈ ಅಪಾಯದ ಬಗೆಗೆ ಕೇಂದ್ರ ಸರ್ಕಾರ ತನ್ನ ಜಾಣ ಮೌನವನ್ನು ಮುಂದುವರಿಸಿಕೊಂಡೇ ಬಂದಿದೆ. ಆದರೆ ಒಂದಂತು ಸತ್ಯ ನಮ್ಮ ದೇಶದ ಆಡಳಿತ ಭಾಷೆಗಳಾಗಿ ಹಿಂದಿ ಮತ್ತು ಇಂಗ್ಲೀಷ್ ಬಳಕೆಯಲ್ಲಿದೆ. ಆದರೆ ಹಿಂದಿ ರಾಷ್ಟ್ರಭಾಷೆ ಎನ್ನುವುದು ಎಲ್ಲಿಯೂ ನಮೂದಾಗಿಲ್ಲ. ಹಾಗಾಗಿ ದೇಶದ ಎಲ್ಲ ಭಾಷೆಗಳನ್ನು ಗೌರವಿಸುವುದನ್ನು ಜನತಂತ್ರ ವ್ಯವಸ್ಥೆಯಲ್ಲಿ ರಾಜಧರ್ಮವನ್ನಾಗಿ ಪಾಲಿಸುವುದು ಅವಶ್ಯ. ಇಲ್ಲವಾದರೆ ಬಹು ಭಾಷೆ ಮತ್ತು ಬಹುಸಂಸ್ಕೃತಿಯ ರಾಷ್ಟ್ರದ ಕಲ್ಪನೆಗೆ ಧಕ್ಕೆಯಾಗುವುದು ನಿಶ್ಚಿತ.

**[ಭೂಮಾತು - ೨೦೧೮]**

## ಸಂವಿಧಾನದ ಮೂಲ ಆಶಯಗಳು ಮತ್ತು ಓಡುತ್ತಿರುವ

## 'ಪ್ರಜಾಪ್ರಭುತ್ವ'ವೆಂಬ ಗಾಲಿಲ್ಲದ ರಥ

**ಡಾ. ಮೂಡಾಕೂಡು ಚಿನ್ನಸ್ವಾಮಿ**

ಡಾ. ಬಿ.ಆರ್. ಅಂಬೇಡ್ಕರ್ ಅವರ ೧೨೫ನೇ ಜನ್ಮವರ್ಷಾಚರಣೆಯನ್ನು ದೇಶದಾದ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಸರ್ಕಾರಗಳು ಕೋಟಿ ಹಣ ಬಿಡುಗಡೆ ಮಾಡುತ್ತಿವೆ. ದಲಿತರ ಐಕಾನ್ ಆದ ಬಾಬಾಸಾಹೇಬರನ್ನು ವಿಜೃಂಭಿಸುವುದರ ಮೂಲಕ ಅವರಿಗೆ ಸರ್ಕಾರ ತಮ್ಮ ಪರ ಇದೆ ಎಂಬ ರಾಜಕೀಯ ಪ್ರೇರಿತ ಸಂದೇಶವನ್ನು ಬಿತ್ತರಿಸುತ್ತಿವೆ. ಆದರೆ ಅಂಬೇಡ್ಕರ್‌ರು ಪ್ರತಿಪಾದಿಸಿದ ಮೂಲ ಆಶಯಗಳಾದ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಮೂಲೆಗೆ ಬಿದ್ದಿವೆ. ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಅವರು ದೇಶದ ಅಭಿವೃದ್ಧಿಗೆ ಸೂಚಿಸಿದ ಕ್ರಮಗಳು ಆಶಯಗಳಾಗಿಯೇ ಉಳಿದಿವೆ. ಅದಕ್ಕೆ ಕಾರಣಗಳನ್ನು ಹುಡುಕುವ ಪ್ರಾಮಾಣಿಕ ಪ್ರಯತ್ನಗಳು ಯಾವ ಸರ್ಕಾರದಿಂದಲೂ ನಡೆದಂತೆ ಕಾಣುತ್ತಿಲ್ಲ. ಅದಕ್ಕೆ ವಿರುದ್ಧವಾಗಿ ಸಂವಿಧಾನ ವಿರೋಧೀ ಆಶಯಗಳನ್ನೇ ಚಾಲ್ತಿಗೆ ತರುವ ಹುನ್ನಾರ ತೆರೆಯ ಹಿಂದೆ ನಡೆಯುತ್ತಿದೆ.

ಭಾರತದ ಸಂವಿಧಾನಕ್ಕೆ ಅತ್ಯಂತ ಬಂಧುರವಾದ, ಆದರ್ಶನೀಯವಾದ, ಪುಟ್ಟ ಕವಿತೆಯಂತೆ ಓದಿಸಿಕೊಳ್ಳುವ ಒಂದು ಪ್ರಸ್ತಾವನೆ ಇದೆ. 'ಭಾರತೀಯ ಪ್ರಜೆಗಳಾದ ನಾವು' ಎಂದು ಪ್ರಾರಂಭವಾಗುವ ಅದು ತನ್ನ ನಾಗರೀಕರಿಗೆ ಒಂದು ಸಾರ್ವಭೌಮ, ಸಮಾಜವಾದೀ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಕಟ್ಟಿಕೊಡುವ ಭರವಸೆ ನೀಡುತ್ತದೆ. ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆ ಎಂಬ ಮೂಲ ಆಶಯಗಳೊಂದಿಗೆ ಭ್ರಾತೃತ್ವವನ್ನು ಬೆಳೆಸುವ ಆಶ್ವಾಸನೆಯನ್ನು ನೀಡುತ್ತದೆ. ಇದೊಂದು ಅತ್ಯುತ್ಕೃಷ್ಟ ಸಂವಿಧಾನ ಎಂದು ಕೊಂಡಾಡಿಸಿಕೊಳ್ಳುವ ಈ ಪವಿತ್ರ ಗ್ರಂಥವನ್ನು ಜಾತಿಭ್ರಷ್ಟ ಭಾರತ ತನ್ನ ಮನೆಯ ಒಳಗೆ ಇನ್ನೂ ಬಿಟ್ಟುಕೊಂಡಿಲ್ಲ. ಸಂವಿಧಾನ ಅಧಿಕೃತವಾಗಿ ಜಾರಿಯಾಗಿ ೬೬ ವರ್ಷಗಳು ಕಳೆದರೂ ಇಂದಿನ ಪರಿಸ್ಥಿತಿಯನ್ನು ನೋಡಿದರೆ ಸಂವಿಧಾನವನ್ನೂ ಅಸ್ಪೃಶ್ಯಗೊಳಿಸಿ ಬಾಗಿಲಿನಿಂದ ಹೊರಗೆ ನಿಲ್ಲಿಸಿದ್ದೇವೆ ಅನಿಸುತ್ತದೆ.

ಡಾ. ಬಿ.ಆರ್. ಅಂಬೇಡ್ಕರ್ ಅವರ ೧೨೫ನೇ ಜನ್ಮವರ್ಷಾಚರಣೆಯನ್ನು ದೇಶದಾದ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಸರ್ಕಾರಗಳು ಕೋಟಿ ಹಣ ಬಿಡುಗಣೆ ಮಾಡುತ್ತಿವೆ. ದಲಿತರ ಐಕಾನ್ ಆದ ಬಾಬಾಸಾಹೇಬರನ್ನು ವಿಜೃಂಭಿಸುವುದರ ಮೂಲಕ ಅವರಿಗೆ ಸರ್ಕಾರ ತಮ್ಮ ಪರ ಇದೆ ಎಂಬ ರಾಜಕೀಯ ಪ್ರೇರಿತ ಸಂದೇಶವನ್ನು ಬಿತ್ತರಿಸುತ್ತಿವೆ. ಆದರೆ ಅಂಬೇಡ್ಕರ್‌ರು ಪ್ರತಿಪಾದಿಸಿದ ಮೂಲ ಆಶಯಗಳಾದ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಮೂಲೆಗೆ ಬಿದ್ದಿವೆ. ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಅವರು ದೇಶದ ಅಭಿವೃದ್ಧಿಗೆ ಸೂಚಿಸಿದ ಕ್ರಮಗಳು ಆಶಯಗಳಾಗಿಯೇ ಉಳಿದಿವೆ. ಅದಕ್ಕೆ ಕಾರಣಗಳನ್ನು ಹುಡುಕುವ ಪ್ರಾಮಾಣಿಕ ಪ್ರಯತ್ನಗಳು

ಯಾವ ಸರ್ಕಾರದಿಂದಲೂ ನಡೆದಂತೆ ಕಾಣುತ್ತಿಲ್ಲ. ಅದಕ್ಕೆ ವಿರುದ್ಧವಾಗಿ ಸಂವಿಧಾನ ವಿರೋಧೀ ಆಶಯಗಳನ್ನೇ ಚಾಲ್ತಿಗೆ ತರುವ ಹುನ್ನಾರ ತೆರೆಯ ಹಿಂದೆ ನಡೆಯುತ್ತಿದೆ.

ಬಾಬಾಸಾಹೇಬರು 'ನ್ಯಾಯ' (Justice)ವನ್ನು ಪ್ರಜ್ಞಾಪೂರ್ವಕವಾಗಿಯೆ ಮೊದಲ ಪ್ರಾಶಸ್ತ್ಯದಲ್ಲಿಟ್ಟಿದ್ದಾರೆ. ಸ್ವಾತಂತ್ರ್ಯ, ಸಮಾನತೆಗಳು ನಂತರ ಬರುತ್ತವೆ. ಅವರೇ ಹೇಳುವ ಪ್ರಕಾರ ಹಕ್ಕುಗಳ ಘೋಷಣೆಯಾದರಷ್ಟೇ ಸಾಲದು. ಅವುಗಳಿಗೆ ಕಾನೂನಿನ ರಕ್ಷಣೆ ಇರಬೇಕು. ಇಲ್ಲದಿದ್ದಲ್ಲಿ ಅಂಥ ಹಕ್ಕುಗಳು ನಿರರ್ಥಕ. ಒಬ್ಬ ವ್ಯಕ್ತಿ, ಒಂದು ಮತ, ಒಂದು ಮೌಲ್ಯ ಎಂಬುದು ಪ್ರಜಾಪ್ರಭುತ್ವದ ಬಹುದೊಡ್ಡ ಕೊಡುಗೆ. ಹಾಗಾಗಿ ರಾಜಕೀಯ ನ್ಯಾಯ ದೊರಕಿದೆ. ಆದರೆ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ನ್ಯಾಯಗಳನ್ನು ದೊರಕಿಸಿಕೊಳ್ಳಲಾಗಿಲ್ಲ. ಮೀಸಲಾತಿಯಿಂದ ಸಾಮಾಜಿಕ ನ್ಯಾಯ ಸಾಕಾರವಾಗಿಲ್ಲ. ಅದನ್ನು ಬುಡಮೇಲು ಮಾಡುವ ಪ್ರಯತ್ನಗಳು ಇಂದಿಗೂ ನಡೆಯುತ್ತಿವೆ. ದೇಶದಾದ್ಯಂತ ಮೇಲ್ಜಾತಿಗಳ ಮೀಸಲಾತಿ ಬೇಡಿಕೆ, ಹೋರಾಟಗಳು ಪೈಪೋಟಿಯಲ್ಲಿ ಶುರುವಾಗಿವೆ. ದಶಕಗಳ ಹಿಂದೆ ಮೀಸಲಾತಿ ವಿರೋಧೀ ಚಳವಳಿ ಫಲ ನೀಡದ ಕಾರಣ ಬೇರೊಂದು ಮುಖದಲ್ಲಿ ಅದು ತೆರೆದುಕೊಳ್ಳುತ್ತಿದೆ. ಇವೆಲ್ಲವೂ ಜಾತಿ ಕಾರಣದಿಂದ ಶತಮಾನಗಳಿಂದ ತುಳಿತಕ್ಕೊಳಗಾದ ದುರ್ಬಲರ ಏಳಿಗೆಯನ್ನು ಸಹಿಸಲಾರದೆ ನಡೆಯುತ್ತಿರುವ ಉಪಕ್ರಮಗಳು. ಇವೆಲ್ಲಕ್ಕೂ ಕಳಸವಿಟ್ಟಂತೆ ಅಹಮದಾಬಾದಿನ ಉಚ್ಚನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಯೊಬ್ಬರು ಸಂಬಂಧಪಡದ ಪ್ರಕರಣವೊಂದರಲ್ಲಿ ಮೀಸಲಾತಿಯಿಂದ ದೇಶದ ಏಳಿಗೆಯಾಗಿಲ್ಲ ಎಂಬಂಥ ತೀರ್ಪು ನೀಡಿರುವುದು ಇಡೀ ವ್ಯವಸ್ಥೆಯೇ ಸಾಂವಿಧಾನಿಕ ಆಶಯಗಳಿಗೆ ಅಸಹನೀಯವಾಗಿದೆ ಎಂಬುದನ್ನು ತೋರಿಸುತ್ತದೆ (ಆ ನಂತರ ತೀರ್ಪನ್ನು ಹಿಂಪಡೆದಿರುವುದು ಬೇರೆ ಮಾತು). ಪೊಲೀಸ್ ಮತ್ತು ನ್ಯಾಯ ವ್ಯವಸ್ಥೆಗಳು ಮಾತ್ರ ಒಬ್ಬ ಸಾಮಾನ್ಯ ಪ್ರಜೆಯ ಹಕ್ಕುಗಳನ್ನು ರಕ್ಷಿಸಬಲ್ಲವು.

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಎಂದು ಬೀಗುವ ಭಾರತದಲ್ಲಿ ಸ್ವಾತಂತ್ರ್ಯ (Liberty) ಶ್ರೀಸಾಮಾನ್ಯನ ನಿತ್ಯದ ಅನುಭವಕ್ಕೆ ದಕ್ಕುತ್ತಿಲ್ಲ. ತಿನ್ನುವ ಆಹಾರವನ್ನು ಅಡುಗೆಮನೆ ಹೊಕ್ಕು ಪರೀಕ್ಷಿಸುವ ರಾಷ್ಟ್ರವಾದಿಗಳ ಗುಂಪು ಗಟ್ಟಿಯಾಗಿ ಬೆಳೆಯುತ್ತಿದೆ. ಅವರ ಬಳಿ ತಮ್ಮ ಸಿದ್ಧಾಂತಕ್ಕೆ ಒಗ್ಗುವ 'ದೇಶಭಕ್ತಿ'ಯ ಮೂಲಮಾದರಿಯೊಂದಿದೆ. ಅದನ್ನೆ ಎಲ್ಲರಿಂದಲೂ ಅವರು ಬಯಸುತ್ತಾರೆ. ಮುಸಲ್ಮಾನರಿಂದ ಸ್ವಲ್ಪ ಹೆಚ್ಚೇ ಬಯಸುತ್ತಾರೆ! ಮೇಲ್ವರ್ಗದ ರಾಷ್ಟ್ರೀಯತೆ ನಮ್ಮ ಶತ್ರು ಎಂದು ಅಂಬೇಡ್ಕರ್ ಹೇಳಿದ್ದರು. ಈ ರಾಷ್ಟ್ರೀಯ ಭಾವನೆ ಎನ್ನುವುದು ಎರಡು ಅಲಗುಗಳ ಧೋರಣೆ. ಅದು ಏಕಕಾಲಕ್ಕೆ ತನ್ನವರ ಬಗ್ಗೆ ಸಹಾನುಭೂತಿಯೂ ಹೌದು, ಅನ್ಯರ ಬಗ್ಗೆ ವಿರೋಧವೂ ಹೌದು. ಅದು ಒಳಗಿನವರನ್ನು ಒಂದುಗೂಡಿಸುವ ಮತ್ತು ಹೊರಗಿನವರನ್ನು ದೂರವಿರಿಸುವ 'ಪಂಗಡ ಪ್ರಜ್ಞೆ' ಎನ್ನುತ್ತಾರೆ ಅವರು.

ವೈಜಾರಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆ ಮತ್ತು ಧಾರ್ಮಿಕ ಸ್ವಾತಂತ್ರ್ಯಗಳನ್ನು ಸಂವಿಧಾನ ನಮಗೆ ದಯಪಾಲಿಸಿದೆ. ಆದರೆ ವೈಚಾರಿಕನಿಗೆ ಇಲ್ಲಿ ಕೈಕಾಲುಗಳಿಗೆ ಕಬ್ಬಿಣದ ಸಂಕೋಲೆಗಳನ್ನು ಕಟ್ಟಿ ಬಂಧಿಸಲಾಗುತ್ತದೆ. ಅದಕ್ಕೆ ತೋರುವ

ನೆಪ 'ಇನ್ನೊಬ್ಬರ ಭಾವನೆ' ಎಂಬ ಗುಮ್ಮ. ಅದು ಎಷ್ಟೇ ಅವಿವೇಕವಾಗಿರಲಿ, ಮೌಢ್ಯ, ಮೂರ್ಖ ಭಾವನೆಯಾಗಿರಲಿ ಅದನ್ನು ಎಲ್ಲರೂ ಗೌರವಿಸಲೇಬೇಕು. ನಾಳೆಯ ರಾಷ್ಟ್ರವನ್ನು ಕಟ್ಟುವ ಕನಸನ್ನು ಹೊತ್ತು ವಿಶ್ವವಿದ್ಯಾಲಯದಲ್ಲಿ ಕಲಿಯುವ ವಿದ್ಯಾರ್ಥಿಗಳು ಹಸಿವನ್ನು ಕುರಿತು, ಬಡತನವನ್ನು ಕುರಿತು ಮಾತಾಡುವ ಹಾಗಿಲ್ಲ ವೈಚಾರಿಕತೆ ಬೆಳೆಯುವುದೇ ವಿಶ್ವವಿದ್ಯಾಲಯಗಳ ಅಂಗಳದಲ್ಲಿ, ಕ್ರಾಂತಿಯ ಮೊದಲ ಹೆಜ್ಜೆಗಳನ್ನು ಇಡುವವರು ವಿದ್ಯಾರ್ಥಿಗಳೆ, ಕಮ್ಯುನಿಸ್ಟ್ ರಾಷ್ಟ್ರವಾದ ಚೀನಾದಲ್ಲಿಯೂ ಸ್ವಾತಂತ್ರ್ಯದ ಹಕ್ಕಿಗಾಗಿ ಹೋರಾಡುತ್ತಾ ತಿಯಾನನ್‌ಮೆನ್ ಚೌಕದಲ್ಲಿ ಸೈನಿಕರ ಗುಂಡಿಗೆ ಬಲಿಯಾದವರು ವಿದ್ಯಾರ್ಥಿಗಳೇ ಆಗಿದ್ದರು. ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಗಳಂಥ ಬರ್ಬರ ಕ್ರೌರ್ಯದಿಂದ ರೋಸಿಹೋಗಿ ಧರ್ಮಾಂತರವಾದವರನ್ನು ಇಲ್ಲಿ 'ಸ್ವಾತಂತ್ರ್ಯ ರಕ್ಷಿಸುತ್ತಿಲ್ಲ. ಘರ್‌ವಾಪಸಿ ಬ್ರಿಗೇಡಿನ ಭಯದಿಂದ ಮುಕ್ತರಾಗಲು ಸಾಧ್ಯವಿಲ್ಲ. ಆದ್ದರಿಂದ ಸ್ವಾತಂತ್ರ್ಯ ಈ ದೇಶದಲ್ಲಿ ತುಟ್ಟಿಯಾಗಿದೆ ಎಂದು ಹೇಳಬಹುದು.

ಸಂವಿಧಾನವು ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆ (Equality) ಯನ್ನು ಪ್ರತಿಯೊಬ್ಬ ನಾಗರೀಕನಿಗೂ ಒದಗಿಸುತ್ತದೆ. ಸ್ಥಾನಮಾನದ ಮಾತಿರಲಿ, ಸಾರ್ವಜನಿಕ ಅವಕಾಶಗಳಲ್ಲಿ ಸಮಾನತೆಯನ್ನು ಸಾಧಿಸಲು ಇದುವರೆಗೂ ನಾವು ಸೋತಿದ್ದೇವೆ. ಮಾರ್ಚ್ ೨೦, ೧೯೨೭ಕ್ಕೆ ಬಾಬಾಸಾಹೇಬರ ನೇತೃತ್ವದಲ್ಲಿ ಅಸ್ಪೃಶ್ಯ ದಲಿತರು ಮಹಾಡ್ ಕೆರೆಯ ನೀರನ್ನು ಮುಟ್ಟಿ, ಕುಡಿದು ೮೯ ವರ್ಷಗಳು ಕಳೆದವು. ಇಷ್ಟು ವರ್ಷಗಳಲ್ಲಿ ಭಾರತದ ಹಳ್ಳಿಗಳಲ್ಲಿ ಕನಿಷ್ಠ ಸಾರ್ವಜನಿಕ ಸ್ಥಳಗಳಲ್ಲಿ ನೀರನ್ನು ಎಲ್ಲರೂ ಸಮಾನವಾಗಿ ಬಳಸುವ ಪರಿಸ್ಥಿತಿ ಉಂಟಾಗಬೇಕಿತ್ತು. ಆದರೆ ಹಾಗಾಗಿಲ್ಲ. ಇದೇ ಮಾರ್ಚ್ ತಿಂಗಳಲ್ಲಿ ಮಧ್ಯಪ್ರದೇಶದ ಹಳ್ಳಿಯೊಂದರ ಶಾಲೆಯಲ್ಲಿ ಬಾಲಕನೊಬ್ಬನಿಗೆ ಕೈ ಪಂಪಿನಿಂದ ನೀರು ಕುಡಿಯಲು ಬಿಡದ ಕಾರಣ, ಬಾಟಲಿಯಲ್ಲಿ ಬಾವಿಯಿಂದ ನೀರು ಸೆಳೆಯಲು ಹೋಗಿ ಆತ ಬಿದ್ದು ಸಾವನ್ನಪ್ಪಿದ್ದಾನೆ. ಅಂಬೇಡ್ಕರ್ ಓದುತ್ತಿರುವಾಗ ಶಾಲೆಯಲ್ಲಿ ಸವರ್ಣೀಯ ಹುಡುಗ ಅಥವಾ ಜವಾನ ತಂಬಿಗೆಯನ್ನು ಮೇಲೆತ್ತಿ ಬೊಗಸೆಗೆ ನೀರು ಹೊಯ್ಯುತ್ತಿದ್ದ, ಅಸ್ಪಶ್ಯತೆ ಆಗ ಚಾಲ್ತಿಯಲ್ಲಿತ್ತು. ಸಂವಿಧಾನ ಅದನ್ನು ಇಲ್ಲವಾಗಿಸಿದೆ. ಆದರೆ ವಾಸ್ತವದಲ್ಲಿ ಈಗಲೂ ಚಾಲ್ತಿಯಲ್ಲಿದೆ.

ತಮಿಳುನಾಡು ಒಂದರಲ್ಲಿಯೆ ೨೦೧೩ ರಿಂದ ಇಲ್ಲಿಯವರೆಗೆ ಅಸ್ಪಶ್ಯ ಯುವಕರು ಮೇಲ್ಜಾತಿಯ ಹೆಣ್ಣುಗಳನ್ನು ಪ್ರೀತಿಸಿ ಮದುವೆಯಾದರು ಎಂಬ ಕಾರಣಕ್ಕೆ ೮೧ ಕೊಲೆಗಳಾಗಿವೆ ಹೆಚ್ಚಿನ ಪ್ರಕರಣಗಳಲ್ಲಿ ಹೆಣ್ಣಿನ ಪೋಷಕರೇ/ಸಂಬಂಧಿಗಳೇ ಕೊಲೆಗಡುಕರು, ಆದರೆ ಒಂದು ಪ್ರಕರಣದಲ್ಲಿಯೂ ಅಪರಾಧಿಗಳಿಗೆ ಶಿಕ್ಷೆಯಾಗಿಲ್ಲ. ಪೆರಿಯಾರ್ ಕಂಡ ಜಾತಿ ನಿರ್ಮೂಲನೆಯ ಕನಸು ಮಣ್ಣುಮುಕ್ಕಿದೆ. ಹಿಂದೂ ಸವರ್ಣೀಯ ಮನಸ್ಥಿತಿಯನ್ನು ತಿಳಿಯಲು ಸಾಮಾಜಿಕ ಜಾಲತಾಣಗಳನ್ನು ಹೊಗಬೇಕು. ಅವರಲ್ಲಿ ಬಹುತೇಕರು ಶೂದ್ರರೇ ಎಂಬುದರಲ್ಲಿ ಅನುಮಾನವಿಲ್ಲ. ಇತ್ತೀಚೆಗೆ ಅಂತರ್ಜಾತೀಯ ಪ್ರೇಮವಿವಾಹವಾಗಿದ್ದ ತಿರುಪೂರಿನ ದಲಿತ ಯುವಕ ಶಂಕರನ್ ಎಂಬುವನ ಕೊಲೆಯಾದದ್ದು ಸರಿ ಎಂದು ಅನೇಕರು ಬೆಂಬಲಿಸಿದ್ದಾರೆ. ಕೊಲೆಗಾರನಾದ ಸ್ವತಃ ಹುಡುಗಿಯ ತಂದೆ 'ಜಾತಿ ನಮಗೆ ದೇವರಿಗಿಂತ ಹೆಚ್ಚು' ಎಂಬ ಹೇಳಿಕೆ

ನೀಡಿದ್ದಾನೆ. ಹೆತ್ತ ಮಕ್ಕಳನ್ನ ಕೊಂದು ಗೌರವ ಹತ್ಯೆ ಎಂದು ಕರೆಯುವ ಇಂಥ ಅಮಾನುಷ, ಹೃದಯಹೀನ ಕೃತ್ಯ ಭಾರತದಾದ್ಯಂತ ನಿತ್ಯ ಘಟಿಸುವ ಸಾಮಾನ್ಯ ಸಂಗತಿಯಾಗಿದೆ. ಇಲ್ಲಿ ಜಾತಿ ವ್ಯವಸ್ಥೆಯ ಮುಂದೆ ಮಾನವೀಯತೆ ಮುಗ್ಗರಿಸಿದೆ.

ಇನ್ನೊಂದು ಬಹುಮುಖ್ಯ ವಿಷಯವೆಂದರೆ ಭಾರತದ ಹಳ್ಳಿಗಳಲ್ಲಿ ಜಾತಿಗೊಂದು ಸ್ಮಶಾನವಿದೆ. ಸ್ಮಶಾನವಿಲ್ಲದ ದಲಿತ, ದುರ್ಬಲ ಜಾತಿಗಳು ಹೆಣವನ್ನು ಮುಂದಿಟ್ಟುಕೊಂಡು ಹೂಳುವ ಜಾಗಕ್ಕಾಗಿ ಬೇಡುವ ಪ್ರಸಂಗಗಳು ಸಾಕಷ್ಟು ಜರುಗಿವೆ. ಪ್ರತಿ ಹಳ್ಳಿಗೆ ಒಂದೇ ಸ್ಮಶಾನ ಇರುವಂತೆ ನೋಡಿಕೊಳ್ಳುವುದು ಸರ್ಕಾರಕ್ಕೆ ಕಷ್ಟದ ಕೆಲಸವೇನಲ್ಲ. ಇದಕ್ಕೂ ಭಾವನೆ ಎಂಬ ಗುಮ್ಮ ಅಡ್ಡ ಬರುತ್ತದೆ. ಸಂಸತ್ತಿನಲ್ಲಿ ದಲಿತ ಸಂಸದರು ಪಕ್ಷಾತೀತವಾಗಿ ಇದೊಂದೇ ವಿಷಯವನ್ನು ಎತ್ತಿಕೊಂಡು ಹೋರಾಡಿದ್ದರೆ ಇದು ಸಾಧ್ಯವಾಗುತ್ತಿತ್ತು. ಆಗಿಲ್ಲ, ಯಾಕೆಂದರೆ 'ಪೂನಾ ಒಪ್ಪಂದ'ದ ಫಲ; ಅವರನ್ನು ಸಂಕಲ್ಪಹೀನರನ್ನಾಗಿಸಿದೆ. ಸಂವಾದ ಕಾರ್ಯಕ್ರಮವೊಂದರಲ್ಲಿ ಕಾಲೇಜಿನ ವಿದ್ಯಾರ್ಥಿನಿ ಯೊಬ್ಬಳು ನನ್ನನ್ನು ಕೇಳಿದ ಪ್ರಶ್ನೆ ಹೀಗಿತ್ತು. 'ಸರ್, ಬ್ರಿಟಿಷರಿಗೆ ದಲಿತರು ಮತ್ತು ಕೆಳವರ್ಗದವರಮೇಲೆ ಸಹಾನುಭೂತಿಯಿತ್ತು, ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಈಗ ಯಾಕೆ ಯಾರೂ ನಮ್ಮನ್ನು ಕೇಳಿಸಿಕೊಳ್ಳುತ್ತಿಲ್ಲ?' ಆಗ ತೋಳ ಮತ್ತು ಕುರಿಮರಿ ಎರಡೂ ಸಿಂಗದ ಬಳಿ ನ್ಯಾಯ ಕೇಳಲು ಹೋಗುತ್ತಿದ್ದವು. ಸಹಜವಾಗಿಯೇ ದುರ್ಬಲ ಕುರಿಮರಿ ಅಷ್ಟಿಷ್ಟು ಅನುಕಂಪ ಗಿಟ್ಟಿಸುತ್ತಿತ್ತು. ಸಿಂಹದ ನಿರ್ಗಮನವಾಯಿತು. ಈಗ ಕುರಿಮರಿ ತೋಳನ ಮುಂದೆಯೆ ನಿಂತು ನ್ಯಾಯ ಕೇಳಬೇಕಾಗಿದೆ. ಆದ್ದರಿಂದ ಸಮಾನತೆ ಮರೀಚಿಕೆಯಾಗಿಯೆ ಉಳಿದಿದೆ!?

ಭ್ರಾತೃತ್ವ (Fraternity) ಎಂಬ ಪದವನ್ನು ಬಾಬಾ ಸಾಹೇಬರು ಸದುದ್ದೇಶದಿಂದಲೇ ಬಳಸಿದರೂ ಅದೊಂದು ಅಲಂಕಾರಿಕ ಶಬ್ದವಾಗಿಯೇ ಉಳಿದಿದೆ. ಯಾಕೆಂದರೆ ಜಾತಿಪದ್ಧತಿಯಲ್ಲಿ ಭ್ರಾತೃತ್ವಕ್ಕೆ ಜಾಗವೇ ಇಲ್ಲ. ಆದ್ದರಿಂದ ಈ ದೇಶಕ್ಕೆ ಅದನ್ನು ಅನ್ವಯಿಸುವ ಮಾತೆ ಇಲ್ಲ. ಅಥವಾ ಸಂಕುಚಿತಾರ್ಥದಲ್ಲಿ ಅದು ಒಂದು ಜಾತಿಯ ಒಳಗಡೆ ಇದೆ ಎನ್ನುವುದಾದರೆ ಭಾರತದಲ್ಲಿ ಸಹಸ್ರಾರು ಭ್ರಾತೃತ್ವಗಳಿವೆ. ಅಂತರ್ಜಾತೀಯ ವಿವಾಹ ಮತ್ತು ಅಂತರ್ಜಾತೀಯ ಭೋಜನ ನಿಷಿದ್ಧವಾಗಿರುವ ಒಂದು ಸಮಾಜದಲ್ಲಿ ಭ್ರಾತೃತ್ವ'ದ ಕಲ್ಪನೆಯೆ ಅಪ್ರಸ್ತುತವಾಗುತ್ತದೆ. ಭ್ರಾತೃತ್ವದ ಗೈರಿನಿಂದಲೇ ಅಸಹನೆ ಸಮಾಜದಲ್ಲಿ ತಾಂಡವವಾಡುತ್ತಿದೆ. ಇತ್ತೀಚೆಗಷ್ಟೇ ಉತ್ತರಪ್ರದೇಶದಲ್ಲಿ ನಡೆದ ಒಂದು ಘಟನೆಯನ್ನು ನೆನಪಿಸುವುದಾದರೆ ಅಸ್ಪೃಶ್ಯನೊಬ್ಬ ಅಂಗಡಿಯಲ್ಲಿ ಮಿಠಾಯಿ ಕೊಳ್ಳುವಾಗ ಬ್ರಾಹ್ಮಣನಾದ ಮಾಲೀಕನಿಗೆ ಅವನ ಕೈ ಸೋಕಿತು ಎನ್ನುವ ಕಾರಣಕ್ಕೆ ಅವನನ್ನು ಹಿಡಿದು ಥಳಿಸಿದ್ದಾರೆ. ಅದನ್ನು ಪ್ರಶ್ನಿಸಿದ ಕಾರಣ ಇಡೀ ಕುಟುಂಬದ ಮೇಲೆ ದಾಂದಲೆ ನಡೆದಿದೆ. ಆದರೆ ನಮ್ಮ ರಾಷ್ಟ್ರವಾದಿಗಳು ಇದನ್ನು ಒಪ್ಪುವುದಿಲ್ಲ. ನಮ್ಮ ದೇಶದಲ್ಲಿರುವಷ್ಟು ಸಹಿಷ್ಣುತೆ ಬೇರೆಲ್ಲಿಯೂ ಇಲ್ಲ ಎಂದು ವಿತಂಡವಾದಕ್ಕೆ ಮುಂದಾಗುತ್ತಾರೆ. ಇದನ್ನು ಅಂಬೇಡ್ಕರ್ ಸ್ಪಷ್ಟವಾಗಿ ಗುರುತಿಸುತ್ತಾರೆ. 'ವಿಷಯವನ್ನು ಎಷ್ಟು ವಿವರಿಸಿ ಹೇಳಿದರೂ ಹಿಂದೂ ಆದವನು ಜಾತಿ ವ್ಯವಸ್ಥೆ ಅನಿಷ್ಟವೆಂದು ಒಪ್ಪುವುದಿಲ್ಲ. ಜಾತಿ ವ್ಯವಸ್ಥೆಯ ಕೇಡುಗಳಿಗೆ ಹಿಂದೂ ಧರ್ಮವೆ ಕಾರಣ ಎಂದು

ನೋಡಿ, ಹಿಂದೂ ತಕ್ಷಣ ಯೂರೋಪಿನ ವರ್ಗ ವ್ಯವಸ್ಥೆ ಏನು ಎಂದು ತಿರುಗಿ ಬೀಳುತ್ತಾನೆ.' ಈಗಲೂ ನಡೆಯುತ್ತಿರುವುದು ಅದೇ. ಇತ್ತೀಚೆಗೆ ನಾಗಪುರದಲ್ಲಿ ನಡೆದ ಕವಿಗೋಷ್ಠಿಯಲ್ಲಿ ಭೇಟಿಯಾಗಿದ್ದ ಖ್ಯಾತ ಸಂಸ್ಕೃತ ಸುದ್ದಿವಾಚಕ ಬಲದೇವಾನಂದ ಸಾಗರಃ ಇದೇ ವಾದವನ್ನು ನನ್ನ ಮುಂದಿಟ್ಟರು. ವರ್ಗ ವ್ಯವಸ್ಥೆಯಲ್ಲಿ ಮೇಲುಕೀಳಿನ ಶ್ರೇಣಿಯಿಲ್ಲ, ಜನರು ಜಾತಿ ಕೀಳರಿಮೆಯಿಂದ, ಅಸ್ಪೃಶ್ಯತೆಯ ಅವಮಾನದಿಂದ ಕುಬ್ಜರಾಗಿ ನರಳುವುದಿಲ್ಲ. ಜಾತಿಪದ್ಧತಿ ಎಂದು ವಿಕೃತ ವೈದಿಕ ನಮೂನೆ. ಇದೇ ಅಭಿಪ್ರಾಯಕ್ಕೆ ನೀವು ಆತುಕೊಂಡರೆ ಹಿಂದೂ ಧರ್ಮವು ಕಳಂಕಗಳಿಂದ ಮುಕ್ತವಾಗುವುದಿಲ್ಲ ಎಂದು ನಾನು ಹೇಳಿದೆ. ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡ ಮನಸ್ಸಿಗೆ ಈ ಶ್ರೇಣೀಕೃತ ತಾರತಮ್ಯ ಚಾರಿತ್ರಿಕ ಅಪರಾಧವೆಂದು ಅನಿಸುವುದಿಲ್ಲ. ಅಸ್ಪೃಶ್ಯತೆ, ಅಮಾನವೀಯ ಆಚರಣೆ ಮತ್ತು ಧರ್ಮಕ್ಕೆ ಎಸಗಿದ ಅಪಚಾರ ಎಂದು ಅನಿಸುವುದೇ ಇಲ್ಲ.

ಭ್ರಾತೃತ್ವವಿಲ್ಲದ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಅಂಬೇಡ್ಕರ್ ಬಹುಸ್ವಾರಸ್ಯವಾಗಿ ವಿವರಿಸುತ್ತಾರೆ. ಫ್ರೆಂಚ್ ಕ್ರಾಂತಿಯಲ್ಲಿ ಬಳಸಿದ ಈ ಪದಕ್ಕೆ ಸಮರ್ಪಕ ಅಭಿವ್ಯಕ್ತಿ ಸಾಧ್ಯವಾಗಿಲ್ಲ. ಅದು ಬುದ್ಧನ 'ಮೈತ್ರಿ' ಎಂಬ ಪದಕ್ಕೆ ಹತ್ತಿರವಾದದ್ದು, ಮೈತ್ರಿ ಎಂದರೆ ಎಲ್ಲರನ್ನೂ ಒಳಗೊಳ್ಳುವುದು, ಸಹ- ಸಂವೇದನೆ (Fellow feeling). ಅಂತಹ ಮೈತ್ರಿಯಿಂದ ಕೂಡಿದ ಭ್ರಾತೃತ್ವವಿಲ್ಲದಿದ್ದರೆ ಸ್ವಾತಂತ್ರ್ಯ ಮತ್ತು ಸಮಾನತೆ ಅರ್ಥ ಕಳೆದುಕೊಳ್ಳುತ್ತವೆ ಎಂದು ಅಂಬೇಡ್ಕರ್ ಹೇಳುತ್ತಾರೆ. ಆದ್ದರಿಂದ ಪ್ರಜಾಪ್ರಭುತ್ವದ ಮೂಲಬೇರುಗಳು ಇಂಡಿಯಾದಲ್ಲಿ ಶಿಥಿಲವಾಗಿವೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಅಸಲಿಗೆ ಸಂವಿಧಾನ ದೇಶಕ್ಕೆ ಒಂದು ಹೊರಾವರಣ (Wrapper)ವಾಗಿದೆ. ಒಳಗಿನ ಹೂರಣ ಜಾತಿವ್ಯವಸ್ಥೆ. ಆದ್ದರಿಂದ ನಮ್ಮದು ಜಾತ್ಯತೀತ ಪ್ರಜಾಪ್ರಭುತ್ವ ಎಂಬುದು ಹುಸಿ ಘೋಷಣೆಯಾಗಿಯೇ ಉಳಿಯುತ್ತದೆ. ಅಂಬೇಡ್ಕರ್ ಸಮಾಜವಾದೀ ಪ್ರಜಾಪ್ರಭುತ್ವವನ್ನು ಕಟ್ಟಿಕೊಟ್ಟರು. ಅದರ ಉದ್ದೇಶ ಸಂಪನ್ಮೂಲಗಳ ಸಮಾನ ಹಂಚಿಕೆಯಾಗಿತ್ತು. ಎಡಪಂಥೀಯರೊಂದಿಗೆ ಗುರುತಿಸಿಕೊಳ್ಳದ ಅವರು ರಚಿಸಿರುವ ಕೆಲವು ವಿಧಿಗಳು ಕ್ರಾಂತಿಕಾರಿಯಾಗಿವೆ. ಕೃಷಿಯು ಸರಕಾರಿ ಉದ್ದಿಮೆಯಾಗಿರಬೇಕು, ಸಾಮುದಾಯಿಕ ಸಹಕಾರೀ ಚಳವಳಿಯಾಗಿ ರೂಪುಗೊಳ್ಳಬೇಕು ಎಂದು ಅಂಬೇಡ್ಕ ಹೇಳುತ್ತಾರೆ. ಅದನ್ನು ಸಂಘಟಿಸುವ ಬಗೆಯನ್ನೂ ಅವರೇ ಸೂಚಿಸುತ್ತಾರೆ. ಡಿಬೆಂಚರುಗಳನ್ನು ಹೇಗೆ ಹಂಚಬೇಕು ಎಂಬುದನ್ನು ವಿವರಿಸುತ್ತಾರೆ. ಭಾರಿ ಉದ್ಯಮಗಳು, ವಿಮೆ ಸರ್ಕಾರಿ ಸ್ವಾಮ್ಯದಲ್ಲಿರಬೇಕು ಎಂದು ಹೇಳುತ್ತಾರೆ. ಇವೆಲ್ಲವೂ ಆಳುವವರ ಕಿವಿ ಕೇಳಿಸಿಕೊಳ್ಳಲಾರದಂತಹ ವಿಷಯಗಳು. ಈಗ ಖಾಸಗೀಕರಣದ ಪರ್ವ, ವಿದೇಶೀ ಬಂಡವಾಳ ಮುಕ್ತವಾಗಿ ಹರಿದುಬರಲಿದೆ. ಆದ್ದರಿಂದ ದೇಶದಲ್ಲಿ ಈಗ ಚಾಲ್ತಿಯಲ್ಲಿರುವುದು "ಬಂಡವಾಳಶಾಹಿ ಪ್ರಜಾಪ್ರಭುತ್ವ, ಪರಿಣಾಮವಾಗಿ ಬಡವನಾದ ರೈತ, ಕೂಲಿ ಕಾರ್ಮಿಕ, ಹತಾಶನಾಗಿದ್ದಾನೆ. ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ೨೦೦೫-೦೬ರಲ್ಲಿ ಕರ್ನಾಟಕವೊಂದರಲ್ಲಿಯೇ ೧೨೨೭ ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಅಂಶವನ್ನು ಸದನದಲ್ಲಿ ಸಚಿವರೇ ಹೇಳಿದ್ದಾರೆ

ಇಂತಹ ವಿಷಯಗಳನ್ನು ಎತ್ತಿ ಮಾತನಾಡುವವರನ್ನು ಅಭಿವೃದ್ಧಿಯನ್ನು ಸಹಿಸಲಾಗದ ಜನ ಎಂದು ಮೂದಲಿಸುವವರಿದ್ದಾರೆ. ಇರಬಹುದು, ಭಾರತದ ಆರ್ಥಿಕ ಅಭಿವೃದ್ಧಿ ವಿಶ್ವದಲ್ಲಿಯೇ ಅತಿ ವೇಗವಾಗಿ ಬೆಳೆಯುತ್ತಿದೆ. ಅದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೋಲಿಕೆಗೆ, ಚರ್ಚೆಗೆ ಸಹಕಾರಿಯಾಗಿದೆ ಅಷ್ಟೆ. ಅದು ಒಳಗೊಳ್ಳುವ ಅಭಿವೃದ್ಧಿಯೆ? ಜನಸಾಮಾನ್ಯನಿಗೆ ಮುಟ್ಟುತ್ತಿದೆಯೆ? ಸರ್ವತೋಮುಖ ಬೆಳವಣಿಗೆ ಸಾಧ್ಯವಾಗಿದೆಯೆ ಎಂದರೆ 'ಇಲ್ಲ' ಎಂದೇ ಹೇಳಬೇಕಾಗುತ್ತದೆ. ಅದು ನೂರಕ್ಕೂ ಸ್ವಲ್ಪ ಹೆಚ್ಚಿರುವ ಬಹುರಾಷ್ಟ್ರೀಯ ಕಂಪೆನಿಗಳ ಒಡೆತನದ ವ್ಯಾಪಾರಸ್ಥ ಮನೆಗಳಲ್ಲಿ (Business house) ಶೇಖರಣೆಯಾಗುತ್ತಿದೆ. ಇಂತಹ ಬೆಳವಣಿಗೆ ಶತಮಾನಗಳಿಂದ ಶೋಷಿತರಾದ, ಆಸ್ತಿಹೀನ ಬಡವರೇ ಹೆಚ್ಚಾಗಿರುವ ಈ ದೇಶಕ್ಕೆ ಮಾದರಿಯಾಗಬೇಕೆ? ಭಾರತ, ಮಾನವ ಅಭಿವೃದ್ಧಿಯ ಹಲವು ಪ್ರಮುಖ ಸೂಚ್ಯಂಕಗಳಲ್ಲಿ ಕೆಳಗಿದೆ. ಕೆಲವು ವಿಷಯಗಳಲ್ಲಿ ನೆರೆಯ ಬಾಂಗ್ಲಾ ಮತ್ತು ನೇಪಾಳಗಳಿಗಿಂತಲೂ ಸೂಚ್ಯಂಕಗಳು ಹೀನಾಯವಾಗಿವೆ. ಬಿಹಾರ ಮತ್ತು ಜಾರ್ಖಂಡದಲ್ಲಿ ಶೇ.೮೮ರಷ್ಟು ದಲಿತರು ಮಲವಿಸರ್ಜನೆಗೆ ಬಯಲನ್ನು ಅವಲಂಬಿಸಿದ್ದಾರೆ ಎಂಬುದೊಂದು ಚಿಕ್ಕ ಉದಾಹರಣೆ. ಹೀಗೆ ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಅತ್ಯಂತ ಕೆಳಗಿದ್ದು, ಆರ್ಥಿಕ ಅಭಿವೃದ್ಧಿಯಲ್ಲಿ ವಿಶ್ವದಲ್ಲಿಯೇ ಮುಂಚೂಣಿಯಲ್ಲಿರುವುದು ಏನನ್ನು ಹೇಳುತ್ತದೆ? ಅದನ್ನು ವಿಕಲಾಂಗ ಬೆಳವಣಿಗೆಯೆನ್ನದೆ ಬೇರೆ ದಾರಿಯಿಲ್ಲ.

ಬಾಬಾಸಾಹೇಬರು ೧೯೨೭ರ ಡಿಸೆಂಬರ್, ೨೭ ರಂದು ಮನುಷ್ಯವಿರೋಧೀ ಕೃತಿ ಎಂದು ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಟ್ಟರು. ರಾಷ್ಟ್ರ ಅಧಿಕೃತವಾಗಿ ಒಪ್ಪಿಕೊಂಡಿರುವ ಸಂವಿಧಾನ, ಜಾತ್ಯಂಧ ಸಮಾಜದ ಅಂತರಂಗದ ದಳ್ಳುರಿಯಲ್ಲಿ ಪ್ರತಿದಿನವೂ ಸುಡಲ್ಪಡುತ್ತಿದೆ. ಪ್ರಜಾಪ್ರಭುತ್ವವೆಂಬ ಗಾಲಿಯಿಲ್ಲದ ರಥ ಓಡುತ್ತಲೇ ಇರುತ್ತದೆ.

**[ಸಂವಾದ ಮಾಸಪತ್ರಿಕೆಯಿಂದ)**

**'ಭಾರತಿ' (ತಿರುಮಲೆ ರಾಜಮ್ಮ**

**- ನಾಡೋಜ ಡಾ. ಕಮಲಾಹಂಪನಾ**

೨೦ನೇ ನವೆಂಬರ್ ೧೯೦೦ರಲ್ಲಿ ಜನಿಸಿದ ರಾಜಮ್ಮನವರ ಕಾವ್ಯನಾಮ ಭಾರತಿ, ಹೊಸಗನ್ನಡ ಉದಯಕಾಲದ ಸಾಹಿತಿಯಾಗಿ ಸಂಗೀತ ವಿದುಷಿಯಾಗಿ ವೀಣಾವಾದನ ನಿಪುಣೆಯಾಗಿ ಹೆಸರಾಗಿದ್ದಾರೆ. ನಟಕಕರ್ತೆಯಲ್ಲದೆ ಕಾವ್ಯ ರಚನೆಯನ್ನು ಮಾಡಿದ್ದಾರೆ. ಪತಿ ತಿ.ತಾ. ಶರ್ಮರೊಂದಿಗೆ ಪತ್ರಕರ್ತೆಯಾಗಿ ದುಡಿದಿದ್ದಾರೆ. ಗೃಹಕಾರ್ಯದೊಂದಿಗೆ ಸಮಾಜಸೇವೆ, ದೇಶಸೇವೆ ಮಾಡಿ ಇದೀಗ ನಿವೃತ್ತಜೀವನ ಸಾಗಿಸುತ್ತಿದ್ದಾರೆ. ೮೩ರ ವಯೋವೃದ್ಧೆ ಭಾರತಿಯವರು.

ಇವರ ಪ್ರಕಟಿತ ಕೃತಿಗಳು

| | | |
|---|---|---|
| ೧. | ತಪಸ್ವಿನಿ | (ಕಾವ್ಯನಾಟಕ) |
| 9. | ಮಹಾಸತಿ | ( “ ) |
| ೩. | ವಾತ್ಸಲ್ಯ ತರಂಗಲೀಲಾ | ( “ ) |
| ೪. | ಅಹಲ್ಯಾ | ( “ ) |
| ೫. | ದೇಶಭಕ್ತಿ ಗೀತೆಗಳು | (ಕವನ ಸಂಗ್ರಹ) |
| ೬. | ರಾಷ್ಟ್ರಶಕ್ತಿ | ( “ ) |
| ೭. | ವೈಣಿಕ ಶಿಖಾಮಣಿ ಶೇಷಣ್ಣ | (ವ್ಯಕ್ತಿಚಿತ್ರ) |
| ೮. | ಆರ್ಯ ಕೈಲಾಸಂ | ( “ ) |
| ೯. | ಸ್ವರ್ಗ ನಿರಸನ | (ಏಕಾಂಕ ನಾಟಕ) |
| ೧೦. | ಉನ್ಮತ್ತಭೂಮಿ | ( “ ) |
| ೧೧. | ದುಂದುಬಿ | ( “ ) |
| ೧೨. | ದೃವ | ( “ ) |
| ೧೩. | ಭಾರತೀಯ ಸಂಗೀತ ದರ್ಶನ (ಪ್ರಬಂಧ) | |

ಕೆಲವು ತೆಲುಗು ತಮಿಳು ಕೃತಿಗಳನ್ನು ಅನುವಾದಿಸಿದ್ದಾರೆ. ೧೯೭೭ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಇವರನ್ನು ಶ್ರೇಷ್ಠ ಸಾಹಿತಿ ಎಂದು ಗೌರವಿಸಿದೆ. ೧೯೮೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಗೌರವಿಸಿದೆ. 'ಭಾರತಿ' ಗೌರವ ಗ್ರಂಥವನ್ನು ಇವರಿಗೆ ಸಮರ್ಪಿಸಲಾಯಿತು.

**ಎರಡು ಕಲೆಗಳ ಅಪೂರ್ವ ಸಂಗಮ**

'ಭಾರತಿ' ಕಾವ್ಯನಾಮಾಂಕಿತರಾದವರು ಶ್ರೀಮತಿ ತಿರುಮಲೆ ರಾಜಮ್ಮನವರು. ಕಲೆ ಸಾಹಿತ್ಯಗಳೆರಡರಲ್ಲೂ ಉನ್ನತಮಟ್ಟದ ಪ್ರೌಢಿಮೆ ಅವರದು. ನಾಡಿನ ಹಿರಿಯ ಪತ್ರಿಕೋದ್ಯಮಿ, ದೇಶಭಕ್ತ, ಹೋರಾಟಗಾರ, ಸಂಶೋಧಕ, ಲೇಖಕ ಶ್ರೀ ತಿರುಮಲೆ ತಾತಾಚಾರ್ಯಶರ್ಮರವರ ಪತ್ನಿಯಾಗಿ ಅವರು ಕನ್ನಡ ಸಾರಸ್ವತ ಪ್ರಪಂಚದಲ್ಲಿ ತಮ್ಮದೇ ಸ್ಥಾನ ಸ್ಥಾಪಿಸಿಕೊಂಡಿದ್ದಾರೆ. ಕಲಾಕ್ಷೇತ್ರದಲ್ಲಿ ಶ್ರೀಮತಿ ರಾಜಮ್ಮನವರು ವೀಣೆ ಶೇಷಣ್ಣನವರ ಶಿಷ್ಯ. ಸಾಹಿತ್ಯ ಲೇಖನದಲ್ಲಿ ಹಲವು ಕಾವ್ಯ, ಗೀತನಾಟಕಗಳ ಸೃಷ್ಟಿಕರ್ತೆ. ನವುರಾದ ಮನಸ್ಸುಳ್ಳ ರಾಜಮ್ಮನವರು ಗಾಂಧೀಜಿಯವರ ವಾತ್ಸಲ್ಯವನ್ನೂ ಗೆದ್ದಂತಹವರು.

**ಅಪೂರ್ವ ಸಂಗಮ**

ಸಂಗೀತ, ಸಾಹಿತ್ಯಗಳೆರಡೂ ಸರಸ್ವತಿಯ ಎರಡು ಕಣ್ಣುಗಳಿದ್ದಂತೆ. ಈ ಎರಡು ವಿದ್ಯೆಗಳೂ ಎರಡು ಪರ್ವತಗಳಂತೆ, ಎರಡು ಮಹಾಸಾಗರಗಳಂತೆ. ಇಂತಹ ಎರಡು ಅಪೂರ್ವವಿದ್ಯೆಗಳ ಸಂಗಮವನ್ನೂ ಸಾಮರಸ್ಯವನ್ನೂ ಹಿರಿಯ ಸಾಹಿತಿ ತೀ.ತಾ. ಶರ್ಮರ ಪತ್ನಿ ತಿರುಮಲೆ ರಾಜಮ್ಮನವರಲ್ಲಿ ಕಾಣಬಹುದು.

ವ್ಯಕ್ತಿ ತನ್ನ ಜೀವಿತ ಕಾಲದಲ್ಲಿ ವಿದ್ಯೆಯ ಒಂದು ಮುಖವನ್ನು ಪರಿಚಯ ಮಾಡಿಕೊಳ್ಳುವುದೇ ಕಷ್ಟವಾಗುತ್ತದೆ. ಅದಕ್ಕಾಗಿ ಬಹಳ ಕಷ್ಟಪಡಬೇಕಾಗುತ್ತದೆ. ತಿರುಮಲೆ ರಾಜಮ್ಮನವರು ಕಷ್ಟಪಟ್ಟು ಆರ್ಜಿಸಿದ, ನಿರಂತರ ತಪಸ್ಸಿನಿಂದ ಸಾಧನೆಯಿಂದ ಸಾಕ್ಷಾತ್ಕಾರ ಮಾಡಿಕೊಂಡ ವಿದ್ಯೆ, ಸಂಗೀತ, ಕಲೋಪಾಸಕರ, ವಿದ್ವಾಂಸರ, ರಸಜ್ಞರ ಮನೆತನದಲ್ಲಿ ಹುಟ್ಟಿ ಬೆಳೆದು, ಅವರ ಒಡನಾಟದಿಂದ, ಸಂಸ್ಕಾರ ಬಲದಿಂದ ಹವ್ಯಾಸವಾಗಿ ಜೊತೆಯಲ್ಲಿ ಅಚಿಟಿಬಂದ ವಿದ್ಯೆ ಸಾಹಿತ್ಯ, ಸಂಗೀತದಲ್ಲಿ ಇದ್ದ ಇವರ ಅಪಾರ ಆಸಕ್ತಿ, ಶ್ರದ್ಧೆ, ಭಕ್ತಿ, ಒಲವು ಇವುಗಳನ್ನು ಕಂಡ

ವಿದ್ಯಾಧಿದೇವತೆ ಸರಸ್ವತಿಯೇ ಮನಸೋತು ಇವರಿಗೆ ಸಾಹಿತ್ಯದ ವರವನ್ನೂ ದಯಪಾಲಿಸಿದಳೇನೋ! ಒಟ್ಟಿನಲ್ಲಿ ಸರಸ್ವತಿಯ ವರಪುತ್ರಿ ರಾಜಮ್ಮನವರೆಂದರೆ ಆಶ್ಚರ್ಯವಾಗದು!

ತಿರುಮಲೆ ರಾಜಮ್ಮನವರ ಮನೆತನವನ್ನು ಕುರಿತು ಹೆಚ್ಚಾಗಿ ಪ್ರಸ್ತಾಪಿಸಬೇಕಿಲ್ಲ. ಅವರ ಮನೆತನ ಶತಾವಧಾನಿಗಳ ಮನೆತನ ಎಂದಾಗ ಅವರಿಗೆ ಆಗಿರುವ ಸಂಸ್ಕಾರದ ಹಿರಿಮೆ ನಮಗೆ ತಿಳಿಯುತ್ತದೆ. ಕಲೆ, ಸಂಗೀತ, ಸಾಹಿತ್ಯ ಇವರ ಮನೆತನದಲ್ಲಿ ಮುಪ್ಪರಿಗೊಂಡಿರುವುದನ್ನು ಕಾಣಬಹುದು. ೧೯೦೦ರ ನವೆಂಬರ್ ೨೦ನೇ ತಾರೀಖು ಜನಿಸಿದ ತಿರುಮಲೆ ರಾಜಮ್ಮನವರು ಕಂದಾಡೆ ರಾಘವಾಚಾರ್ಯರ ಹಾಗೂ ಸೀತಮ್ಮನವರ ಮಗಳು. ಕಂದಾಡೆ ರಾಘವಾಚಾರ್ಯರು ಮದನಪಲ್ಲಿಯ ಪುಂಗನೂರಿನ



ಕಡೆಯವರು. ಹೈಸ್ಕೂಲಿನಲ್ಲಿ ವಿಜ್ಞಾನದ ಉಪಾಧ್ಯಾಯರಾಗಿದ್ದರು. ಸಂಸ್ಕೃತವನ್ನು ಚೆನ್ನಾಗಿ ಬಲ್ಲವರಾಗಿದ್ದರು ರಾಜಮ್ಮನವರ ತಾಯಿ ಸೀತಮ್ಮನವರು. ಚಿಕ್ಕಬಳ್ಳಾಪುರದ ಮಹಾಮಹೋಪಾಧ್ಯಾಯ ವಿದ್ವಾನ್ ರಾಜಗೋಪಾಲಾಚಾರ್ಯರು ಒಳ್ಳೆಯ ಮೇಧಾವಿಗಳು, ಚತುಶಾಸ್ತ್ರ ಪಂಡಿತರು. ಶತಾವಧಾನಿಗಳು, ಮಹಾವಾಗಿಗಳು, ಲೂಯಿರೈಸ್‌ರಿಗೆ ಬಲಗೈ ಅಂತೆ ಇದ್ದವರು. ಕಾಶಿಗೆ ಮೂರು ಬಾರಿ ಹೋಗಿ, ಅಲ್ಲಿಯ ಪಂಡಿತರನ್ನು ತಮ್ಮ ವಿದ್ವತ್ತಿನಿಂದ ಮೂರು ಬಾರಿಯೂ ಸೋಲಿಸಿ ಬಂದವರು. ಇಂಥವರ ಮೊಮ್ಮಗಳು ರಾಜಮ್ಮನವರು. ರಾಜಗೋಪಾಲಾಚಾರ್ಯರ ಅಣ್ಣನ ಮೊಮ್ಮಗನೇ ತಿ.ತಾ. ಶರ್ಮರು. ಸೀತಮ್ಮನವರು ತಮ್ಮ ಸೋದರಳಿಯ ತಿ.ತಾ. ಶರ್ಮರಿಗೆ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿ ತಮ್ಮ ತವರಿನ ಸಂಬಂಧವನ್ನು ಉಳಿಸಿಕೊಳ್ಳುವುದರ ಜೊತೆಗೆ, ಆ ಮನೆಯ ವಿದ್ವತ್ತನ್ನು ಉಳಿಸಿಕೊಂಡರು.

**ಶಾಲೆಯಲ್ಲಿದ್ದಾಗ**

ರಾಜಮ್ಮನವರಿಗೆ ಚಿಕ್ಕಂದಿನಿಂದಲೂ ಸಂಗೀತದಲ್ಲಿ ಆಸಕ್ತಿ, ಆಸಕ್ತಿಗೆ ತಕ್ಕಂತಹ ಮಧುರವಾದ ಕಂಠ, ಅದು ದೈವದತ್ತ ವರ. ಪ್ರತಿ ವರುಷವೂ ಶಾಲೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಮೊದಲನೆಯ ಬಹುಮಾನ ರಾಜಮ್ಮನವರಿಗೇ ಮೀಸಲು. ಇದರಿಂದ ಅನೇಕರು ಕರುಬಿದರೂ ಸತ್ಯಸಂಗತಿಯನ್ನು ಮರೆಮಾಚುವಂತಿರಲಿಲ್ಲ. ಜೊತೆಗೆ ನಾಟಕಗಳಲ್ಲಿಯೂ ವಿಶೇಷ ಅಭಿರುಚಿ ಇದ್ದು, ಶಾಲೆಯಲ್ಲಿನ ಅನೇಕ ನಾಟಕಗಳಲ್ಲಿ ಭಾಗವಹಿಸಿ ಅಭಿನಯಿಸುತ್ತಿದ್ದರು. ಅವರ ಸಾವಿತ್ರಿ ಪಾತ್ರದ ಅಭಿನಯಕ್ಕೆ ಬಹುಮಾನ ದೊರೆತಿದೆ. ರಾಜಮ್ಮನವರಿಗೆ ಚಿಕ್ಕಂದಿನಿಂದಲೂ ಮನೆಯಲ್ಲಿಯೂ ಮತ್ತು ಶಾಲೆಯಲ್ಲಿಯೂ ವಿಶೇಷವಾಗಿ ನೈತಿಕ ಶಿಕ್ಷಣ ದೊರೆಯುತ್ತಿತ್ತು. ಈ

ಮೂಲಕ ಹಿಂದೂ ಧರ್ಮ, ಹಿಂದೂ ಸಂಸ್ಕೃತಿ, ಸನಾತನ ಸಂಪ್ರದಾಯ, ದೇವರಲ್ಲಿ ಭಕ್ತಿ, ಗುರು ಹಿರಿಯರಲ್ಲಿ ಗೌರವ ಭಾವನೆ ಇವೆಲ್ಲವೂ ಅವರಿಗೆ ಸಹಜವಾಗಿಯೇ ಉಂಟಾಯಿತು.

ಇಷ್ಟಾದರೂ ರಾಜಮ್ಮನವರು ಚಿಕ್ಕಂದಿನಲ್ಲಿ 'ತುಂಟಿ' ಎನ್ನುವ ಹೆಸರನ್ನು ಗಳಿಸಿದ್ದರು. ಶಾಲೆಗೆ ಎಂದೂ ಸರಿಯಾದ ವೇಳೆಗೆ ಹೋದವರಲ್ಲ. ತಡವಾಗಿ ಹೋಗಿ ಕಡೆಯಲ್ಲಿ ಕುಳಿತುಕೊಳ್ಳುವುದು. 'ತುಂಟಿ' ಎನ್ನುತ್ತಿದ್ದ ಗುರುಗಳೇ 'ಬುದ್ಧಿವಂತೆ" "ಚತುರೆ' ಎಂದು ಸಂತೋಷದಿಂದ ಹೊಗಳುತ್ತಿದ್ದರು. ಮನೆಯಲ್ಲಿ ಸಂಪ್ರದಾಯದ ಹಾಡುಗಳ, ದೇವರನಾಮಗಳ ಕಲಿಯುವಿಕೆಯೂ ಆಗುತ್ತಿದ್ದಿತು. ಇವರಿಗೆ ಸಂಗೀತದಲ್ಲಿ ಇದ್ದ ಆಸಕ್ತಿ, ಅಭಿರುಚಿ ಹಾಗೂ ಕಂಠಮಾಧುರ್ಯವನ್ನು ಕಂಡ ಇವರ ಶಾಲೆಯ ಸಂಗೀತದ ಗುರುಗಳಾದ ಶ್ರೀ ವೆಂಕಟಕೃಷ್ಣಯ್ಯನವರು, ಅವರೇ ಇಷ್ಟಪಟ್ಟು ಇವರ ಮನೆಗೆ ಬಂದು ರಾಜಮ್ಮನವರಿಗೆ ಸಂಗೀತವನ್ನು ಹೇಳಿಕೊಟ್ಟರು.

ವಿದ್ಯೆಯ ಬಗ್ಗೆ ರಾಜಮ್ಮನವರಿಗೆ ವಿಶೇಷ ಆಸಕ್ತಿ ಇದ್ದರೂ ಅಂದಿನ ಸಮಾಜದ ವಾತಾವರಣಕ್ಕೆ ತಕ್ಕಂತೆ, ಅವರು ತಮ್ಮ ವಿದ್ಯಾಭ್ಯಾಸವನ್ನು ಎಂಟನೆಯ ತರಗತಿಗೇ ನಿಲ್ಲಿಸಬೇಕಾಯಿತು. ಇದಕ್ಕೆ ಮೊದಲೇ ಅವರ ೧೧ನೇ ವರ್ಷ ವಯಸ್ಸಿನಲ್ಲಿ ೧೪ರ



ಹರೆಯದಲ್ಲಿದ್ದು, ಹೈಸ್ಕೂಲು ಎರಡನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ತಿ.ತಾ. ಶರ್ಮರೊಡನೆ ವಿವಾಹವಾಯಿತು.

ದೇಶದಲ್ಲೆಲ್ಲಾ ಇಂಗ್ಲೀಷಿನ ವ್ಯಾಮೋಹ ಜನತೆಯನ್ನು ಆಕರ್ಷಿಸಿದ ಕಾಲ ಅದು. ರಾಜಮ್ಮನವರ ತಂದೆ ತಾಯಿಗಳಿಗೂ ತಮ್ಮ ಮಗಳು ಇಂಗ್ಲೀಷನ್ನು ಕಲಿಯಬೇಕು ಎನ್ನುವ ಆಸೆ ಉಂಟಾಯಿತು. ಅದಕ್ಕೆ ರಾಜಮ್ಮನವರಿಗೆ ಗುರು ಮನೆಯಲ್ಲಿಯೇ ಇದ್ದ ಪತಿ ತಿ.ತಾ. ಶರ್ಮರೇ, ಒಂದೇ ಒಂದು ದಿವಸ ಇಂಗ್ಲೀಷಿನ ವ್ಯಾಸಂಗ ನಡೆಯಿತು. ಮಾರನೆಯ ದಿವಸ ಕೈಯಲ್ಲಿ ಒಂದು ಕೋಲನ್ನು ಹಿಡಿದು ಕುಳಿತರು ಗುರುಗಳು, ಸಹಜ ತುಂಟಿಯಾದ ರಾಜಮ್ಮನವರು "ನನಗೆ ನಿಮ್ಮ ಇಂಗ್ಲೀಷ್ ಬೇಡ, ನಿಮ್ಮ ಏಟೂ ಬೇಡ" ಎಂದು ಇಂಗ್ಲಿಷಿಗೆ ತಿಲಾಂಜಲಿಯನ್ನು ಕೊಟ್ಟರು. ರಾಜಮ್ಮನವರು ಇಂಗ್ಲಿಷನ್ನು ಕಲಿಯದೆ ಇದ್ದರೂ ಶಾಲೆಯಲ್ಲಿ ಕಲಿತದ್ದು ಸ್ವಲ್ಪವೇ ಆದರೂ ಆ ವಿದ್ಯೆ ಬಹಳ ಸತ್ವಯುತವಾಗಿದ್ದು, ಉತ್ತಮ ಮಟ್ಟದ್ದಾಗಿದ್ದು, ಅವರ ಬಾಳು ಬೆಳಗಿ ಅರಳುವುದಕ್ಕೆ ಸಹಾಯವಾಯಿತು.

**ಸುಪ್ತವಾಗಿದ್ದ ಸಾಹಿತ್ಯಶಕ್ತಿ**

ಆನಂತರ ಇವರು ಬೆಂಗಳೂರಿಗೆ ಬಂದಾಗ ಮನೆವಾರ್ತೆ ಪೇಟೆಯ ಒಂದು ಮನೆಯಲ್ಲಿ ನೆಲೆಸಿದರು. ಸಮೀಪದಲ್ಲಿಯೇ ಅಮೆಚೂರ್ ಡ್ರಮ್ಯಾಟಿಕ್ ಅಸೋಸಿಯೇಷನ್ ಇದ್ದು, ಅಲ್ಲಿ ನಡೆಯುವ ಅನೇಕ ನಾಟಕಗಳನ್ನು ನೋಡುವ ಅವಕಾಶ ದೊರೆಯಿತು.

ರಾಜಮ್ಮನವರಿಗೆ ಮೊದಲಿನಿಂದಲೂ ನಾಟಕಗಳಲ್ಲಿ ವಿಶೇಷ ಒಲವು. ಅನೇಕ ನಾಟಕಗಳನ್ನು ಓದಿದರು, ಅನುಭವಿಸಿದರು, ಸಂತೋಷಗೊಂಡರು. ತಮ್ಮ ಅರಿವಿಲ್ಲದಂತೆ ಮನಸ್ಸು ಸಾಹಿತ್ಯದ ಕಡೆ ಹರಿದಿತ್ತು.

ಇಂದು ಕನ್ನಡದ ಹಿರಿಯ ಸಾಹಿತಿಯ ಮಡದಿಯೆಂದೂ ತಮ್ಮ ಸ್ವಂತ ಕಾಣಿಕೆಯಿಂದ ಕನ್ನಡದಲ್ಲಿ ಹಿರಿಯ ಸ್ತ್ರೀ ಸಾಹಿತಿಯೆಂದೂ ಪ್ರಸಿದ್ಧರಾಗಿರುವ ರಾಜಮ್ಮನವರ ಮಾತೃಭಾಷೆ ತೆಲುಗು. ಮೊದಲು ತೆಲುಗು ಸಾಹಿತ್ಯವನ್ನು ಬಹಳವಾಗಿ ಓದಿಕೊಂಡರು. ಅದರಲ್ಲಿಯೂ ತೆಲುಗಿನ ಪ್ರಸಿದ್ಧ ಸಾಹಿತಿಯಾದ 'ವೀರೇಶಲಿಂಗಂ'ರವರ ಸಾಹಿತ್ಯವನ್ನೂ ಉಪನ್ಯಾಸವನ್ನೂ ಬಹಳ ಓದಿಕೊಂಡು, ಮೆಚ್ಚಿಕೊಂಡು, ಆನಂತರ ದೇಶ ಭಾಷೆಯಾದ ಕನ್ನಡಕ್ಕೆ ಮನಸೋತರು. ಅಂದಿನ ಪ್ರಸಿದ್ಧ ಕಾದಂಬರಿಕಾರರಾದ ವೆಂಕಟಾಚಾರ್ಯ, ಗಳಗನಾಥ, ವಾಸುದೇವಾಚಾರರ ಕಾದಂಬರಿಗಳನ್ನು ಓದಿದರು. ಜೊತೆಗೆ ಅವರ ಸೋದರಮಾವಂದಿರ, ಅಣ್ಣಂದಿರ ಪ್ರೋತ್ಸಾಹ ಇದ್ದು, ರಾಜಮ್ಮನವರಲ್ಲಿ ಸುಪ್ತವಾಗಿದ್ದ ಸಾಹಿತ್ಯಾಭಿರುಚಿ ಉದ್ದೀಪನಗೊಳ್ಳಲಾರಂಭಿಸಿತು.

**ಒಲವು ಮೊಳೆಯಿತು**

"ಅಂದು ತಮ್ಮ ಮನೆಯೇ ಒಂದು ರಂಗಭೂಮಿಯಾಗಿತ್ತು. ಮನೆಯಲ್ಲಿ ಎಲ್ಲರೂ ಬಣ್ಣ ಬಳಿದುಕೊಂಡು ಓಡಾಡಿದವರೇ. ಅದರಿಂದಲೇ ನಮಗೂ ನಾಟಕಗಳ

ಬಗ್ಗೆ ಸಾಹಿತ್ಯದ ಬಗ್ಗೆ ಒಲವು ಹೆಚ್ಚಾಯಿತೆಂದರೆ ಆಶ್ಚರ್ಯವಿಲ್ಲ" ಎಂದು ರಾಜಮ್ಮನವರೇ ಹೇಳುತ್ತಾರೆ. ತಮ್ಮ ೧೮ನೆಯ ವಯಸ್ಸಿನಲ್ಲಿ ರಾಜಮ್ಮನವರು ತೆಲುಗಿಗೆ ಅನುವಾದವಾಗಿದ್ದ ರವೀಂದ್ರರ 'ದೃಢಪ್ರತಿಜ್ಞೆ' ಎನ್ನುವ ಕಾದಂಬರಿಯನ್ನು ತೆಲುಗಿನಿಂದ ಕನ್ನಡಕ್ಕೆ ಭಾಷಾಂತರ ಮಾಡಿದರು. ಅದೇ ವೇಳೆಗೆ ತಿ.ತಾ. ಶರ್ಮರೂ ಪ್ರಾಕ್ತನ ಸಂಶೋಧನೆಯಲ್ಲಿ ಕೆಲಸಕ್ಕೆ ಸೇರಿದರು. ಅವರ ಜೊತೆಯಲ್ಲಿ ಇತಿಹಾಸ ಹಾಗೂ ಪುರಾಣ ಪ್ರಸಿದ್ಧವಾದ ಊರುಗಳನ್ನು ಸುತ್ತುವ, ಅಲ್ಲಿನ ಸ್ಥಳಮಹಿಮೆಗಳನ್ನು ತಿಳಿಸುವ ಶಾಸನಗಳನ್ನೂ ವೀರಸತಿ ಮಹಾಸತಿ ಕಲ್ಲುಗಳನ್ನೂ ಕಾಣುವ ಅವಕಾಶ ದೊರೆತು, ಅವುಗಳ ಬಗ್ಗೆ ಹೆಚ್ಚಿನ ಆಸಕ್ತಿ ಉಂಟಾಯಿತು ರಾಜಮ್ಮನವರಿಗೆ, ಅದೇ ವೇಳೆಗೆ ಮದ್ರಾಸಿನಲ್ಲಿ ಬೆನಗಲ್ ರಾಮರಾಯರ, ಪಂಜೆ ಮಂಗೇಶರಾಯರ ಪರಿಚಯವೂ ಆದದ್ದು ರಾಜಮ್ಮನವರ ಸಾಹಿತ್ಯಾಭಿರುಚಿಯ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರಿತು. ಸಹಜ ಪ್ರತಿಭೆಯ ಜೊತೆಗೆ ಪಾಂಡಿತ್ಯವೂ ಜೀವನಾನುಭವವೂ ಬೆರೆತು, ಸ್ವಂತ ಹಾಡುಗಳ, ಕವನಗಳ, ನಾಟಕಗಳ ರಚನೆಯಾಗಲು ಅವಕಾಶವಾಯಿತು.

**ವೀಣೆಯ ಪಾಠ**

ಸಾಹಿತ್ಯದ ಬೆಳವಣಿಗೆಯ ಜೊತೆಯಲ್ಲಿಯೇ ಸಂಗೀತದ ಬೆಳವಣಿಗೆಯೂ ರಾಜಮ್ಮನವರಲ್ಲಿ ಮುಂದುವರಿಯುತ್ತಿತ್ತು. ಬೆಂಗಳೂರಿನಲ್ಲಿ ಅವರು ನೆಲೆಸಿದಾಗ, ವೀಣಾವಿದ್ವಾನ್ ಗೋಪಾಲರಾಯರಿಂದ ಹಾಗೂ ತಾಯಪ್ಪನವರಿಂದ ವೀಣೆ ಪಾಠವಾಯಿತು. ಗುರುಗಳ ಬಗ್ಗೆ, ರಾಜಮ್ಮನವರಿಗೆ ಅಪಾರ ಭಕ್ತಿ, ಗೌರವ, ಪೂಜ್ಯ ಭಾವನೆ. ಇವುಗಳಿಗೆ ತಕ್ಕಂತೆ ವಿದ್ಯೆಯಲ್ಲಿ ಆಳವಾದ ಶ್ರದ್ಧೆ. ಇವುಗಳಿಂದಲೇ ಇಂತಹ ಶಿಷ್ಯಳಿಗೆ ಪಾಠ ಹೇಳಿಕೊಟ್ಟರೆ ನಾವು ವಿದ್ಯೆ ಕಲಿತದ್ದಕ್ಕೂ ಸಾರ್ಥಕ ಎಂದು ಗುರುಗಳಿಂದ ರಾಜಮ್ಮನವರು ಹೊಗಳಿಕೊಳ್ಳಲು ಸಮರ್ಥರಾದರು. ಅದಕ್ಕಾಗಿ ರಾಜಮ್ಮನವರು ಎಷ್ಟು ಅಭ್ಯಾಸ ಮಾಡಿದರೋ! ಎಷ್ಟು ಕಷ್ಟಪಟ್ಟರೋ!! ಮುಂದೆ ರಾಜಮ್ಮನವರು ವೀಣೆ ಶೇಷಣ್ಣನವರ ಶಿಷ್ಯತ್ವವನ್ನು ಸಂಪಾದಿಸಿದರು. ಹೀಗೆ ಸಂಗೀತ ಸಾಹಿತ್ಯಗಳೆರಡನ್ನೂ ಸರಿ ಸಮಾನವಾಗಿ ಚಿಕ್ಕವಯಸ್ಸಿನಲ್ಲಿಯೇ ಆರ್ಜಿಸಿಕೊಂಡ ಹಿರಿಮೆ ರಾಜಮ್ಮನವರದು.

ಅದೇ ಸಮಯದಲ್ಲಿ ಮದ್ರಾಸಿನಲ್ಲಿ ಮಹಾತ್ಮಜೀಯವರ ಮೊಟ್ಟ ಮೊದಲನೆಯದರ್ಶನವಾಯಿತು. ಅವರ ಬಗ್ಗೆ ಮೊದಲೇ ಮೂಡಿದ್ದ ಪೂಜ್ಯ ಭಾವನೆಗಳೆಲ್ಲಾ ಅವರನ್ನು ಕಾಣುತ್ತಿದ್ದಂತೆಯೇ ಇಮ್ಮಡಿಗೊಂಡವು, ಮುಮ್ಮಡಿಗೊಂಡವು. ಮೂರನೆಯ ದಿವಸವೇ ಸ್ಫೂರ್ತಿಗೊಂಡಿದ್ದ ರಾಜಮ್ಮನವರ ಚೇತನ "ದೇಶ ಸೇವಾ ನಿರತರಾಗಿರೆ ಲೋಗರೇ" ಎನ್ನುವ ಕವನವನ್ನು ರಚಿಸಿತು. ಇದೇ ರಾಜಮ್ಮನವರು ರಚಿಸಿದ ಮೊಟ್ಟ ಮೊದಲನೆಯ ಕವನ. ಅಂದಿನ ಸಂಜೆಯ ಸಭೆಯಲ್ಲಿ ಬೆನಗಲ್ ರಾಮರಾಯರು ಪಿ. ಕೋದಂಡರಾಯರು ಇದ್ದರು. ಆ ಸಭೆಯಲ್ಲಿ ರಾಜಮ್ಮನವರು ಈ ಕವನವನ್ನು ಹಾಡಿದರು. ಅಂದಿನ ವಾತಾವರಣಕ್ಕೆ ಆ ಹಾಡು ಹೆಚ್ಚಿನ ಪುಷ್ಟಿಯನ್ನು ಕೊಟ್ಟಿದ್ದಲ್ಲದೆ ರಾಜಮ್ಮನವರ ಕೀರ್ತಿಯೂ ಹರಡಲಾರಂಭಿಸಿತು.

ಅಂದಿನಿಂದಲೇ ರಾಜಮ್ಮನವರ ತನುಮನಗಳಲ್ಲಿ 'ದೇಶ ಸೇವೆಯೇ ಈಶ ಸೇವೆ' ಎನ್ನುತ ತಾರಕಮಂತ್ರ ಮಿಡಿಯಲಾರಂಭಿಸಿತು. ಅದೇ ದಿವಸ ನಾಲ್ಕು ಆಣೆಗಳನ್ನು ಕೊಟ್ಟು ಕಾಂಗ್ರೆಸ್ಸಿನ ಸಮಸ್ಯೆಯೂ ಆದರೂ. ೫-೨-೧೯೬೮ 'ಭಾರತ ಪುತ್ರಿ' ಭಾರತಿ

ಇಲ್ಲಿಯವರೆಗೂ ಶಾಂತರೀತಿಯಿಂದ ನಡೆದುಬಂದ ರಾಜಮ್ಮನವರ ಜೀವನ, ಈಗ ಕ್ರಾಂತಿಯ ಕಡೆಗೆ ತಿರುಗಿತು. ಭಾರತದಿಂದ ಬ್ರಿಟಿಷರನ್ನು ಓಡಿಸುವ ಸಲುವಾಗಿ ಮಹಾತ್ಮಗಾಂಧಿಯವರ ನೇತೃತ್ವದಲ್ಲಿ ಭಾರತದ ಜನ ಎಚ್ಚೆತ್ತು ಕಾರ್ಯಸಾಧಿಸಲು ಧೈರ್ಯದಿಂದ, ಉತ್ಸಾಹದಿಂದ, ಹುಮ್ಮಸ್ಸಿನಿಂದ ಮುನ್ನುಗ್ಗುತ್ತಿದ್ದ ಕಾಲ ಅದು. ನಾಡು ನುಡಿಗಳ ಅಭಿಮಾನಿಗಳಾದ ಈ ಕಿರು ವಯಸ್ಸಿನ, ಬಿಸಿರಕ್ತದ ತರುಣದಂಪತಿಗಳ ಮನಸ್ಸನ್ನು ಸಹಜವಾಗಿಯೇ ಅಂದಿನ ವಾತಾವರಣ ಸೆರೆ ಹಿಡಿಯಿತೆಂದರೆ ಆಶ್ಚರ್ಯವಿಲ್ಲ. ತಾವು ಇಲ್ಲಿಯವರೆಗೂ ಕಲಿತ ಗಳಿಕೆಯೆಲ್ಲಾ ದೇಶಸೇವೆಯ ಕಾರ್ಯಕ್ಕೆ ಮೀಸಲಾಯಿತು. ಅಂದಿನ ಜನತೆಗೆ ಬ್ರಿಟಿಷರಿಂದ ಆಗುತ್ತಿರುವ ಅನ್ಯಾಯಗಳನ್ನು ಕುರಿತು ಕೆಲವು ಹಾಡುಗಳ ರಚನೆಯಾದರೆ ಇನ್ನು ಕೆಲವು ಉತ್ಸಾಹಿ ತರುಣ ದೇಶಪ್ರೇಮಿಗಳಿಗೆ ಶಕ್ತಿಯನ್ನು ಪ್ರಚೋದಿಸುವ ಗೀತೆಗಳು ರಚಿತವಾದವು. ರಾಜಮ್ಮನವರಿಂದ ದೇಶಪ್ರೇಮದ ಬಗ್ಗೆ, ರಾಷ್ಟ್ರಪ್ರೇಮಿಗಳ ಬಗ್ಗೆ ಅದೆಷ್ಟು ಬಿಡಿ ಕವನಗಳ ಹಾಡುಗಳ, ಭಾವಗೀತೆಗಳ ರಚನೆ ಆಯಿತೋ! ಹೀಗೆ ಎಲ್ಲಾ ಹಾಡುಗಳಲ್ಲಿಯೂ ಬ್ರಿಟಿಷರ ಖಂಡನೆ, ದೇಶಪ್ರೇಮ ಎದ್ದು ಕಾಣುತ್ತಿದ್ದು ಅವುಗಳನ್ನು ಅಚ್ಚು ಹಾಕಿಸಲು ಯಾರೂ ಮುಂದೆ ಬರಲು ಹೆದರುತ್ತಿದ್ದರು. ಇದಾದ ಕೆಲವು ದಿವಸಗಳ ಅನಂತರ ತಿ.ತಾ. ಶರ್ಮರು ಮಂಗಳೂರಿಗೆ ಯಾವುದೋ ಸರ್ಕಾರಿ ಕೆಲಸದ ಮೇಲೆ ಹೋಗಬೇಕಾಯಿತು. ರಾಜಮ್ಮನವರ ಪ್ರವಾಸವೂ ಜೊತೆಯಲ್ಲಿ ಇದ್ದುದೆ. ಆಗ ಅಸಹಕಾರ ಚಳುವಳಿ ನಡೆಯುತ್ತಿದ್ದ ಕಾಲ, ಅದೇ ಸಮಯದಲ್ಲಿ "ಸ್ವರಾಜ್ಯ ಪರಿಷತ್ತು" ಎನ್ನುವ ಉತ್ತಮ ದೇಶಪ್ರೇಮ ಗೀತೆಯು ರಾಜಮ್ಮರಿಂದ ರಚಿತವಾಯಿತು. ಅದನ್ನು "ತಿಲಕ ಸಂದೇಶ" ಎನ್ನುವ ಪತ್ರಿಕೆಯಲ್ಲಿ ಡಿ.ಕೆ. ಭಾರದ್ವಾಜರು ಅಚ್ಚು ಹಾಕಿಸಿದರು. ಸರಕಾರದ, ಭಯದಿಂದಾಗಿ ರಾಜಮ್ಮನವರ ಹೆಸರು ಆ ಪತ್ರಿಕೆಯಲ್ಲಿ "ಭಾರತ ಪತ್ರಿ" ಎಂದು ಅಚ್ಚಾಯಿತು. ಆಗ ಶ್ರೀ ಕೃಷ್ಣಮಾಚಾರರು ತಿ.ತಾ. ಶರ್ಮರ ಮೇಲಧಿಕಾರಿಯಾಗಿದ್ದವರು; ಕನ್ನಡ, ಇಂಗ್ಲಿಷ್, ತೆಲುಗು ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡು ಬಲ್ಲವರಾಗಿದ್ದವರು, ಮೇಲಾಗಿ ದೇಶಪ್ರೇಮಿಗಳು. ಅವರು "ಭಾರತ ಪತ್ರಿ" ಎನ್ನುವ ಹೆಸರಿಗೆ ಬದಲಾಗಿ "ಭಾರತೀ" ಎನ್ನುವ ಹೆಸರಷ್ಟೇ ಸಾಕೆಂದು ಸೂಚಿಸಿದರು. ಅನಂತರ ರಾಜಮ್ಮನವರ ಹೆಸರು "ಭಾರತಿ" ಯಾಗಿ, ಅದೇ ಕಾವ್ಯನಾಮವಾಯಿತು. ಹೀಗೆ ಈ ಹೆಸರಿನ ಹಿನ್ನೆಲೆಯಾಗಿ ಒಂದು ಇತಿಹಾಸವೇ ಅಡಗಿದೆ. ಅದೇ ದಿವಸ ಸಂಜೆ ಮಂಗಳೂರಿನಲ್ಲಿ ರಾಜಮ್ಮನವರು ವೀಣಾ ಕಛೇರಿಯನ್ನು ನಡೆಸಿದರು. ಸಮಾರಂಭ ಚೆನ್ನಾಗಿ ನಡೆದು ಜನತೆಯಿಂದ ಉತ್ತೇಜನ ದೊರೆಯಿತು.

**ಕೈಲಾಸಂ ಪರಿಚಯ**

ಇತ್ತ ನಾಟಕಶಿರೋಮಣಿ ಕೈಲಾಸಂ ಪರಿಚಯವಾಗಿ ಮನೆಯಲ್ಲಿಯ ಒಬ್ಬ ಅಣ್ಣನಂತಾದರು. ಅವರ ಪ್ರಭಾವ ಸಹಜವಾಗಿ ರಾಜಮ್ಮನವರ ಮೇಲೆ ಆಯಿತೆಂದರೆ ಆಶ್ಚರ್ಯವೇನಿಲ್ಲ. ಅವರ ನಾಟಕ ಕಲೆಗೆ, ಪ್ರಭುತ್ವಕ್ಕೆ, ಪಾಂಡಿತ್ಯಕ್ಕೆ ಮಾರುಹೋಗಿ



ರಾಜಮ್ಮನವರಿಗೆ ಅವರ ಬಗ್ಗೆ ಪೂಜ್ಯ ಭಾವನೆ ಉಂಟಾಯಿತು. ಅದಕ್ಕೆ ಕುರುಹಾಗಿ ಕೈಲಾಸಂ ತೀರಿದಾಗ "ಆರ್ಯ ಕೈಲಾಸಂ" ಎಂದು ಪೂಜ್ಯತೆಯಿಂದ ಕರೆದು, ಅವರ ಜೀವನ ಚರಿತ್ರೆಯನ್ನು ಬರೆಯುವುದರ ಮೂಲಕ ಆತನ ಋಣವನ್ನು ಸ್ವಲ್ಪಮಟ್ಟಿಗೆ ತೀರಿಸಿದ್ದಾರೆ. ಅದರಿಂದ, ಮನೆಯವರೆಲ್ಲರಿಂದಲೂ ದೊರೆತ ಪ್ರೇರಣೆ, ಪ್ರೋತ್ಸಾಹದಿಂದ ರಾಜಮ್ಮನವರು ನಾಟಕಗಳನ್ನು ಬರೆಯಲು ತೊಡಗಿದರು. ಇವರು ಬರೆದ 'ಕಪಟನಾಟಕ'ಕ್ಕೆ ಅಮೆಚೂರ್ ಡ್ರಮೇಟಿಕ್ ಅಸೋಸಿಯೇಷನ್‌ನಿಂದ ಬಹುಮಾನವೂ ದೊರೆಯಿತು. ಜೊತೆಗೆ ಇವರ ಮತ್ತೊಂದು ನಾಟಕ 'ತಪಸ್ವಿನಿ'ಗೆ ಮೈಸೂರಿನ ವಿಶ್ವವಿದ್ಯಾನಿಲಯದಿಂದ ಬಹುಮಾನ ದೊರೆಯಿತು. ಕನ್ನಡಿಗರಿಗೆ ಇವರ ಪ್ರತಿಭೆ ಪರಿಚಯವಾಯಿತು. ಕನ್ನಡಮ್ಮ ಇವರಿಂದ ಸೇವೆಯನ್ನು ಮಾಡಿಸಿಕೊಳ್ಳಲು ಸಿದ್ಧಳಾದಳು.

**ವೀಣೆ ಶೇಷಣ್ಣನವರ ಬಳಿ**

ಸಾಹಿತ್ಯದ ಬೆಳವಣಿಗೆಯ ಜೊತೆಜೊತೆಯಲ್ಲಿಯೇ ಸಂಗೀತದ ಅಭ್ಯಾಸವೂ ನಡೆಯುತ್ತಿತ್ತು. ರಾಜಮ್ಮನವರು ಮೈಸೂರಿನಲ್ಲಿ ನಿಂತು, ಆಸ್ಥಾನ ವಿದ್ವಾನ್ ವೈಣಿಕ ಶಿರೋಮಣಿ ವೀಣೆ ಶೇಷಣ್ಣನವರ ಬಳಿಯಲ್ಲಿ ವೀಣೆ ಅಭ್ಯಾಸವನ್ನು ಮುಂದುವರಿಸಿದರು. ಗುರುಗಳಲ್ಲಿ ಅಪಾರ ಭಕ್ತಿ, ಗೌರವ ಶಿಷ್ಯಳಿಗೆ, ಗುರುವಿಗೆ ಶಿಷ್ಯಳ ಬಗ್ಗೆ ಅಪಾರ ಕರುಣೆ ಪ್ರೀತಿ, ಗುರುವಿನ ಮನಸ್ಸನ್ನು ತನ್ನ ಬುದ್ಧಿವಂತಿಕೆಯಿಂದ ಶಿಷ್ಯ ಗೆದ್ದಳು. ಗುರು ತನ್ನ ಔದಾರ್ಯದಿಂದ ಶಿಷ್ಯಳ ಮನಸ್ಸನ್ನು ಗೆದ್ದರು. ರಾಜಮ್ಮನವರು ಗುರುದಕ್ಷಿಣೆಯನ್ನು ವಿದ್ಯೆಯ ಮೂಲಕ, ಸಂಗೀತದ ಮೂಲಕ ಮಾತ್ರ ಸಲ್ಲಿಸದೆ, ಸಾಹಿತ್ಯದ ಮೂಲಕವೂ ಅರ್ಪಿಸಿದರು.

"ಆಸ್ಥಾನ ವಿದ್ವಾನ್ ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರು" ಎನ್ನುವ ರಾಜಮ್ಮನವರ ಗ್ರಂಥ ಗುರುವಿಗೆ ಅರ್ಪಿಸಿದ ಕಾಣಿಕೆ ಆದಂತೆ, ಕನ್ನಡ ಸಾಹಿತ್ಯಕ್ಕೂ ಕೊಟ್ಟ ಒಂದು ಉತ್ತಮ ಕೃತಿ.

ಇಡೀ ಭಾರತದಲ್ಲೇ ಸ್ವರಾಜ್ಯ, ಸ್ವಾತಂತ್ರ್ಯ ಎಂಬ ಕೂಗು ಕೇಳುತ್ತಿದ್ದು, ಅದೇ ಸಮಯದಲ್ಲಿ ಅಹಮದಾಬಾದಿನಲ್ಲಿ ಕಾಂಗ್ರೆಸ್ಸಿನ ಮಹಾಸಭೆಯ ಆಶ್ರಯದಲ್ಲಿ ಸಂಗೀತ ಸಮ್ಮೇಳನ ನಡೆಯಿತು. ಆ ಸಮ್ಮೇಳನಕ್ಕೆ ಹೋಗುವ ಕುತೂಹಲ ರಾಜಮ್ಮನವರಿಂದ ಅರ್ಜಿ ಹಾಕಿಸಿತು. ಆಸೆ ನೆರವೇರಿತು. ಮಹಾತ್ಮಾ ಗಾಂಧಿಯವರನ್ನೂ ದೇಶಭಕ್ತರನ್ನೂ ಸಂಗೀತ ವಿದ್ವಾಂಸನ್ನೂ ಕಾಣುವ ಅತೀವ ಹಂಬಲ ರಾಜಮ್ಮನವರಲ್ಲಿ ತುಂಬಿತು. ಅದಕ್ಕೆ ತಿ.ತಾ. ಶರ್ಮರ ಪ್ರೋತ್ಸಾಹವೂ ದೊರೆಯಿತು. ಆ ವೇಳೆಗಾಗಲೇ ತಮ್ಮ ಸಹಜ ಪಾಂಡಿತ್ಯ ಪ್ರತಿಭೆಗಳಿಂದ ಸಾಕಷ್ಟು ಪ್ರಸಿದ್ಧಿ ಹೊಂದಿದ್ದ ರಾಜಮ್ಮನವರು ರಾಜಾಜಿಯವರಿಂದ ಮಹಾತ್ಮಾಗಾಂಧಿಯವರನ್ನು ಕಾಣಲು ಒಂದು ಪತ್ರವನ್ನು ಪಡೆದು ಅಹಮದಾಬಾದಿಗೆ ಪ್ರಯಾಣ ಹೊರಟರು.

ರಾಜಾಜಿ ಪರಿಚಯ ಪತ್ರ

ಆ ಪತ್ರದ ಒಕ್ಕಣೆ ಹೀಗಿತ್ತು: “ಈ ಪತ್ರವನ್ನು ತಂದಿರುವ ತರುಣಿ ದೇಶಾಭಿಮಾನಿ, ಕಲಾವಿದೆ, ಚೆನ್ನಾಗಿ ವೀಣೆಯನ್ನು ನುಡಿಸುತ್ತಾಳೆ, ಹಾಡಿಸಿ ಕೇಳುವುದಾದರೆ ಸಂತೋಷ,

ಅವಕಾಶವಿಲ್ಲವಾದರೆ ನಿಮ್ಮ ಸ್ವಂತ ಪುತ್ರಿಯಂತೆ, ತಿಳಿದು ಹರಸಬೇಕು" ರಾಜಮ್ಮನವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಹ ಮಾತುಗಳು. ಅದೂ ರಾಜಾಜಿಯವರ ಮೆಚ್ಚುಗೆಯ ನುಡಿಗಳು, ಅಹಮದಾಬಾದನ್ನು ತಲುಪಿದ್ದಾಯಿತು. ಮಹಾತ್ಮಗಾಂಧೀಜಿಯವರ, ದೇಶಭಕ್ತರ, ಸಂಗೀತ ವಿದ್ವಾಂಸರ ಹಿರಿದಾದ ಕೂಟ ರಾಜಮ್ಮನವರಿಗೆ ಯಾವುದೋ ಒಂದು ಹೊಸಲೋಕದ ದರ್ಶನವಾದಂತಾಗಿ ಆನಂದದಿಂದ ಪುಳಕಿತರಾದರು. ಅಲ್ಲಿನ ಕಾರ್ಯಕ್ರಮಗಳು 'ಜೈ ಭಾರತ ಭುವಿಗೆ' ಎನ್ನುವ ಇವರ ಸ್ವಂತ ರಚನೆಯ ಹಾಡಿನ ಪ್ರಾರ್ಥನೆಯಿಂದಲೇ ಪ್ರಾರಂಭವಾಯಿತು. ಗಾಂಧೀಜಿಯವರು ಮನಸ್ಸಿಟ್ಟು ಕೇಳಿದರು, ಸಂತೋಷಗೊಂಡರು. ಅಂದೇ ಸಂಜೆ ರಾಜಮ್ಮನವರು ಪ್ರಾರ್ಥನಾ ಸಮಯದಲ್ಲಿ ಯಾರಿಗೂ ತಿಳಿಸದೆ 'ದರ್ಶನ್, ದರ್ಶನ್' ಎಂದು ಕೂಗುತ್ತ ಮುಂಬರಿಯುತ್ತಿರುವ ಜನರ ಮಧ್ಯೆ ಗಾಂಧೀಜಿಯವರ ಶಿಬಿರದತ್ತ ನಡೆದರು. ಗಾಂಧೀಜಿಯನ್ನು ಕಂಡು ಮಾತನಾಡಿದರು. ಅಂದಿನ ಅವರ ಆನಂದಕ್ಕೆ ಇನ್ನೆಲ್ಲಿಯ ಎಣೆ. ಗಾಂಧೀಜಿಯವರು ಈಕೆಯನ್ನು ಗುರುತಿಸಿದ್ದು ಮಾತ್ರವಲ್ಲದೆ, ಇಲ್ಲಿ ಇರುವವರೆಗೂ ರಾಜಮ್ಮನವರು ನಿತ್ಯವೂ ಹಾಡಬೇಕೆಂದೂ ಕರ್ನಾಟಕಕ್ಕೆ ತಾವು ಬಂದಾಗಲೂ ಅವರು ಬಂದು ಹಾಡಬೇಕೆಂದೂ ಹೇಳಿ ಆಶೀರ್ವದಿಸಿ ಕಳುಹಿಸಿಕೊಟ್ಟರು.

ಇನ್ನೊಮ್ಮೆ ೧೯೨೪ರಲ್ಲಿ ಬೆಳಗಾಂನಲ್ಲಿ ರಾಷ್ಟ್ರೀಯ ಮಹಾಸಭೆ ನಡೆಯಿತು. ಆಗ ರಾಜಮ್ಮನವರು ಬಾಣಂತಿಯಾಗಿದ್ದು, ಆ ಸಭೆಗೆ ಹೋಗಲಾಗಲಿಲ್ಲ. ಆದರೆ ಗಾಂಧೀಜಿಯವರು ತಂಗಿ ರಾಜಮ್ಮನನ್ನು ವಿಚಾರಿಸಿ, ಮುದವೀಡು ಕೃಷ್ಣರಾಯರಿಗೆ ತಿಳಿಸಿ, ರಾಜಮ್ಮನವರಿಗೆ ತಂತಿ ಕೊಡಿಸಿ ಕರೆಸಿಕೊಂಡರು. ಇಂತಹ ಭವ್ಯಚೇತನ ರಾಜಮ್ಮನವರದು. ಬೆಂಗಳೂರಿಗೆ ಮಹಾತ್ಮಾಗಾಂಧೀಜಿಯವರು ಬಂದಾಗಲೂ ರಾಜಮ್ಮನವರ ಸಂಗೀತದ ಔತಣ ಮಹಾತ್ಮಾ ಜೀಯವರಿಗೆ ಗಾಂಧೀಜಿಯವರ ಮೇಲಿನ ಭಕ್ತಿಯ ಸಂಕೇತವಾಗಿ ತಮ್ಮ ಮಗನನ್ನು 'ಬಾಪೂ' ಎಂದೇ ರಾಜಮ್ಮ ದಂಪತಿಗಳು ಕರೆಯುತ್ತಾರೆ.

**ಎಲ್ಲವೂ ಸಿಹಿಯಲ್ಲ**

ಇದೆಲ್ಲವನ್ನು ಗಮನಿಸಿದಾಗ ರಾಜಮ್ಮನವರ ಬಾಳು ಹೂವಿನಂತಿರಬಹುದೆಂಬ ನಂಬಿಕೆ ಮೂಡಿದರೂ ಅಲ್ಲಲ್ಲಿಯೇ ಕಹಿ ಘಟನೆಗಳು ನಡೆದು, ಜೀವನದ ತತ್ವವನ್ನು ಅವರು ಇನ್ನೂ ಚೆನ್ನಾಗಿ ಅರಿಯುವಂತೆ ಮಾಡಿವೆ. ಅವರೇ ಹೇಳುವಂತೆ 'ನಮ್ಮ ಜೀವನವೇ ಒಂದು ಹೋರಾಟ, ನಮ್ಮ ಬದುಕೇ ಒಂದು ಜಂಜಾಟ' ಎಂದು! ಒಡಹುಟ್ಟಿದ ಅಣ್ಣನಂತಿದ್ದ ಕೈಲಾಸಂ ತೀರಿಹೋಗುತ್ತಿದ್ದ ಹಾಗೆ ಅವರ ಒಬ್ಬಳೇ ಮಗಳು ಜಯಳ ನಿಧನ, ನಂತರ ಸ್ವಲ್ಪ ದಿವಸಗಳಲ್ಲಿಯೇ ತಾಯಿ, ರಾಜಮ್ಮ ಆ ಪೆಟ್ಟಿನಿಂದ ಚೇತರಿಸಿಕೊಂಡು ಏಳುವುದಕ್ಕೆ ಮೊದಲೇ ಅಚ್ಚುಮೆಚ್ಚಿನ ಅಣ್ಣ - ಹೀಗೆ ಸಾವಿನ ಪರಂಪರೆಯೇ ಮನೆಯಲ್ಲಿ ನಡೆದಾಗ, ರಾಜಮ್ಮನವರಿಗೆ ಜೀವನವೇ ಬೇಡ ಎನ್ನಿಸಿದ್ದು ಉಂಟು. ಆಗ ಆ ಮಾನಸಿಕ ತೊಂದರೆಯ ಜೊತೆಗೆ ಅನಾರೋಗ್ಯವೂ ಅವರನ್ನು ಕಾಡಿಸಿತು. ಆಗ ಅವರ ಮನಸ್ಸಿಗೆ ಎಷ್ಟು

ಬೇಸರವಾಯಿತೆಂದರೆ ಆಳವಾಗಿ ಅಭ್ಯಾಸ ಮಾಡಿದ, ಜೀವದ ಉಸಿರಿನಂತೆ ಜೊತೆಯಲ್ಲಿಯೇ ಸಾಗಿ ಬಂದಿದ್ದ ಸಂಗೀತ



ಸಾಹಿತ್ಯಗಳೂ ಬೇಡವಾಯಿತು, ಬೇಸರ ತಂದಿತು, ಕೇವಲ ತೋಟಗಾರಿಕೆಯಲ್ಲಿ ಕೆಲವು ದಿವಸ ಮನಸ್ಸು ನಾಟಿತು. ಆದರೆ ಇವರ ಪಾಂಡಿತ್ಯ ಪ್ರತಿಭೆಗಳ ಪರಿಚಯವನ್ನು ಪಡೆದಿದ್ದ ಕನ್ನಡ ಜನತೆ ಇವರನ್ನು ಹಾಗೆಯೇ ಬಿಡಲು ಇಷ್ಟಪಡಲಿಲ್ಲ. ಅವರುಗಳು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದಕ್ಕಾಗಿಯಾದರೂ ರಾಜಮ್ಮನವರು ಮತ್ತೆ ಸಂಗೀತ ಸಾಹಿತ್ಯಕ್ಕೆ ಕೈ ಹಾಕಬೇಕಾಯಿತು. ಹೀಗೆ ಇವರು ಒಲ್ಲೆನೆಂದರೂ ಸರಸ್ವತಿ ಇವರಿಂದ ಇಚ್ಛೆಪಟ್ಟು ಸೇವೆ ಮಾಡಿಸಿಕೊಳ್ಳುತ್ತಿದ್ದಳು.

ರಾಜಮ್ಮನವರು, ಸ್ವರ ಪ್ರಸ್ತಾರಗಳನ್ನು ಹಾಕಿ, ವಿಶಿಷ್ಟ ರೀತಿಯಲ್ಲಿ ನೂರಾರು ಗೀತೆಗಳನ್ನು ರಚಿಸಿ ಸಂಗೀತ ಸಾಹಿತ್ಯವನ್ನು ಹೆಚ್ಚಿಸಿದ್ದಾರೆ. ಇವರ ಮೂವತ್ತು ಗೀತೆಗಳನ್ನು ಆಕಾಶವಾಣಿಯವರು ತೆಗೆದುಕೊಂಡಿರುವುದಲ್ಲದೆ, ಕೆಲವನ್ನು ಹಾಡಿಸಿದ್ದಾರೆ.

**ಮಹಿಳಾಗೋಷ್ಠಿ ಅಧ್ಯಕ್ಷೆ**

ರಾಜಮ್ಮನವರು ತಮ್ಮ ಸಾಹಿತ್ಯ ಸೇವೆಯಿಂದ ೧೯೪೩ನೆಯ ಇಸವಿಯಲ್ಲಿ ಶಿವಮೊಗ್ಗೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿಯ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು. ಅಂದಿನ ಅವರ ಭಾಷಣ ಅತ್ಯಂತ ವಿದ್ವತ್ಪೂರ್ಣವಾಗಿದ್ದು ವಿಚಾರಯುಕ್ತವಾಗಿದೆ.

ಅನೇಕ ಸಭೆಗಳಲ್ಲಿ ಸ್ವಾರಸ್ಯವಾಗಿ ಭಾಷಣಗಳನ್ನು ಮಾಡುವುದಲ್ಲದೆ ಅನೇಕ ಸಭೆಗಳಲ್ಲಿ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸಿಕೊಡುತ್ತಾರೆ. ಇಂದಿಗೂ ಅನೇಕ ಸಂಘ ಸಂಸ್ಥೆಗಳಲ್ಲಿ ಸದಸ್ಯೆಯಾಗಿದ್ದು, ಚಟುವಟಿಕೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಇಂದಿಗೂ ೭೮ ವಯಸ್ಸಿನ ರಾಜಮ್ಮನವರು “ಜೀವನಾನುಭವ ಹೆಚ್ಚಾಗಿದ್ದು, ಸಾಹಿತ್ಯವನ್ನು ಇನ್ನೂ ಹೆಚ್ಚು ಸತ್ವಯುತನ್ನಾಗಿ ಸೃಜಿಸಬೇಕೆಂಬ ಅಪೇಕ್ಷೆ ಇದ್ದರೂ ದೈಹಿಕ ಶ್ರಮದಿಂದಾಗಿ ಅದು ಸಾಧ್ಯವಾಗದು” ಎಂದು ಚಿಂತಿಸುತ್ತಾರೆ, ನೊಂದು ನುಡಿಯುತ್ತಾರೆ. ಅವರ ಮನೆಗೆ ಹೋಗಿ ನೋಡಿದರೆ, ನಡುಮನೆಯ ತುಂಬಾ ವೀಣೆಗಳೇ! ಇಂದು ಕಲಾಸಕ್ತಿ ಇರುವ ವಿದ್ಯಾರ್ಥಿನಿಯರಿಗೆ ಪಾಠ ಬೋಧಿಸುವ ಗುರುವಾಗಿದ್ದಾರೆ. ವೀಣೆ ಹಿಡಿದು ಕುಳಿತ ರಾಜಮ್ಮನವರು ವಾಗ್ದೇವಿ ವರಪುತ್ರಿಯಂತೆ ಕಾಣುತ್ತಾರೆ.

ಸೌಮ್ಯ ಮುಖಮುದ್ರೆಯಲ್ಲಿ ಕಾಂತಿಯಿಂದ ಹೊಳೆಯುವ ಕಣ್ಣುಗಳು, ಮಾತನಾಡಿದರೆ ವೀಣೆ ನುಡಿದಂತೆ ಹೊರ ಹೊಮ್ಮುವ ಮಧುರ ಧ್ವನಿ, ಎಂಥವರ ಮನಸ್ಸನ್ನೂ ಕ್ಷಣ ಕಾಲದಲ್ಲಿಯೇ ಸೆರೆಹಿಡಿಯುತ್ತದೆ. ಸಂಗೀತ ಲೋಕದಲ್ಲಿ ಧ್ರುವತಾರೆಯಂತೆ ಮೆರೆದಿದ್ದಾರೆ ರಾಜಮ್ಮನವರು.

**ಬಹುಮುಖ ಪ್ರತಿಭೆ**

ರಾಜಮ್ಮನವರ ಸಾಹಿತ್ಯಸೇವೆ ಬಹುಮುಖ ಪ್ರತಿಭೆಯುಳ್ಳದ್ದು. 'ಕಪಟ ನಾಟಕ', 'ತಪಸ್ವಿನಿ' - ಮುಂತಾದ ಹತ್ತಾರು ನಾಟಕಗಳೂ 'ವೈಣಿಕ ಶಿಖಾಮಣಿ ವೀಣೆ ಶೇಷಣ್ಣ,



'ಆರ್ಯ ಕೈಲಾಸಂ' ಮೊದಲಾದವರ ವ್ಯಕ್ತಿಚಿತ್ರಗಳೂ ಆಕಾಶವಾಣಿಯಲ್ಲಿ ಬಿತ್ತರಗೊಂಡಿರುವ ಅನೇಕ ಭಾಷಣಗಳೂ 'ಭಾರತ ಮಹಿಳೆಯರು' ಮೊದಲಾದ ಅನೇಕ ಪ್ರಬಂಧಗಳೂ 'ಪು.ತಿ.ನ. ಅವರ ಅಹಲ್ಯ', 'ಜನಪದ ಸಾಹಿತ್ಯ' ಮುಂತಾದವುಗಳ ಮೇಲಿನ ವಿಮರ್ಶೆಗಳೂ ಬಿಡಿ ಕವನಗಳೂ ಹೀಗೆ ಒಂದೇ ಎರಡೇ, ಇವೆಲ್ಲಾ ರಾಜಮ್ಮನವರಿಂದ ರಚಿತವಾಗಿವೆ. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ರಾಜಮ್ಮನವರು ಕೈ ಹಾಕದ ಸಾಹಿತ್ಯ ವಿಭಾಗವಿಲ್ಲ. ಇವರು ರಚಿಸಿರುವ ಸಾಹಿತ್ಯವೇ ಆಗಲಿ, ಸಂಗೀತವೇ ಆಗಲಿ ದೇಶಭಕ್ತಿಯ ಲೇಪದಿಂದ ಜ್ವಲಿಸುತ್ತವೆ. ಎಲ್ಲದರಲ್ಲಿಯೂ ಉನ್ನತ ಆದರ್ಶದ ಹೊಂಬೆಳಗಿದೆ. ಜೀವನವನ್ನು ಮೇಲಕ್ಕೆ ಎತ್ತುವ ತತ್ವ ಅಡಗಿದೆ. ರಾಜಮ್ಮನವರದು ಉನ್ನತ ಚೇತನ. ಅಂಥ ವ್ಯಕ್ತಿಗೆ ಮಾತ್ರ ಈ ಭಾವನೆಗಳು ಬರಲು ಸಾಧ್ಯವಾಗುತ್ತದೆ. ಹಿರಿಯರ ಬಗ್ಗೆ ಅಪಾರ ಗೌರವ ಭಾವನೆಯಿದ್ದು "ಅವರ ಮುಂದೆ ನಾವೆಲ್ಲ ಏನು?" ಎನ್ನುವ ರಾಜಮ್ಮನವರ ವಿನಯ ಅವರ ವಿದ್ಯೆಗೆ ಭೂಷಣವನ್ನಿಟ್ಟಂತಾಗಿದೆ. ಬಂಗಾರದ ಹುಟ್ಟಿಗೆ ಪರಿಮಳ ಬಂದಂತಿದೆ. ನಾನಾಮುಖ ಪ್ರತಿಭೆಗಳಿಂದ ಶೋಭಿಸುವ ರಾಜಮ್ಮನವರ ಎಲ್ಲ ಕೆಲಸಗಳಿಗೂ ಸ್ಫೂರ್ತಿಯನ್ನು ನೀಡುವ ಶಕ್ತಿಯಾಗಿ ತಿ.ತಾ. ಶರ್ಮರ ಎಲ್ಲ ಚಟುವಟಿಕೆಗಳಿಗೂ ಪ್ರೋತ್ಸಾಹವನ್ನು ತುಂಬಿ, ಜೀವನಾಡಿಯಂತೆ ಮಿಡಿದು ಆದರ್ಶ ಪತ್ನಿಯಾಗಿದ್ದಾರೆ.

**"ಜಾಣೆ ಜಾಣನು ಕೂಡಲದು**

**ತಂತಿಗೂಡಿದ**

**ವೀಣೆಯ ನುಡಿಸಿದಂತಿಹುದು"**

ಎಂದು ಹಾಡಿರುವ ಶ್ರೇಷ್ಠ ಕವಿ ರತ್ನಾಕರನ ಹೋಲಿಕೆಯಂತೆ, ಇವರು ಆದರ್ಶ ದಂಪತಿಗಳಾಗಿದ್ದಾರೆ. ಕನ್ನಡಮ್ಮನ ಡಿಂಗರಿಗರಾಗಿದ್ದಾರೆ.

ಶರ್ಮರು ತಮ್ಮ ಮಡದಿಯನ್ನು ಕುರಿತು ಹೇಳುತ್ತಾರೆ: “ಷಿ ಈಸ್ ಎವೆರಿ ಹೆಲ್‌ಫುಲ್ ಗೈಡ್ ಟು ಮಿ” ಎಂದು “ಡ್ರ ಔಟ್ ಎ ಕೋ-ವರ್ಕರ್” ಎಂದೂ ಹೇಳುತ್ತಾರೆ.

**ಒಂದೇ ಸಂಸ್ಕಾರ**

“ನಮ್ಮಿಬ್ಬರದೂ ಒಂದೇ ಮನೆತನ, ನಮ್ಮಿಬ್ಬರ ಸಂಸ್ಕಾರ ಒಂದೇ ರೀತಿಯದು, ನಮ್ಮಿಬ್ಬರ ಆದರ್ಶಗಳೂ ಒಂದೇ” ಎಂಬುದು ಅವರ ದಾಂಪತ್ಯ ಜೀವನದ ಸಾಮರಸ್ಯದ ಸಂಗೀತ ಸೂತ್ರವಂತೆ, ಯಾವ ಕೆಲಸದಲ್ಲಿಯೂ ಇಬ್ಬರ ಕೈವಾಡವೂ ಇರುತ್ತಿದ್ದು ಬಹುಮಟ್ಟಿಗೆ ಎಲ್ಲವನ್ನೂ ತೂಗಿಸಿಕೊಂಡು ಹೋಗಿದ್ದಾರೆ. ಕ್ರಾಂತಿಕಾರಿ ಜೀವನವನ್ನು ನಡೆಸಿದ ತಿ.ತಾ. ಶರ್ಮರಿಗೆ, ಅದೇ ಅಭಿರುಚಿಯುಳ್ಳ ಹೆಂಡತಿ ದೊರೆತದ್ದು ಅವರ ಎಲ್ಲ ಕೆಲಸಗಳಿಗೂ ಹೆಚ್ಚಿನ ಪ್ರೋತ್ಸಾಹ ದೊರಕಿ ಉತ್ತಮ ಫಲವನ್ನು ತಂದುಕೊಡಲು ಅನುಕೂಲವಾಯಿತು. ತಿ.ತಾ. ಶರ್ಮರು ಮೆಚ್ಚಿ ನುಡಿಯುತ್ತಾರೆ: “ನನ್ನ ವೈಯಕ್ತಿಕ ಜೀವನದಲ್ಲಾಗಲೀ ವ್ಯಕ್ತಿ ದೃಷ್ಟಿಯಿಂದಾಗಲೀ ಅಪೂರ್ವ ಪ್ರಭಾವ ನಮ್ಮ ಮನೆಯವರದೇ”



ಎಂದು. ತಾವೇ ನಡೆಸಿಕೊಂಡು ಬಂದ ಮುದ್ರಣಾಲಯದಿಂದ ಪತ್ರಿಕೆಗಳು ಸಂಜೆ ಹೊರಬೀಳಬೇಕು, ಒಮ್ಮೆ ದುಡ್ಡಿನ ಅನಾನುಕೂಲವಾಯಿತು. ಕೂಡಲೇ ರಾಜಮ್ಮನವರು ತಮ್ಮ ಕೈಯಲ್ಲಿದ್ದ ಬಂಗಾರದ ಬಳೆಯನ್ನು ತೆಗೆದುಕೊಟ್ಟು ಸಹಕರಿಸಿದರು. ಇಷ್ಟು ಹಿರಿಯ ಚೇತನ ರಾಜಮ್ಮನವರದು.

ಸ್ವತಃ ಸಾಹಿತಿಗಳಾದ ರಾಜಮ್ಮನವರು ಸುಸಂಸ್ಕೃತ ಗುಣಗಳ ತವರಾಗಿದ್ದಾರೆ. ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನಲ್ಲಿಯೂ ಹಾಡುಗಳನ್ನು ರಚಿಸಿ ಮಾತೃಭಾಷೆಯ ಪ್ರೇಮವನ್ನು ಎತ್ತಿ ತೋರಿದ್ದಾರೆ. ವಿದ್ಯೆಗೆ ತಕ್ಕ ವಿನಯ, ಸೌಜನ್ಯಗಳು ಶ್ರೀಮತಿ ರಾಜಮ್ಮನವರಲ್ಲಿ ಮನೆ ಮಾಡಿಕೊಂಡಿವೆ. ಆದರ್ಶ ಗೃಹಿಣಿಯಾಗಿ, ಆದರ್ಶ ಸಂಗೀತಗಾರಳಾಗಿ ಬೆಳಗುತ್ತಿರುವ ಅಮೂಲ್ಯ ರತ್ನವಾಗಿದ್ದಾರೆ ರಾಜಮ್ಮನವರು. ತಿ.ತಾ. ಶರ್ಮರ ಹಿಂದೆ ರಾಜಮ್ಮನವರು ಎನ್ನುವುದಕ್ಕಿಂತಲೂ ಇಬ್ಬರೂ ಜೊತೆ ಜೊತೆಯಾಗಿ ಹೆಜ್ಜೆ ಇಟ್ಟು ಬಾಳಿನ ಪಯಣವನ್ನು ಸಂತಸದಿಂದ ಕಳೆಯುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ, ಇದು ವಸ್ತುಸ್ಥಿತಿಯ ವಿವರಣೆ ಮಾತ್ರ

**ಕನಕದಾಸ ನಾಟಕದ ಒಂದು ವಿಶ್ಲೇಷಣೆ**

**ಟಿ.ಟಿ. ಲಲತಾನಾಯಕ್**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಬೆಂಗಳೂರಿನ ಅರುಣಕುಮಾರ ಮಿತ್ರ ಮಂಡಲಿಯವರು ಇತ್ತೀಚೆಗೆ (೧೯೮೩) ರಾಯಚೂರಿನಲ್ಲಿ 'ಭಕ್ತ ಕನಕದಾಸ' ಎಂಬ ನಾಟಕವನ್ನು ಅಭಿನಯಿಸಿದರು. ಸಹಜ ಪ್ರತಿಭೆಯುಳ್ಳ ಕಲಾವಿದರು ಉತ್ತಮ ಅಭಿನಯ ನೀಡಿದ್ದನ್ನು ಅಲ್ಲಗಳೆಯುವಂತಿಲ್ಲ. ಆದರೆ ಈ ನಾಟಕದ ಉದ್ದಕ್ಕೂ ಶೂದ್ರ- ಬ್ರಾಹ್ಮಣ ಸಂಬಂಧಗಳು, ಅವರ ಬಯಕೆಗಳು, ತಮ್ಮ ಸ್ವಾರ್ಥಕ್ಕಾಗಿ 'ದೇವರನ್ನು ಬಳಸಿಕೊಂಡು (ಬ್ರಾಹ್ಮಣರು) ನಡೆಸುವ ರಾಜಕೀಯ, ಎಸಗುವ ಮೋಸ, ವಂಚನೆ, ಕುತಂತ್ರಗಳನ್ನು ಧಾರಾಳವಾಗಿ ಗುರುತಿಸಬಹುದಾಗಿದೆ. ಪಾಳೆಗಾರನಾಗಿದ್ದ ಕನಕನನ್ನು 'ಭಕ್ತ' ಹಾಗೂ 'ದಾಸ'ನನ್ನಾಗಿ ಮಾಡಿದ ಅಂದಿನ ವ್ಯವಸ್ಥೆಯ ಬಗ್ಗೆ ಸ್ವಲ್ಪಮಟ್ಟಿಗೆ ವಿಶ್ಲೇಷಿಸುವುದು ಈ ಲೇಖನದ ಉದ್ದೇಶ.

**ಅಧಿಕಾರ, ಧನ ಎಲ್ಲಾ ನಶ್ವರ!**

(ನಾಟಕದ ಮೊದಲ ದೃಶ್ಯದಲ್ಲಿ ಕನಕ ಒಬ್ಬ ಶೂರ ಪಾಳೆಗಾರನಾಗಿ ಒಳ್ಳೆಯ ರೀತಿಯಿಂದ ಆಳ್ವಿಕೆ ಮಾಡಿಕೊಂಡಿರುತ್ತಾನೆ. ಮೆಚ್ಚಿನ ಮಡದಿ, ಭೋಗ-ಭಾಗ್ಯಗಳನ್ನು ಹೊಂದಿ ಸುಖಜೀವನ ನಡೆಸಿಕೊಂಡಿದ್ದ ಈ ಶೂದ್ರ ವ್ಯಕ್ತಿಗೆ, ಮೇಲಿಂದ ಮೇಲೆ ಬೆಚ್ಚಿ ಬೀಳಿಸುವ ಕೆಟ್ಟ ಕನಸುಗಳು ಕಾಣಿಸಿಕೊಳ್ಳುತ್ತವೆ. 'ಈ ಅಧಿಕಾರ ಧನ ಸಂಪತ್ತು ಎಲ್ಲವೂ ನಶ್ವರ, ಇದೆಲ್ಲವನ್ನು ತೊರೆದು ನೀನು ನನ್ನ ದಾಸನಾಗು' ಎಂದು 'ಕೇಶವ' ಎಂಬ ಹೆಸರಿನ ದೇವರು ಕೂಗಿ ಹೇಳಿದಂತೆ ಆತನಿಗೆ ಭ್ರಮೆಯುಂಟಾಗುತ್ತದೆ. (ನಾಟಕದಲ್ಲಿ ವೇಷಧಾರಿ 'ದೇವರು' ಖುದ್ದಾಗಿ ಬಂದು ಕನಕನಲ್ಲಿ ಮನವಿ ಮಾಡಿಕೊಳ್ಳುವಂತೆ ತೋರಿಸಲಾಗುವುದರಿಂದ ಆತನ ಭ್ರಮೆಗೆ ವೈಚಾರಿಕ ಕಾರಣ ಅಲ್ಲಿ ಸಿಗುವುದಿಲ್ಲ)

ದ್ವಿಜರು ದೇವರೆನ್ನಿಸಿಕೊಂಡು ಮೆರೆಯುತ್ತಿದ್ದ ಆ ಕಾಲದಲ್ಲಿ ಶೂದ್ರನೊಬ್ಬ ಪಾಳೆಗಾರನಾಗಿ ಉಳಿಯುವುದು ಕಷ್ಟ ಸಾಧ್ಯವೆಂಬ ಭಾವನೆ ಅಂದಿನ ಸಮಾಜದಲ್ಲಿ ಬಲವಾಗಿ ಬೇರೂರಿತ್ತು. ಸಂಪತ್ತು, ಅಧಿಕಾರ, ವಿದ್ಯೆ ಇವುಗಳು ಮೇಲು ಜಾತಿಯ ಜನಗಳು ಮಾತ್ರ ಹೊಂದಿರತಕ್ಕಂತಹ ಸ್ವತ್ತುಗಳು; ಶೂದ್ರನಿಗೆ ಅವು ಸಲ್ಲವು ಎಂಬ ನಂಬಿಕೆ ಬೇರೆ. ಜೊತೆಗೆ “ಈ ಭೂಮಿಯ ಮೇಲಿರುವುದೆಲ್ಲವೂ ನಶ್ವರವು; ಮನುಷ್ಯ ಇದರ ಮೋಹವನ್ನು ತೊರೆದು ದೇವರ 'ದಾಸ'ನಾಗಿ ಮುಕ್ತಿ ಹೊಂದತಕ್ಕದ್ದು” ಎಂಬಂತಹ (ಟೊಳ್ಳು ಉಪದೇಶದ ಕೊರೆತ ಬೇರೆ. ಇವುಗಳ ಪ್ರಭಾವದಿಂದಾಗಿ ಕನಕನಿಗೂ ತನ್ನ ವೈಭವದ ಬದುಕಿನ ಬಗ್ಗೆ ಅಭದ್ರ ಭಾವನೆ, ಸಂದೇಹ, ಭ್ರಮೆ ಕಾಡತೊಡಗುತ್ತದೆ.

**'ನನ್ನ ದಾಸನಾಗು'**

ಜಗತ್ತಿನ ತುಂಬ ಶೋಷಕರು, ನೀಚರು, ದುರ್ಮಾರ್ಗಿಗಳು ತುಂಬಿ ತುಳುಕುತ್ತಿದ್ದರೂ ಅಂಥವರ ಗೋಜಿಗೆ ಹೋಗದ 'ಕೇಶವ' ಕನಕನನ್ನು ಮಾತ್ರ ನನ್ನ ದಾಸನಾಗು' ಎಂದು ಬೆನ್ನು ಹತ್ತಿದ ಬೇತಾಳವಾಗಿ ಪೀಡಿಸುತ್ತಾನೆ. (ಮನುಷ್ಯರ ಕಿತಾಪತಿ, ನೀಚತನಗಳನ್ನೆಲ್ಲ ಕಾಣದ ದೇವರ ಮೇಲೆ ಚೆನ್ನಾಗಿ ಹೇರಲಾಗಿದೆ. 'ಇಷ್ಟೊಂದು ಒತ್ತಾಯದಿಂದ ನನ್ನನ್ನು ದಾಸನಾಗಿಸಿಕೊಳ್ಳುವುದರಿಂದ ನಿನಗೆ ಬರುವ ಭಾಗ್ಯವಾದರೂ ಏನು?' ಎಂದು ಕನಕ 'ದೇವರ ಮೂತಿಗಿಕ್ಕುವಂತೆ ಪ್ರಶ್ನಿಸುತ್ತಲೇ ಇರುತ್ತಾನೆ. “ಈ ಮಾನವಜನ್ಮ, ಅಧಿಕಾರ, ಸಂಪತ್ತು ಎಲ್ಲವೂ ನಶ್ವರ ಕನಕ. ಆದಕಾರಣ ನೀನು ನನ್ನ ದಾಸನಾಗಿ ಲೋಕೋದ್ಧಾರ ಮಾಡು!” ಎಂದು ಅದೇ ಹಳೆಯ ಹಾಡು ಹಾಡುತ್ತಾನೆ 'ಕೇಶವ. ಜಗತ್ತಿನ ಜೀವಿಗಳೆಲ್ಲವೂ ನಶ್ವರ ಎಲ್ಲಾ ಸಂಪತ್ತು ನಶ್ವರ, ಎಂದಾದ ಬಳಿಕ ತಾನೊಬ್ಬನೇ ಏಕೆ ದಾಸನಾಗಬೇಕು? ಉಳಿದವರೆಲ್ಲ ಏಕಾಗಬಾರದು? ದಾಸತನವೂ ನಶ್ವರ ತಾನೆ? ಅಷ್ಟಕ್ಕೂ ಈ ದೇವರು ಅನ್ನಿಸಿಕೊಂಡಾತನ ಕೈಯಲ್ಲೇ ಆಗದ ಕೆಲಸವನ್ನು ಒಬ್ಬ ಮನುಷ್ಯ ಮಾಡಿಯಾನು ಎಂಬ ದಡ್ಡ ತೀರ್ಮಾನಕ್ಕೆ ಈತ ಹೇಗೆ ಬಂದ? ಎಂಬ ಕನಕನ ಹಲವಾರು ಪ್ರಶ್ನೆಗಳಿಗೆ ದೇವರ ಬಳಿ ಯಾವ ಉತ್ತರವೂ ಇಲ್ಲ.

ಅಂತೂ ಇಂತು ಕಾಕತಾಳ ನ್ಯಾಯವೆಂಬಂತೆ ಅದೇ ಸಮಯಕ್ಕೆ ಕನಕನ ರಾಜ್ಯಾಧಿಕಾರವನ್ನು ಶತ್ರುಗಳು ಕಸಿದುಕೊಳ್ಳುತ್ತಾರೆ. ಹೆಂಡತಿ ಸಾಯುತ್ತಾಳೆ. ಪ್ರಯತ್ನ ಪಟ್ಟಿದ್ದರೆ ಆತ ತನ್ನ ಅಪರಿಮಿತ ಶೌರ್ಯದಿಂದ ತಿರುಗಿ ತನ್ನ ಅಧಿಕಾರವನ್ನು ಗಳಿಸಿಕೊಳ್ಳುವ ಸಾಧ್ಯತೆ ಇತ್ತು. ಆದರೆ ದೇವರ ಕುರಿತ ಕಲ್ಪನೆ ಅವನನ್ನು ದೀನನನ್ನಾಗಿ ಮಾಡಿಸಿಬಿಡುತ್ತದೆ. ನಿರ್ಗತಿಕನಾದ ತಾನು ಈಗ 'ದಾಸ'ನಾಗದೆ ಅನ್ಯಮಾರ್ಗವಿಲ್ಲವೆಂದು ನಿರ್ಧರಿಸುತ್ತಾನೆ. ದಾಸನ ವೇಷ ಮೈಗೆ, ವಾದ್ಯ ಕೈಗೆ ಬರುತ್ತದೆ. ತನ್ನ ತೋಳಲದ ಬಗ್ಗೆ ಅತ್ಯಂತ ಭರವಸೆ ಇಟ್ಟು, ಆತ್ಮಾಭಿಮಾನದಿಂದ ವೀರೋಚಿತ ಬದುಕನ್ನು ತನ್ನದಾಗಿಸಿಕೊಂಡಿದ್ದ ಆ ಧೀಮಂತ ವ್ಯಕ್ತಿ, ಕುಳಿತಲ್ಲೇ ಗಳಿಸಿ ತಿನ್ನುವ ಉದ್ದೇಶದಿಂದ ಕಲ್ಪಿತ `ದೇವರನ್ನು ಸೃಷ್ಟಿಸಿದ ಪರಾನ್ನ ಭಕ್ಷಕರ ಸಂಚಿಗೆ ಬಲಿಯಾಗಿ ತನ್ನತನವನ್ನು ಕಳೆದುಕೊಳ್ಳುತ್ತಾನೆ. ನಿಜವಾದ ಕರ್ತವ್ಯವನ್ನು ಮರೆತು ಭ್ರಮಿಷ್ಟನಾಗಿ ಅಲೆದಾಡಲಾರಂಭಿಸುತ್ತಾನೆ. ವ್ಯಾಸರಾಯನೆಂಬ ಕಾವಿಧಾರಿಯೊಬ್ಬ ತನ್ನ ಕೆಲವರು ಶಿಷ್ಯರೊಂದಿಗೆ ಮಠ-ಗಿರ ಕಟ್ಟಿಕೊಂಡು, ಜನತೆಗೆ ಉಪದೇಶ ಕೊಟ್ಟುಕೊಂಡು ಐಷಾರಾಮವಾಗಿ ಜೀವನ ಸಾಗಿಸುತ್ತಿರಲು, ನಿರ್ಗತಿಕ ಕನಕ ಅವನಲ್ಲಿಗೆ ಬರುತ್ತಾನೆ.

**“ಕೋಣನಿಗೂ ಅನುಗ್ರಹವೆ?”**

'ಗುರುವೇ, ಅನುಗ್ರಹಿಸಬೇಕು!' ಎಂದು ಮಾರು ದೂರದಿಂದಲೇ ಆ ಹಾರುವನ ಕಾಲಿಗೆ ಬೀಳುತ್ತಾನೆ. 'ನಿನ್ನಂಥ ಶೂದ್ರನೂ ನನ್ನಂತೆಯೇ ಸುಖಜೀವನ ಬಯಸಿದರೆ ಹೇಗಪ್ಪ?' ಎಂದು ಬಹುಶಃ ಮನದಲ್ಲೇ ನಕ್ಕ ರಾಯ 'ನಿನ್ನಂಥ ಕೋಣನಿಗೆ ನನ್ನ ಅನುಗ್ರಹವೆ? ತೊಲಗಾಚೆ ಮೂರ್ಖ!” ಎಂದು ಅತ್ಯಂತ ಹೀನಾಯವಾಗಿ ಅಪಮಾನಿಸಿ

ಅವನನ್ನು ಆಚೆ ದಬ್ಬುತ್ತಾನೆ. ವಿಚಾರ ಶಕ್ತಿಯನ್ನು ಕಳೆದುಕೊಂಡು ಭ್ರಮಿಷ್ಟನಾಗಿದ್ದ ಕನಕ, ರಾಯ ಬೈದು ಹೇಳಿದ್ದ 'ಕೋಣ' ಎಂಬ ಘನಶಬ್ದವನ್ನು ಭಾರಿ ನಿಷ್ಠೆಯಿಂದ ಪಠಿಸುತ್ತಾ ಕುಳಿತುಬಿಡುತ್ತಾನೆ. ಆತನ 'ಹುಚ್ಚು' ಪ್ರಬಲವೆಂಬುದನ್ನು ಕಂಡುಕೊಂಡ ರಾಯ, ತನ್ನ ಪುರೋಹಿತಶಾಹಿ ಕೋಟೆಯನ್ನು ಮತ್ತಷ್ಟು ಬಲಪಡಿಸಿಕೊಳ್ಳಲು ಅದನ್ನು ಉಪಯೋಗಿಸಿಕೊಳ್ಳುತ್ತಾನೆ. ಕನಕನ ಬಾಯಿಂದ 'ಕೋಣ' ಎಂಬ ಶಬ್ದ ಹೊರಟ ಕಾರಣ ಅದು ನಿಜವಾಗಿಬಿಟ್ಟಿತು! ಎಂದು ಜನಸಾಮಾನ್ಯರನ್ನು ನಂಬಿಸುವ ಸಂಚು ಹೂಡುತ್ತಾನೆ. ತಾನು ಕಟ್ಟಿಸುತ್ತಿದ್ದ ಒಂದು ಕೆರೆಗೆ ಅಡ್ಡವಾಗಿದ್ದ ದೊಡ್ಡ ಬಂಡೆಯೊಂದನ್ನು ಪಕ್ಕಕ್ಕೆ ಸರಿಸಲು ಸದರಿ ಕೋಣವೇ ಸಹಾಯ ಮಾಡಿತು! ಎಂದು ಸುದ್ದಿ ಹಬ್ಬಿಸಲಾಗುತ್ತದೆ.

ಮುಗ್ಧ ಜನತೆ-ವ್ಯಾಸರಾಯನಂಥ ಗುರುವಾಣಿಯನ್ನು ಕನಕನಂತಹ ದಾಸನೊಬ್ಬ ನಿಷ್ಠೆಯಿಂದ ಪಠಿಸಿದಲ್ಲಿ ಅದು ಸತ್ಯವಾಗಿಬಿಡುತ್ತದೆ! ಎಂಬ ಭ್ರಮೆಗೆ ಸಹಜವಾಗಿ ಒಳಗಾಗುತ್ತಾರೆ. ಜೊತೆಗೆ ಕನಕ ಸಹ. ತಾನು ತಿಮ್ಮಪ್ಪನ ಪರಮಭಕ್ತ, ದೇವರ 'ದಾಸ' ಎಂದು ಬಲವಾಗಿ ನಂಬಿದ ಕನಕ, ದೇವರ ಬಗ್ಗೆ ಹೆಚ್ಚು ಹೆಚ್ಚು ಮಾತನಾಡಲಾರಂಭಿಸಿದಾಗ "ಅವನನ್ನು ತೋರಿಸು ಕನಕ, ನೋಡಿ ನಾವು ಧನ್ಯರಾಗುತ್ತೇವೆ!" ಎಂದು ವ್ಯಾಸರಾಯ ಹಾಗೂ ಆತನ ಶಿಷ್ಯತ್ತಮರು ಕೇಳತೊಡಗುತ್ತಾರೆ.

**ನಾಯಿಯೇ ನಾರಾಯಣ!**

ಮರಳು ಕನಕಾ ಮಠದ ಬಳಿ ಓಡಿಬಂದ ಒಂದು ನಾಯಿಯನ್ನು ತೋರಿಸಿ 'ಇವನೇ ನಾರಾಯಣ' (ದೇವರು) ಎಂದು ತೋರಿಸಿದಾಗ, ಗುರು ಶಿಷ್ಯರು ಉಕ್ಕಿ ಬಂದ ನಗೆಯನ್ನು ತಡೆದಿಕ್ಕಿ ನಾವದನ್ನು ನಾಯಿ ಎಂದೇ ಭಾವಿಸಿ ಬಡಿದು ಓಡಿಸಿದೆವು; ಆದ್ದರಿಂದ ದೇವರನ್ನು ಇನ್ನೊಮ್ಮೆ ತೋರಿಸು' ಎಂದು ಗಂಟುಬೀಳುತ್ತಾರೆ. ಮರುದಿನ ಹರಿದುಹೋಗುವ ಹಾವೊಂದನ್ನು ತೋರಿಸಿ 'ಇದೇ ದೇವರು' ಎಂದೊರಲುತ್ತಾನೆ. ಕನಕ, 'ಬ್ರಾಹ್ಮಣರ ಸೇವೆ ಮಾಡಿದರೆ ಕನಕನಂತಹ ಶೂದ್ರನಿಗೂ ದೇವರು ದರ್ಶನ, ನೀಡುತ್ತಾನೆ' ಎಂಬುದನ್ನು ಜನತೆಯ ತಲೆಯಲ್ಲಿ ಬಿತ್ತಲು ಇದು ಸಕಾಲವೆಂದು ಭಾವಿಸಿದ ರಾಯ ಮತ್ತು ಶಿಷ್ಯಕೋಟಿ "ಹೌದು ಹೌದಯ್ಯ ಕನಕ! ನೀನು ದೇವರ ಕಂಡೆ! ನಮಗೂ ತೋರಿಸಿದೆ!" ಎಂದು ಪೂಸಿ ಹೊಡೆಯುತ್ತಾರೆ.

ಮುಗ್ಧ ಕನಕನಿಂದ ಇನ್ನಷ್ಟು ಪವಾಡ ಮಾಡಿಸಿದರೆ ದೇವರ ಇರುವಿಕೆಯ ಬಗ್ಗೆ ಅಪನಂಬಿಕೆ ಎನ್ನುವುದೇ ಇರಲಾರದು, ಎಂದು ಲೆಕ್ಕ ಹಾಕಿದ ವ್ಯಾಸರಾಯ ತಿರುಪತಿ ತಿಮ್ಮಪ್ಪ ಖುದ್ದಾಗಿ ಬಂದು ತನ್ನ ಪೀತಾಂಬರನ್ನು ಮಲಗಿದ್ದ ಕನಕನ ಮೇಲೆ ಹೊದಿಸಿ ಹೋದನೆಂಬ ವದಂತಿ ಹುಟ್ಟುವಂತಹ ಸಂದರ್ಭವನ್ನು ಸೃಷ್ಟಿಸುತ್ತಾರೆ. (ನಾಟಕದಲ್ಲಿ ಇಂತಹ ಕುತಂತ್ರಗಳು ಬಯಲಿಗೆ ಬೀಳುವುದಿಲ್ಲ. ಎಲ್ಲಾ ಕೆಲಸಕ್ಕೂ ವೇಷಧಾರಿ ದೇವರು ಮುಂದಾಗಿಬಿಡುವುದರಿಂದ.)

**ಉಡುಪಿ ಪವಾಡ**

ನಂತರ "ಉಡುಪಿ ಪವಾಡ' ನಡೆಯುತ್ತದೆ. ಕನಕ ದೇವಸ್ಥಾನದ ಹಿಂಬದಿಯಲ್ಲಿ ಕುಳಿತು ದೇವರಿಗಾಗಿ ಹಂಬಲಿಸಿದಾಗ (ಬ್ರಾಹ್ಮಣರ ಸಂಚಿನಿಂದ) ರಾತ್ರೋ ರಾತ್ರಿ



ಹಿಂಬದಿಯ ಗೋಡೆಯಲ್ಲಿ ಕಿಂಡಿ ಕಾಣಿಸಿಕೊಳ್ಳುತ್ತದೆ; ದೇವರಮೂರ್ತಿ ಕನಕ (ಭಕ್ತ?)ನ ಕಡೆಗೆ ತಿರುಗಿ ನಿಂತಿರುತ್ತದೆ.

ಕನಕನಿಗೆ ಸಂಪೂರ್ಣ ಮರುಳು ಆವರಿಸುತ್ತದೆ. "ಆಹಾ! ನನ್ನೊಡೆಯ, ನಿನ್ನ ದಾಸನಿಗೆ ದರ್ಶನ ಕೊಡಲು ಎಷ್ಟೊಂದು ಶ್ರಮ ತೆಗೆದುಕೊಂಡೆ ಸ್ವಾಮಿ!" ಎಂದು 'ಕೃಷ್ಣಮಹಿಮೆ'ಯನ್ನು ಕೊಂಡಾಡುತ್ತಾನೆ. 'ಧನ್ಯನಯ್ಯ ಕನಕಾ ನೀನು ಲೋಕಮಾನ್ಯನಯ್ಯಾ!' ಎಂದು ಉದ್ಗರಿಸುತ್ತ ಪ್ರೇಕ್ಷಕರು ಪರವಶರಾಗಿ ಕರ್ಚೀಫ್ ನಿಂದ ಆನಂದಾಶ್ರುಗಳನ್ನು ತೊಡೆದುಕೊಳ್ಳುವಲ್ಲಿಗೆ ನಾಟಕ ಕೊನೆಗೊಳ್ಳುತ್ತದೆ. ದೇವರು ಧರ್ಮದ ಹೆಸರಿನಲ್ಲಿ ಈವತ್ತಿಗೂ ನಡೆಯುತ್ತಿರುವ ಕಳ್ಳಾಟಗಳನ್ನು ಅರ್ಥಮಾಡಿಕೊಳ್ಳಲು ಶೂದ್ರ ಜನಕ್ಕೆ ಇನ್ನೆಷ್ಟು ಶತಮಾನಗಳು ಬೇಕಾಗುವುದೋ ಕಾದು ನೋಡಬೇಕಾಗಿದೆ.

ಆದರೂ ಒಂದು ಮಾತಂತು ನಿಜ. ತಿಮ್ಮಪ್ಪನಾಯಕ 'ಕನಕದಾಸ' ನಾಗದೆ ಕೊನೆಯವರೆಗೂ ಪಾಳೇಗಾರನಾಗಿಯೇ ಉಳಿದುಬಿಟ್ಟಿದ್ದರೆ ಅಸ್ಪೃಶ್ಯತೆ. ವರ್ಣಭೇದ ನೀತಿಯನ್ನು ಖಂಡಿಸುವಂತಹ ಕಾವ್ಯ - ಸಾಹಿತ್ಯ ಆತನಿಂದ ರಚಿತವಾಗುತ್ತಿರಲಿಲ್ಲ. ಇಂದಿಗೂ ಅಜರಾಮರವಾಗಿ ನಮ್ಮ ಮನದಲ್ಲಿ ಉಳಿಯುತ್ತಿರಲಿಲ್ಲ. ಆದ್ದರಿಂದ ಅದದ್ದೆಲ್ಲಾ ಒಳಿತಿಗೇ ಆಯಿತು ಎಂದು ಕನಕನನ್ನು ಒಪ್ಪಿ ಅಪ್ಪಿಕೊಳ್ಳಲು ಅಡ್ಡಿಯೇನಿಲ್ಲ.

## ರೈಲಿನಲ್ಲಿ ರಾಜಕೀಯ ವಿಶ್ಲೇಷಕ

### ಕರ್ನಾಟಕ್ ಶರೀಫ್ ಸಾಬ್ ಬಚಡಾ ಲೇ ಗಯಾ!

**ಬಿ.ಟಿ. ಲಲಿತಾನಾಯಕ್**

ರಾಯಚೂರಿನಿಂದ ಗುಲಬರ್ಗಾಕ್ಕೆ ಹೊರಟಿದ್ದೆ. ಜನತಾ (ರೈಲು)ದಲ್ಲಿ ಸೀಟು ಸಿಕ್ಕುವುದು ಕಷ್ಟ. ಆದರೆ ಈ ಬಾರಿ ಧಾರಾಳವಾಗಿ ಸಿಕ್ಕಿತ್ತು. ಆರಾಮವಾಗಿ ಕುಳಿತು ಬಗಲಚೀಲದಿಮದ ಲಂಕೇಶ'ನ್ನು ತೆಗೆದು ತೇಜಸ್ವಿ ಹೇಳಿಕೆಯ ಮೇಲೆ, ಕಣ್ಣಾಡಿಸತೊಡಗಿದ್ದೆ.

'ಪಾರ್ಟ ಮೀಟಿಂಗಿಗೆ ಹೊಂಟೇರಿ...? ಒಂದು ವ್ಯಾಳಕ್ಕೆ ಜೆ.ಎಚ್.ಪಾಟೀಲ ಬಿಟ್ಟು ಹೋದ್ರೂ, ಬಂಗಾರಪ್ಪ ಇದರಾಗ ಬರಲಿಲ್ಲಂದ್ರೂ ಸತ 'ಕ್ರಾಂತಿ ರಂಗ'ಕ್ಕ ಯಾವ ಧಕ್ಕಿನೂ ಬರೂದಿಲ್ಲೇ.....ನಮ್ಮ ಚಂದ್ರಪ್ರಭಾರವರ ಪ್ರಸಿಡೆಂಟ್ ಆದರಂದ್ರ ಎಲ್ಲಾ ನೆಟ್ಟಗಾಗ ತೈತಿ!...'

ನನ್ನ ಕಿವಿಗಳೂ ನೆಟ್ಟಗಾದವು. ಪತ್ರಿಕೆಯಿಮದ ಕಣ್ಣು ಕಿತ್ತು ಎಡ ಬಲ ನೋಡಿದೆ. ಬಲ ಪಕ್ಕಕ್ಕೆ ಬಿಳಿ ಖಾದಿ ಸೀರೆಯುಟ್ಟು ಭಾರಿ ಮಯಕಟ್ಟನ ಒಬ್ಬ ಮಹಿಳೆ ಕುಳಿತಿದ್ದರು. ನನ್ನೆದುರು ಸೀಟಿನಲ್ಲಿ ಕುಳಿತಿದ್ದ (ಪ್ರೌಢ-ವೃದ್ಧಾಪ್ಯದ ನಡುವಿನ) ಖಾದಿಧಾರಿ ವ್ಯಕ್ತಿ ಆಕೆಯೊಡನೆ ಮಾತಿಗಾರಂಭಿಸಿದ್ದ.

“ಹಲೋ, ಎಲ್ಲಿಗ್ ಹೊಂಟೇರಲ್ಲಾ?” ಸ್ನೇಹಿತರೊಬ್ಬರು ನನ್ನ ಹೆಸರು ಕೂಗಿ ವಿಚಾರಿಸಿಕೊಂಡ ಕೂಡಲೇ. ಎದುರಿನ ವ್ಯಕ್ತಿ ತಟ್ಟನೆ ಮಾತು ನಿಲ್ಲಿಸಿ ನನ್ನತ್ತ ನೋಡಿ ಕೇಳಿದ “ಬಾಯೋರ, ಲಂಕೇಶ್ ಪತ್ರಿಕೆದೊಳಗೆ ಬರಿಯೋರು ನೀವೆ ಹೌದಲಿ?”



ಹೌದೆಂಬಂತೆ ತಲೆಯಾಡಿಸಿದೆ, “ನೀವು ಸಿಕ್ಕಿದ್ದು ಚಲೋದಾತು.... ನೀವು ನಮಗೆ ಭಾರಿ ಪ್ರಚಾರ ಕೊಡಬೇಕು ನೋಡಿ.. ನನ್ನ ಹೆಸರು 'ಮನೋಹರ ಗಣಪತ್‌ರಾವ್

ಅಂತ, ಕರ್ನಾಟಕ ಕ್ರಾಂತಿರಂಗದ ಪ್ರಚಾರಕ, ಬೀದರ ಜಿಲ್ಲಾದ ದುಬಲ್‌ಗುಂಡಿ ನನ್ನೂರು... ಮತ್ತ ಈ ಅಮ್ಮಾರ ಹೆಸರು ಎಸ್. ಗುಜಾಬಾಯಿ ಅಂತ. ಬೀದರದಾಗ ಟಿ.ಡಿ.ಬಿ. ಮೆಂಬರ ಅದಾರ... ನಮ್ಮ ಬೀದರದಾಗ 'ಲಂಕೇಶ್ ಪತಿಕೆ' ಮತ್ತು 'ಬ್ಲಿಟ್ಜ್' ಇವೆರಡನ್ನೇ ಓದೋದು, ಬ್ಯಾರೆ ಪತ್ರಿಕೆಯನ್ನ ಕೈಯಿಂದ ಸತಿಗೆ ಮುಟ್ಟುದಿ.. “ಓಡುತ್ತಿದ್ದ ಗಾಡಿಯ ವೇಗವನ್ನೂ ಮೀರಿಸಿತು ಆತನ ಮಾತಿನ ಲಹರಿ! ಒಮ್ಮೆ ಕನ್ನಡದಲ್ಲಿ ಮತ್ತೊಮ್ಮೆ ಹಿಂದಿಯಲ್ಲಿ ವಿಷಯಕ್ಕೆ ಒತ್ತುಕೊಡುವ ಆತನ ಗತ್ತು, ಉಪಮೆ, ಗಾದೆ, ಚುಟುಕು ಚೂರುಗಳಿಂದ ರಂಜನೀಯವಾಗಿದ್ದ ಮಾತಿನ ವರಸೆ, ಡಬ್ಬಿಯಲ್ಲಿದ್ದ ಪಯಣಿಗರೆಲ್ಲರ ಆಕರ್ಷಣೆಯಾಯಿತು. ಇದರ ನಡುವೆ ಎಲ್ಲಿಯಾದರೂ ತುಸು ಪ್ರಾಮಾಣಿಕತೆ. ನಿಜವಾದ ಕಳಕಳಿ ಈ ಮನುಷ್ಯನಲ್ಲಿ ಹುದುಗಿರಬಹುದೇ ಎಂದು ನಾನು ಭೇದಕ ನೋಟ ಬೀರುತ್ತ ಕುಳಿತೆ...

“ದೇವರಾಜರಸರ ಕ್ರಾಂತಿರಂಗ ಹುಟ್ಟಲಿಕ್ಕೆ ನಾವು ಅಂದ್ರೆ ಬೀದರ-ಗುಲಬರ್ಗಾದ ಮಂದಿ ಪೂರಾ ಕಾರಣ ಆಗೀವಿ ನೋಡ್ರಿ, ೧೯-೪-೮೨ರಾಗ ಬೀದರ ಜಿಲ್ಲಾದಿಂದ ನಾವೆಲ್ಲಾ ಅಭಿಮಾನಿಗಳು ಕೂಡಿ ಅರಸರಿಗೆ ಭವಾನಿ ತಲವಾರ್ ಕೊಟ್ಟೆವಿ- ಭ್ರಷ್ಟಾಚಾರವನ್ನ ಬುಡಮಟ್ಟ ಕಡಿದುಹಾಕುವುದರ ಸಲುವಾಗಿ, ರೊಕ್ಕದ ವಿಷಯದಾಗ

ಬೆಂಬಲ ಸೂಚಿಸಲಿಕ್ಕೆ ನೂರಾಒಂದ್ ರೂಪಾಯಿ ಕೊಟ್ಟ. ಪಕ್ಷದಮಾನ ಉಳಿಸಿಕೊಳ್ಳೋದರ ಸಂಕೇತವಾಗಿ ಒಂದ್ ಜೋಡ್‌ಬಟ್ಟೆ ಅವರಿಗೆ ಆಯಿರಿ ಮಾಡಿದೆವು! ಹೀಂಗ ಕ್ರಾಂತಿರಂಗಕ್ಕೆ ಜೀಂವ ತುಂಬಿದೆವು..."

"ಅರಸರು ಆಗ ಆ ತಲವಾರ್‌ನಿಂದ ತಮ್ಮದೇ ಕೈಗಳನ್ನ ಕಡಿದುಕೊಳ್ಳುವ ಪ್ರಯತ್ನವನ್ನೇನಾದ್ರು ಮಾಡಿದ್ರಾ?"

ನನ್ನ ಪ್ರಶ್ನೆ ಅಹಿತವೆನ್ನಿಸಿದರೂ ಘಾಟೆ ಧಾರಾಳವಾಗಿ ನಕ್ಕ. "ಹಳೇ ಕತಿ ಮರೀಬೇಕ್ರಿ ಅಮ್ಮಾವ್ರ, ಹೊಸ ಬದುಕು ಸುರುವಾಗಿತ್ತು ನೋಡ್ರಿ, ಅರಸರ ಖರೇ ಜನಸೇವೆಗಾಗಿ ತಮ್ಮ ಜೀಂವ ಮೀಸಲಿಟ್ಟುಬಿಟ್ಟಿದ್ರು...!"

"ಸರಿ, ಅದಕ್ಕೂ ಮೊದಲು ನೀವು ಯಾವ ಪಕ್ಷದಲ್ಲಿ ಕೆಲ್ಸ ಮಾಡ್ತಿದ್ರಿ?" ಎಂದು ನಾನು ಕೇಳಿದಾಗ "ಕಾಂಗ್ರೆಸ್ ಐ ದೊಳಗ" ಎಂಬ ಉತ್ತರ ಬಂತು. "ಅದನ್ನ ಬಿಟ್ಟು ಇದನ್ನ ಹಿಡೀಲಿಕ್ಕೆ ಕಾರಣ ಬಹಳಷ್ಟು ಇರಬೇಕಲ್ವಾ?" ಘಾಟೆ ಆವೇಶಭರಿತನಾಗಿ ಹೇಳಲಾರಂಭಿಸಿದ - "ಚಲೋ ಅಲ್ಲ ಅನ್ನಿಸಿದ್ದನ್ನ ಬಿಡಲಿಕ್ಕೇ ಬೇಕ ಅಮ್ಮಾರ? "ಎಲ್ಲೀ ಸಾಡಿ, ಮಹಾರಾಷ್ಟ್ರಕಾ ದಾಡಿ, ಕರ್ನಾಟಕ ಕಾ ಅನ್ನಾಡಿ - ಇವು ಮೂರಕ್ಕಿಂತ್ಲೂ ಕರ್ನಾಟಕ ಕ್ರಾಂತಿರಂಗ ನಮಗ ಚಲೋ ನೋಡಿ!

ಭಾರತ ದೇಶಕ್ಕೆ ೧೯೭೨ರಾಗ ನಿಜವಾದ ಕಾಂಗ್ರೆಸ್ ಇತ್ತು. ಜೋಡೆತ್ತು ಅದರ ಗುರ್ತಾಆಗಿತ್ತು. ಆವಹರಲಾಲರು, ಲಾಲ್‌ಬಹದ್ದೂರರು ರೈತ ಜನಗಳ ಹಿತವನ್ನು



ಬಯಸಿದ್ರು. 'ಜೈ ಜವಾನ್ ಜೈ ಕಿಸಾನ್' ಅಂತ ಒಳಗಿನ ಹೃದಯ ತುಂಬಿ ಅಂದ್ರು. ಹತ್ತೊಂಬತ್ತು ನೂರ ಎಪ್ಪತ್ತೆರಡರಾಗ ಇಲೆಕ್ಷನ್ ಬಂತು ಅರಬಸ್ತಾನ (ಕಾಂಗ್ರೆಸ್ ಗುರುತಿನ) ಎತ್ತನ್ನ ಮಾರಬಿಟ್ರು, ರಹಗಯಿ ಗ್ಯಾಔರ್ ಬಚಡಾ. ಬೊಂಬಯಿ ಮ ಖುಲ್‌ಗೈ ಇಸಕಿ ಏಕ್ ಮಟನ್ ಕೀ ಫ್ಯಾಕ್ಟ್ರಿ, ಗ್ಯಾಕಾ, ಬಚಡೇಕಾ ಡಿಮ್ಯಾಂಡ್ ಹೋಗಯಾ! ಆಯಾ ಮಸ್ತಾನ್ ಸಾಬ್, ಗ್ಯ ಲೇಗಯಾ. ಕರ್ನಾಟಕ್ ಶರೀಫ್ ಸಾಬ್ ಬಚಡಾ ಲೇಗಯಾ, ಹೋಗಯಿ ಇಂದಿರಾಗಾಂಧಿ ಖಾಲಿ, ರಹಗಯ ಮಸ್ತಾನ್ ಸಾಬ್ ಕಾ ಹಾತ್! ಹೌದಲ್ಲಿ ಅಮ್ಮಾರ?"

(ಹಸು ಮತ್ತು ಕರು ಉಳಕೊಂಡು ಬಿಟ್ಟು, ಮುಂಬೈನಲ್ಲಿ ಇವರದೊಂದು ಮಾಂಸದ ಕಾರ್ಖಾನೆ ಶುರು ಆಗಿ ಬಿಟ್ಟು ಹಸುಗಳಿಗೂ, ಕರುಗಳಿಗೂ ಬೇಡಿಕೆ ಹೆಚ್ಚಿತು. (ಹಾಜಿ) ಮಸ್ತಾನ್‌ಸಾಬ್ ಬಂದು ಹಸುತೊಗೊಂಡು ಹೋದ್ರೆ, ಕರ್ನಾಟಕದ ಶರೀಫ್ ಸಾಹೇಬ್ರು ಕರು ತಗೊಂಡು ಹೋದ್ರು)

ಇಂದಿರಾಗಾಂಧಿ ಕೈ ಖಾಲಿಯಾಯ್ತು, ಮಸ್ತಾನ್ ಸಾಹೇಬ್ರ 'ಕೈ' ಉಳಕೊಂಡು ಬಿಟ್ಟು,

ನಾನು ಸರಿ ಎಂಬಂತೆ ತಲೆದೂಗಿದೆ. ಘಾಟೆ ಮಹಾಶಯ ಹುರುಪಿನಿಂದ ಮುಂದುವರೆಸಿದ "ಹಾಂ, ತೊ ಲೋ ಮೊಹರ್ ಮಾರೋ ಹಾತ್,

ಶಕ್ಕ ಖಾವ್ ದಸ್‌ಪರ್!" ಎಂದಾಗ ಅರ್ಥವಾಗದೆ ಕಣ್ಣಣ್ಣು ಬಿಟ್ಟೆ. (ಹೋಗ್ಲಿ, ಈಗಂತೂ 'ಕೈ'ಗೆ ಮುದ್ರೆ ಒತ್ತಿ ಒತ್ತಿ, ಸಕ್ಕರೆಗೆ ಹತ್ತು ರೂಪಾಯಿ ತೆತ್ತಿ!)

"ಮೊಹರ್ ಮಾರೋ ಅಚೆದ್ರ ಚುನಾವಣೆ ಮಾತು ಹೇಳ್ಳಿಕ ಹತ್ತೇನಿ" ಎಂದು ಮೊಟಕಾಗಿ ಅರ್ಥ ಬಿಡಿಸಿದ. "ಐ ಯದಕ್ಕ ಬಿಟ್ರಿ? ಅಂತೀರಿ ಅಮ್ಮಾರ. ಇನ್ನೂ ಗ್ವಾಡೆ ಹೇಳತೇನಿ ಕೇಳಿ.. ಪಹಿಲೆ ನೆಹರು ಚಾಚಾನಂಥವರು ಸ್ಟೇಟ್ ಸಲುವಾಗಿ ಯೋಜನಾ ಹಾಕಿದ್ರು, ಈಗ ಗುಂಡುದಾದಾ ಅದರ ಕನ್ಯಾದಾನ ಮಾಡಲಿಕ್ಕ ಹತ್ಯಾನ - ಸ್ಟೀಲ್ ಕನ್ಯಾದಾನ, ಸಿಮೆಂಟ್ ಕನ್ಯಾದಾನ... ಬರೇ ಇಂಥಾವೇ.

ಅಪ್ಪರ ಕೃಷ್ಣಾ, ಚುಳಕಿನಾಲ, ಮುಲ್ಲಾ ಮಾರಿ, ಕಾರಂಜಾ ಈ ಎಲ್ಲಾ ಪ್ರಾಜೆಕ್ಟುಗಳನ್ನು ಕಟ್ಟಿಸೋ ಕಾಲಕ್ಕ ನಾಲ್ಕು ಲಕ್ಷ ಟನ್ ಸಿಮೆಂಟ್ ಬ್ಲಾಕ್ ಮಾಡ್ಯಾರ. ನರ ಸಿಂಗುಲ್ಲಾ, ಮಾಣಿಕರಾವ್, ಕುಸನೂರು ಇವರೆಲ್ಲಾ ಸಾಮಿಲ್ ಆಗ್ಯಾರ ಅದ್ರಾಗ! ಎಲ್ಲಾ ಆಧಾರ ಸಹಿತ ಹೇಳ್ಳಿಕ್ಕೆ ಹತ್ತೇ, ಇಗ, ಇಲ್ಲಿ ನೋಡ್ರಿ ಅದಕ್ಕೆ ಸಂಬಂಧ ಪಟ್ಟಕಾಗದ-ಪತ್ರ ಎಲ್ಲಾ ಇಲ್ಲಿದಾವ" ಎಂದು ಹಲವಾರು ಪ್ರಮುಖ ಪತ್ರಿಕೆಗಳ ಕಟಿಂಗ್ಸ್ ಸಹಿತವಾಗಿ ದಾಖಲು ಮಾಡಿದ್ದ ದಪ್ಪ ಫೈಲನ್ನು ನನ್ನ ಕೈಗಿತ್ತ.

"ಅವರು ಕಳುವಿನಿಂದ ಸಾಗಣೆ ಮಾಡಿದ ಲಾರಿನಂಬರ್ ಸತ ನಮ್ಮ ಕ್ರಾಂತಿರಂಗದ ಪಕ್ಷ ಕೊಡತೈತ್ರಿ, ಖಾಲಿ ಒಂಬತ್ತು ಕೋಟಿ ಯೋಜನೆಯ ಕಾರಂಜಾ ಪ್ರಾಜೆಕ್ಟು ಕಡೀಗ ೬೮ ಕೋಟಿಗೆ ಹೋಯಿತ್ರಿ, ಅಷ್ಟಾದ್ರೂ ಅಲ್ಲಿಯ ರೈತರು ನೀರು ಕಾಣಲಿಲ್ಲ. ಬೀದರದಾಗ ಒಂದೇ ಒಂದ್ ಶುಗರ್ ಫ್ಯಾಕ್ಟಿ ಬಂತ್ರಿ ಖಂಡ್ರೆಸಾಬ್ ಛೇರನ್ ಆದ. ಎರಡುನೂರು ಟನ್ ಸಕ್ರಿ ಡಿಡೆಕ್ಷನ್ ಮಾಡಿಟ್ಟ!

ಕರ್ನಾಟಕದ ರೈತರು (ದೆಹಲಿಗೆ) ಕಿಸಾನ್ ಕ್ಯಾಲಿಗೆ ಹೋದಾಗ ಉಪಾಸ ವನವಾಸ ಬಿದ್ದು ನರಳಾಡ್ಕೊಂತ ಹೊಳ್ಳಿಬಂದ್ರು, ಇವರ ಹೆಸರಿನಾಗ ಮಂತ್ರಿಗಳು, ದೊಡ್ಡ ದೊಡೋರು ಹೊಟ್ಟೆ ಒಡಿಯಾಹಂಗ ತಿಂದು ಕುಡಿದು ಮಜಮಾಡಿದ್ರು. ನವಲಗುಂದದ ರೈತರಿಗೆ ಗೋಲಿ ಬಿತ್ತು... ಇಂಥಾವೆಲ್ಲ ನಡೀತಾವಲ್ಲ- ಇದಕ್ಕೆ ಯಾರು ಜಮ್ಮೇದಾರು?

ಈ ಮಿನಿಷ್ಟು ಅನ್ನಿಸಿಕೊಂಡಿರುವಾತ ಈಕ್ಕಡೆ ಕಾವೇರಿ ಪೂಜಿ ಮಾಡ್ದ ಆಕ್ಕಡೆ ಗೋಪೀನಾಥ್ ಡ್ಯಾಂ ಒಡೀತು. ಹಜಾರೇ ರೈತರು, ವಿದ್ಯಾರ್ಥಿಗಳು ಚೌರತೇ - ಬಚ್ಚೆ ಕೊಚ್ಚೆಕೊಂಡು ಹೋದ್ರು, ಆ ಹೊತ್ತಿನಾಗ ಗುಲ್ಬರ್ಗಾದೊಳಗ ಅಸೆಂಬ್ಲಿ ಚಾಲೂ ಇತ್ತು. ಕಷ್ಟ ಸುಖ ವಿಚಾರಿಸಿಕೊಳ್ಳಬೇಕಾದ ಈ ಗುಂಡೂ ದಾದಾ ನಾಲ್ಕು ಸಾವಿರ ಕೋಳಿ ಕೊಯ್ಲಿ ತಿಂದು ಮಜಾ ಮಾಡ್ದ! ಅದೂ ದೇಸಿ ಮುರ್ಗಿ ವಲ್ಯಂದನಂತ್ರಿ ಅಮ್ಮಾರ! ಹಿಂದಾಗಡಿ ಹೈದರಾಬಾದಿನ ಫಾರಂಲಿಂದ ತರಿಸಿದರಂತ!

ಒಟ್ಟೆನಾಗ ನೋಡ್ರಿ ಅಂಬೇಡ್ಕ ಮಹಾತ್ಮಗಾಂಧಿ ಹೋದ ದಿಬ್ಬಾನೇ ಹರಿಜನ-ಗಿರಿಜನರೂ ನೆಲಕ್ಕೆ ಬಿದ್ರು. ಈಗ ಅವರ ಹೆಸರಿಲೆ ಬರೇ ಸುಲಿದು ತಿಂಬೋದ ನಡೆದದ ನೋಡ್ರಿ, 'ಫಿಕೆ ಭಾವ್‌ಮೆ ಮಿಠಾ ತೇಲ್, ದ್ದಾರೆ! ಗುಂಡು ಇಂದ್ರಾ ತೇರಾ ಖೇಲ್!' ಅನ್ನು ಹಂಗ್ಯಾಗದ. ನಮ್ಮ ಕರ್ನಾಟಕ ಕ್ರಾಂತಿರಂಗ ಇದನ್ನೆಲ್ಲಾ ನಿವಾರಣ ಮಾಡಲಿಕ್ಕೆ ಪಣತೊಟ್ಟದ..."

ಆತನ ಮಾತು ಮುಗಿದಿರಲಿಲ್ಲ. ಆದರೆ ರೈಲು ನಿಂತುಬಿಟ್ಟಿತು – ಗುಲಬರ್ಗಾ ಸ್ಟೇಷನ್ ಬಂದಿದ್ದರಿಂದ.

## ವ್ಯಕ್ತಿ ಉಲ್ಲೇಖ, ದೈವಸ್ಮರಣೆ ಇಲ್ಲದೆ ಸಂವಿಧಾನ ಸ್ಮರಣೆಯೊಂದೇ ಮುಖ್ಯವಾಗಲಿ

**ಡಾ. ಬರಗೂರು ರಾಮಚಂದ್ರಪ್ಪ**

ಹದಿನೇಳನೇ ಲೋಕಸಭೆಯ ಸದಸ್ಯರ ಪ್ರಮಾಣ ವಚನ ಸ್ವೀಕಾರ ಸಂದರ್ಭವು ಸಂಸದೀಯ ನವಳಿಕೆಗೆ ವಿರುದ್ಧವಾದ ನಿದರ್ಶನವಾದದ್ದು ವಿಷಾದಕರ ಸಂಗತಿ. 'ಜೈ ಶ್ರೀರಾಮ್' ಎಂಬ ಘೋಷಣೆಯೊಂದಿಗೆ ಆರಂಭವಾದ ಈ ಪ್ರಸಂಗಕ್ಕೆ ಪ್ರತಿಕ್ರಿಯೆಯಾಗಿ ಕಾಳಿ, ಅಲ್ಲಾಹು, ದುರ್ಗಾಗಳೆಲ್ಲಾ ಸೇರಿ ಸಂಸತ್ತನ್ನು ಅನುಚಿತ ಧರ್ಮಸ್ಪರ್ಧಾಕಣವನ್ನಾಗಿ ಮಾರ್ಪಡಿಸಿದವು. ಈ ಮೂಲಕ, ಮಾನ ಮತ್ತು ಸಂವಿಧಾನದ ಆಶಯಕ್ಕೆ ಧಕ್ಕೆ ತಂದು ಸಂಸದೀಯ ಇತಿಹಾಸಕ್ಕೆ ಅಪಹಾಸ್ಯದ ಕೊಡುಗೆ ನೀಡಲಾಯಿತು. ಆಸ್ತಿಕರು ತಮ್ಮ ದೈವವೆಂದು ನಂಬಿದ ಶ್ರೀರಾಮನ ಮಾನವನ್ನೂ ಕಳೆಯಲಾಯಿತು.

ದೇವರನ್ನು ನಂಬುವುದು ಬಿಡುವುದು ಅವರವರ ಅಭಿಪ್ರಾಯ ಮತ್ತು ನಂಬಿಕೆಗಳ ಪ್ರಶ್ನೆ, ಇಡೀ ಪ್ರಪಂಚದಲ್ಲಿ ಸಂಪೂರ್ಣ ನಾಸ್ತಿಕವಾಗಿರುವ ಒಂದು ದೇಶವೂ ಇಲ್ಲ. ಕಮ್ಯುನಿಸಂ ಇರುವ ದೇಶಗಳಲ್ಲೂ ಚರ್ಚುಗಳಿವೆ. ಅವು ವೈಯಕ್ತಿಕ ನಂಬಿಕೆಗೆ ಮಾತ್ರ ಸೀಮಿತವಾಗಿವೆ. ಈ ದೃಷ್ಟಿಯಿಂದ ನೋಡಿದರೆ ದೇವರನ್ನು ಕುರಿತಂತೆ ಬುದ್ಧಗುರು ಅಭಿವ್ಯಕ್ತಿಸಿದ 'ಮೌನ'ಕ್ಕೆ ಚಾರಿತ್ರಿಕ ಮಹತ್ವವಿದೆ. ಆದರೆ ನಮ್ಮ ನೇತಾರರು ಮಾಡುತ್ತಿರುವುದಾದರೂ ಏನು? ಇವರು ತಮ್ಮ ಘೋಷಣೆಗೆ ಬಳಸುವ ದೇವರಲ್ಲಿ ನಿಜವಾಗಿ ಭಕ್ತಿ ಉಳ್ಳವರಾಗಿದ್ದಾರೆಯೇ? ತಂತಮ್ಮ ನಂಬಿಕೆಯ ಧರ್ಮದ ಸಾರವನ್ನು ಅರ್ಥ ಮಾಡಿಕೊಂಡಿದ್ದಾರೆಯೇ? ಅಲ್ಲಾಹು, ಕಾಳಿ, ದುರ್ಗಾ, ಮುಂತಾದ ದೇವರ ಹೆಸರುಗಳ ಬಳಕೆಗೆ ಹೋಲಿಸಿದರೆ ಶ್ರೀರಾಮನ ಹೆಸರೇ ಹೆಚ್ಚು ಕೇಳಿಬರುತ್ತಿದೆ. ಸಂಸತ್ತಿನಲ್ಲಷ್ಟೇ ಅಲ್ಲ, ರಾಮಮಂದಿರ ನಿರ್ಮಾಣ, ಪ್ರತಿಮೆ ಸ್ಥಾಪನೆಗಳಿಂದ ಹಿಡಿದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ವಿರುದ್ಧವಾಗಿಯೂ ಶ್ರೀರಾಮ ತೋರಿದ ಪ್ರತಿಕ್ರಿಯೆಯು ಮುಖ್ಯಮಂತ್ರಿ ಸ್ಥಾನಕ್ಕೆ ತಕ್ಕುದಲ್ಲ ಎಂದು ಒಪ್ಪಿದರೂ ಅವರನ್ನು ಅಣಕಿಸಲು 'ಜೈ ಶ್ರೀರಾಮ್' ಎನ್ನುವುದು ತಮ್ಮ ನಂಬುಗೆಯ ಶ್ರೀರಾಮ ದೇವರಿಗೆ ಮಾಡುವ ದೊಡ್ಡ ಅವಮಾನ ಎಂಬುದನ್ನು ಘೋಷಣಾಪ್ರಿಯರು ಅರಿಯಬೇಕು. ಹಾಗೆ ನೋಡಿದರೆ, ರಾಮಮಂದಿರ ನಿರ್ಮಾಣದಿಂದ ಹಿಡಿದು ಸಂಸತ್ತಿನಲ್ಲಿ ಅಬ್ಬರಿಸಿದ 'ಜೈ ಶ್ರೀರಾಮ್' ಘೋಷಣೆಯವರೆಗೂ ಭಕ್ತಿಯ ಬದಲು ವೋಟಿನ ಬಂಡವಾಳವೇ ಮುಖ್ಯವಾಗಿದೆ. ಶ್ರೀರಾಮನನ್ನು ವೋಟ್ ಬ್ಯಾಂಕಿನ ಇಡುಗಂಟಾಗಿ ಬಳಸಲಾಗಿದೆ.

ರಾಮಮಂದಿರದ ವಿಷಯ ನನೆಗುದಿಗೆ ಬಿದ್ದಾಗ ಶ್ರೀರಾಮನ ಬೃಹತ್ ಪ್ರತಿಮೆ ಸ್ಥಾಪನೆಯ ವಿಷಯ ಮುಂಚೂಣಿಗೆ ಬಂದಿತು. ಉತ್ತರ ಪ್ರದೇಶದ ಮುಖ್ಯಮಂತ್ರಿ

ಯೋಗಿ ಆದಿತ್ಯನಾಥರ ಕನಸಾಗಿ ಮೂಡಿದ ಪ್ರತಿಮೆಯಲ್ಲಿ, ಸದಾ ಶ್ರೀರಾಮನ ಜೊತೆಗಿರುವ ಸೀತೆಯೂ ಇಲ್ಲ, ಲಕ್ಷ್ಮಣನೂ ಇಲ್ಲ, ಶ್ರೀರಾಮ ಇರುವ ಯಾವುದೇ ಚಿತ್ರಪಟವನ್ನು ನೋಡಿದರೂ ಸೀತೆ, ಲಕ್ಷಣ ಇದ್ದೇ ಇರುತ್ತಾರೆ. ಕೆಲವು ಚಿತ್ರಗಳಲ್ಲಿ ಆಂಜನೇಯ ಇರುವುದೂ ಉಂಟು. ಆದರೆ ಶ್ರೀರಾಮನ ಪ್ರತಿಮೆಯ ಜೊತೆ ಮಹಿಳಾ ಪ್ರಾತಿನಿಧ್ಯದ ಸೀತೆ, ಸೋದರತೆ ಸಂಕೇತದ ಲಕ್ಷಣ ಇಲ್ಲವೆಂದಾದರೆ ಅದು ಸಂವಿಧಾನದ ಆಶಯಗಳಷ್ಟೇ ಅಲ್ಲ, ಶ್ರೀರಾಮ ಭಕ್ತರ ಕಲ್ಪನೆಗೂ ಧಕ್ಕೆ ತರುತ್ತದೆ. ಅಂಬೇಡ್ಕ ಅವರು ತಮ್ಮ 'ಸಾಮಾಜಿಕ ಪ್ರಜಾಪ್ರಭುತ್ವ'ದ ಪರಿಕಲ್ಪನೆಯಲ್ಲಿ ಪ್ರಸ್ತಾಪಿಸಿದ ಸ್ವಾತಂತ್ರ್ಯ, ಸಮಾನತೆ, ಸೋದರತೆಯ ಆಶಯವು ಶ್ರೀರಾಮ ಭಕ್ತಿಯ ರೂಪಕ ಪ್ರತಿಮೆಯಲ್ಲಿ ನಾಪತ್ತೆಯಾಗುತ್ತದೆ. ಸೀತೆಯಿಲ್ಲದೆ ಸಮಾನತೆಯಿಲ್ಲ, ಲಕ್ಷ್ಮಣನಿಲ್ಲದೆ ಸೋದರತೆಯಿಲ್ಲ. ಪ್ರತಿಮೆಯ ಸ್ಥಾಪಕರಿಗೆ ಸ್ತ್ರೀಸಮಾನತೆ, ಸೋದರತೆ ಬೇಕಿಲ್ಲ ಎಂದು ಅರ್ಥೈಸಬಹುದು.

ದೇವರು, ಧರ್ಮಗಳನ್ನು ಚುನಾವಣೆಗೆ ಬಳಸಿಕೊಳ್ಳುವವರಿಗೆ - ಮುಖ್ಯವಾಗಿ, ಸೀತೆ, ಲಕ್ಷ್ಮಣರಿಂದ ವೋಟು ಬರುವುದಿಲ್ಲ. ಶ್ರೀರಾಮನ ವಿಷಯದಲ್ಲಿ ಹಾಗಲ್ಲ. ಇಲ್ಲಿ ಶ್ರೀರಾಮ, ದೈವಭಕ್ತಿಯ ಪ್ರತೀಕವಾಗುವ ಬದಲು ಭಾವೋನ್ಮತ್ತ ಬಂಡವಾಳವಾದದ್ದೇ ಹೆಚ್ಚು ನಿಜ; ಶ್ರೀರಾಮ ಮತ್ತು ರಾಮಾಯಣವನ್ನು ವಿಭಿನ್ನ ದೃಷ್ಟಿಯಿಂದ ನೋಡುವವರಿದ್ದಾರೆ. ಆಸಕ್ತರು ಶ್ರೀರಾಮನನ್ನು ದೈವವೆಂದೂ ರಾಮಾಯಣವನ್ನು 'ಧರ್ಮಗ್ರಂಥ'ವೆಂದೂ ಭಾವಿಸಿ ಗರ್ಭಗುಡಿ ಗೌರವ ನೀಡುತ್ತಿದ್ದರೆ, ನಾಸ್ತಿಕರು ಶ್ರೀರಾಮನು ದೈವ, ರಾಮಾಯಣವು ಧರ್ಮಗ್ರಂಥ ಎಂಬುದನ್ನು ಒಪ್ಪುವುದಿಲ್ಲ. ಆದರೆ ನಾಸ್ತಿಕರು ಕೂಡ ರಾಮಾಯಣವನ್ನು ಒಂದು ಪ್ರಸಿದ್ಧ ಪುರಾಣಕಾವ್ಯವೆಂದು ಒಪ್ಪಿ ಪರಿಶೀಲಿಸಬೇಕೆಂಬುದು ನನ್ನ ಅಭಿಪ್ರಾಯ. ದೈವ, ಧರ್ಮಗಳನ್ನು ಒಪ್ಪದೆ ಇದ್ದಾಗಲೂ ಪುರಾಣ ಸಾಹಿತ್ಯ ಕೃತಿಯ ವಿವಿಧ ಆಯಾಮಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಜೊತೆಗೆ ಶ್ರೀರಾಮನನ್ನು ದೈವವೆಂದು ನಂಬಿದವರ 'ಭಕ್ತಿಬದ್ಧತೆ' ಎಷ್ಟರಮಟ್ಟಿಗೆ ಪ್ರಾಮಾಣಿಕ ಎಂಬ ಪ್ರಶ್ನೆಯೂ ಮುಖ್ಯವಾಗುತ್ತದೆ.

ಆಸ್ತಿಕವಾದಿ ಭಕ್ತರಿಂದ ಪುರುಷೋತ್ತಮ, ಮರ್ಯಾದಾಪುರುಷ ಎಂಬ ಪ್ರಶಂಸೆಗೆ ಒಳಗಾದ ಶ್ರೀರಾಮನ ಬಗ್ಗೆ ನಮ್ಮ ನೇತಾರರಲ್ಲಿ ನಿಜವಾದ ಭಕ್ತಿ ಇದೆಯೇ ಅಥವಾ ಆಸ್ತಿಕರ ಭಕ್ತಿಯನ್ನೇ ವೋಟಿನ ಆಸ್ತಿ ಮಾಡಿಕೊಳ್ಳುವ ಹುನ್ನಾರವಿದೆಯೇ ಎಂಬ ಪ್ರಶ್ನೆಯನ್ನು ನಿಜವಾದ ಆಸ್ತಿಕರು ಹಾಗೂ ಶ್ರೀರಾಮನ ಪ್ರಾಮಾಣಿಕ ಭಕ್ತರು ಎತ್ತಬೇಕಾಗಿದೆ. ಭಕ್ತಿಯನ್ನು ಬೀದಿಗೆ ತರುವುದು ಎಷ್ಟರಮಟ್ಟಿಗೆ ಸರಿ ಎಂದು ಹೇಳಬೇಕಾಗಿದೆ. ನಿಜವಾದ ದೈವಭಕ್ತಿ ಖಾಸಗಿಯಾದುದು. ನಮ್ಮ ದೇಶದಲ್ಲಿ ಅವರ ದೈವಕ್ಕೆ ಭಕ್ತಿಬದ್ಧರಾಗುವ ಹಕ್ಕು ಇದೆ. ಆದರೆ ದೇವರ ದುರುಪಯೋಗ ಆಗುವುದನ್ನು ತಡೆಯದಿದ್ದರೆ ಹಕ್ಕು ಮುಕ್ಕಾಗುತ್ತದೆ. ಬಹುಶಃ ಭಾರತದಲ್ಲಿ ದಲಿತರು, ಮಹಿಳೆಯರು ಮತ್ತು ಬಡವರಂತೆ ಹೆಚ್ಚು ಶೋಷಣೆಗೆ ಒಳಗಾಗುತ್ತಿರುವುದು ಅವರವರ ನಂಬುಗೆಯ ದೇವರೇ ಎಂದು ಕಾಣುತ್ತದೆ. ಹೀಗೆ ಶೋಷಣೆಗೆ ಒಳಗಾಗುತ್ತಿರುವ ದೇವರನ್ನು ವೋಟ್ ಬ್ಯಾಂಕಿನ ವ್ಯವಸ್ಥಾಪಕರಿಂದ ರಕ್ಷಿಸುವುದು ಭಕ್ತರ ನೈತಿಕ ಜವಾಬ್ದಾರಿಯಾಗಿದೆ. ಅದರಲ್ಲೂ ಬೀದಿ

ಬೀದಿಗಳಲ್ಲಿ ಮತ್ತು ಸಂಸತ್ತಿನಲ್ಲಿ ಅನ್ಯರನ್ನು ಅಣಕಿಸುವುದಕ್ಕಾಗಿ ಬಳಕೆಯಾಗುತ್ತಿರುವ 'ಮರ್ಯಾದಾಪುರುಷ ಶ್ರೀರಾಮ ದೇವರ' ಮರ್ಯಾದೆಯನ್ನು ಉಳಿಸಬೇಕಾಗಿದೆ. ಇಲ್ಲದಿದ್ದರೆ ಆಸ್ತಿಕರ ಬಗ್ಗೆಯೇ ಅನುಮಾನ ಮೂಡುತ್ತದೆ.

'ಜೈ ಶ್ರೀರಾಮ್' ಘೋಷಣೆಯ ಅಣಕಿನಿಂದ ಆರಂಭವಾಗಿ ಅಲ್ಲಾಹು ಅಕ್ಬರ್, ಜೈ ಕಾಳಿ ಮುಂತಾದ ಘೋಷಣೆಗಳು ಮೊಳಗಿದ ಸಂಸದರ ಪ್ರಮಾಣ ವಚನ ಈ ದೇಶ ಎತ್ತ ಸಾಗಬಹುದೆಂಬುದರ ಒಂದು ದಿಕ್ಸೂಚಿಯಾಗಿದೆ. ಸಂಸದೀಯ ಪರಿಭಾಷೆಯ ಬದಲಾಗಿ ದೈವಘೋಷ ಭಾಷೆಯ ಬಳಕೆಯ ಮೂಲಕ ಲೋಕಸಭೆಯು ತೋರಿಕೆಯ 'ಧರ್ಮಸಂಸತ್' ಆದರೂ ಆಶ್ಚರ್ಯವಿಲ್ಲ. ಆಗ ತಂತಮ್ಮ ನಂಬುಗೆಯ ದೇವರುಗಳ ನಡುವೆಯೇ ಸಂಘರ್ಷ ತಂದಿಟ್ಟು ಸಂಭ್ರಮಿಸುವ ಸಂಸತ್ತನ್ನು ಕಾಣಬೇಕಾಗಬಹುದು. ಆಗ ಸಂಸದೀಯ ನಡವಳಿಕೆಯ ಜೊತೆಗೆ ಧರ್ಮ, ದೇವರುಗಳೂ ಅಣಕು ಪ್ರದರ್ಶನದ ಸಾಧನವಾಗುತ್ತವೆ. ವಿಕಾರಗಳು ವಿಜೃಂಭಿಸುತ್ತವೆ.

ಈ ಹಿನ್ನೆಲೆಯಲ್ಲಿ ಸಂಸದೀಯ ನಡವಳಿಕೆಯ ನೈತಿಕತೆಯನ್ನು ಕಾಪಾಡಲು ತುರ್ತು ಚಿಂತನೆಗೆ ಮುಂದಾಗಬೇಕಾಗಿದೆ. 'ಸಂಸದೀಯ ಧರ್ಮಕ್ಕೆ ಧಕ್ಕೆ ತರುವ ನಕಲಿಗಳ ನಡವಳಿಕೆಯನ್ನು ನಿಯಂತ್ರಿಸಬೇಕಾಗಿದೆ. ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಗಿ ಯಾವುದೇ ಪ್ರಮಾಣ ವಚನ ಸಂದರ್ಭದಲ್ಲಿ ಸಂವಿಧಾನ ಬದ್ಧತೆಯ ಮಾತು ಬಿಟ್ಟು ಬೇರೆ ಏನನ್ನೂ ಯಾರ ಹೆಸರನ್ನು ಹೇಳದಂತೆ ಖಚಿತ ಕಾಯ್ದೆಯನ್ನು ರೂಪಿಸಿ ಅನುಷ್ಠಾನಗೊಳಿಸಬೇಕು. ಪ್ರಮಾಣ ವಚನದಲ್ಲಿ ತಮ್ಮಿಚ್ಚೆಯ ವ್ಯಕ್ತಿ ಉಲ್ಲೇಖ, ದೈವಸ್ಮರಣೆ ಯಾವುದೂ ಇಲ್ಲದೆ ಸಂವಿಧಾನ ಸ್ಮರಣೆಯೊಂದೇ ಮುಖ್ಯವಾಬೇಕು. ತಮ್ಮಿಚ್ಛೆಯ ವ್ಯಕ್ತಿ ಮತ್ತು ದೈವಗಳಿಗೆ ಬದುಕಿನಲ್ಲಿ ಪ್ರಾಮಾಣಿಕ ಗೌರವ ತೋರಲಿ, ಪ್ರಮಾಣ ವಚನದಲ್ಲಿ ಸಂವಿಧಾನದ ಮಾನವನ್ನು ಹರಾಜು ಹಾಕದಿರಲಿ ಪ್ರಜಾಪ್ರಭುತ್ವದ ಅವಕಾಶಗಳು ಅವಮಾನದ ಹತಾರಗಳಾಗದಿರಲಿ.

**[ಪ್ರಜಾವಾಣಿ - ೨೦೧೮]**

ಜನಪದ ಒಗಟುಗಳಲ್ಲಿ ಹಾಸ್ಯ

ಡಾ. ಶಿವಾನಂದ ಕೆಳಗಿನಮನಿ

'ಮಾತು ಮಾತು ಮಥಿಸಿ ಬಂತು ನವನೀತ' ಎಂದು ಬೇಂದ್ರೆಯವರು ಹೇಳಿದಂತೆ ಆಡುವವರ ಬಾಯಿಮಾತಿಗೆ ಸಿಕ್ಕು ಚಕ್ರದಂತೆ ಉರುಳಿ ಮಾತಿನ ಗಂಟಾಗಿ ತೋರುವ ಗುಣ ಒಗಟಿನದು. ಒಗಟು ಎಂದರೇನೆ ಬಿಡಿಸು ಎಂಬ ಅರ್ಥ, ಒಗಟು, ಒಡಿ, ಒಗಡು, ವಡಚು ಎಂದು ಜಾನಪದರು ತಮ್ಮೊಳಗೆ ಒಬ್ಬರಿಗೊಬ್ಬರು ಸೆಣಸಿ ಸವಾಲು ಹಾಕುವ, ಸೆಡ್ಡುಹೊಡೆದು ಮಾತಿನ ಮೂಲಕ ನಿಲ್ಲುವ, ಪಣ ಒಡ್ಡಿ ಪಂಥಾಹ್ವಾನ ಕೊಡುವ ಕ್ರಿಯಾರೂಪವೇ ಒಗಟು. ಈ ಒಗಟಿನ ಸ್ವರೂಪ ಕುರಿತು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಗೊರೂರು ರಾಮಸ್ವಾಮಿ ಐಯ್ಯಂಗಾರರು ಒಗಟಿನ ರಹಸ್ಯದ ಬಗೆಗೆ ಬರೆಯುತ್ತ: “ಒಂದು ವಸ್ತುವನ್ನು ಚಮತ್ಕಾರವಾಗಿ, ಕೇಳುವವರ ಬುದ್ಧಿ ಭ್ರಮಿಸುವಂತೆ ಪದಾರ್ಥಾಂತರದಿಂದ ವರ್ಣಿಸಿ ಅದನ್ನು ಗುರುತಿಸುವಂತೆ ಹೇಳುವುದು ಒಗಟಿನ ರಹಸ್ಯ” ಎಂದಿದ್ದಾರೆ. ಇದು ಒಂದು ದೃಷ್ಟಿಯಿಂದ ಬುದ್ಧಿಗೆ ವ್ಯಾಯಾಮ. ಒಗಟಿನ ಗುಟ್ಟನ್ನು ಕಂಡು ಹಿಡಿಯುವುದೂ ರಸಿಕರಿಗೆ ವಿನೋದ, ಮನೋರಂಜಕ ವ್ಯಾಪಾರ... ಎಂದಿದ್ದಾರೆ, ಹಾ.ಮಾ.ನಾಯಕರು. “ಒಗಟುಗಳೆಂದರೆ ಸಾಮಾನ್ಯವಾಗಿ ಮನರಂಜನೆಗಾಗಿ ಪದಗಳ ಮೇಲೆ ನಿರ್ಮಿತವಾದ ಸಮಸ್ಯೆಯೆಂಬ ಅಭಿಪ್ರಾಯವಿದೆ. ಆದರೆ ಇವು ಪ್ರಾಚೀನವಾದ ಸುವ್ಯವಸ್ಥಿತಗೊಂಡ ಆಲೋಚನೆಯ ಫಲವಾಗಿವೆ”. ಒಗಟುಗಳ ಪ್ರಧಾನ ಗುರಿ ಬುದ್ಧಿಯ ಕಸರತ್ತು, ಬೋಧನೆ ಜೊತೆಗೆ ಅವುಗಳಿಂದ ಕಾರ್ಯ ನಿರ್ವಹಣೆಯೂ ನಡೆಯುತ್ತದೆ. ಒಗಟನ್ನು ಬಿಡಿಸಬಲ್ಲವರು ಬದುಕಿನ ಒಗಟನ್ನು ಬಿಡಿಸುತ್ತಾರೆ ಎಂಬ ತಾತ್ವಿಕ ತಿಳುವಳಿಕೆಯೂ ಇದೆ.

ಒಟ್ಟಿನಲ್ಲಿ ಒಗಟು ಎಂದರೆ ಜನಪದರು ತಮ್ಮ ಗೂಢಕ್ತಿ ಪ್ರತಿಹೇಳಿಕೆ ಅದಕ್ಕೆ ತಕ್ಕ ಉತ್ತರವನ್ನು ಚಿಂತಿಸಿ, ತಿಣುಕಿ ಹೇಳುವಂತೆ ಒಡ್ಡುವ ನುಡಿರೂಪದ ಮಾತು ಮತ್ತು ಹೇಳತಕ್ಕೆ ವ್ಯಕ್ತಿಯ ಬುದ್ಧಿ ಹಾಗೂ ಭಾವನಾಶಕ್ತಿಗಳಿಗೆ ಒಡ್ಡಿದ ನುಡಿಗೋಡೆ ಎಂಬ ಅಭಿಪ್ರಾಯದಲ್ಲಿ ಒಗಟಿನ ಸ್ವರೂಪವನ್ನು ತಿಳಿಯಬಹುದಾಗಿದೆ. ಪ್ರತಿಯೊಂದು ಮಾನವ ಸಮಾಜದಲ್ಲಿಯೂ ಸಾಹಿತ್ಯ ಸಂಸ್ಕೃತಿಗಳು ಹುಟ್ಟಿ ಮೇಲೆ ಪಡೆದುಕೊಂಡಿವೆ. ಜನಪದ ಗೀತೆ, ಜನಪದ ಕತೆ, ಜನಪದ ಗಾದೆ ಹಾಗೂ ಜನಪದ ಒಗಟು ಮುಂತಾದ ಪ್ರಕಾರಗಳು ಜನಪದರ ಆಡುನುಡಿಯ ರೂಪದಲ್ಲಿ ಸಾಹಿತ್ಯದ ಅಂಗವಾಗಿ ಸೃಷ್ಟಿಗೊಂಡಿವೆ. ಅದರಲ್ಲೂ ಒಗಟು ಜಾನಪದದಂಥ ಭಾವುಕ ಜನತೆಯ ಹೃದಯಭಾಗವಾಗಿ ಹುಟ್ಟಿಕೊಂಡಿದೆ. ಆದ್ದರಿಂದ ಜನಪದರು ತಮ್ಮ ಬುದ್ಧಿಕೌಶಲ್ಯಗಳನ್ನು ಜಾಣೆಯನ್ನು ಪ್ರದರ್ಶಿಸಲು ಎದುರಾಳಿಯನ್ನು ಇಕ್ಕಟ್ಟಿಗೆ ಸಿಕ್ಕಿಸಲು ಒಗಟು ಅತ್ಯುತ್ತಮ ಸಾಧನ. ಅದಕ್ಕಾಗಿ ಜನಪದರನ್ನು ಒಗಟುಪ್ರಿಯರೆಂದೇ ಕರೆಯುತ್ತಾರೆ.

ಒಗಟುಗಳನ್ನು ಅನೇಕ ರೀತಿಯ ವಸ್ತು ವೈವಿಧ್ಯದೊಡನೆ ವಿಭಜಿಸಿದ್ದಾರೆ. ಹಾಗೇ ಅವರಲ್ಲಿನ ಹಾಸ್ಯ ಪ್ರಜ್ಞೆಯನ್ನು ಗುರುತಿಸಬಹುದಾಗಿದೆ. ಒಗಟುಗಳು ಬದ್ಧಿ ಪ್ರಧಾನವಾದಂತೆ ಹಾಸ್ಯ ಪ್ರಧಾನವೂ ಹೌದು. ಜನಪದರು ತಮ್ಮ ನಿತ್ಯದ ಬದುಕಿನ ಬೇಸರಿಕೆ ಬವಣೆಗಳನ್ನು ಮನೋವೈದಿಕವಾಗಿ ಬಳಿಸಿರುವುದುಂಟು. ತಾನು ಹೇಳುವ ಒಗಟಿಗೆ ಎಂಥ ರೂಪಕವನ್ನಾದರೂ ಬಳಸಿಕೊಂಡಿದ್ದಾರೆ. ಹೇನು, ತಿಗಣೆ, ಸಿಂಬಳ, ಹೇಸಿಗೆ, ಹೂಸು, ಪ್ರಾಣಿ, ಪಕ್ಷಿ, ಹಾವು, ಮುಳ್ಳು, ಗಿಡಗಂಟೆ ಹೀಗೆ ಪ್ರಕೃತಿಕವಾಗಿ ತನಗೆ ಲಭ್ಯವಿರುವ ಮಾಹಿತಿಗಳನ್ನೆಲ್ಲ ಒಗಟಿಗೆ ವಸ್ತುವಾಗಿ ಮನುಷ್ಯನ ಗುಣ ಸ್ವಭಾವಗಳನ್ನೆ ವಿಡಂಬಿಸಲು ಗುಣಾತ್ಮಕವಾಗಿ ಹೊಗಳಲು, ಪ್ರಶಂಸಿಸಲು, ರೂಪ ಬಣ್ಣ ರುಚಿ ವಿಧಾನಗಳನ್ನು ವರ್ಣಿಸಲು ಜಾನಪದರು ಒಗಟುಗಳನ್ನು ಬಹುಜ್ಞತಾ ವ್ಯುತ್ಪತ್ತಿಯಾಗಿ ಸೃಷ್ಟಿಸಿಕೊಂಡಿದ್ದಾರೆ. ಹಾಗೆ ಹೇಳುವಲ್ಲಿ ಚತುರೋಕ್ತಿಗಳು, ಹಾಸ್ಯಚಟಾಕಿಗಳು, ನಗೆಚಟಾಕಿಗಳು ಒಗಟಿನ ರೂಪದಲ್ಲಿ ವ್ಯಕ್ತವಾಗಿರುವುದುಂಟು.

ಈ ಹಿನ್ನೆಲೆಯಲ್ಲಿ 'ಜನಪದ ಒಗಟುಗಳಲ್ಲಿ ಹಾಸ್ಯ' ಎಂಬ ಲೇಖನದ ಉದ್ದೇಶ ಒಗಟಿನ ವಿವೇಚನೆಯಾಗಿದೆ. ಜನಪದರ ಚತುರೋಕ್ತಿ ರೂಪದಲ್ಲಿರುವ ಒಗಟುಗಳು ವಿಡಂಬನೆಯ ವಿಶಿಷ್ಟ ವಿಧಾನವೆಂದೆ ಹೇಳಬೇಕು. ಏಕೆಂದರೆ ಇದರಲ್ಲಿ ಶಬ್ದಶ್ಲೇಷ, ಅರ್ಥಶ್ಲೇಷಗಳೆರಡೂ ಒಂದಕ್ಕೊಂದು ಅಲಗುಗಳಂತೆ ವಿರುದ್ಧ ದೆಸೆಯಲ್ಲಿ ಚಲಿಸಿ ಎದುರಿಗೆ ಸಿಕ್ಕವರನ್ನು ನುಚ್ಚು ನೂರಾಗುವಂತೆ ಮಾಡುತ್ತವೆ. ಶಬ್ದದಲ್ಲಿನ ದ್ವಂದ್ವಾರ್ಥ ಚಮತ್ಕಾರಯುಕ್ತವಾಗಿ ನಗೆಹೊಮ್ಮಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಬುದ್ಧಿ ಕೌಶಲ್ಯದ ತಳಹದಿಯ ಮೇಲೆ ನಿಂತ ಸುಂದರವಾದ ಶಬ್ಧಮಂದಿರ. ಆ ಮಂದಿರವು ನಾನಾ ವೈಚಿತ್ರ್ಯಗಳಿಂದ ಕೂಡಿದ ಮನೋಹರ ದೃಶ್ಯ ಅಲ್ಲಿ ಈ ವಿಡಂಬನೆಯ ದೃಶ್ಯ ಚತುರೋಕ್ತಿಯ ರೂಪದಲ್ಲಿ ಕಾಣಿಸುತ್ತದೆ. ಇದಕ್ಕೆ ನಿದರ್ಶನವಾಗಿ ಈ ಕೆಳಗಿನ ಒಗಟನ್ನು ನೋಡಬಹುದು.

ಗಿಡ್ಡ ಗುದ್ದಿದರ ಮನೆತುಂಬಾ ಮಕ್ಕಳು (ಬೆಳುಳ್ಳಿ)

ಬೆಳಗಾತು ಹೆಣ್ಣು ಒಳಗಾತು (ಅಗಳಿ)

ಮನೆ ಮಂದಿಗೆಲ್ಲ ಒಂದೇ ಕುಂಡಿ (ಬಚ್ಚಲು)

ಜುಟ್ಟಾ ಬಿಟ್ಕಂಡು ರೊಟ್ಟಿಗೆ ಬಂದಾನ (ಹಸಿ ಉಳ್ಳಾಗಡಿ)

ಕರಿಕಂಬಳಿ ನೆಂಟಾ ಸವರತ್ಯಾಗ ಹೊಂಟ (ಹೆಗ್ಗಣ)

ಗ್ವಾಡಿ ಗುಂಟಣ್ಣಾ, ಹಾರೋ ತಿಮ್ಮಣ್ಣಾ, ಅಂಟೋ ಅಮ್ಮಣ್ಣಾ

(ತಗಣಿ, ಚಿಕ್ಕಾಟು, ಉಣ್ಣೆ)

ಬಡೂರು ತಗದು ಒಗದ್ರ, ಸಾವುಕಾರು ಕಿಸೇದಾಗ ಇಟಗೋತಾರ (ಸಿಂಬಳ)

ಅಂಗೀ ಕಳಿ ಬಾವ್ಯಾಗ ಇಳಿ (ಬಾಳೆಹಣ್ಣು)

ಈ ಮೇಲ್ಕಂಡ ಒಗಟುಗಳು ವಿಡಂಬನಾತ್ಮಕವೆಂದು ಕರೆಸಿಕೊಂಡರೂ ಪರಸ್ಪರ ಪೂರಕ ಸಂಬಂಧವನ್ನು ಹೊಂದಿದವುಗಳಾಗಿವೆ. ಚತುರೋಕ್ತಿಯು ಬುದ್ಧಿಕೌಶಲ್ಯದ ಮೇಲೆ ನಿಂತಿದೆ. ಈ ಹಾಸ್ಯ ಕೂಡ ಒಂದು ಕೌಶಲ್ಯವೇ; ನಕಲಿ, ಗೇಲಿ, ತಮಾಷೆ, ಲೇವಡಿ ಇವೆಲ್ಲ ನಮ್ಮ ನಿತ್ಯಜೀವನದಲ್ಲಿ ಎಷ್ಟೋ ಹಾಸ್ಯಾತ್ಮಕವಾದ ಮಧುರ ಪ್ರಸಂಗಗಳನ್ನು ಸೃಷ್ಟಿಸಿ ಉಲ್ಲಸಿತ ವಾತಾವರಣವನ್ನು ನಿರ್ಮಿಸಿ ಜಾಣ್ಮೆಯನ್ನು ಪ್ರದರ್ಶಿಸುತ್ತವೆ. ಇದು



ಮೂಲತಃ ಒಗಟುಗಳ ಉದ್ದೇಶ. ಸಾಮಾಜಿಕ ಮನರಂಜನೆ ಮತ್ತು ಮೋಜಿನ ಸಾಧನವಾಗಿದ್ದರೂ, ಜೀವನದ ಗುಹಾತ್ಮಕವಾದ ತಾತ್ವಿಕ ಜಿಜ್ಞಾಸೆಯನ್ನು ಒಗಟಿನ ರೂಪದಲ್ಲಿ ತಿಳಿಸಿ ಹೇಳುವುದು ಮತ್ತೊಂದು ರೀತಿಯ ಕ್ರಮ, ಉದಾ: ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಒಡ್ಡುವ ಒಗಟುಗಳು ಬಿಡಿಸುವ ತಂತ್ರ, ದೂತ, ಜೂಜು, ವಾದ-ವಿವಾದ, ವಧು-ವರರ ಆಯ್ಕೆಯಲ್ಲಿ, ರಾಜ ಪಟ್ಟಕ್ಕೆ ಬರುವ ಸಂದರ್ಭದಲ್ಲಿ, ಹೆಣ್ಣು ಗೆದ್ದು ತರುವ ಪ್ರಸಂಗಗಳಲ್ಲಿ, ಧನಾರ್ಜನೆ, ಕೀರ್ತಿ ಸಂಪಾದನೆ ಮುಂತಾದವುಗಳಲ್ಲೆಲ್ಲ ಒಗಟು ತಮ್ಮ ವ್ಯಕ್ತಿತ್ವದ ಜಾಣೆ ಪ್ರದರ್ಶಿಸಲು ಇರುವ ಸಾಧನ. ಇದರಿಂದ ವ್ಯಕ್ತಿಯ ಸಿದ್ಧ ಸಾಧನ, ಗೌರವ, ಪಾಂಡಿತ್ಯ ಪ್ರದರ್ಶನ, ಕಲ್ಪನಾಚಾತುರ್ಯ ಮುಂತಾದವುಗಳನ್ನು ಅಭಿವ್ಯಕ್ತಪಡಿಸಲು ಸಹಕಾರಿಯೂ ಆಗಿವೆ. ಇಂಥದೊಂದು ನಿದರ್ಶನ ಹೀಗಿದೆ. ಜನಪದರಿಗೆ ನಾಗರಿಕ ಗಾಢ ಅನುಭವಗಳಾಗಲಿ, ದೂರದೃಷ್ಟಿಯಾಗಲಿ ಕೊಂಚ ಕಡಿಮೆ ಎನ್ನುವ ಜಾಯಮಾನದ ಮಾತಿದೆ. ಆದರೂ ಅವರವರ ಸಾಂಸ್ಕೃತಿಕ ಹಿನ್ನೆಲೆ, ಪ್ರಾಕೃತಿಕ ಆರಾಧನೆ, ಪ್ರಕೃತಿ ಮೇಲಿನ ಅನನ್ಯ ಪ್ರೀತಿ ಗೌರವ, ವಿಶ್ವಾಸ, ಭಯ, ಭಕ್ತಿಯನ್ನು ಇಟ್ಟುಕೊಂಡು ತಮ್ಮ ಬದುಕಿನ ಜಂಜಡಗಳನ್ನು ಪ್ರಕೃತಿಯ ವಾಸ್ತವಿಕ ದೃಷ್ಟಿಕೋನಕ್ಕೆ ಅಳವಡಿಸಿ ರೂಪಾತ್ಮಕವಾಗಿ ಹೇಳುವುದು ಅವರ ಒಗಟಿನ ವಿಶಿಷ್ಟ ಕ್ರಮವಾಗಿದೆ. ಅದಕ್ಕೆ ಒಗಟುಗಾರ ಒಂದು ಹೆಣ್ಣಿನ ಸಂಕಷ್ಟದ ಯಾವುದೋ ಒಂದು ಸ್ಥಿತಿಯನ್ನು ಅರಳಿದ ಹತ್ತಿಯ ತೋಟಕ್ಕೆ ಹೋಲಿಸಿ, ತವರುಮನೆಯಲ್ಲಿ ತುಂಬದಿನಗಳವರೆಗೆ ನಿಂತ ತನ್ನನ್ನು ಗಂಡ ಬಂದು ಬೇಗ ಕರಕೊಂಡು ಹೋಗಬೇಕಾಗಿ ವಿನಂತಿಸುವ ರೀತಿ ಹೀಗಿದೆ.

ನಗೀ ಬಂದು ನಾಲ್ಕು ದಿನವಾಯ್ತು
ನೆಂಟರು ಬಂದು ಎಂಟು ದಿನವಾಯ್ತು
ನಾ ಕೆಟ್ಟು ಹೋಗುತ್ತೇನೆ

ನಮ್ಮವರನ್ನ ಕರೆಯಿರಿ (ಶಂಬಾ)

ಇಲ್ಲಿ ಒಗಟುಗಾರ ಹಳ್ಳಿಯ ಹೆಣ್ಣಿನ ಮುಗ್ಧ ನಗೆಗೆ ಹೋಲಿಸಿರುವುದು ಔಚಿತ್ಯಪೂರ್ಣವಾಗಿದೆ.

“ನೆಂಟರು ಬಂದರು ಎಂಬುದಕ್ಕೆ ಹತ್ತಿಯ ಹೊಲದ ಒಡೆಯರು ಎಂದೋ ಅಕ್ಕಪಕ್ಕದ ಹೊಲದವರು ಎಂದೂ ಅರ್ಥ ಮಾಡಿಕೊಳ್ಳಬಹುದು.” ಇಂಥ ಪರಿಸ್ಥಿತಿಯಲ್ಲಿ ಅರಕ್ಷಕಳಾಗಿ ಬಯಲಿನಲ್ಲಿ ಬಾಳುತ್ತಿರುವ ಹಳ್ಳಿಯ ಹೆಣ್ಣುಮಗಳ ಸದ್ಯದ ಸ್ಥಿತಿ ಅಪಾಯವನ್ನು ಸೂಚಿಸುತ್ತದೆ. ಅದಕ್ಕೆ ಅದರಿಂದ ಪಾರಾಗಲು, ಹೆಣ್ಣು ತಾನೇ ಮುಂದಾಗಿ ತನ್ನವರು ಬಂದು ಕರೆದುಕೊಂಡು ಹೋಗುವಂತೆ ವಿನಂತಿಸುತ್ತಾಳೆ. ಹೀಗೆ ತನ್ನ ನಗುವಿನ ಹಿಂದೆ ಇರುವ ಮಾನಸಿಕ ವೇದನೆಯು ಪ್ರಾಕೃತಿಕ ಚಿತ್ರದೊಂದಿಗೆ ಮೂಡಿಬಂದಿವೆ.

ಇನ್ನೊಂದೆಡೆ ನವಿರಾದ ಹಾಸ್ಯ ಪ್ರಸಂಗವನ್ನು ಒಗಟುಗಾರ ಮಾರ್ಮಿಕವಾಗಿ ರೂಪಕದ ಮುಖಾಂತರ ಸೂಚಿಸಿರುವ ರೀತಿ ರಮಣೀಯವಾಗಿದೆ. ತನಗೆ ಗಂಡು ಮಗು ಬೇಕು ಎನ್ನುವ ಬಯಕೆಯನ್ನು ಗುಪ್ತವಾದ ಪರಿಭಾಷೆಯಲ್ಲಿ ಒಗಟಾಗಿ ಹೇಳುತ್ತಾನೆ.



ಸಾವಿರ ರೂಪಾಯಿ ಶಂಖ

ನೂರು ರೂಪಾಯಿ ಗೋಣಿ

ಗೋಣಿ ಬಿಟ್ಹೋತನಕ

ಧಾರಣಿ ಗೊತ್ತಾಗೋದಿಲ್ಲ (ಉತ್ತರ : ಹೆಂಗಸಿನ ಬಸಿರ)

ಈ ಒಗಟುಗಾರ ಬಾಳ ಬುದ್ಧಿವಂತ. ಗಂಡಿಗೊಂದು ಬೆಲೆ ಹೆಣ್ಣಿಗೊಂದು ಬೆಲೆ. ಅದಕ್ಕೆ ಗಂಡುಮಗನದು ಸಾವಿರ ರೂಪಾಯಿ ತಲೆ, ಹೆಣ್ಣು ಬರೇ ಬಿಲ್ಲೆ ಒಡಕು ಮಡಿಕೆಯ ಚೂರು, ಹೆಣ್ಣನ್ನು ನಿಕೃಷ್ಟವಾಗಿ ಕಾಣುತ್ತ ಬಂದಿರುವ ಸ್ಥಿತಿ, ಹಾಗೆಯೇ ಗರ್ಭಿಣಿಯನ್ನು ಗೋಣಿ ಚೀಲಕ್ಕೆ ಹೋಲಿಸುವ ಹೀನಸ್ಥಿತಿ ಕೂಡಾ ಆಕ್ಷೇಪಾರ್ಹವೆ. ಅಂದರೆ ಹೆಣ್ಣಿಗೆ ಯಾವುದೇ ಮಹತ್ವ ಕೊಡದೆ ಕನಿಷ್ಠವಾಗಿ ನಡೆಸಿಕೊಳ್ಳುವ ಸ್ಥಿತಿ ಹೆಣ್ಣು ಕೇವಲ ಮಕ್ಕಳನ್ನು ಹೆರುವ ಯಂತ್ರದಂತೆ ಕಂಡಿದ್ದಾರೆ. ಆದರೂ ಇಲ್ಲಿ ಹಾಸ್ಯ ಮಿನುಗುತ್ತದೆ.

ಜನಪದರು ಒಗಟುಗಳನ್ನು ಸಾಮಾಜಿಕ ನುಡಿ ನಡಾವಳಿಗಳನ್ನು ಪಡೆನುಡಿಯಂಥ ಕೆಲವು ಒಗಟುಗಳನ್ನು ವಿಶ್ಲೇಷಣೆಯಿಂದ ಗೃಹಕೃತ್ಯದ ಕೆಲ ಮುಖಗಳನ್ನು ಹಾಸ್ಯಪೂರ್ಣ ನುಡಿಗಳ ಮುಖಾಂತರ ಚಿತ್ರಿಸುತ್ತಾರೆ.

ಎದ್ದಾಗ ಹೆಣ್ಣೆ ಗೋದ

ಮಧ್ಯಾನಕ್ಕೆ ಮದುವೆಯಾಯ್ತು

ಚಂಜೆಗೆ ಸೋಬನಾಯ್ತು

ಹೊತ್ತಾರೆಗೊಂದು ಮಗುವಾಯ್ತು (ಉತ್ತರ : ಬೆಣ್ಣೆ)

ಜನಪದರ ಈ ಒಗಟು ಮೂಲಕಃ ಕೃಷಿಕರ ಹೈನು, ಹಾಲು, ಬೆಣ್ಣೆ, ತುಪ್ಪಗಳನ್ನ ತಯಾರಿಸುವ ಅವರ ಅನುಭವದ ರೂಪಾಂತರದಲ್ಲಿ ಈ ಒಗಟು ರಚನೆಗೊಂಡಿದೆ. ಇಲ್ಲಿ ಹಾಲು ಕರೆಯುವ ಕ್ರಿಯೆಯನ್ನು ಹೆಣ್ಣು ನೋಡುವ ಪ್ರಕ್ರಿಯೆಯಾಗಿ, ಮಧ್ಯಾಹ್ನ ಹಾಲನ್ನು ಕಾಯಿಸುವ ಕ್ರಿಯೆ ಮದುವೆಯ ಆಚರಣೆಯಾಗಿದೆ. ಸಂಜೆಗೆ ಹಾಲು ಹೆಚ್ಚು ಹಾಕಿ ಮೊಸರು ಮಾಡುವ ಪ್ರಸಂಗ ಶೋಭನ ಪ್ರಸ್ತದ ಕ್ರಿಯಾಚರಣೆಯ ಸ್ಥಿತಿಯನ್ನು ಸೂಚಿಸುತ್ತದೆ. ನಂತರ ಬೆಳಗ್ಗೆ ಮೊಸರನ್ನು ಕಡೆದು ಬೆಣ್ಣೆ ತೆಗೆಯುವ ಕ್ರಿಯೆ ಮಗುವೊಂದನ್ನು ಹೆರುವ ರೂಪಕದಲ್ಲಿ ಚಿತ್ರಿತವಾಗಿದೆ. ಇದು ಒಗಟುಗಾರನ ಜಾಣ್ಮ ಮಗುವೊಂದರ ಸೃಷ್ಟಿ ಬೆಣ್ಣೆ ತೆಗೆಯುವ ಕ್ರಿಯೆಯಾಗಿ ಮೂಡಿದೆ.

ಇನ್ನು ಕೆಲವು ಒಗಟುಗಳು ಲೈಂಗಿಕ ಕ್ರಿಯೆಯನ್ನು ವರ್ಣಿಸುವ ರೀತಿಯಲ್ಲಿ ಹಾಸ್ಯವನ್ನು ಜನಪದರು ಶೃಂಗಾರಮಯವಾಗಿ ಹೇಳಿದ್ದಾರೆ. ಇನ್ನು ಕೆಲವು ಅಶ್ಲೀಲತೆಯನ್ನು ಬಿಂಬಿಸುವ ಹಾಗೆಯೇ ಹೇಳಿದ್ದಾರೆ.

ಯಾಪಾರ ಸಾಪಾರ ಯಾವಾಗ?

ಎದುರು ಬದರಿಗೆ ಕೂತಾಗ

ಅದು ಕರೆಯೋದು ಯಾವಾಗ?

ಅರ್ಧ ಒಳಕ್ಕೆ ಹೋದಾಗ

ನಗೋದು ನಲಿಯೋದು ಯಾವಾಗ?

ಪೂರ್ತಿ ಒಳಕ್ಕೆ ಹೋದಾಗ

(ಹೆಣ್ಣು ಮಕ್ಕಳು ಬಳೆತೊಡುವಾಗಿನ ಸನ್ನಿವೇಶ)

ಈ ಒಗಟಿನ ವಾಚ್ಯಾರ್ಥ ನೋಡಿದಾಗ ಅಶ್ಲೀಲತೆಯನ್ನು ಬಿಂಬಿಸುತ್ತದೆ. ಆದರೆ ಅದರ ಸೂಚ್ಯಾರ್ಥದಲ್ಲಿ ಅಶ್ಲೀಲದ ಬದಲಿಗೆ ಸುಕುಮಾರತೆಯ ಸಾಂಸ್ಕೃತಿಕ ಸೌಭಾಗ್ಯದ ಸಂದೇಶ ಅಡಗಿದೆ. ಹಳ್ಳಿ ಹೆಣ್ಣು ಮಕ್ಕಳು ಬಳೆ ತೊಡುವಾಗಿನ ತಾಪತ್ರಯದ ಚಿತ್ರಣವಿದು. ಬಳೇ ಸಾಬರು ಹೆಣ್ಣು ಮಕ್ಕಳಿಗೆ ಬಳೆಗಳನ್ನು ತೊಡಿಸಲು ಕೂಡಿಸಿಕೊಂಡಾಗ ಜನಪದ ಸ್ತ್ರೀಯರ ಕೈಗಳು ಸಹಜವಾಗಿಯೇ ಒರಟಾಗಿರುತ್ತವೆ. ಕಾರಣ ನಿತ್ಯ ಹೊಲಮನೆ ಕೆಲಸ ಮಾಡುವುದರಿಂದ ಕೈಗಳು ಪೆಡಸಾಗಿ ರೂಪಗೊಂಡಿರುತ್ತವೆ. ಅಂಥ ಕೈಗಳಿಗೆ ಗಾಜಿನ ಬಳೆ ತೊಡಿಸುವುದೆಂದರೆ ಸಾಹಸದ ಕೆಲಸವೇ ಸರಿ. ನುರಿತ ಬಳೆಗಾರ ತುಂಬಾ ಉಪಾಯವಾಗಿ ಬಳೆಯನ್ನು ತೊಡಿಸಲು ಪ್ರಯತ್ನಿಸುತ್ತಾನೆ. ಕೈಯನ್ನು ನಿಧಾನವಾಗಿ ಅದುಮಿ ಬಳೆಯನ್ನು ಹಿಂಗೈಗೆ ಒತ್ತುತ್ತ ಸಾಗುತ್ತಾನೆ. ಆದರೆ ಒಮ್ಮೆಗೇ ನಾಲ್ಕಾರು ಗಾಜಿನ ಬಳೆಗಳು ಪಟಪಟನೆ ಸಿಡಿದು ಚೂರಾಗಿ ಬಿಡುತ್ತವೆ. ಹೀಗೆ ಒಡೆದ ಬಳೆಗಳಿಗೆ ಜನ ಹಣ ಕೊಡದೆ ಸರಿಯಾಗಿ ತೊಡಿಸಿದವುಗಳಿಗೆ ಮಾತ್ರ ಕೊಡುತ್ತಾರಾದ್ದರಿಂದ ಬಳೆಗಾರ ತನ್ನ ಬುದ್ಧಿಬಲವನ್ನೆಲ್ಲ ಉಪಯೋಗಿಸಿ ಬಳೆ ತೊಡಿಸುತ್ತಾನೆ. ಹಾಗೆ ತೊಡಿಸುವಾಗ ನೋವಾಗಿ ಹೆಂಗಸರು ಮುಖ ಹುಳ್ಳಗೆ ಮಾಡಿಕೊಂಡು ಹಾಂ ಹೂಂ ಎಂದು ನೊಂದುಕೊಳ್ಳುತ್ತಾರೆ. ಕೈಗೆ ಬಳೆ ಏರಿ, ಕೈಮಾಟ ಚೆನ್ನಾಗಿ ಕಾಣುವಾಗ ಅದುವರೆಗಿನ ನೋವೆಲ್ಲಾ ಮರೆತು ಸಂತೋಷಪಡುತ್ತಾರೆ. ಈ ಕ್ರಿಯೆಯನ್ನು ಒಗಟುಗಾರ ದ್ವಂದ್ವಾರ್ಥ ಬರುವ ಹಾಗೆ ಗೊಂದಲದಲ್ಲಿ ನುಡಿದು ಆಸಕ್ತಿ ಕೆರಳುವಂತೆ ಮಾಡಿದ್ದಾನೆ. ಹೀಗೆ ಹಳ್ಳಿಯ ಹೆಂಗಸರು ಬಳೆಗಳನ್ನು ತಮ್ಮ ಗರತಿತನದ, ಮುತ್ತೈದೆತನದ ಸಂಕೇತವೆಂಬಂತೆ ಭಾವಿಸುತ್ತಾರೆ.

ಈ ಒಗಟುಗಳು ಇಲ್ಲಿಗೇ ಮುಕ್ತಾಯಗೊಳ್ಳುವುದಿಲ್ಲ. ಒಗಟು ಪರಿಭಾವಿಸಿದಷ್ಟೂ ಅರ್ಥದ ಪರೆ ಬಿಚ್ಚಿಕೊಳ್ಳುವ ಗುಣ ವಿಶೇಷ ಹೊಂದಿರುವುದರಿಂದ ಸಮಾಜದಲ್ಲಿ ವ್ಯಕ್ತಿಯ ಸ್ಥಾನಮಾನಗಳನ್ನು ನಿರ್ಧರಿಸುವಾಗಲೂ ಆತನ ನಡೆ ನುಡಿ ಗುಣ ಸ್ವಭಾವಗಳು ಸರಿಯಾಗಿ ಇರಬೇಕು. ಅದಕ್ಕೆ ತಕ್ಕ ಹಾಗೆ ಆತನ ವರ್ತನೆ ನೀತಿ ನಡಾವಳಿಗಳು ಮುಖ್ಯ. ಆದರೆ ಕೆಲವು ಬಾರಿ ಮನುಷ್ಯ ತನ್ನ ದೌರ್ಬಲ್ಯಗಳಿಂದ ಗುಣಹೀನನಾಗಿ ಸಮಾಜದಲ್ಲಿ ಘನತೆ ಗೌರವ ಇಲ್ಲದವನಾಗಿ ಬದುಕುತ್ತಾನೆ. ಅದಕ್ಕೆ ಜನಪದರು ಅಂಥ ಸಂಗತಿಗೆ ಮುಖ್ಯ ಕಾರಣ ಸಮಾಜದಲ್ಲಿ ಪ್ರಚಲಿತವಿರುವ ಮದ್ಯಪಾನ, ಅದರ ಬಗ್ಗೆ ವಿಡಂಬನಾತ್ಮಕವಾಗಿ ಹಾಸ್ಯದ ನುಡಿಯಲ್ಲಿ ಒಗಟುಗಾರ ಬಿನ್ನಾಣದಲ್ಲಿ ಹೇಳುತ್ತಾನೆ. ಈ ಮದ್ಯಪಾನ ಹೇಗೆಂದರೆ ಮರ್ಯಾದಸ್ಥರ ಮಾನ ತೆಗೆಯುತ್ತದೆ ಎಂಬುದನ್ನು ಮಾರ್ಮಿಕವಾಗಿ ಹೇಳುತ್ತಾನೆ.

ಮೋಟಾರದಾಗ ಮೆರೀತಾಳ
ಕ್ವಾಣನ ಮ್ಯಾಲ ಕುತ್ತ ಕರೀತಾಳ
ನಡ ಊರಾಗಾ ವಸ್ತಿ ಹಾಕಿ
ಒಳ್ಯಾವರ ಮಾನ ಕಳೀತಾಳ (ಕಳ್ಳು ಹೆಂಡ)

ಈಚಲು ಮರಗಳಿಂದ ತಯಾರಿಸಲಾಗುವ ಹೆಂಡ ಅಥವಾ ಸೇಂದಿಯನ್ನು ಒಬ್ಬ ಬಜಾರಿ ಹೆಣ್ಣು ಕೋಣನ ಮೇಲೆ ಕೂತು ಕರೆಯುವಂತೆ ಗ್ರಾಮೀಣ ಪ್ರದೇಶದಲ್ಲಿ



ಕಾಡಿನಿಂದ ಸೇಂದಿಯನ್ನು ಎಲ್ಲರು ಬಹಿರಂಗವಾಗಿ ಕುಡಿಯುವುದಿಲ್ಲ. ಏಕೆಂದರೆ ಸೇಂದಿ ಕುಡಿಯುವುದು ಸಾಮಾಜಿಕ ಘನತೆ ಅಲ್ಲ. ಯಾರಾದರೂ ಸೇಂದಿ ಕುಡಿಯುತ್ತಾರೆ ಅಂದ್ರೆ ಅವರನ್ನು ಜನ ಗೌರವದಿಂದ ಕಾಣುವುದಿಲ್ಲ. ಅವರ ಮಾತಿಗೆ ಕವಡೆ ಕಿಮ್ಮತ್ತು ಇರುವುದಿಲ್ಲ. ಅದಕ್ಕೆ ಕೆಲವರು ಕದ್ದು ರುಚಿ ನೋಡುತ್ತಾರೆ ಅಥವಾ ತಾವು ಕುಡಿಯುವುದು ಯಾರಿಗೂ ಗೊತ್ತಿಲ್ಲ ಎಂದು ತಿಳಿದು ಗೌಪ್ಯವಾಗಿ ಕುಡಿಯುತ್ತಾರೆ. ಆದರೆ ಯಾವತ್ತಾದರೂ ಒಂದು ದಿನ ಈ ಕದ್ದು ಕಳ್ಳು ಕುಡಿಯುವ ಸಂಗತಿ ಗೊತ್ತಾದಾಗ ಆ ಸೇಂದಿ ದೆಸೆಯಿಂದ ಅವರ ಮಾನ ಹೋಗುತ್ತದೆ ಎಂದು ಒಗಟುಗಾರ ಸೇಂದಿಯನ್ನು ಮೋಟಾರಿನಲ್ಲಿ, ವೈಯಾರದಿಂದ ಕುಳಿತು ಮೆರೆಯುವ ಚೂಪುಗಾತಿ ಹೆಣ್ಣಿಗೆ ಹೋಲಿಸಿದ್ದಾನೆ. ಅಲ್ಲದೆ ಹೆಂಡ ಕುಡಿದು ಮತ್ತರಾದವರು ಬಾಯಿಗೆ ಬಂದಂತೆ ಆಡುತ್ತ ಒಳ್ಳೆಯವರು ಕೆಟ್ಟವರು ಎನ್ನದೆ ಹೀನಕೃತ್ಯದಲ್ಲಿ ತೊಡಗಬಹುದು. ಅದಕ್ಕೆ ಮಾನಗೇಡಿಯಾದ ಸೂಳೆಯಂತೆ ಈ ಸೇಂದಿ ಎಂಬುದು ಜನಪದರ ಇಂಗಿತ.

ಇನ್ನು ಕೆಲವು ಒಗಟುಗಳು ಸಂಕೀರ್ಣವಾಗಿದ್ದರೂ ಹಾಸ್ಯಮಯವಾಗಿ ಕಾಣಸಿಗುತ್ತದೆ. ಇವು ಕೊಂಚ ವ್ಯಂಗ್ಯ, ಮೊನಚನ್ನು ಹೊಂದಿ ಒಗಟುಗಳ ಒಳಾರ್ಥ ಭಿನ್ನವಾಗಿರುತ್ತದೆ. ಜೊತೆಗೆ ಹಾಸ್ಯವು ವಿನೋದವಾಗಿ ಸೇರಿಕೊಂಡು ಮೋಜಿನ ಪ್ರಸಂಗವಾಗಿ ಕಾಣುತ್ತದೆ.

"ಅಂಗಡೀಲಿ ಕೂತ್ಕಂಡು

ಗೊಂಗಡಿ ಮುಸುಕು ಹಾಕ್ಕೊಂಡು

ನನ್ನೇ ನೋಡ್ತಾಳೆ ಗಂಗಮಾಳಿ (ಮುಸುಕಿನಜೋಳ)"

ಈ ಒಗಟು ಪೇಟೆಯಲ್ಲಿರುವ ಬಜಾರಿ ಹೆಂಗಸರನ್ನು ಕುರಿತು ಹೇಳುವಂತಿದೆ. ಆದರೆ ವಾಸ್ತವವಾಗಿ ಇದು ಮುಸುಕಿನ ಜೋಳದ ಹಸಿ ತೆನೆಯನ್ನು ಕಿತ್ತು ಕೈಲಿ ಹಿಡಿದು ಪರಿಶೀಲಿಸಿದಾಗ ಈ ಒಗಟಿನ ಮಥಿತಾರ್ಥ ಹೊಳೆಯುತ್ತದೆ. ಮುಸುಕಿನ ಜೋಳದ ತೆನೆಯ ಸುತ್ತಲೂ ಮಾಸಲು ಬಿಳಿ ಬಣ್ಣದ ತೆಳು ಕವಚವೊಂದು ಹೊಂದಿರುವುದು ಕಾಣುತ್ತದೆ. ಅದು ಗೊಂಗಡಿ ಹೊತ್ತು ಓರೆನೋಟದಲ್ಲಿ ನೋಡುವ ಹಾಗೆ ಕಾಣುತ್ತದೆ. ತೆನೆಬಲಿತು ಕಾಳುಕಟ್ಟಿ ಮುರಿದ ಮೇಲು ಮುಸುಕು ಹಾಕಿಕೊಂಡಂತೆ ಕಾಣುತ್ತದೆ. ತುಂಬ ಮಾಟವಾಗಿ ಕಾಣುವ ಜೋಳದ ಕಾಳು ಹೊಂದಿರುವ ತೆನೆಯನ್ನು ಪೇಟೆ ಬದಿಯಲ್ಲಿ ಇಟ್ಟು ಮಾರುವ ಚಿತ್ರ ನೆನಪಿಗೆ ಬರುತ್ತದೆ. ಅವನ್ನು ನೋಡಿದ

ಒಗಟುಗಾರ ಜಾಣೆಯಿಂದ ಹೆಣ್ಣಿಗೆ ಹೋಲಿಸಿ ಗಂಗಮಾಳಿ ಸೂಳೆ ಎಂಬುದಾಗಿ ಹೇಳಿ ಪೇಟೆಯ ಹೆಂಗಸೊಬ್ಬಳು ಇವನನ್ನೇ ನೋಡಿ ಆಕರ್ಷಿಸಿದಂತೆ ಬೇರೊಂದು ಭಾವದಲ್ಲಿ ಕಂಡು ಸಂಭ್ರಮಿಸಿದ್ದಾನೆ.

ಒಗಟುಗಳು ಮನುಷ್ಯನ ಬದುಕಿನ ಜ್ಞಾನ ಭಂಡಾರವನ್ನು ತುಂಬುವ ಕಣಜವಾಗಿವೆ. ಒಗಟುಗಳಿಗೆ ವಿಷಯವಾಗದ ವಸ್ತುವೇ ಇಲ್ಲ ಎನ್ನಬಹುದು. ಸ್ವಲ್ಪದರಲ್ಲಿ ಬ್ರಹ್ಮಾಂಡವನ್ನೆ ತುಂಬಿ ಚಮತ್ಕಾರಿಯಾಗಿ ಉತ್ತರ ಪ್ರಕಟಿಸಬಲ್ಲ ಶಕ್ತಿ ಒಗಟಿಗಿದೆ. ಕೆಲವು ಒಗಟುಗಳು ಚುಟುಕಾಗಿದ್ದರೂ ಚಮತ್ಕಾರ, ವ್ಯಂಗ್ಯ, ಉತ್ಪ್ರೇಕ್ಷೆ, ದೇಶೀನುಡಿಯ ಬಳಕೆ ಅಸಮಂಜಸತೆ



ಇಡೀ ಸನ್ನಿವೇಶವನ್ನು ಹಾಸ್ಯಮಯವಾಗಿ ಪರಿವರ್ತಿಸುತ್ತದೆ. ತೀರ ಸಾಮಾನ್ಯತೆಯಲ್ಲಿ ಅಸಾಮಾನ್ಯತೆಗೆ ಹೋಲಿಸಿ ಹೇಳುವುದು ಅವರ ಕಲ್ಪಿತ ಚಿತ್ರ ನಿಬ್ಬೆರಗಾಗಿ ಹಾಸ್ಯವನ್ನು ವ್ಯಕ್ತಪಡಿಸುತ್ತದೆ. ಇಂತಹ ಒಗಟುಗಳನ್ನು ಹೇಳುವದೆಂದರೆ ಸಣ್ಣ ಮಕ್ಕಳಿಗೆ ಪ್ರೀತಿ.

ಅಟ್ಟಂಬಟ್ಟಾರಣ್ಯದಲ್ಲಿ ಚಟಗುಬ್ಬಿ ತಲೆ ಒಡೆದಿದೆ (ಹತ್ತಿಯ ತೊಳೆ)

ಹಗ್ಗ ಹಾಸಿದೆ, ಕೋಣ ಮಲಗಿದೆ (ಕುಂಬಳ ಬಳ್ಳಿ ಕಾಯಿ ಬಿಟ್ಟಿದೆ)

ಸಣ್ಣ ಮಕ್ಕಳು ಇಂಥ ಒಗಟುಗಳನ್ನು ಹೇಳಿ ಪರಸ್ಪರ ನಕ್ಕು ನಲಿಯುತ್ತಾರೆ. ಇದಕ್ಕೆ ನಿದರ್ಶನವೆಂದರೆ:-

ಕೋಣೆಗೆ ಕೊತ್ವಾಲ

ಓಣಿಗೆ ವಜೀರ (ಬೆಕ್ಕು, ನಾಯಿ)

ಓಣಿಗೆ ವಜೀರ ಎಂಬುದು ನಾಯಿಗೆ ಕೊಟ್ಟ ಬಿರುದು. 'ಹಮಾರಾ ಗಲೀಮೆ ಅಪ್ನಾ ಕುತ್ತಾ ಷೇರ್' ನಮ್ಮ ಓಣಿಯಲ್ಲಿ ನಮ್ಮ ನಾಯಿ ಹುಲಿ ಎಂಬ ನಾಣ್ಣುಡಿಯೂ ಇದೆ. ನಾಯಿ ತನ್ನ ಆಸುಪಾಸಿನ ಗೊತ್ತಿನ ಓಣಿಯಲ್ಲಿ ಸುಲ್ತಾನನಂತೆ ಠೀವಿಯಿಂದ ದರ್ಪದಿಂದ ವರ್ತಿಸುತ್ತದೆ. ಅಪ್ಪಿ ತಪ್ಪಿ ಆ ಪ್ರದೇಶಕ್ಕೆ ಹೊಸ ನಾಯಿ ಏನಾದರೂ ಬಂದರೆ ರಂಪರಾಣಾ ಮಾಡಿ ಕಚ್ಚಿ ಓಡಿಸುತ್ತದೆ. ಹೀಗೆ ಅಧಿಕಾರ ಮರೆಯುವ ಜನರನ್ನು ಒಗಟುಗಾರ ನಾಯಿಯೆಂದೂ ವಜೀರ-ಮಂತ್ರಿಯ ದೌಲತ್ತು ಎಂದು ಮೊನಚಿನಲ್ಲಿ ಹೇಳಿದ್ದಾನೆ. ಮತ್ತೊಂದೆಡೆ ಅಶ್ಲೀಲವೆನ್ನುವಂತೆ ತೋರಿದರೂ ಕೃಷಿಗೆ ಸಂಬಂಧಿಸಿದ ಒಂದು ಕ್ರಿಯೆಯನ್ನು ಪ್ರತಿನಿಧಿಸಿ ಹೇಳುವ ಒಗಟು ಇದಾಗಿದೆ.

ಒಂದೇ ಕುಣೀಲಿ ಇಬ್ರು ಉಚ್ಚೆ ಹೊಯ್ತಾರೆ (ಕಬ್ಬಿಗೆ ಗಾಣ)

ಸಾಮಾನ್ಯವಾಗಿ ರೈತರು ಕಬ್ಬನ್ನು ಗಾಣದಲ್ಲಿ ತಿರುಗಿಸಿ ಎರಡು ಮೂರು ಹಂತಗಳಲ್ಲಿ ಅರೆದು ಒಂದೇ ಕಡೆ ಕೂಡಿ ಬೀಳುವ ಕಬ್ಬಿನ ಹಾಲು ಈ ದೃಶ್ಯವನ್ನು ಚಿತ್ರಿಸುತ್ತದೆ.

ಜನಪದರಲ್ಲಿ ಒಗಟುಗಳು ಎಲ್ಲವೂ ಚಮತ್ಕಾರವಾಗಿಯೇ ಇರಬೇಕೆಂದೇನು ಇಲ್ಲ. ಸಾಂಸಾರಿಕ ಬದುಕಿನಲ್ಲಿ ಗಂಡು ಹೆಣ್ಣು ಸರಸ ವಿರಸದ ಭಾವಗಳು ವ್ಯಕ್ತವಾಗಲೂ ಈ ಒಗಟುಗಳು ಸಹಾಯಕವಾಗಿವೆ.

ಇಂದು ಹೆಣ್ಣೊಬ್ಬಳು ತನ್ನ ಮನದ ಬಯಕೆಯನ್ನು ಈಡೇರಿಸದ ಗಂಡ, ಹೆಂಡತಿಯು ಸೌಂದರ್ಯವತಿಯಾಗಿ ಕಾಣಲಿ ಎನ್ನುವ ಬಯಕೆಯವನು; ಆದರೆ ಅವಳಿಗೆ ಬಂಗಾರದ ಒಡವೆಗಳನ್ನು ತಂದು ಕೊಡಲಾರದ ಜಿಪುಣ. ಆತನ ಜಿಪುಣತನವನ್ನು ಅಣಕಿಸುವ ಜಾಣ್ಮೆಯ ಬುದ್ಧಿಯುಳ್ಳ ಸ್ತ್ರೀ ಜನರ ಮಧ್ಯೆ ಗಂಡನ ಹೆಸರು ಹೇಳುವ ಮೂಲಕ ತನ್ನ ಮನದ ಬಯಕೆಯನ್ನು ವ್ಯಕ್ತಪಡಿಸುತ್ತಾಳೆ. ಕೊನೆಗೆ ಗಂಡ ಹೆಸರು ಹೇಳುವ ಮೂಲಕ ತನ್ನ ಮನದ ಬಯಕೆಯನ್ನು ವ್ಯಕ್ತಪಡಿಸುತ್ತಾನೆ. ಕೊನೆಗೆ ಗಂಡ ಎಂಥ ಜಿಪುಣ ಎಂಬುದನ್ನು ಗಂಡನ ಹೆಸರು ಹೇಳುವ ಒಗಟಿನ



ರೂಪದಲ್ಲಿ ಆಕೆ ವ್ಯಕ್ತಪಡಿಸುವ ಸುಪ್ತ ಬಯಕೆ ಕೂಡ ಮುಖ್ಯವಾಗಿದೆ. ಇಲ್ಲಿ ಬಯಕೆ ಬಹಿರಂಗಗೊಳ್ಳುವ ಮೂಲಕ ಗಂಡನು ಕೊನೆಗೆ ಈ ಹರಮಾರಿ ಹೆಣ್ಣು ತನ್ನ ಮರ್ಯಾದೆ ಹೀಗೆ ಕಳೆಯುತ್ತಾಳಲ್ಲ ಅಂತಾನಾದ್ರೂ ವಿಚಾರಮಾಡಿ ಬಂಗಾರ ಕೊಡಿಸಬಹುದು. ಇದು ಹೆಣ್ಣು ಮಕ್ಕಳ ಬಂಗಾರದ ಮೇಲಿನ ಮೋಹ ಮತ್ತು ಶೃಂಗಾರಕ್ಕೆ ಬಂಗಾರದ ಒನಪು ಮುಖ್ಯ ಎಂಬುದು ಇಲ್ಲಿ ಗೊತ್ತಾಗುತ್ತದೆ.

ಇಲ್ಲಿ ಕಾಣುವ ಒಗಟುಗಳು ಹಾಸ್ಯ ಅನುಭವಗಳೆಂದು ಕರೆಯಬಹುದು, ಏಕೆಂದರೆ ಒಗಟು ಹಾಸ್ಯ (ರಸವಾಗಿ) ಭಾವವಾಗಿ ಪರಿಣಮಿಸಬೇಕಾದರೆ ಅನುಭವಗಳಾಚೆ ಮುಖ್ಯ. ಒಮ್ಮೊಮ್ಮೆ ಅವರ ವೈವಾಹಿಕ ಬದುಕಿನ ವಿಸಂಗತ ವೈಪರೀತ್ಯಗಳನ್ನು ಒಗಟಿನ ರೂಪದಲ್ಲಿ ಸೃಷ್ಟಿಸಿ ಹೇಳಿದಾಗಲೂ ಆನಂದಕ್ಕೆ ಎಡೆಮಾಡಿಕೊಡುತ್ತದೆ. ಗಂಡ ಹೆಂಡತಿಯ ಗುಣ ಸ್ವಭಾವ, ಅವರ ದೈಹಿಕ ಆಕೃತಿ, ತಳ್ಳನ ಮನುಷ್ಯ, ದಪ್ಪನ ಹೆಂಡತಿ, ಎತ್ತರದ ಹೆಂಡತಿ, ಗಿಡ್ಡನ ಗಂಡ, ಕಪ್ಪನ ಹುಡುಗ, ಕೆಂಪನ ಹುಡುಗಿ ಹೀಗೆ ವಿಸಂಗತ ವೈಪರೀತ್ಯದ ಇಜೋಡುಗಳಲ್ಲಿ ಸಾಂಸಾರಿಕ ಬದುಕು ಸಾಗಿದಾಗಲೂ ಸೂಚ್ಯವಾಗಿ ಅವಳು ಒಗಟಿನ ರೂಪದಲ್ಲಿ ತನ್ನ ಭಾವನೆಗಳನ್ನು ಹೇಳುವುದುಂಟು.

೧. ಹಾಕೂದ ಮೊಳಾ! ಎಣೆಸೊದ ಗಳಾ! ನಮ್ಮನಿಯವರಿಗೆ ನನ್ನ ಮಾತು ಜಳ!

೨. ಬಳ್ಳಿ ಕುಡಿ! ಕ್ಯಾದಿಗಿ ಹೊಡಿ! ಒಳ್ಳೆ ಹುಡಗಿ ಕಂಡ ಮಳ್ಯಾಗ್ಯಾರ...ರು

೩. ಸಾಲಾ ಮಾಡಿ ತರತಾರ! ಸಕ್ರಿ ತುಪ್ಪ ಉಣತಾರ!

ಸಾಲದವರು ಬಂದು ಕೇಳಿದರು ಬಾಲಾ ಅಲ್ಲಾಡಸ್ತಾರ...........ರು.

ಈ ರೀತಿಯಲ್ಲಿ ಒಡಪಿನ ರೂಪದಲ್ಲಿರುವ ಒಗಟುಗಳು ಹೇರಳವಾಗಿ ಕಾಣಸಿಗುತ್ತವೆ. ಇವು ಹೆಚ್ಚಾಗಿ ಚಮತ್ಕಾರಜನ್ಯ ಹಾಸ್ಯವಾಗಿ ಮೂಡಿಬಂದಿದೆ. ಹೆಣ್ಣುಮಕ್ಕಳು ಗಂಡಂದಿರ ಹೆಸರನ್ನು ಹೇಳುವಾಗ ಇಂತಹ ಒಗಟುಗಳನ್ನು ಬಳಸುತ್ತಾರೆ.

ಅಲ್ಲೂ ನಗೆ, ಆ ನಗೆಗೆ ಕಾರಣ ಪ್ರೀತಿ ಶೃಂಗಾರದ ಅನುಕರಣದಿಂದ ಒಗಟಿನಲ್ಲಿ ಹಾಸ್ಯ ತಲೆ ಎತ್ತಿ ನಿಲ್ಲುತ್ತದೆ. ನಿತ್ಯದ ವ್ಯವಹಾರಗಳಲ್ಲಿ ಇಂಥ ಒಗಟುಗಳು ದೊರೆಯುವುದಿಲ್ಲ. ಆಟ ನೋಟ ಚೆಲ್ಲಾಟ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇಂತಹ ಒಗಟುಗಳ ಹಾಸ್ಯವನ್ನು ಸವಿಯಬಹುದಾಗಿದೆ.

ಒಟ್ಟಾರೆ ಒಗಟು ಹಾಸ್ಯ, ವಿಡಂಬನೆಗೆ ಪೂರಕವಾದದ್ದೆ. ಮನುಷ್ಯನ ಸಹಜ ಭಾವಸ್ಫುರಣದಿಂದ ಸೃಷ್ಟಿಗೊಂಡು ಪ್ರಕೃತಿಯಲ್ಲಿ ಕಾಣುವ ವೈಚಿತ್ರ್ಯಗಳಿಗೆ ಪ್ರತಿಕ್ರಿಯಿಸುತ್ತ ತನ್ನ ಜೀವನದ ಸಾಫಲ್ಯವನ್ನು ಕಂಡು ಕೊಂಡಿದ್ದಾನೆ. ಒಗಟುಗಳು ಅಂತರಂಗ ಬಹಿರಂಗಗಳೆರಡರ ಅಭಿವ್ಯಕ್ತಿ, ಸಾದೃಶ್ಯ ವೈದೃಶ್ಯಗಳು ಒಗಟಿಗೆ ಪ್ರೇರಣೆಯಾದಂತೆ ಜೀವನ ದುಃಖಭರಿತವೆಂದು ಪರಿಭಾವಿಸಿಕೊಂಡಾಗಲೂ ಮನುಷ್ಯನು ತನ್ನ ಸುಖಾಪೇಕ್ಷೆಗಾಗಿ ಹಾಸ್ಯ ವಿನೋದ ಮನರಂಜನೆಗಳ ಮೂಲಕ ನೆಮ್ಮದಿಯನ್ನು

ಕಂಡುಕೊಂಡಿದ್ದಾನೆ. ಇದಕ್ಕೆ ಪೂರಕವಾಗಿ ಒಗಟು ನಿಜಕ್ಕೂ ವಿನೋದ ಹಾಸ್ಯ ಮತ್ತು ಮನರಂಜನೆಯ ಭಾವಗಳಾಗಿ ಅಭಿವ್ಯಕ್ತಗೊಂಡದ್ದರಲ್ಲಿ ಆಶ್ಚರ್ಯವೇನಿಲ್ಲ.

[ಜನಪದ ಪತ್ರಿಕೆ - ೨೦೦೦]

***

**ಗ್ರಂಥ ಋಣ**


೧. ಡಾ. ನಂ.ತಪಸ್ವೀಕುಮಾರ : ಕನ್ನಡ ಒಗಟುಗಳ ಸಮೀಕ್ಷೆ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ೧೯೭೯

೨. ಡಾ. ಸೋಮಶೇಖರ ಇಮ್ರಾಪುರ : ಕನ್ನಡದ ಸಾವಿರದ ಒಗಟುಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩. ಡಾ. ಎಂ. ಎಸ್. ಸುಂಕಾಪುರ : ಕನ್ನಡ ಸಾಹಿತ್ಯದಲ್ಲಿ ಹಾಸ್ಯ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಅಪ್ಪನೆಂದರೆ ... ಭರವಸೆ**

**ಡಾ. ಪ್ರಶಾಂತ ನಾಯಕ ಜಿ.**

ಅಮ್ಮ ಅಸ್ತಿತ್ವದ ರೂಪಕವಾದರೆ ಅಪ್ಪ ಭರವಸೆಯ ಆಯಾಮ. ಜವಾಬ್ದಾರಿಯ ಪ್ರತಿನಿಧಿಯಾಗಿಯೇ ಕಾಣಸಿಕೊಳ್ಳುವುದು ಅಪ್ಪನ ಹಕ್ಕು ಮತ್ತು ಕರ್ತವ್ಯ ಎಂಬಂತೆ ಜಗತ್ತು ನೋಡುವುದು ಸಹಜ ಸಿದ್ಧ ನೀತಿಯಾದಂತಿದೆ.

ಜಗತ್ತಿನ ಜೀವಜಾಲದ ಪರಂಪರೆಯನ್ನು ನಿರಂತರ ಉಳಿಸಿ-ಬೆಳೆಸುವ ನಿಜದ ಪೋಷಕನೆಲೆಯಲ್ಲಿ ಅಮ್ಮ-ಅಪ್ಪ ಕಾಣುವುದಾದರೆ ಅಮ್ಮನಿಗಿಂತ ಭಿನ್ನವಾಗಿ 'ಅಪ್ಪ' ಕಾಣಿಸಿಕೊಳ್ಳುವುದು ವ್ಯವಸ್ಥೆಯ, ಸಮಾಜದ, ನಿರೀಕ್ಷೆಯ ತುರ್ತೂ ಹೌದು. ಸಮಾಜ ಎನ್ನುವುದು ಸಮುದಾಯ ಬದುಕಿನ ಪರಮ ನೈತಿಕಪ್ರಜ್ಞೆ ಎಂದೇ ಭಾವಿಸುವ ಭಾರತದಂತಹ ದೇಶದಲ್ಲಿ ಕುಟುಂಬ ವ್ಯವಸ್ಥೆಗೆ ಇರುವ ಮಹತ್ವ ಸರ್ವವಿಧಿತ ಮತ್ತು ಅದು ನಂಬಿಕೊಂಡ ಮೌಲ್ಯಗಳ ಹಿನ್ನೆಲೆಯಿಂದಲೂ ಪ್ರಶ್ನಾತೀತ. ಆದರೆ ಕಾಲ ಬದಲಾಗುತ್ತಿದೆ ಎನ್ನುವುದನ್ನು ಹಲವು ಆಯಾಮಗಳಲ್ಲಿ ಒಪ್ಪಿಕೊಳ್ಳುವ ನಾವು 'ಸಮಾಜ'ದ ಸ್ವರೂಪವೂ ನಿಧಾನವಾಗಿ ಬದಲಾಗುತ್ತಿದೆ ಎನ್ನುವುದನ್ನು ಸಹಿಸಿಕೊಳ್ಳಬೇಕಿದೆ.

ಪುರುಷಪ್ರಧಾನ ಎನ್ನುವುದು ಜಗತ್ತಿನ ಚೌಕಟ್ಟಿನಲ್ಲೆಲ್ಲಾ ಒಂದಲ್ಲ ಒಂದು ಕಾರಣದಿಂದ ಪೋಷಿಸಲ್ಪಟ್ಟದ್ದೇ ಆಗಿದೆ. 'ಬಲಶಾಲಿ' ಎನ್ನುವುದನ್ನು ಮೊದಲಿಗೆ 'ದೈಹಿಕ ನೆಲೆಯಿಂದ ಗಮನಿಸಿದ್ದಾಗಿಯೇ ಈ ಬಗೆಯ ಯೋಚನೆ ಸಾಧ್ಯವಾಗಿದ್ದಿರಬಹುದು. ಇದಕ್ಕೆ ಪೂರಕ ಎಂಬಂತೆ ಹೆಣ್ಣಿನ ದೈಹಿಕ ರಚನೆಯಲ್ಲಿ ಪುರುಷನಿಗೆ ಹೋಲಿಸುವಾಗ ಕೋಮಲತೆಯು ಕಾಣಿಸಿಕೊಂಡದ್ದಿರಬಹುದು 'ತಾಯ್ತನ'ವನ್ನು ಜೀವಂತಿಕೆಯ ಜವಾಬ್ದಾರಿಯನ್ನು ಅವಳೇ ಪಡೆದ ಕಾರಣಕ್ಕೂ ಹೀಗಾಗಿದ್ದಿರಬಹುದು. ಪರಸ್ಪರರ ನಡುವಿನ ಆಕರ್ಷಣೆಯ ಅರ್ಥವೂ ಇದಾಗಿತ್ತೆನ್ನುವುದು ನಿರ್ವಿವಾದ. ಒಂದಾಗುವ ಒಪ್ಪಿಗೆಯಲ್ಲಿಯೇ ದಾಂಪತ್ಯದ ಪರಿಕಲ್ಪನೆಯೂ ಕುಟುಂಬದ ಯೋಚನೆಯು ಸುಲಭವಾದದ್ದು ಇಬ್ಬರ ನೆಲೆಯಿಂದಲೂ ಹೆಚ್ಚು ಸುರಕ್ಷಿತವೂ ಅರ್ಥಪೂರ್ಣವು ಮತ್ತು ಬಹಳ ಮುಖ್ಯವಾಗಿ ಸಂಬಂಧ ಎನ್ನುವುದರ ಮುನ್ನುಡಿಯೂ ಆಗಿರಲೇಬೇಕು.

ಕೃಷಿಯಂತಹ ಪರಮ ಉದ್ಯೋಗವನ್ನು ಕ್ರಿಯಾಶೀಲ, ಸೃಜನಶೀಲ ಪ್ರಕ್ರಿಯೆಯಾಗಿ ಆರಂಭಕ್ಕೆ ಹೆಣ್ಣೆ ಗ್ರಹಿಸಿರಬಹುದಾದರೂ ಮುಂದೆ ಅದು ದುಡಿಮೆ, ಶ್ರಮ ಎಂಬೆಲ್ಲಾ ಅರ್ಥಕ್ಕೆ ಪುರುಷನದಾದದ್ದು ಈಗ ಇತಿಹಾಸ. ಇಷ್ಟವಿದ್ದೋ ಇಲ್ಲದೆಯೋ ಸರಿಯೋ- ತಪ್ಪೋ ಕುಟುಂಬ-ಸಮಾಜ ಎಂಬೆಲ್ಲಾ ನಂಬಿಕೆಗಳಲ್ಲಿ ಕ್ರಮೇಣ ಗಂಡಸು ದುಡಿವ ಅರ್ಥಕ್ಕೆ ಹೊರಜಗತ್ತಿನ ವಾರಸುದಾರನಾದರೆ ಹೆಣ್ಣು ಮನೆಯೊಳಗಿನ ವ್ಯವಸ್ಥಿತ ಸಂಬಾಳಿಕೆಗೆ ರೂಪವಾಗಿಬಿಟ್ಟಳು. ಅಲ್ಲಲ್ಲಿ ಇದು ತಪ್ಪಿದಂತೆ ನಡೆದರೂ ಬಹುಮತದ

ಒಪ್ಪಿತ ವ್ಯವಸ್ಥೆಯಾದದ್ದು ಈಗ ಪರಂಪರೆಯ ಭಾವ. ಆಧುನಿಕತೆಯ ಈ ಹೊತ್ತಿಗೆ 'ದುಡಿಯುವ' ಕಲ್ಪನೆಯಲ್ಲಿ ದಿನೇ ದಿನೇ ಬದಲಾಗಿ ಹೆಣ್ಣು ದುಡಿಯುವಲ್ಲಿ ಪುರುಷನ ಸರಿಸಮವಾಗಬಹುದಾದದ್ದ ಘಟಿಸುತ್ತಿದೆ, ಕೆಲವೊಮ್ಮೆ ಆಕೆ ಪುರುಷನಿಗಿಂತ ಹೆಚ್ಚು ವೃತ್ತಿಪರತೆ, ದಕ್ಷತೆ ಸಾಧಿಸಿದ್ದು ಸಾಧ್ಯವಾಗುತ್ತಿದೆ ಆದರೂ ಮನೆಯ ತಾಯಿ ಅವಳೇ, ಅವಳ ಗಂಡನಾಗಿ ದಾಂಪತ್ಯದ ಸಫಲತೆಯ ಫಲಿತ ಮಕ್ಕಳಲ್ಲಿ ಎಂಬಂತಾದಾಗ 'ಅಪ್ಪ' ಪುರುಷನೇ ಆಗಿದ್ದಾನೆ.

ಮನೆ ಎನ್ನುವುದರ ವಾರಸುದಾರ ಅಪ್ಪನಾಗುವುದಕ್ಕೆ ಹಲವು ಕಾರಣಗಳಿವೆ ತಾನು ಗಂಡಸು, ತಾನು ದುಡಿಯುವವ ಮತ್ತು ತಾನು ಹಿರಿಯ ಇವೆಲ್ಲಕ್ಕಿಂತ ಮುಖ್ಯವಾಗಿ ತಾನು ಪರಂಪರೆಯ ವಾರಸುದಾರ ಹಾಗಾಗಿ ತನ್ನ ಅಪ್ಪನ ಸ್ಥಾನ ನಂತರಕ್ಕೆ ತನ್ನದೇ ಎನ್ನುವುದು ಒಳ-ಹೊರ ನಂಬಿಕೆ ಅಮ್ಮ ಅಸ್ತಿತ್ವವಾಗುವಾಗ ಅಪ್ಪ ಭದ್ರ ಭವಿಷ್ಯದ ಕನಸಿಗೆ ಭರವಸೆಯಂತಾಗುತ್ತಾನೆ.

ದೇವರನ್ನು 'ತಂದೆ' ಎಂದು ಸಂಭೋಧಿಸುವುದುಂಟು ಅಂದರೆ ತನಗೆ ಸಂಕಟ, ತೊಂದರೆ ಒದಗಿದಾಗಲೆಲ್ಲಾ ಅವನು ಕಾಪಾಡಬಲ್ಲ ಎನ್ನುವುದು ಸಾಮಾನ್ಯ ನಂಬಿಕೆ. ಇದೇ ಅರ್ಥದಲ್ಲಿ ಕುಟುಂಬದ ಒಳಗೂ ಅಪ್ಪನ ಪಾತ್ರ ಕದಲುತ್ತದೆ. ಅಮ್ಮನಂತಲ್ಲ ಅಪ್ಪ, ಅಪ್ಪನದ್ದೇ ಒಂದು ಪ್ರತ್ಯೇಕ ಪರಂಪರೆ ಆತ ಗಟ್ಟಿಯಾಗಿರುತ್ತಾನೆ ಅಥವಾ ಹಾಗೆ ತೋರಿಸಿಕೊಳ್ಳುತ್ತಾನೆ. ಮನೆಯ ನಿಯಂತ್ರಣ ಎನ್ನುವ ಎಲ್ಲಾ ನೆಲೆಯಲ್ಲಿಯೂ ಅವನೇ ಕಾಣಿಸಿಕೊಳ್ಳುತ್ತಾನೆ. ಆದರೆ 'ಮಕ್ಕಳ' ವಿಷಯದಲ್ಲಿ ಆ ನಿಯಂತ್ರಣ ಎನ್ನುವುದಕ್ಕೆ ಭಾವ-ಭಾಂದವ್ಯವಿದೆ, ವಾತ್ಸಲ್ಯದ ನೆರಳಿದೆ, ಹೃದಯವಂತಿಕೆಯ ಅರ್ಥವಿದೆ. ತಾನು ತಂದೆಯಾಗುವ ಅರಿವಿನ ಮೊದಲ ಕ್ಷಣದಿಂದಲೇ ಬಹುಪಾಲು ಪುರುಷರು ಅಭಿಮಾನ ಪಡುವುದಾಗುತ್ತದೆ. ಅದೊಂದು ಹೆಮ್ಮೆ, ದಾಂಪತ್ಯದ ಸಾಫಲ್ಯತೆ ಎಂದೆಲ್ಲಾ ಪರಿಭಾವಿಸಲ್ಪಟ್ಟು ಅದೊಂದು ಸಾಮಾಜಿಕ ಗೌರವ ಎಂದೇ ಪರಿಗಣಿಸಲ್ಪಡುತ್ತದೆ. ಈ ಎಲ್ಲಾ ಹಿರಿಮೆಗಳನ್ನು ಕಳಚಿನೋಡಿದರೆ 'ಅಪ್ಪ' ಒಂದು ಗೌರವದ-ಪ್ರೀತಿಯ ವಾತ್ಸಲ್ಯದ-ಹೆಮ್ಮೆಯ ಒಂದು ಪದೋನ್ನತಿಯೇ ಹೌದು.

'ಅಮ್ಮ' ಎನ್ನುವುದಕ್ಕಿರುವ ಸಾರ್ವತ್ರಿಕ ಎನ್ನುವ ಮೃದುತ್ವದ ಗುಣ ಇಡಿಯಾಗಿ ಒಂದೇ ಎನ್ನುವಂತೆ 'ಅಪ್ಪ'ನದಾಗಿರುವುದಿಲ್ಲ. ಅದಕ್ಕೆ ಮುಖ್ಯ ಕಾರಣ ಈ ಮೇಲೆ ಗ್ರಹಿಸಿದ ಎಲ್ಲಾ ಹಿನ್ನೆಲೆಯೂ ಆಗಿದ್ದಿರಬಹುದು. ಅಮ್ಮನಷ್ಟು ಸಹಜವಾಗಿ, ಸಲೀಸಾಗಿ ನೇರವಾಗಿ ಅಪ್ಪ ತನ್ನ ಪ್ರೀತಿಯನ್ನು ಮಕ್ಕಳು ಬೆಳೆದಂತೆಲ್ಲ ಪ್ರಕಟಿಸುವುದಿಲ್ಲ. ಒಂದು ಸಣ್ಣ ಎಚ್ಚರದಂತೆ ಅವನು ವರ್ತಿಸುತ್ತಿರುತ್ತಾನೆ. ಬಹುಶಃ ಒಳಗೊಳಗೆ ತನ್ನಪ್ಪ ತನ್ನನ್ನು ನಡೆಸಿಕೊಂಡ ಬಗೆಯೂ ಅವನ ಸ್ಮೃತಿಯೊಳಗೇ ಇದ್ದಿರಬಹುದು.

ಆದರೆ ಅಂತಃಕರಣ ಮಾತ್ರ ನಿಜದ 'ಅಪ್ಪನೇ ಆಗಿರುತ್ತದೆ. ಅದು ತನ್ನ ಮಗು ತನ್ನ ವಂಶ, ನಾಳೆ ತನ್ನ ಹೆಸರು, ತನ್ನ ಕೀರ್ತಿ, ತನ್ನ ಕನಸು, ತನ್ನ ಭರವಸೆ ಎಂದೆಲ್ಲಾ ಹಲವು ಕನವರಿಕೆಗಳ ಆಧಾರವೇ ಆಗಿರುವುದುಂಟು. ಒಂದು ಮಗು ತನ್ನ ಕುಟುಂಬದ ಸಹ ಸದಸ್ಯನಾದ ಕ್ಷಣದಿಂದ ಅಪ್ಪನ ದಿನಚರಿಯಲ್ಲಿಯೂ ಒಂದಿಷ್ಟು ಏರುಪೇರಾಗುವುದು

ಸಹಜ ಮತ್ತು ಅನಿವಾರ್ಯ. ತನ್ನ ಹೆಂಡತಿಯ ಜವಾಬ್ದಾರಿಯಲ್ಲಿ ಒಂದಿಷ್ಟು ಪಾಲು ಪಡೆಯುವ ತುರ್ತನ್ನು ಪ್ರೀತಿಯೆಂದೇ ಪರಿಭಾವಿಸುವ ಸಾಧ್ಯತೆಯಿಂದ ಮಗು, ಮಕ್ಕಳು ಬೆಳೆದಂತೆಲ್ಲಾ ಅವರ ಸಣ್ಣಪುಟ್ಟ ಜವಾಬ್ದಾರಿಗಳು ತನಗೆ ವರ್ಗಾಯಿಸಲ್ಪಟ್ಟಾಗ ಒಮ್ಮೊಮ್ಮೆ ತೊಡಕಾದರು ಸಾವರಿಸಿಕೊಂಡಿದ್ದಾನೆ, ಕಾರಣ ಸರಳ ಅವರು ಅಪ್ಪ, ಮಕ್ಕಳ ಸ್ನಾನಮಾಡಿಸಿ, ಬಟ್ಟೆ ತೊಡಿಸಿ, ತಲೆಬಾಚುವ ತನಕ ಒಂದಷ್ಟು ಪರಸ್ಪರ ಮಾಧುರತೆಗಳು ಅಪ್ಪ ಮಕ್ಕಳ ನಡುವೆ ವಿನಿಯಮವಾಗುವುದುಂಟು. ಬೆಳೆದಂತೆಲ್ಲಾ ಓದು, ಶಾಲೆ, ಆಟ-ಪಾಠ ಅವರ ಗುಣ-ಸ್ವಭಾವಗಳ ಮೇಲೆ ಹೆಚ್ಚು ಎಚ್ಚರದಿಂದ ನಿಗಾ ಇಡುವ ಅರಿವಿನಲ್ಲಿ ಅಪ್ಪ ಬದ್ಧನಾಗಿಯೇ ಇರುತ್ತಾನೆ.

ಅವ್ವ-ಅಮ್ಮ ಎಂಬ ಬಗ್ಗೆ ಬಹಳ ಚಾರಿತ್ರಿಕ ದಾಖಲೆಗಳು ಬಂದಂತೆ ಅಪ್ಪನ ಬಗೆಗೂ ಬಂದಿವೆ. ಆದರೆ ಎರಡರ ನಡುವಿನ ಸಂವೇದನಾ ಸಾಧ್ಯತೆಗಳು ಒಂದಿಷ್ಟು ಭಿನ್ನವೂ ಆದದ್ದಿದೆ. ಯಶಸ್ವಿ ಅಪ್ಪಂದಿರ ಪಾಲು ಹೊರಜಗತ್ತಿನ ಯಶಸ್ಸಿನ ಹಿಮ್ಮೇಳವಾಗಿಯೇ ಹೆಚ್ಚಾಗಿರುವುದುಂಟು. ಹಾಗೆಯೇ ಹೆಣ್ಣುಮಕ್ಕಳ ಪ್ರಜ್ಞೆಯಲ್ಲಿ ಅಪ್ಪಂದಿರ ಪಾಲು ತುಸುಹೆಚ್ಚೇ ಎನ್ನಬಹುದಾದುದು ವಾತ್ಸಲ್ಯದ ಸತ್ಯ. ಅಮ್ಮನಿಗೆ ಮಗನ ಮೇಲಿನ ಅಕ್ಕರೆ ಅಪ್ಪನಿಗೆ ಮಗಳ ಮೇಲಿನ ಪ್ರೀತಿ ಒಂದಿನಿತಾದರೂ ಹೆಚ್ಚಿರಬಹುದೆ ಎನ್ನುವುದು ತತ್‌ಕ್ಷಣಕ್ಕೆ ಮೇಲೆ ಗೋಚರಿಸಬಹುದಾದ ಸಹಜ ಸತ್ಯ. ಇದಕ್ಕೆ ಪೂರಕವೆಂಬಂತೆ ವೈಜ್ಞಾನಿಕ ಸತ್ಯವಾಗಿ 'ಸಿಗಂಡ್‌ಫ್ರಾಯ್ಡ್' ಸಿದ್ಧಾಂತವು ಪ್ರತಿಪಾದಿಸಲ್ಪಡುವುದು ಹಳೆಯ ಸಂಗತಿ.

ಅಮ್ಮ-ಅಪ್ಪಂದಿರು ಹೆಣ್ಣು-ಗಂಡುಗಳೆಂಬ ಸಾಮಾನ್ಯ ಜಗತ್ತಾಗಿ, ಅವರವರ ಜಗತ್ತು ಅವರಿಗರಿವಿರುವಂತಹದ್ದೇ ಆಗಿ ಪರಸ್ಪರರು ಭಿನ್ನ ಜಗತ್ತಿನೊಂದಿಗೆ ಮತ್ತಷ್ಟು ಆಪ್ತವಾಗುವುದು ಸಹಜ ಕ್ರಿಯೆಯೂ ಹೌದು. ಅಮ್ಮ ಆ ಕಾರಣಕ್ಕೆ ಮಗನನ್ನು ಅವನ ಜಗತ್ತನ್ನು ಸಾಕಷ್ಟು ಕುತೂಹಲದಿಂದ ನಿರೀಕ್ಷಿಸುತ್ತಾಳೆ. ಸಾಕಷ್ಟು ಸಲ ಅಪ್ಪನ ಅವಕೃಪೆಗೆ ಮಗ ತುತ್ತಾದಾಗ ಅವನ ಪರ ವಕಾಲತ್ತು ವಹಿಸುತ್ತಾಳೆ. ಪರ್ಯಾಯವಾಗಿ ಅಪ್ಪನಾದರೂ ಅಷ್ಟೇ ಮಗಳ ವಿಚಾರದಲ್ಲಿ ಆತನದು ಮೃದು-ಮಧುರವಾದ ಧೋರಣೆಯೇ ಆಗಿರುವುದುಂಟು ಕೆಲವೊಮ್ಮೆ ಅಮ್ಮ ಮಗಳ ವಿಚಾರದಲ್ಲಿ ಕೆಲವು ನಿಲುವುಗಳಿಗೆ ವಿರೋಧ ವ್ಯಕ್ತಿಪಡಿಸಿದರೂ ಮಗಳು ಅಪ್ಪನ ಬಳಿ ಗೆಲುವು ಸಾಧಿಸಿಬಿಡುತ್ತಾಳೆ.

ಮಹಿಳೆಯರ ಬಹಳಷ್ಟು ಬದುಕಿನಲ್ಲಿ ಅಪ್ಪನ ಪ್ರಭಾವದ ಸಿಂಹಪಾಲಿರುವುದನ್ನು ನಾವಿಲ್ಲಿ ನೆನೆಯಬಹುದು. ಇದು ಬಹಳಷ್ಟು ಸಲ ಅವರವರ ವ್ಯಕ್ತಿತ್ವದ ಫಲಿತವಾಗಿಯೂ ಕಂಡುಬರುವುದುಂಟು. ಹಾಗಾಗಿಯೇ ಅತ್ಯುತ್ತಮ ಎನ್ನುವಂತಹ ಅಪಾರ ಭರವಸೆಯ ಅಪ್ಪಂದಿರು ಸಾಕಷ್ಟಿದ್ದಾರೆ. ಮಗನ ವಿಚಾರದಲ್ಲಿ ಅಪ್ಪ ತುಸು ನಿರ್ಲಿಪ್ತನಂತೆ, ಒಮ್ಮೊಮ್ಮೆ ನಿಷ್ಠುರವಾದಿಯಂತೆ, ಸಿಟ್ಟಿನಂತೆ ಕಂಡುಬರುವಲ್ಲಿಯೂ ಅವನಿಗೆ ಅವನದ್ದೇ ವ್ಯಕ್ತಿತ್ವದ ನಿನ್ನೆಗಳು ನೆನಪಾಗಿರಲೂಬಹುದು. ಮಗನ ಬಗೆಗಿನ ಅವನ ಶಿಸ್ತಾದರೂ ಅವನು ಹಾದಿತಪ್ಪದಂತೆ ಎಚ್ಚರದಲ್ಲಿಡುವ

ಪ್ರಕ್ರಿಯೆಯೂ ಆಗಿರಬಹುದು. ಮಗ ಹುಡುಗನೆಂಬ ಕಾರಣಕ್ಕೆ ಹೆಚ್ಚೆಚ್ಚು ಹೊರಜಗತ್ತಿನೊಂದಿಗೆ ಅನುಸಂಧಾನ ನಡೆಸುವ ಅವಕಾಶವಿರುವಲ್ಲಿ ಅವನಿಗೊಂದು ಸಣ್ಣ ಭಯ ಉಂಟುಮಾಡುವ ಆಸೆ ಮತ್ತು ಜವಾಬ್ದಾರಿ ತನ್ನದೆಂದು



ಅಪ್ಪ ಭಾವಿಸಿರುವುದುಂಟು ಆದರೆ ಒಳಗೊಳಗೇ ಅವನ ಪ್ರೀತಿ, ಅಭಿಮಾನ, ಅಕ್ಕರೆ ಪ್ರಶ್ನಾತೀತ. ಮಗನ ಸಣ್ಣಪುಟ್ಟ ಯಶಸ್ಸಿನಲ್ಲಿಯೂ ಆತ ತನ್ನನ್ನೇ ಕಾಣಬಯಸುತ್ತಾನೆ. ಅಭಿಮಾನಪಡುತ್ತಾನೆ ತನ್ನವರಲ್ಲಿ ಅದನ್ನು ಹೆಮ್ಮೆಯಿಂದಲೇ ಹಂಚಿಕೊಳ್ಳುತ್ತಾನೆ. ಇದು ಅವನ ಹೆಂಡತಿಗೂ ಗೊತ್ತು, ಬಹಳ ಸಲ ಮಗನಿಗೂ ಗೊತ್ತು. ಅಪ್ಪ ಹೀಗೆ ಸಣ್ಣದೊಂದು ಆಂತಕವೋ ಭಯವೋ ಆಗಿರದಿದ್ದರೆ ಅದೆಷ್ಟೋ ಗಂಡು ಮಕ್ಕಳು ಹಾದಿ ತಪ್ಪಿರಬಹುದಾದ ಅಪಾರ ಸಾಧ್ಯತೆಗಳಿತ್ತು ಎನ್ನುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಕೆಲವೊಮ್ಮೆ ವಿಪರ್ಯಾಸ ಎನ್ನುವಂತೆ 'ಅಪ್ಪ' ಎನ್ನುವ ಅತೀ ಶಿಸ್ತಿನಿಂದಲೂ ಅತೀ ಪ್ರೀತಿಯಿಂದಲೂ ಹಾಳಾಗಿರುವ ಸಾಕಷ್ಟು ಗಂಡುಮಕ್ಕಳೂ ಉಂಟು ಇದು ಅಪ್ಪ-ಮಕ್ಕಳ ನಡುವಿನ ಪರಸ್ಪರರ ಸೋಲುವಿಕೆಯೂ ಹೌದು.

ಈಗಾಗಲೇ ಗಮನಿಸಿದಂತೆ ಅಪ್ಪ-ಮಗಳ ಜಗತ್ತೇ ಒಂದು ವಿಶಿಷ್ಟ ಮಹಾಕಾವ್ಯ ಕೆ.ಎಸ್.ನ. 'ತುಂಗಭದ್ರೆ' ಎಂಬ ಕವನದಲ್ಲಿ ಈ ವಿಲಾಸವನ್ನು ಅತ್ಯುದ್ಭುತವಾಗಿ ಹಿಡಿದಿಡುತ್ತಾರೆ. 'ರಾತ್ರಿಯಲಿ ನನ್ನೆದೆಗಿವಳು ದೇವರ ಪದಕ' 'ಹೊಸಿಲು ದಾಟಿದೆನೆಂದರೆನಗಿವಳು ಸರ್ಪಗಾವಲು' ಎಂತಹ ವ್ಯಕ್ತಿತ್ವವೂ ಕರಗಬಹುದಾದ ಅಚ್ಚರಿಯ ಅರಿವು ಇದು. ಬಹುಶಃ ಅಪ್ಪ ತನ್ನ ಮಗಳಲ್ಲಿ ತನ್ನ ತಾಯಿಯನ್ನೇ ಕಾಣಬಹುದೆ? ಇದ್ದೀತು. ಮಗುವಾದ ಕಾಲದಿಂದಲೂ ಒಳಗೇ ಉಳಿದು ಅವನ ಬಹುಪಾಲು ಸಮಯವನ್ನೆಲ್ಲಾ ತನ್ನ ತುಂಟತನದಲ್ಲಿ, ಅನೂಹ್ಯವಾದ ಆತ್ಮೀಯತೆಯಲ್ಲಿ ಬಂಧಿಸಿಡುವ ಮಗಳು ಅಪ್ಪನ ಪಾಲಿಗೊಂದು ಅಚ್ಚರಿಯ ಸಿರಿಯೇ ಹೌದು. ಬೆಳೆದಂತೆ ಮಗ ಹೊರ ಜಗತ್ತಿಗೆ ಚಾಚಲ್ಪಟ್ಟರೆ, ಮಗಳು ಮನೆಯೊಳಗಿದ್ದೇ ಎಲ್ಲಾ ಬಗೆಯ ಕಕ್ಕುಲತೆಯಿಂದ, ಕಾಳಜಿಗಳ ಪ್ರಕಟದೊಂದಿಗೆ ದಿನೇ ದಿನೇ ಅಪ್ಪನ ಅಚ್ಚುಮೆಚ್ಚಾಗಿಬಿಡುತ್ತಾಳೆ. ಬಹುಪಾಲು ಕುಟುಂಬಗಳಲ್ಲಿ ಘಟಿಸುವ ಸಹಜತೆಯಿದು. ಮಗಳು ಬೆಳೆದಂತೆಲ್ಲಾ ಅಪ್ಪನನ್ನು ಪ್ರಶ್ನಿಸುವ ಎತ್ತರವನ್ನು ತಲುಪುವುದು ಸೋಜಿಗವೇ ಸರಿ. ಬಹಳ ಸಲ ಮಗಳ' ಕಾರಣಕ್ಕಾಗಿಯೇ ಗಂಡನಿಂದ ತೆಗಳಿಸಿಕೊಳ್ಳುವ ಆತಂಕವೂ ಅಮ್ಮನಿಗೆ ಎದುರಾಗಿಬಿಡಬಹುದು. ಎಷ್ಟೆಂದರು ಮಗಳು ಕೆಲವು ಕಾಲ ತನ್ನೊಂದಿಗಿದ್ದು, ಪರರ ಮನೆಯ ಬದುಕಾಗಿಬಿಡುತ್ತಾಳೆ. ಎನ್ನುವ ಅರಿವೂ ಸದಾ ಅಪ್ಪನಲ್ಲಿ ಜಾಗರೂಕವಾಗಿದ್ದು ಅವನು ಮಗಳ ಮೇಲೆ ಹೆಚ್ಚು ಮಮಕಾರ ಹೊಂದಬಹುದು. ಹಾಗಾಗಿಯೆ ಬಹಳಷ್ಟು ಕುಟುಂಬಗಳಲ್ಲಿ ವಯಸ್ಸಿಗೆ ಬಂದ ಮಗಳ ಮದುವೆ ಅಮ್ಮನಿಗೆ ಗಂಭೀರ ಸಮಸ್ಯೆಯಾದರೆ ಅಪ್ಪ ಅಷ್ಟು ಬೇಗ

ಪ್ರತಿಕ್ರಿಯಿಸುವುದಿಲ್ಲ, ಅದರರ್ಥ ಇದು ನಿರಾಸಕ್ತಿಯಲ್ಲ ಅಪ್ಪನಿಗೆ ಇಷ್ಟು ಬೇಗ ಮಗಳನ್ನು ಮನೆಯಿಂದ ಹೊರಗೆ ಕಳುಹಿಸುವುದು ಸುಲಭ ಸಂಗತಿಯಾಗಿರುವುದಿಲ್ಲ.

ಇಂದು ಪರಂಪರಾಗತವಾದ ಕುಟುಂಬಗಳ ನಂಬಿಕೆಗಳನ್ನು ಮೀರಿದಂತೆ ಸಾಂಪ್ರದಾಯಿಕ ಚೌಕಟ್ಟಿನಿಂದಾಚೆಗೆ ಹೆಣ್ಣುಮಕ್ಕಳು ಹೊಸಿಲುದಾಟಿ ಶಿಕ್ಷಣ, ಜ್ಞಾನ, ಕೌಶಲ್ಯ, ವೃತ್ತಿ, ದಕ್ಷತೆ ಎಂದೆಲ್ಲಾ ಯಶಸ್ವಿಯಾಗುತ್ತಿರುವುದರ ಹಿಂದೆ ಬಹುಪಾಲು ಅಪ್ಪಂದಿರ ಮಮಕಾರ ಮತ್ತು ವಿಶ್ವಾಸಗಳೇ ಹೆಚ್ಚೆಚ್ಚು ಪ್ರೇರಕವಾಗಿವೆ ಎನ್ನುವುದನ್ನು ನಾವಿಲ್ಲಿ ಅವಶ್ಯ ಸ್ಮರಿಸಬಹುದು. ಈ ಬಗೆಯ ಸಾಧಕಿಯರ ಮನದಾಳದ ಮಾತು ಬಹುಪಾಲು ಅಪ್ಪನೇ ಆಗಿರುವುದು ಗಮನಾರ್ಹ. ಒಂದು ಕಾಲಕ್ಕೆ ಮಗನೇ ತಮ್ಮನ್ನು



ಕಾಪಾಡುವವನು ಎಂದುಕೊಂಡಿದ್ದ ಸನಾತನ ಭ್ರಮೆಗಳು ಇಂದು ಹೆಣ್ಣುಮಕ್ಕಳ ಪ್ರೀತಿಯ ಕಾರಣದಿಂದಲೇ ಕುಸಿದುಹೋಗಿ “ಹೆಣ್ಣು ಹೆಚ್ಚು ಸಂವೇದನಾಶೀಲ, ಜೀವಂತಿಕೆಯ, ತಮ್ಮನ್ನು ಸಲಹಬಲ್ಲ ಸತ್ವವೆಂದು ಬಹಳಷ್ಟು ತಂದೆ-ತಾಯಿಯರಿಗೆ ಅರಿವಾಗಿದೆ. 'ಹೆಣ್ಣುಮಗು' ಬೇಕು ಎನ್ನುವಷ್ಟರ ಮಟ್ಟಿಗೆ ಈ ದೇಶ ಬದಲಾಗುತ್ತಿರುವುದು ಬಹುದೊಡ್ಡ ಆಶಾದಾಯಕ ಬೆಳವಣಿಗೆ, ಇದರ ಹಿಂದೆ ಅಪ್ಪನ ಪಾಲು ದೊಡ್ಡದು ಎನ್ನುವುದು ನಿರ್ವಿವಾದ. ಅಪ್ಪ-ಮಗಳ ಆತ್ಮೀಯ ಜಗತ್ತು ಇಂದು ಅದ್ಭುತವಾಗಿದೆ ಎಂದೂ ಅಳಲಾರದ, ಬಹಳ ಗಟ್ಟಿತನವೆಂದೇ ಬಿಂಬಿಸಿಕೊಂಡ ಅಪ್ಪನ ಕಣ್ಣಂಚಿನಲ್ಲಿ ನೀರು, ಮಗಳ ಮದುವೆಯಂದು ಕಾಣುತ್ತದೆ. ಮಗಳ ಯಶಸ್ಸಿನಲ್ಲಿಯೂ ಆನಂದ ಭಾಷ್ಪ ಹನಿಯಾಗುತ್ತದೆ. ಇಂದು ಬಹಳ ಮಹಿಳೆಯರ ಯಶಸ್ಸಿನ ಹಿಂದೆ ಭರವಸೆಯ ನಗುವಾಗಿ, ಧೈರ್ಯದ ರೂಪವಾಗಿ ಅಪ್ಪನಿದ್ದಾನೆ.

ಅಪ್ಪನ ಭಾಷೆಗಾಗಿ ರಾಮ ವನವಾಸಕ್ಕೆ ಹೊರಟ, ಜನಕನ ಮಗಳೇ ಜಾನಕಿಯಾದಳು, ಅಪ್ಪನಿಗಾಗಿ ಭೀಷ್ಮ ಬ್ರಹ್ಮಚಾರಿಯಾದ, ಮಗನಿಗಾಗಿ ಅಪ್ಪ ಧೃತರಾಷ್ಟ್ರ ಮನಸ್ಸಿನಲ್ಲಿಯೂ ಕುರುಡನಾದ, ಜಗತ್ತು ಅಚ್ಚರಿಪಡುವಂತಹ ಅಪ್ಪನಾದ ಶಕುಂತಲಾಳ ಸಾಕಿದ ಕಣ್ವ, ಅಪ್ಪನ ಕೀರ್ತಿಯಲ್ಲಿ ಅಭಿಮನ್ಯು ವೀರನಾದ, ಅಪ್ಪನಿಗೆ ತಕ್ಕ ಮಗನಾದ ಬಬ್ರುವಾಹನ. ಹೀಗೆ ಬಹುದೊಡ್ಡ ಪರಂಪರೆ 'ಅಪ್ಪನದು'. ಅಮ್ಮ ಅಸ್ತಿತ್ವವಾಗಿ ಮಡಿಲಾದರೆ ಅಪ್ಪ ಕೈಹಿಡಿದು ನಡೆಸುವ ಆಸರೆಯಾಗುತ್ತಾನೆ, ಹೆಜ್ಜೆಗಳ ಕಲಿಸುತ್ತಾನೆ. ಒಳಗೊಳಗೇ ಖುಷಿಪಡುವ, ಕಣ್ಣಳಲ್ಲೇ ಮಾತನಾಡುವ, ಬೆನ್ನ ಹಿಂದೆ ನಿಂತು ಕಣ್ಣುಂಬಿಕೊಂಡ ಮಕ್ಕಳ ಯಶಸ್ಸನ್ನು ತನ್ನದೆಂದೇ ಬೀಗಿದ, ಸಾರ್ಥಕ ಮಕ್ಕಳಿವರು ಎಂದು ಹೆಮ್ಮೆಪಟ್ಟ ಅಪ್ಪ ಕಾಡುತ್ತಾನೆ, ಕಾಡುತ್ತಾನೆ, ಕಾಡುತ್ತಾನೆ......

**[ಟೈಮ್ಸ್ ಆಫ್ ದೀನಬಂಧು - ಪಾಕ್ಷಿಕ ಪತ್ರಿಕೆ – ೨೦೧೨]**

## ಭ್ರಷ್ಟಾಚಾರ ವಿರೋಧಿ ಹೋರಾಟ: ಅಸಲಿ ಹೋರಾಟ ಮತ್ತು

## ನಕಲಿ ಹೋರಾಟಗಳ ನೆಲೆಯಿಂದ

**ಡಾ. ಬಿ.ಎಂ. ಪುಟ್ಟಯ್ಯ**

### ಹೋರಾಟಗಳ ಯುಗ

ಇದು ಹೋರಾಟಗಳ ಕಾಲ ಅಥವಾ ಹೋರಾಟಗಳ ಯುಗ, ಒಂದು ಸಣ್ಣ ಓಣಿಯಿಂದ ಹಿಡಿದು, ಜಿಲ್ಲಾ ಪಂಚಾಯತ್, ವಿಧಾನ ಸಭೆ ಮತ್ತು ಲೋಕ ಸಭೆಯವರೆಗೆ ಇದರ ವಿಸ್ತಾರ ಇದೆ. ಕೃಷಿ, ಕೈಗಾರಿಕೆ, ಶಿಕ್ಷಣ, ಸರಕಾರಿ ವಲಯ, ಖಾಸಗಿ ವಲಯ ಹೀಗೆ ವಿವಿಧ ವಲಯಗಳಲ್ಲಿ, ಶೋಷಕರು ತಮ್ಮ ಮೇಲೆ ನಡೆಸಿದ ಅನ್ಯಾಯಗಳ ವಿರುದ್ಧ ಜನರು ಬೇರೆ ಬೇರೆ ವಿಧಾನಗಳಲ್ಲಿ ಪ್ರತಿಭಟನೆ, ಹೋರಾಟಗಳನ್ನು ನಡೆಸುತ್ತಿದ್ದಾರೆ. ಇವತ್ತು ಹೋರಾಟ, ಪ್ರತಿಭಟನೆ ಇಲ್ಲದ ಯಾವ ದಿನವನ್ನೂ ಕಾಣುವಂತಿಲ್ಲ. ಇವುಗಳಲ್ಲಿ ಕೆಲವು ಸುದ್ದಿಯಾಗುತ್ತವೆ. ಮತ್ತೆ ಕೆಲವು ಸುದ್ಧಿಯಾಗುವುದಿಲ್ಲ. ಇನ್ನು ಕೆಲವನ್ನು ಸುದ್ದಿಯಾಗಲೆಂದೇ ನಡೆಸಲಾಗುತ್ತದೆ.

ಕೆಲವು ಹೋರಾಟಗಳು ನಡೆದರೂ ಅವು ಎಲ್ಲಿಯೂ ಸುದ್ದಿಯಾಗುವುದಿಲ್ಲ. ಅವಕ್ಕೆ ಸುದ್ದಿಯಾಗಲು ಅವಕಾಶ, ಸೌಲಭ್ಯ, ಸಾಮರ್ಥ್ಯ ಮತ್ತು ಉದ್ದೇಶಗಳು ಇರುವುದಿಲ್ಲ. ಅಥವಾ ಇವು ಇದ್ದರೂ ಆ ಹೋರಾಟಗಳನ್ನು ಮಾಧ್ಯಮಗಳು ಯಾವುದೇ ಕಾರಣಕ್ಕೂ ಸುದ್ದಿ ಮಾಡುವುದೇ ಇಲ್ಲ. ಯಾಕೆಂದರೆ ಅವನ್ನು ಸುದ್ದಿ ಮಾಡಲು ಅವು ಬಯಸುವುದಿಲ್ಲ. ಜನಪದರಲ್ಲಿ ಕೆಲವು ಮಂತ್ರಗಳನ್ನು ಗುಪ್ತವಾಗಿ ಹೇಳುವ ಪದ್ಧತಿ ಇದೆ. ಅದಕ್ಕೆ ಭಾಷೆಯನ್ನು ಬಳಸಲಾಗುತ್ತದೆ. ಆದರೆ ಆ ಭಾಷೆ ಶಬ್ದವಾಗುವುದಿಲ್ಲ ಅಥವಾ ಅವನ್ನು ಶಬ್ದಗಳನ್ನಾಗಿ ಉಚ್ಚರಿಸಬಾರದು. ಅವು ಆಯಾ ಸಮುದಾಯಗಳ ನಂಬಿಕೆಗಳು.

ಮದ್ದು ಹಾಕುವುದು, ಮಾಟಮಂತ್ರ ಮಾಡಿಸುವುದು, ದೈಯ್ಯ ಮತ್ತು ದೇವರಿಗೆ ಹುಯಿಲು ಹಾಕುವುದು ಮುಂತಾದ ನಂಬಿಕೆಗಳು ಇವತ್ತಿಗೂ ರೂಢಿಯಲ್ಲಿವೆ. ಇವೂ ಕೂಡ ಎದುರಾಳಿಯ ವಿರುದ್ಧ ಹೋರಾಟದ ಕೆಲವು ಮಾದರಿಗಳು. ಅವನ್ನು ಸುದ್ದಿ ಮಾಡಿದರೆ ಅವು ಫಲ ಕೊಡುವುದಿಲ್ಲ ಎಂಬುದು ಅಲ್ಲಿಯ ನಂಬಿಕೆ. ಹಾಗಾಗಿ ಈ ಬಗೆಯ ಗುಪ್ತ ಹೋರಾಟಗಳು ಎಲ್ಲಿಯೂ ಸುದ್ದಿಯಾಗುವುದೂ ಇಲ್ಲ; ಅವನ್ನು ಸುದ್ದಿ ಮಾಡುವುದೂ ಇಲ್ಲ. ಸುದ್ದಿ ಮಾಡುವುದು ಅವುಗಳ ಗುರಿ ಅಲ್ಲವೇ ಅಲ್ಲ.

ಇನ್ನೊಂದು ಬಗೆಯ ಹೋರಾಟಗಳು ನಡೆಯುತ್ತವೆ. ಅವುಗಳು ಎಷ್ಟು ಸುದ್ದಿಯಾದವು ಎಂದು ಪತ್ರಿಕೆಗಳಲ್ಲಿ ಸೆಂಟಿಮೀಟರ್ ಮತ್ತು ಮಿಲಿಮೀಟರ್‌ಗಳಲ್ಲಿ ಅಳತೆ ಮಾಡಲಾಗುತ್ತದೆ. ಟಿವಿ ಮುಂತಾದ ಮಾಧ್ಯಮಗಳಲ್ಲಿ ಎಷ್ಟು ನಿಮಿಷ ಮತ್ತು ಎಷ್ಟು ಸೆಕೆಂಡ್ ಪ್ರಚಾರ ಪಡೆದವು ಎಂದು ಲೆಕ್ಕ ಹಾಕಲಾಗುತ್ತದೆ. ಹೋರಾಟಗಳನ್ನು

ಸುದ್ದಿ ಮಾಡಲು ಬೇರೆಬೇರೆ ಉದ್ದೇಶಗಳು ಇರಬಹುದು. ಹೋರಾಟಗಳನ್ನು ಮತ್ತು ಅವುಗಳ ವಿಚಾರಗಳನ್ನು ಪ್ರಚಾರ ಮಾಡುವುದು, ಜನರನ್ನು ಹೋರಾಟಗಾರರನ್ನಾಗಿ ಪರಿವರ್ತಿಸುವುದು, ಹೋರಾಟಗಾರರನ್ನು ಪ್ರಭಾವಿಸುವುದು, ಪ್ರಚೋದಿಸುವುದು, ಸಂಘಟಿಸುವುದು. ಹೋರಾಟಗಳಲ್ಲಿ ಅವರ ಬದ್ಧತೆಯನ್ನು ಗಟ್ಟಿಗೊಳಿಸುವುದು ಇತ್ಯಾದಿ ಕಾರಣಗಳು ಇರಬಹುದು. ಸಾಮಾಜಿಕ, ರಾಜಕೀಯ ಸಮಸ್ಯೆಗಳತ್ತ ಜನರ ಗಮನ ಸೆಳೆಯುವುದು, ಶತ್ರು ವಲಯಕ್ಕೆ ಬಿಸಿ ಮುಟ್ಟಿಸುವುದು, ಮಿತ್ರ ವಲಯವನ್ನು ಸಂಘಟಿಸಿಕೊಳ್ಳುವುದು ಮತ್ತು ವಿಸ್ತರಿಸಿಕೊಳ್ಳುವುದು ಹೀಗೆ ಇದರ ಪಟ್ಟಿ ಬೆಳೆಯುತ್ತದೆ. ಆದರೆ ಕೆಲವು ಹೋರಾಟಗಳನ್ನು ಕೇವಲ ಪ್ರಚಾರಕ್ಕಾಗಿಯೇ ಮತ್ತು ಸುದ್ದಿ ಮಾಡುವುದಕ್ಕಾಗಿಯೇ ಮಾಡಲಾಗುತ್ತದೆ.

ಅಣ್ಣಾ ಹಜಾರೆ ಅವರ ನೇತೃತ್ವದಲ್ಲಿ ನಡೆಸಲಾದ `ಭ್ರಷ್ಟಾಚಾರ ವಿರೋಧಿ ಹೋರಾಟ'ವನ್ನು ಇದರಲ್ಲಿ ಯಾವುದಕ್ಕೆ ಸೇರಿಸಬೇಕು ಎಂದು ಆಲೋಚನೆ ಮಾಡಬೇಕಾಗಿದೆ. 'ಆ ಹೋರಾಟ ಏನು ಫಲ ಕೊಟ್ಟಿತು?' ಎಂಬ ಪ್ರಶ್ನೆಯನ್ನು ಕೇಳಬೇಕಾಗಿದೆ. ಇದಕ್ಕೆ ಕೆಲವರು ಬೇರೆ ಬೇರೆ ಉತ್ತರವನ್ನು ಕೊಡಬಹುದು. ಆ ಹೋರಾಟ ಏನು ಮಾಡದಿದ್ದರೂ ಭಾರತದಾದ್ಯಂತ ಸುದ್ದಿ ಮಾಡಿತು. ಆ ಹೋರಾಟವನ್ನು ವ್ಯಾಪಕವಾಗಿ ಪ್ರಚಾರ ಮಾಡಲಾಯಿತು. ಆ ಹೋರಾಟಕ್ಕೆ ವ್ಯಾಪಕ ಪ್ರಚಾರ ಕೊಡುತ್ತಿದ್ದ ಕಾಲದಲ್ಲಿ ನಡೆದ ಅನೇಕ ಸಂಗತಿಗಳು ಪ್ರಚಾರದಿಂದ ದೂರ ಉಳಿದವು. ಹಾಗಾಗಿ 'ಭ್ರಷ್ಟಾಚಾರ ವಿರೋಧಿ ಹೋರಾಟ'ದ ಮೂಲಕ ನಡೆಸಲಾದ ಸುದ್ದಿ ಮತ್ತು ಅದರ ಪರಿಣಾಮಗಳನ್ನು ಕುರಿತು ಚರ್ಚೆ ಮಾಡುವುದಷ್ಟೆ ಈಗ ಉಳಿದಿರುವ ಕೆಲಸ.

ಆ ಹೋರಾಟವನ್ನು ವರ್ಣಿಸಿರುವ ಭಾಷೆ, ಅದನ್ನು ವೈಭವೀಕರಿಸಿರುವ ಆಲಂಕಾರಿಕ ಪದಗಳು, ಮೌಲ್ಯಮಾಪನ ಮಾಡಲು ಬಳಸಿದ ವಿಶೇಷಣಗಳು ಇವೆಲ್ಲವೂ ಈಗ ಆ ಹೋರಾಟವನ್ನು ಮೌಲ್ಯಮಾಪನ ಮಾಡಲು ಮೂಲ ಸಾಮಗ್ರಿಗಳಾಗಿ ಪರಿಣಮಿಸಿವೆ.ಆ ಹೋರಾಟದಲ್ಲಿ ಮೇಲು ಮಧ್ಯಮ ವರ್ಗ, ಶ್ರೀಮಂತ ವರ್ಗದ ಅನೇಕರನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು, ಟೀನ್ ಏಜಿನ ವಿದ್ಯಾರ್ಥಿ ಸಮೂಹವನ್ನು ಬಲಾತ್ಕಾರವಾಗಿ ಭಾಗವಹಿಸುವಂತೆ ಮಾಡಲಾಯಿತು. ಇಡೀ ಭಾರತವೇ ಹೋರಾಟದಲ್ಲಿ ಒಂದಾಗಿ ಹೋರಾಟಕ್ಕೆ ಧುಮುಕಿದೆ' ಎಂಬಂತೆ ಬಿಂಬಿಸಲಾಯಿತು. ಅದನ್ನು 'ಎರಡನೇ ಸ್ವಾತಂತ್ರ್ಯ ಹೋರಾಟ' ಎಂದೂ, ಅಣ್ಣಾ ಹಜಾರೆಯನ್ನು 'ಎರಡನೇ ಗಾಂಧಿ' ಎಂದೂ ವರ್ಣಿಸಲಾಯಿತು. ಜೊತೆಗೆ ಅಣ್ಣಾ ಹಜಾರೆ ತಂಡದ ಅಪೇಕ್ಷೆಯ 'ಜನಲೋಕಪಾಲ ಮಸೂದೆ' ಜಾರಿಗೆ ಬಂದರೆ ಇಡೀ ಭಾರತದ ಈಗಿನ ಚಿತ್ರಣವೇ ಬೆಳಗಾಗುವುದರಲ್ಲಿ ಬದಲಾಗಿ ಬಿಡುತ್ತದೆ ಎಂದು ಪ್ರಚಾರ ಮಾಡಲಾಯಿತು.

ಆ ಹೋರಾಟದ ಬಗ್ಗೆ ಯಾವ ಪ್ರತಿಕ್ರಿಯೆ ನೀಡಬಹುದು ಎಂಬುದು ಈಗ ಉಳಿದಿರುವ ಸಾಮಾನ್ಯ ಪ್ರಶ್ನೆ. ಆ ಹೋರಾಟವು ಅಂತಿಮ ಹಂತದಲ್ಲಿ ಏನು ಫಲ ಕೊಟ್ಟಿತು, ಏನು ಫಲ ಕೊಡಲಿಲ್ಲ ಎಂಬುದು ಒಂದು ಆಯಾಮ. ಇದು ಆ ಹೋರಾಟದ ಪ್ರತಿಫಲ ಅಪೇಕ್ಷೆಯ ಮೌಲ್ಯಮಾಪನದ ಮಾದರಿ. ಇದಲ್ಲದೆ ಆ ಹೋರಾಟವನ್ನು ನೋಡಲು



ಇನ್ನೊಂದು ಆಯಾಮ ಕೂಡ ಸಾಧ್ಯ. ಅದು ಆ ಹೋರಾಟದ ಸಮಯದಲ್ಲಿ ನಿರ್ಮಾಣ ಮಾಡಿರುವ ಭಾಷಿಕ ನಿರೂಪಣೆ ಮತ್ತು ದಾಖಲೆಯ ಸ್ವರೂಪ ಯಾವುದು ಎಂಬುದು.

ಒಂದು ಘಟನೆ ನಡೆದ ಮೇಲೆ ಅದನ್ನು ಕುರಿತು ಸೃಷ್ಟಿ ಮಾಡುವ ಭಾಷಿಕ ದಾಖಲೆ ಮಾತ್ರ ಗಟ್ಟಿಯಾಗಿ ಉಳಿಯುತ್ತದೆ. ಮುಂದೆ ಅದನ್ನು ಪ್ರಶ್ನಾತೀತವಾಗಿ ನಂಬಿಕೊಂಡು ಹೋಗಲಾಗುತ್ತದೆ. 'ವಿಜಯ ನಗರದ ಕೃಷ್ಣದೇವರಾಯನ ಕಾಲದಲ್ಲಿ ಚಿನ್ನ ಬೆಳ್ಳಿಯನ್ನು ಅಳೆದು ಮಾರುತ್ತಿದ್ದರಂತೆ' ಎಂಬುದು ಅಂತಹ ಒಂದು ಭಾಷಿಕ ದಾಖಲೆ. ಅದು ಚರಿತ್ರೆಯ ಒಂದು ಮಾಹಿತಿ, ಅದು ಚರಿತ್ರೆಯ ಒಂದು ಮೌಲ್ಯ, ಅದು ಚರಿತ್ರೆಯನ್ನು ಕುರಿತ ಒಂದು ನಂಬಿಕೆ. ಅಂದರೆ ಒಂದು ಘಟನೆಯ ಸುತ್ತ ನಿರ್ಮಾಣ ಮಾಡುವ ಭಾಷಿಕ ದಾಖಲೆಯು ಕೇವಲ ಮಾಹಿತಿಯಾಗಿ ಉಳಿಯದೆ, ಮೌಲ್ಯವಾಗಿ, ನಂಬಿಕೆಯಾಗಿ ರೂಪಾಂತರ ಪಡೆಯುತ್ತದೆ. 'ಚಿನ್ನ ಬೆಳ್ಳಿ ಅಳೆದು ಮಾರುತ್ತಿದ್ದರು' ಎಂಬುದು 'ಆಗ ಅಲ್ಲಿ ಎಲ್ಲರೂ ಸುಖವಾಗಿದ್ದರು' ಎಂಬುದರ ಮತ್ತೊಂದು ಹೇಳಿಕೆಯಾಗಿ ಭಾಸವಾಗುತ್ತದೆ. ಅಂದರೆ 'ಚಿನ್ನ ಬೆಳ್ಳಿಯನ್ನೆ ಅಳೆದು ಮಾರುತ್ತಿದ್ದರೆಂದರೆ ಆಗ ಅಲ್ಲಿ ಯಾರಿಗೂ ಅನ್ನಕ್ಕೆ ಕೊರತೆ ಇರಲಿಲ್ಲ; ಎಲ್ಲರಿಗೂ ಸುಖ ಇತ್ತು, ನೆಮ್ಮದಿ ಇತ್ತು' ಎಂಬ ಭಾವನೆ ಬಂದುಬಿಡುತ್ತದೆ. ಇದೇ ಆಯಾಮದಲ್ಲಿ ಅಣ್ಣಾ ಹಜಾರೆ ಅವರ ನೇತೃತ್ವದಲ್ಲಿ ನಡೆಸಲಾದ ಹೋರಾಟವನ್ನು ಗ್ರಹಿಸಬೇಕಾಗಿದೆ. ಈ ಹೋರಾಟವನ್ನು ಗ್ರಹಿಸುವಾಗ ಭಾರತದಲ್ಲಿ ನಡೆಸಿರುವ ಕೆಲವು ಮುಖ್ಯ ಹೋರಾಟಗಳ ಸಾಮಾನ್ಯ ಗುಣಪಾಠಗಳ ರಾಜಕೀಯ ಹಿತಾಸಕ್ತಿಗಳು ನಮ್ಮ ತಾತ್ವಿಕ ನೆರವಿಗೆ ಬರುತ್ತವೆ. ೧೯೪೭ರ ಅಧಿಕಾರ ಹಸ್ತಾಂತರದ ನಂತರ ಭಾರತದಲ್ಲಿ ಕೆಲವು ಮುಖ್ಯ ಹೋರಾಟಗಳನ್ನು ನಡೆಸಲಾಗಿದೆ. ವೀರ ತೆಲಂಗಾಣ ಹೋರಾಟ, ಜೆ.ಪಿ. ನೇತೃತ್ವದ ಸಂಪೂರ್ಣ ಕ್ರಾಂತಿ, ಟಾಟಾ ಕಂಪನಿ ವಿರುದ್ಧ ಪಶ್ಚಿಮ ಬಂಗಾಳದಲ್ಲಿ ರೈತರು ನಡೆಸಿದ ಸಿಂಗೂರು ಹೋರಾಟ, ಇಂತಹ ಕೆಲವು ಹೋರಾಟಗಳನ್ನು ಪ್ರಾತಿನಿಧಿಕವಾಗಿ ಗಮನಿಸಬಹುದು.

ಹೋರಾಟಗಳನ್ನು ಪರಿಚಯಿಸುವ, ವಿಮರ್ಶಿಸುವ ಮತ್ತು ಮೌಲ್ಯಮಾಪನ ಮಾಡುವ ತಾತ್ವಿಕ ವಿಧಾನಗಳು ಯಾವುವು ಎಂಬುದಕ್ಕೆ ಗಂಭೀರವಾದ ಸೈದ್ಧಾಂತಿಕ ಮಾನದಂಡಗಳನ್ನು ನಿರ್ಮಾಣ ಮಾಡಲಾಗಿಲ್ಲ. ಹಾಗಾಗಿ ಅನೇಕ ಸಲ ಹೋರಾಟಗಳ ಮೌಲ್ಯಮಾಪನ ಎಂಬುದು ಅವುಗಳನ್ನು ವೈಭವೀಕರಿಸುವ ಭಾಷಿಕ

ದುಂದುವೆಚ್ಚವಾಗಿ ಮಾರ್ಪಟ್ಟಿದೆ. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಿತ್ತರಿಸಲಾಗುವ ಸುದ್ದಿಗಳನ್ನೇ ಅವುಗಳ ಮೌಲ್ಯಮಾಪನಗಳೆಂದು ನಂಬಲಾಗುತ್ತಿದೆ ಮತ್ತು ನಂಬಿಸಲಾಗುತ್ತಿದೆ. ೧೨ನೇ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ನಡೆಸಲಾದ ಹೋರಾಟವನ್ನು ಈಗಲೂ ಕೂಡ ಭಾಷಿಕ ದುಂದುವೆಚ್ಚ ಮಾಡಿ ವೈಭವೀಕರಿಸಲಾಗುತ್ತಿದೆ. ಇದು ವೈಚಾರಿಕವಾಗಿ ಮುಜುಗರ ಎನಿಸುತ್ತಲೇ ಇಲ್ಲ. ಇದಕ್ಕೆ ವಿರುದ್ಧವಾಗಿ ಕರ್ನಾಟಕದಲ್ಲಿ ನಡೆಸಲಾದ ದಲಿತ ಹೋರಾಟವನ್ನು ವಾಚಾಮಗೋಚರವಾಗಿ ತೆಗಳುವ ಕೆಲಸ ನಡೆಯುತ್ತಿದೆ. ಈ ಎರಡೂ ಬಗೆಯ ಅತಿರೇಕಗಳು ಹೋರಾಟಗಳನ್ನು ವಿಮರ್ಶಿಸುವ ಮತ್ತು ಮೌಲ್ಯಮಾಪನ ಮಾಡುವ ಸೈದ್ಧಾಂತಿಕ ಉಪಕರಣಗಳ ದೌರ್ಬಲ್ಯತೆಯನ್ನು ಎತ್ತಿ ತೋರಿಸುತ್ತಿವೆ.



**ನಕಲಿ ಹೋರಾಟಗಳು ಮತ್ತು ಅಸಲಿ ಹೋರಾಟಗಳು**

ಹೋರಾಟವೊಂದು ಅಂತಿಮವಾಗಿ ಏನು ಫಲ ಕೊಟ್ಟಿತು ಎಂಬುದು ಒಂದು ಅಪೇಕ್ಷಿತ ನಿಲುವು. ಅದಕ್ಕಿಂತ ಹೆಚ್ಚಾಗಿ ಒಂದು ಹೋರಾಟದ ಹಿಂದೆ ಯಾವ ವರ್ಗದ ಹಿತಾಸಕ್ತಿ ಅಡಗಿದೆ ಎಂಬುದನ್ನು ಗುರುತಿಸಬೇಕಾಗಿದೆ. ಹೋರಾಟವೊಂದರ ಹಿಂದಿರುವ ವರ್ಗ ಹಿತಾಸಕ್ತಿಯನ್ನು ಗುರುತಿಸದಿದ್ದರೆ ಬೆಳ್ಳಗಿರುವುದೆಲ್ಲ ಹಾಲು ಎಂದು ಹೇಳುವ ದುಃಸ್ಥಿತಿ ಬಂದುಬಿಡುತ್ತದೆ. ಇಂತಹ ಒಂದು ಉದಾಹರಣೆಯನ್ನು ಗಮನಿಸೋಣ. ೧೯೪೬ರಿಂದ ೧೯೫೨ರ ವರೆಗೆ ಹೈದರಾಬಾದ್ ಪ್ರಾಂತ್ಯದಲ್ಲಿ ತೆಲಂಗಾಣ ಹೋರಾಟವನ್ನು ನಡೆಸಲಾಯಿತು. ಅದನ್ನು ಭೂ ರಹಿತರು ಮತ್ತು ಕೃಷಿ ಕೂಲಿ ಕಾರ್ಮಿಕರು ನಡೆಸಿದರು. ಭೂಮಾಲೀಕರ ಹೆಚ್ಚುವರಿ ಭೂಮಿಯನ್ನು ಭೂ ರಹಿತರಿಗೆ ಹಂಚಬೇಕು ಎಂಬ ಮುಖ್ಯ ರಾಜಕೀಯ ಹಕ್ಕೊತ್ತಾಯವನ್ನು ಇಟ್ಟುಕೊಂಡು ಆ ಹೋರಾಟವನ್ನು ನಡೆಸಲಾಯಿತು. “ಉಳುವವನೆ ಭೂ ಒಡೆಯ' ಎಂಬ ರಾಜಕೀಯ ಸಂದೇಶವನ್ನು ಆ ಹೋರಾಟವು ಭಾರತದ ರೈತರಿಗೆ ಕೊಟ್ಟಿತು. ಸತ್ಯವಾಗಿಯೂ ಈ ಸಂದೇಶವನ್ನು ಕಾಗೋಡು ಹೋರಾಟ ಕೊಟ್ಟದ್ದಲ್ಲ. ತೆಲಂಗಾಣದಲ್ಲಿ ಭೂ ರಹಿತರು ಭೂಮಿ ಪಡೆಯಲು ಹೋರಾಟವನ್ನು ನಡೆಸುತ್ತಿದ್ದ ಸಮಯದಲ್ಲಿ ಭಾರತದ ಪ್ರಭುತ್ವ ಅದಕ್ಕೆ ಪ್ರತಿಯಾಗಿ ಮತ್ತೊಂದು ಹೋರಾಟವನ್ನು ಕುತಂತ್ರ ವಿಧಾನದಲ್ಲಿ ಸೃಷ್ಟಿಸಿತು. ಅದು ವಿನೋಬಾ ಭಾವೆ ಅವರ ನೇತೃತ್ವದಲ್ಲಿ ಮಾಡಿಸಲಾದ (ಮಾಡಿದ್ದು ಅಲ್ಲ) 'ಭೂ ದಾನ ಚಳುವಳಿ'. ಈ 'ಭೂ ದಾನ' ಎಂಬ ಪದವೇ ಅತ್ಯಂತ ಭೀಕರವಾಗಿದೆ. ಅದರ ಸ್ವರೂಪ ಇಷ್ಟೆ, ಶ್ರೀಮಂತ ಭೂ ಮಾಲೀಕರು ತಮ್ಮಲ್ಲಿರುವ ಹೆಚ್ಚುವರಿ ಭೂಮಿಯನ್ನು 'ಭೂ ದಾನ ಚಳುವಳಿ'ಗೆ ನೀಡಬೇಕು. ನಂತರ ಅದು ಭೂ ರಹಿತರಿಗೆ ಆ ಭೂಮಿಯನ್ನು ಹಂಚುತ್ತದೆ. ಇದು ಅದರ ಸ್ವರೂಪವಾಗಿತ್ತು. ಇದರ ಹಿಂದೆ ಯಾವ ವರ್ಗದ ಹಿತಾಸಕ್ತಿ ಇತ್ತು ಎಂಬುದನ್ನು ಗುರುತಿಸಬೇಕು. ಇದರ ಹಿಂದೆ

ಭಾರೀ ಭೂಮಾಲಿಕ ವರ್ಗದ ಹಿತಾಸಕ್ತಿ ಇತ್ತು. ಜೊತೆಗೆ 'ರೈತರು ನಡೆಸುತ್ತಿದ್ದ ಹೋರಾಟದ ಅಗತ್ಯವಿಲ್ಲ' ಅಥವಾ 'ರೈತರು ಹೋರಾಟ ಮಾಡುವ ಅಗತ್ಯವಿಲ್ಲ' ಎಂದು ಹೇಳುವ ಕುತಂತ್ರವಿತ್ತು. ಅದು ಭಾರತದಲ್ಲಿ ಅಸಲಿ ಹೋರಾಟಕ್ಕೆ ಪ್ರತಿಯಾಗಿ ಹುಟ್ಟುಹಾಕಿದ ನಕಲಿ ಹೋರಾಟವಾಗಿತ್ತು. ಬಹುಶಃ ಅಂದಿನಿಂದಲೇ ಭಾರತದಲ್ಲಿ ಚಾರಿತ್ರಿಕವಾಗಿ ನಕಲಿ ಹೋರಾಟದ ಕರಾಳ ಚರಿತ್ರೆಯನ್ನು ಶುರುಮಾಡಲಾಯಿತು. ಈ ನಕಲಿ ಹೋರಾಟಗಳ ಕರಾಳ ಚರಿತ್ರೆಯನ್ನು ಈಗಲೂ ಮುಂದುವರಿಸಲಾಗುತ್ತಿದೆ.

ವಸ್ತು ಜಗತ್ತಿನಲ್ಲಿ ಮತ್ತು ವೃತ್ತಿ ಜಗತ್ತಿನಲ್ಲಿ 'ಇದು ನಕಲಿ, ಇದು ಅಸಲಿ' ಎಂದು ತೀರ್ಮಾನಿಸುವ ಪದ್ಧತಿ ಇದೆ. ಉದಾಹರಣೆಗೆ, ನಕಲಿ ವೈದ್ಯ, ನಕಲಿ ಸ್ವಾಮಿ, ನಕಲಿ ಔಷಧಿ, ನಕಲಿ ಕ್ರಿಮಿನಾಶಕ, ನಕಲಿ ಮಧ್ಯ, ನಕಲಿ ನೋಟು ಇತ್ಯಾದಿ, ವೈಚಾರಿಕ ಜಗತ್ತು, ಅಕಡೆಮಿಕ್ ಜಗತ್ತು, ರಾಜಕಾರಣ ಮತ್ತು ಹೋರಾಟಗಳ ಜಗತ್ತಿನಲ್ಲಿ ಈ ಅಸಲಿ ಮತ್ತು ನಕಲಿಗಳ ಪರಿಸ್ಥಿತಿ ಇದೆ. ಆದರೆ ಅದನ್ನು ಹಾಗೆಂದು ಗುರುತಿಸುವ ಕೆಲಸ ಮಾಡಲು ಮುಂದಾಗಿಲ್ಲ. ವಸ್ತು ಜಗತ್ತು ಮತ್ತು ವೃತ್ತಿ ಜಗತ್ತಿನಲ್ಲಿ ಗುರುತಿಸಿದಷ್ಟು ಸುಲಭವಾಗಿ ಉಳಿದ ಕಡೆಗಳಲ್ಲಿ ಇದನ್ನು ಗುರುತಿಸಲು ಆಗುತ್ತಿಲ್ಲ.

**ಭ್ರಷ್ಟಾಚಾರ ವಿರೋಧಿ ಹೋರಾಟ: ಅಸಲಿ ಹೋರಾಟ ಮತ್ತು ನಕಲಿ ಹೋರಾಟಗಳ ನೆಲೆಯಿಂದ ೭೫**

**ಕಳ್ಳರೇ ಕಳ್ಳರನ್ನು ಹಿಡಿಯಲು ಹೊರಟಾಗ**

ಯಾವುದೇ ಹೋರಾಟಕ್ಕೆ ಒಂದು ಉದ್ದೇಶ, ಗುರಿ ಮತ್ತು ದಾರಿಗಳು ಇರುತ್ತವೆ. 'ನ್ಯಾಯ'ವನ್ನು ಕೇಳುವುದು ಮತ್ತು ಒತ್ತಾಯಿಸುವುದು ಯಾವುದೇ ಹೋರಾಟಗಳ ಸಾಮಾನ್ಯ ಉದ್ದೇಶ ಮತ್ತು ಗುರಿಯಾಗಿರುತ್ತದೆ. ಆ 'ನ್ಯಾಯ'ವನ್ನು ಪಡೆಯಲು ತುಳಿಯುವ ದಾರಿಗಳು ಬೇರೆ ಬೇರೆ ಇರುತ್ತವೆ. ಹಾಗಾಗಿ ಹೋರಾಟಗಳಿಗೆ ದಾರಿ ಮತ್ತು ಗುರಿಗಳು ಪ್ರತ್ಯೇಕವಾಗಿದ್ದು ಅವು ಒಂದನ್ನೊಂದು ಪ್ರಭಾವಿಸುತ್ತ ಹೋಗುತ್ತವೆ.

ಹೋರಾಟಗಳ ಮೂಲಕ 'ನ್ಯಾಯ' ಕೇಳುವವರ ವರ್ಗವು 'ಅನ್ಯಾಯ'ಕ್ಕೆ ಒಳಗಾಗಿರಬೇಕು. 'ಅನ್ಯಾಯ'ಕ್ಕೆ ಒಳಗಾದವರಿಗೆ ಮಾತ್ರವೇ 'ನ್ಯಾಯ' ಕೇಳಲು ರಾಜಕೀಯವಾಗಿ ಹಕ್ಕಿರುತ್ತದೆ. ಈಗ ಪ್ರಶ್ನೆ ಹುಟ್ಟುವುದು 'ಅನ್ಯಾಯ'ಕ್ಕೆ ಒಳಗಾಗಿರುವವರು ಯಾರು? ಎಂಬುದು. ಜೊತೆಗೆ ಯಾವ ರೂಪದಲ್ಲಿ ಅನ್ಯಾಯ ನಡೆದಿದೆ ಎಂಬುದು ಕೂಡಾ ಮುಖ್ಯವಾಗುತ್ತದೆ. ಇವೆರಡೂ ಸ್ಪಷ್ಟವಾಗದ ಹೊರತು ಅನ್ಯಾಯವನ್ನು ನ್ಯಾಯದಿಂದಲೂ; ನ್ಯಾಯವನ್ನು ಅನ್ಯಾಯದಿಂದಲೂ ಬೇರ್ಪಡಿಸಲು ಆಗುವುದಿಲ್ಲ.

ಇದಕ್ಕೆ ಇತ್ತೀಚಿನ ವರ್ಷಗಳಲ್ಲಿ ಮಲೆನಾಡಿನಲ್ಲಿ ನಡೆದ ಒಂದು ಘಟನೆಯನ್ನು ವಿವರಿಸಬಹುದು. ಮಲೆನಾಡಿನಲ್ಲಿ ಪಾರಂಪರಿಕವಾಗಿ ಆಯಾ ಊರುಗಳ ಜನರು ತಮ್ಮ ಊರುಗಳಲ್ಲೇ ಜಮೀನ್ದಾರರ ಮನೆಗಳಲ್ಲಿ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಅದು ಸ್ವಲ್ಪ ಬದಲಾಗಿದೆ. ಒಂದು ಊರಿನ ಜನರು ಬೇರೆ ಯಾವುದಾದರೂ ಊರಿಗೆ ಹೋಗಿ ಕೆಲಸ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯಿಂದಾಗಿ ಕೆಲವು ಊರಿನ ಜಮೀನ್ದಾರರಿಗೆ ಅದೇ ಊರಿನ ಕೆಲಸಗಾರರು ಸಿಗದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹಾಗಾಗಿ ಜಮೀನ್ದಾರರು 'ಒಂದು ಊರಿನ ಜನರು ಬೇರೆ ಊರುಗಳಿಗೆ ಕೆಲಸಕ್ಕೆ ಹೋಗಬಾರದು' ಎಂದು ಮೌಖಿಕ ಆಜ್ಞೆ ಹೊರಡಿಸಿದರು. ಇದು ಒಂದು ಹಂತ. ಇದನ್ನು ಯಾರೂ ಪಾಲಿಸಲಿಲ್ಲ. ಒಂದು ಊರಿನಿಂದ ಮತ್ತೊಂದು ಊರಿಗೆ ಕೆಲಸಕ್ಕೆ ಹೋಗುವವರು ದೊಡ್ಡ ಆಟೋಗಳಲ್ಲಿ ಹೋಗುತ್ತಿದ್ದರು. ಅಂತಹ ಆಟೊಗಳಿಗೆ ಇಂತಿಷ್ಟು ದೂರ ಓಡಿಸಬೇಕು ಎಂಬ ಒಂದು ಸಾಮಾನ್ಯ ನಿರ್ಬಂಧವಿರುತ್ತದೆ. ಇದನ್ನು ಗಟ್ಟಿಯಾಗಿ ಹಿಡಿದುಕೊಂಡ ಭೂಮಾಲೀಕರು, 'ಆಟೋಗಳನ್ನು ೧೦ ಕಿ.ಮೀ.ಗಳಿಗಿಂತ ಹೆಚ್ಚು ದೂರ ಓಡಿಸಬಾರದು' ಎಂಬ ಒತ್ತಾಯವನ್ನು ಸಂಬಂಧಪಟ್ಟ ಅಧಿಕಾರಿಗಳ (ಡಿ.ಸಿ. ಮತ್ತು ಆರ್.ಟಿ.ಓ. ಮುಂದೆ ಇಟ್ಟರು. ಇದು ನಡೆದ ಘಟನೆ. ಅದರ ವಿವರಗಳ ಅಗತ್ಯವಿಲ್ಲ. ಸಾರಾಂಶವೇನೆಂದರೆ ಈ ಘಟನೆಯಲ್ಲಿ ಅನ್ಯಾಯ ಆಗಿರುವುದು ಯಾರಿಗೆ ಮತ್ತು ನ್ಯಾಯ ಕೇಳಬೇಕಾದವರು ಯಾರು ಎಂಬುದು ಪ್ರಧಾನ ಪ್ರಶ್ನೆ.

ಒಂದು ಊರಿನ ಕೆಲಸಗಾರರನ್ನು ಅದೇ ಊರಿನಲ್ಲಿ ಕಡಿಮೆ ಸಂಬಳಕ್ಕೆ ದುಡಿಸಿಕೊಳ್ಳಬೇಕು ಎಂಬುದು ಭೂಮಾಲಿಕರು ಕೇಳುತ್ತಿರುವ ನ್ಯಾಯ. ಒಂದು ಊರಿನ ಕೆಲಸಗಾರರು ಅದೇ ಊರಿನಲ್ಲಿ ಕೆಲಸ ಮಾಡಿದರೆ ಸಂಬಳ ಕಡಿಮೆ ಕೊಡುತ್ತಾರೆ; ಅದಕ್ಕಾಗಿ ಬೇರೆ ಊರುಗಳಿಗೆ ಕೆಲಸಕ್ಕೆ ಹೋಗಬೇಕು ಎಂಬುದು ಕೆಲಸಗಾರರು ಕೇಳುತ್ತಿರುವ ನ್ಯಾಯ. ಕೆಲಸಗಾರರನ್ನು ಶೋಷಣೆ ಮಾಡಿ, ಲಾಭವನ್ನು ಹೆಚ್ಚಿಸಿಕೊಳ್ಳಬೇಕು

ಎಂಬುದು ಒಂದು ಕಡೆಯ ನ್ಯಾಯದ ಕಲ್ಪನೆ. ಮಾಡಿದ ಕೆಲಸಕ್ಕೆ ಸ್ವಲ್ಪ ಜಾಸ್ತಿ ಸಂಬಳ ಪಡೆಯಬೇಕು ಎಂಬುದು ಮತ್ತೊಂದು ಕಡೆಯ ನ್ಯಾಯದ ಕಲ್ಪನೆ.

ಬಂಡವಾಳಶಾಹಿ ಆರ್ಥಿಕ ಚಟುವಟಿಕೆಗಳ ಇತ್ತೀಚಿನ ಬೆಳವಣಿಗೆಗಳು ಅವರ ನಿರೀಕ್ಷೆಯ ಪ್ರಮಾಣದ ಲಾಭವನ್ನು ಹೆಚ್ಚು ಮಾಡಿಕೊಳ್ಳಲು ಹೆಣಗಾಡುತ್ತಿವೆ. ಅವರ ಲಾಭದಲ್ಲಿ ಅಲ್ಪಸ್ವಲ್ಪ ಏರುಪೇರು ಕಂಡರೂ ಕೂಡ ಅದನ್ನೇ ಇಡೀ ಜಗತ್ತಿನ ಸಮಸ್ಯೆ ಎಂದು ಬಿಂಬಿಸಲಾಗುತ್ತಿದೆ. ಹಾಗಾಗಿ ಒಂದು ವರ್ಗದ ಸಮಸ್ಯೆಯನ್ನು ಮತ್ತೊಂದು ವರ್ಗದ ಸಮಸ್ಯೆ ಎಂದು ತಪ್ಪಾಗಿ ತಿಳಿಯುವಂತೆ ಮಾಡಲಾಗಿದೆ. ಇದನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ ಶ್ರೀಮಂತರ ಸಮಸ್ಯೆಯನ್ನು ಬಡವರ ಸಮಸ್ಯೆ ಎಂದು ತಿಳಿಯುವಂತೆಯೂ, ಮಾಲಿಕರ ಸಮಸ್ಯೆಯನ್ನು ಕಾರ್ಮಿಕರ ಸಮಸ್ಯೆ ಎಂದು ತಿಳಿಯುವಂತೆಯೂ, ಪುರುಷರ ಸಮಸ್ಯೆಯನ್ನು ಮಹಿಳೆಯರ ಸಮಸ್ಯೆ ಎಂದು ತಿಳಿಯುವಂತೆಯೂ, ಭೂಮಾಲೀಕ ಶೂದ್ರರ ಸಮಸ್ಯೆಯನ್ನು ದಲಿತರ ಸಮಸ್ಯೆ ಎಂದು ತಿಳಿಯುವಂತೆಯೂ ಮಾಡಲಾಗಿದೆ.

ಅನ್ಯಾಯ ಮಾಡಿದವರೆ, ಶೋಷಣೆ ಮಾಡಿದವರೆ ನ್ಯಾಯ ಕೇಳುವಂತಹ ಸೋಗಲಾಡಿತನ ನಿರ್ಮಾಣವಾಗಿದೆ. ಇದು ಸಮಾಜದ ಅತ್ಯಂತ ಅಪಾಯಕಾರಿ ಪರಿಸ್ಥಿತಿಯ ಪರಮಾವಧಿ, ಯಾಕೆಂದರೆ ನಿಜವಾಗಿಯೂ ಯಾರು ನ್ಯಾಯವನ್ನು ಕೇಳಬೇಕಾಗಿತ್ತೊ ಅವರು ನ್ಯಾಯ ಕೇಳದಂತೆ ಮಾಡಲಾಗಿದೆ. ಅವರು ನ್ಯಾಯ ಕೇಳಿದರೆ ದೇಶದ್ರೋಹಿಗಳು ಎಂದು ಜೈಲಿಗೆ ಅಟ್ಟಲಾಗುತ್ತಿದೆ. ಹಾಗಾಗಿ ಯಾರು ನಿಜವಾಗಿಯೂ ಅನ್ಯಾಯ ಮಾಡಿದ್ದಾರೆ ಅವರು ಮಾಡಿರುವ ಅನ್ಯಾಯವನ್ನು ಗುರುತಿಸಲು ಆಗುತ್ತಿಲ್ಲ. ಅಂದರೆ ಶೋಷಣೆ ಮಾಡುವವರೇ ಶೋಷಿತರ ವೇಷದಲ್ಲಿ ನಟಿಸುವ ರಂಗಭೂಮಿಯೊಂದು ನಿರ್ಮಾಣವಾಗಿದೆ. ಆ ಮೂಲಕ ಅನ್ಯಾಯ ಮಾಡಿದವರೇ ನ್ಯಾಯ ಕೇಳುವಂತಹ ನಕಲಿ ಪರಿಸ್ಥಿತಿ ನಿರ್ಮಾಣವಾಗಿದೆ.

**ಭ್ರಷ್ಟಾಚಾರದ ಮೂಲ ಎಲ್ಲಿದೆ? ಹೇಗಿದೆ?**

ವಾಸ್ತವವಾಗಿ ಭ್ರಷ್ಟಾಚಾರ ಎಂದರೆ ಏನು ಮತ್ತು ಅದರ ಸ್ವರೂಪ ಯಾವುದು ಎಂಬುದನ್ನು ಅರಿತುಕೊಳ್ಳಬೇಕಾಗಿದೆ. ಅಣ್ಣಾ ಹಜಾರೆ ತಂಡದ ಹೋರಾಟವು ಯಾವ ವಲಯದಲ್ಲಿ ಭ್ರಷ್ಟಾಚಾರವನ್ನು ಗುರುತಿಸಿ, ಟಾರ್ಗೆಟ್ ಮಾಡಿತು ಮತ್ತು ಯಾವ ವಲಯದಲ್ಲಿ ಭ್ರಷ್ಟಾಚಾರವನ್ನು ಗುರುತಿಸಲಿಲ್ಲ ಎಂಬುದನ್ನು ಚರ್ಚಿಸಬೇಕು. ಈ ತಂಡಕ್ಕೆ ಆಡಳಿತ ಮತ್ತು ಸರಕಾರಿ ವಲಯದಲ್ಲಿ ನಡೆಸುತ್ತಿರುವ ಭ್ರಷ್ಟಾಚಾರ ಮಾತ್ರವೇ ಮುಖ್ಯವಾಯಿತು. ಉಳಿದ ವಲಯಗಳು ಇವರ ಗ್ರಹಿಕೆಯಿಂದ ಹೊರಗುಳಿದವು. ಇಡೀ ದೇಶವನ್ನು ನಡೆಸುತ್ತಿರುವುದು ಭಾರತದೊಳಗಿನ ಆಡಳಿತ ಮತ್ತು ಸರಕಾರಿ ವಲಯ ಎಂಬುದು ಆ ತಂಡದ ಗ್ರಹಿಕೆ.

ವಾಸ್ತವವಾಗಿ ಭಾರತವು ಸರಕಾರಿ ವಲಯದ ಆಡಳಿತ ಮತ್ತು ಅಧಿಕಾರದಿಂದ ನಡೆಯುತ್ತಿಲ್ಲ. ಕಾರ್ಪೋರೇಟ್ ಶಕ್ತಿಗಳ ಸರ್ವಾಧಿಕಾರಿ ಸೂಚನೆಗಳ ಮೇರೆಗೆ ಇಲ್ಲಿಯ ಆಡಳಿತ ಮತ್ತು ಸರಕಾರಿ ವಲಯಗಳು ಕೆಲಸ ಮಾಡುತ್ತಿವೆ. ಕಳೆದ ೯೦ರ ದಶಕದಲ್ಲಿ ನವವಸಾಹತುಶಾಹಿ ಒಪ್ಪಂದಗಳಿಗೆ ಭಾರತವನ್ನು ಒತ್ತೆ ಇಟ್ಟದ್ದೇ ಬಹುದೊಡ್ಡ ಭ್ರಷ್ಟಾಚಾರ.

**ಭ್ರಷ್ಟಾಚಾರ ವಿರೋಧಿ ಹೋರಾಟ: ಅಸಲಿ ಹೋರಾಟ ಮತ್ತು ನಕಲಿ ಹೋರಾಟಗಳ ನೆಲೆಯಿಂದ** ೭೭

ಇವತ್ತು ದೇಶದ ಸಾಮಾನ್ಯ ಜನತೆ ಅನುಭವಿಸುತ್ತಿರುವ ಬಡತನ, ನಿರುದ್ಯೋಗ, ಬೆಲೆ ಏರಿಕೆ ಮುಂತಾದ ಸಮಸ್ಯೆಗಳು ಜಾಗತೀಕರಣದ ನಂತರ ತೀವ್ರಗೊಂಡವು. ಭಾರತವನ್ನು ಸಾಮ್ರಾಜ್ಯಶಾಹಿಗಳಿಗೆ ಅರ್ಪಣೆ ಮಾಡಿ, ಇಡೀ ದೇಶದ ಸಂಪತ್ತನ್ನು ಅವರಿಗೆ ಒತ್ತೆ ಇಟ್ಟಿರುವುದು ಅಣ್ಣಾ ಹಜಾರೆ ತಂಡಕ್ಕೆ ಮುಖ್ಯವಾಗುವುದಿಲ್ಲ. ವಾಸ್ತವವಾಗಿ ಸಾಮ್ರಾಜ್ಯಶಾಹಿ ನವವಸಾಹತು ಸುಲಿಗೆ ಮತ್ತು ದಬ್ಬಾಳಿಕೆಗಳನ್ನು ಸಂಪೂರ್ಣ ಮುಚ್ಚಿಡುವ ಉನ್ನತ ತಂತ್ರ ಮತ್ತು ಕುತಂತ್ರ ಅಣ್ಣಾ ತಂಡದೊಳಗೆ ಕೆಲಸ ಮಾಡಿದೆ.

ಕೆಲವೇ ಕೆಲವು ಕಾರ್ಪೋರೇಟ್ ಕುಟುಂಬಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ಭಾರತದ ರಾಜಕೀಯವನ್ನು ಮತ್ತು ಆರ್ಥಿಕತೆಯನ್ನು ತಮಗೆ ಅನುಕೂಲವಾಗುವಂತೆ ರೂಪಿಸುತ್ತಿವೆ; ನಿರ್ಧರಿಸುತ್ತಿವೆ. ಅವರು ತಾವು ಮಾಡುವ ಸುಲಿಗೆಯನ್ನು ಸುಧಾರಣೆ ಎಂತಲೂ, ತಮ್ಮ ಲಾಭಕ್ಕೆ ಮಾಡಿಕೊಳ್ಳುವ ಕೆಲಸಗಳನ್ನು ಪ್ರಗತಿ ಮತ್ತು ಅಭಿವೃದ್ಧಿ ಎಂತಲೂ ಬಣ್ಣಿಸುತ್ತಿದ್ದಾರೆ. ಅಣ್ಣಾ ಹಜಾರೆ ತಂಡದ ಹೋರಾಟದ ಸುದ್ದಿಯು ಸಾಮ್ರಾಜ್ಯಶಾಹಿ ಶಕ್ತಿಗಳು ನಡೆಸುತ್ತಿರುವ ಸುಲಿಗೆ ಮತ್ತು ದಬ್ಬಾಳಿಕೆಗಳನ್ನು ಮುಚ್ಚಿಡುತ್ತಿದೆ.

**ಭ್ರಷ್ಟಾಚಾರ : ನೈತಿಕ ಆಯಾಮ ಮತ್ತು ರಾಜಕೀಯ, ಆರ್ಥಿಕ ಆಯಾಮ**

ಭ್ರಷ್ಟಾಚಾರವನ್ನು ನೈತಿಕ ಚೌಕಟ್ಟಿನಲ್ಲಿ ಪರಿಭಾವಿಸುವುದು ಬೇರೆ. ಅದನ್ನು ರಾಜಕೀಯ ಆರ್ಥಿಕ ಚೌಕಟ್ಟಿನಲ್ಲಿ ಪರಿಭಾವಿಸುವುದು ಬೇರೆ. ಭ್ರಷ್ಟಾಚಾರದ ಪ್ರಸ್ತಾಪ ಬಂದಾಗಲೆಲ್ಲ ಅದನ್ನು ಕೇವಲ ಉದಾರವಾದಿ ನೆಲೆಯಲ್ಲಿ ಗ್ರಹಿಸುವ ಪರಿಪಾಠವಿದೆ. ಈ ಉದಾರವಾದಿ ಗ್ರಹಿಕೆಯ ವಿಧಾನವೇ ಬಹಳ ಅಪಾಯಕಾರಿಯಾದುದು. ಹಾಗಾಗಿ ಭ್ರಷ್ಟಾಚಾರವನ್ನು ರಾಜಕೀಯ ಆರ್ಥಿಕ ನೆಲೆಯಲ್ಲಿ ಪರಿಭಾವಿಸಬೇಕು. ಹಣವು ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಅನ್ಯಾಯದ ಮಾರ್ಗದಲ್ಲಿ ಹಸ್ತಾಂತರವಾಗುವ ಪ್ರಕ್ರಿಯೆಯನ್ನು ಭ್ರಷ್ಟಾಚಾರ ಎಂದು ಸಧ್ಯಕ್ಕೆ ಹೆಸರಿಸಲಾಗಿದೆ. ಸಮಾಜದಲ್ಲಿ ಹಣ ಮಾತ್ರ ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಅನ್ಯಾಯದ ಮಾರ್ಗದಲ್ಲಿ ಹಸ್ತಾಂತರವಾಗುವುದಿಲ್ಲ. ಸಂಪತ್ತು ಎಂದು ಕರೆಯುವ ಎಲ್ಲವೂ, ಉತ್ಪಾದನೆಯ ಕೆಲಸದಲ್ಲಿ ತಯಾರಿಸುವ ಎಲ್ಲ ವಸ್ತುಗಳೂ ಕೂಡ ಒಬ್ಬರಿಂದ ಮತ್ತೊಬ್ಬರಿಗೆ ಅನ್ಯಾಯದ ಮಾರ್ಗದಲ್ಲಿ ಹಸ್ತಾಂತರವಾಗುತ್ತಿವೆ. ಭೂಮಾಲೀಕರ

ಜಮೀನಿನಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರ ಶ್ರಮದ ಬಹುಭಾಗ ಭೂಮಾಲೀಕರಿಗೇ ಸೇರುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯ ವಿವಿಧ ವಲಯಗಳಲ್ಲಿ ಕೆಲಸ ಮಾಡುವ ಕೈಗಾರಿಕಾ ಕಾರ್ಮಿಕರ ಶ್ರಮದ ಬಹುಭಾಗವು ಅಲ್ಲಿಯ ಮಾಲಿಕನಿಗೇ ಸೇರುತ್ತಿದೆ. ಈ ಎಲ್ಲಾ ವಲಯಗಳಲ್ಲಿ ಶ್ರಮ ಹಾಕಿ, ಬೆವರು ಸುರಿಸಿ ದುಡಿಯುವವರು ಶ್ರಮಿಕರು, ಕಾರ್ಮಿಕರು ಮತ್ತು ದುಡಿಯುವ ಜನರು. ದುಡಿಯುವ ಜನರಿಗೆ ಅವರ ಶ್ರಮಕ್ಕೆ ನ್ಯಾಯವಾಗಿ ಸಲ್ಲಬೇಕಾಗಿರುವ ಪ್ರತಿಫಲವನ್ನು ಮಾಲೀಕ ವರ್ಗ ಕೊಡುತ್ತಿಲ್ಲ. ಅವರನ್ನು ಸುಲಿಗೆ ಮಾಡುತ್ತಿದೆ; ಶೋಷಣೆ ಮಾಡುತ್ತಿದೆ. ಇದು ಮಾನವ ಸಮಾಜದ ಮೂಲಭೂತ ಭ್ರಷ್ಟಾಚಾರ. ಸಮಾಜವನ್ನು ನೋಡುವಾಗ ಅದನ್ನು ಬಿಡಿ ಬಿಡಿಯಾಗಿ ಗ್ರಹಿಸುವುದು ಒಂದು ವಿಧಾನ, ಸಮಾಜವನ್ನು ಇಡಿಯಾಗಿ ಗ್ರಹಿಸುವುದು ಮತ್ತೊಂದು ವಿಧಾನ. ಇಡೀ ಸಾಮಾಜಿಕ ರಚನೆಯೇ ಶೋಷಣೆ, ಅಸಮಾನತೆ ಮತ್ತು ಅನ್ಯಾಯಗಳಿಂದ ರಚನೆಯಾಗಿದೆ. ಅಲ್ಪಸಂಖ್ಯೆಯ ಶೋಷಕರು



ಬಹುಸಂಖ್ಯಾತ ಶೋಷಿತರನ್ನು ಸುಲಿಗೆ ಮಾಡುತ್ತಲೇ ಸಾಗಿದ್ದಾರೆ. ವ್ಯವಸ್ಥೆಯು ತನ್ನೊಳಗೆ ಅನ್ಯಾಯ, ಅಸಮಾನತೆ ಮತ್ತು ಶೋಷಣೆಗಳನ್ನು ಮುಂದುವರಿಸುತ್ತಿದೆ.

ಇದನ್ನು ಬೇರೊಂದು ಆಯಾಮದಲ್ಲಿ ಚರ್ಚೆ ಮಾಡಬಹುದು. ಒಬ್ಬ ವ್ಯಕ್ತಿಗೆ ದೊಡ್ಡ ರೋಗ ಬಂದಿದೆ ಎಂದು ತಿಳಿಯೋಣ. ಆ ರೋಗ ಬಂದಿರುವ ಕಾರಣಕ್ಕೆ ಅವನ ಮೈ ಬಿಸಿಯಾಗಿದೆ. ಮೈ ಬಿಸಿಯಾಗಿರುವುದರಿಂದ ಜ್ವರ ಬಂದಿದೆ ಎಂದು ತಿಳಿದು ಜ್ವರಕ್ಕೆ ಔಷಧಿ ಕೊಟ್ಟರೆ, ಆ ರೋಗ ವಾಸಿಯಾಗುವುದಿಲ್ಲ. ಆ ರೋಗವು ಮತ್ತಷ್ಟು ಉಲ್ಬಣಗೊಂಡು ಮುಂದುವರಿಯುತ್ತದೆ. ರೋಗಿಯನ್ನು ರೋಗದಿಂದಲೂ ಮತ್ತು ರೋಗವನ್ನು ರೋಗಿಯಿಂದಲೂ ಬೇರ್ಪಡಿಸಲು ಆಗುವುದಿಲ್ಲ. ಯಾಕೆ ಆಗುವುದಿಲ್ಲ ಎಂದರೆ, ರೋಗದ ಲಕ್ಷಣವನ್ನು ರೋಗದ ಗುಣವೆಂದು ತಪ್ಪು ತಿಳಿಯಲಾಗಿದೆ. ಹೀಗೆ ತಪ್ಪು ತಿಳಿದು ರೋಗಕ್ಕೆ ಔಷಧಿ ಕೊಟ್ಟಿದ್ದೇವೆ ಎಂಬ ಭ್ರಮೆಯಲ್ಲಿ ಕೇವಲ ರೋಗದ ಲಕ್ಷಣಕ್ಕೆ ಔಷಧಿ ಕೊಡುವ ಕೆಲಸ ನಡೆದಿರುತ್ತದೆ. ಹಾಗಾಗಿ ರೋಗಿಯ ರೋಗವು ವಾಸಿಯಾಗುವುದಿಲ್ಲ.

ಮೇಲಿನ ತಾತ್ವಿಕ ಚರ್ಚೆಯನ್ನು ಬೇರೆ ಬೇರೆ ಉದಾಹರಣೆಗಳ ಮೂಲಕ ವಿಸ್ತರಿಸಿಕೊಳ್ಳಬಹುದು. ಒಂದು ಕಾಲಕ್ಕೆ ಜಾತಿ ಸಮಸ್ಯೆಗೆ ಅಂತರಜಾತಿಯ ಮದುವೆಗಳೇ ಪರಿಹಾರ ಎಂದು ಹೇಳಲಾಗುತ್ತಿತ್ತು. ಈ ಹೇಳಿಕೆಗೆ ಕನಿಷ್ಠ ೪೦ ವರುಷಗಳ ಇತಿಹಾಸವಿದೆ. ಆ ಹೇಳಿಕೆಯನ್ನು ಈಗ ಮರು ಆಲೋಚನೆ ಮಾಡಬೇಕಾದ ಸಾಮಾಜಿಕ ಪರಿಸ್ಥಿತಿ ನಿರ್ಮಾಣವಾಗಿದೆ. ಕೇವಲ ಅಂತರಜಾತಿಯ ಮದುವೆಗಳು ಮಾತ್ರ ಜಾತಿ ಸಮಸ್ಯೆಯನ್ನು ಸಡಿಲಗೊಳಿಸಲಾರವು ಎಂಬುದು ಈವರೆಗಿನ ಬೆಳವಣಿಗೆಯಿಂದ ಅರಿವಾಗಿದೆ. ಅದೇ ರೀತಿಯಲ್ಲಿ ಮೂಢನಂಬಿಕೆಗಳು ಪ್ರಗತಿಗೆ ಅಡ್ಡಿಯಾಗಿವೆ ಎಂಬ ಹೇಳಿಕೆಯೊಂದಿತ್ತು. ಅದರ ನಿವಾರಣೆಗೆ ವೈಜ್ಞಾನಿಕ

ಆಲೋಚನೆಯನ್ನು ಅಳವಡಿಸಿಕೊಳ್ಳಬೇಕು ಎಂಬ ಸಲಹೆಯನ್ನು ಕೊಡಲಾಯಿತು. ಈಗ ಆ ಹೇಳಿಕೆಗೂ ಕನಿಷ್ಠ ೪೦ ವರುಷಗಳ ಇತಿಹಾಸವಿದೆ. ಇವತ್ತು ಮೂಢನಂಬಿಕೆಗಳ ವಿರುದ್ಧದ ಹೋರಾಟವಾಗಲಿ, ಅಂತರಜಾತಿಯ ಮದುವೆಗಳ ಪ್ರಸ್ತುತತೆಯ ಚರ್ಚೆಯಾಗಲಿ ಅಪ್ರಸ್ತುತ ಎನಿಸುತ್ತಿದೆ.

ತಿರುಗಿ ನಮ್ಮ ಕೇಂದ್ರ ಚರ್ಚೆಗೆ ಮರಳೋಣ. ಅಣ್ಣಾ ಹಜಾರೆ ತಂಡವು ಭ್ರಷ್ಟಾಚಾರವನ್ನು ಕೇವಲ ಮೇಲುಸ್ತರದಲ್ಲಿ ಗ್ರಹಿಸಿಕೊಂಡಿದೆ. ಅದರಲ್ಲೂ ಅದನ್ನು ಕೇವಲ ಆಡಳಿತ ಮತ್ತು ಅಧಿಕಾರದ ವಲಯದಲ್ಲಿ ಮಾತ್ರ ಗುರುತಿಸಿದೆ. ಹೀಗೆ ಭ್ರಷ್ಟಾಚಾರವನ್ನು ಕೇವಲ ಒಂದಂಶದ ಯಾಂತ್ರಿಕ ವಿಷಯವಾಗಿ ಗ್ರಹಿಸುತ್ತ, ಅದೊಂದೇ ದೇಶದ ದೊಡ್ಡ ಸಮಸ್ಯೆ ಎಂದು ಬಿಂಬಿಸುವ ಕೆಲಸವನ್ನು ಮಾಡಿತು. ಇದನ್ನು ಎಲ್ಲಾ ಮಾಧ್ಯಮಗಳೂ ಮುತುವರ್ಜಿಯಿಂದ ಅತ್ಯಂತ ಅಬ್ಬರದಲ್ಲಿ ಪ್ರಚಾರ ಮಾಡಿದವು. ಹೀಗೆ ಭ್ರಷ್ಟಾಚಾರವೊಂದನ್ನೇ ದೇಶದ ಕೇಂದ್ರ ಸಮಸ್ಯೆ ಎಂದು ಬಿಂಬಿಸುತ್ತಲೆ ಉಳಿದೆಲ್ಲ ಮುಖ್ಯ ಸಮಸ್ಯೆಗಳನ್ನು ಸಮಸ್ಯೆಗಳೇ ಅಲ್ಲ ಎಂಬುದನ್ನು ಪರೋಕ್ಷವಾಗಿ ಬಿಂಬಿಸಿದವು.

ಸಾಮ್ರಾಜ್ಯಶಾಹಿಯ ನವವಸಾಹತು ಲೂಟಿಕೋರ ನೀತಿಗಳು ಈ ದೇಶಕ್ಕೆ ದೊಡ್ಡ ಸಮಸ್ಯೆಗಳು. ಭಾರತದ ಆಳುವ ವರ್ಗ ಈ ದೇಶಕ್ಕೆ ಬಹಳ ದೊಡ್ಡ ಕಂಠಕವಾಗಿದೆ. ರಾಜಕೀಯ, ಆರ್ಥಿಕ, ಸಾಮಾಜಿಕ ಅಸಮಾನತೆಗಳು ಈ ದೇಶದ ಮೂಲಭೂತ ಸಮಸ್ಯೆಗಳು. ಇವುಗಳಿಂದ ದೇಶದ ಸಾಮಾನ್ಯ ಜನತೆ ಅಸಹನೆಗೊಂಡಿದೆ; ರೋಸಿ



ಹೋಗಿದೆ. ನವವಸಾಹತು ಲೂಟಿಕೋರ ನೀತಿಗಳ ವಿರುದ್ಧ, ಆಳುವ ವರ್ಗಗಳ ವಿರುದ್ಧ ಸಾಮಾನ್ಯ ಜನರು, ರೈತರು, ನಿರುದ್ಯೋಗಿಗಳು, ಆದಿವಾಸಿ ಬುಡಕಟ್ಟು ಜನರು ಬಿಡಿಬಿಡಿಯಾಗಿ ಪ್ರತಿರೋಧಗಳನ್ನು ಒಡ್ಡುತ್ತಿದ್ದಾರೆ. ಅವರು ಬೇರೆ ಬೇರೆ ನೆಲೆಗಳಲ್ಲಿ ಸಂಘಟಿತರಾಗುತ್ತಿದ್ದಾರೆ. ಅವರು ರಾಜಕೀಯ ಮತ್ತು ಆರ್ಥಿಕ ಅಸಮಾನತೆಯ ವಿರುದ್ಧವೇ ಸೆಟೆದು ನಿಂತಿದ್ದಾರೆ. ದೇಶದ ಕೆಲವು ಕಡೆಗಳಲ್ಲಿ ತ್ಯಾಗ ಬಲಿದಾನಗಳಿಗೂ ಸಿದ್ಧರಾಗುತ್ತಿದ್ದಾರೆ. ಆಳುವ ವರ್ಗಕ್ಕೆ ಮತ್ತು ಕಾರ್ಪೊರೇಟ್ ಪರಿವಾರಕ್ಕೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಇದು ನುಂಗಲಾರದ ತುತ್ತಾಗುವ ಪರಿಸ್ಥಿತಿಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇಂತಹ ಸಂದರ್ಭದಲ್ಲಿ ಈ ಶೋಷಿತ ಜನತೆಯ ವ್ಯವಸ್ಥೆಯ ವಿರೋಧಿ ಭಾವನೆಗಳನ್ನು ಮತ್ತು ಅವರ ವಿಚಾರಗಳನ್ನು ಬೇರೆ ಕಡೆಗೆ ತಿರುಗಿಸಬೇಕಾಗಿದೆ. ಹೀಗೆ ತಿರುಗಿಸದಿದ್ದರೆ ಅವರ ವಿರುದ್ಧವೇ ಸಂಘಟಿತ ರೂಪದ ಸಾಮಾಜಿಕ ಅಭಿಪ್ರಾಯ ನಿರ್ಮಾಣವಾಗುತ್ತದೆ. ಆ ಸಾಮಾಜಿಕ ಅಭಿಪ್ರಾಯವು ರಾಜಕೀಯ ಹಿತಾಸಕ್ತಿಯ ರೂಪವನ್ನು ಪಡೆಯುತ್ತದೆ. ಈ ಬೆಳವಣಿಗೆ ಶೋಷಕ ವರ್ಗಕ್ಕೆ

ಬೇಡವಾಗಿದೆ. ಅಣ್ಣಾ ಹಜಾರೆ ತಂಡವು ಶೋಷಿತರ ವ್ಯವಸ್ಥೆಯ ವಿರೋಧಿ ಆಲೋಚನೆಗಳನ್ನು ನಯವಾಗಿ ದಿಕ್ಕು ತಪ್ಪಿಸುವ ಕೆಲಸಕ್ಕೆ ಮುಂದಾಯಿತು. 'ಶೋಷಣೆಯ ವಿರೋಧಿ ರಾಜಕೀಯ ಹಾಗೂ ಸಾಮಾಜಿಕ ಸಮಾನತೆಗಾಗಿ ಹೋರಾಡುವುದು ಬೇಡ. ಅದರ ಬದಲು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿ, ಜನ ಲೋಕಪಾಲ ಮಸೂದೆಯನ್ನು ಜಾರಿಗೆ ತಂದರೆ ಸಾಕು; ಆಗ ಎಲ್ಲಾ ಸಮಸ್ಯೆಗಳೂ ಬಗೆಹರಿಯುತ್ತವೆ' ಎಂಬ ಭ್ರಮೆಯನ್ನು ಬಿಂಬಿಸುವ ಕೆಲಸ ನಡೆದು ಹೋಯಿತು.

ದೇಶದ ಬೇರೆ ಬೇರೆ ವಲಯಗಳ ಶೋಷಿತರು ಸಂಘಟಿತರಾಗಿ, ಅನ್ಯಾಯ, ಅಸಮಾನತೆ ಮತ್ತು ಶೋಷಣೆಯ ವಿರುದ್ಧ ಹೋರಾಡಲು ಪರಿಸ್ಥಿತಿ ಹೆಚ್ಚು ಹೆಚ್ಚು ಪಕ್ವವಾಗುತ್ತಿದೆ. ಇದು ನಿಜವಾಗಿಯೂ ನಡೆಸಬೇಕಿರುವ ಅಸಲೀ ಹೋರಾಟ. ಆದರೆ ಅಣ್ಣಾ ಹಜಾರೆ ತಂಡವು ಭ್ರಷ್ಟಾಚಾರ ವಿರೋಧಿ ಎಂಬ ನಕಲಿ ಹೋರಾಟವನ್ನು ಮಾಡುವುದರ ಮೂಲಕ ವ್ಯಾಪಕ ಪ್ರಚಾರ ಪಡೆಯಿತು. ಆ ಮೂಲಕ ನಕಲಿ ಹೋರಾಟವು ಅಸಲಿ ಹೋರಾಟಗಳನ್ನು ಪರೋಕ್ಷವಾಗಿ ಮೂಲೆಗುಂಪು ಮಾಡಿತು ಇಲ್ಲವೆ ಆ ದಾರಿಯಲ್ಲಿ ಆಲೋಚನೆ ಮಾಡದ ಹಾಗೆ ಮಾಡಿತು. ಕಾರ್ಪೋರೇಟ್ ಕುಟುಂಬಗಳು, ಬಹುರಾಷ್ಟ್ರೀಯ ಕಂಪನಿಗಳು ಅಣ್ಣಾ ತಂಡದ ಮೂಲಕ ಈ ಹೋರಾಟವನ್ನು ಮಾಡಿಸಿದವು. ಈ ಹೋರಾಟವು ತಾನು ಎಷ್ಟು ನಕಲಿ ಎಂಬುದನ್ನು ತೋರಿಸುವುದರ ಜೊತೆಗೇ ನಕಲಿ ಹೋರಾಟಗಳ ತಂತ್ರಗಳನ್ನೂ ಮತ್ತು ಅವುಗಳ ಹಿಂದಿರುವ ಶಕ್ತಿಗಳನ್ನೂ

ತೆರೆದು ತೋರಿಸಿದೆ.

**ಸೌಜನ್ಯ: ಜನವರಿ, ೨೦೧೨, ಸಂವಾದ ಮಾಸಪತ್ರಿಕೆ**

**'ಬತ್ತದ ಬಯಲು' ಅಂಕಣದಿಂದ**

**ಕಂಗಳೊಳಗಣ ಕತ್ತಲೆ...**

**ಪ್ರೊ. ಎಚ್ ಟಿ ಪೋತೆ**

ಅದೊಂದು ದಿನ ನನ್ನ ಅಭಿರುಚಿಗೆ ತಕ್ಕ ಪುಸ್ತಕಗಳನ್ನು ಬೆಂಗಳೂರಿನ ಸಪ್ನ ಬುಕ್‌ಹೌಸನಿಂದ ಖರೀದಿಸಿಕೊಂಡು ನಾನು ಉಳಿದುಕೊಂಡ ರೂಮಿನ ಕಡೆಗೆ ನಡೆದುಕೊಂಡು ಹೊರಟಿದ್ದೆ. ಅಲ್ಲಿಯೇ ರಸ್ತೆ ಬದಿಯಲ್ಲಿ ಸ್ಕಾರ್‌ಪಿಯೊ ಗಾಡಿಯೊಂದು ನಿಂತಿತ್ತು. ಆ ಗಾಡಿಯ ಹಿಂಬದಿಗೆ ಅಂಟಿಸಿದ್ದ ಚಿತ್ರಪಟದತ್ತ ನನ್ನ ಚಿತ್ತ ಹರಿಯಿತು. ಅದರ ಮೇಲೆ ಅಂಬೇಡ್ಕರ್ ಜನತಾ ಪಕ್ಷ' ಎಂದು ದಪ್ಪದಾದ ಬಹುವರ್ಣ ಅಕ್ಷರಗಳಿಂದ ಬರೆಯಲಾಗಿತ್ತು. ಅದೊಂದು ಹೊಸ ರಾಜಕೀಯ ಪಕ್ಷದ ಹೆಸರು. ಅದರ ನಡುವೆ ಇದ್ದ ಬಾಬಾ ಸಾಹೇಬರ ಮುಖ ಮುದ್ರಿಕೆಯ ಚಿತ್ರಪಟ ನನ್ನನ್ನು ಮತ್ತೆ ಮತ್ತೆ ಆ ಕಡೆಗೆ ನೋಡುವಂತೆ ಮಾಡಿತು. ಒಂದು ಕ್ಷಣ ಆಶ್ಚರ್ಯವೂ ಆಯಿತು. ಏನಿದು ಹೊಸ ಪಕ್ಷ, ಬಿಎಸ್‌ಪಿ, ಆರ್‌ಪಿಐ ಎಂದೆಲ್ಲ ಹೆಸರಿರುವ ಪಕ್ಷಗಳ ಚಿನ್ಹೆಗಳನ್ನು ನೋಡಿದ್ದರಿಂದ ಇದೊಂದಿಷ್ಟು ಆಶ್ಚರ್ಯವೆನಿಸಿತು. ಆದರೂ ಅನೇಕ ಪಕ್ಷಗಳ ಪೈಕಿ ಇದೂ ಒಂದು ಎಂದುಕೊಂಡು ಆ ಕುರಿತು ವಿಚಾರ ಮಾಡುತ್ತ ಮುಂದೆ ಹೆಜ್ಜೆ ಹಾಕುತ್ತಿದ್ದೆ. ನನ್ನ ಮುಂದು ಮುಂದೆ ವಯೋವೃದ್ಧರಿಬ್ಬರು ಅದೇ ವ್ಯಕ್ತಿಯ, ಆ ಪಕ್ಷದ ಗುರುತು, ಅಧ್ಯಕ್ಷನ ಕುರಿತು ಮಾತಾಡುತ್ತ ಸಾಗಿದ್ದರು. ಅವರ ಮಾತುಗಳನ್ನು ಕೇಳಲು ನನ್ನಲ್ಲಿ ಒಂದಿಷ್ಟು ಕುತೂಹಲ ಹೆಚ್ಚಾಯಿತು.

'ಏನ್ರಿ ಇದು!! ಅಂಬೇಡ್ಕರ್ ಜನತಾ ಪಕ್ಷ'!! ಎಂದು ಒಬ್ಬ ವೃದ್ಧ ಆಶ್ಚರ್ಯವ್ಯಕ್ತಪಡಿಸಿದ.

ಇನ್ನೊಬ್ಬಾತ ಅದೇರಿ!! ಅವನು ಮೊದಲು ಒಂದು ಸಂಘಟನೆಯಲ್ಲಿದ್ದ. ಈಗ ಪಕ್ಷ ಕಟ್ಟಿಕೊಂಡಿದ್ದಾನೆ. ನಮ್ಮೂರಿನ ಪಕ್ಕದ ಹಳ್ಳಿ ಹುಡುಗಾರೀ ಆತ' ಎನ್ನುತ್ತಿದ್ದಂತೆ ಮೊದಲಿನಾತ 'ಅಯ್ಯೋ ಬಿಡ್ರಿ... ಅಂಬೇಡ್ಕರ್ ಎಂದರೆ ಯಾರಾದ್ರೂ ವೋಟ್ ಹಾಕ್ತಾರೇನ್ರಿ' ಎಂದು ತಾತ್ಸಾರ ತುಂಬಿದ ಮಾತುಗಳನ್ನಾಡಿದ... ಇದೆಲ್ಲವನ್ನು ಕೇಳಿಸಿಕೊಂಡು ನಾನು ಸುಮ್ಮನಾದೆ. ಅವರಿಬ್ಬರು ಪಕ್ಕದ ಸರ್ಕಲ್‌ನಲ್ಲಿ ಸರಿದು ಮಾಯವಾದರು. ನಾನು ನನ್ನ ರೂಮಿನತ್ತ ಹೆಜ್ಜೆ ಹಾಕಿದೆ.

ಆ ಇಬ್ಬರ ನಡುವೆ ನಡೆದ ಮಾತುಗಳು ನನ್ನೊಳಗೆ ಮತ್ತೆ ಮತ್ತೆ ಜೀವ ತಳೆಯುತ್ತಿದ್ದವು. ಆ ಕುರಿತು ಚಿಂತಿಸಿ ಸುಮ್ಮನಾದೆ. ಸುಮ್ಮನೆ ಕೂತರೂ ಕೂಡಲಾಗಲಿಲ್ಲ; ಚಡಪಡಿಕೆ ಹತ್ತಿತ್ತು. ಮೂಲೆಯಲ್ಲಿ ಬಿದ್ದಿದ್ದ ದಿನ ಪತ್ರಿಕೆಯೊಂದರ ಮೇಲೆ ಕಣ್ಣಾಡಿಸಿದೆ. ಅಲ್ಲೂ ದಲಿತರ ಆತ್ಮಹತ್ಯಾ ಬೆದರಿಕೆ, ಅಂಬೇಡ್ಕರ್ ಮೂರ್ತಿ ಭಂಜನ... ಎಂದೆಲ್ಲ ಬರೆದಿದ್ದನ್ನು ನೋಡಿ 'ಛೇ' ಎಂದೆನಿಸಿತು. ಬೇಸರಿಸಿಕೊಂಡು ಸುಮ್ಮನಾದೆ.

ನಿದ್ದೆ ಮಾಡಿ ಎದ್ದಾದ ಮೇಲೆಯೂ ಮತ್ತದೆ ಚಿಂತೆ, ಚಡಪಡಿಕೆ... ಅಂಬೇಡ್ಕರ್ ಎಂದರೆ ಈ ಜನರಿಗ್ಯಾಕೆ ಇಷ್ಟೊಂದು ಬೇಸರ, ಅಸಹನೆ, ತಾತ್ಸಾರ. ಆ ಮಹಾನುಭಾವ ದೇಶಕ್ಕೆ ಸಂವಿಧಾನ ಬರೆದರೂ ಅವರು ಬರೆದಿಲ್ಲವೆಂದು ಊಹಾಪೋಹ ಹಬ್ಬಿಸುವುದು ಇನ್ನೂ ಏನೇನೋ ಹುಟ್ಟಿಸುವುದು ನಡೆದೇ ಇದೇ. ಇವರೆಲ್ಲ ಹೀಗ್ಯಾಕೆ? ಈ ಕುರಿತಂತೆ ನನ್ನ ಮನಸ್ಸು ನನ್ನ ಜೊತೆಗೇ ತಕರಾರು ಮಾಡಹತ್ತಿತು. ಅಂಬೇಡ್ಕರ್' ಎಂದರೆ ನಾನು ತಿಳಿದಹಾಗೆ ಅವರೊಬ್ಬ ಮಹಾಮೇಧಾವಿ, ಅಪ್ರತಿಮ ಮಾನವತಾವಾದಿ, ಪ್ರಕಾಂಡ ಪಂಡಿತರು. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಕಾನೂನು, ಸಾಹಿತ್ಯ, ಸಂಸ್ಕೃತಿಯ ಶ್ರೇಷ್ಠ ಚಿಂತಕರು. ಸಂವಿಧಾನದ ಕರ್ತೃ. ಭಾರತಕ್ಕೊಂದು ಜಾತ್ಯತೀತ ಸಂವಿಧಾನ ಕಲ್ಪಿಸಿದವರು. ಸಾಮಾನ್ಯರು, ಶೋಷಿತರು, ಮಹಿಳೆಯರು ಇತರ ಪ್ರಜೆಗಳಂತೆ ಸರಿ ಸಮಾನವಾಗಿ ಬದುಕುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟವರು. ಅಸ್ಪೃಶ್ಯರಷ್ಟೇ ಅವಮಾನ, ಶೋಷಣೆಗೊಳಗಾದ ಮಹಿಳೆಯರನ್ನು ಸಹ ಪುರುಷನ ಸಮಾನವಾಗಿ ಬದುಕಲು ಹಕ್ಕು ದೊರಕಿಸಿಕೊಟ್ಟವರು. ಈ ನೆಲದ ಬಹು ಧರ್ಮೀಯ, ಬಹು ಸಂಸ್ಕೃತಿಯ ಜನರೆಲ್ಲರೂ ಸೌಹಾರ್ದತೆಯಿಂದ ಬಾಳುವಂತೆ ನೆಲೆ ಒದಗಿಸಿದವರು. ಮತಾಂಧತೆ, ಹಿಂಸೆ, ಅಸಮಾನತೆ ಶೋಷಣೆಗಳನ್ನು ಶಮನಗೊಳಿಸಲು ಅವುಗಳ ಮೂಲಚೂಲವನ್ನು ಕೀಳಲು ಶ್ರಮಿಸಿದ್ದು ವ್ಯರ್ಥವಾಯಿತೇ? ಎಂದು ಒಂದು ಕ್ಷಣ ಅನ್ನಿಸಿತು. ಯಾಕೆಂದರೆ ಇಲ್ಲಿಯ ಉಪ್ಪರಿಗೆಯ ಮೇಲಿರುವವರು ದಲಿತರೆಂದರೆ ಮೂಗು ಮುರಿಯುತ್ತಾರೆ. ದಲಿತರು ತಮ್ಮ ಹಕ್ಕು ಪ್ರತಿಪಾದನೆ ಮಾಡಿದರೆ ಅಪಾರ್ಥ ಮಾಡಿಕೊಳ್ಳುತ್ತಾರೆ. ನ್ಯಾಯ ಕೇಳಿದರೆ ಭಂಡನೆಂದು ಜರೆಯುತ್ತಾರೆ. ಅವರಿಗೆ ತಿಳಿದಿಲ್ಲ. 'ದಲಿತ' ಅನ್ನುವುದು ಒಂದು ಜಾತಿ ಅಲ್ಲ, ಅದೊಂದು 'ಪ್ರಜ್ಞೆ'. ಹಕ್ಕೊತ್ತಾಯದ ಪ್ರತೀಕ, ಸ್ವಾಭಿಮಾನದ ಸಂಕೇತ, ಮಾನವೀಯತೆ ಪ್ರತಿಪಾದನೆಯ ಪರಿಕಲ್ಪನೆ ಎಂದೆಲ್ಲ ನಮ್ಮ ಸಮಕಾಲೀನರು ಓದಿ ಅರ್ಥೈಸಿದರೂ ಆ ಜನವರ್ಗದ ಬಗ್ಗೆ, ಅವರ ತಳಮಳದ ಬಗ್ಗೆ ಅವರ ಬೆಳವಣಿಗೆಯ ಬಗ್ಗೆ ಹೀಗೇಕೆ ತಾತ್ಸಾರ? ದಲಿತರೆಂದರೆ ವಿರೋಧವೇಕೆ? ಅಸಹನೆಯೇಕೆ? ಅಷ್ಟೇ ಏಕೆ ಅಂಬೇಡ್ಕರ್ ಎಂದರೆ ಮೈಮೇಲೆ ಹಾವು ಹರಿದಂತೆ ಚೀರಾಡುತ್ತಾರೆ. ಈ ಜನವರ್ಗಕ್ಕೆ 'ಅಂಬೇಡ್ಕರ್ ಅವರೇ ಮತಹಾಕುವ ಹಕ್ಕು ಚೀರಾಡುತ್ತಾರೆ. ಈ ಜನವರ್ಗಕ್ಕೆ 'ಅಂಬೇಡ್ಕರ್' ಅವರೇ ಮತಹಾಕುವ ಹಕ್ಕು ದೊರಕಿಸಿಕೊಟ್ಟಿದ್ದು ಎನ್ನುವುದು ಮರೆತು ಹೋಯಿತೆ? ಈ ಅಕ್ಷರವಂತರಲ್ಲಿ ಈ ಅಸಹನೆ ಯಾಕಾದರೂ ಹುಟ್ಟಿತೊ? ಛೇ ಇದು ನೋವಿನ, ಬೇಸರದ ಸಂಗತಿ. ಈ ಕುರಿತಂತೆ ಒಂದೆರಡು ಸಣ್ಣ ಘಟನೆಗಳನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಕುಲಪತಿಯಾಗುವ ಅಕಾಂಕ್ಷೆಯಿಂದ ಪ್ರಾಧ್ಯಾಪಕರೊಬ್ಬರು ಮಂತ್ರಿಯೊಬ್ಬರನ್ನು ಭೇಟಿಯಾಗುತ್ತಾರೆ. ಆ ಮಂತ್ರಿ ಮಹಾಶಯರು ಮೇಲ್ಜಾತಿಗೆ ಸೇರಿದವರಾಗಿದ್ದರು. ಅವರನ್ನು ಸಂಧಿಸಿದ ಪ್ರಾಧ್ಯಾಪಕರು ತಮ್ಮ ಪರಿಚಯ ಪತ್ರವನ್ನು ನೀಡಿ ನಾನು ಇಷ್ಟೆಲ್ಲ ಸಾಧನೆ ಮಾಡಿದ್ದೇನೆ! ದಯಮಾಡಿ ನನ್ನನ್ನು ಕುಲಪತಿ ಹುದ್ದೆಗೆ ಶಿಫಾರಸ್ಸು ಮಾಡಬೇಕೆಂದು ವಿನಂತಿಸಿಕೊಂಡರು. ಪರಿಚಯ ಪತ್ರ ನೋಡಿದ ಸಚಿವರು ತುಂಬಾ ಸಾಧನೆ ಮಾಡಿದ್ದೀರಿ. ನಿಮ್ಮ ಅರ್ಜಿಯನ್ನು ಪರಿಗಣಿಸುತ್ತೇನೆ. ಆದರೆ ನೀವು ಯಾವ ಜಾತಿಗೆ ಸೇರಿದವರಾಗಿದ್ದೀರಿ

ಎಂಬುದು ಬರೆದಿಲ್ಲವಲ್ಲವೆಂದು ಕೇಳಿದರು. ಅವರು ತಾನು ಎಸ್.ಸಿ. ವರ್ಗಕ್ಕೆ ಸೇರಿದವ ಎಂದಾಕ್ಷಣ ತಮ್ಮೆದುರಿಗಿದ್ದ ಅವರ ಪರಿಚಯ ಪತ್ರವನ್ನು ಮೂಲೆಗೆ ಸರಿಸಿ ಮುಖ ಸಿಂಡರಿಸಿಕೊಂಡು ಕುಳಿತರಂತೆ. ಪರಿಚಯ ಪತ್ರ ನೋಡಿದಾಗಿದ್ದ ಸಚಿವರ ಹಾವಭಾವ, ಜಾತಿ ಗೊತ್ತಾದಾಗ ಬದಲಾಗಿ ಹೋಗಿದ್ದು ಕಂಡು ಆ ಪ್ರಾಧ್ಯಾಪಕರು ತುಂಬಾ ಮುಜುಗರಕ್ಕೆ ಒಳಗಾದರು. ಯಾಕೆ ಹೀಗೆ? ಎಂದು ಯೋಚನೆ ಮಾಡ್ತಾ ಹೊರ ಬಂದರು. ಆ ಮೇಲೆ ಅವರಿಗೆ ಗೊತ್ತಾಗಿದ್ದುದು ಓಹೋ ನನ್ನ ಹೆಸರಿನ ಕೊನೆಯಲ್ಲಿ "ಅಯ್ಯ' ಎಂದಿದ್ದುದನ್ನು ನೋಡಿದ ಆ ಸಚಿವರು ಇವರು ಮೇಲ್ಜಾತಿಯವರೇ ಇರಬಹುದೆಂದು ತಿಳಿದುಕೊಂಡು ಖುಷಿಪಟ್ಟಿರುತ್ತಾರೆ'. ಅದೇ ಅವರ ಜಾತಿ ಗೊತ್ತಾದಾಗ ಆ ಮಂತ್ರಿಗಳ ಮುಖ ಕಳವಳಿಕೆಗಳು ಬದಲಾಗಿ ಹೋಗಿದ್ದವು. ಇಂಥ ಅನುಭವ ಹೊಂದಿದವರೊಬ್ಬರು ವೇದಿಕೆಯೊಂದರಲ್ಲಿ ತಮ್ಮ ಅಳಲನ್ನು ತೋಡಿಕೊಂಡರು. ಇಂತಹ ಅವಮಾನ, ಹಿಂಸೆಗಳನ್ನು ಬಲ್ಲವನೆ ಬಲ್ಲ.

ಈ ಮೇಲಿನ ಘಟನೆಗೆ ಪೂರಕವಾಗಿ ಇನ್ನೊಂದು ಮಾತು ಸೇರಿಸಬಹುದು. ಇದು ಸುಮಾರು ಹದಿನೆಂಟು ವರ್ಷಗಳ ಹಿಂದಿನ ಮಾತು. ನಾನಾಗ ಮಹಾರಾಷ್ಟ್ರದ ಅಕ್ಕಲಕೋಟೆಯ ಮಹಾವಿದ್ಯಾಲಯದಲ್ಲಿ ಅಧ್ಯಾಪಕನಾಗಿ ಅದೇ ಆಗ ಕೆಲಸಕ್ಕೆ ಸೇರಿದ್ದೆ. ಸೋಲಾಪುರದಿಂದ ಅಕ್ಕಲಕೋಟೆಗೆ ದಿನಾಲು ಬಂದು ಹೋಗಿ ಮಾಡುತ್ತಿದ್ದೆ. ಒಂದು ದಿನ ನಾನು ಹತ್ತಿದ ಬಸ್ಸಿಗೆ ಕಾವಿಧಾರಿ ಸನ್ಯಾಸಿಯೊಬ್ಬರು (ಅವರು ತಮ್ಮನ್ನು ಕರೆದುಕೊಳ್ಳುವುದು ಶರಣರೆಂದು...?) ಹತ್ತಿದರು. ಇಬ್ಬರೂ ಅಕ್ಕಪಕ್ಕದಲ್ಲಿ ಕುಳಿತೆವು. ನನ್ನ ಕೈಯಲ್ಲಿ ನಾಲ್ಕಾರು ಸಾಹಿತ್ಯ ಕೃತಿಗಳಿದ್ದವು. ಅವುಗಳನ್ನು ನೋಡಿದ ಸ್ವಯಂ ಘೋಷಿತ ಶರಣರು "ನೀವು...' ಎಂದು ನನ್ನತ್ತ ನೋಡಿ ಮಾತಿಗಿಳಿದರು. 'ಇಲ್ಲೇ ಅಕ್ಕಲಕೋಟೆ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೇನೆ' ಎಂದೆ. ಶರಣರು ತಾವೇ ಮಾತು ಮುಂದುವರಿಸಿದರು. ಅಧ್ಯಯನ. ಅಧ್ಯಾಪಕರು. ವಿದ್ಯಾರ್ಥಿಗಳು... ಹೀಗೆಲ್ಲ ಮಾತಾಡಿದ ಮೇಲೆ ನನ್ನನ್ನೇ ನೋಡುತ್ತ. ಮುಖ್ಯ ವಿಷಯಕ್ಕೆ ಬಂದರು. ಹಿಂದುಮುಂದು ನೋಡದೆ ತಮ್ಮದು ಯಾವ ಮಾರ್ಗ (ಜಾತಿ) ಎಂದರು. ತಕ್ಷಣಕ್ಕೆ ಏನು ಹೇಳಬೇಕೋ ತೋಚಲಿಲ್ಲ. ಮನುಷ್ಯನ ಯೋಗ್ಯತೆಯನ್ನು ಜಾತಿ ಮೇಲೆಯೇ ಗುರುತಿಸುವ ಈ ಸಮಾಜದಲ್ಲಿ ಜಾತಿ ಹೇಳುವುದು ಅನಿವಾರ್ಯ; ನನ್ನ ಜಾತಿಯನ್ನು ಹೇಳಲೇಬೇಕಾಯಿತು. ಅವರಿಗೆ ನಾನು 'ಅಸ್ಪೃಶ್ಯ' ಎಂದೆ. ಹೀಗೆ ಹೇಳಿದಾಕ್ಷಣಕ್ಕೆ ಮೈಮೇಲೆ ಹಾವು ಬಿದ್ದವರಂತೆ ವೇಷಧಾರಿ ಶರಣರು ಒಂದಿಷ್ಟು ದೂರ ಸರಿದು, ಮುಖ ಗಂಟು ಮಾಡಿಕೊಂಡು ಕುಳಿತರು. ಮೊದಲಲ್ಲಿ ತೋರಿದ ಆದರ, ಗೌರವ, ಪ್ರೀತಿ ಭಾವಗಳನ್ನೆಲ್ಲ ದೂರ ತಳ್ಳಿ ಒಮ್ಮೆಲೇ ಏಕವಚನಕ್ಕಿಳಿದರು. ಹೋಗು, ಬಾ ಎಂದು ಸುರುವು ಮಾಡಿಕೊಂಡರು. ಏನಪ್ಪ ಇದು! ಜಾತಿ ಇಂಥ ಭಯಂಕರವೇ? ನಾನೊಬ್ಬ ಕಾಲೇಜು ಅಧ್ಯಾಪಕ ಅನ್ನುವುದನ್ನೂ ಮರೆತು ಬಿಟ್ರಾ! ಈ ಶರಣರು? ಅವರು ಹಾಕಿಕೊಂಡಿದ್ದು ಕಾವಿ, ಹಚ್ಚಿಕೊಂಡದ್ದು ವಿಭೂತಿ!!

ಈ ಮೇಲೆ ಹೇಳಿದ ಕಾವಿಧಾರಿ ಶರಣರು ಅಪ್ರಬುದ್ಧರು, ಶರಣರನ್ನು ಅರೆಬರೆಯಾಗಿ ಓದಿದವರು. ಅಂತಹವರ ವರ್ತನೆಯನ್ನು ಕಂಡು ಮರುಕ ಪಡಬಹುದು.

ಆದರೆ ನಮ್ಮ ವಿವಿಗಳ ಕನ್ನಡ ಪ್ರಾಧ್ಯಾಪಕರನೇಕರು ನಾನೊಬ್ಬ ಶರಣರ ಅಪ್ಪಟ ಅನುಯಾಯಿ ಎಂದು ಹೇಳಿಕೊಳ್ಳುತ್ತಲೇ, ದಲಿತ ಶರಣರ ಪಠ್ಯಗಳನ್ನು ಪಾಠ ಮಾಡುವುದಕ್ಕೆ ಮನಸ್ಸು ಮಾಡದಿರುವುದು ಇದಕ್ಕಿಂತ ಘೋರ ದುರಂತವಲ್ಲವೆ? ದಲಿತ ಸಾಹಿತ್ಯದ ಕೃತಿಗಳನ್ನು ಓದುವುದಿಲ್ಲ. ಅದು ಬಿಡಿ!! ಮುಟ್ಟಲು ಮನಸ್ಸು ಮಾಡುವುದಿಲ್ಲ. ದಲಿತ ವಿದ್ಯಾರ್ಥಿಗಳೆಮದರೆ ಸಾಕು ಮೈಮೇಲೆ ಇರುವೆ ಬಿಟ್ಟುಕೊಂಡಂತೆ ಆಡುತ್ತಾರೆ. ಕೆಲವರು ಶರಣರ ಹೆಸರಿನ ಮೇಲೆ ಸಮ್ಮೇಳನಗಳನ್ನು ನಡೆಸ್ತಾರೆ. ಆದರೆ ಇಲ್ಲಿಯವರೆಗೆ ಒಬ್ಬ ದಲಿತ ವ್ಯಕ್ತಿಯನ್ನೂ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿಲ್ಲ. ಮಾಡುವುದೂ ಇಲ್ಲ.

ಬಸವಣ್ಣ-ಬಸವಾದಿ ಶರಣರು ಎನ್ನುವದು ಅದೊಂದು ಕಾಲದ ಪ್ರಜ್ಞೆ! ಮಾನವೀಯ ಚಿಂತನೆ ಕಾಯಕ ಶ್ರೇಷ್ಠತೆಯನ್ನು ಎತ್ತಿ ತೋರಿದ ನೆಲೆ. ಅಂತಹದೊಂದು ಪ್ರಮುಖ ಚಳವಳಿ, ಚಿಂತನೆಯನ್ನು ಒಂದು ಜಾತಿಗೆ ಸೀಮಿತಗೊಳಿಸಿರುವುದು ಖೇದದ ಸಂಗತಿ, ಬುದ್ಧ-ಬಸವ ಹಾಗೂ ಅಂಬೇಡ್ಕರ್ ಈ ಮೂರು ಶಬ್ದಗಳು ಕೇವಲ ಹೆಸರುಗಳಲ್ಲ. ಅವು ಪ್ರಜ್ಞೆಯಾಗಿ ನಮ್ಮೊಂದಿಗೆ ಸದಾಕಾಲ ವ್ಯವಹರಿಸುತ್ತವೆ. ನಮ್ಮನ್ನು, ಸಮಾಜವನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತವೆ. ದಲಿತ ಶರಣರನ್ನು ಅಪ್ಪ, ಅಣ್ಣ, ತಮ್ಮ ಎಂದೆಲ್ಲ ಕರೆದ ಬಸವಣ್ಣ ಅವರಲ್ಲಿ ಆತ್ಮವಿಶ್ವಾಸ ತುಂಬಿದ. ಅಂತಹ ಚಿಂತನೆಯನ್ನು ಮುಂದುವರೆಸಿದ 'ಅಂಬೇಡ್ಕರ್' ಎಂದರೆ ಭಯಪಡುವ, ಬೇಸರಿಸುವ, ಅಸಹನೆಯಿಂದ ವರ್ತಿಸುವವರ ಸಂಖ್ಯೆ ಹೆಚ್ಚಾಗುತ್ತಿರುವುದು ದುರದೃಷ್ಟವೇ ಹೌದು.

ಗಾಂಧೀಜಿ-ಅಂಬೇಡ್ಕರ್ ಅವರು ತಾತ್ವಿಕ ನೆಲೆಯಲ್ಲಿ ವಾಗ್ವಾದ ಮಾಡಿದವರು. ಆ ಮೂಲಕ ಶ್ರೇಷ್ಠ ಕನಿಷ್ಟವೆನ್ನುವುದು ಯಾವುದು? ಎಂದೆಲ್ಲ ಚಿಂತನೆಗೈದು ಜೀವಪರವಾದುದನ್ನು ಎತ್ತಿಹಿಡಿದರು. ದೇಶ ಸ್ವತಂತ್ರವಾಯಿತು. ದೇಶಕ್ಕೊಂದು ಸಂವಿಧಾನಬೇಕು ನಿಜ, ಹಾಗಂತ ನಾಯಕರು ಸುಮ್ಮನಿರಲಿಲ್ಲ. ಅಂದಿನ ನಾಯಕರುಗಳಾದ ವಲ್ಲಭಭಾಯಿ ಪಟೇಲ ಮತ್ತಿತರರು ಕೂಡಿಕೊಂಡು ಯುರೋಪ್ ಖಂಡದ ಹಲವು ರಾಷ್ಟ್ರಗಳ ಸಂವಿಧಾನ ಬರೆದ 'ಐವರ್ ಜನ್ನಿಂಗ್' ಎಂಬ ಮಹಾಜ್ಞಾನಿ ಅವರನ್ನು ಭೇಟಿಯಾದರು. ಅವರು ಇವರೆಲ್ಲರನ್ನೂ ಆದರದಿಂದ ಬರಮಾಡಿಕೊಳ್ಳುತ್ತಾರೆ. “ಏನು ತಾವೆಲ್ಲ ಬಂದಿರಿ' ಎಂದು ಕೇಳಿದ್ದಕ್ಕೆ 'ಏನಿಲ್ಲ ನಮ್ಮ ದೇಶಕ್ಕೆ ಸಂವಿಧಾನದ ಅವಶ್ಯಕತೆಯಿದೆ. ತಾವು ಬರೆದುಕೊಡಬೇಕು' ಎಂದು ನಿವೇದಿಸಿಕೊಂಡರಂತೆ. ಐವರ್ ಜನ್ನಿಂಗ್ ಬಂದವರಿಗೆ ಬಹಳ ಸಮಾಧಾನದಿಂದಲೇ ಉತ್ತರ ಕೊಟ್ಟರಂತೆ. ನೋಡಿ, ಯುರೋಪ್ ಖಂಡದ ದೇಶಗಳ ಇನ್ನೂ ಅನೇಕ ಸಂವಿಧಾನಗಳನ್ನು ನಾನು ಬರೆಯಬಲ್ಲೆ. ಆದರೆ ಭಾರತದಂತಹ ಸಂಕೀರ್ಣ ಸಂಸ್ಕೃತಿ ಹೊಂದಿರುವ ದೇಶದ ಸಂವಿಧಾನ ಬರೆಯುವುದು ನನ್ನಿಂದ ಅಸಾಧ್ಯ ಎಂದು ನುಡಿದರಂತೆ. 'ಹಾಗಿದ್ದರೆ ನಾವು ಏನು ಮಾಡಬೇಕು, ನಮ್ಮ ಸಂವಿಧಾನವನ್ನು ಯಾರಿಂದ ಬರೆಯಿಸಬೇಕು' ಪುನಃ ಐವರ್ ಜನ್ನಿಂಗ್‌ರನ್ನು 'ದಯಮಾಡಿ ನೀವೇ ಇದಕ್ಕೆ ಸಲಹೆ ಕೊಡಿ. ನಮ್ಮ ಸಂವಿಧಾನ ಯಾರು ಬರೆಯುತ್ತಾರೆ' ಎಂದು ಕೇಳಿದಾಗ ಅದಕ್ಕೆ ಜನ್ನಿಂಗರು 'ನೀವು ಇಲ್ಲಿಗೆ ಬಂದಿರುವುದೇ ತಪ್ಪು, ದಾರಿ ತಪ್ಪಿ ಬಂದಿದ್ದೀರಿ. ನಿಮ್ಮ ದೇಶದ ಸಂವಿಧಾನ ಬರೆಯುವ

ಏಕೈಕ ವ್ಯಕ್ತಿ ಎಂದರೆ ಡಾ. ಬಿ.ಆರ್. ಅಂಬೇಡ್ಕರ್' ಎಂದು ಹೇಳಿದರಂತೆ. ಆಗ ಪೆಚ್ಚುಮೋರೆ ಮಾಡಿಕೊಂಡು ಭಾರತಕ್ಕೆ ಬಂದ ನಾಯಕರು ಮಹಾತ್ಮ ಗಾಂಧೀಜಿಯವರನ್ನು ಸಂಪರ್ಕ ಮಾಡಿ ನಡೆದ ಘಟನೆಯನ್ನು ವಿವರಿಸಿದರು. 'ನೀವು ನನ್ನ ಕೇಳದೆ ವಿದೇಶಕ್ಕೆ ಹೋಗಿದ್ದು ತಪ್ಪು, ನನಗೆ ಕೇಳಿದ್ದರೆ ನಾನೇ ಹೇಳುತ್ತಿದ್ದೆ. ನಮ್ಮ ಸಂವಿಧಾನ ಬರೆಯುವ ಧೀಮಂತರೆಂದರೆ ಡಾ. ಅಂಬೇಡ್ಕರ್ ಮಾತ್ರ' ಎಂದು ಹೇಳುತ್ತಿದ್ದೆ ಎಂದರಂತೆ, ಇಷ್ಟಾದ ಮೇಲೂ ದೇಶ ವಿಭಜನೆ ಹಾಳುಮೂಳು ಎಂದು ಸದಸ್ಯತ್ವದ ನೆಪವೊಡ್ಡಿ ಸಂವಿಧಾನ ಸಮಿತಿಯಿಂದ ಡಾ. ಅಂಬೇಡ್ಕರ್ ಅವರನ್ನು ಹೊರಗಿಡುವ ತಂತ್ರ ಕುತಂತ್ರಗಳು ನಡೆದವು. ಆದರೂ ಕೊನೆಗೆ ಈ ದೇಶದ ಹಣೆಬರಹ ಬರೆಯುವ ಕಾರ್ಯ ಡಾ. ಅಂಬೇಡ್ಕರ್ ಅವರಿಂದಲೇ ಆಯಿತು ಎನ್ನುವುದನ್ನು ನೆನಪಿಡಬೇಕು. ಆದರೂ ಅಂಬೇಡ್ಕರ್‌ರೆಂದರೆ ದಲಿತ, ಅವರು ಪರಕೀಯರು ಅನ್ನುವ ಭಾವನೆ ಬಹುಸಂಖ್ಯಾತರಲ್ಲಿ ಇನ್ನೂ ಬೇರೂರಿಬಿಟ್ಟಿದೆ. ಜೊತೆಗೆ ದಲಿತ ಸಮುದಾಯದ ಅನೇಕ ಗುಂಪುಗಳು ಉಳ್ಳವರ ತಂತ್ರ ಕುತಂತ್ರಗಳಿಂದ ಇಂದಿಗೂ ಘಾಸಿಗೊಳ್ಳುತ್ತಿವೆ. ಶಾಲೆಗಳಲ್ಲಿ ಬಿಸಿ ಊಟವನ್ನು ದಲಿತ ಹೆಣ್ಣು ಮಕ್ಕಳು ಮಾಡಿದರೆ ಸವರ್ಣೀಯರ ಮಕ್ಕಳು ಪ್ರತಿಭಟಿಸುವಂತೆ ಕುಮ್ಮಕ್ಕು ನೀಡುವದು, ದಲಿತ ಅಧಿಕಾರಿಗಳನ್ನು ಅವಮಾನಿಸುವುದು ಇವೆಲ್ಲ ನಿತ್ಯ ನಡೆಯುತ್ತ ಬಂದ ಸರ್ವೇ ಸಾಮಾನ್ಯ ಸಂಗತಿಗಳಾಗಿ ಬಿಟ್ಟಿವೆ. ಇದನ್ನು ಶಮನಮಾಡಲು ಸಾಧ್ಯವಿಲ್ಲವೆ? ಎಂದುಕೊಳ್ಳುವಾಗ 'ಕಂಗಳೊಳಗಣ ಕತ್ತಲೆ ತಿಳಿಯದಣ್ಣ ಎಂದು ಅಲ್ಲಮ ಹೇಳಿದ್ದು ಮತ್ತೆ ಮತ್ತೆ ನೆನಪಾಗುತ್ತದೆ.

**ಓಲೆ ಕಳ್ಳಿ ಅತ್ತೆ**

**- ಡಾ. ಎಲ್. ಹನುಮಂತಯ್ಯ**

ಪರಂಪರಾಗತವೆಂಬಂತೆ ಒಂದು ಹಳೆಯ ಟ್ರಂಕು. ಅದರೊಳಗೊಂದು ಚಿಕ್ಕ ತಗಡಿನ ಡಬ್ಬ ಬಹಳ ವರ್ಷಗಳಿಂದ ನಮ್ಮ ಮನೆಯಲ್ಲಿತ್ತು. ಅದರಲ್ಲಿ ಆ ಕಾಲಕ್ಕೆ ಅಮೂಲ್ಯ ವಸ್ತುಗಳನ್ನು ನಾವು ಇಡುತ್ತಿದ್ದೆವು. ಬೆಳ್ಳಿಯ ಕಡಗ, ನನ್ನ ತಂದೆಯ ಒಂದು ಜೊತೆ ಅತ್ತಂಟಿ, ಒಂದು ಜೊತೆ ಚಿನ್ನದ ಓಲೆಯನ್ನು ಡಬ್ಬದಲ್ಲಿ ಹಾಕಿ ಮುಚ್ಚಿಡುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಅವನ್ನು ಧರಿಸುತ್ತಿದ್ದರು. ಒಂದು ಒಳ್ಳೆಯ ಸೀರೆ ಇದ್ದರೆ ಅದನ್ನು ನನ್ನ ತಾಯಿ ಟ್ರಂಕಿನಲ್ಲಿ ಇಡುತ್ತಿದ್ದರು. ದಿನನಿತ್ಯ ಸ್ವಲ್ಪ ಹರಿದಿರುವ ಹಳೆಯ ಸೀರೆ ಉಡುವುದು ಅವರಿಗೆ ರೂಢಿಯಾಗಿತ್ತು. ಈ ಒಳ್ಳೆಯ ಸೀರೆಯನ್ನು ಹಬ್ಬ- ಹರಿದಿನಗಳಿಗೆ, ಮದುವೆ ಸಮಾರಂಭಗಳಿಗೆ ಉಟ್ಟುಕೊಳ್ಳುತ್ತಿದ್ದರು, ಮತ್ತೆ ಅದನ್ನು ಮಡಚಿ ಟ್ರಂಕಿನಲ್ಲಿ ಇಟ್ಟುಬಿಡುತ್ತಿದ್ದರು.

ನನಗೆ ತಿಳಿದಂತೆ ನನ್ನ ತಾಯಿ ನಾನು ಪಿಯುಸಿಗೆ ಬರುವವರೆಗೂ ರೇಷ್ಮೆ ಸೀರೆಯನ್ನು ಉಟ್ಟುಕೊಂಡವರಲ್ಲ. ಜಾಲಿಮರವನ್ನೋ, ಆಲದ ಮರವನ್ನೋ ನೂರಿನ್ನೂರು ರೂಪಾಯಿಗೆ ಮಾರಿ, ಆ ಹಣವನ್ನು ಬೆಂಗಳೂರಿನಲ್ಲಿರುವ ಮಾವನವರಿಗೆ ಕೊಟ್ಟು ಒಂದು ರೇಷ್ಮೆ ಸೀರೆ ತರಿಸಿಕೊಂಡಿದ್ದರು. ಬಹಳ ವರ್ಷಗಳ ಕಾಲ ಈ ರೇಷ್ಮೆ ಅವರ ಅದ್ದೂರಿ ಉಡುಗೆಯಾಗಿತ್ತು. ಈ ಟ್ರಂಕನ್ನು ಪರಿಶೀಲಿಸಿದ ತಾಯಿಗೆ ಥಟ್ಟನೆ ಹೊಳೆದು ಹೋಯಿತು! ಟ್ರಂಕಿನೊಳಗಿನ ತಗಡಿನ ಡಬ್ಬಿಯೊಳಗಿನ ಅವರ ಒಂದು ಜೊತೆ ಓಲೆ ಕಾಣೆಯಾಗಿತ್ತು. ನಿಸ್ಸಂಶಯವಾಗಿ ಈ ಬೆಕ್ಕಿನ ಕಳ್ಳಿಯಾದ ಅತ್ತೆಯೇ ಅದನ್ನು ಕದ್ದಿದ್ದಾಳೆಂದು ತೀರ್ಮಾನಕ್ಕೆ ಬಂದುಬಿಟ್ಟರು. ಸುದ್ದಿಯನ್ನು ಯಾರಿಗೂ ತಿಳಿಸದೆ ಗುಟ್ಟಾಗಿಟ್ಟುಕೊಂಡರು. ಇಡೀ ರಾತ್ರಿ ನಿದ್ದೆ ಮಾಡದೆ, ನಾಳೆ ಏನು ಮಾಡಬೇಕೆಂದು ಯೋಜನೆ ರೂಪಿಸಿದರು. ಮಾರನೇ ದಿನ ಬೆಳಿಗ್ಗೆ ಎದ್ದು ತಮ್ಮ ಕಾರ್ಯಗಳನ್ನು ಮುಗಿಸಿ ಸುಮಾರು ಹತ್ತುಹನ್ನೊಂದರ ವೇಳೆಗೆ ಹಾದ್ರಿಪುರಕ್ಕೆ ತಲುಪಿದರು. ಮನೆಯಲ್ಲಿದ್ದ ಅತ್ತೆ ಹನುಮಕ್ಕನ ಭೇಟಿಯಾದರು.

"ಏನಿದು? ಇದ್ದಕ್ಕಿದ್ದ ಹಾಗೆ ಬಂದಿದ್ದೀರಾ?' ಎಂದು ಕೇಳಿದ ಅತ್ತೆಗೆ ನಯವಾದ ಉತ್ತರ ಕೊಟ್ಟರು. ಇಲ್ಲಿಯೇ ಯಾರನ್ನೋ ನೋಡಬೇಕೆಂದು ಬಂದೆವು. ಹಾಗೆಯೇ ನಿನ್ನನ್ನು ಮಾತನಾಡಿಸೋಣವೆಂದು ಬಂದೆವು ಎಂದು ಶುರುವಿಟ್ಟುಕೊಂಡು, ಮನೆಯಲ್ಲಿ ಒಂದೇ ಒಂದು ಜೊತೆ ಓಲೆ ಇತ್ತು. ಅದು ಕಾಣೆಯಾಗಿದೆ. ನೀನು ಬಂದಿದ್ದೆ ಎಂದು ತಿಳಿಯಿತು. ಛೇ, ಛೇ, ನೀನು ಕದ್ದಿದ್ದೀಯಾ ಎಂದು ನಾವು ಹೇಳ್ತಾ ಇಲ್ಲ. ಮನೆಯ ಹಿರಿಯಳಾದ ನೀನು ನಮ್ಮನ್ನು ಪರೀಕ್ಷೆ ಮಾಡಲು ತಂದಿರಬಹುದು. ನಾವೆಷ್ಟು ಹುಷಾರಾಗಿದ್ದೇವೆಂದು ನೋಡಲು ನಿನಗಲ್ಲದೆ ಇನ್ನಾರಿಗೆ ಹಕ್ಕಿದೆ? ಅದೊಂದು ಇಂಕರ

ಚಿನ್ನ ಬಿಟ್ಟರೆ ನಮ್ಮ ಬಳಿ ಬೇರೆ ಏನಿದೆ? ದಯಮಾಡಿ ಆ ಓಲೆಗಳನ್ನು ಹಿಂದಿರುಗಿಸು' ಎಂದು ಕೇಳಿಕೊಂಡರು.

ಈ ಮಾತುಗಳಿಗೆ ಮರುಳಾಗದ ಅತ್ತೆ, 'ನನ್ನನ್ನೇನು ಕಳ್ಳಿ ಎಂದುಕೊಂಡಿದ್ದೀರಾ? ನಿಮ್ಮ ಮನೆಗೆ ಬಂದಿದ್ದೇ ತಪ್ಪಾಯಿತಲ್ಲ?' ಎಂದು ಹೊಸ ವೇಷವನ್ನೇ ಕಟ್ಟಿಬಿಟ್ಟಳಂತೆ. ಸಿಟ್ಟಿಗೇಳದೆ, ತಾಳ್ಮೆ ಕಳೆದುಕೊಳ್ಳದೆ, 'ಅಯ್ಯೋ, ಇಷ್ಟು ವರ್ಷಗಳ ಕಾಲ ಮಾಡದ ನೀನು ಈಗ ಕಳ್ಳತನ ಮಾಡುವುದೆಂದರೇನಮ್ಮಾ, ಅದು ನಿನ್ನ ಕನಸು ಮನಸಿನಲ್ಲೂ ಸಾಧ್ಯವಿಲ್ಲದ ಮಾತು. ಏನೋ ಈ ನಿನ್ನ ತಮ್ಮ ಮತ್ತು ನಾದಿನಿ ಸರೀಕರ ಎದುರಿಗೆ ಸಂಸಾರ ಮಾಡುವಾಗ ಹುಷಾರಾಗಿದ್ದಾರೇನೋ ಎಂದು ಪರೀಕ್ಷಿಸಲು ನೀನು ತಂದಿರುವೆ ಎಂದು ನಮಗೆ ಗೊತ್ತು. ಅದಕ್ಕಾಗಿ ಈ ವಿಷಯವನ್ನು ನಾವು ಯಾರಿಗೂ ತಿಳಿಸದೆ ನೇರವಾಗಿ ಬಂದಿದ್ದೇವೆ. ನೀನೇ ನಮ್ಮನ್ನು ಕಾಯಬೇಕಾದವಳು. ನೀನಲ್ಲದೆ ನಮ್ಮನ್ನು ಕಾಯುವವರು ಯಾರಮ್ಮಾ? ಮನೆಗೆ ಹಿರಿಯ ಮಗಳಾದ್ದರಿಂದ ನಿನಗಲ್ಲದೆ ಮತ್ಯಾರಿಗೆ ಇಂತಹ ಧೈರ್ಯ ಬಂದೀತು?' ಎಂದು ಹೇಳಿ, ಕೇಳಿ ಗೋಗರೆದು ಸಂಜೆಯವರೆಗೂ ಕುಳಿತಿದ್ದಕ್ಕೆ ಸಾಯಂಕಾಲದ ಹೊತ್ತಿಗೆ ಮೆಲ್ಲಗೆ ತನ್ನ ಅಡಗುದಾಣದಿಂದ ಆ ಎರಡೂ ಓಲೆಗಳನ್ನು ಕೊಟ್ಟು ಕಳಿಸಿದ್ದಳು ಅತ್ತೆ.

ಆ ಕಾಲಕ್ಕೆ ಅದು ಬಹುದೊಡ್ಡ ಒಡವೆ. ಅದು ನನ್ನ ಓದಿಗೆ ಅನೇಕ ಬಾರಿ ನೆರವಾಗಿತ್ತು. ಒಮ್ಮೆ ಅದನ್ನು ಅಡವಿಡಲು ಹೋದಾಗ ಒಬ್ಬ ನಿರಾಕರಿಸಿದ್ದ ಕಾರಣವೇನೆಂದು ಕೇಳಿದಾಗ,, 'ಅದು ಬಿಳಿ ಚಿನ್ನ (ಬೆಳ್ಳಿ ಚಿನ್ನ)' ಎಂದ. ಚಿನ್ನದ ಕೋಟಿಂಗ್ ಇರುವ ಬೆಳ್ಳಿಯೆಂತಲೂ, ಅದು ಅಪ್ಪಟ ಚಿನ್ನವಲ್ಲ ಎಂದು ನಿರಾಕರಿಸಿದ್ದ. ನನಗೆ ಆಗ ತಿಳಿಯಿತು. ನನ್ನ ತಾಯಿ ಜೀವನ ಪೂರ್ತಿ ಧರಿಸಿದ್ದ ಚಿನ್ನ ಅಪ್ಪಟ ಚಿನ್ನವಲ್ಲ ಎಂದು. ತನ್ನ ಕೊನೆಯ ಕ್ಷಣದವರೆಗೆ ಅದನ್ನು ಹೊರತುಪಡಿಸಿ ಬೇರಾವ ಚಿನ್ನವನ್ನೂ ಆಕೆ ಧರಿಸಿರಲಿಲ್ಲ. ಅಂತಹ ಚಿನ್ನ ಧರಿಸುವ ಮೋಹವೂ ನನ್ನ ತಾಯಿಗೆ ಇರಲಿಲ್ಲ.

ರಾಮೇಶ್ವರ ಹಟ್ಟಿಯಲ್ಲಿನ ನಮ್ಮ ಕುಟುಂಬದಲ್ಲಿ ಆರು ಮನೆಗಳಿದ್ದವು. ಎಲ್ಲರೂ ಸೋದರ ಸಂಬಂಧಿಗಳು. ಎಲ್ಲರಿಗೂ ಜಮೀನು ಮತ್ತು ಕಂದಾಯ ಜಮೀನಿತ್ತು. ಇದರಲ್ಲಿ ಬೈಲಪ್ಪ ಕುಟುಂಬ ತಮಗಿದ್ದ ಜಮೀನನ್ನು ಉಳಿಸಿಕೊಂಡು ಅನುಕೂಲಸ್ಥ ವ್ಯವಸಾಯಗಾರರಾಗಿದ್ದರು. ಆ ಕಾಲಕ್ಕಾಗಲೇ ಎತ್ತು ಗಾಡಿ ಇಟ್ಟುಕೊಂಡಿದ್ದ ಸ್ಥಿತಿವಂತರ ಕುಟುಂಬವಾಗಿತ್ತು. ನಾಲ್ಕು ಜನ ಗಂಡು ಮಕ್ಕಳಲ್ಲಿ ಇಬ್ಬರು ವಿದ್ಯಾಭ್ಯಾಸ ಮಾಡಿ ಬೆಂಗಳೂರಿನಲ್ಲಿ ಉದ್ಯೋಗಿಗಳಾಗಿದ್ದರು. ಹಿರಿಯರಾದ ರಾಮಯ್ಯನವರು ಕಾಫಿ ಬೋರ್ಡ್‌ನಲ್ಲಿ ಕೆಲಸದಲ್ಲಿದ್ದರೆ, ಕೊನೆಯ ತಮ್ಮ ಗೋವಿಂದರಾಜು ಬಿಇಎಲ್‌ನಲ್ಲಿ ಕೆಲಸದಲ್ಲಿದ್ದರು. ಊರಿನಲ್ಲಿಯೇ ಇದ್ದ ನಾರಾಯಣಪ್ಪ ಮತ್ತು ಮದ್ದೂರಯ್ಯ ವ್ಯವಸಾಯವನ್ನು ನೋಡಿಕೊಳ್ಳುತ್ತಿದ್ದರು.

ವ್ಯವಸಾಯದಲ್ಲಿ ಊರ ಗೌಡರಷ್ಟೆ ಬೆಳೆಯನ್ನು ಬೆಳೆಯುತ್ತಿದ್ದುದರಿಂದ ಆ ಕುಟುಂಬದವರು ತೋಟಿ ತಳವಾರಿಕೆ ಎಂದು ಬಿಟ್ಟಿ ಚಾಕರಿಯನ್ನು, ಅವಮಾನಿತ ಸಾಂಪ್ರದಾಯಿಕ ಕಸುಬನ್ನು ಬಿಟ್ಟುಬಿಟ್ಟಿದ್ದರು. ಆರು ಕುಟುಂಬಗಳಲ್ಲಿ ಮತ್ತೊಂದು

ಕುಟುಂಬವೆಂದರೆ, ಲೆಂಕಪ್ಪ ಮತ್ತು ಮದ್ದೂರಯ್ಯನವರ ಕೂಡು ಕುಟುಂಬವಾಗಿತ್ತು. ಮದ್ದೂರಯ್ಯನವರು ಎಲ್‌ಎಸ್ ಪಾಸು ಮಾಡಿಕೊಂಡು ಶಿಕ್ಷಕರ ಕೆಲಸಕ್ಕೆ ಸೇರಿದ್ದರು. ಹಿರಿಯರಾದ ಲೆಂಕಪ್ಪನವರು ವ್ಯವಸಾಯವನ್ನು ನೋಡಿಕೊಳ್ಳುತ್ತಿದ್ದರು. ಸರ್ಕಾರಿ ಉದ್ಯೋಗದಲ್ಲಿದ್ದ ಮೇಷ್ಟ್ರು ಮದ್ದೂರಯ್ಯನವರು ಅವರ ಇಡೀ ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು. ಮತ್ತೊಂದು ಕುಟುಂಬ ತಿಮ್ಮಹನುಮಯ್ಯನವರದು. ಇವರಿಗೆ ಮೂರು ಜನ ಗಂಡು ಮಕ್ಕಳು, ಒಬ್ಬಳೇ ಹೆಣ್ಣು ಮಗಳು. ನನ್ನ ತಾಯಿ ಚನ್ನಮ್ಮನ ತಂಗಿ ಚಿಕ್ಕಹನುಮಕ್ಕ, ತಿಮ್ಮಹನುಮಯ್ಯನವರ ಹೆಂಡತಿ. ಮೂರು ಜನ ಗಂಡು ಮಕ್ಕಳಲ್ಲಿ ಹನುಮಯ್ಯ, ಲೆಂಕಪ್ಪ, ಗೋವಿಂದಯ್ಯ ತಮಗಿದ್ದ ಜಮೀನಿನಲ್ಲಿಯೇ ವ್ಯವಸಾಯ ಮಾಡುತ್ತಿದ್ದರು.

ನಾಲ್ಕನೇ ಕುಟುಂಬ ಪೂಜಪ್ಪ ಮತ್ತು ಮಕ್ಕಳು. ಈ ಪೂಜಪ್ಪನವರ ಮಕ್ಕಳು ಆ ಕಾಲಕ್ಕಾಗಲೇ ಬೆಂಗಳೂರು ಸೇರಿದ್ದರು. 'ಕೆಟ್ಟು ಪಟ್ಟಣ ಸೇರು' ಎಂಬಂತೆ ತಮ್ಮ ಇಬ್ಬರು ಅಕ್ಕತಂಗಿಯರನ್ನು ಮದುವೆ ಮಾಡಿ ತಾವು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದರು. ಅಪರೂಪಕ್ಕೊಮ್ಮೆ ತಮ್ಮ ಹಳ್ಳಿಯಾದ ರಾಮೇಶ್ವರಕ್ಕೆ ಬರುತ್ತಿದ್ದರು. ಇವರು ಊರಿನ ಕುಳವಾಡಿಯಾಗಿರಲಿಲ್ಲ. ತಮ್ಮ ಜಮೀನನ್ನು ಊರಿನ ಗೌಡರಿಗೆ ಅಡಮಾನ ಮಾಡಿ ಬೆಂಗಳೂರು ಸೇರಿದ್ದರು. ಈ ಅಡಮಾನ ಮಾಡಿದ ಜಮೀನು ಎಂದೋ ಕ್ರಯವಾಗಿಬಿಟ್ಟಿತ್ತು. ಕ್ರಯವಾಗಿರುವ ಸಂಗತಿ ಇವರಿಗೆ ತಿಳಿದೇ ಇರಲಿಲ್ಲ. ಈ ಜಮೀನಿನ ಸಂಬಂಧವಾಗಿ ಆಗಾಗ ಊರಿಗೆ ಬರುತ್ತಿದ್ದರು. ಇನ್ನು ಐದನೇ ಕುಟುಂಬ ತಾತ ಕರೆಹನುಮಯ್ಯ, ಅವರ ಅಣ್ಣ ಹನುಮಂತಯ್ಯ ಉರುಫ್ ಬಕ್ಕಯ್ಯ, ನನ್ನ ತಾತನಿಗೆ ಮೂರು ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು, ಆಕೆಯ ಹೆಸರು ಹನುಮಕ್ಕ, ಬಕ್ಕಯ್ಯನಿಗೆ ಒಬ್ಬಳೆ ಮಗಳು, ಆಕೆಯ ಹೆಸರು ಬೈಲಮ್ಮ, ನಾವು ಒಂದು ಕುಟುಂಬದವರಾಗಿದ್ದೆವು.

ಊರಿನಲ್ಲಿ ತೋಟಿ-ತಳವಾರಿಕೆ ಮಾಡುವ ಕುಟುಂಬಗಳಿಗೆ ಇನಾಮತಿ ಜಮೀನನ್ನು ನೀಡಲಾಗಿರುತ್ತದೆ. ದೇವರ ಪೂಜೆ ಮಾಡುವ ಪೂಜಾರಿಗಳಂತೆ ಇನಾಮತಿ ಜಮೀನನ್ನು ತೋಟಿ ತಳವಾರರಿಗೆ ನೀಡಲಾಗಿತ್ತು. ಸುಮಾರು ಹನ್ನೆರಡು ಎಕರೆ ಜಮೀನಿನಲ್ಲಿ ಮೂರು ಗುಂಪುಗಳಿಗೆ ಹಂಚಿಕೆ ಮಾಡಿ, ಅದರಲ್ಲಿ ಪ್ರತಿಯೊಂದು ಗುಂಪಿನ ಐದಾರು ಕುಟುಂಬಗಳಿಗೆ ವಿಭಾಗ ಮಾಡಿ, ಒಬ್ಬೊಬ್ಬರಿಗೆ ಒಂದು ಎಕರೆಯಷ್ಟು ಇನಾಮತಿ ಜಮೀನು ಇತ್ತು. ಈ ಜಮೀನನ್ನು ನಾವು ಮಾನ್ಯದ ಜಮೀನೆಂದು ಕರೆಯುತ್ತಿದ್ದೆವು. ಈಗಲೂ ನಮ್ಮೂರಿನಲ್ಲಿ ಸುಮಾರು ಒಂದು ಎಕರೆ ಮಾನ್ಯದ ಜಮೀನು ನನ್ನ ವಶದಲ್ಲಿದೆ. ನೀರಾವರಿ ಸೌಲಭ್ಯವಿಲ್ಲದಿರುವುದರಿಂದ ಮಳೆ ಬಂದಾಗ ಮಾತ್ರ ಈ ಜಮೀನಿನಲ್ಲಿ ಬೆಳೆ ತೆಗೆಯುತ್ತೇವೆ.

ಆ ಕಾಲದಲ್ಲಿ ಎಲ್‌ಎಸ್ ಪಾಸು ಮಾಡಿದವರಿಗೆ ಪ್ರೈಮರಿ ಶಾಲೆಯಲ್ಲಿ ಉಪಾಧ್ಯಾಯರ ವೃತ್ತಿ ದೊರೆಯುತ್ತಿತ್ತು. ನಮ್ಮ ಸಂಬಂಧಿಕರಲ್ಲಿ ಮೂರು ಜನ ಮೇಷ್ಟ್ರುಗಳಿದ್ದರು. ನಮ್ಮ ಊರಿನ ಪಕ್ಕದ ದೊಡ್ಡಬೆಳವಂಗಲದಲ್ಲಿ ಮದ್ದೂರಯ್ಯ

ಎಂಬುವವರು ಮತ್ತು ನನ್ನ ತಾಯಿಯ ತಮ್ಮ ಹುಚ್ಚಯ್ಯ ಹಾಗೂ ನನ್ನ ಚಿಕ್ಕಪ್ಪ ಮದ್ದೂರಯ್ಯ ಈ ಉಪಾಧ್ಯಾಯ ವೃತ್ತಿಯಲ್ಲಿದ್ದರು. ಉಪಾಧ್ಯಾಯರಿಗೆ ತರಬೇತಿ ಕಡ್ಡಾಯವಾಗಿತ್ತು. ಅಂತಹ ತರಬೇತಿಯೊಂದಕ್ಕೆ ಮದ್ದೂರಯ್ಯ ಮೇಷ್ಟ್ರು ಬೆಂಗಳೂರಿಗೆ ಬಂದಿದ್ದರು. ತರಬೇತಿಯ ಸಂದರ್ಭದಲ್ಲಿ ನಮ್ಮದೇ ಜಾತಿಯ ಮಹಿಳೆ ಉಪಾಧ್ಯಾಯಿನಿಯಾಗಿದ್ದರು. ಅವರು ಕೂಡಾ ತರಬೇತಿಗೆ ಬಂದ ಸಂದರ್ಭದಲ್ಲಿ ಪರಿಚಯವಾಗಿ ಕ್ರೈಸ್ತ ಧರ್ಮದ ಪ್ರಭಾವ ಮದ್ದೂರಯ್ಯ ಮೇಷ್ಟ್ರ ಮೇಲೆ ಆಯಿತು. ಈ ಕ್ರೈಸ್ತ ಧರ್ಮದ ಪ್ರಭಾವಕ್ಕೊಳಗಾದ ಮದ್ದೂರಯ್ಯ ಮೇಷ್ಟ್ರು ತಮಗಾಗಿದ್ದ ಜಾತಿ ತಾರತಮ್ಯದಿಂದ ಬೇಸತ್ತು, ಅಸ್ಪೃಶ್ಯತೆಯಿಂದ ನೊಂದು ಮತಾಂತರ ಹೊಂದುವ ತೀರ್ಮಾನ ಕೈಗೊಂಡರು. ಮದ್ದೂರಯ್ಯ ಎಂದಿದ್ದ ತಮ್ಮ ಹೆಸರನ್ನು ಸುಂದರರಾಜ್ ಕ್ಲಮೆಂಟ್ ಎಂದು ಬದಲಾಯಿಸಿಕೊಂಡರು. ಅವರ ಆಚರಣೆಗಳಲ್ಲಿಯೂ ಬದಲಾವಣೆ ಕಂಡು ಬಂದವು. ಏಸುವಿನ ಫೋಟೋವನ್ನು ಇಟ್ಟು ಪೂಜೆ ಮಾಡಲಾರಂಭಿಸಿದರು. ಪ್ರತಿ ಭಾನುವಾರ ಹತ್ತಿರದ ದೊಡ್ಡಬಳ್ಳಾಪುರದ ಚರ್ಚ್‌ಗೆ ಹೋಗಿ ಪ್ರಾರ್ಥನೆ ಮಾಡುತ್ತಿದ್ದರು. ಪ್ರತಿ ವರ್ಷ ಕ್ರಿಸ್‌ಮಸ್ ಆಚರಣೆಯನ್ನು ಪ್ರಾರಂಭಿಸಿದ್ದರು.

ಮದ್ದೂರಯ್ಯ ಮೇಷ್ಟ್ರು ಸುಂದರರಾಜ್ ಕ್ಲಮೆಂಟ್ ಆದದ್ದು ನಮ್ಮ ಕುಟುಂಬದಲ್ಲಿ ಮೊದಲ ಕ್ರಾಂತಿಯೆಂದೆ ಹೇಳಬಹುದು. ನೆಂಟರಿಷ್ಟರೆಲ್ಲರೂ ಶಾಕ್ ಆಗಿದ್ದರು. ಆಶ್ಚರ್ಯದಿಂದ ಈ ಬದಲಾವಣೆಯನ್ನು ಗಮನಿಸುತ್ತಿದ್ದರು. ಆದರೆ ಯಾರು ಕೂಡಾ ಈ ಮತಾಂತರ ಬೇಡವೆಂದು ಹೇಳುತ್ತಿರಲಿಲ್ಲ. ಟೀಚರ್ ಟ್ರೈನಿಂಗ್ ಮುಗಿಸಿಕೊಂಡು ಊರಿಗೆ ಬಂದ ಮದ್ದೂರಯ್ಯ ಮೇಷ್ಟ್ರು ಉರುಫ್ ಸುಂದರರಾಜ್ ಕ್ಲಮೆಂಟ್ ಅವರ ಮೇಲೆ ಬಂಧುಗಳ ಒತ್ತಡ ಹೆಚ್ಚಾಗತೊಡಗಿತು. ನೀನು ಕ್ರೈಸ್ತ ಮತಕ್ಕೆ ಬದಲಾಗಿರುವುದು ನಮಗ್ಯಾರಿಗೂ ಬೇಜಾರಿಲ್ಲ, ಆದರೆ ಮದುವೆಯಾಗಲು ಮಾತ್ರ ನಮ್ಮ ಹುಡುಗಿಯನ್ನೇ ಮದುವೆಯಾಗಬೇಕು ಎಂದು ಮೇಷ್ಟ್ರು ತಾಯಿಯಾಗಿದ್ದ ಮದ್ದೂರಮ್ಮ, ಸೋದರ ಸಂಬಂಧಿಗಳೆಲ್ಲರೂ ಒತ್ತಡ ಹಾಕಿದು. ಸುಂದರರಾಜ್ ಕ್ಲಮೆಂಟ್‌ರವರು ತಮ್ಮ ಕ್ರೈಸ್ತ ಧರ್ಮದ ಸಹವಾಸ ಇಟ್ಟುಕೊಂಡೆ ತಮ್ಮ ಜಾತಿಯಲ್ಲಿ ಮದುವೆಯಾದರು. ತನ್ನ ಮಾವನ ಮಗಳಾದ ಚನ್ನಮ್ಮನನ್ನು ಮದುವೆಯಾಗಿ ರಾಮೇಶ್ವರ ಗ್ರಾಮದಲ್ಲಿ ವಾಸಿಸಲು ಆರಂಭಿಸಿದರು.

ಮದುವೆಯಾದ ಮೇಲೂ ಕೂಡಾ ತಮ್ಮ ಕ್ರೈಸ್ತ ಮತಾಚರಣೆಗೆ ತೊಂದರೆಯಾಗದಂತೆ ಪಾಲಿಸಿಕೊಂಡು ಬರುತ್ತಿದ್ದರು. ಹಿಂದೂ ದೇವರುಗಳ ಜೊತೆ ಏಸು ಕ್ರಿಸ್ತನ ಪೂಜೆ ಕೂಡಾ ನಡೆಯುತ್ತಿತ್ತು. ಆಂಜನೇಯ, ಶ್ರೀರಾಮ, ಲಕ್ಷ್ಮಿ, ಸರಸ್ವತಿಯರ ಜೊತೆ ಏಸು ಕ್ರಿಸ್ತನಿಗೂ ಈ ಕುಟುಂಬದಲ್ಲಿ ಸಮಾನ ಸ್ಥಾನಮಾನ ದೊರೆಯಿತು. ಪ್ರತಿ ಭಾನುವಾರ ತಾಲೂಕು ಕೇಂದ್ರವಾದ ದೊಡ್ಡಬಳ್ಳಾಪುರ ಪಟ್ಟಣದಲ್ಲಿರುವ ಚರ್ಚ್‌ನಲ್ಲಿ ಪ್ರಾರ್ಥನೆಗೂ ಹೋಗುತ್ತಿದ್ದರು. ಈ ಮತಾಂತರದಿಂದ ಮನೆಯಲ್ಲಿ ಕೆಲವು ಬದಲಾವಣೆಗಳಾದವು. ಮಕ್ಕಳ ಹೆಸರಿನಲ್ಲಿ ಈ ಬದಲಾವಣೆ ಎದ್ದು ಕಾಣಲಾರಂಭಿಸಿತು. ಅಣ್ಣನ ಮಕ್ಕಳು ಮತ್ತು ತನ್ನ ಮಕ್ಕಳು ಇದ್ದ ಕೂಡುಕುಟುಂಬದಲ್ಲಿ ಅಣ್ಣನ ಮಗನಾದ ವೆಂಕಟೇಶ್ ಹೆಸರು ವಿನಯರಾಜ್ ಕ್ಲಮೆಂಟ್ ಆಯಿತು. ಹೆಣ್ಣುಮಕ್ಕಳಲ್ಲಿ ಜಯಮ್ಮ

ತಂಗಿ ವಿಜಯಕುಮಾರಿ ಆದರೆ, ತನ್ನ ಮಗಳು ಪ್ರೇಮರತ್ನ ಆದಳು. ಎರಡನೆಯ ಮಗ ದೇವದಾಸ್ ಕ್ಲಮೆಂಟ್, ಮೂರನೆಯವ ರವಿಕುಮಾರ್ ಶಾಲೆಯಲ್ಲಿ ಓದಲಾರಂಭಿಸಿದರು. ಬರಬರುತ್ತಾ ತಮ್ಮ ಒಡನಾಟವೆಲ್ಲಾ ಮೂಲ ಮಾದಿಗರ ಜೊತೆ ಹೆಚ್ಚಾಗುತ್ತಾ ಹೋಗಿ ಅವರ ಕ್ರೈಸ್ತ ಸಂಬಂಧ ಕ್ಷೀಣಿಸಿತು.

ವಿನಯ್‌ರಾಜ್ ಕ್ಲಮೆಂಟ್ ಎಸ್‌ಎಸ್‌ಎಲ್‌ಸಿವರೆಗೆ ಓದಿ ನಿರುದ್ಯೋಗಿಯಾಗಿದ್ದನು. ನಾನು ನಿರುದ್ಯೋಗಿಯಾಗಲು ಕ್ರಿಶ್ಚಿಯನ್ ಆಗಿರುವುದೇ ಕಾರಣವೆಂದು ಅವನಿಗೆ ಅನಿಸತೊಡಗಿತು. ಆತ ದೊಡ್ಡ ಹೋರಾಟವನ್ನೇ ಮಾಡಿ ತನ್ನ ಹೆಸರಿನಲ್ಲಿದ್ದ ಕ್ಲಮೆಂಟ್ ಕಿತ್ತು ಹಾಕಿ ವಿನಯ್‌ರಾಜ್ ಮಾತ್ರವಾದನು. ಅದಕ್ಕೆ ಬೇಕಾದ ದಾಖಲಾತಿಗಳನ್ನೆಲ್ಲಾ ನೀಡಿ ಮರು ಮತಾಂತರವಾಗಿ ತನ್ನ ಮೂಲ ಜಾತಿಯ ಸರ್ಟಿಫಿಕೇಟ್ ಪಡೆದು ಕೆಲಸಕ್ಕೆ ಪ್ರಯತ್ನಿಸಲಾರಂಭಿಸಿದ. ಕಾಕತಾಳೀಯವೆಂಬಂತೆ ಕೆಲವೇ ದಿನಗಳಲ್ಲಿ ಬೆಂಗಳೂರಿನ ಕೃಷಿ ಕಾಲೇಜಿನಲ್ಲಿ ಡಿ ಗ್ರೂಪ್ ಹುದ್ದೆಯೊಂದು ದೊರೆಯಿತು. ಆತ ಈಗಲೂ ಬೆಂಗಳೂರಿನಲ್ಲಿ ವಾಸವಾಗಿದ್ದಾನೆ. ಮೇಷ್ಟ್ರು ಸುಂದರರಾಜ್ ಕ್ಲಮೆಂಟ್‌ರವರ ಮಗ ದೇವದಾಸ್ ಕ್ಲಮೆಂಟ್ ತನ್ನ ಹೆಸರಿನಿಂದ ಕ್ಲಮೆಂಟ್ ಎಂಬುದನ್ನು ತೆಗೆದು ಹಾಕಿದನು. ಆದರೂ ಆತನಿಗೆ ಸರ್ಕಾರಿ ಉದ್ಯೋಗವೇನೂ ಸಿಗಲಿಲ್ಲ. ಕ್ರಿಶ್ಚಿಯನ್ ಆಗಿದ್ದ ಕುಟುಂಬ ಕ್ರಮೇಣ ಮರು ಮತಾಂತರವಾದಂತೆ ಈಗ ಮಾದಿಗರಾಗಿಯೇ ಮುಂದುವರೆಯುತ್ತಿದ್ದಾರೆ. ನನಗೆ ಇದೊಂದು ಕುತೂಹಲ ಹುಟ್ಟಿಸಿದ ಘಟನೆ. ನಮ್ಮೂರಿನಲ್ಲಿ ಸಾಮಾನ್ಯ ಜನರೆಲ್ಲರೂ ಮದ್ದೂರಯ್ಯ ಮೇಷ್ಟ್ರು ಎಂತಲೇ ಕರೆಯುತ್ತಿದ್ದರು. ಇದು ವಿದ್ಯಾವಂತ ಮತ್ತು ಅವಿದ್ಯಾವಂತರು ತಮಗೆ ತಿಳಿದಂತೆ ಹೆಸರುಗಳನ್ನು ಹಿಡಿದು ಕರೆಯುತ್ತಿದ್ದ ರೀತಿಯಾಗಿತ್ತು. ಅಸ್ಪೃಶ್ಯತೆಯ ಕೂಪದಿಂದ ಹೊರಗೆ ಬರಬೇಕೆಂದು ಉದ್ದೇಶಪೂರ್ವಕವಾಗಿ ಮದ್ದೂರಯ್ಯ ಮಾಡಿದ ಪ್ರಯತ್ನ ಪರಿಶಿಷ್ಟ ಜಾತಿಗೆ ಸಿಗುವ ಮೀಸಲಾತಿಯ ಆಮಿಷದಿಂದ ಮೂಲ ಜಾತಿಯಲ್ಲಿಯೇ ಉಳಿಯುವಂತಾಯಿತು. ಇದೊಂದು ನನ್ನ ಕಣ್ಣ ಮುಂದೆ ನಡೆದ ಮರುಮತಾಂತರದ ಘಟನೆಯೆಂದು ಹೇಳಬಹುದು.

**[ಅಗ್ನಿ ಪತ್ರಿಕೆ]**

**ಹಿಂದಣ ಗಾಂಧಿ-ಮುಂದಣ ಮಂಡೇಲಾ**

**- ಡಾ. ವೆಂಕಟಗಿರಿ ದಳವಾಯಿ**

ಹಾದಿ ಒಳಗಲ ಜ್ಯೋತಿ ಬೀದಿಯೊಳಗಲ ಜ್ಯೋತಿ

ಅಂಗೈಲಿ ಉರಿವಂತ ಜ್ಯೋತಿ

ಮುಂಗೈಲಿ ಉರಿವಂತ ಜ್ಯೋತಿ

ಜ್ಯೋತಿ....

ಬುಡಕಟ್ಟಿನ ಸಾಂಸ್ಕೃತಿಕ ವೀರ ಮಂಟೆಸ್ವಾಮಿಯ ಮಹಾಕಾವ್ಯದ ಸಾಲುಗಳಿವು. ಸೃಷ್ಟಿಯ ಆರಂಭವನ್ನು ಈ ಸಾಲುಗಳು ರೂಪಕವಾಗಿ ಹೇಳುತ್ತವೆ. ಧರೆಗೆ ದೊಡ್ಡವರಾದವರ ಸಾಮಾಜಿಕ ಕಥನವಿದು. ಸುಮ್ಮನಿರದ ಈ ದೊಡ್ಡವರು ಹಾದಿ- ಬೀದಿಯಲ್ಲಿ ನಡೆದಾಡಿದ ರೀತಿ ಬೆರಗುಗೊಳಿಸುವಂತದ್ದು. ಒಮ್ಮೆ ಉರಿವ ಕೆಂಡವಾಗುವುದು, ಮತ್ತೊಮ್ಮೆ ಸಂತನಂತೆ ಬೆಳಕು ನೀಡುವುದು, ಯಾರಿಗಾಗಿ ? ಈ ಕುರಿತು ಬೆಳಕಲ್ಲಿ ನಡೆದವರೇ ನುಡಿಯಬೇಕು. ಅಂತಹ ಸಂದರ್ಭಗಳು ಕಾಲಕಾಲಕ್ಕೆ ಸಂಭವಿಸುತ್ತಲೇ ಇರುತ್ತವೆ. ಅಂತಹದ್ದೇ ಕಾಲ ಈಗ ಕೂಡಿ ಬಂದಿದೆ. ಮಂಡೇಲಾರ ಸಾವು ಮತ್ತೊಮ್ಮೆ ಪ್ರಜಾಪ್ರಭುತ್ವದ ಬಗ್ಗೆ, ಸಮಾನತೆಯ ಬಗ್ಗೆ, ಮನುಷ್ಯತ್ವದ ಬಗ್ಗೆ, ಪ್ರೀತಿ ಹುಟ್ಟಿಸುವಂತೆ ಮಾಡುತ್ತಿದೆ. ಕಳೆದುಹೋದ ಅಂತಃಶಕ್ತಿಯನ್ನು ಸೃಜಿಸಲು ಈ ಸಾವು ಬಹಳಷ್ಟು ಕಾರಣವಾಗುತ್ತದೆ. ಗಾಂಧಿ-ಅಂಬೇಡ್ಕರ್-ಅಂಗುಲಿಮಾಲನ ಸಮೀಪಕ್ಕೆ ನಾವು ಮಂಡೇಲಾರನ್ನು ತಂದು ನಿಲ್ಲಿಸುತ್ತಿರುವುದು ಚರಿತ್ರೆಯಾದರು ಎಂಬ ಕಾರಣಕ್ಕಾಗಿ ಅಲ್ಲ, ಆ ಚರಿತ್ರೆ ವರ್ತಮಾನಕ್ಕೆ ಬೆಳಕನ್ನಿತ್ತಿದೆ ಎನ್ನುವ ಕಾರಣಕ್ಕಾಗಿ !

ಮಂಡೇಲಾರವರು ಗಾಂಧಿಯನ್ನು ಒಪ್ಪಿಕೊಂಡರೆ ನಾವು ಅಂಬೇಡ್ಕರ್‌ರೊಂದಿಗೆ ಮಂಡೇಲಾರನ್ನು ಸಮೀಕರಿಸುತ್ತಿದ್ದೇವೆ ಏಕೆಂದರೆ, ಶೋಷಿತರ ಪರವಾದ ಧ್ವನಿಗಳೆಲ್ಲವೂ ಒಂದೇ ಬಣ್ಣ ಎನ್ನುವ ಹಿನ್ನೆಲೆಯಲ್ಲಿ ! ಆದರೆ ಆ ಬಣ್ಣ 'ಕಪ್ಪು' ಎನ್ನುವುದರಲ್ಲಿ ಯಾವ ಅನುಮಾನಗಳಿಲ್ಲ. ಮಂಡೇಲಾರವರು ಬದುಕನ್ನು ದೀರ್ಘಗೊಳಿಸಿಕೊಂಡಿದ್ದರ ಉದ್ದೇಶವೇ ಪರಿವರ್ತನೆಗಾಗಿ ಎನಿಸುತ್ತದೆ. ಆ ಪರಿವರ್ತನೆಯ ಹಾದಿ ದುರ್ಗಮವಾದರೂ ಮಂಡೇಲಾರವರು ಅದನ್ನು ಕಿರುಪ್ರಯಾಣವೆಂದೇ ಭಾವಿಸಿ ಗುರಿಯನ್ನು ಮುಟ್ಟಿದ್ದಾರೆ. ಪುಣ್ಯಕ್ಕೆ ಆ ದೇಶದಲ್ಲಿ ಗೋಡೆಯಂತಹವರು ಹುಟ್ಟಲಿಲ್ಲ. ಇಲ್ಲದಿದ್ದರೆ ದಕ್ಷಿಣ ಆಫ್ರಿಕಾ ಬ್ರಿಟೀಷರಿಂದ ಬಿಡುಗಡೆ ಹೊಂದಿ ೧೮ ವರ್ಷಗಳು ಕಳೆದ ನಂತರವೂ ಸಹಜ ಸಾವು ಮಂಡೇಲಾರವರಿಗೆ ಒದಗಿ ಬರುತ್ತಿರಲಿಲ್ಲ. ಆ ಕಗ್ಗತ್ತಲ ಖಂಡದಲ್ಲಿದ್ದ ಮಾನವೀಯತೆ- ಸಂಯಮ-ಸಂವಾದ ಗುಣ ಈ ನೆಲದಲ್ಲಿ ಹುಟ್ಟದೇ ಹೋಯಿತು. ಮಂಡೇಲಾರವರೇ

B03, "While Gandhi was a human without weakness, I am a man of many weaknesses" ಎಷ್ಟು ದೊಡ್ಡ ಮನುಷ್ಯ ಈ ಮಂಡೇಲಾ. ಬದುಕು,

ಆದರ್ಶ, ಅದಕ್ಕೆ ತಕ್ಕಂತಹ ಹೋರಾಟದ ಹಾದಿ, ಅಧಿಕಾರ ಇವೆಲ್ಲವನ್ನೂ ನೋಡಿದ ಮೇಲೆ ತನ್ನ ದೌರ್ಬಲ್ಯಗಳ ಬಗ್ಗೆ ಎಚ್ಚರಿಕೆಯನ್ನಿಟ್ಟುಕೊಂಡ ಕಾರಣಕ್ಕಾಗಿ ನೆಲ್ಸನ್ ಮಂಡೇಲಾ ವರ್ತಮಾನಕ್ಕೆ ಸಂಗತವಾಗುತ್ತಾರೆ.

ಮಂಡೇಲಾ ಗಾಂಧಿಯಂತೆ ಅಧಿಕಾರವನ್ನು ತ್ಯಜಿಸಲಿಲ್ಲ. ಅಂಬೇಡ್ಕರ್‌ರಂತೆ ಅಧಿಕಾರಕ್ಕೆ ಸಮೀಪಿಸಿದರು. ಅಲ್ಲೇ ಕೂಡುತ್ತಾರೆ ಬಿಡು ಎನ್ನುವುದರೊಳಗೆ ಎದ್ದು ಹೊರಟೇ ಬಿಟ್ಟರು. ಒಬ್ಬ ವ್ಯಕ್ತಿ ಮನಸ್ಸಿಗೆ ತೋಚಿದ್ದನ್ನು ಬಹುಜನರ ಹಿತಕ್ಕಾಗಿ ಬಳಸಿದ್ದು ಬಹಳ ವಿರಳ ಅಂತಹ ಅಪರೂಪದ ವ್ಯಕ್ತಿ ನೆಲ್ಸನ್ ಮಂಡೇಲಾ, ಇಲ್ಲದಿದ್ದರೆ, "When a man has done what he considers to be his duty to his people and his country he can rest in peace" ಎನ್ನುವ ಮಾತು ಅವರಿಂದ ಬರುತ್ತಿರಲಿಲ್ಲ. ಅಷ್ಟೇ ಅಲ್ಲ ಸತ್ಯ, ಅಹಿಂಸೆ, ಸೆರೆವಾಸವನ್ನು ಒಪ್ಪಿಕೊಳ್ಳುವ ಸಂದರ್ಭದಲ್ಲಿಯೂ ಯಾವ ಗೊಂದಲಗಳಿಗೂ ಒಳಗಾಗಲಾರದ್ದು, ಇಂತಹ ಮನಃಸ್ಥಿತಿಯಿಂದಲೇ ಎನಿಸುತ್ತದೆ. ಯಾಕೆಂದರೆ ಗಾಂಧಿಯನ್ನು ಇಷ್ಟಪಡುವುದು ಬೇರೆ; ಅದೇ ಆತನ ಸಂಗಾತಿಯಾಗುವುದು ಬೇರೆ. ಮಂಡೇಲಾ ಗಾಂಧಿಯನ್ನು ಬರೀ ಇಷ್ಟಪಡಲಿಲ್ಲ ಜೊತೆಗೆ ಸಂಗಡಿಗರಾದರು. ಇಲ್ಲದಿದ್ದರೆ ತನ್ನ ಸೆರೆವಾಸದ ಸಹಖೈದಿಯೊಬ್ಬ ಕೇಳಿದ ಪ್ರಶ್ನೆಯನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿರಲಿಲ್ಲ. ಸತ್ಯಾಗ್ರಹ, ಉಪವಾಸ ಕುರಿತು ತನ್ನ ಸಹಖೈದಿ ಪ್ರಶ್ನಿಸಿದ ರೀತಿಯನ್ನು ಮರೆಯದೆ ಮಂಡೇಲಾರವರು ಹೀಗೆ ದಾಖಲಿಸುತ್ತಿರಲಿಲ್ಲ. “ಮಡಿಬಾ ನನಗೆ ಆಹಾರ ಬೇಕು. ಇಷ್ಟು ವರ್ಷವು ಚಳುವಳಿಗಾಗಿ ಜೀವ ಸವೆಸಿದ್ದೇನೆ. ನಾನೇಕೆ ಉಪವಾಸ ಬೀಳಬೇಕು. ನನಗೆ ಅರ್ಥವಾಗುತ್ತಿಲ್ಲ.” ಇಂತಹ ಕಪ್ಪುಜನರ ಅನೇಕ ಪ್ರಶ್ನೆಗಳಿಗೆ ತಮ್ಮ ತೊಂಭತ್ತೈದು ವರ್ಷಗಳ ಆಯುಷ್ಯದಲ್ಲಿ ಉತ್ತರಿಸುತ್ತಲೇ ಬಂದಿದ್ದಾರೆ. ಹೀಗಾಗಿ ೨೧ನೇ ಶತಮಾನದ ಚರಿತ್ರೆಯಾಗಿದ್ದಾರೆ.

ಸುದೀರ್ಘವಾದ ಆ ಸೆರೆವಾಸ ಎಲ್ಲ ದ್ವೇಷಗಳನ್ನು, ಹಿಂಸೆಯನ್ನು ಮಾನವೀಕರಿಸಿದ್ದು ಸಾಮಾನ್ಯ ಸಂಗತಿಯಲ್ಲ. ಅಂತಹ ಸೆರೆವಾಸಗಳು ಅನೇಕ ಹೋರಾಟಗಾರರನ್ನು ಹುಚ್ಚರನ್ನಾಗಿಸಿದೆ ಇಲ್ಲವೇ ಸರ್ವಾಧಿಕಾರಿಯನ್ನಾಗಿಸಿವೆ. ಆದರೆ ಮಂಡೇಲಾರ ಪಾಲಿಗೆ ಆ ಇಪ್ಪತ್ತೇಳು ವರ್ಷ ಭ್ರಮನಿರಸನದ ಕಾಲವಾಗದೇ, ವಿಕ್ಷಿಪ್ತ ಮನಃಸ್ಥಿತಿಯ ಕಾಲವಾಗದೇ, ಮನುಷ್ಯಪರ ಹೋರಾಟಕ್ಕೆ ಸನ್ನದ್ಧಗೊಳಿಸಿದ ಕಾಲವಾದದ್ದು ಅಸಾಧಾರಣ ಸಂಗತಿಯಾಗಿದೆ. ಇದಕ್ಕೆ ಬಹುಶಃ ಕಾರಣವಾದದ್ದು ಅವರೊಳಗಿದ್ದ ಫಿಲಾಸಫರ್. ಇಂತಹ ಫಿಲಾಸಫರ್‌ನಿಂದ ಎರಡು ರೀತಿಯ ಕೆಲಸಗಳು ಸಾಧ್ಯ. ಒಂದು ಖಡ್ಗ ಹಿಡಿಯುವುದು, ಮತ್ತೊಂದು ತಂಬೂರಿ ಮೀಟುವುದು. ಆದರೆ ಇಲ್ಲಿ ಖಡ್ಗವನ್ನು ಪ್ರಯೋಗಿಸದೇ, ಶಾಂತಿ ಸಂಧಾನವನ್ನು ಆಯ್ಕೆ ಮಾಡಿಕೊಳ್ಳುವ ಮನೋಧರ್ಮ ಮಂಡೇಲಾರಿಗೆ ಕೊಟ್ಟಿದ್ದು ಅವರೊಳಗಿನ ಫಿಲಾಸಫಿ ಎನಿಸುತ್ತದೆ. ಬಾಪೂವಿನ ನಂತರದ ರಾಜಕೀಯ ಹೋರಾಟಗಳ ಸಂದರ್ಭದಲ್ಲಿ ನೆಲ್ಸನ್ ಮಂಡೇಲಾಗೆ ಮಾತ್ರ ಇಷ್ಟು ಪ್ರಾಧಾನ್ಯತೆ ಸಿಕ್ಕಿದ್ದು, ಇಂತಹ ಬೆಳಗು 'ಸಮಕಾಲೀನ ಸಂದರ್ಭದಲ್ಲಿ ಮತ್ತೆ ಕಾಣುತ್ತಿಲ್ಲ. ತನ್ನ ಜೀವಿತ ಕಾಲದಲ್ಲಿಯೇ ಮಂಡೇಲಾ ಹೇಗೆ ದಂತಕಥೆಯಾಗಿದ್ದಾರೆ ಎನ್ನುವುದನ್ನು ಈ ಅಂಕಿ ಅಂಶಗಳು ತೋರಿಸಿಕೊಡುತ್ತವೆ. ಅವರು

ಪಡೆದ ಪ್ರಶಸ್ತಿಗಳು ೧೧೧೫, ಗೌರವ ಡಾಕ್ಟರೇಟ್‌ಗಳು ೧೧೫, ಅವರ ಹೆಸರಿನ ಮೇಲೆ ಇರುವ ಶಾಲೆ ಮತ್ತು ವಿಶ್ವವಿದ್ಯಾಲಯಗಳು ೨೫, ಗೌರವ ನಾಗರೀಕ ಪೌರತ್ವಗಳು ೧೭೫, ಸ್ಟೇಡಿಯಂ ಪಾರ್ಕ್‌ಗಳು ೨೦, ವೃತ್ತಗಳು ೩೫, ರಸ್ತೆಗಳು ೮೫, ಸ್ಕಾಲರ್‌ಶಿಪ್‌ಗಳು ೨೫, ಇಷ್ಟೆಲ್ಲಾ ಗೌರವಗಳು ಒಬ್ಬ ವ್ಯಕ್ತಿಯನ್ನು ಪ್ರತಿನಿಧಿಸುತ್ತವೆ ಎಂದರೆ ಅದು ದಂತಕಥೆಯಲ್ಲದೇ ಮತ್ತೇನು ?

ದಕ್ಷಿಣ ಆಫ್ರಿಕಾವನ್ನು ಜಗತ್ತು ಬೆರಗಿನಿಂದ ನೋಡುವುದಕ್ಕೆ ಮೂರು ಕಾರಣಗಳಿವೆಯಂತೆ. ಒಂದು "೧೯೯೪ರಲ್ಲಿ ಶಾಂತಿಯುತವಾಗಿ ಆದ ಬದಲಾವಣೆ, ಎರಡು ಸತ್ಯ ಮತ್ತು ಸಾಮರಸ್ಯ ಆಯೋಗ ಕಾರ್ಯನಿರ್ವಹಿಸಿರುವುದು. ಇಲ್ಲಿ ಕೊನೆಯ ಕಾರಣ ನೆಲ್ಸನ್ ಮಂಡೇಲಾ ಎಂಬ ಜಗಮನ್ನಣೆ ಪಡೆದ ಮುತ್ಸದ್ದಿ ಈ ಭೂಮಿ ಮೇಲೆ ನಡೆದಾಡಿರುವುದು" ಇದನ್ನೇ, "ಲಾಂಗ್ ವಾಕ್ ಟು ಫ್ರೀಡಂ" ಎಂದಿರುವುದು. (ಇದು ಮಂಡೇಲಾರ ಆತ್ಮಕಥನ) ಇಲ್ಲವಾದರೆ ಮಂಡೇಲಾ ದಕ್ಷಿಣ ಆಫ್ರಿಕಾಕ್ಕೆ ಅಧ್ಯಕ್ಷರಾದ ತಕ್ಷಣ ಬಿಳಿಯರ ಮಾರಣ ಹೋಮವೇ ನಡೆಯುತ್ತಿತ್ತು. ಇಲ್ಲವೇ ಬ್ರಿಟೀಷರು ಹಾಕಿದ ಪೂರ್ವ ಷರತ್ತುಗಳನ್ನು ಒಪ್ಪಿಕೊಂಡಿದ್ದರೆ, ಸುದೀರ್ಘ ೨೭ ವರ್ಷ ಸೆರೆವಾಸ ಅನುಭವಿಸುವ ಪ್ರಮೇಯವೇ ಬರುತ್ತಿರಲಿಲ್ಲ. ಆದರೆ ತಾನು ನಂಬಿದ ಸಿದ್ಧಾಂತಗಳಿಗೆ ಬದ್ಧನಾಗಿದ್ದುಕೊಂಡೇ ದೇಶವನ್ನು, ಜನರನ್ನು, ಸ್ವಾತಂತ್ರ್ಯವನ್ನು, ಹೋರಾಟದ ಹಾದಿಯನ್ನು, ಪ್ರೀತಿಸುವುದು ಸುಲಭದ ಮಾತಲ್ಲ. ಇದನ್ನು ಅತ್ಯಂತ ಸಹಜವೆನ್ನುವಂತೆ ಮಂಡೇಲಾ ಮಾಡಿ ತೋರಿಸಿದ್ದಾರೆ. ಬ್ರಿಟೀಷರು ಹಾಕಿದ ಎಲ್ಲ ಷರತ್ತುಗಳನ್ನು ಧಿಕ್ಕರಿಸಿ, "ಸಮಾನ ರಾಜಕೀಯ ಹಕ್ಕು, ವರ್ಣಬೇಧ ನಿರ್ಮೂಲನೆ, ಬಹುಮತ ತತ್ವ"ಕ್ಕೆ ಅಂಟಿಕೊಂಡೇ ಸ್ವಾತಂತ್ರ್ಯವನ್ನು ಪಡೆದಿದ್ದಾರೆ ಮತ್ತು ಜೀವಿಸಿದ್ದಾರೆ. ಇದುವರೆಗೂ ಮಂಡೇಲಾರವರು ದಕ್ಷಿಣ ಆಫ್ರಿಕಾದ ಬಿಳಿಯರಿಗೆ 'ಕೋಟೆ'ಯಾಗಿದ್ದರು. ಅವರ ಸುರಕ್ಷತೆಯ ಹೊಣೆಗಾರಿಕೆ ಅವರದೇ ಆಗಿತ್ತು. ನೆಲ್ಸನ್ ಇಲ್ಲದ ಈ ದಕ್ಷಿಣ ಆಫ್ರಿಕಾ ಈಗ ಸಂಘರ್ಷದ ಭೀತಿಯನ್ನು ಎದುರಿಸುತ್ತಿದೆ. ಒಬ್ಬ ವ್ಯಕ್ತಿ, ಆ ವ್ಯಕ್ತಿ ನಂಬಿದ ಸಿದ್ಧಾಂತಗಳು ಎಷ್ಟು ಶಕ್ತಿಯುತವಾಗಿರುತ್ತವೆ ಎಂಬುದಕ್ಕೆ ಮಂಡೇಲಾರೇ ಸಾಕ್ಷಿ.

ಮಂಡೇಲಾಗೆ ಗಾಂಧಿ ಬಗ್ಗೆ, ಈ ದೇಶದ ಬಗ್ಗೆ ಅಪಾರವಾದ ನಂಬಿಕೆ. ಒಮ್ಮೆ ಅವರು ಹೀಗೆ ಹೇಳಿದರಂತೆ. "ಭಾರತದಂತಹ ದೇಶಕ್ಕೆ ನಾನು ಕೊಡುವ ಸಲಹೆ ಅಸಂಬದ್ಧ ಎನಿಸಿಕೊಳ್ಳುತ್ತದೆ. ಗಾಂಧಿನಾಡನ್ನು ಅದರಂತೆ ಬಿಟ್ಟುಬಿಡಿ." ನೆಲ್ಸನ್ ಮಂಡೇಲಾ ಹೇಳಿದಂತೆ ನಾವು ಬಿಟ್ಟುಬಿಡಲು ಸಾಧ್ಯವೇ ? ಏಕೆಂದರೆ, ಅದನ್ನು ಸರಿದಾರಿಗೆ ಪುನಃ ತರಲು ಗಾಂಧಿಯೂ ಇಲ್ಲ, ಆತನ ನೆರಳು ನೆಲ್ಸನ್ ಮಂಡೇಲಾನೂ ಇಲ್ಲ ! ಏಕೆಂದರೆ ಬೀದಿಯಲ್ಲಿ ಜ್ಯೋತಿ ಇದೆ ; ಅದೇ ಮನೆಯಲ್ಲಿ ? ಜಗತ್ತಿನ ಎಲ್ಲಾ ಐಕಾನುಗಳು ನಕ್ಷತ್ರ ರೂಪ ತಾಳುತ್ತಿರುವುದು ನಮ್ಮ ಕಾಲದ ದುರಂತವಾಗಿದೆ.

**ಹಣತೆಯ ಬೆಳಕಿನಿಂದ**

**ಪ್ರೊ. ಸಮತಾ ಬಿ. ದೇಶಮಾನೆ**

ಇಹಲೋಕದ ದುರ್ಭರ ಪರಿಸ್ಥಿತಿಯನ್ನು ಮರೆಯುವುದಕ್ಕೆ ಪರಲೋಕದ ಸುಖದ ಕನಸು ; ಜೀವನದಲ್ಲಿ ಎದುರಾಗುವ ಕಷ್ಟ-ಕಾರ್ಪಣ್ಯಗಳಿಗೆ ನಿಜವಾದ ಕಾರಣವನ್ನಾಗಲೀ ಪರಿಹಾರವನ್ನಾಗಲೀ ಹುಡುಕದೆ ಭ್ರಾಮಕವಾದ ಸಾಂತ್ವನ ಪಡೆಯುವ ಯತ್ನ ಮತ್ತು ಧರ್ಮ ಅವುಗಳನ್ನು ಅನಗತ್ಯಗೊಳಿಸುವ ಸಲುವಾಗಿ ಮನುಷ್ಯನ ಜೀವನವನ್ನು ದುರ್ಭರಗೊಳಿಸುವ, ಶೋಚನೀಯಗೊಳಿಸುವ ಪರಿಸ್ಥಿತಿಯನ್ನು ಅಮೂಲಾಗ್ರವಾಗಿ ಬದಲಾವಣೆ ಮಾಡುವುದಕ್ಕೆ ಹೋರಾಟ ಮಾಡಬೇಕು" ಎಂದು ಕಾರ್ಲ್‌ಮಾರ್ಕ್ಸ್ ಹೇಳಿದ್ದಾರೆ.

ಕಣ್ಣೀರು ಕೂಡ ಒಂದು ಭಾಷೆ. ಅತ್ತವರಿಗೆ ಮಾತ್ರ ಅದರ ಅರ್ಥ ತಿಳಿದಿರುತ್ತದೆ ಎಂದು ಹೇಳುವವರಿದ್ದಾರೆ. ರಾಷ್ಟ್ರೀಯ ಬಹುಜನ ಸಮಾಜದ ನಾಯಕ ರಾಷ್ಟ್ರೀಯ ಯುಗದ ಪರಿವರ್ತಕರು, ಶತಮಾನದ ಸಮಾಜ ಸುಧಾರಕರು ದಾದಾ ಸಾಹೇಬ ಅವರ ಸುಮಾರು ನಾಲ್ಕೈದು ಕೇಡರ್ ಕ್ಯಾಂಪ್‌ಗಳಿಗೆ ಹಾಜರಾಗಿ ಅವರು ವಿವರಿಸಿದ, ಶಾಹು ಮಹಾರಾಜರ ದಲಿತರ ಪರ ಇರುವ ಕಾಳಜಿ ಅಸ್ಪೃಶ್ಯರಿಗೆ ವಿದ್ಯೆ ಕಲಿಯಲು ಅವರು ಶಿಷ್ಯ ವೇತನ ಮಂಜೂರು ಮಾಡಿದ್ದು, ಫುಲೆ ದಂಪತಿಗಳ ಶೂದ್ರ-ಅತಿಶೂದ್ರ ಅತೀ ಶೂದ್ರರಲ್ಲಿ ಶಿಕ್ಷಣದ ಪ್ರಜ್ಞೆ ಮೂಡಿಸಿ ಸಮತೆಯ ಸಮಾಜ ಕಟ್ಟುವಲ್ಲಿ ಅವರು ಅನುಭವಿಸಿದ ಅವಮಾನ-ನೋವು ಸವರ್ಣೀಯರಿಂದ ಬಹಿಷ್ಕರಗೊಳಗಾದಾಗ ಕಣ್ಣೀರು ಹಾಕಿದ್ದು, ಅದರಿಂದ ಮೇಲೆದ್ದು ಸಂಘರ್ಷ ಮಾಡಿ ಇಂದು ರಾಷ್ಟ್ರವೇ ಗೌರವಿಸುವ ವ್ಯಕ್ತಿತ್ವಗಳ ಪರಿಚಯ, ಕೇರಳದ ಶ್ರೀಗುರುದೇವ ನಾರಾಯಣ ಗುರು ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು ಎಂದು ಆಧ್ಯಾತ್ಮದ ಗುರುಗಳ ಗುರುವಾಗಿ ಕರ್ನಾಟಕ ಸರ್ಕಾರವೇ ೧೮೨ನೇ ಜನ್ಮದಿನಾಚರಣೆ ಆಚರಿಸುವ ಮಟ್ಟಕ್ಕೆ ಅವರು ಮೌನಕ್ರಾಂತಿ ಮಾಡಿ ಸಮಾಜದ ಚಳುವಳಿಯ ಮೂಲಕ ಸುಧಾರಣೆಯನ್ನು ತಂದವರು.

ಅಯ್ಯನ್‌ಕಾಳಿಯವರ ಹೋರಾಟ ಶೋಷಿತರ ಪರವಾಗಿದ್ದ ವರ ವಿರುದ್ಧ ಸಂಘರ್ಷ ಜಾತಿ ವಿನಾಶಕ್ಕಾಗಿ ಅವರ ಚಳುವಳಿಗಳು, ಕೆಲವೇ ವರ್ಗಕ್ಕೆ ವಿದ್ಯೆ ಕಲಿಯುವ ಹಕ್ಕು ಇದ್ದ ಕಾಲದಲ್ಲಿ ಶೂದ್ರಾತಿ ಶೂದ್ರರಿಗೆ ಶಿಕ್ಷಣದ ಗಂಧವೇ ಇರಲಿಲ್ಲ ವೀರ ಪುಲಯಾರ ಅಯ್ಯನ್‌ಕಾಳಿರವರು ಕೇರಳದ ಶಿಕ್ಷಣದ ಪಿತಾಮಹರಾದರು.

ತಮಿಳುನಾಡಿನ ಪೆರಿಯಾರ್ ಈ ವಿ.ರಾಮಸ್ವಾಮಿ ನಾಯರ್ ಅವರ ಸ್ವಾಭಿಮಾನ ಚಳವಳಿಯ ಮಹತ್ವ, ದ್ರಾವಿಡರ ನಾಡು, ಮಾನಸಿಕ ಗುಲಾಮಿತನಕ್ಕೆ ಶಂಕರ-ಮಧ್ವ- ರಾಮಾನುಜರ ವಿಚಾರಗಳು.

ಅಶೋಕ ಚಕ್ರವರ್ತಿ, ಬಿಂದುಸಾರ, ನಳಂದ, ಮಗಧ ವಿಶ್ವವಿದ್ಯಾಲಯದ ಗುರುಕುಲ ಶಿಕ್ಷಣ ಪದ್ಧತಿಯ ಕೇಂದ್ರಗಳು - ಗುರು - ಶಿಷ್ಯರ ಕಲಿಕಾ ಸಂಪ್ರದಾಯ ನೀತಿಯ ಆಚರಣೆಗಳು, ಕರ್ನಾಟಕದ ನಾಲ್ವಡಿ ಕೃಷ್ಣರಾಜರ ಶೂದ್ರರಿಗೆ ಕೊಟ್ಟ ಮುಕ್ತ ಶಿಕ್ಷಣ, ಸಂಸ್ಕೃತ ಕಲಿಕೆ, ಉದ್ಯೋಗದಲ್ಲಿ ಮೀಸಲಾತಿ, ಕೈಗಾರಿಕೆಗಳ ಸ್ಥಾಪನೆ, ರಾಮಾಯಣದ ಗುರು ವಾಲ್ಮೀಕಿ, ಮಹಾಭಾರತದ ಶ್ರೀ ಕೃಷ್ಣ, ಸಂವಿಧಾನದ ಡಾ.ಬಿ.ಆರ್.ಅಂಬೇಡ್ಕರ್ ಅವರೆಲ್ಲರೂ ಶೂದ್ರರ ಮೇರು ವ್ಯಕ್ತಿತ್ವಗಳು.

ಧ್ಯಾನ ಹೆಚ್ಚಾದಂತೆ ಜ್ಞಾನ ಹೆಚ್ಚಾಗುವುದು, ಜ್ಞಾನ ಹೆಚ್ಚಾದಂತೆ ಮೌನ ಹೆಚ್ಚಾಗುವುದು ಅದಕ್ಕೆ ಕಾರಣ ಸತ್ಯದ ದಿಗ್ದರ್ಶನ ಬುದ್ಧ-ಭಗವಾನರು ಮಾಡಿದ ಧ್ಯಾನ ಶತಮಾನದ ಅಂಧತ್ವದಿಂದ ಸಮಾಜದಲ್ಲಿ ನೋವು ಅನುಭವಿಸುವಂತೆ ಸಾಯುವವರೆಗೆ ನರಳುವಂತೆ ಮಾಡಿದ ಪುರೋಹಿತಶಾಹಿಗಳ ಕಪಟ ಸುಳ್ಳು ಸೃಷ್ಟಿಯ ಮುಖವಾಡ ಕಳಚಿ ಬಿತ್ತು. ನೀರು, ಬೆಳಕು, ನಿಸರ್ಗ, ಸೂರ್ಯ-ಚಂದ್ರ ಯಾವುದು ಯಾರಿಗೂ ಜಾತಿ ಮಾಡುವುದಿಲ್ಲ. ಆದರೆ ಮನುಷ್ಯ ಮನುಷ್ಯನ ನಡುವೆ ಈ ತಾರತಮ್ಯ ಸಲ್ಲದು ಎಂದು ಜಗತ್ತಿಗೆ ತೋರಿಸಿಕೊಟ್ಟ ಬುದ್ಧನ ಸಿದ್ಧಾಂತಗಳು 'ಸಮತಾ' ಭಾವದಿಂದ ಕೂಡಿದ್ದವು. ಸಮಾನತೆ, ಸಮತೆ, ಸಹಬಾಳ್ವೆ, ಸೌಹಾರ್ಧತೆ, ಸಹೋದರತೆ, ಸಮ್ಮಿಲನಗಳ ವಿಚಾರಗಳು ಬೇಕಿಲ್ಲದ ಅಲ್ಪಸಂಖ್ಯಾತರ ಒಂದು ಪುಟ್ಟವರ್ಗ ಮೋಸ-ವಂಚನೆಯಿಂದ ಹೇಗೆ ಸಾಮ್ರಾಜ್ಯ ಕಸಿದುಕೊಂಡವು ಎಂದು ತಿಳಿಸಿಕೊಟ್ಟರು. ಮಹಾರಾಷ್ಟ್ರದ ದಲಿತರ ಚಳವಳಿಗಳು, ತಮಿಳುನಾಡಿನ ದ್ರಾವಿಡರ ಚಳವಳಿಗಳು ಆಂಧ್ರದ ಮಾತಂಗ ಚಳವಳಿ, ಗದ್ದಾರ್ ಚಳವಳಿ, ಪಂಜಾಬ್, ಹರಿಯಾಣದ ಚಮ್ಮಾರ ಚಳವಳಿ ಕರ್ನಾಟಕದ ಭೂ ಚಳವಳಿ ಕೇರಳದ ಶಿಕ್ಷಣ ಚಳವಳಿ ಈ ಎಲ್ಲ ಸಾಮಾಜಿಕ ಚಳುವಳಿಗಳ ಮೂಲ ಬೇಡಿಕೆಗಳು.

ಪ್ರಥಮವಾಗಿ ಅಸ್ಪೃಶ್ಯರನ್ನು ಮಾನವೀಯತೆಯಿಂದ ಕಾಣಬೇಕು. ಎಲ್ಲರಿಗೂ ಸಮಾನ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು. ಭೂಮಿ ಸಮಾನವಾಗಿ ಹಂಚಿಕೆ ಆಗಬೇಕು. ಉದ್ಯೋಗ ಅರ್ಹತೆಯ ಮೇಲೆ ಸಮಪಾಲು-ಸಮಬಾಳು ಎಲ್ಲ ಕ್ಷೇತ್ರಗಳಲ್ಲಿಯೂ ದೊರಕಬೇಕು.

ಭಾಷೆ, ಲಿಂಗ, ಜನ್ಮಸ್ಥಳಗಳ ಆಧಾರದಿಂದ ದೌರ್ಜನ್ಯಗಳು ಆಗಬಾರದು. ಶಿಕ್ಷಣ, ಆರ್ಥಿಕ, ಸಮಾಜಿಕ, ಸಾಂಸ್ಕೃತಿಕ, ತಾಂತ್ರಿಕ, ವಿಜ್ಞಾನ, ಕಲೆ, ರಾಜಕೀಯ ಅವರವರ ಜನಸಂಖ್ಯೆಗೆ ಅನುಗುಣವಾಗಿ ಸಂವಿಧಾನ ಬದ್ಧ ಅವರ ಹಕ್ಕು ಅವರಿಗೆ ಸಿಗಬೇಕು. ಅಂದಾಗ ಮಾತ್ರ ಎಲ್ಲರೂ ಸುಖದಿಂದ ಬದುಕಬಹುದು.

ಆದರೆ, ಭಾರತದಲ್ಲಿ ಹಾಗೆ ಆಗುತ್ತಿಲ್ಲ. ಅದಕ್ಕಾಗಿ ನಾವು ಯಾರ ವಿರುದ್ಧವೂ ಹೋರಾಟ ಮಾಡಿ ಯಾರಿಗೂ ನೋವು ಮಾಡಬಾರದು, ನಾವು ನ್ಯಾಯಯುತವಾಗಿ ಕಾನೂನಾತ್ಮಕವಾಗಿ ಹೋರಾಟ ಮಾಡುತ್ತಾ ಚಳವಳಿಯನ್ನು ರೂಪಿಸಿ ಅವುಗಳ ಮೂಲಕ ಪಡೆಯಬಹುದು. ಹೋರಾಟ ಸಂಘರ್ಷ, ಚಳುವಳಿ, ಸಂಘಟನೆಗಳಿಗೆ ಬಹಳ ಶಕ್ತಿಯಿದೆ.

ಅದರಿಂದ ಎಲ್ಲವು ಪಡೆಯುವುದು ತಡವಾಗಬಹುದು ಆದರೆ ಜಯ ಪಡೆದೆ ಪಡೆಯುತ್ತೇವೆ. ಹಾಗಾಗಿ, ಕರ್ನಾಟಕದಲ್ಲಿ ಪ್ರೊ.ಬಿ.ಕೃಷ್ಣಪ್ಪನವರು



ವಿದ್ಯಾವಂತರು ಕಣ್ಣೀರಿನ ಭಾಷೆಯ ಅರ್ಥಗೊತ್ತಿದ್ದವರು, ಅದೇ ಕುಟುಂಬದಿಂದ ಬಂದವರು. ಅವರು ಹಗಲು-ರಾತ್ರಿ ಬಡವರ, ದಲಿತರ, ಮಹಿಳೆಯರ, ದೌರ್ಜನ್ಯಗಳ ಕುರಿತು ಅಸಮಾನತೆಯ ವಿರುದ್ಧ ವ್ಯವಸ್ಥೆಯನ್ನು ಸಾಮಾಜಿಕ ನ್ಯಾಯ ಕೊಡಿಸುವಲ್ಲಿ ನಿಸ್ವಾರ್ಥತೆಯಿಂದ ಬಹುಜನ ಕಲ್ಯಾಣಾಭಿವೃದ್ಧಿಗೋಸ್ಕರವಾಗಿ ಹೋರಾಡುತ್ತಿದ್ದರು. ಅವರ ನಾಯಕತ್ವದಲ್ಲಿ ಸ್ಥಾಪನೆಗೊಂಡ 'ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ) ಅದರ ಮುಖೇನ ರಾಜ್ಯದ ತುಂಬ ಹಲವಾರು ಚಳುವಳಿಗಳು ಯಶಸ್ವಿಯಾಗಿವೆ. ಭೂ ಹೋರಾಟ, ಬೆತ್ತಲೆ ಸೇವೆ ಪದ್ಧತಿಯ ವಿರುದ್ಧ ಹೋರಾಟ, ಮಲ ಹೊರುವ ನೀಚ ಪದ್ಧತಿಯ ವಿರುದ್ಧ ಹೋರಾಟ, ಜೀತ ಪದ್ಧತಿಯ ವಿರುದ್ಧ ಹೋರಾಟ, ಬಾಲ್ಯ ವಿವಾಹದ ವಿರುದ್ಧ, ರೇಣುಕ-ಯಲ್ಲಮ್ಮ, ಮಾಪುರ ತಾಯಿ ಹೆಸರಿನಿಂದ 'ದೇವದಾಸಿ' ಪದ್ಧತಿ ಮೌಡ್ಯತೆಯಿಂದ ಅನಕ್ಷರಸ್ತರಿಗೆ ಆಮಿಷ ತೋರಿಸಿ, ಅಜ್ಞಾನದಲ್ಲಿರಿಸಿ ಶೋಷಣೆ ಮಾಡುವುದನ್ನ ಪ್ರೊ.ಬಿ.ಕೃಷ್ಣಪ್ಪ ಮತ್ತು ಅವರ ಬಳಗ ಚಳುವಳಿ ರೂಪಿಸಿ ಹಂತ ಹಂತವಾಗಿ ಅವುಗಳಿಂದ ವಿಮೋಚನೆ ಪಡೆಯುವಂತೆ ದ.ಸಂ.ಸ. ಮಾಡಿತು. ಈ ಹೋರಾಟದಲ್ಲಿ ಪ್ರಮಾಣಿಕರು ಸರ್ಕಾರಿ ನೌಕರಿಗೆ ರಾಜೀನಾಮೆ ಕೊಟ್ಟರು. ಮನೆ- ಮಡದಿ-ಮಕ್ಕಳಿಗೆ ಸರಿಯಾಗಿ ನ್ಯಾಯ ಒದಗಿಸದೆ ಸಮಾಜದ ಹಿತಕಾಯ್ದರು, ವರ್ಗದ ಎಲ್ಲಾ ಜನರ ಪರವಾಗಿ ಹೋರಾಟ ಮಾಡುತ್ತಿದ್ದ ದಸಂಸ ಸ್ವಲ್ಪವೇ ಸಮಯದಲ್ಲಿ ಜನಪರ ಸಮಾಜಪರ, ಬಡವರ ಪರ ಚಳುವಳಿ ಮಾಡಿ ಸರ್ಕಾರವೇ ನಡುಗುವಂತೆ ಮಾಡಿತು. ಎಲ್ಲದಕ್ಕೂ ನ್ಯಾಯಬದ್ಧ ಬೇಡಿಕೆಯ ಕರಪತ್ರ ನಾಡಿನ ಹೆಸರಾಂತ ಸಾಹಿತಿಗಳೊಂದಿಗೆ ಚರ್ಚಿಸಿ ರಚಿತವಾಗುತ್ತಿತ್ತು.

ಅಂಥ, ವಿಚಾರಗಳು ಎಲ್ಲ ಜನರಿಗೂ ತಲುಪಲಿ ಅನ್ಯಾಯಕ್ಕೊಳಗಾದವರು ತಮಗಾದ ಅನುಭವವನ್ನು ಜನರಿಗೆ ಮುಟ್ಟಿಸಲಿ, ಕಾನೂನಿನ ಅರಿವು ಮೂಡಿಸಿ ಕಂದಾಚಾರ, ಮೌಢ್ಯತೆ, ಸುಳ್ಳು ಮೂಢನಂಬಿಕೆಗಳು, ಅರ್ಥವಿಲ್ಲದ ಸಂಪ್ರದಾಯಗಳ ಆಚರಣೆಗಳು ಅಜ್ಞಾನ, ಅನಕ್ಷರತೆ, ಅಂಧಕಾರದಿಂದ ಶೋಷಿತ ವರ್ಗದವರಿಗೆ 'ಪಂಚಮ' ಪತ್ರಿಕೆ ಮುಖವಾಣಿಯಾಗಿ ೧೯೮ಳರಲ್ಲಿ ಪ್ರಾರಂಭಿಸಲಾಯಿತು. ಅದು ಪ್ರಬುದ್ಧ ಸಮಾಜ ಕಟ್ಟುವ ಪ್ರಮಾಣಿಕ ಪ್ರಯತ್ನ ಮಾಡಿತು. ಕರ್ನಾಟಕದ ತುಂಬ ಪ್ರತಿ ಗುಡಿಸಲಿನಲ್ಲಿ ಜ್ಞಾನದ ಹಣತೆ ಹಚ್ಚಿತು. 'ಪಂಚಮ' ಪತ್ರಿಕೆ, ಗುಡಿಸಲಿನಲ್ಲಿರುವ ನಿಟ್ಟುಸಿರು ಬಿಡುವವರಿಗೆ ನಿರಾಳತೆ ನೀಡಿತು. ಉಮ್ಮಳಿಸಿ ಬಿಕ್ಕುವ ಜನತೆಗೆ ಭರವಸೆ ಮೂಡಿಸಿತು. ಸ್ವಾಭಿಮಾನ, ಗೌರವ, ಹೋರಾಟ, ಜೀವನ ಪ್ರೀತಿ, ಕಲಿಸಿತು. ಪತ್ರಿಕೆ ಓದಲು ಜನರು ಕಾತರದಿಂದ ಕಾಯುತ್ತಿದ್ದರು. ತಮ್ಮಲ್ಲೇ ಚರ್ಚಿಸುತ್ತಿದ್ದರು. ಕನಸುಗಳಿರುವ ಯುವ ಶಕ್ತಿಯನ್ನು ಸಮಾಜಕ್ಕೆ ಪರಿಚಯಿಸಿತು. 'ಹೊಸ

ಬಹುಜನ ಸಮಾಜದ ನಿರ್ಮಾಣವಾಯಿತು'. ನಾಡಿನ ದಿಗ್ಗಜ ಸಾಹಿತಿಗಳು ಅರಿವಿನ ದೀಪ ಹಚ್ಚುವ ಲೇಖನ ಬರೆದು ಜ್ಞಾನದ ದಾರಿಗೆ ತಂದರು. ಜಾತಿ, ಧರ್ಮ ಮರೆತು ಪ್ರತಿ ಹೋರಾಟಕ್ಕೆ ದಸಂಸಗೆ ಕೈ ಜೋಡಿಸಿದರು.

ಪ್ರೊ.ಬಿ. ಕೆಯವರ ಹೋರಾಟದ ಕಿಚ್ಚು ಆಡಳಿತರೂಢ ಸರಕಾರದ ಕುರ್ಚಿಯೂ ಅಲ್ಲಾಡಿಸುವ ಚಳಿ ಬರಿಸುತ್ತಿತ್ತು. ಎಲ್ಲ ರಂಗದಲ್ಲಿಯೂ ಎಲ್ಲರಿಗೂ ಸಾಮಾಜಿಕ



ನ್ಯಾಯ ದೊರಕಿಸಿಕೊಡಲು ಸಾರಥಿಗಳಾಗಿ ಯುವ ನೇತಾರರ ದಂಡೇ ಅವರ ಅನುಯಾಯಿಗಳಾಗಿ ಬಿ.ಕೆ.ರವರ ನಾಯಕತ್ವ ಒಪ್ಪಿಕೊಂಡು ಜನಪರ, ಜೀವಪರ, ಹೋರಾಟವ ಮಾಡಿ ಯಶಸ್ವಿಯಾಗುತ್ತಿದ್ದವು. ಗದಗದಲ್ಲಿ ಡಾ.ಬಿ.ಆರ್.ಅಂಬೇಡ್ಕ ಜನ್ಮಾಚರಣೆಯ ಕಾರ್ಯಕ್ರಮದಲ್ಲಿ ಭಾಷಣ ಮಾಡುತ್ತಲೇ ಹೃದಯಘಾತವಾಗಿ ಕುಸಿದು ಬಿದ್ದರು. 'ಜೈ ಭೀಮ' ಎನ್ನುತ್ತಲೇ ಮಹಾಸಮಾಧಿ ಹೊಂದಿದರು. ಈ ಎಲ್ಲವನ್ನು ದಾದಾ ಸಾಹೇಬರು ಕಂಡಿದ್ದರು ಹಾಗಾಗಿ, ಅಂತ್ಯ ಸಂಸ್ಕಾರಕ್ಕೆ ಹಾಜರಾಗಿದ್ದರು. ಪ್ರೊ.ಬಿ.ಕೃಷ್ಣಪ್ಪನವರು 'ದಲಿತರ ಗುಡಿಸಲುಗಳಲ್ಲಿ ಹೋರಾಟದ ಹಣತೆಯನ್ನು ಹಚ್ಚಿದ್ದೇನೆ. ಅದು ಆರದಂತೆ ಕಾಪಾಡಿ' ಎಂದು ಹೇಳಿದರು. ಪತ್ರಿಕೆ ಕಾರಣಾಂತರಗಳಿಂದ ನಿಂತು ಹೋಯಿತು.

ಬಾಬಾ ಸಾಹೇಬ ಅಂಬೇಡ್ಕರ್ ಅವರು 'ಸಮತಾ', 'ಜನತಾ', 'ಮೂಕನಾಯಕ' ಪತ್ರಿಕೆಯ ಮೂಲಕ ದೇಶದ ತುಂಬ ತಮ್ಮ ವಿದ್ವತ್ ಪೂರ್ಣ ಬರಹದ ಅಂಕಣಗಳಿಂದ ಜಾಗೃತಿಯ 'ಭೀಮ ಜ್ಯೋತಿ' ಹಚ್ಚಿದ್ದರು ಬಾಬಾ ಸಾಹೇಬ ಮತ್ತು ದಾದಾ ಸಾಹೇಬರ ವಿಚಾರಗಳನ್ನು ಒಪ್ಪಿಕೊಂಡ ಪ್ರೊ.ಬಿ.ಕೆರವರು 'ಪಂಚಮ' ಜನಮನ ಮುಟ್ಟುವಂತೆ ಮಾಡಿದರು. ಬಹೇನ್ ಜೀ ಅವರು ಬಹುಜನ ಚಳುವಳಿ ನೇತಾರರೆಂದು ಬಿ.ಕೆ.ರವರಿಗೆ ಅತ್ಯಂತ ಗೌರವದಿಂದ ಶ್ಲಾಘಿಸುತ್ತಿದ್ದರು.

ಕರ್ನಾಟಕದ ಬಹುಜನರಿಗೆ ಮತ್ತು ಯುವಶಕ್ತಿಗೆ ನಮ್ಮ ಪ್ರಧಾನಿ, ನಮ್ಮನ್ನಾಳುವ ನಮ್ಮ ಮುಖ್ಯಮಂತ್ರಿ ಈ ಜಾಂಬವ ಖಂಡದ ಮೂಲದ ತಳಸ್ಪರ್ಶದ ವ್ಯಕ್ತಿಗಳು ಕೆಂಪು ಕೋಟೆಯಲ್ಲಿ ಸಾಮ್ರಾಟ್ ಅಶೋಕ ಚಕ್ರದ ತ್ರಿವರ್ಣಧ್ವಜ ಹಾರಿಸಲೇಬೇಕೆಂದು ಕನಸು ಕಂಡ 'ಬಾಬಾ ಸಾಹೇಬ, ದಾದಾ ಸಾಹೇಬ'ರ ಕನಸು ನನಸು ಮಾಡಲೇಬೇಕು. ಹಾಗಾಗಿ, ಕೇಡರ್ ಕ್ಯಾಂಪ್, ಬಹೇನ್ ಜೀರವರ ಭಾಷಣ ಕೇಳಿದ ನನಗೆ ಅನಿಸಿದ್ದು, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನೆಲಮೂಲದ ತಳಸ್ಪರ್ಶದ ಹೋರಾಟದ ಲೇಖನಗಳ ಅಗತ್ಯವಿದೆ ಎಂದು ಮನಗಂಡ ನಾನು ಅವುಗಳ ಹುಡುಕಾಟಕ್ಕೆ ಅಣಿಯಾದೆ.

ಸುಮಾರು ೩-೪ ವರ್ಷಗಳ ನನ್ನ ಪ್ರಯತ್ನಕ್ಕೆ ಒಂದಷ್ಟು ನಕಲು ಪ್ರತಿಗಳು ದಕ್ಕಿದವು ಅಕ್ಟೋಬರ್ ೧೯೮೪ ರಿಂದ ಜುಲೈ ೧೯೯೦ವರೆಗೆ ಸಮಾಜದ ದಿಗ್ಗಜರ ಮನೆ ಬಾಗಿಲಿಗೆ ಹೋಗಿ ಸಂಗ್ರಹಿಸಿದೆ. ಕುಂದೂರು ತಿಮ್ಮಣ್ಣನವರು ನನಗೆ ಹತ್ತಾರು ಮಾಹಿತಿಗಳು ಮತ್ತು ನಕಲು ಪ್ರತಿಯನ್ನು ಪತ್ತೆ ಮಾಡಲು ಸೂಚಿಸಿದರು. ಈ ಐದಾರು ವರ್ಷದಲ್ಲಿ ಪ್ರಕಟವಾದ ಲೇಖನಗಳು, ಕರಪತ್ರ, ಕವನಗಳು, ಅನುಭವದ ಗಣಿ, ಓದುಗರ ಪತ್ರಗಳು ಲಭ್ಯವಾಗಿವೆ ಅವುಗಳಲ್ಲಿ ನಕಲು ಮಾಡಿಸುವಾಗ ಕೆಲ ಲೇಖನಗಳು ಸ್ಪಷ್ಟವಾಗಿ ಗೋಚರಿಸುತ್ತಿರಲಿಲ್ಲ. ಅಸ್ಪಷ್ಟವಾಗಿರುವ ಲೇಖನಗಳನ್ನು ಶೀರ್ಷಿಕೆಗಳನ್ನು ಟಿಪ್ಪಣಿ ಮಾಡಿಕೊಂಡಿದ್ದೇನೆ. ಮುಂದಿನ ದಿನಗಳಲ್ಲಿ ಅವುಗಳ ಹುಡುಕಾಟ ಆರಂಭಿಸಿ ಅವುಗಳನ್ನು ಪುಸ್ತಕದ ರೂಪದಲ್ಲಿ ತರುತ್ತೇನೆಂದು ಅತ್ಯಂತ ವಿನಮ್ರತೆಯಿಂದ ಕೋರಿಕೊಳ್ಳುತ್ತೇನೆ.

೧೯೭೦ರಲ್ಲಿದ್ದ ಹೋರಾಟದ ಕಾವು, ಆ ತೀವ್ರತೆ ೨೦೧೪ರಲ್ಲಿ ಎಷ್ಟೊಂದು ಬದಲಾಗಿದೆ. ನಿತ್ಯವು ದಲಿತರಿಗೆ ಜೀವಂತ ಸುಡುತ್ತಿದ್ದಾರೆ. ಮಹಿಳೆಯರಿಗೆ



ಬೆತ್ತಲುಗೊಳಿಸುತ್ತಿದ್ದಾರೆ. ಹಾಡು ಹಗಲಿನಲ್ಲಿ ಗ್ರಾಮಗಳಲ್ಲಿ ಗುಡಿಸಲಿಗೆ ನುಗ್ಗಿ ಅತ್ಯಾಚಾರ ಎಸಗುತ್ತಿದ್ದಾರೆ. ರಾಜ್ಯದಲ್ಲಿ ದಲಿತರಲ್ಲಿ ನಿರುದ್ಯೋಗದ ಸಮಸ್ಯೆ ಹೆಚ್ಚಾಗಿದೆ. ಶಿಕ್ಷಣ ದುಡ್ಡಿದವರಿಗೆ ಎನ್ನುವಂತಾಗಿದೆ ಯುವ ಶಕ್ತಿಯು ದೇಶದ ಮಾನವ ಸಂಪತ್ತಾಗಬೇಕಾಗಿತ್ತು ಅದು ಆಗುತ್ತಿಲ್ಲ. ನಿತ್ಯ ದಲಿತರ ಸಮಸ್ಯೆ, ಭೂಮಿಗಾಗಿ ಹತ್ತಾರು ವರ್ಷ ಕೋರ್ಟ್‌ಗಳ ಅಂಗಳದಲ್ಲೇ ಜನರ ಓಡಾಟ, ಅಸ್ಪೃಶ್ಯತೆಯ ಆಚರಣೆ, ಬಡವರಗೋಳು ಕೇಳುವವರಿಲ್ಲ. ನಿಸ್ವಾರ್ಥತೆಯಿಂದ ನಿಮ್ಮ ಚಿಂತನೆ-ಸಿದ್ಧಾಂತಗಳು ಯಾವ ಆಮಿಷಗಳಿಗೂ ಒಳಗಾಗದೇ ನಾವೆಲ್ಲರೂ ನಿಮ್ಮ ದಾರಿಯಲ್ಲೇ ನಡೆಯುತ್ತೇವೆಂದು ಪ್ರೊ.ಬಿ.ಕೆ. ಅವರ ಅಗ್ನಿಸ್ಪರ್ಶ ನಡೆದ ನಂತರ ಉರಿಯುವ ಬೆಂಕಿಯ ಮುಂದೆ ಅವರಿಂದ ನಾಯಕರಾಗಿ ಬೆಳೆದವರು 'ಶಪಥ' ಮಾಡಿದರು. ಸಮಯ ಎಂಥವರನ್ನು ತನ್ನ ಗರ್ಭದಲ್ಲಿರಿಸಿಕೊಂಡು ದಿಕ್ಕು ಬದಲಾಯಿಸುತ್ತದೆ ಎನ್ನುತ್ತಾರೆ.

೨೦೧೪ರಲ್ಲಿ ನಿಸ್ವಾರ್ಥದ, ಪ್ರಮಾಣಿಕ, ಪ್ರೊ.ಬಿ.ಕೃಷ್ಣಪ್ಪನವರು ಹೋರಾಡಿ ಕಟ್ಟಿದ ಚಳವಳಿಯ ಭೀಮಜ್ಯೋತಿ ಎಲ್ಲರೂ ಒಂದಾಗಿ, ಒಗ್ಗಟ್ಟಿನಿಂದ ಮತ್ತೆ ಮುಂದುವರೆಸಲು 'ಪಂಚಮ' ಪತ್ರಿಕೆಯ ಒಂದೊಂದು ಬರಹಗಳು ಚರಿತ್ರೆಯ ಪಳಿಯುಳಿಕೆಗಳು. ಆಯಾ ಕಾಲಘಟ್ಟದ ಸಂದರ್ಭಗಳು, ಸಮಸ್ಯೆಗಳು, ಚಳುವಳಿಗಳು, ಒಗ್ಗಟ್ಟು ಪ್ರದರ್ಶಿಸಿದ ಬಗೆ, ನಾಯಕನ ಬಗ್ಗೆ ಇದ್ದ ಅಚಲವಾದ ನಂಬಿಕೆಗಳು ಎಲ್ಲರು ನಮ್ಮವರು. ನಮ್ಮ ಕುಟುಂಬದ ಸದಸ್ಯರು, ನಮ್ಮ ರಕ್ತ ಸಂಬಂಧಿಗಳು ಎಂದು ಮುಂದೆ ಹೆಜ್ಜೆ ಇಡಬೇಕಾಗಿದೆ.

ಇಂದಿನ ಯುವಶಕ್ತಿಗೆ ಅರ್ಥಪೂರ್ಣ ಮತ್ತು ಸ್ವಾಭಿಮಾನಿಗಳಾಗಿ ಹೋರಾಟದ ಕಿಚ್ಚು ಮತ್ತೆ ಕೆಂಡವಾಗಲಿ, ಅಂಥ ಹೋರಾಟದ ಲೇಖನಗಳು ಓದಿದ ಓದುಗರಲ್ಲಿ ತಮ್ಮ ಹಿರಿಕರ ಸಂಘರ್ಷ ಬದುಕು ಮಾದರಿ ಆಗಲಿ ಚಳುವಳಿಯ ಶಕ್ತಿ ಯಾವತ್ತು ಕುಂದಬಾರದು ಸೂರ್ಯನಂತೆ ಪ್ರಜ್ವಲಿಸಲೆಂದು ಬಯಸಿ ಈ ಪುಟ್ಟು ಸಂಪುಟಗಳು ತಮ್ಮ ಕೈಗೆ ಗೌರವದಿಂದ ಸಮರ್ಪಿಸುತ್ತಿದ್ದೇವೆ.

ಮುಗಿಲೆತ್ತರಕ್ಕೆ ಮೊಳಗಲಿ ಭೀಮವಾಣಿ ಪ್ರಜ್ಞೆ, ಸಮತೆ, ಕರುಣೆ ಪ್ರಬುದ್ಧತೆಯೆಡೆಗೆ ನಡೆಯಲಿ ಸಂವಿಧಾನವೇ ಜಗದ ಶ್ರೇಷ್ಠತೆ ಅಖಂಡತೆಯ ತಾಯಿ ದ್ರಾವಿಡ ಸಂಸ್ಕೃತಿ, ಬೌದ್ಧಯಾನ ನಾಗರಿಕತೆಯ ಭದ್ರಬುನಾದಿಯಾಗಲಿ ನಮ್ಮೆಲ್ಲರ ನಡಿಗೆ ಬುದ್ಧ-ಭೀಮ- ಬಾಬೂಜಿ-ಕುವೆಂಪುರವರ ಚಿಂತನೆಯೆಡೆಗೆ..

**['ಪಂಚಮ' ಪತ್ರಿಕೆಯಿಂದ]**

**ಪರಂಪರೆ ಮತ್ತು ಹೊಲೆಮಾವಿಗರ ಹಾಡು**

**ಡಾ. ಚಿ. ಗಂಗಾಧರ**

ಹೊಲೆಮಾದಿಗರ ಹಾಡು ಎಪ್ಪತ್ತರ ದಶಕದಲ್ಲಿ ಕನ್ನಡ ಕಾವ್ಯಕ್ಕೆ ಹೊಸ ಚೇತನವನ್ನು ತುಂಬಿ ಕಾವ್ಯ ಸಂಭ್ರಮಕ್ಕೆ ಸಾಕ್ಷಿಯಾಯಿತು. ಈ ಸಂಭ್ರಮವಾದರೂ ಎಂಥದು! ಅದರ ಸ್ವರೂಪವೇನು? ಎಂಬುದು ವಿಸ್ಮಯದ ಸಂಗತಿ! ಕನ್ನಡ ಕಾವ್ಯ ಸಂದರ್ಭ ಎಂದೂ ಮನ್ನಿಸದ, ಪರಿಗಣಿಸದ, ಆತ್ಮ ಸಂವೇದನೆ, ಜೀವ ಇರಬಹುದೆಂದೂ ಭಾವಿಸದ ಲೋಕವೊಂದರ ಇರುವಿಕೆಯ ಕುರುಹುಗಳನ್ನು, ಆ ಲೋಕದ ಭಾಗವೇ ತಾನೆಂಬುದನ್ನೂ ಕನ್ನಡ ಜಗತ್ತಿಗೆ ಮನವರಿಕೆ ಮಾಡಿಕೊಡುವ 'ಹೊಲೆಮಾದಿಗರ ಹಾಡು' ಕೃತಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸಂಚಲನವನ್ನು ಉಂಟುಮಾಡಿತು. ಕಾವ್ಯಾಭಿವ್ಯಕ್ತಿಯ ಹೊಸ ಬಗೆಯನ್ನು ಅನೇಕರಿಗೆ ಜೀರ್ಣಿಸಿಕೊಳ್ಳಲಾಗಲಿಲ್ಲವೆನ್ನುವುದೂ ಈ ಕಾವ್ಯಾಭಿವ್ಯಕ್ತಿಯ ವಿಶಿಷ್ಟತೆಯೆಂದೇ ಹೇಳಬಹುದು!

ಹೊಸ ಕಾವ್ಯವನ್ನು ತುಂಬು ಪ್ರೀತಿಯಿಂದ ಸ್ವಾಗತಿಸಿದ ಮನಸ್ಸುಗಳು ಹಲವಾದರೆ, ಕಾವ್ಯದ ಸಿದ್ಧ ಸೂತ್ರಗಳ ಪಾಠಗಳಿಂದ ಮಡಿಯಾದ ಮನಸ್ಸುಗಳಿಗೆ, ಕಾವ್ಯದ ವಸ್ತು ಭಾಷೆಗಳನ್ನು ಪ್ರವೇಶಿಸಲಾಗಿದೆ. ಸಾಮಾಜಿಕ ವಾಸ್ತವವನ್ನು ಒಪ್ಪಲೂ ಆಗದೆ ಕಿರಿಕಿರಿಗೆ ಒಳಗಾಗಿ, ಕಾವ್ಯದ ಧೋರಣೆಯನ್ನು, ಸಾಮಾಜಿಕ ಅಸಮಾನತೆಯನ್ನು ಸಹೃದಯರಿಗೆ ಸುಲಭಗ್ರಾಹ್ಯವಾಗುವಂತೆ ನಿರೂಪಿಸುವ ಬಗೆಯನ್ನು ದೋಷವೆನ್ನುವಂತೆ ಬಿಂಬಿಸಲು ಪ್ರಯತ್ನಿಸಿದ್ದೂ ಆಯಿತು.

ಈ ಎಲ್ಲದರ ಮಧ್ಯೆ ಕಾವ್ಯದ ವಿಸ್ತರಣೆ ಸಹೃದಯನನ್ನು ನೆಚ್ಚಿಕೊಂಡಿರುವುದರಿಂದ, ಕರ್ನಾಟಕದ ಜನಮಾನಸವನ್ನು ಸೆಳೆಯಿತು. ಅನೇಕರಿಗೆ ಸ್ಫೂರ್ತಿಯಾಯಿತು. ಅಧೋಲೋಕದ, ಕತ್ತಲನಾಡಿನ

ಸಂವೇದನೆಗಳು ಹಲವರನ್ನು ಅಭಿವ್ಯಕ್ತಿಗಾಗಿ ಬಳಸಿಕೊಂಡವು. ನೂರಾರು ಕವಿಗಳು ತಮ್ಮ ಅನುಭವಗಳೊಂದಿಗೆ ಕನ್ನಡ ಕಾವ್ಯಲೋಕವನ್ನು ಪ್ರವೇಶಿಸಿದರು. ಶತಮಾನಗಳಿಂದ ಅಭಿವ್ಯಕ್ತಿಗಾಗಿ ಕಾದು ಕುಳಿತಿದ್ದ ಕನ್ನಡದ ಕತ್ತಲಲೋಕ ಸಿದ್ಧಲಿಂಗಯ್ಯನವರ ಮೂಲಕ ಅಭಿವ್ಯಕ್ತಿಯ ಸಾಧ್ಯತೆಗಳನ್ನು ಕಂಡುಕೊಂಡಿತು.

ನಿಂತ ನೀರಾಗಿ ಕೊಳೆತು ನಾರುವ ಸ್ಥಿತಿ ತಲುಪುತ್ತಿದ್ದ ಕನ್ನಡ ಕಾವ್ಯಕ್ಕೆ ದಲಿತ ಸಂವೇದನೆ ಹೊಸ ಚೇತನವಾಗಿ ದಕ್ಕಿತು. ಕಾವ್ಯಾಭಿವ್ಯಕ್ತಿಯ ನೆಲೆಯಲ್ಲಿ ಸಾಧ್ಯವಾಗಿದ್ದ ಸ್ವಾಭಿಮಾನ, ಕೀಳರಿಮೆಗಳ ಸಂಕೋಲೆಗಳನ್ನು ಕಡಿದು ಎಸೆಯುವ ಮೂಲಕ ಬಡವನ ಬದುಕು ಬಡವನ ಪಾಲಿಗೆ ಅಪಮಾನಕರವಲ್ಲ. ಬಡತನದ ಸ್ಥಿತಿಗೆ ಕಾರಣವಾದ ಸಾಮಾಜಿಕ ಸಂದರ್ಭ ಅಪಮಾನದಿಂದ ತಲೆತಗ್ಗಿಸಬೇಕು ಎನ್ನುವ ಎಚ್ಚರವನ್ನು ವಿಸ್ತರಿಸಿತು.



ಸಾಮಾಜಿಕವಾಗಿ ಮಹತ್ತರವಾದ ಬದಲಾವಣೆಗಳಿಗೆ ಪ್ರೇರಣೆಯನ್ನು ನೀಡಿದ ಹೊಲೆಮಾದಿಗರ ಹಾಡುವಿನಿಂದ ಮೊದಲಾದ ದಲಿತ ಸಂವೇದನೆಯ ಸ್ವರೂಪವನ್ನು ಕಾವ್ಯದ ಸಾಮಾಜಿಕ ಪರಿಣಾಮಗಳ ಹೊರತಾಗಿಯೂ ಸಾಹಿತ್ಯಾಸಕ್ತ ನೆಲೆಯಲ್ಲಿ ಮೌಲ್ಯಮಾಪನ ಮಾಡುವ ಕೈಂಕರ್ಯವನ್ನು, ಈ ಕೈಂಕರ್ಯಕ್ಕಾಗಿ ಸ್ವಯಂ ನೇಮಕಗೊಂಡಿದ್ದ ಸಾಹಿತ್ಯ ಮೀಮಾಂಸಕರು ನಿರ್ವಹಿಸಿದರು. ಕಾವ್ಯದ ರಸಾನುಭವಿ ನೆಲೆಯ ಸಾಧ್ಯತೆಗಳನ್ನು ಪ್ರಧಾನವಾಗಿ ಪರಿಭಾವಿಸಿ!? ದಲಿತ ಕಾವ್ಯದ ಪಂಕ್ತಿಗಳಲ್ಲಿ ಘೋಷಣೆಗಳನ್ನು ಕಂಡರು ಮತ್ತು ಈ ತಮ್ಮ ಅನ್ವೇಷಣೆಯನ್ನು ಅಧಿಕೃತವಾಗಿ ದಾಖಲಿಸುವ ಮೂಲಕ ದಲಿತ ಕಾವ್ಯಕ್ಕೆ ಸಂಬಂಧಿಸಿ ಶಾಸನವನ್ನು ರೂಪಿಸಿದ ಸಂಭ್ರಮವನ್ನು ಅನುಭವಿಸಿದರು.

ಸ್ವಂತಿಕೆ, ಸ್ವಾಭಿಮಾನಗಳು ಮರೀಚಿಕೆಯಾಗಿರುವ ಸಾಹಿತ್ಯ ಲೋಕದಲ್ಲಿ, ಸಾಹಿತ್ಯ ವಿಮರ್ಶೆ ಎಂಬುದು ಕೆಲವು ಬುದ್ಧಿವಂತರ ಸೊತ್ತಾಗಿರುವುದು ಸುಳ್ಳಲ್ಲ. ಸೃಜನಶೀಲ ಪ್ರತಿಭೆಗಳು ಸಹ ಈ ವಿಮರ್ಶಕರ ಮರ್ಜಿಗೆ ಬಾಯ್ದಿಡುವುದು ಹೊಸದೇನಲ್ಲ. ಇವರು ಹೊರಡಿಸುವ ಫರ್ಮಾನುಗಳು ಒಂದು ಸೃಜನಶೀಲ ಪ್ರತಿಭೆಯ ಭವಿಷ್ಯವನ್ನು ನಿರ್ಧರಿಸುವುದು ದುರಂತವೇ ಸರಿ! ದಲಿತ ಕಾವ್ಯದ ಬಗೆಗೆ ಇವರು ಪ್ರತಿಪಾದಿಸಿದ ಅನ್ವೇಷಣೆಯು ಅನೇಕರಿಗೆ ಬಾಯಿಪಾಠವಾಯಿತು. ಸ್ವಾನುಭವವನ್ನು ನೆಚ್ಚಿಕೊಳ್ಳದ ಜನ, ತಮ್ಮ ಬೌದ್ಧಿಕ ಗುಲಾಮಗಿರಿಯನ್ನು ಪರಿಣಾಮಕಾರಿಯಾಗಿ ಪಾಲಿಸಿದರು. ಕತ್ತಲಲೋಕಕ್ಕೆ ತನ್ನ ಅಭಿವ್ಯಕ್ತಿಯನ್ನು ಸಮರ್ಥಿಸಿಕೊಳ್ಳಬೇಕಾದ, ತನ್ನ ಕಾವ್ಯಾಭಿವ್ಯಕ್ತಿಯ ವಿಶಿಷ್ಟತೆಯನ್ನು, ಸಾರ್ಥಕತೆಯನ್ನು ಲೋಕಕ್ಕೆ ಮನವರಿಕೆ ಮಾಡಿಕೊಡಬೇಕಾದ ಅನಿವಾರ್ಯತೆಯು ಒದಗಿ ಬಂದಿತು. ಸೃಜನಶೀಲ ಅಭಿವ್ಯಕ್ತಿಯಲ್ಲಿ ಮುಖ್ಯವಾಗಿದ್ದ ಸ್ವಾಭಿಮಾನವು, ತನ್ನ ಅನುಭವ

ಲೋಕದ ವೈಶಿಷ್ಟ್ಯ ತನ್ನ ಕಾವ್ಯದ ಅನನ್ಯತೆ ಎಂಬುದನ್ನು ಪ್ರತಿಪಾದಿಸುವಲ್ಲಿ ತನ್ಮೂಲಕ ದಲಿತ ಕಾವ್ಯವನ್ನು ಗ್ರಹಿಸಲು ಬೇಕಾದ ಸಿದ್ಧತೆಗಳನ್ನು ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಯಿತು.

ದಲಿತ ಕಾವ್ಯದ ವಿಮರ್ಶೆಗೆ ಬೇಕಾದ ಪರಿಕರಗಳನ್ನು ಗ್ರಹಿಸುವುದು ಕನ್ನಡ ವಿಮರ್ಶಾ ಸಂದರ್ಭಕ್ಕೆ ನಿಜವಾಗಿಯೂ ಅಸಾಧ್ಯವಾಗಿತ್ತೆ? ಎಂದು ಪರಿಶೀಲಿಸುವುದು ಕನ್ನಡ ವಿಮರ್ಶಾ ಸಂದರ್ಭವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಬಹುದೆಂಬ ಕಾರಣಕ್ಕೆ ಮುಖ್ಯವಾಗುತ್ತದೆ. ದಲಿತ ಕಾವ್ಯಕ್ಕೆ ನಾಂದಿಯನ್ನು ಹಾಡಿದ ಸಿದ್ದಲಿಂಗಯ್ಯನವರು ಕನ್ನಡ ಸಾಹಿತ್ಯದ ವಿದ್ಯಾರ್ಥಿ, ಕನ್ನಡ ಕಾವ್ಯದ ಗತಿ, ಛಂದಸ್ಸು, ವಸ್ತು ಮೊದಲಾದ ಎಲ್ಲ ಸಂಗತಿಗಳ ಬಗೆಗೂ ಶಾಸ್ತ್ರೀಯವಾಗಿ ತರಬೇತಿಯನ್ನು ಪಡೆದವರು. ತಮ್ಮ ಈ ತಿಳುವಳಿಕೆಯನ್ನು ಕೇವಲ ಅನುಕರಣೆಗೆ ಬಳಸದೆ ವಿಶಿಷ್ಟ ಸಾಂಸ್ಕೃತಿಕ ಅನುಭವವೊಂದರ ಅಭಿವ್ಯಕ್ತಿಗೆ ಒಗ್ಗುವ ಹಾಗೆ ಕಾವ್ಯ ಪರಿಕರಗಳನ್ನು ಮಾರ್ಪಡಿಸಿಕೊಳ್ಳಲು ಬಳಸಿಕೊಂಡರು. ಅನನ್ಯವಾದ ಸಂಸ್ಕೃತಿಯೊಂದರ ಅಭಿವ್ಯಕ್ತಿ ಅನನ್ಯವಾದ ಬಗೆಯಲ್ಲೇ ಸಾಧ್ಯವಾಯಿತು. ಆದರೆ ಅಭಿವ್ಯಕ್ತಿಗೆ ಪೂರಕವಾಗಿ ಬಳಸಿದ್ದ ಕಾವ್ಯ ಪರಿಕರಗಳೆಲ್ಲವು ಶತಮಾನಗಳಿಂದ ಕನ್ನಡ ಕಾವ್ಯ ಬಳಸಿಕೊಂಡಿದ್ದಂಥವೇ, ಆದರೆ ಈ ಪರಿಕರಗಳನ್ನು ಸಂವೇದನೆಗೆ ಪೂರಕವಾಗಿ ಬಳಸಲಾಗಿತ್ತು. ಹೆಣ್ಣುಮಕ್ಕಳು ಅಡಿಗೆ ಮನೆಯ ಆಹಾರ ಸಾಮಗ್ರಿಗಳನ್ನು



ವಿವಿಧ ಪ್ರಮಾಣ ಮತ್ತು ಸಂಯೋಜನೆಗಳಲ್ಲಿ ಬಳಸಿ ವಿವಿಧ ರುಚಿಯ ಆಹಾರ ಪದಾರ್ಥಗಳನ್ನು ಸಿದ್ಧಗೊಳಿಸುವ ಹಾಗೆ! ನಮ್ಮ ಕನ್ನಡದ ವಿಮರ್ಶಕರು ಇದನ್ನು ಅರಿಯದ ಮುಗ್ಧರೆಂಬುದನ್ನು ಒಪ್ಪಲು ಆಗುವುದಿಲ್ಲ!

ದಲಿತ ಕಾವ್ಯವನ್ನು ಕುರಿತ ವಿಮರ್ಶೆಯು ಪೂರ್ವಾಗ್ರಹ ಪೀಡಿತವೇ? ಈ ಪೂರ್ವಾಗ್ರಹಗಳು ಯಾವುವು? ದಲಿತ ಸಂವೇದನೆಯನ್ನು ಒಪ್ಪಲಾಗದ ಮಾನಸಿಕ ಜಡತೆಯೇ? ಮಾನಸಿಕ ಮಡಿವಂತಿಕೆಯೆ ? ರಸಾನುಭವದ ಸ್ವರೂಪದ ಬಗೆಗಿನ ಸಿದ್ಧ ತಿಳುವಳಿಕೆಯೆ? ದಲಿತ ಲೋಕದ ನೋವು-ಸಂಕಟಗಳ ಅಭಿವ್ಯಕ್ತ ವರ್ಣಾಶ್ರಮ ವ್ಯವಸ್ಥೆಯನ್ನು ಬೆತ್ತಲು ಮಾಡಿದ ಕಾರಣಕ್ಕಾಗಿ ಉಂಟಾದ ಆತಂಕವೇ? ಸಮಾಜದ ಎಲ್ಲ ಆಗುಹೋಗುಗಳಿಗೂ ತಾವೇ ಕಾರಣವೆಂಬ ಅನಾದಿ ಭಾವದಿಂದಾಗಿ ಎದುರಾದ ಅಪಮಾನದ ಭಾವವೇ? ದಲಿತ ಕಾವ್ಯ ಸಾಹಿತ್ಯ ಮೀಮಾಂಸಕರು ಅಥವಾ ವಿಮರ್ಶಕರೆಂಬ ಮಧ್ಯವರ್ತಿಗಳನ್ನು ನಿರಾಕರಿಸಿ ನೇರವಾಗಿ ಸಹೃದಯನ ಜೊತೆಯಲ್ಲಿ ಸಂವಹನವನ್ನು ಏರ್ಪಡಿಸಿಕೊಂಡು ಮಧ್ಯವರ್ತಿಗಳನ್ನು ಅಪ್ರಸ್ತುತಗೊಳಿಸಿದ ಬಗೆಗಿನ ಅಸಹನೆಯೇ?

ಮೊದಲಿಗೆ ಮೇಲುವರ್ಗದ ವಿಮರ್ಶಕರಿಂದ ಹೊರಟ ದಲಿತ ಕಾವ್ಯದ ಬಗೆಗಿನ ನೇತ್ಯಾತ್ಮಕ ಮಾತುಗಳು ಆನಂತರದ ದಿನಗಳಲ್ಲಿ ಕೆಲವು ದಲಿತರಿಂದಲೂ ಪುನರಾವರ್ತನೆಯಾದುದು ನಿಜ! ಇದಕ್ಕೆ ಬೌದ್ಧಿಕ

ದಿವಾಳಿತನದೊಂದಿಗೆ ವೈಯಕ್ತಿಕ ಒತ್ತಡಗಳು ಕಾರಣವಿರಬಹುದು. ದಲಿತಕಾವ್ಯದ ವಿಮರ್ಶೆಯ ಸಂದರ್ಭದಲ್ಲಿ ಸಾಹಿತ್ಯಕ ಅಂಶಗಳಿಗಿಂತ ಹೆಚ್ಚಾಗಿ ಸಾಹಿತ್ಯೇತರ ಸಂಗತಿಗಳು ಪ್ರಧಾನವಾಗಿರುವಂತೆ ಕಂಡುಬರುತ್ತದೆ.

ಕಾವ್ಯ ಬಹುಜನರಿಗೆ ದೂರವಾಗುವ ಮೂಲಕ ಕೆಲವರಿಗಷ್ಟೇ ಹತ್ತಿರವಾಗುತ್ತಾ ಶ್ರೇಷ್ಠತೆಯ, ಭ್ರಮೆಗಳನ್ನು ವಿಸ್ತರಿಸಿ ಸಾರ್ಥಕವಾಗುವ ಹಾಗೂ ಮಾನ್ಯತೆ ಪಡೆಯುವ ಸಾಹಿತ್ಯ ಪರಂಪರೆಗೆ, ಜನ ವಿದೂರವಾಗುವುದನ್ನು ಪ್ರತಿಪಾದಿಸುವ, ಮತ್ತು ಎತ್ತಿಹಿಡಿಯುವ ಪುರೋಹಿತಶಾಹಿ ಮನೋಧರ್ಮಕ್ಕೆ, ದಲಿತ ಸಂವೇದನೆ ಸೆಡ್ಡು ಹೊಡೆದದ್ದು, ಸಾರ್ವತ್ರಿಕವಾದದ್ದು ೨೦ನೇ ಶತಮಾನದ ಪವಾಡ! ಸಾಮಾಜಿಕ ಸಂದರ್ಭದಲ್ಲಿ ಗೋಡೆಗಳನ್ನು ನಿರ್ಮಿಸಿದ್ದ ಪುರೋಹಿತಶಾಹಿ ಶ್ರೇಷ್ಠತೆಯ ವ್ಯಸನವಾಗಿ, ಗೂಢತೆಯೆ ಹಿರಿಮೆಯಾಗಿ ಸಾಹಿತ್ಯ ಲೋಕದಲ್ಲಿ ಸಜೀವವಾಗಿದ್ದಿತ್ತು. ಯಾವ ಪಠ್ಯ ಗ್ರಹಿಕೆ ಸುಲಭವಾಗಿ ದಕ್ಕುವುದಿಲ್ಲವೋ, ಕೆಲವರಿಗೆ ಮಾತ್ರ ಗ್ರಹಿಸಲು ಸಾಧ್ಯವಾಗುವ ಮೂಲಕ ಬುದ್ಧಿವಂತಿಕೆಯ ಮಾನದಂಡವಾಗಿ ಪರಿಣಮಿಸುತ್ತಿತ್ತೋ ಅಂತಹ ಸಂದರ್ಭವನ್ನು ನಿರಾಕರಿಸುವಲ್ಲಿ ಸಿದ್ಧಲಿಂಗಯ್ಯನವರ ಹೊಲೆಮಾದಿಗರ ಹಾಡು ಯಶಸ್ಸನ್ನು ಪಡೆಯಿತು. ಸಾಹಿತ್ಯಲೋಕದಲ್ಲಿ ಅಮೂರ್ತವಾಗಿ ವ್ಯಾಪಿಸಿದ್ದ ಪುರೋಹಿತಶಾಹಿಯನ್ನು ತೊಡೆದು ಅಪ್ರಸ್ತುತಗೊಳಿಸಿತು.

ಸಂವಹನದ ಸಾಧ್ಯತೆಗಳ ವಿಸ್ತರಣೆಯಲ್ಲಿ ಹೊಲೆಮಾದಿಗರ ಹಾಡು ತೋರಿದ ಹಾದಿ, ಕಾವ್ಯವನ್ನು ಮತ್ತೆ ಶ್ರೀಸಾಮಾನ್ಯನ ಬಳಿಗೆ ತೆಗೆದುಕೊಂಡು ಹೋಯಿತು. ಜನಪದಕಾವ್ಯಕ್ಕೆ ಮಾತ್ರ ದಕ್ಕಿದ್ದ ಶ್ರೀಸಾಮಾನ್ಯ ಆಧುನಿಕ ಕವಿತೆಗೂ ದಕ್ಕಲು ಸಾಧ್ಯವಾದದ್ದು ಸಿದ್ಧಲಿಂಗಯ್ಯನವರ ಹಿರಿಮೆ ಎಂದೇ ಹೇಳಬಹುದು. 'ಹೊಲೆಮಾದಿಗರ ಹಾಡು'



ಇಪ್ಪತ್ತನೇ ಶತಮಾನದ ಜನಪದ ಕಾವ್ಯ ಎನ್ನುವಂತಿದೆ. (ದೇವನೂರು ಮಹಾದೇವ: ಪುಟ ೨೭, ಹೊಲೆಮಾದಿಗರ ಹಾಡು, ೧೯೭೫)

ಜನಪರವಾದ ಕಾವ್ಯ ಜನರಿಗೆ ತಲುಪಬೇಕಾದ್ದು ಅನಿವಾರ್ಯ, ಈ ಅನಿವಾರ್ಯತೆಯನ್ನು ಸಿದ್ಧಲಿಂಗಯ್ಯನವರು ಯಶಸ್ವಿಯಾಗಿ ಸಾಧಿಸುವ ಮೂಲಕ ಕಾವ್ಯದ ಸಂವಹನದ ಸಾಧ್ಯತೆಯೂ ಕಾವ್ಯದ ಗುಣವಾಗಬಹುದಾದುದನ್ನು ಸಾಹಿತ್ಯ ವಲಯಕ್ಕೆ ಪರಿಚಯಿಸಿದರು. ಆದ್ದರಿಂದಲೇ ಅವರ ಕಾವ್ಯದ ಸಾಮಾಜಿಕ ಕಳಕಳಿ ಸಂಬಂಧಿಸಿದ ಜನಸಮುದಾಯಗಳಿಗೆ ತಲುಪಲು ಸಾಧ್ಯವಾಯಿತು. ಅವರ ಕಾವ್ಯ ಒಳಗೊಂಡಿದ್ದ ಲೋಕಕ್ಕೆ ಅವರ ಕಾವ್ಯ ಸ್ವಕೀಯವಾಗುವಲ್ಲಿ, ಪರಿಚಿತವಾಗುವಲ್ಲಿ ಸಂವಹನ ಸಾಧ್ಯತೆಯು ಮಹತ್ವವಾದುದಾಗಿದೆ. ಆದ್ದರಿಂದಲೇ ಶ್ರೀಸಾಮಾನ್ಯನನ್ನು ಕುರಿತ ಅವರ ಕಳಕಳಿ ಜನರಿಗೆ ತಿಳಿಯಿತು. ಅವರು ಶ್ರೀಸಾಮಾನ್ಯನಿಂದ ನಿರೀಕ್ಷಿಸಿದ್ದ ಪ್ರತಿಕ್ರಿಯೆ ಕಾವ್ಯಕ್ಕೆ ಲಭಿಸುವುದರೊಂದಿಗೆ ಕಾವ್ಯದ ನಿರೀಕ್ಷೆಯಾದ ಪರಿಣಾಮವು ಫಲಿಸಿತು.

ಶ್ರೀಸಾಮಾನ್ಯನು ಎಚ್ಚರಗೊಂಡು ತನ್ನ ಶೋಷಣೆಯ ಹಿಂದಿನ ಪಿತೂರಿಗಳನ್ನು ಮನಗಂಡು ಪ್ರತಿಭಟಿಸಿದ. ಸಾಹಿತ್ಯ ಸಾಧಿಸಬಹುದಾದ ಗುರಿ ಇದಕ್ಕಿಂತ ದೊಡ್ಡದಿರಲಾರದು. ೨೦ನೇ ಶತಮಾನದಲ್ಲಿ ಸಾಮಾಜಿಕ ಜಾಗೃತಿಗೆ ಮುನ್ನುಡಿ ಬರೆದು ಶೋಷಿತರನ್ನು ತನ್ನೊಂದಿಗೆ ಗುರಿಯೆಡೆಗೆ ಕರೆದುಕೊಂಡು ಹೋದ ಹಿರಿಮೆ 'ಹೊಲೆಮಾದಿಗರ ಹಾಡು' ಕೃತಿಕಾರನದು.

ಶೋಷಣೆಯ ವಿವಿಧ ಆಯಾಮಗಳನ್ನು ಗ್ರಹಿಸುವಲ್ಲಿ ಸಾಮಾನ್ಯನಿಗೆ ಅರ್ಥವಾಗುವ ಹಾಗೆ ಮಂಡಿಸುವಲ್ಲಿ ಸಿದ್ಧಲಿಂಗಯ್ಯನವರನ್ನು ರೂಪಿಸಿದ ವಿಚಾರಧಾರೆಗಳು ವೈವಿಧ್ಯಮಯವಾಗಿವೆ. ವಯೋಮಾನ ಸಹಜವಾದ ಸೆಳೆತವಾಗಿ ಅವರನ್ನು ಪ್ರಭಾವಿಸಿದ ಮಾರ್ಕ್ಸ್‌ವಾದ, ಮಾರ್ಕ್ಸ್‌ವಾದದಿಂದ ದಕ್ಕಿಸಿಕೊಂಡ ಸಮಾಜ ಗ್ರಹಿಕೆಯ ನೆಲೆಗಳು ಸಿದ್ದಲಿಂಗಯ್ಯನವರಿಗೆ ವರ್ಗಪ್ರಜ್ಞೆಯನ್ನು ತಂದುಕೊಟ್ಟಿರುವುದನ್ನು ಕಾಣಬಹುದು. ಆದ್ದರಿಂದಲೇ ಈ ಸಂಕಲನದ ಇವರ ಬಹುತೇಕ ಕವನಗಳು ಭಾರತದ ಸಂದರ್ಭವನ್ನು ಉಳ್ಳವರು ಮತ್ತು ಇರದವರ ನಡುವಿನ ಸಂಘರ್ಷವಾಗಿಯೇ ಗ್ರಹಿಸುತ್ತವೆ. ಇಲ್ಲಿ ಎಲ್ಲ ಶೋಷಿತರು ಒಂದು ವರ್ಗವಾಗಿ ನಿಲ್ಲುತ್ತಾರೆ. ಬಡತನ, ಶೋಷಣೆ ಇವರೆಲ್ಲರಲ್ಲಿ ಇರುವ ಸಾಮಾನ್ಯ ಅಂಶವಾಗಿ ಗೋಚರಿಸುತ್ತದೆ. ಈ ಸಂಕಲನದ ಮೊದಲ ಕವನ 'ನನ್ನ ಜನಗಳು' ಇವರ ಈ ಗ್ರಹಿಕೆಯ ಸ್ವರೂಪವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ಭಾರತದ ಸೇವಾ ಸಮುದಾಯಗಳಿಗೆ ಸೇರಿದ ಎಲ್ಲ ಜನರನ್ನು ಒಳಗೊಳ್ಳುವ ಈ ಕವಿತೆ, ಶೋಷಣೆಯ, ಬಡತನದ ವಿರಾಟ್‌ರೂಪವನ್ನು ಧ್ವನಿಪೂರ್ಣವಾಗಿ ಕಟ್ಟಿಕೊಡುತ್ತದೆ. ಧ್ವನಿ, ವ್ಯಂಜಕತೆ, ಶ್ಲೇಷೆಗಳನ್ನು ಪರಿಣಾಮಕಾರಿಯಾಗಿ ಕವಿತೆಯ ಉದ್ದಕ್ಕೂ ಬಳಸಲಾಗಿದೆ. ನೀರಸವಾದ ವಾಚ್ಯವಾಗಿ ಕವಿತೆಯ ಯಾವ 'ಸಾಲು ತೋರುವುದಿಲ್ಲ. ಆದಾಗ್ಯೂ ಈ ಸಾಲುಗಳು ಘೋಷಣೆಗಳಾಗಿ ಕೆಲವರಿಗೆ ಕಂಡದ್ದು ವಿಸ್ಮಯದ ಸಂಗತಿ. ಈ ಕವಿತೆಯು ಕ್ರಾಂತಿಕಾರಿಯೊಬ್ಬನ ಉದ್ವೇಗಭರಿತ ಭಾಷಣವೂ ಅಲ್ಲ, ಆವೇಶಪೂರಿತ ಘೋಷಣೆಯೂ ಅಲ್ಲ. ವಿಷಾದ ಮತ್ತು ಸಂಕಟಗಳ ಸಮ್ಮಿಲನ; ವಾಸ್ತವವನ್ನು ಅರಿಯಲು ಅಸಾಧ್ಯವಾಗುವಂತೆ ಸೇವಾ ಸಮುದಾಯಗಳನ್ನು

ನಿಯಂತ್ರಿಸುತ್ತಿರಬಹುದಾದ ಸ್ಥಳೀಯ ಚಿಂತನೆಗಳ ನೆಲೆಗಳನ್ನು ಧ್ವನಿಪೂರ್ಣವಾಗಿ ಶೋಷಿತರಿಗೆ ಮನವರಿಕೆ ಮಾಡಿಕೊಡುವ ಪರಿಣಾಮಕಾರಿಯಾದ ಪ್ರಯತ್ನವಾಗಿ ಕವಿತೆ ರೂಪುಗೊಂಡಿದೆ. ದುಡಿದೂ ಸಹ, ವಸತಿಹೀನರಾಗಿ ವಸ್ತ್ರಹೀನರಾಗಿ ಹಸಿದವರಾಗಿ ಬದುಕಬೇಕಾದ ದುರಂತವನ್ನು ವಿವರಿಸುವ ಕವಿ ದುಡಿದು ಬಡವರಾಗುವುದರ ಮರ್ಮವನ್ನು 'ಭಕ್ತರಪ್ಪ ಭಕ್ತರೋ ನನ್ನ ಜನಗಳು' ಎನ್ನುವ ಒಂದು ಸಾಲಿನ ಮೂಲಕ ಅದ್ಭುತವಾಗಿ ಮಂಡಿಸುತ್ತಾರೆ.

ಭಕ್ತಿಭಾವಕ್ಕಿರುವುದು ಒಂದು ಆಯಾಮವಲ್ಲ. ಶರಣಾಗತಿ, ಶಂಕೆಯಿಲ್ಲದ ನಂಬಿಕೆ,ಪ್ರಶ್ನಿಸದ ಮನೋಧರ್ಮ, ಅನುಮಾನಿಸದ ಮನಸ್ಸು, ವಿಶ್ವಾಸಭರಿತ ನಿಷ್ಠೆ, ವಿಧೇಯತೆ ಹೀಗೆ ಏನೆಲ್ಲ ಆಯಾಮಗಳು. ಕರ್ಮಸಿದ್ಧಾಂತದ ಪ್ರಬಲ ಅಸ್ತ್ರವನ್ನು ಹಿಡಿದು ಹೊರಟ ಶೋಷಕರು ಬಡವರ ಸ್ಥಿತಿಯನ್ನು ಪೂರ್ವಜನ್ಮದ ಪಾಪಕರ್ಮಗಳಾಗಿ ಬಿಂಬಿಸುತ್ತಾ ಶೋಷಣೆಯನ್ನು ಜೀವನಕ್ರಮವಾಗಿ ಪರಿಭಾವಿಸುತ್ತಾರೆ. ಭಾರತದ ಸಂದರ್ಭದ ಧಾರ್ಮಿಕ ಪಠ್ಯಗಳು, ಈ ಭಾವವನ್ನು ಪ್ರಬಲವಾಗಿ ಪೋಷಿಸುತ್ತಾ ಬರುತ್ತಿವೆ. ಇಲ್ಲಿ ಮನುಷ್ಯ ತನ್ನಿಂದ ಹೊರಗೆ ಮತ್ತೊಬ್ಬ ಮನುಷ್ಯನನ್ನು ಕಾಣುತ್ತಿಲ್ಲ. ಈ ಪಠ್ಯಗಳು ನೀಡಿದ ಸಂಸ್ಕಾರಗಳನ್ನು ಬದುಕುತ್ತಿದ್ದಾನೆ. ಆದ್ದರಿಂದಲೇ ತಾನು ಮಾಡುತ್ತಿರುವ ಕೃತ್ಯದ ಸ್ವರೂಪವನ್ನು ತಿಳಿಯದವನಾಗಿದ್ದಾನೆ. ಶೋಷಿತನು ತನ್ನ ಸ್ಥಿತಿಯನ್ನು ಇದೇ ಸಂಸ್ಕಾರಗಳ ಪರಿಧಿಯಲ್ಲೇ ಪರಿಭಾವಿಸುವುದರಿಂದ ಅವನಿಗೂ ಇದು ತನ್ನ ಮೇಲಾಗುತ್ತಿರುವ ದೌರ್ಜನ್ಯವಾಗಿ ಕಾಣುತ್ತಿಲ್ಲ. ಈ ಚಕ್ರವ್ಯೂಹದ ಒಳಗೆ ಶೋಷಕ – ಶೋಷಿತರಿಬ್ಬರೂ ಬಂಧಿಗಳು ಆದರೆ ಬಂಧನದ ಭಾವ ಇಬ್ಬರಲ್ಲೂ ಇಲ್ಲ. ಭಾರತೇತರ ವಿಚಾರಧಾರೆಗಳು ಕರ್ಮಸಿದ್ಧಾಂತದಿಂದ ದೂರವಿರುವುದರಿಂದ ಕೈಕೆಸರಾದರೆ ಬಾಯಿ ಮೊಸರಾಗಬೇಕೆನ್ನುವುದನ್ನು ಅಕ್ಷರಶಃ ನಂಬುತ್ತವೆ. ಈ ಬಗೆಯ ವೈಚಾರಿಕತೆಯ ಬೆಳಕನ್ನು ಹಿಡಿದು ಹೊರಟ ಸಿದ್ದಲಿಂಗಯ್ಯನವರಿಗೆ ಶೋಷಿತರೆಲ್ಲರು ಒಂದು ವರ್ಗವಾಗಿ, ಶೋಷಕರು ಮತ್ತೊಂದು ವರ್ಗವಾಗಿ ಕಾಣುತ್ತಾರೆ. ಆದ್ದರಿಂದಲೇ ಈ ಕವನ ಸಂಕಲನದ ಮೊದಲ ಕವಿತೆ, ಕವಿ ತಾನು ಒಳಗೊಂಡಿರುವ ಲೋಕವನ್ನು ನಮ್ಮ ಮುಂದಿಡುತ್ತದೆ.

ಎಲ್ಲ ದುಡಿಯುವ ಜನರನ್ನೂ ಒಳಗೊಳ್ಳಬೇಕೆಂಬ ಭಾವ ತೀವ್ರತೆ ಈ ಕಾವ್ಯದ ಮ್ಯಾನಿಫೆಸ್ಟೋ ಎಂಬುದನ್ನು, ಕವಿ ತಮ್ಮ ಕವನ ಸಂಕಲನದ ಮೊದಲ ಕವಿತೆಯಲ್ಲಿ ಪ್ರತಿಪಾದಿಸುವ ಮೂಲಕ ಶೋಷಣೆಯ ಸಾರ್ವಜನಿಕ ಸ್ವರೂಪವನ್ನು ಮುಖ್ಯವೆಂದು ಭಾವಿಸುತ್ತಾರೆ. ಕೇವಲ ಮನುಷ್ಯ ಭಾವವು ನಮ್ಮನ್ನು ಆವರಿಸಿಕೊಂಡಾಗ ಶೋಷಣೆಯು ನಮಗೆ ಕಾಣುವ ಬಗೆ ಇದು. ಆದರೆ ಭಾರತವೆಂಬುದು ಇಷ್ಟೇ ಅಲ್ಲವೆನ್ನುವುದು ಪ್ರಗತಿಪರ ಚಿಂತನೆಗಳು, ನೋವಿನ ಪರವಾದ ಧ್ವನಿಗಳು ಕಂಡುಕೊಳ್ಳಬೇಕಾದ ಅಂತಿಮ ಸತ್ಯವೆನ್ನುವುದು ಬಹಳ ಬೇಗ ಮನವರಿಕೆಯಾಗುವುದು ಈ ನೆಲದ ಕ್ರೂರ ಸತ್ಯ. ಸಾಮಾಜಿಕವಾದ ಜಾತಿ ಶ್ರೇಣೀಕರಣದ ಹೊರಗೆ ನಿಂತು ನೋಡುವಾಗ ಸರ್ವ ಸಾಮಾನ್ಯ ರೂಪದಲ್ಲಿ ಕಂಡು ಬರುವ ಶೋಷಣೆ ಕೇವಲ ಮನುಷ್ಯತ್ವವನ್ನು ಕಾಡುತ್ತದೆ. ಆದರೆ ಶೋಷಿತರಲ್ಲೇ ಶೋಷಣೆಯ ಬಗೆಗೆ ಏಕಭಿಪ್ರಾಯವಿಲ್ಲದಿರುವುದು ಕವಿಯ

ಸೂಕ್ಷ್ಮಗ್ರಹಿಕೆಯ ನೆಲೆಗಳನ್ನು ತಟ್ಟದೇ ಇಲ್ಲ. ಇದು ಅಜ್ಞಾನದ ಪರಿಣಾಮವೆಂಬುದನ್ನು ಅರಿತ ಕವಿ ಶೋಷಣೆಯ ಸಾರ್ವತ್ರಿಕ ನೆಲೆಯನ್ನು ಒಪ್ಪಿ

'ಕ್ವರುಗ್ತಿನಿ ಊನಗೊಂದಲ ಕೂಗ್ತಿನಿ

ಬಡ್ಡಿದುಡೋನ್ ಬಂಗ್ಲೆ ಕಳೆ

ತಳಾದೀಗ್ ಸಿಕ್ಕಿರೋ ಮೂಳೆ'

ಎಂಬ ಶೋಷಿತನ ಭಾವವನ್ನು ವಿಸ್ತರಿಸುತ್ತಾ ಶೋಷಣೆ, ದೌರ್ಜನ್ಯಗಳ

ಅರಿವು ಸಾಧ್ಯವಾಗಿ

'ಈ ಮಿಂಡುಗುಟ್ಟೋ ಚಂದಾಗ್ ಬಲ್ಯಾಕ್

ದುಡ್ಡು ಮೂಳೆ ಆಗಿ ಊಳಿತಿದ್ದಿನಿ'- ಎಂದು

ಎಚ್ಚರಗೊಂಡು ವಿಶ್ವಲತೆಗೊಳಗಾಗಿ

'ಎಷ್ಟೋ ದಿನಾ ಈ ಪುಟ್ಕಸಿಗಳಾಟ?'-ಎಂದು

ಸ್ಫೋಟಿಸಿ ಶೋಷಣೆಗೆ ಅಂತ್ಯವನ್ನು ಕಾಣಿಸಬೇಕೆಂದು ನಿರ್ಧರಿಸಿ

'ಸಿಡಿತಿನಿ ಬಾಂಬ್ ಸಿಡಂಗೆ

ಇವ್ರ ಸಿಂಗಾರ, ಸೋಪ ಗಾಜು ಲೈಟು ಎಲ್ಲಾ

ಪುಡಿ ಪುಡಿ ಆಗಂಗ

ನನ್ ಮ್ಯಾಲ್ ನಿಂತ್ಕಂಡ್ ತುಳೀತಿರೋ ಈ ಬಂಗ್ಲೆ

ಕ್ಯಳೀಕ್ ಬೀಳಂಗೆ - ಎಂಬ ತೀರ್ಮಾನಕ್ಕೆ ಬರುತ್ತಾನೆ.

ಇಡೀ ಕವಿತೆ ವರ್ಗತಾರತಮ್ಯದ ನೆಲೆಯಲ್ಲಿ ವಿಸ್ತರಿಸಿಕೊಳ್ಳುವಲ್ಲಿ ಬಡತನಕ್ಕೆ ಕಾರಣವಾದ ಆರ್ಥಿಕ ಅಸಮಾನತೆಯನ್ನು ಮಾತ್ರ ಗಮನಿಸಿರುವುದನ್ನು ಕಾಣಬಹುದು. ಕುವೆಂಪು ಅವರ 'ಕಲ್ಕಿ' ಕವಿತೆಯು ಸಹ ಸಿರಿತನ -ಬಡತನಗಳು ಆರ್ಥಿಕ ಅಸಮಾನತೆಯ ಫಲಶ್ರುತಿಗಳೆಂಬ ಗ್ರಹಿಕೆಯನ್ನು ಮಂಡಿಸುತ್ತದೆ ಆದರೆ ಭಾರತದ ಬಡತನವೆಂಬುದು ಕೇವಲ ಆರ್ಥಿಕ ಅಸಮಾನತೆಯಲ್ಲವೆಂಬುದು ಈ ನೆಲದ ವೈಶಿಷ್ಟ್ಯ!

ವರ್ಗಪ್ರಜ್ಞೆಯನ್ನು ಅಪಹಾಸ್ಯಗೈಯ್ಯುವ ಅನೇಕ ಕಹಿಯಾದ ವಿಚಾರಗಳು ಭಾರತದ ಧಾರ್ಮಿಕ ನೆಲ ಮೂಲದಿಂದ ಹೊರಡುತ್ತವೆ. ಇಲ್ಲಿ ಧಾರ್ಮಿಕ ನೆಲೆಯಷ್ಟು ಪ್ರಬಲವಾಗುವುದು ಮತ್ತೊಂದಿಲ್ಲ. ಧರ್ಮನುಸಾರಿಯಾದ ಜಾತಿ ಶ್ರೇಣೀಕರಣವು ಸಮಾಜವನ್ನು ಸಾಧ್ಯವಾಗಿಸಿದೆ. ಆದ್ದರಿಂದಲೇ ಯಾವ ಬಗೆಯ ಶೋಷಣೆಯು ಹೆಚ್ಚು ತೀವ್ರವಾದುದು ಎಂಬುದನ್ನು ನಿರ್ಧರಿಸಿಕೊಳ್ಳುವುದೇ ಪ್ರಯಾಸದ ವಿಷಯವಾಗುತ್ತದೆ. ಸಾರ್ವತ್ರಿಕವಾದ ಹಸಿವು, ಬಡತನಗಳು ಜಾತಿ ಮೂಲವಾದ ಅಸಮಾನತೆಯ ಭಾವವನ್ನು ಮೀರಿ ಸಂಧಿಸಲು, ಒಟ್ಟುಗೂಡಲು ಸಾಧ್ಯವೇ ಎಂಬುದು ಕುತೂಹಲಕರ ಸಂಗತಿ.

ಶೋಷಣೆಗೆ ಸಹಕಾರಿಯಾಗಬಲ್ಲ ಜಾತಿ ಪ್ರಜ್ಞೆಯು ಶೋಷಕರು ಬಳಸುವ ಒಂದು ಪರಿಣಾಮಕಾರಿ ಸಾಧನವೂ ಹೌದು. ಜಾತಿ ಕಾರಣದಿಂದಾಗಿ ಒದಗುವ ಅಪಮಾನದಿಂದ ನೊಂದ ಜೀವದ ಸಂಕಟ ಆಕ್ರೋಶವಾದಾಗ, ವೈಚಾರಿಕತೆಯ ಭಾವ ಬಲಿತಾಗ ಸಹಜವಾಗಿ ಅಸಹನೆಯು ತೀವ್ರವಾಗಿ -



'ಇಕ್ರಲಾ ವದೀರಾ

ಈ ನನ್ ಮಕ್ಕಳ ಚರ್ಮ ಇಬ್ರಲಾ' ಎಂದು ಕೂಗುವುದು ಅನಿವಾರ್ಯವಾಗುತ್ತದೆ. ಏಕೆಂದರೆ

'ದೇವ್ರು ಒಬ್ಬೇ ಅಂತಾರೆ
ಓಣಿಗೊಂದೊಂದ್ ತರಾ ಗುಡಿ ಕಟ್ಟವೆ'

ಎಂದು ತರ್ಕಬದ್ಧವಾಗಿ ಯೋಚಿಸುವ ತಪ್ತ ಮನಸ್ಸು

ಎಲ್ಲಾರು ದೇವ್ರ ಮಕ್ಕು ಅಂತಾರೆ
ಹೊಲೇರ ಕಂಡ್ರೆ ಹಾವ್ ಕಂಡಂಗಾಡ್ತಾರೆ
ಹೊಟ್ಲು ಬಾವಿ, ಮನೆ ಯಾವುದೂ ಸೇರಲ್ವಲ್ಲೊ
ನಮ್ ಹೇಳ್ ತಿನ್ನೋ ನಾಯ್ಕ ಕಾಣಿವಳೀಕ್ ಬುಟ್ತ್ತಾರೆ
ನಾವ್ ಬೆಳೆದಿತ್ ತಿಂತಾರೆ ನಾವ್ ದುಡಿದಿತ್ ತಗತ್ತಾರೆ
ನಾವ್ ಮಾತ್ರ ಬ್ಯಾಡಾ

ಹೊಲೇರು, ಮಾದುಗ್ರು ಅನ್ನೋ ಬದ್ಲು

ಹರಿಜನಾ ಅಂತ ಕರು ನಗ್ತಾರಲ್ಲಪ್ಪೋ....

ಎಂದು ವ್ಯಗ್ರಗೊಳ್ಳುತ್ತದೆ. ಜಾತಿ ಮೂಲವಾದ ಅಪಮಾನ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಕುಬ್ಜವಾಗಿಸಬಲ್ಲದು. ನೆಲ, ಜಲಗಳು ಪರಕೀಯವೆಂಬ, ತಾನು ಈ ನೆಲಕ್ಕೆ ಪರಕೀಯನೆಂಬ ಭಾವವನ್ನು ಗಟ್ಟಿಗೊಳಿಸಬಲ್ಲುದು. ಆದರೆ ಈ ಕವಿಯಲ್ಲಿ, ಕವಿತೆಯಲ್ಲಿ ಹತಾಶೆಗೆ ಅವಕಾಶವಿಲ್ಲ . ಪ್ರಖರವಾದ ವೈಚಾರಿಕತೆ, ಚಾರಿತ್ರಿಕ ಪ್ರಜ್ಞೆಗಳ ಸಮ್ಮಿಲನದಿಂದ ಸಾಧ್ಯವಾದ ತಾರ್ಕಿಕತೆ ಸ್ವಾಭಿಮಾನದ ಕಿಚ್ಚಾಗಿ ಪ್ರಜ್ವಲಿಸುತ್ತದೆ. ಈ ನೆಲ, ನೆಲದ ಸಂಸ್ಕೃತಿ ತನ್ನದೆನ್ನುವ ವಿಶ್ವಾಸದಿಂದಲೇ ಜಾತಿಯ ಆವಿರ್ಭಾವಕ್ಕೆ ಮೂಲವಾದ ಸಂಚಿನ ಸ್ವರೂಪವನ್ನು ಶೋಧಿಸುವ ಪ್ರಯತ್ನ ಕಂಡು ಬರುತ್ತದೆ. ಸಂಚಿನ ಪ್ರತಿಯೊಂದು ಎಳೆಯನ್ನು ತರ್ಕದ ಮೂಲಕ ಜನರಿಗೆ ವಿವರಿಸುವ ಪ್ರಯತ್ನವಾಗಿ ಕವಿತೆ ಕಟ್ಟಲ್ಪಟ್ಟಿದೆ. ತನ್ನದೆನ್ನುವ ವಿಶ್ವಾಸವೇ ತನ್ನನ್ನು ಪರಕೀಯನೆಂಬಂತೆ ಅಪಮಾನಕರವಾಗಿ ನಡೆಸಿಕೊಳ್ಳುವುದನ್ನು ತೀವ್ರವಾಗಿ ಪ್ರತಿಭಟಿಸುತ್ತದೆ.

ಈ ಕವಿತೆಯ ಅನುಭವದ ಲೋಕಕ್ಕೆ ಪ್ರವೇಶಿಸಿದ ಕೂಡಲೇ, ಕವಿಯು ಈ ಲೋಕದೊಂದಿಗೆ ಹೊಂದಿರುವ ತಾದಾತ್ಮತೆ ಓದುಗನಿಗೂ, ಕೇಳುಗನಿಗೂ ಅನುಭವವಾಗುತ್ತದೆ. ಇಂಥಲ್ಲಿ ಜಾತಿ ಮೂಲವಾದ ಶೋಷಣೆ, ಅಪಮಾನಗಳನ್ನು ಮಾಡುತ್ತಿರುವವರು ಯಾರು ಎಂಬ ಪ್ರಶ್ನೆ ಉದ್ಭವಿಸಿದರೆ, ಅಸ್ಪಶ್ಯೇತರವಾದ ಉಳಿದ ಲೋಕವೆಲ್ಲವು ಆ ಬದಿಯಲ್ಲಿ ನಿಂತಿರುತ್ತದೆ. ಅಲ್ಲಿ ಇರುವವರೆಲ್ಲ ಯಾರುಯಾರು ಎಂದು ನೋಡಿದರೆ ಅಲ್ಲಿ ಬಡವರು ಶ್ರೀಮಂತರು ಎಲ್ಲರೂ ಇದ್ದಾರೆ. ಈಗ ಅವರೆಲ್ಲರನ್ನು ಒಳಗೊಳ್ಳುತ್ತಿರುವ ಸಾಮಾನ್ಯ ಅಂಶ ಸವರ್ಣೀಯತೆ, ಸ್ಪೃಶ್ಯ-ಅಸ್ಪೃಶ್ಯತೆಗಳ ಮಾನದಂಡಗಳನ್ನು ರೂಪಿಸಿದ ಪುರೋಹಿತಶಾಹಿ ಜನಮಾನಸದಲ್ಲಿ ಭಿತ್ತಿರುವ ವಿಚಾರಗಳು ಮಾನವೀಯತೆಗೆ ಅಪಚಾರವನ್ನು ಬಗೆಯುವಂಥವು. ಆದ್ದರಿಂದಲೇ ಅಸ್ಪೃಶ್ಯರ ಹಿತವನ್ನು ಕುರಿತ ಸಾಮಾಜಿಕ ನಿಲುವುಗಳಲ್ಲಿ ಬಹುತೇಕ ಸಂದರ್ಭಗಳಲ್ಲಿ ಪ್ರಾಮಾಣಿಕತೆಯು ಮರೀಚಿಕೆಯಾಗಿರುವುದನ್ನು ಕಾಣಬಹುದು.

ಈ ಬಗೆಯ ಅಪ್ರಾಮಾಣಿಕತೆಯನ್ನು ಕಂಡು ರೋಸಿ ಹೋದ ಮನಸ್ಸು

ನಮ್ಮುನ್ನ ಉದ್ಧಾರ ಮಾಡ್ತೀವಿ ಅಂತ ಪೇಪ್ರೇಲಿ

ಮೈಕೇಲಿ ಜೋರಾಗಿ ಕೂಗ್ತಾ ಅವಲ್ಲಪ್ಪೋ

ನಾವ್ ಮಾತ್ರ ಇಸ್ಕೋಲ್‌ಗೋಗಾಂಗಿಲ್ಲ ಜೀತದ್ದೇಕು

ತಲೆ ಎತ್ತಾಂಗಿಲ್ಲ -ಬಗ್ಗುಸ್ಬೇಕು

ಈ ನನ್ ಮಕ್ಳು ಕಳ್ಳಾಟ ಆಡ್ತಾ ಅದ್ರೆ ಅದಕ್ಕೇನೆ

ಇಕ್ರಲಾ ವದೀರಾ ಈ ಸೂಳೇಮ ಮೂಳೆಮುರೀರಾ

-ಎಂದು ಆಕ್ರೋಶವನ್ನು ವ್ಯಕ್ತಪಡಿಸುತ್ತದೆ.

ಪ್ರಜಾಪ್ರಭುತ್ವದ ಅಪಾರ ಸಾಧ್ಯತೆಗಳು ಪುರೋಹಿತಶಾಹಿ ಸಂಸ್ಕರಣೆಗೊಳಗಾದ ಮನಸ್ಸುಗಳಿಂದಾಗಿ ಪ್ರತಿಕ್ಷಣ ಅಪಹಾಸ್ಯಕ್ಕೊಳಗಾಗುತ್ತಿರುವುದಲ್ಲದೆ, ಅರ್ಥವತಿಂಕೆಯನ್ನು ಕಳೆದುಕೊಳ್ಳುತ್ತಿರುವುದನ್ನು ಕಾಣಬಹುದು. ವಾಕ್ ಸ್ವಾತಂತ್ರ್ಯದ ಜೊತೆಗೆ ಪ್ರತಿಯೊಬ್ಬರಿಗೂ ಮುಕ್ತ ಅವಕಾಶವನ್ನು ಒದಗಿಸುವ ಪ್ರಜಾಪ್ರಭುತ್ವ ವ್ಯವಸ್ಥೆಯ ಯಶಸ್ಸನ್ನು ಭಿಕ್ಷೆ ಬೇಡುವವನ ಮಗ ಅಧಿಕಾರಿಯಾಗುವಲ್ಲಿ ಒಂದೊಮ್ಮೆ ನಿರ್ಲಕ್ಷ್ಯಕ್ಕೆ ಒಳಗಾದ ವ್ಯಕ್ತಿ ಸುಸ್ಥಿತಿಯನ್ನು ತಲುಪುವುದನ್ನು ಕಂಡಾಗ ಪ್ರಜಾಪ್ರಭುತ್ವದ ಹಿರಿಮೆಗೆ ಸರಿಸಾಟಿಯೇ ಇಲ್ಲ ಎನ್ನಿಸುವುದು ಸಹಜ. ಆದರೆ ವ್ಯವಸ್ಥೆಯನ್ನು ತಮ್ಮ ಆಟಿಕೆಯಾಗಿ ಬಳಸಬಹುದಾದ ಸಮರ್ಥರೇ ಪ್ರಜಾಪ್ರಭುತ್ವದ ಪಾಲಿಗೆ ಕಂಟಕಪ್ರಾಯರಾಗಿರುವುದು ಈ ಕ್ಷಣದ ವಿಪರ್ಯಾಸ.

ಅಧಿಕಾರದ ಗಳಿಕೆಯ ಮೇಲಾಟದಲ್ಲಿ ಶ್ರೀಸಾಮಾನ್ಯನ ಬದುಕನ್ನು ದುರ್ಭರವಾಗಿಸುವ ಬಂಡವಾಳಶಾಹಿಗಳು, ಜನರಿಗೆ ಗಾಂಧಿಯ ಅಹಿಂಸಾ ವಾದವನ್ನು ಬೋಧಿಸುತ್ತಾ ತಮ್ಮ ಅಸ್ತಿತ್ವಕ್ಕಾಗಿ ಹಿಂಸೆಯ ರುದ್ರತಾಂಡವವನ್ನು ನಡೆಸುತ್ತಾ, ಜನರಿಗೆ ಗಾಂಧಿಯ ಅಪರಾವತಾರಗಳಂತೆ ಕಾಣಿಸಿಕೊಳ್ಳುವ ಇಬ್ಬಂದಿತನವನ್ನು ಕಂಡು ವಿಷಾದಿಸುವ ಕವಿ ಪ್ರಜಾಪ್ರಭುತ್ವವನ್ನು ಅಪಮಾನಿಸುವಲ್ಲಿ ಸಕ್ರಿಯರಾಗಿರುವವರನ್ನು

ನಮ್ಮ ಮಾತ್ರ

ನೀತಿ , ಅಹಿಂಸೆ ಹೇಳ್ಕೊಡ್ತೀರೇನಲಾ

ಗಾಂಧೀಮಾತ್ಮನ ಅಚ್ಚುಗಳಾ

ನೀವು ಎಮ್ಮೆಲೆಗಳು, ಮಿಸ್ಸುಗಳು……

ಎಂದು ಛೇಡಿಸುತ್ತಾರೆ. ಅಧಿಕಾರ, ಆಕಾಂಕ್ಷೆ, ವ್ಯಸನವಾಗಿ ಶ್ರೀಸಾಮಾನ್ಯನ ಬದುಕಿಗೆ ಮಾರಕವಾಗಿರುವುದನ್ನು ಕುರಿತು ಆಲೋಚಿಸುವ ಕವಿತೆ, ಪ್ರಜಾಪ್ರಭುತ್ವದ ಅಪಹಾಸ್ಯದಲ್ಲಿ ಪ್ರಧಾನ ಭೂಮಿಕೆಯನ್ನು ನಿರ್ವಹಿಸುತ್ತಿರುವ ಅಧಿಕಾರದ ವ್ಯಸನದ ಸ್ವರೂಪವನ್ನೂ ಅದರ ಅಸಮರ್ಥತೆಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುವಲ್ಲಿ

ಬೋಳ್ ಮುದುಕ್ತಾ

ಹಲ್ ಉಡೋದೋರಾ ಹಲ್ ಕಟ್ಟುಸ್ಕೊಂಡೋರಾ

ಜನ್ಮದು ಮೈಗ್ನ ಮುಂದೆ ತಂದ್ ವಿಚಾರುದ್ರೆ

ತ್ರಾಣ ಪ್ರಾಣ ಎಲ್ಲೂ ಇಲ್ಲೆ - ಎಂದು ಕಟಕಿಯಾಡುತ್ತಾರೆ.



ಅಧಿಕಾರದ ಬಗೆಗಿನ ಆಸೆ ವ್ಯಸನವಾಗಿರುವುದರಿಂದ, ಪ್ರಜಾಪ್ರಭುತ್ವದ ಆಶಯಗಳಿಗೆ ಧಕ್ಕೆಯಾಗುತ್ತಿರುವುದರ ಬಗೆಗೆ ವಿಷಾದವನ್ನು ವ್ಯಕ್ತಪಡಿಸುವ ಕವಿತೆ ಅಧಿಕಾರದ ವ್ಯಸನಿಗಳಿಗೆ ಅವರ ಮಿತಿಗಳನ್ನು ತಿಳಿಸುವುದರ ಜೊತೆಗೆ ಸಮಾಜಕ್ಕೆ ಪ್ರಜಾಪ್ರಭುತ್ವಕ್ಕೆ ಒದಗುತ್ತಿರುವ - ಒದಗಿರುವ ಅಪಾಯಗಳನ್ನು ತಿಳಿಸುತ್ತದೆ. ತನ್ಮೂಲಕ ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುವುದರ ಜೊತೆಗೆ ಶೋಷಿತರನ್ನು ಜಾಗೃತಗೊಳಿಸುವುದು ಸಹ ಇಲ್ಲಿ ಪ್ರಧಾನವಾಗಿದೆ.

ಸಿದ್ಧಲಿಂಗಯ್ಯನವರು ಅಪರಿಮಿತವಾದ ಸಾಮಾಜಿಕಬದ್ಧತೆಯ ಆಯಾಮವನ್ನು ಸೃಜನಶೀಲ ಸಾಹಿತ್ಯಕ್ಕೆ ಸೇರ್ಪಡೆ ಮಾಡುವ ಮೂಲಕ ಸಾಹಿತ್ಯ ಜನಮುಖಿಯಾಗಿರಬೇಕು. ಕೇವಲ ಜನಮುಖಿಯಾಗಿದ್ದರೆ ಸಾಲದು ಜನರ ಗ್ರಹಿಕೆಗೂ ನಿಲುಕಬೇಕು. ಜನರ ಗ್ರಹಿಕೆಗೆ ಕಾವ್ಯ ಸಾಧ್ಯವಾದಾಗ ಪರಿಣಾಮಗಳು ಸಂಭವಿಸುತ್ತವೆ ಎಂದು ಭಾವಿಸಿ ಕಾವ್ಯವನ್ನು ಸಂಪೂರ್ಣವಾದ ನೆಲೆಯಲ್ಲಿ ಜನಮುಖಿಯಾಗಿಸುತ್ತಾರೆ. ಆದ್ದರಿಂದಲೇ ಸಿದ್ಧಲಿಂಗಯ್ಯನವರ ಸೃಜನಶೀಲತೆ ಸಾರ್ವಜನಿಕ ಆಯಾಮವನ್ನು ಪಡೆದುಕೊಂಡಿದೆ. ಇದು ಏಕಾಂತದ ಹಳಹಳಿಕೆಯಾಗದೆ ಲೋಕಾಂತದ ಸಂವಾದವಾಗಿದೆ. ಈ ಸಂವಾದ ಕವಿ ಮತ್ತು ಮುಗ್ಧತೆಯ ಅಪಗ್ರಹಿಕೆಗಳಿಗೆ ಒಳಗಾದ ಶ್ರೀಸಾಮಾನ್ಯರ ನಡುವೆ ನಡೆಯುತ್ತದೆ. ಸಂವಾದದಲ್ಲಿ ತೊಡಗಿದ ಜನ ಎಚ್ಚರಗೊಂಡು ಶೋಷಣೆಯ ವಿರುದ್ಧ ಧ್ವನಿಯೆತ್ತುವುದು ಸಾಧ್ಯವಾಗಿದೆ. ಯಾವುದೇ ಸೃಜನಶೀಲ ಪ್ರಯತ್ನ ಈ ಬಗೆಯ ಪರಿಣಾಮವನ್ನುಂಟು

ಮಾಡಬೇಕಾದುದು ಅಪೇಕ್ಷಣೀಯ. ಆದರೆ ಕನ್ನಡ ಸಾಹಿತ್ಯ ಸಂದರ್ಭ ಈ ಬಗೆಯ ಕಾಳಜಿಗಳಿಗೆ ಎಂದಾದರೂ ಸ್ಪಂದಿಸಿತ್ತೇ ಎಂಬುದು ಅಪವಾದ ಮಾತ್ರವಾಗಿದೆ.

ಈ ಹಿನ್ನಲೆಯಲ್ಲಿ ಸಿದ್ದಲಿಂಗಯ್ಯನವರ ಇಲ್ಲಿನ ಕವಿತೆಗಳು ಮುಖ್ಯವಾಗಿ ಎರಡು ಧಾರೆಗಳಲ್ಲಿ ಪ್ರವಹಿಸುವುದನ್ನು ಕಾಣಬಹುದು. ಒಂದು, ಅಸ್ಪೃಶ್ಯತೆಯೇ ಪ್ರಧಾನವಾದ ಶೋಷಣೆಯ ನೆಲೆ, ಮತ್ತೊಂದು ಬಡತನ ಪ್ರಧಾನವಾದ ಶೋಷಣೆಯ ನೆಲೆ, ಅಸ್ಪಶ್ಯತೆಯನ್ನು ಮಾತ್ರವೇ ವಸ್ತುವಾಗಿಸಿಕೊಂಡು ಶೋಷಣೆಯನ್ನು ನಿರೂಪಿಸುವ ಕವಿತೆಗಳ ಪ್ರಮಾಣ ಅತ್ಯಲ್ಪವಾದರೂ ವ್ಯಾಪಕ ನೆಲೆಯಲ್ಲಿ ಶೋಷಣೆಯನ್ನು ಗ್ರಹಿಸುವಲ್ಲಿ ಮೂಲ ಅನುಭವ ದ್ರವ್ಯವಾಗಿರುವುದು ತಾನು ಕಂಡುಂಡ ಅಸ್ಪೃಶ್ಯತೆಯ ಲೋಕದ ಸಂವೇದನೆಯೆಂಬುದನ್ನು ಕವನ ಸಂಕಲನದ ಪ್ರತಿಯೊಂದು ಸಾಲಿನಲ್ಲೂ ಗಮನಿಸಬಹುದು. ಅಸ್ಪೃಶ್ಯತೆಯ ಭೀಕರ ಅನುಭವಗಳನ್ನೂ ಮೀರಿ ಶೋಷಣೆಯ ವ್ಯಾಪ್ತಿಯನ್ನು ಒಪ್ಪಿಕೊಂಡು ಇಡೀ ಲೋಕದ ನೋವನ್ನು ಪ್ರತಿನಿಧಿಸುವ ಹೊಣೆಯನ್ನು ಹೊತ್ತಿರುವುದು ಕವಿಯ ಮಾನವೀಯ ಮನೋಧರ್ಮಕ್ಕೆ ನಿದರ್ಶನ.

ಶೋಷಣೆಯ ಬೇರುಗಳನ್ನು ವಿವೇಕದಿಂದ ಶೋಧಿಸುವ ಕವಿ, ಧರ್ಮದ ವೃಕ್ಷದ ಬೇರುಗಳು ಶೋಷಣೆಯ ಮೂಲವಾಗಿರುವುದನ್ನು ಸೂಕ್ಷ್ಮವಾಗಿ ಗುರುತಿಸುತ್ತಾರೆ. ಧರ್ಮ ಮೂಲವಾಗಿ ವಿಸ್ತರಿಸಿಕೊಂಡಿರುವ ಶೋಷಣೆಯ ನೆಲೆಗಳನ್ನು ಬೆರಳುಮಾಡಿ ತೋರಿಸಿ ಯಾವುದನ್ನು ನಿರಾಕರಿಸುವುದರ ಮೂಲಕ, ನೈಜವಾದ ಸ್ವಾತಂತ್ರ್ಯ, ಸಮಾನತೆಗಳನ್ನು ಗಳಿಸಬಹುದೆನ್ನುವುದನ್ನು ಮನವರಿಕೆ ಮಾಡಿ ಕೊಡುತ್ತಾರೆ.

ಪರಂಪರೆ ಮತ್ತು ಹೊಲೆಮಾದಿಗರ ಹಾಡು ೧೦೭

ದೇವರುಗಳ ಪೂಜೆಯಲಿ ಗುರುವರರ ದಾಸ್ಯದಲ್ಲಿ
ಇಹಲೋಕಕೂ ಪರಲೋಕಕೂ ಸೇತುವೆಯನ್ನು ಕಟ್ಟಿ
ಪರಮಾತ್ಮನ ಪರದೆಯಲಿ ಜೀವಾತ್ಮನ ಕಬಳಿಸುವ
ಕಡುಜಾಣರ ಕೊಂದು ತಿಂದು ಅನ್ಯಾಯವ ಮೆಟ್ಟಿ (ಕ್ರಾಂತಿಪದ)

ಎಂದು ಗಮನ ಸೆಳೆಯುವ ಕವಿ ಜೀವದ ಬೇಟೆ ಎಂಬುದು ದುಡಿಯಲಾರದ ಕೆಲವು ಜಾಣರ ವ್ಯವಸ್ಥಿತ ಪಿತೂರಿ ಎಂದು ಹೇಳುತ್ತಾರೆ. ವಿವೇಕ ಶೂನ್ಯವಾದ ಧಾರ್ಮಿಕ ಶ್ರದ್ಧೆಯನ್ನು ತಮ್ಮ ಬಂಡವಾಳವಾಗಿಸಿಕೊಂಡು ಸಹ ಜೀವಿಗಳನ್ನು ಶೋಷಿಸುತ್ತಿರುವವರನ್ನು ನಿಗ್ರಹಿಸುವುದರ ಮೂಲಕ ಜೀವದ ಬೇಟೆಯ ಅನ್ಯಾಯವನ್ನು ಮೆಟ್ಟಿನಿಲ್ಲಲು

ಸಾಧ್ಯವೆಂದು ಭಾವಿಸುತ್ತಾರೆ. ಇಷ್ಟೇ ಅಲ್ಲದೆ ಇಲ್ಲಿನ ಮನಸ್ಸುಗಳನ್ನು ರೂಪಿಸುತ್ತಿರುವ ಪಾರಂಪರಿಕ ಮೌಲ್ಯಗಳನ್ನು ಪ್ರತಿಪಾದಿಸುವ

'ಕರ್ಮಕಥೆಯ ಚಾಟಿಯನು ಮುರಿದಿಕ್ಕುತ ಮುನ್ನಡೆದು

ಹಿಮ್ಮೆಟ್ಟಿಸಿ ಅಡ್ಡಬಂದ ಪಟ್ಟಭದ್ರ ಹಿತವ

ಗುರಿಯನ್ನು ತಲುಪಬಹುದು, ಎಂಬುದು ಕವಿಯ ಆಶಯವಾಗಿದೆ. ಆದರೆ ಇದು ಸರಳವಾಗಿ ಸಾಧ್ಯವಾಗಬಹುದಾದುದಲ್ಲ. ಆದರೆ ಬಹುಕಾಲದಿಂದ ಈ ಸ್ಥಿತಿ ಸನ್ನಿಹಿತವಾಗುವುದನ್ನು ಕಾಯಲಾಗುತ್ತಿದೆ.

ಈ ಕಾಯುವಿಕೆ ಅಂತ್ಯಗೊಳ್ಳಬೇಕಾದರೆ ನಮ್ಮ ನೆಲದ ಧಾರ್ಮಿಕ ನೆಲೆಗಳನ್ನು ಸೂಕ್ಷ್ಮವಾಗಿ ಶೋಧಿಸಿ ಸತ್ಯರೂಪಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವುದು ಬಹುಮುಖ್ಯವೆಂದು ಭಾವಿಸುವ ಕವಿ ಭಾರತದ ಧಾರ್ಮಿಕ ಸಂದರ್ಭದ ಟೊಳ್ಳುತನವನ್ನು ಅಥವಾ ಹುಸಿತನವನ್ನು ಪರಿಣಾಮಕಾರಿಯಾಗಿ ಮಂಡಿಸಿದ್ದಾರೆ. ಧಾರ್ಮಿಕ ಸಂಕೇತಗಳ ಅರ್ಥಹೀನತೆಯನ್ನು

ಸುಂಟರಗಾಳಿಗೆ ಸಿಕ್ಕಿ ಥರಥರಗುಡುವ

ಗುರುಮಠದ ಧ್ವಜದಲ್ಲಿ ಧರ್ಮವಿಲ್ಲ

ಮೂಳೆ ತುಂಬಿದ ಹಣೆಗೆ ಸೊಟ್ಟ ಸೊಟ್ಟಗೆ ಬಳಿದ

ನಾಮವಿಭೂತಿಯಲಿ ಧರ್ಮಿವಿಲ್ಲ (ಸುಂಟರಗಾಳಿ) ಎಂದು

ವಿವರಿಸುವ ಮೂಲಕ ಧರ್ಮ ಪ್ರಸಾರದ ಕೇಂದ್ರಗಳು ಸ್ವತಃ ಅಸ್ತಿತ್ವಕ್ಕಾಗಿ ಪರದಾಡುತ್ತಿದ್ದು ಅಲ್ಲಿ ಕಾಣಬಹುದಾದುದು ಅವಕಾಶವಾದಿತ್ವವೇ ಹೊರತು ಧರ್ಮವನ್ನಲ್ಲ ಎನ್ನುತ್ತಾರೆ. ಧರ್ಮ ಎನ್ನುವುದು ಸ್ವಾರ್ಥವೂ ಅಲ್ಲ, ಅಭದ್ರತೆಯೂ ಅಲ್ಲ. ಆದರೆ ಭಾರತದ ಸಂದರ್ಭದಲ್ಲಿ ಎಲ್ಲೆಲ್ಲೂ ಧರ್ಮದ ಅಪವ್ಯಾಖ್ಯಾನಗಳು ಮತ್ತು ಗ್ರಹಿಕೆಗಳು ವಿಜೃಂಭಿಸುತ್ತಿವೆ. ಭಾರತದ ಧರ್ಮದ ಸ್ವರೂಪವನ್ನು ಕಟ್ಟಿಕೊಡುವ ಕವಿ

ದಕ್ಷಿಣೆಯ ರುಚಿಯುಂಡು ಉಬ್ಬಿರುವ ಒಡಲಿನಲಿ

ಜುಟ್ಟು ಜನವಾರದಲಿ ಧರ್ಮವಿಲ್ಲ .

ದಾರ ರುದ್ರಾಕ್ಷಿಗಳ ಭಾರ ಜಿಗಿತಕೆ ಬೆದರಿ

ದೂರ ಸರಿಯುತಲಿಹುದು ನೈಜಧರ್ಮ

ಎಂದು ಹೇಳುತ್ತಾರೆ. ಧರ್ಮವನ್ನು ತಪ್ಪಾಗಿ ವ್ಯಾಖ್ಯಾನಿಸುವುದರಿಂದ ಒದಗಬಹುದಾದ ಲಾಭಗಳ ಆಸೆಯಿಂದ, ಧರ್ಮವನ್ನು ಡಾಂಭಿಕಗೊಳಿಸಿರುವ ಬಗೆಯನ್ನು ತೆರೆದಿಡುತ್ತಾರೆ. ಧರ್ಮದ ಈ ರೂಹು ಮಾನವೀಯತೆ ಆಶಯವನ್ನು ಯಾವ ವಿಧದಲ್ಲೂ ಪೋಷಿಸಲಾರದು. ಧರ್ಮದ ನೈಜವಾದ ಸ್ವರೂಪ ಏನಿರಬಹುದು? ಎಂದು ಯೋಚಿಸುವ ಕವಿ ಧರ್ಮ ಮಾನವೀಯತೆಯ ಅಡಿಪಾಯದ ಮೇಲೆ ನಿಂತಿರುತ್ತದೆ ಎಂಬುದನ್ನು -

ಒಂದೊಂದು ಜೀವದಲಿ ಎದೆಯಂತರಾಳದಲಿ

ಅಡಗಿಹುದು ಪರಿಶುದ್ಧ ಧರ್ಮ ಸತ್ವ

ಮಾನವತೆಗಾಪತ್ತು ಬಂದೊಡನೆ ಸಿಡಿದೆದ್ದು

ರಕ್ಷಣೆಗೆ ನಿಲ್ಲುವುದು ಯೋಧನಂತೆ- ಎನ್ನುತ್ತಾರೆ.

ಮಾನವೀಯತೆಯನ್ನು ರಕ್ಷಿಸಲು ಮುಂದಾಗುವ ವ್ಯಕ್ತಿತ್ವದಲ್ಲಿ ನಿಜವಾದ ಧರ್ಮದ ಅಸ್ತಿತ್ವವನ್ನು ಕಾಣಬಹುದೆಂಬುದು ಕವಿಯ ನಿಲುವು. ಈ ಬಗೆಯ ನಿಲುವನ್ನು ಪ್ರತಿಪಾದಿಸುವುದು ಧರ್ಮದ ಗುರಿಯಾದಾಗ ಮನುಷ್ಯ ಸಂಬಂಧಗಳು ಗೋಡೆಗಳನ್ನು ಧ್ವಂಸಗೊಳಿಸಿ ಗಟ್ಟಿಯಾಗಬಲ್ಲುವು.

ಧರ್ಮವನ್ನು ಕುರಿತ ಈ ಭಾವ ಅಥವಾ ಅರಿವು ಬಲಿತಾಗ ಧರ್ಮ ದೇವರುಗಳ ಸ್ಥಾವರಗಳಾಗಿ ಬಿಂಬಿಸಲ್ಪಡುತ್ತಿರುವ

'ಧರ್ಮ ಗುರುವಿನ ಪೀಠ ಮುಗ್ಗರಿಸಿ ಮುರಿದಿತ್ತು

ದೈವಗುಡಿ ಜನರಮನೆ ಆಗುತ್ತಿತ್ತು (ಭವಿಷದ್ಗೀತೆ)

ಕನಸೊಂದು ನನಸಾಗಿ ಕ್ರಾಂತಿಬೆಳೆ ಹುಲುಸಾಗಿ

ಬೆಳೆವುದೆನ್ನುವ ಆಸೆ ಮೂಡುತ್ತಿತ್ತು' ಎಂದು ಕವಿ ಭರವಸೆಯ ಮಾತುಗಳನ್ನು ಆಡುತ್ತಾರೆ.

ಸಿದ್ಧಲಿಂಗಯ್ಯನವರ ಧರ್ಮ ಗ್ರಹಿಕೆಯ ಸ್ವರೂಪವು ಕುತೂಹಲಕಾರಿಯಾದುದು. ವಾಸ್ತವದ ಅರಿವು ಧರ್ಮದ ನೈಜತೆಯನ್ನು ಅರ್ಥ ಮಾಡಿಕೊಳ್ಳಲು ಸಾಧನವಾದಾಗ ಸಾಧ್ಯವಾಗಬಹುದಾದ ವೈಚಾರಿಕತೆ ಪ್ರಖರವಾದುದಾಗಿರುತ್ತದೆ. ಧರ್ಮವನ್ನು ಕುರಿತ ಎಲ್ಲ ವ್ಯಾಖ್ಯಾನಗಳು ಧರ್ಮದ ಮತ್ತು ದೈವದ ಹಿರಿಮೆಯನ್ನು ಕುರಿತ ಎಲ್ಲ ಸಂಕಥನಗಳು ಅತಾರ್ಕಿಕತೆಯನ್ನು ಒಳಗೊಂಡಿರುವುದು ಗೋಚರವಾಗುತ್ತದೆ.

ಅಂಬೇಡ್ಕರರ ಜೀವನ ಸಾಧನೆಗಳನ್ನು ವಾಸ್ತವದ ನೆಲೆಗಟ್ಟಿನಲ್ಲಿ ಕಟ್ಟಿಕೊಡುವ 'ಅಂಬೇಡ್ಕರ್' ಕವಿತೆಯು ಈ ಶತಮಾನದ ಅದ್ಭುತವಾದ ನುಡಿಚಿತ್ರಗಳಲ್ಲಿ ಒಂದು. ಅಂಬೇಡ್ಕರ್ ವ್ಯಕ್ತಿತ್ವವನ್ನು ಪೂರ್ವಗ್ರಹ ರಹಿತವಾಗಿ

ಮಂಡಿಸುವ ಡಾ.ಸಿದ್ಧಲಿಂಗಯ್ಯನವರು ಕುರುಡು ಆರಾಧನಾ ಭಾವಕ್ಕೆ ವಿಮುಖರಾಗಿ ದಲಿತ ಬದುಕು ಮತ್ತು ಭಾರತದ ಪರಿವರ್ತನೆಯ ಚಳುವಳಿಯಲ್ಲಿ ಅಂಬೇಡ್ಕರ್‌ರವರ ಮಹತ್ವವನ್ನು ಪರಿಣಾಮಕಾರಿಯಾದ ಉಪಮೆ, ರೂಪಕಗಳ ಮೂಲಕ ಮನವರಿಕೆ ಮಾಡಿಕೊಡುತ್ತಾರೆ. ಅಂಬೇಡ್ಕರ್ ಮಹತ್ವವನ್ನು ವಿಮರ್ಶಾತ್ಮಕವಾಗಿ ಮಂಡಿಸುತ್ತಾ ದಲಿತರ ಬದುಕುಗಳಲ್ಲಿನ ಅವರ



ಪಾತ್ರವನ್ನು ಕುರುಡು ಅಭಿಮಾನದಿಂದಲ್ಲದೇ ಸಕಾರಣವಾಗಿ ಪ್ರತಿಪಾದಿಸುತ್ತಾರೆ. ಭಾರತದ ಸಂಸ್ಕೃತಿಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ನೆರವಾದ ತಮ್ಮ ಗ್ರಹಿಕೆಗಳ ಮೂಲಕವೇ ಅಂಬೇಡ್ಕರ್ ರವರನ್ನು ಮುಖಾಮುಖಿಯಾಗುವ ಕವಿ ಎಷ್ಟೆಲ್ಲ ಹೋರಾಟದ ನಂತರವೂ ಅಂಬೇಡ್ಕರ್‌ರವರು ನಿರೀಕ್ಷಿಸಿದ್ದ ಸಾಫಲ್ಯತೆಯು ಪೂರ್ಣಪ್ರಮಾಣದಲ್ಲಿ ಸಾಧ್ಯವಾಗದೇ ಇರುವುದರ ಬಗೆಗೂ ಆಲೋಚಿಸುತ್ತಾರೆ. ಬಿಡುಗಡೆಯ ಪ್ರಯತ್ನದಲ್ಲಿ ಧರ್ಮ ಒಂದು ತೊಡಕು ಹಾಗೂ ಪರಂಪರೆಯ ರಕ್ಷಕ ಎಂಬುದನ್ನು ಅನುಭವದ ಮೂಲಕ ತಿಳಿದಿರುವ ಕವಿ ಧರ್ಮದ ಯಾವ ಪ್ರಮೇಯವೂ ಜೀವಪರತೆಯನ್ನು ಎತ್ತಿಹಿಡಿದು ಯಶಸ್ಸಿನತ್ತ ಕೊಂಡೊಯ್ಯಲಾರದು ಎಂದು ನಂಬಿರುವುದರಿಂದ ಅವರಿಗೆ ಧರ್ಮವೆಂಬುದು ಮುನುಷ್ಯನನ್ನು ಬಂಧಿಸುವ ಕೋಳವಾಗಿ ಮಾತ್ರ ಕಾಣಿಸುತ್ತದೆ. ಆದ್ದರಿಂದಲೇ ಅಂಬೇಡ್ಕರ್‌ರವರ ಸಾಧನೆಗಳ ಬಗೆಗೆ ಅಪಾರ ಗೌರವವನ್ನು ಹೊಂದಿದ್ದೂ ಧರ್ಮಕ್ಕೆ ಸಂಬಂಧಿಸಿದಂತೆ ಅವರು ತೆಗೆದುಕೊಂಡ ನಿಲುವಿನ ಬಗೆಗೆ ತಮ್ಮ ಅಭಿಮತವನ್ನು

ಕಪ್ಪುಕ್ಕಿನ ಕೊಳಗಳನ್ನು
ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೊಕ್ಕ
ಮಹಾಬೌದ್ಧ ಭಿಕ್ಷುವೆ (ಅಂಬೇಡ್ಕರ್)
ಎಂದು ವ್ಯಕ್ತಪಡಿಸಿದ್ದಾರೆ.

ಇಲ್ಲಿ ಕಪ್ಪುಕ್ಕಿನ ಕೋಳ ಎಂಬುದು ಹಿಂದೂಧರ್ಮ, ಬಂಗಾರದ ಕೋಳ ಬೌದ್ಧ ಧರ್ಮವಾಗಿದೆ. ಲೋಹ ಯಾವುದಾದರೇನು ಕೋಳಗಳು ಮಾಡುವ ಕೆಲಸ ಒಂದೇ, ಕೋಳಗಳನ್ನು ಬಂಧಿಸುವ ಸಾಧನಗಳಾಗಿ ಬಳಸಲಾಗುತ್ತದೆ. ಧರ್ಮವೆಂಬುದು ಭಾರತದಲ್ಲಿ ಶೋಷಣೆಯನ್ನು ವಿಸ್ತರಿಸುವ, ಅಮೂರ್ತವಾಗಿ ನಿಯಂತ್ರಣವನ್ನು ಸಾಧಿಸುವ ಕೋಳವೇ ಹೌದು! ಧರ್ಮವನ್ನು ಕುರಿತು ಸಿದ್ಧಲಿಂಗಯ್ಯನವರಿಗೆ ಸ್ಪಷ್ಟತೆ ಇದೆ. ಧರ್ಮ ಎಂದೂ

ಶೋಷಿತ ಮನುಷ್ಯನ ಆಶಯಗಳನ್ನು ಎತ್ತಿ ಹಿಡಿಯಲಾರದು. ಧರ್ಮವೆಂಬುದು ಬಂಡವಾಳಶಾಹಿಗಳ ಅನುಕೂಲ ಸಿಂಧುವಾದ ಆಯುಧವಷ್ಟೇ, ಹೋರಾಟದಲ್ಲಿ, ಬದಲಾವಣೆಯ ಚಳುವಳಿಯಲ್ಲಿ ಧರ್ಮಕ್ಕೆ ಯಾವ ಆದ್ಯತೆಯೂ ಸಲ್ಲಲಾರದು ಎಂಬುದು ಸಿದ್ಧಲಿಂಗಯ್ಯನವರ ಅನುಭವವಾಗಿದ್ದು ಈ ಕವನಸಂಕಲನದ ಬಹುತೇಕ ಕವನಗಳಲ್ಲಿ ಧರ್ಮವನ್ನು ಕುರಿತ ಅವರ ಅರಿವು ದಾಖಲಾಗಿರುವುದು ಕಂಡು ಬರುತ್ತದೆ. ಆದ್ದರಿಂದಲೇ ಧರ್ಮದ ಬಗೆಗಿನ ಅಂಬೇಡ್ಕರ್‌ರ ಒಲವು ಸಿದ್ಧಲಿಂಗಯ್ಯನವರಿಗೆ ಒಪ್ಪಿತವಾಗಿಲ್ಲವೆಂಬುದನ್ನು ಪ್ರಾಮಾಣಿಕವಾಗಿ ಮಂಡಿಸುವ ಮೂಲಕ ವ್ಯಕ್ತಿತ್ವಗಳ ತೀರ್ಮಾನಗಳ ಬಗೆಗೆ ನಮಗಿರಬಹುದಾದ ಭಿನ್ನಮತ ವ್ಯಕ್ತಿತ್ವಕ್ಕೆ ತೋರುವ ಅಗೌರವವಲ್ಲ; ಪ್ರಾಮಾಣಿಕ ಅನಿಸಿಕೆಯು ಎಂದೂ ಅನಿಯಂತ್ರಿತವಾಗಿರ ಬೇಕೆನ್ನುವುದಕ್ಕೆ ನಿದರ್ಶನವಾಗುತ್ತಾರೆ.

ಧರ್ಮವೆಂಬುದು ಭಾರತದಲ್ಲಿ ರಾಜಕೀಯ ನಿಲುವೇ ಹೊರತು ಆಧ್ಯಾತ್ಮಿಕ ನಿಲುವಲ್ಲ, ಹೋರಾಟದ ಸಂದರ್ಭದಲ್ಲಿ ಸಮಾನತೆಯ ಅಪೇಕ್ಷೆಯನ್ನು ಸಾಧಿಸಬೇಕೆನ್ನುವ



ಗುರಿಯೆಡೆಗಿನ ಪಯಣದಲ್ಲಿ ಧರ್ಮದ ರಾಜಕೀಯ ಆಯಾಮವನ್ನು ಗಮನಿಸಲೇಬೇಕಾದುದು ಅನಿವಾರ್ಯ, ಆದರೆ ಅಂಬೇಡ್ಕ ಧರ್ಮವನ್ನು ಆಧ್ಯಾತ್ಮಿಕ ಅಗತ್ಯವಾಗಿ ಪರಿಭಾವಿಸುವುದರಿಂದ, ಆಧ್ಯಾತ್ಮಿಕ ಮಹತ್ತನ್ನು ಜಾಗತಿಕ ಸಂದರ್ಭದ ಧರ್ಮಗಳಲ್ಲಿ ಪರಿಶೀಲಿಸಿದಾಗ ಬೌದ್ಧಧರ್ಮ ವಂಚನೆಯರಿಯದ ದ್ವೇಷರಹಿತವಾದ, ಸೌಹಾರ್ದತೆಯನ್ನು ವಿಸ್ತರಿಸುವ ಆಯಾಮಗಳನ್ನು ಒಳಗೊಂಡಿರುವುದನ್ನು ಗ್ರಹಿಸಿ ಭಾರತದ ಅಸ್ಪೃಶ್ಯ ಸಮುದಾಯಗಳ ಮಾನಸಿಕ ನೆಮ್ಮದಿಗೆ ಪೂರಕವಾಗಬಹುದಾದ ಆಧ್ಯಾತ್ಮಿಕ ಅಗತ್ಯವಾಗಿ ಬೌದ್ಧಧರ್ಮವನ್ನು ಸ್ವೀಕರಿಸಿದರು. ಹಿಂದೂಧರ್ಮ ಸಂರಚನೆಗೆ ಇದರಿಂದ ತೀವ್ರವಾದ ಆಘಾತವಾಗುವುದು ಅಸಂಭವವಾದುದರಿಂದ ಅಂಬೇಡ್ಕರ್ ಆರಂಭಿಸಿದ ಬಿಡುಗಡೆಯ ಹೋರಾಟ ಸಾಫಲ್ಯದ ಗುರಿಯನ್ನು ತಲುಪುವುದು ತಡವಾಗಿದೆ. ಕವಿಯ ಕ್ರಾಂತಿಕಾರಿ ಮನಸ್ಸು ಬಿಡುಗಡೆಯ ತೀವ್ರತೆಯ ಭಾವವನ್ನು ಬದುಕುತ್ತಿರುವುದರಿಂದ ಧರ್ಮವನ್ನು ಕುರಿತ ಅಂಬೇಡ್ಕರ್ ರವರ ನಿಲುವಿನ ಬಗೆಗೆ ರಾಜಕೀಯ ಮತ್ತು ಸಾಮಾಜಿಕ ನೆಲೆಗಳಲ್ಲಿ ಯೋಚಿಸುವುದರಿಂದ ಭಿನ್ನಮತ ಕಂಡು ಬರುತ್ತದೆ. ಆಧ್ಯಾತ್ಮಿಕ ಸಾಧ್ಯತೆಯಾಗಿ ಬೌದ್ಧಧರ್ಮದ ಬಗೆಗೆ ಯಾರಿಗೂ ಆಕ್ಷೇಪಗಳು ಇರಲು ಸಾಧ್ಯವಿಲ್ಲ, ಕವಿಯೂ ಇದಕ್ಕೆ ಹೊರತಾಗಿಲ್ಲ.

ಅಂಬೇಡ್ಕರ್ ರವರು ಕೈಗೆತ್ತಿಕೊಂಡ ದಲಿತರನ್ನು ಸ್ವತಂತ್ರಗೊಳಿಸುವ ಪ್ರಕ್ರಿಯೆ ಅಂಬೇಡ್ಕರ್ ರವರ ನಂತರದ ದಿನಗಳಲ್ಲಿ ಸ್ಥಗಿತಗೊಂಡಿರುವುದನ್ನು, ಈ ಕಾರ್ಯ ಅಂಬೇಡ್ಕರ್ ರವರ ವ್ಯಕ್ತಿತ್ವಕ್ಕೆ ಮಾತ್ರವೇ ಸಾಧ್ಯವಾಗಬಹುದಾದುದು, ಅಂಬೇಡ್ಕ ಅವರ ಬದ್ಧತೆ ಅವರಿಗೇ ಅನನ್ಯವಾದುದು ಎಂಬುದನ್ನು ಸಾರುವ,

ಮಲಗಿದವರ ಕೂರಿಸಿದೆ

ನಿಲಿಸುವವರು ಯಾರೂ

ಛಲದ ಜೊತೆಗೆ ಬಲದ ಪಾಠ

ಕಲಿಸುವವರು ಯಾರೋ-

ಎಂಬ ಸಾಲುಗಳ ಮೂಲಕ ಅಂಬೇಡ್ಕರ್‌ರವರು ಸಾಧಿಸಲು ಯತ್ನಿಸಿದ ಕಾರ್ಯದ ಮಹತ್ವವನ್ನು ಎತ್ತಿ ತೋರಿಸುವ ಕವಿ ಅಂಬೇಡ್ಕರ್‌ರವರ ವ್ಯಕ್ತಿತ್ವವನ್ನು ಸರಿಗಟ್ಟುವ ಮತ್ತೊಂದು ವ್ಯಕ್ತಿತ್ವದ ನಿರೀಕ್ಷೆ ಸಧ್ಯಕ್ಕೆ ಸಾಧ್ಯವೇ ಇಲ್ಲವೇನೋ ಎಂಬುದನ್ನು ಒಪ್ಪುತ್ತಾರೆ.

ಅಂಬೇಡ್ಕರ್‌ರವರ ವಿದ್ವತ್ತು, ಪ್ರೌಢಿಮೆ, ಬದ್ಧತೆಗಳು ಸಮುದಾಯವನ್ನು ಕುರಿತ ಅಭಿಮಾನವಾಗಿ ಪ್ರವಹಿಸಿದ್ದರಿಂದಲೇ, ಭರವಸೆ ರಹಿತ ಸ್ಥಿತಿಯಲ್ಲಿ, ನೈರಾಶ್ಯದಲ್ಲಿ, ನೋವು - ಅಪಮಾನಗಳನ್ನು ಸಹಿಸಿಕೊಂಡಿದ್ದ ಜನಮಾನಸದಲ್ಲಿ ನಿರೀಕ್ಷೆಗಳು ಮೂಡಲು ಸಾಧ್ಯವಾಯಿತು ಆದರೆ ಹಿಂದೂಮತೀಯ ಮನಸ್ಸಿನ ಭಾರತ, ಜಾತಿಮೂಲವಾದ ಅಸಮಾನತೆಯ ರೂಢಿಗಳನ್ನು ಸುಲಭವಾಗಿ ಬಿಡುವುದು ಸಾಧ್ಯವೇ ? ಆದ್ದರಿಂದಲೇ ಬಾಬಾ ಸಾಹೇಬರು



*ಅಭಿಮಾನದ ನೇಗಿಲಿಂದ

ಬಂಜರು ನೆಲ' ಉತ್ತರೂ

ಪಾತಿ ಮಾಡಿ ನಾಟಿ ಹಾಕಿದರೂ-

ನಿರೀಕ್ಷಿತ ಪ್ರಮಾಣದಲ್ಲಿ ಬೆಳೆಯನ್ನು ಬೆಳೆಯಲು ಸಾಧ್ಯವಾಗದಂತೆ ನೋಡಿಕೊಳ್ಳುವಲ್ಲಿ ಇಲ್ಲಿನ ಪುರೋಹಿತಶಾಹಿ ಸಕ್ರಿಯವಾಗಿದೆ.

ಈ ನೆಲದ ಪುರೋಹಿತಶಾಹಿಯ ಪ್ರಬಲ ಅಸ್ತ್ರವಾಗಿ ಧರ್ಮ ಬಳಕೆಯಾಗುತ್ತಿದೆ. ಧರ್ಮದ ಅಸ್ತ್ರವನ್ನು ಮುಖಾಮುಖಿಯಾಗಲು ಅಂಬೇಡ್ಕರ್‌ರವರು ಮತ್ತೊಂದು ಧರ್ಮವನ್ನು ಅಸ್ತ್ರವಾಗಿ ಬಳಸಬಹುದೆಂದು ಭಾವಿಸುತ್ತಾರೆ. ಭಾರತದ ಪುರೋಹಿತಶಾಹಿಗಳ ಕೈಯಲ್ಲಿರುವುದು ಅವಕಾಶ ವಾದಿತ್ವವನ್ನು ವಿಸ್ತರಿಸುವ ಅಸ್ತ್ರ, ಪ್ರತಿಯಾಗಿ ಅಂಬೇಡ್ಕರ್‌ರವರು ಬಳಸ ಬಯಸಿದ್ದು ಮಾನಸಿಕ ಔನ್ನತ್ಯಕ್ಕೆ ಪೂರಕವಾಗುವ ಆಧ್ಯಾತ್ಮಿಕತೆಯನ್ನು ವಿಸ್ತರಿಸುವ ಅಸ್ತ್ರ.

ಪ್ರಜಾಪ್ರಭುತ್ವದ ವ್ಯಾಪ್ತಿಯಲ್ಲಿ ಶೋಷಣೆಯ ಅಂತ್ಯವನ್ನು ಕಾಣಲು ಸಾದ್ಯವಾಗಬಹುದೇ ಎಂಬುದರ ಬಗೆಗೆ ಕವಿಗೆ ಅನೇಕ ಸಂದೇಹಗಳಿವೆ. ಪ್ರಜಾಪ್ರಭುತ್ವ ಮನುಷ್ಯನ ಶೋಷಿತ ಸ್ಥಿತಿಗೆ, ಅಪಮಾಣಕ್ಕೆ ಕಾರಣವಾಗಿರಬಹುದಾದ ಧಾಮಿಕ ಶ್ರದ್ಧೆಗೆ ಸಂಬಂಧಿಸಿದಂತೆ ನಿಷೇಧಾತ್ಮಕ ನಿಲುವನ್ನು ತಳೆಯದೇ ಇರುವುದು ಈ ಸಂದೇಹದ ಕಾರಣಗಳಲ್ಲಿ ಒಂದಾಗಿರಬಹುದು. ಮನುಷ್ಯನ ಸಮಾನತೆಯ ಆಶಯಗಳನ್ನು ಸಾಧ್ಯವಾಗಿಸುವ ಧೈಯವನ್ನು ಹೊಂದಿ ಪ್ರತಿಪಾದಿತವಾಗಿರುವ ಮಾರ್ಕ್ಸ್‌ವಾದದಲ್ಲಿ ಧರ್ಮಕ್ಕೆ ಅಗ್ರಗಣ್ಯವಾದ ಸ್ಥಾನವನ್ನು ನೀಡಿಲ್ಲ; ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ.

ಭಾರತದ ಬಹುತೇಕ ಅಮಾನವೀಯತೆ, ಅಪಮಾನ, ಶೋಷಣೆಗಳ ಮೂಲವಾಗಿರುವ ಧರ್ಮವನ್ನು ಅಮುಖ್ಯಗೊಳಿಸುವ ಮೂಲಕ ಸಮಾನತೆಯನ್ನು ಸಾಧಿಸಬಹುದೆನ್ನುವ ಭರವಸೆಯನ್ನು ಹೊಂದಿರುವ ಈ ಸಂಕಲನದ ಕವಿ

"ಎಲ್ಲಾನ ಕೆಂಪಟ್ಟೆ ಕೆಂಪ್ ನ್ಯಲಡೆ ನನ್ಯಸುದ್ದುಡಿ

ನಾ ಬದಿಕತ್ತಿನಿ ಸರಿಯಾಗುಸ್ರಾಡ್ತಿನಿ' (ಗಳಗಳು)- ಎನ್ನುವ ಮೂಲಕ ಭಾರತೀಯ ಸಂದರ್ಭದ ಶೋಷಣೆಯ ಅಂತ್ಯವಿರುವುದು ಮಾರ್ಕ್ಸ್‌ವಾದದ ಕಠಿಣ ನಿಲುವುಗಳಲ್ಲಿ ಎಂದು ನಂಬುತ್ತಾರೆ.

ಸುಲ್ಲೆ ಮಾಡೋ ಮೋಸಗಾರ

ಬಡ್ಡಿಮಕ್ಕಳ ಕ್ರಾಂತಿಕಾರಿಗಳ ಕೋರ್ಟಿಗಳೀತೀನಿ

ಮಾರ್ಕ್ಸ್‌ನಿಂದ ಜಡ್ಜ್‌ಮೆಂಟ್ ಕೊಡುಸ್ತೀನಿ

ಅವುರ್ಗೆ ಫಾಸಿ ಆಯ್ತದೆ

ತಾತಾ ಮುತ್ತಾತನ ಕಾಲ್ಲಿಂದ ಜೀವತೇದೋರು

ಕೋರ್ಟ್ನಂಗಳದ ತುಂಬ ನಿಂತ್ಕಂಡು

ಕ್ಯಾಕಾ ಹಾಕಿ ಕುಣೀತವರೇ

ಎನ್ನುವ ಮೂಲಕ ಮಾರ್ಕ್ಸ್ ಚಿಂತನೆಗಳನ್ನು ಮಾನದಂಡವಾಗಿ ಹೊಂದಿರುವ ವ್ಯವಸ್ಥೆಯಲ್ಲಿ ನ್ಯಾಯಾಂಗವು ಪ್ರಬಲವಾಗಿರುತ್ತದೆ. ನಿಜವಾದ ಅಪರಾಧಿಗಳಿಗೆ ಅಥವಾ ಶೋಷಕರಿಗೆ ಶಿಕ್ಷೆಯಾಗುತ್ತದೆ. ಇದರಿಂದ ಕಾಲಕಾಲಗಳಿಂದ ತಿಂದ ನೋವಿಗೆ ಅಂತ್ಯವನ್ನು ಕಾಣಿಸಬಹುದು ಎಂಬ ಮಾತುಗಳು ಮಾರ್ಕ್ಸವಾದಿ ಮಾದರಿಯಲ್ಲಿ ಬಂಡವಾಳಶಾಹಿಗಳಿಗೆ ಅರ್ಥಾತ್ ಶೋಷಕರಿಗೆ, ಯಾವುದೇ ಪ್ರಾಧಾನ್ಯತೆ ಇಲ್ಲದೆ ಬಡವರ ಪರವಾದ ಮತ್ತು ಸಮಾನತೆಯ ಪರವಾದ ಆಶಯಗಳು ಮಾತ್ರ ಪ್ರಧಾನವಾಗಿರುವುದರಿಂದ ಶೋಷಿತರಿಗೆ ಮುಕ್ತಿ ಸಿಗಬಹುದೆಂಬ, ನ್ಯಾಯ ಸಿಗಬಹುದೆಂಬ ಭಾವ ಪ್ರಬಲವಾಗಿದೆ. ಆದ್ದರಿಂದಲೇ ಮಾರ್ಕ್ಸ್‌ವಾದಿ ವ್ಯವಸ್ಥೆಯಲ್ಲಿ ಮಾತ್ರ ಬಡವರು ಸಂತೋಷವನ್ನು ಕಾಣಲು ಸಾಧ್ಯವಾಗುತ್ತದೆ ಎಂದು ನಂಬುತ್ತಾರೆ.

ಬದಲಾವಣೆಯ ತೀವ್ರತೆಯನ್ನು ಆಶಿಸುವ ಮನಸ್ಸಿಗೆ ಮಾರ್ಕ್ಸವಾದ ಪರಿಣಾಮಕಾರಿಯಾದ ಸಾಧ್ಯತೆಗಳಲ್ಲಿ ಒಂದಾಗಿ ಕಾಣುತ್ತದೆ. ದೈನಂದಿನ, ಪ್ರತಿಕ್ಷಣದ ಜೀವನ ದರ್ಶನ ಈ ಭಾವ ತೀವ್ರತೆಯನ್ನು ಪೋಷಿಸುತ್ತದೆ.

ಎಣ್ಣೆ ಕಾಣದ ತಲೆಯ ಕೂದಲುಗಳೆದ್ದೆದ್ದು
ನರ್ತನವ ಗೈಯುತಿರೆ ಮೋದದಿಂದ
ಬರಿಹೊಟ್ಟೆ ಕೊರಗಿತ್ತು ಕೊಳೆ ಬಟ್ಟೆ ಹರಿದಿತ್ತು
ಪ್ರೇತಕಳೆ ಚಿಮ್ಮಿತ್ತು ವದನದಿಂದ (ಬೀಳು)

ಹರಿದ ಸೀರೆಯ ಅಂಚು ಸುಳಿವ ಗಾಳಿಗೆ ಹಾರಿ
ಅಡಗಿದ್ದ ತೊಡೆಗಳನ್ನು ತೋರುತ್ತಿತ್ತು
ಚಿಂದಿ ಕುಬುಸವು ತನ್ನ ಒಲವು ಬಂದೆಡೆ ತೂರಿ
ವಕ್ಷಗಳ ದರ್ಶನವ ಮಾಡಿಸಿತ್ತು -

ಈ ಚಿತ್ರ ಬಡವರ ಮನೆಯ ಹೆಣ್ಣಿನ ಅಸಹಾಯಕತೆ ಎಂದು ಭಾವಿಸಿದರೆ, ಹೌದು! ಆದರೆ ಬಡಹೆಣ್ಣಿನ ಚಿತ್ರವಷ್ಟೇ ಅಲ್ಲ ಬಂಡವಾಳಶಾಹಿಗಳ ಅಧೀನಕ್ಕೊಳಪಟ್ಟ ಭಾರತಾಂಬೆಯ ಸ್ಥಿತಿಯೂ ಹೌದು! ಆದ್ದರಿಂದಲೇ

ಕಗೋಳು ಕೊನೆಗೊಂಡು ಬಾಳಿಗೊಳಿತೊದಗುವುದು
ಎಂಬಾಸೆ ಕಣ್ಣಿನಲಿ ಮಿನುಗುತಿತ್ತು

ಉಮ್ಮಳವನದು ಮಿಟ್ಟ ನೀರಿಲ್ಲದಾ ನೋಟ

ಬಾಳುವೆಗೆ ಧಿಕ್ಕಾರ ಎನ್ನುತ್ತಿತ್ತು. (ಬೀಳು)

ಬದುಕಿಗೆ ಒದಗಿದ ಗೋಳು ಕೊನೆಗಾಣಬಹುದೆಂಬುವ ನಿರೀಕ್ಷೆಯನ್ನು ಕಣ್ಣಲ್ಲಿ ತುಂಬಿ ನಿಂತ ಈಕೆ ಕಣ್ಣ ನೀರಾಗಿ ಹರಿದು ಹೋಗುತ್ತಿದ್ದ ತನ್ನೆಲ್ಲ ಸಂಕಟವನ್ನು ನಿಯಂತ್ರಿಸಿಕೊಂಡು ಈ ಬಗೆಯ ಹೀನಾಯ ಬದುಕಿಗೆ ಕಣ್ಣನೋಟದಲ್ಲೇ ಧಿಕ್ಕಾರವನ್ನು ಹಾಕುತ್ತಾಳೆ. ಬದಲಾವಣೆಯನ್ನು ಶೋಷಿತರ ಭಾರತ ಬಹು ನಿರೀಕ್ಷೆಯಿಂದ ಎದುರು ನೋಡುತ್ತಿದೆ. ಪ್ರತಿಭಟಿಸುವುದರಿಂದ ಹೋರಾಟಕ್ಕೆ ತೊಡಗಿಕೊಳ್ಳುವುದರಿಂದ ಮಾತ್ರ ನಿರೀಕ್ಷೆಯನ್ನು ಸಾಧಿಸಬಹುದೆಂಬ ಅರಿವನ್ನು ಪಡೆದುಕೊಂಡಿದೆ.



ಬದುಕೆಂಬ ವಾಸ್ತವಕ್ಕೆ ಅನೇಕ ಆಯಾಮಗಳು, ಮುಖಗಳು ಇವೆ. ಅವರವರ ಸಂಸ್ಕಾರಗಳಿಗೆ, ಅನುಕೂಲಗಳಿಗೆ ಅನುಗುಣವಾಗಿ ಬದುಕಿನ ಯಾವುದೋ ಒಂದು ಆಯಾಮವೇ ಅಂತಿಮ ಎನ್ನುವಂತೆ ಕಾಣುತ್ತದೆ. ಅಂಥವರು ಬಹಳ ಸರಳವಾಗಿ ಪ್ರತಿಯೊಬ್ಬರಿಗೂ, ಪ್ರತಿಯೊಂದು ಸಮುದಾಯಕ್ಕೆ ಅವರವರದೇ ಆದ ನೋವುಗಳಿರುತ್ತವೆ. ಒಬ್ಬರ ನೋವು ಮಾತ್ರವೇ ದೊಡ್ಡದಲ್ಲ ಎಂದೂ ಭಾವಿಸುತ್ತಾರೆ. ಸಾಹಿತ್ಯದಲ್ಲಿ ಬದುಕಿನ ಸಾಮಾಜಿಕ ಅಥವಾ ಸಾಮುದಾಯಿಕ ಸ್ತರದ ನೋವಿನ ಚಿತ್ರಣವನ್ನು ತರುವುದನ್ನು ವಿರೋಧಿಸುತ್ತಾರೆ.

ಸಾಹಿತ್ಯ ಬಯಸುವುದು ಪ್ರಧಾನವಾಗಿ ಸ್ವಾನುಭವವನ್ನು, ಸ್ವಾನುಭವವನ್ನು ಅವಲಂಬಿಸಿ ಸೃಷ್ಟಿಯಾಗಿರುವ ಸೃಜನಶೀಲ ಸಾಹಿತ್ಯ ಸಹಜವಾಗಿ ಮಾನ್ಯತೆಯನ್ನು ಪಡೆಯುತ್ತದೆ ಎಂಬುದು ಸಾಹಿತ್ಯ ಮೀಮಾಂಸಕರು ಹೇಳುವ ಮಾತು ಈ ಕವಿಯ ಸ್ವಾನುಭವ ಸಾಮಾಜಿಕ ಮತ್ತು ಸಾಮುದಾಯಿಕ ನೆಲೆಗೆ ಸಂಬಂಧಿಸಿದ್ದು ಅಲ್ಲಿ ಪ್ರಧಾನವಾಗಿರುವುದು ಹಸಿವು, ಅಸಮಾನತೆ, ಅಪಮಾನ ಮೊದಲಾದ ನೋವಿನ ಸಂಗತಿಗಳು ಈ ಕವಿ ಇವುಗಳನ್ನು ಮಾತ್ರವೇ ಸಹೃದಯನಿಗೆ ಹೃದಯ ಸಂವಾದ ಉಂಟಾಗುವಂತೆ ನಿರೂಪಿಸಬಲ್ಲ. ತನ್ನ ಅನುಭವಕ್ಕೆ ಅನ್ಯವಾದ ಸಿರಿವಂತಿಕೆಯನ್ನು ನಿರೂಪಿಸಲು ಹೊರಟರೆ ಅಪದ್ಧಗಳನ್ನು ಹೇಳಬೇಕಾಗಿ ಅಸಹಜತೆಯ ದೋಷವನ್ನು ಕೃತಿಯಲ್ಲಿ ಕಾಣಬೇಕಾಗುತ್ತದೆ.

ಕಾವ್ಯದ ಮೂಲಭೂತ ಪಾಠಗಳ ಬಗೆಗೆ ಅರಿವನ್ನು ಹೊಂದಿರುವ ಕವಿ ತನಗೆ ಸ್ವಕೀಯವಾದ ಅನುಭವಗಳನ್ನು ತಮ್ಮ ಸೃಜನಶೀಲತೆಯ ಸೃಷ್ಟಿಗೆ ಬಳಸಿಕೊಂಡಿದ್ದಾರೆ. 'ಮಸಣದ ಚೆಲುವೆ' ಎನ್ನುವ ಕವಿತೆಯಲ್ಲಿ ಕಾವ್ಯಾಭಿವ್ಯಕ್ತಿಗೆ ಆಸರೆಯೊದಗಿಸಿದ ಮಸಣದ ಚಿತ್ರವನ್ನು ಕಟ್ಟಿಕೊಡುತ್ತಲೇ ಮಸಣದ ಪರಿಸರವನ್ನು ತಮಗೆ

ಆಪ್ಯಾಯಮಾನವಾಗಿಸಿದ ಸಾಮಾಜಿಕ ಸಂದರ್ಭದ ಮೇಲೂ ಬೆಳಕನ್ನು ಚೆಲ್ಲುತ್ತಾರೆ. ಅನುಕೂಲವಂತರಿಗೆ ಆಪ್ಯಾಯಮಾನವಾಗುವ ಉದ್ಯಾನಗಳು ಬಡವನಲ್ಲಿ ಸಂಕೋಚವನ್ನು ವಿಸ್ತರಿಸುತ್ತವೆ. ಈ ಸಂಕೋಚದಿಂದ ಪಾರಾಗುವ ಸಾಧ್ಯತೆಯಾಗಿಯೂ ಮಸಣವನ್ನು ಗ್ರಹಿಸಲಾಗಿದೆ.

ಕವನಗಳ ನಾ ಬರೆಯಲು

ಆಶ್ರಯಿಸಿದೆ ನಿನ್ನ

ನಗೆ ಚಿಮ್ಮಿಸಿ ಬಾರೆನ್ನುತ

ನೀನಪ್ಪಿದೆ ನನ್ನ

ಎನ್ನುವಲ್ಲಿ ಮಸಣ ಆಪ್ಯಾಯಮಾನವಾಗಲು ಇರುವ ಕಾರಣಗಳಲ್ಲಿ ಪರಕೀಯ ಪ್ರಜ್ಞೆ ಕಾಡುವುದಿಲ್ಲವೆಂಬುದು ಪ್ರಧಾನವಾದುದು. ಪರಕೀಯ ಪ್ರಜ್ಞೆ ಕಾಡುವ ಕಾರಣಗಳಲ್ಲಿ ಪ್ರಮುಖವಾದುದು ಸಾಮಾಜಿಕ, ಆರ್ಥಿಕ, ಅಸಮಾನತೆಗಳು ಬೇರೆಯವರು, ಪ್ರವೇಶಿಸಲು ಹಿಂಜರಿಯುವ ಈ ಪರಿಸರ ವಾಸ್ತವದ ಕಠೋರತೆಯಿಂದ ತಪ್ಪಿಸಿಕೊಳ್ಳಲೆಳಸುವ ಮನಸ್ಸಿಗೆ

ಗೋರಿಯ ಮೇಲಣ ಮರಗಳ

ತಂಗಾಳಿಯ ತಂಪು

ಮರ್ಮರ ದನಿ ಮೊರೆಯುತ್ತಿದೆ

ಮೈಕಿವಿಗಳಿಗಿಂಪು

ಅನ್ನು ಒದಗಿಸುವ ಮೂಲಕ ಆಪ್ಯಾಯಮಾನವಾಗಿ ತೋರುತ್ತದೆ. ಕವಿ ಇಲ್ಲಿ ಮಾನಸಿಕ ಸ್ಥಿತಿಯೊಂದನ್ನು ರೂಪಿಸುವ ಸಾಮಾಜಿಕ ಸಂದರ್ಭವನ್ನು ಮಾರ್ಮಿಕವಾದ ನೆಲೆಯಲ್ಲಿ ಚಿತ್ರಿಸಿದ್ದಾರೆ. ಮುಂದುವರೆದು

ಉದ್ಯಾನದಿ ಸಾಗುತ್ತದೆ
ಸಿರಿವಂತರ ಮೋಜು '
ನಾಬಡವನು ನನಗೇತಕೆ
ಉದ್ಯಾನದ ಗೋಜು

ಎನ್ನುವ ಮೂಲಕ ಅನುಕೂಲವಂತ ನಾಗರಿಕ ಸಮಾಜ ಬಡವನನ್ನು ನಡೆಸಿಕೊಳ್ಳುವ ಬಗೆಯೇ ಬಡವರ ನಿತ್ಯ ಅನುಭವವಾಗುವುದನ್ನು ಚಿತ್ರಿಸಿದ್ದಾರೆ.

ಮಂಟೇಸ್ವಾಮಿ ಕಾವ್ಯದ ಸಿದ್ಧಪ್ಪಾಜಿ ಸಾಲಿನಲ್ಲಿನ ಒಂದು ಪ್ರಸಂಗದಲ್ಲಿ ಮಂಟೇಲಿಂಗಯ್ಯನವರು ಕಬ್ಬಿಣಕ್ಕಾಗಿ ಸಿದ್ಧಪ್ಪಾಜಿಯನ್ನು ಹಲಗೂರಿನ ಪಾಂಚಾಲರಗೇರಿಗೆ ಕಳುಹಿಸಿದಾಗ ಎಚ್ಚರದ ಸ್ಥಿತಿಯಲ್ಲಿ ಊರನ್ನು ಪ್ರವೇಶಿಸಿ ಅಪಮಾನಗಳಿಗೆ ಒಳಗಾಗಬೇಕಾದದ್ದನ್ನು ನೆನೆದು ಅಧೀರನಾಗುವ ಸಿದ್ಧಪ್ಪಾಜಿ ಅನೇಕ ಬಗೆಯ ಮತ್ತಿನ ಪದಾರ್ಥಗಳನ್ನು ಸೇವಿಸಿ ನಿಶೆ ತುಂಬಿಕೊಳ್ಳಲು ಸಾಧ್ಯವಾಗದೆ, ಹರಿದಾಡುವ ಹಾವು, ಚೇಳುಗಳನ್ನು ಸೇವಿಸಿ ಅವುಗಳ ವಿಷದ ಮೂಲಕ ನಿಶೆಗೊಳಗಾಗಲು ಪ್ರಯತ್ನಿಸುತ್ತಾನೆ. ನಿಶೆಗೊಳಗಾದಾಗ ವಾಸ್ತವದ ಶೋಷಣೆ, ಅಪಮಾನಗಳ ಜೊತೆ ಸಂಬಂಧವಿಲ್ಲದಂತೆ ಬದುಕಬಹುದು. ಯಾರ ಬಗೆಗೂ ಮತ್ಸರ, ದ್ವೇಷಗಳು ಹುಟ್ಟುವುದಿಲ್ಲ.

ಈ ಸಂಕಲನದ ಒಂದು ಕವಿತೆ 'ಹಾವುಗಳೇ ಕಚ್ಚಿ ಶೋಷಿತರನ್ನು ಕಚ್ಚಿರುವ ಹಾವುಗಳು ಯಾವುವು? ಅವರ ಪಾಲಿಗೆ ನಿಶೆಯಾಗಿ ಅವರು ಎಚ್ಚರ ತಪ್ಪಲು ಕಾರಣವಾಗಿರುವ ಸಂಗತಿಗಳು ಯಾವುವು? ಮೊದಲಾದ ಸಂಗತಿಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುವ ಕವಿತೆ.

ಮಂತ್ರಗಳಲಿ ಮಲಗಿದವರೆ ಸತ್ಯಗಳಲಿ ಸತ್ತವರೆ
ಕಿಚ್ಚುಗಳೇ ಕೆರಳಿ
ಎಚ್ಚರವನು ತಪ್ಪಿದವರೆ ಮಚ್ಚರವನು ಮುಚ್ಚಿದವರೆ
ಹಾವುಗಳೇ ಕಚ್ಚಿ

ಬಂಡವಾಳಶಾಹಿಗಳ/ ಶೋಷಕರ ಬಂಡವಾಳದ ಮೂಲಧನ ಶೋಷಿತರು. ಇವರ ದುಡಿಮೆಯೆಂಬ ಮೂಲ ಧನವನ್ನು ಬಳಸಿ ಸಂಪತ್ತಿನ ಶೇಖರಣೆಯಲ್ಲಿ ತೊಡಗುವವರು ಶೋಷಕರು. ಭೂಮಂಡಲದ ಸಕಲ

ಸೌಭಾಗ್ಯಗಳನ್ನು ಬೆಳೆದವರು ದುಡಿಯುವ ಜನ, ದುಡಿಮೆಯ ನಡೆಯಲ್ಲಿ ಕಷ್ಟ ನಷ್ಟಗಳಿಗೆ ಒಳಗಾದವರು. ಇವರನ್ನು ಎಚ್ಚರ ತಪ್ಪಿಸಿರುವುದು ಪುರೋಹಿತಶಾಹಿಗಳು. ಪುರೋಹಿತಶಾಹಿ ಇವರಿಗೆ ಉಣಬಡಿಸಿರುವ ವಿಚಾರಧಾರೆಗಳು, ಅವರು ಮಂಡಿಸಿದ ಅವಕಾಶ ವಾದಿತ್ವದಿಂದ ಕೂಡಿದ ಸತ್ಯದ ಪಾಠಗಳು. ಇವರ ಅಲ್ಪ ಸ್ವಲ್ಪ ಎಚ್ಚರವನ್ನು ಪ್ರತಿಭಟನೆಯ ಸಾಧ್ಯತೆಗಳನ್ನು ಧರ್ಮದ ಮತ್ತಿನ ಮೂಲಕ, ವಿಷದ ಮತ್ತಿನ ಮೂಲಕ



ಮುಂದೂಡಲಾಗುತ್ತಿದೆ. ಧರ್ಮದ ಸಾಧನಗಳಾದ ವೇದ, ಮಂತ್ರ, ಸತ್ಯ, ಅಸತ್ಯ ಮೊದಲಾದ ಹಾವುಗಳಿಂದ ಕಚ್ಚಿಸಿಕೊಂಡು ನಿಶೆಯಲ್ಲಿರುವ ಜನ ಎಚ್ಚರಗೊಳ್ಳುವುದು ಎಂದು ಎಂಬುದೇ ಕವಿಯ ಎದುರಿಗಿರುವ ಉತ್ತರವಿಲ್ಲದ ಪ್ರಶ್ನೆಯಾಗಿದೆ! ಶೋಷಕ ಮತ್ತು ಶೋಷಿತರ ಸಂಬಂಧವನ್ನು ಧ್ವನಿಪೂರ್ಣವಾಗಿ ಮಂಡಿಸಿದ 'ಒಂದು ದನದ ಪದ' ಕವಿತೆ, ಶೋಷಿತರ ಅಸಹಾಯಕತೆ, ಧ್ವನಿಸತ್ತ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತದೆ. ತನಗಾಗಿ ದುಡಿಯುವ ಪ್ರಾಣಿಯೊಂದಿಗೆ ಇರಬಹುದಾದ ಸಂಬಂಧಕ್ಕಿಂತ ಭಿನ್ನವಾದುದಲ್ಲ. ಶೋಷಕ ಮತ್ತು ಶೋಷಿತರ ನಡುವಿನ ಸಂಬಂಧ ಶೋಷಿತನಿಗೆ ಶೋಷಕನು ತೋರಬಹುದಾದ ಉದಾರತೆಯು ಅವನ ಅಹಂಅನ್ನು ತಣಿಸಿಕೊಳ್ಳುವುದಾಗಿರುತ್ತದೆಯೇ ಹೊರತು, ಶೋಷಿತನ ಬೇಕು ಬೇಡಗಳನ್ನು ಅವಲಂಬಿಸಿರುವುದಿಲ್ಲ ಎಂಬುದನ್ನು ದನದ (ಶೋಷಿತ) ಮಾತುಗಳಾಗಿ ಸಿದ್ಧಲಿಂಗಯ್ಯನವರು ನಿರೂಪಿಸುತ್ತಾರೆ. ಶೋಷಕರು ತೋರಬಹುದಾದ ಉದಾರತೆ ಶೋಷಣೆಯ ನಿರಂತರತೆಗೆ ಮುನ್ನುಡಿಯಾಗಿರುತ್ತದೆ.

ಶೋಷಿತನ ಒಳಗೆ ವಿಧೇಯತೆಯನ್ನು ನಿರೀಕ್ಷಿಸಿ, ವಿಧೇಯತೆಯನ್ನು ವ್ಯವಸ್ಥಿತವಾಗಿ ಸಾಧಿಸುವ ಷಡ್ಯಂತ್ರದ ಭಾಗವಾಗಿರುತ್ತದೆ ಎಂಬುದನ್ನು ಈ ಕವಿತೆ ಇನ್ನಿಲ್ಲದಂತೆ ಮಂಡಿಸುತ್ತದೆ. ಕವಿತೆಯೊಳಗೆ ಕಾಣುವ ಒಂದು ವಿಶೇಷವೆಂದರೆ ಇಲ್ಲಿ ಜನಕ್ಕೆ ತರ್ಕ ಪ್ರಜ್ಞೆ ಇದೆ.ಸೂಕ್ಷ್ಮ ಅವಲೋಕನ ಸಾಮರ್ಥ್ಯವಿದೆ. ಸರಿತಪ್ಪುಗಳನ್ನು ವಿವೇಚಿಸುವ ಸಾಮರ್ಥ್ಯವೂ ಇದೆ ಆದರೆ ಇದು ಯಾವುದನ್ನು ತೋರ್ಪಡಿಸಿಕೊಳ್ಳಲಾಗದಂತೆ ನಿಯಂತ್ರಿಸಲಾಗಿದೆ. ಮಾತನಾಡಲಾಗದಂತೆ ಧ್ವನಿಯನ್ನು ಕಿತ್ತುಕೊಳ್ಳಲಾಗಿದೆ. ಈ ಲೋಕದ ಶೋಷಿತನಿಗೆ ಈ ಬಗೆಯ ಅರಿವು ದೊರೆಯುವಂಥ ವಾತಾವರಣವಿಲ್ಲದಂತೆ ನೋಡಿಕೊಂಡಿರುವುದು ಇಲ್ಲಿನ ಪುರೋಹಿತಶಾಹಿಯ ಹಿರಿಮೆ.

ಒಡೆಯನ ಸಂಭ್ರಮ ಮತ್ತು ಆಳಿನ ಸಂಕಟಗಳ ವೈರುಧ್ಯ ಇಲ್ಲಿ ಮುಖ್ಯವಾಗುವುದಿಲ್ಲ. ಒಡೆಯನ ಸಂಭ್ರಮಕ್ಕೆ ಘನವಾದ ವ್ಯಾಖ್ಯಾನಗಳು ಅಲಂಕಾರ ಪ್ರಾಯವಾಗಿ ಹೊರಹೊಮ್ಮುತ್ತವೆ. ಆಳಿನ ಸಂಕಟ ಹುಟ್ಟಿದಲ್ಲೇ ನಿರ್ವಾಣವನ್ನು ಹೊಂದುತ್ತದೆ; ಯಾರಿಗೂ ಕೇಳಿಸುವುದಿಲ್ಲ.

ಗಾಡಿಗೊಂದು ಮರದ ತೂಕ ಇವರದೊಂದು ಭೀಮತೂಕ

ಹೆಜ್ಜೆಹಾಕೊ ಬಸವಣ್ಣ ಅನ್ನುತ್ತಾರಲ್ಲೊ

ಶಂಕರಾತ್ರಿ ಹಬ್ಬದೊಳಗೆ ಬೆಂಕಿಮ್ಯಾಲೆ ಹಾರಬೇಕು

ತಿಗವತೊಳೆಯದಿದ್ದರೂನೆ ಕೊಂಬಿಗೆಲ್ಲ ಹೂವ ಸಿಗಿಸಿ

ತಳ್ಳುತ್ತಾರಲ್ಲೊ ಬೆಂಕಿಗೆ ತಳ್ಳುತಾರಲ್ಲೊ

ಯಾರಿಗೂ ಕೇಳಿಸದ ಮಾತುಗಳಿಗೆ ಧ್ವನಿಯಾಗುವ ಮೂಲಕ ಕನ್ನಡ ಸೃಜನಶೀಲ ಜಗತ್ತಿಗೆ ದಲಿತ ಜಗತ್ತನ್ನು, ದುಡಿಯುವ ಜಗತ್ತನ್ನು ಪರಿಚಯಿಸಿದವರು ಸಿದ್ಧಲಿಂಗಯ್ಯನವರು. ಇವರನ್ನು ಸಮಾಜ ಪ್ರೀತಿಯಿಂದ ಸಮುದಾಯದ ಪ್ರಾತಿನಿಧಿಕ



ಧ್ವನಿಯೆಂದು ಗೌರವಿಸಿ ಇವರ ಅಭಿವ್ಯಕ್ತಿಯ ವಿಶಿಷ್ಟತೆಯನ್ನು ಇವರಿಗೆ ವಿಶೇಷಣವಾಗಿ ನೀಡಿ ಅಭಿಮಾನದಿಂದ 'ದಲಿತಕವಿ' ಯೆಂದು ಸನ್ಮಾನಿಸಿದೆ.

ಜನಮಾನಸದಲ್ಲಿನ ನೋವಿನ ಪ್ರತಿನಿಧಿಯಾಗಿರುವ ಸಿದ್ದಲಿಂಗಯ್ಯನವರು ಕವನಸಂಕಲನಕ್ಕೆ 'ಹೊಲೆಮಾದಿಗರ ಹಾಡು' ಎಂದು ಶೀರ್ಷಿಕೆ ನೀಡಿರುವುದು ಅರ್ಥಪೂರ್ಣವಾಗಿದೆ. ಅಸ್ಪೃಶ್ಯತೆಯ ನೋವಿನ ನೆಲೆಯಲ್ಲಿ ನಿಂತು ಇಡೀ ಜಗತ್ತಿನ ನೋವಿನೊಂದಿಗೆ ಬೆರೆಯುತ್ತಾ ದುಡಿಯುವ ಜನವರ್ಗವನ್ನು ಶೋಷಿತ ಸಮುದಾಯಗಳೆಲ್ಲವನ್ನು ಒಳಗೊಳ್ಳುತ್ತಾ ಬಿಡುಗಡೆಯ ಸಾಧ್ಯತೆಗಳನ್ನು ಕುರಿತು ನೊಂದವರ ಜೊತೆ ಸಂವಾದವನ್ನು ಮಾಡುತ್ತಾರೆ. ಅವರ ಪ್ರತಿಕ್ರಿಯೆಗಳಲ್ಲಿ ಪರಿಣಾಮಗಳು ಘಟಿಸುತ್ತವೆ. ಬಹುಜನರೊಂದಿಗೆ, ಓದುವ, ಹಾಡುವ, ಕೇಳುವ ಪರಿಕ್ರಮದಲ್ಲಿ ಒಡನಾಡುವುದನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮೊದಲಿಗೆ ಸಾಧಿಸಿದ ಕವಿ ಸಿದ್ಧಲಿಂಗಯ್ಯನವರು. ಚಳುವಳಿಗಳ, ಹೋರಾಟಗಳ ಭಾಗವಾಗಿ, ಸ್ಫೂರ್ತಿಯಾಗಿ, ಪ್ರೇರಣೆಯಾಗಿ ಶೋಷಣೆಯು ಕೊನೆಗಾಣುವವರೆಗೆ ಶೋಷಣೆಯು ಅಂತ್ಯ ವಾದನಂತರವೂ ಚರಿತ್ರೆಯ ಸ್ಮೃತಿಯಾಗಿ ಸಿದ್ಧಲಿಂಗಯ್ಯನವರ ಕಾವ್ಯ ಪ್ರಸ್ತುತವಾಗುವ ಸಾಮರ್ಥ್ಯವನ್ನು ಹೊಂದಿದೆ.

ಕನ್ನಡ ಕಾವ್ಯದ ದಿಕ್ಕನ್ನು ಬದಲಾಯಿಸಿ ಸಮುದಾಯಗಳ ಕಡೆಗೆ ಸಾಗಿದ ಈ ಕಾವ್ಯದಲ್ಲಿ ನೊಂದವರ ಉದ್ವೇಗ, ಉಸಿರ ಗತಿಗಳೇ ಮೂಲ ಲಯವಾಗಿ ಕಾವ್ಯಾಭಿವ್ಯಕ್ತಿಯನ್ನು ನಿರ್ವಹಿಸಿವೆ. ಐದು ಮಾತ್ರೆಗಳ ಮೂಲ ಲಯ ವಸ್ತುವಿನ ಭಾವಾವೇಗಕ್ಕೆ ಅನುಗುಣವಾಗಿ ವಿವಿಧ ವಿನ್ಯಾಸಗಳಲ್ಲಿ ಚಲಿಸುತ್ತಾ ಛಂದೋ ವೈವಿಧ್ಯವನ್ನು

ಸೃಷ್ಟಿಸುತ್ತದೆ. ಭಾವತೀವ್ರತೆಯು ಲಯದತೀವ್ರತೆಗೆ ಪ್ರೇರಕವಾಗಿರುವುದರಿಂದ ಕೀರ್ತನಕಾರರ ಕೀರ್ತನೆಗಳಂತೆ ಹಾಡಿಕೊಳ್ಳಲು ಇಲ್ಲಿನ ಕವಿತೆಗಳು ದಕ್ಕುವುದಿಲ್ಲ. ಸಿದ್ಧಲಿಂಗಯ್ಯನವರು ತಮ್ಮ ಸಂಕಲನದ ಆರಂಭದಲ್ಲೇ ಸೂಚಿಸುವಂತೆ 'ಗಟ್ಟಿಯಾಗಿ, ಲಯ ಬದ್ಧವಾಗಿ ಹಾಡಿದಾಗ, ಓದಿಕೊಂಡಾಗ ಮಾತ್ರ' ಇಲ್ಲಿನ ಕವಿತೆಗಳು ಈಗಾಗಲೇ ಸ್ಥಾಪಿತ ನೆಲೆಗಳಲ್ಲಿ ಸಂಸ್ಕರಣೆಯನ್ನು ಹೊಂದಿದವರಿಗೆ ಅರ್ಥವಾಗುತ್ತವೆ. ಈ ಕವಿ ತನ್ನವರೆಗಿನ ಕಾವ್ಯ ಪರಂಪರೆಯ ಮಾರ್ಗದ ಅರಿವನ್ನು ಹೊಂದಿದ್ದೂ, ಪ್ರಜ್ಞಾಪೂರ್ವಕವಾಗಿ ಹೊಸಕಾವ್ಯ ಪಥವನ್ನು ಸವಾಲಾಗಿ ಸ್ವೀಕರಿಸಿ ಮುಂದಡಿ ಇಟ್ಟಿರುವುದನ್ನು ಇವು ಹಾಡುಗಳು ಎಂದು ಮತ್ತೊಮ್ಮೆ ಹೇಳುತ್ತಿದ್ದೇನೆ' ಎಂಬ ಹೇಳಿಕೆಯಿಂದ ತಿಳಿಯಬಹುದು. ಸುಗಮ ಸಂಗೀತ ಕಲಾವಿದರಿಗೆ ಈಗಲೂ ಈ ಕವಿತೆಗಳ ಲಯದ ತೀವ್ರತೆಯನ್ನು ಹಿಡಿದು ಹಾಡಲು ಸಾಧ್ಯವಾಗದಿರುವುದು, ಹೋರಾಟಗಾರರಿಗೆ ಈ ತೀವ್ರತೆಯೆ ಉಸಿರಾಗುವುದು ಈ ಕಾವ್ಯದ ಅನನ್ಯತೆಯೇ ಹೌದು.

**['ಸಾಧನೆ' ತ್ರೈವಾರ್ಷಿಕ)**

**ಸಖೀಗೀತ ಅಂಬೇಡ್ಕರ್ ಎಂಬ ಬೆಳಕಿಗೆ ಎಣ್ಣೆಯಾಗಿ**

**ಉಲಿದ ರಮಾಬಾ**

**- ದು. ಸರಸ್ವತಿ**

ಬಾಬಾ ಸಾಹೇಬರು ೧೯೪೫ರಲ್ಲಿ ತಾವು ಬರೆದ 'ಥಾಟ್ಸ್ ಆನ್ ಪಾಕಿಸ್ತಾನ್' ಪುಸ್ತಕವನ್ನು ತಮ್ಮ ಪತ್ನಿ ರಮಾಬಾಯಿಯವರಿಗೆ ಅರ್ಪಿಸುತ್ತ ಹೀಗೆ ಬರೆದಿದ್ದಾರೆ:

ರಾಮೂ ನೆನಪಿಗೆ ಅರ್ಪಣೆ...

ಆಕೆಯ ಹೃದಯವಂತಿಕೆ

ಉದಾತ್ತ ಮನಸು ಮತ್ತು ಶುದ್ಧ ಗುಣಗಳಿಗೆ

ಹಾಗೂ

ಸ್ನೇಹಿತರೇ ಇಲ್ಲದೆ ಚಿಂತೆ ಮತ್ತು ಅಭಾವವೇ ನಮ್ಮನ್ನು ಕವಿದಿದ್ದ ದಿನಗಳಲ್ಲಿ ಎದೆಗುಂದದೆ, ನನ್ನೊಂದಿಗೆ ಸಂಕಟಪಡಲು ಸದಾ ಸಿದ್ಧಳಿರುತ್ತಿದ್ದುದಕ್ಕೆ ಗೌರವಾರ್ಥವಾಗಿ

ದಪೋಲಿಯಲ್ಲಿ ೧೮೯೬ರಲ್ಲಿ ಜನಿಸಿದ ರಮಾಬಾಯಿಯವರ ಮೂಲ ಹೆಸರು ರಾಮಿಬಾಯಿ. ಅವರ ತಂದೆ ಭಿಕುಬಾಬಾ ವಲ್ಗಾಂವ್‌ಕರ್ ಜೀವನೋಪಾಯಕ್ಕಾಗಿ ದಿನಗೂಲಿ ಮಾಡುತ್ತಿದ್ದರು. ಕೂಲಿ ಮಾಡುತ್ತಿದ್ದವರ ಮಗಳಾದ ರಾಮಿಬಾಯಿ, ರಮಾಬಾಯಿ ಅಂಬೇಡ್ಕರ್ ಆಗುವವರೆಗಿನ ಪಯಣದಲ್ಲಿನ ಹೆಜ್ಜೆಗಳು ಸದ್ದು ಮಾಡಿಲ್ಲ. ಆದರೆ ಹಚ್ಚೆಯಂತೆ ಗುರುತು ಮೂಡಿಸಿವೆ. ಆಕೆಯ ಪ್ರತಿ ಹೆಜ್ಜೆಯೂ ಬಾಬಾಸಾಹೇಬರ ಹೋರಾಟ ಮತ್ತು ಸಾಧನೆಯಲ್ಲಿ ಜೊತೆಗೂಡಿವೆ. ಚಿಂತೆ, ಅಭಾವ ಕವಿದು ಏಕಾಂಗಿಯಾದ ಹೊತ್ತಿನಲ್ಲೂ ನಾನಿದ್ದೇನೆಂದು ಸಾಥ್ ನೀಡಿದ ಸಂಗಾತಿಯನ್ನು ಸೂಕ್ತವಾಗಿಯೇ ಅಂಬೇಡ್ಕರ್ ನೆನೆದಿದ್ದಾರೆ. ಬಾಲ್ಯದಲ್ಲಿಯೇ ಪೋಷಕರನ್ನು ಕಳೆದುಕೊಂಡು ಆಕೆಯನ್ನು ಚಿಕ್ಕಪ್ಪಂದಿರು (ತಂದೆ, ತಾಯಿ ಎರಡೂ ಕಡೆಯವರು) ಸಾಕಿದರು. ತಂದೆಯ ಸೋದರನಂತೂ ತಂದೆಯಿಲ್ಲದ ಹಲವಾರು ಮಕ್ಕಳನ್ನು ಸಾಕಿದ್ದರು. ಹೆತ್ತ ತಾಯಿ ತಂದೆಯರಿಲ್ಲದೆ ಪರರ ಆಶ್ರಯದಲ್ಲಿ ಬೆಳೆದ ಆಕೆಗೆ ಎಳೆವೆಯಿಂದಲೇ ತಮ್ಮ ಆಸೆಗಳನ್ನು ಹತ್ತಿಕ್ಕಿಕೊಂಡು ಕಷ್ಟಗಳ ಸರಮಾಲೆಯೊಂದಿಗೆ ಬದುಕುವುದು ಅಭ್ಯಾಸವಾಯಿತು.

ಅಂಬೇಡ್ಕರ್ ಅವರನ್ನು ೧೯೦೮ರಲ್ಲಿ ಮದುವೆಯಾದಾಗ ಆಕೆ ೧೨ ವಯಸ್ಸಿನ ಎಳೆಯ ಹುಡುಗಿ. ಮದುವೆ ನಂತರ ಆಕೆಯ ಹೆಸರನ್ನು ರಮಾಬಾಯಿ ಎಂದು ಬದಲಾಯಿಸಲಾಯಿತು. ಗಂಡನದು ತಮಗಿಂತ ಉತ್ತಮ ಸ್ಥಿತಿಯಲ್ಲಿದ್ದ ಕುಟುಂಬ.

ಮಾವ ಸುಬೇದಾರ. ಅತ್ತೆ-ಮಾವ, ಮಾವನ ಅಂಗವಿಕಲ ಸೋದರಿ ಹಾಗೂ ಅವರ ಸೋದರ ಮತ್ತವರ ಕುಟುಂಬವನ್ನು ಒಳಗೊಂಡ ದೊಡ್ಡ ಕುಟುಂಬ, ಮಾವನ ಮನೆಯಲ್ಲಿ ಕಬೀರ, ತುಕಾರಾಮ ಚೋಖಾಮೇಳ ಭಜನೆಗಳನ್ನು ಕೇಳುತ್ತಾ ೧೨ರ ಬಾಲೆ ಕುಟುಂಬದ ನೊಗಹೊತ್ತಳು. ೧೯೧೨ರಲ್ಲಿ ೧೫ನೇ ವಯಸ್ಸಿಗೆ ಮಗ ಯಶ್ವಂತನ ಜನನ. ೧೯೧೩ರಲ್ಲಿ ಬಿಎ ಪಾಸು ಮಾಡಿದ ಅಂಬೇಡ್ಕರ್ ಉನ್ನತ ವಿದ್ಯಾಭ್ಯಾಸಕ್ಕೆಂದು ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಹೊರಟಾಗ 'ಮಗನ ಓದಿಗೆ ಅಡ್ಡಿ ಮಾಡಬೇಡ' ಎಂಬ ಮಾವನ ಮಾತಿಗೆ ಬೆಲೆಕೊಟ್ಟು, ನೋವು ನುಂಗಿ ಕಳಿಸಿಕೊಡುವಾಗ ಅದಾಗಲೇ ಎರಡನೆ ಮಗು ರಮೇಶ ಹೊಟ್ಟೆಯಲ್ಲಿದ್ದ. ಅದೇ ಸಮಯದಲ್ಲಿ ಮಾವನ ಮರಣ. ಕಾಯಿಲೆ ಬಿದ್ದ ಮಗುವಿಗೆ ಔಷಧ ಕೊಡಿಸಲು ಕಾಸಿಲ್ಲದ ಸ್ಥಿತಿಯಿಂದಾಗಿ ಮಗು ತೀರಿಕೊಂಡ ನೋವನ್ನು ಗಂಡ-ಮಾವ ಇಲ್ಲದೆ ಏಕಾಂಗಿಯಾಗಿ ನುಂಗಿಕೊಂಡು ಸಂಸಾರ ನಿಭಾಯಿಸಲು ಹೆಣಗಾಡಿದರು. ೧೯೧೭ರಲ್ಲಿ ಅಂಬೇಡ್ಕರ್ ಅವರು ವಾಪಸಾದ ನಂತರ ಅತ್ತೆ ಜೀಜಾಬಾಯಿ, ಸೋದರ ಆನಂದರಾವ್ ತೀರಕೊಂಡ ನೋವು ಆರುವುದರೊಳಗೆ ೧೯೧೮ರಲ್ಲಿ ಹೆಣ್ಣು ಮಗು ಇಂದುವಿನ ಜನನ. ಒಂದು ವರ್ಷದಲ್ಲೇ ಆ ಮಗುವಿನ ಮರಣದ ಹೊಡೆತ, ಪತಿಗೆ ಸೂಕ್ತ ಉದ್ಯೋಗ ಸಿಗದೆ ಆರ್ಥಿಕ ಸಂಕಷ್ಟಗಳು ಮುಂದುವರೆದವು, ಉನ್ನತ ವಿದ್ಯಾಭ್ಯಾಸಕ್ಕೆಂದು ೧೯೨೦ರಲ್ಲಿ ಅಂಬೇಡ್ಕ ಮತ್ತೆ ಲಂಡನ್‌ಗೆ ಹೊರಡುತ್ತಾರೆ. ಗಂಡನನ್ನು ಕಳಿಸಲು ಇಷ್ಟವಿಲ್ಲದೆ ಬಸುರಿ ರಮಾಬಾಯಿ ಕಿರಿಕಿರಿ ಮಾಡಿದಾಗ ಪತಿ ಬೇಸರದಿಂದ ರೇಗುತ್ತಾರೆ. ಮಾವನಿಗೆ ಕೊಟ್ಟ ಮಾತನ್ನು ನೆನೆದು ಮೌನವಾಗುತ್ತಾರೆ. ಲಂಡನ್ನಿಗೆ ತೆರಳುವಾಗ ಮನೆ ನಡೆಸಲು ಪತಿ ಕೊಟ್ಟಿದ್ದ ಹಣವೆಲ್ಲ ಖಾಲಿಯಾದಾಗ ಮತ್ತೆ ಬಡತನದೊಂದಿಗಿನ ಜಂಜಾಟ, ರಮಾಬಾಯಿಯವರ ಸೋದರ ಶಂಕರ್ ರಾವ್ ಧೂತ್ರೆ ಮತ್ತು ಕಿರಿಯ ಸೋದರಿ ಗೌರುಬಾಯಿ ಇಬ್ಬರೂ ಕೂಲಿ ಮಾಡಿ ತರುತ್ತಿದ್ದ ೮-೧೦ ಆಣೆಗಳಲ್ಲಿ ಎಲ್ಲರ ಹೊಟ್ಟೆ ತುಂಬಿಸುವ ಸಾಹಸ ಮಾಡುತ್ತಿದ್ದರು. ನಾಲ್ಕು ರೊಟ್ಟಿಗಳನ್ನು ಮಾಡಿ ಬಾಬಾ ಸಾಹೇಬರ ಅಣ್ಣನ ಮಗ ಮುಕುಂದನಿಗೆ ಒಂದು, ಮಗ ಯಶವಂತನಿಗೆ ಇನ್ನೊಂದು, ತಮ್ಮನಿಗೆ ಮತ್ತೊಂದು ನೀಡಿ ಉಳಿದ ಒಂದನ್ನು ಗೌರು, ಲಕ್ಷ್ಮೀ ಮತ್ತು ರಮಾಬಾಯಿ ಮೂವರು ಹಂಚಿ ತಿನ್ನುತ್ತಿದ್ದರು. ರೊಟ್ಟಿ ಜೊತೆಗೆ ಚಟ್ನಿ ಅಥವಾ ಈರುಳ್ಳಿ ಬಿಟ್ಟರೆ ಬೇರೇನೂ ಇರುತ್ತಿರಲಿಲ್ಲ. ಕೆಲವು ವೇಳೆ ಊಟ ಸಿಗುತ್ತಿದ್ದುದು ಸಂಜೆ ಒಂದೇ ಹೊತ್ತು. ಅದೂ ಸಹ ಹೊಟ್ಟೆ ತುಂಬುವಷ್ಟು ಸಿಗುತ್ತಿರಲಿಲ್ಲ. ಅಡುಗೆಗೆ ಕಡಿಮೆ ಬೆಲೆಯ ಸೌದೆ ಸಿಗುವುದೆಂದು ಕತ್ತಲಾದ ಮೇಲೆ ಮಗ ಯಶವಂತನನ್ನು ಕರೆದುಕೊಂಡು ಪಾಯ್ಕುವಾಡಿಯಿಂದ ದಾದ ಮತ್ತು ಮಾಹೀಮ್‌ವರೆಗೂ ನಡೆದುಕೊಂಡೇ ಹೋಗುತ್ತಿದ್ದರು. ಇಬ್ಬರೂ ಸೌದೆ ಹೊರೆ ಹೊತ್ತುಕೊಂಡು ಮನೆಗೆ ಬರುವ ಹೊತ್ತಿಗೆ ರಾತ್ರಿ ಒಂಬತ್ತೊ ಹತ್ತೊ ಆಗಿರುತ್ತಿತ್ತು. ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೋದ 'ಸಾಹೇಬ'ನ ಹೆಂಡತಿ ತಲೆ ಮೇಲೆ ಸೌದೆ ಹೊತ್ತುಕೊಂಡು ಬರುವುದು ಯಾರಿಗೂ ತಿಳಿಯಬಾರದೆಂಬ ಕಾರಣಕ್ಕೆ ಕತ್ತಲಾದ ಮೇಲೆ ಸೌದೆ ತರಲು ಹೋಗುತ್ತಿದ್ದರು. ಶಂಕರರಾವ್‌ಗೆ ಕೂಲಿ ಸಿಗದಿದ್ದ ದಿನ ರಮಾಬಾಯಿ, ಗೌರು ಮತ್ತು ಲಕ್ಷ್ಮೀ ಮೂವರು ಮುಂಜಾನೆಯೇ ಎದ್ದು ವಲ್ಲಿ

ಗ್ರಾಮಕ್ಕೆ ಹೋಗಿ ರಾತ್ರಿ ೮ ಗಂಟೆಯವರೆಗೂ ಬೆರಣಿ ತಟ್ಟುತ್ತಿದ್ದರು. ಇಂತಹ ಕಡು ಕಷ್ಟದ ಕಾಲದಲ್ಲಿ ನಾಲ್ಕನೇ ಮಗು ಗಂಗಾಧರ ಜನಿಸಿ ಒಂದೇ ವರ್ಷದಲ್ಲಿ ತೀರಿಕೊಂಡಾಗಲೂ ಆಕೆ ಏಕಾಂಗಿಯಾಗಿಯೇ ನೋವು ನುಂಗಿಕೊಳ್ಳುತ್ತಾಳೆ.

ಅಂಬೇಡ್ಕರ್ ಅವರು ೧೯೨೩ರಲ್ಲಿ ಹಿಂತಿರುಗಿದ ಮೇಲೆ ಬದುಕು ಇನ್ನಾದರೂ ಒಂದು ನೆಲೆ ಕಂಡಿತೆಂಬ ಸಮಾಧಾನ ಮೂಡುತ್ತದೆ. ೧೯೨೪ರಲ್ಲಿ ಅಂಬೇಡ್ಕ ಅವರ ಅಚ್ಚುಮೆಚ್ಚಿನ ಮಗ ರಾಜರತ್ನನ ಜನನವಾಗುತ್ತದೆ. ೧೯೨೬ರಲ್ಲಿ ಆ ಮಗು ತೀರಿಕೊಂಡಾಗ ಇಬ್ಬರೂ ಅತೀವ ನೋವು ಅನುಭವಿಸುತ್ತಾರೆ. ಅಂಬೇಡ್ಕರ್ ಅವರು ಮಕ್ಕಳ ಸಾವಿನ ನೋವನ್ನು ಮೀರಿ, ಸಮುದಾಯಕ್ಕೆ ಬಾಬಾಸಾಹೇಬರು ಹೋರಾಟ ಕಟ್ಟುತ್ತ ತಿರುಗಾಟದಲ್ಲಿ ತೊಡಗಿಕೊಂಡರೆ, ನೋವ ನುಂಗಿಕೊಂಡೇ ಸಂಸಾರದ ಬಂಡಿ ಎಳೆದರು ರಮಾಬಾಯಿ, ನಾಲ್ಕು ಮಕ್ಕಳನ್ನು ಹೊತ್ತು, ಹೆತ್ತು, ಮಣ್ಣಲ್ಲಿ ಮಲಗಿಸಿದ್ದರ ದುಃಖ ಮತ್ತು ಆರ್ಥಿಕ ಸಂಕಷ್ಟಗಳ ಹೊರೆಯಲ್ಲಿ ನಲುಗಿ ಹೋದ ರಮಾಬಾಯಿಯವರಿಗೆ ಹೆಗಲು ನೀಡುವುದು ಕೆಲಸದ ಒತ್ತಡದಲ್ಲಿ ಅಂಬೇಡ್ಕರ್ ಅವರಿಗೆ ದುಸ್ಸಾಧ್ಯವಾಗಿತ್ತು. ಮತ್ತೆ ಮತ್ತೆ ಮಕ್ಕಳಾದರೆ ಆರೋಗ್ಯ ಬಿಗಡಾಯಿಸುವುದೆಂದು ದಂಪತಿಗಳು ಬ್ರಹ್ಮಚರ್ಯ ಕೈಗೊಂಡಾಗ ಅಂಬೇಡ್ಕರ್‌ಗೆ ೩೫ ವಯಸ್ಸು, ರಾಮಾಬಾಯಿಯವರಿಗೆ ೩೦ ವಯಸ್ಸು. ಮಕ್ಕಳ ಒಳಿತಿಗೆ, ಪತಿಯ ಏಳಿಗೆಗೆಂದು ಆಕೆ ಹರಕೆ ಹೊತ್ತದ್ದು ಪಂಥರಾಪುರದ ವಿಠಲನಿಗೆ, ವಿಚಾರವಂತ ಪತಿ ಪಂಥರಾಪುರಕ್ಕೆ ಒಯ್ಯಲು ನಿರಾಕರಿಸಿದಾಗಲೂ ಮೌನವೇ ಆಕೆಯ ಸಂಗಾತಿ, ತನಗಾಗಿ ಬೇಡುವುದನ್ನೇ ಮರೆತು ಹೋಗಿದ್ದ ರಮಾಬಾಯಿ ತೀವ್ರವಾಗಿ ಕಾಯಿಲೆ ಬಿದ್ದಾಗ ಅವರ ಆರೋಗ್ಯ ಸುಧಾರಿಸಲಿ ಎಂದು ಅಂಬೇಡ್ಕರ್ ಧಾರವಾಡದಲ್ಲಿದ್ದ ಬಲವಂತರಾವ್ ವಾರೆ ಎಂಬ ಸ್ನೇಹಿತರ ಮನೆಯಲ್ಲಿ ಬಿಟ್ಟು ಹೋಗುತ್ತಾರೆ. ಅಲ್ಲಿ ಒಂದೆರಡು ತಿಂಗಳು ನೆಲೆಸಿದ್ದ ಸಂದರ್ಭದಲ್ಲಿ ಅವರನ್ನು ಹತ್ತಿರದಿಂದ ಕಂಡ ವಾಗ್ಲೆಯವರು ಹೀಗೆ ನೆನಪಿಸಿಕೊಂಡಿದ್ದಾರೆ. ವಸತಿ ಶಾಲೆಯ ಆರ್ಥಿಕ ಸಂಕಷ್ಟಗಳ ಕುರಿತು ನಾನು ಚಿಂತಿಸುತ್ತಿದ್ದೆ. ಚಿಂತೆ ನನ್ನ ಮುಖ ಮತ್ತು ವರ್ತನೆಯಲ್ಲೂ ಕಾಣಿಸಿಕೊಂಡಿದ್ದನ್ನು ಗಮನಿಸಿದ ಆಯಿ ಸಾಹೇಬ, 'ಯಜಮಾನರೇಕೆ ಚಿಂತಿತರಾಗಿದ್ದಾರೆ' ಎಂದು ನನ್ನ ಹೆಂಡತಿಯನ್ನು ಕೇಳಿದರು. ನನ್ನ ಹೆಂಡತಿ ಎಲ್ಲವನ್ನು ಹೇಳಿದಳು. ಆಗ ಆಯಿ ಸಾಹೇಬ ನನ್ನ ಕೈಗೆ ನೂರು ರೂಪಾಯಿ ನೀಡಿ 'ಹೀಗೆ ಭರವಸೆ ಕಳೆದುಕೊಳ್ಳಬಾರದು. ಈಗ ಈ ದುಡ್ಡಿನಲ್ಲಿ ವಸತಿ ಶಾಲೆಯ ಮಕ್ಕಳಿಗೆ ಆಹಾರ ಧಾನ್ಯ ಖರೀದಿಸಿ. ಆ ನಂತರವೂ ಏನೂ ವ್ಯವಸ್ಥೆಯಾಗದಿದ್ದರೆ ನನ್ನ ಒಡವೆಗಳನ್ನು ಅಡವಿಟ್ಟು ಅಗತ್ಯವಿರುವ ಹಣವನ್ನು ಹೊಂದಿಸಿ. ಬಾಬಾಸಾಹೇಬರು ಬಂದ ಮೇಲೆ ಖಂಡಿತ ಒಡವೆಗಳನ್ನು ಬಿಡಿಸಿಕೊಡುತ್ತಾರೆ' ಎಂದು ಹೇಳಿ ಟ್ರಂಕಿನಲ್ಲಿದ್ದ ಒಡವೆಗಳನ್ನು ತೆಗೆಯಲು ಹೋದರು. ಆಯಿ ಸಾಹೇಬರ ನಿಸ್ವಾರ್ಥ, ಕಕ್ಕುಲಾತಿಯ ಮತ್ತು ನೇರ ಸ್ವಭಾವವು ನಮ್ಮ ಕುಟುಂಬದವರನ್ನೆಲ್ಲ ಸೆಳೆದುಬಿಟ್ಟಿತ್ತು. ಅವರ ಪ್ರತಿ ಮಾತು ಮತ್ತು ಕಾರ್ಯದಲ್ಲಿಯೂ ನಿಸ್ವಾರ್ಥತೆಯೇ ತುಂಬಿ ತುಳುಕುತ್ತಿತ್ತು. ಕಾರ್ಯಕರ್ತರಿಗೆ ಆಕೆ ತಾಯಿ ಸಮಾನವಾಗಿದ್ದರು. ನಮ್ಮ ಹೃದಯಗಳಲ್ಲಿ ಆಕೆ ಗೌರವದ ಸ್ಥಾನ ಪಡೆದುಕೊಂಡಿದ್ದರು.'

ಗುಣಮುಖರಾಗದೆ ೧೯೩೫ರಲ್ಲಿ ರಮಾಬಾಯಿ ತೀರಿಕೊಂಡಾಗ ಅವರ ವಯಸ್ಸು ಕೇವಲ ೩೯, ಬಹುಪಾಲಿನ ಬದುಕನ್ನು ಕಡುಕಷ್ಟದಲ್ಲೇ ಇಕ್ಕಟ್ಟಿನ ಚಾಳಿನಲ್ಲಿ ಕಳೆದ ಅವರು ಕೊನೆಗಾಲದಲ್ಲಿ ಮಾತ್ರ ದಾದರ್‌ನಲ್ಲಿದ್ದ 'ರಾಜಗೃಹ'ದಲ್ಲಿ ನೆಲೆಸಿದ್ದರು. ಅಪಾರ ತಾಳ್ಮೆ ಮತ್ತು ಅವಿರತ ದುಡಿಮೆಯಿಂದ ಸಂಕಷ್ಟದ ಸಂದರ್ಭಗಳನ್ನು, ಮಕ್ಕಳನ್ನು ಕಳೆದುಕೊಂಡ ಸಂಕಟವನ್ನು ಏಕಾಂಗಿಯಾಗಿ ಎದುರಿಸುತ್ತ ನಿರೀಕ್ಷೆಗಳೇ ಇಲ್ಲದೆ ನಿಸ್ವಾರ್ಥವಾಗಿ ಬೆನ್ನಿಗೆ ನಿಂತರು. ಬಾಬಾ ಸಾಹೇಬರ ಜನುಮ ದಿನದಂದು ಅವರು ಹೊತ್ತಿಸಿದ ಸ್ವಾಭಿಮಾನದ ಬೆಳಕಿನಲ್ಲಿ ನನಗೆ ಸದಾ ಕಾಣುವುದು ಅಂಬೇಡ್ಕರ್ ಎಂಬ ಬೆಳಕಿಗೆ ಎಣ್ಣೆಯಾಗಿ ಉರಿದ ರಮಾಬಾಯಿಯವರು.

**['ಸಂವಾದ' ಮಾಸಪತ್ರಿಕೆ]**

೩೧ ರ ರಾತ್ರಿಯ ಭ್ರಮೆಗಳು

**- ಓಂ ಪ್ರಕಾಶ್ ನಾಯಕ್**

ಭಾರತವೂ ಸೇರಿದಂತೆ ವಿಶ್ವದಾದ್ಯಂತ ಜನರು ಇಪ್ಪತ್ತನೆಯ ಶತಮಾನದ ಕೊನೆಯ ರಾತ್ರಿಯನ್ನು ಹೇಗೆ ಬೀಳ್ಕೊಡುವುದು, ೨೧ನೆಯ ಶತಮಾನವನ್ನು ಯಾವ ರೀತಿ ವಿಭಿನ್ನವಾಗಿ ಸ್ವಾಗತಿಸುವುದು ಎಂಬ ಯೋಚನೆಯಲ್ಲಿದ್ದಾರೆ! ಕೆಲವರಿಗೆ ಫೈವ್‌ಸ್ಟಾ ಹೋಟೆಲಿನಲ್ಲಿ ಇಡೀ ರಾತ್ರಿಯನ್ನು ಕಳೆಯುವ ಆಸೆಯಿದ್ದರೆ ಮತ್ತೆ ಕೆಲವರಿಗೆ ರಾತ್ರಿಯಿಡಿ ಹೆಣ್ಣು-ಹೆಂಡದ ಜೊತೆ ಮಜಾ ಮಾಡುವಾಸೆ! ಮತ್ತೂ ಕೆಲವರಿಗೆ ಇವೆರಡರ ಜೊತೆಗೆ ಗೋವಾದಲ್ಲಿ ಇರಲು ಅವಕಾಶ ಸಿಕ್ಕಿದರೆ ಎಂಬಾಸೆ...!

ಇದೆಲ್ಲದರ ಹಿಂದೆ ಮನುಷ್ಯನ ಅಂತರಾಳದಲ್ಲಿ ಅಡಗಿರುವ ಸತ್ಯವೇನು ಎಂಬುದನ್ನು ಊಹಿಸುವುದು ಅಷ್ಟು ಸುಲಭವಲ್ಲ. ಭಾರತವೂ ಸೇರಿದಂತೆ ಜಗತ್ತಿನಾದ್ಯಾಂತ ಜನರು ಇಂದು ಬಯಸುತ್ತಿರುವುದು ಏನನ್ನು? ಕೇವಲ ಮೋಜು-ಮಜವನ್ನು ಮಾತ್ರವೇ? ನಮ್ಮ ಗೋವಾ ಸೇರಿದಂತೆ ವಿಶ್ವದ ಪ್ರಮುಖ ನಗರಗಳ ಎಲ್ಲ ಮುಖ್ಯ ಹೋಟೆಲುಗಳು ಡಿಸೆಂಬರ್ ೩೧ರ ರಾತ್ರಿ ಹೌಸ್‌ಫುಲ್ ಆಗಿವೆ! ನೀವೀಗ ಲಕ್ಷ ಸುರಿಯುತ್ತೇನೆಂದರೂ ಅಲ್ಲಿ ಜಾಗವಿಲ್ಲ. ಏನಿದರರ್ಥ? ಮನುಷ್ಯನಲ್ಲಿರುವ ಸಿನಿಕತನ ಅಷ್ಟೊಂದು ಪರಾಕಾಷ್ಠೆಗೆ ತಲುಪಿದೆಯೆ?

ನಿಜ, ಸಾವಿರ ವರ್ಷಗಳಿಗೊಮ್ಮೆ ಬರುವ ಈ ರಾತ್ರಿ ವಿಶೇಷವೆ. ಅದರಲ್ಲಿ ಸಂದೇಹವೇನಿಲ್ಲ. ಆದರೆ, ಆ ವಿಶೇಷ ರಾತ್ರಿಯನ್ನು ನಾವು ಮತ್ತದೇ ನಿತ್ಯದ ಕಾಮ- ಪೇಯಗಳೊಡನೆ ಆಚರಿಸಲು ಕಾತರಿಸುವುದು ಅತ್ಯಂತ ವಿಚಿತ್ರವಲ್ಲವೇ? ಬದುಕಿನ ಒಂದು ಭಾಗವಾದ ಕಾಮ, ದಿನನಿತ್ಯ ಸಾಯಂಕಾಲ ಭೇಟಿ ನೀಡುವ ಬಾರ್‌ಗಳು ಈಗ ಇಷ್ಟೊಂದು ಪ್ರಾಮುಖ್ಯತೆ ಪಡೆಯುವುದೇಕೆ? ಮನುಷ್ಯನಿಗೆ ತನ್ನ ಸಂತೋಷವನ್ನು ಪ್ರಕಟಪಡಿಸಲು, ಆಚರಿಸಲು ಇರುವುದು ಇವೆರಡೇ ದಾರಿಯೆ? ಇವುಗಳಿಂದ ನಾವು ಸಾವಿರ ವರ್ಷಗಳ ಕೊನೆಯ ರಾತ್ರಿಯೊಂದನ್ನು ಅರ್ಥಪೂರ್ಣವಾಗಿ ಕಳೆದಂತಾಗುವುದೆ?

ನಾನಿಲ್ಲಿ ಎಲ್ಲರೂ ಹೀಗೆಯೇ ಎಂದು ಹೇಳುತ್ತಿಲ್ಲ. ವಿಶ್ವದ ಅರ್ಧ ಅಥವಾ ಮುಕ್ಕಾಲು ಭಾಗ ಜನರ ಕತೆ ಇದಾದರೆ, ಇನ್ನುಳಿದವರಿಲ್ಲಿ ಕೆಲವರು ಕುಟುಂಬದವರೆಲ್ಲರ ಜೊತೆ ಸೇರಿ ಭರ್ಜರಿ ಅಡುಗೆ ಮಾಡಿ ಉಂಡು, ಸಿನಿಮಾ ನೋಡಿಯೋ, ಆಟ- ಪಾಟ-ವಿನೋದಗಳೊಂದಿಗೋ ರಾತ್ರಿ ಕಳೆಯುತ್ತಾರೆ. ಇವರಲ್ಲೂ ಅಂಥ ವಿಶೇಷತೆಯೇನೂ ಇಲ್ಲದಿದ್ದರೂ ಅವರಿಗಿಂತ

ಇವರು ಪರವಾಗಿಲ್ಲ. ಮತ್ತೂ ಕೆಲವರು ಟಿ.ವಿ.ಯಲ್ಲಿ ಅಂದು ರಾತ್ರಿ ಬರುವ ವರ್ಣರಂಜಿತ ವಿಶೇಷ ಕಾರ್ಯಕ್ರಮಗಳನ್ನು ಕಣ್ಣೆವೆಯಿಕ್ಕದೆ ನೋಡಿ ಆ ರಾತ್ರಿಯನ್ನು

ಸಾರ್ಥಕವನ್ನಾಗಿಸಲು ಯತ್ನಿಸುತ್ತಾರೆ! ಇನ್ನುಳಿದ ಕೆಲವರು ಇನ್ನಾವ ಗೋಜಿಗೂ ಹೋಗದೆ ತಣ್ಣಗೆ ಆರಾಮವಾಗಿ ಮಲಗಿ ನಿದ್ದೆ ಹೋಗುತ್ತಾರೆ!

ಆದರೆ.......

ಅದೇ ರಾತ್ರಿ ಮೇಲಿನ ಎಲ್ಲ ವರ್ಗಗಳನ್ನು ಸೇರಿಸಿದರೆ ಆಗುವ ಜನರ ದುಪ್ಪಟ್ಟು ಜನ ತಿನ್ನಲು ಅನ್ನವಿಲ್ಲದೆ, ಮಲಗಲು ಸ್ಥಳವಿಲ್ಲದೆ, ಹೊದಿಕೆಯಿಲ್ಲದೆ, ಸೂರಿಲ್ಲದೆ, ಹೀಗೆ ಬರೀ 'ಇಲ್ಲ' ಗಳ ನಡುವೆ, ನಾಳೆ' ಎಂಬ ಭೀಕರ 'ಭೂತ'ವನ್ನುಗೆ ಎದುರಿಸುವುದು ಎಂಬ ಯೋಚನೆಯೊಡನೆ, ಡಿಸೆಂಬರ್ ಛಳಿಗೆ ನಡುಗುತ್ತ, ಹೊರಳಾಡುತ್ತ, ಸಾವಿನ ಜೊತೆ ಸೆಣಸುತ್ತ, ಬದುಕಿಗಾಗಿ ಹೋರಾಡುತ್ತ ಕಳೆಯುತ್ತಾರೆ.

ನಾವಿಂದು ಅವರ ಬಗ್ಗೆ ಯೋಚಿಸಬೇಕಿದೆ. ನಮ್ಮ ಡಿಸೆಂಬರ್ ೩೧ರ ಸಹಸ್ರಮಾನದ ಕೊನೆಯ ರಾತ್ರಿಯನ್ನು ನಮಗಿಂತ ಅತ್ಯಂತ ಕೆಳಗೆ ದಾರುಣ ಸ್ಥಿತಿಯಲ್ಲಿರುವವರಿಗೆ ಏನಾದರೂ ಸಹಾಯವನ್ನು ಮಾಡುವ ಮೂಲಕ ಮಾನವ ಜನಾಂಗದಲ್ಲಿ ಇನ್ನೂ ತ್ಯಾಗ, ಅಂತಃಕರಣೆ, ಮಾನವೀಯತೆ, ಮತ್ತೊಬ್ಬರಿಗಾಗಿ ಸ್ಪಂದಿಸುವ ಗುಣ ಜೀವಂತವಿದೆ ಎಂಬುದನ್ನು ಸಾಬೀತುಪಡಿಸಬೇಕಿದೆ. ಈ ಕುರಿತು ನಾವು ಇಂದು ಗಂಭೀರವಾಗಿ ಯೋಚಿಸಬೇಕಿದೆ.

ಪರವಾಯಿಲ್ಲ, ಅಲ್ಲಾದ ಸಾವಿರಾರು ಜನರ ಪ್ರಾಣಹಾನಿಯನ್ನು ತಪ್ಪಿಸಬಹುದಿತ್ತಲ್ಲ? ಲಾತೂರಿನ ಭೂಕಂಪದ ಬಗ್ಗೆ ಮುಂಚೆಯೇ ಜನರಿಗೆ ಎಚ್ಚರಿಕೆ ನೀಡಿ ಅಲ್ಲಿಂದ ಬೇರೆಡೆ ಹೋಗುವಂತೆ ಮಾಡಿದ್ದರೆ ಲಕ್ಷಾಂತರ ಜನ ಬದುಕುಳಿಯುತ್ತಿರಲಿಲ್ಲವೆ? ಏಕೆ, ಇವೆಲ್ಲ ಸಮಾಜಸೇವೆಯ ಕೆಲಸವನ್ನು, ಮಾನವೀಯ ಕೆಲಸಗಳನ್ನು ಒಬ್ಬ ಜೋತಿಷಿ ಮಾಡಬಾರದೆಂದಿದೆಯೇ? ಅಥವಾ ಒರಿಸ್ಸಾದಲ್ಲಿ, ಲತೂರಿನಲ್ಲಿ ಜನರು ಸತ್ತರೆ ಅಂಥ ನಷ್ಟವೇನೂ ಇಲ್ಲವೆಂತಲೆ? ಅವನು ಕೇವಲ ಯಾವುದೋ ರಾಜಕಾರಣಿಯ ಅಧಿಕಾರದ ಬಗ್ಗೆ ಮಾತ್ರ ಏಕೆ ಹೇಳುವುದು? ಏಕೆಂದರೆ ಅಲ್ಲಿ ಅವನಿಗೆ ದುಡ್ಡು ಸಿಗುತ್ತದೆ. ಮತ್ತು ಕೇಳುವವನ ಮನಸ್ಸನ್ನು, ಅವನ ಆಸೆಯನ್ನು ತಿಳಿದುಕೊಂಡು ಆ ರೀತಿ ಹೇಳುವುದು ಸಾಧ್ಯವಿರುತ್ತದೆ!

ಅಲ್ಲವೆ ಜೈನ್? ಏನು... ಯಾಕೆ ಒರಿಸ್ಸಾ ದುರಂತದ ಬಗ್ಗೆ ಮುಂಚೆಯೇ ಹೇಳಿ ಅದನ್ನು ತಪ್ಪಿಸಲಿಲ್ಲ? ಇಂದು ಆ ದುರಂತ ಸಂಭವಿಸಿದ್ದು ನೋಡಿ ಸಮಾಜದ ಎಲ್ಲ ವರ್ಗದ ಜನರೂ ದಿಗೂಢರಾಗಿದ್ದಾರೆ. ಎಲ್ಲರೂ ತಮ್ಮ ಕೈಲಾದ ಸಹಾಯ ಮಾಡಲು ಮುಂದಾಗಿದ್ದಾರೆ. ಅಂಥದ್ದರಲ್ಲಿ ನಿಮಗೆ ಮಾತ್ರ ಆ ದುರಂತ ಅಂಥ ದೊಡ್ಡದ್ದಾಗೇನೂ ತೋರಲಿಲ್ಲವೆ? ನಿಮ್ಮ ತಂದೆಯವರು ಯಾರದೋ ತಾಯಿಯೊಬ್ಬರು ಅಂದಿನಿಂದ ಸರಿಯಾಗಿ ೧೦೦ ದಿನಗಳ ನಂತರ ತೀರಿಕೊಳ್ಳುತ್ತಾರೆ ಎಂದು ಸಿದ್ದಲಿಂಗಯ್ಯನವರ ಹತ್ತಿರ ಕರಾರುವಾಕ್ಕಾಗಿ ಭವಿಷ್ಯ ಹೇಳಿದ್ದರಂತೆ! ಅವರು ಯಾವ ರೀತಿ ಅದನ್ನು ಬರೆದು ಲಕೋಟೆಯಲ್ಲಿಟ್ಟು ಸಿದ್ದಲಿಂಗಯ್ಯನವರಿಗೆ ಕೊಟ್ಟಿದ್ದರೋ ತಿಳಿಯದು. ಆದರೆ ಈಗ ನನಗೊಂದು ಆಸೆಯಾಗಿದೆ. ನೀವು ಸಹ ಭವಿಷ್ಯಕಾರನೂ

ತಾನು ಯಾವ ರೀತಿ ಹೇಳುತ್ತೇನೆ ಎಂಬುದನ್ನು ಬಹಿರಂಗವಾಗಿ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಅದು ಅವರ ಕೆಲಸದ ಅಸ್ತಿತ್ವವನ್ನೇ ಪ್ರಶ್ನಿಸುತ್ತದೆ, ಬುಡವನ್ನೇ ಅಲುಗಾಡಿಸುತ್ತದೆ! ಕರ್ನಾಟಕದ ಕೋಟಿ ಕೋಟಿ ಜನರನ್ನು ನಿಮ್ಮ ಭವಿಷ್ಯದ ಅಂಧ ವಿಶ್ವಾಸದಲ್ಲಿ ಮುಳುಗುವಂತೆ ಮಾಡಿರುವ ಈ ಜೈನ್‌ನ ಎದುರು ಕೊಲೆಗಡುಕ ವೀರಪ್ಪನ್ ಒಬ್ಬ ಸಾಮಾನ್ಯ ಪಿಕ್‌ಪಾಕೆಟರ್‌ನಂತೆ ತೋರುತ್ತಾನೆ!

ಮನುಷ್ಯ ಭವಿಷ್ಯ ಕೇಳುವುದು ಯಾವಾಗ ಗೊತ್ತೆ? ತನ್ನಲ್ಲೇ ತನಗೆ ನಂಬಿಕೆಯಿಲ್ಲದಾಗ! ತನ್ನ ಕೆಲಸದಲ್ಲಿ ನಂಬಿಕೆಯಿಲ್ಲದಾಗ, ಜೀವನದಲ್ಲಿ ಏನನ್ನೂ ಸಾಧಿಸಲಾಗದೆ ಹತಾಷನಾದ, ಕೈಲಾಗದ, ಬಡತನದಲ್ಲಿ ಬೆಂದು ಅದರಿಂದ ಹೊರಬರಲಾರದೆ ಒದ್ದಾಡುತ್ತಿರುವಾಗ ಭವಿಷ್ಯ ಕೇಳುವುದರಿಂದಲಾದರೂ ತಮ್ಮ ಜೀವನ ಸರಿಹೋಗಬಹುದೇನೋ ಎಂದುಕೊಂಡಂಥ ಅಥವಾ ಅತಿ ದೊಡ್ಡ ಲಕ್ಷಾಧೀಶ ಶ್ರೀಮಂತರು ತಾವು ಯಾವಾಗ ಕೋಟ್ಯಾಧೀಶರಾಗುತ್ತೇವೆ ಎಂಬುದು ತಿಳಿಯದೆ ಒದ್ದಾಡುವಾಗ, ರಾಜಕಾರಣಿಗಳು ಜನಸೇವೆಯನ್ನೇ ಮರೆತಿದ್ದರೂ ತಾವು ಯಾವಾಗ ಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿ ಆಗುತ್ತೇವೆಂದು ಪರಿತಪಿಸುವಾಗ, ಇವರೆಲ್ಲರನ್ನೂ ಇವರೆಲ್ಲರ ಅಸಹಾಯಕತೆಯನ್ನೂ ಭವಿಷ್ಯಕಾರರು ಸರಿಯಾಗೇ ಬಳಸಿಕೊಂಡು ಅವರಿಗೆ ಸಮಯಕ್ಕೆ ತಕ್ಕಂತೆ 'ಭವಿಷ್ಯ' ಹೇಳುತ್ತಾರೆ. ಅದರಿಂದ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಾರೆ!

ಆದರೆ, ಜನರು ಅವರು ಹೇಳುವುದನ್ನು ಕೇಳುವುದರಿಂದ ಅದೇನು ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೋ ನನಗರ್ಥವಾಗುತ್ತಿಲ್ಲ. ಏಕೆಂದರೆ ಭವಿಷ್ಯವೆಂದರೆ ಈ ಹಿಂದೆ ಹೇಳಿದಂತೆ ಮುಂದೆ ಘಟಿಸುವ ಒಂದು ಘಟನೆಯಷ್ಟೆ ಅದು ಯಾರಿಗೂ ತಿಳಿಯದಂಥ ಪ್ರಕೃತಿಯ ರಹಸ್ಯ ಅದು ಘಟಿಸಿದಾಗಲೇ ಜನರಿಗದು ತಿಳಿಯುವುದು. ಆದರೆ ಭವಿಷ್ಯಕಾರ ತಾನು ಅದನ್ನು ಮುಂಚೆಯೇ ತಿಳಿದುಕೊಂಡು ಹೇಳುತ್ತೇನೆ ಎಂದು ಜನರಿಗೆ ಹೇಳಿ ನಂಬಿಸುತ್ತಾನೆ. ಸರಿ, ಜನರೂ ಕೇಳುತ್ತಾರೆ, ನಂಬುತ್ತಾರೆ ಸಹ. ಭವಿಷ್ಯಕಾರ ಒಳ್ಳೆಯದಾಗುತ್ತದೆ ಎಂದರೆ ಹಿಗ್ಗಿ ಹೀರೆಕಾಯಿಯಾಗುತ್ತಾರೆ, ಕೆಟ್ಟದಾಗುತ್ತದೆ ಎಂದಾಗ ಬೆದರಿ ಬೆಂಡಾಗುತ್ತಾರೆ! ಅದಕ್ಕೆ ಪರಿಹಾರವನ್ನು ಕೇಳುತ್ತಾರೆ. ಭವಿಷ್ಯಕಾರ ಬಯಸುವುದೂ ಸಹ ಅದನ್ನೇ ಅಲ್ಲವೆ? ಸರಿ, ಅದರೂ ಇದೂ ತನಗೆ ಬೇಕಾದ್ದನ್ನೂ, ಹಣವನ್ನು ಪಡೆದು ಶಾಂತಿ-ಗೀಂತಿ ಎಂದು ಮಾಡಿ ಮುಂದೆ ನಡೆಯಲಿರುವ ಆ ಕೆಟ್ಟ ಘಟನೆ'ಗೆ ಕಡಿವಾಣ ಹಾಕುತ್ತಾನೆ! ಇಲ್ಲಿ ನೀವು ಒಂದು ವಿಷಯವನ್ನು ಗಮನಿಸಬೇಕು. ಭವಿಷ್ಯವೆಂದರೆ ಮುಂದೆ ನಡೆದು ಹೋದಂತಹ ವಿಷಯವಲ್ಲವೆ? ಅದು ಘಟಿಸುವುದು ಶತಃಸಿದ್ಧವಾದ್ದರಿಂದಲೇ ತಾನೆ ಅದನ್ನು ಭವಿಷ್ಯ ಎನ್ನುವುದು. ಹಾಗಾದರೆ ಭವಿಷ್ಯಕಾರ ಶಾಂತಿಯಿಂದ ಅದನ್ನು ಹೇಗೆ ತಾನೆ ಬದಲಿಸಬಲ್ಲ? ಹಾಗೊಮ್ಮೆ ಅದನ್ನು ಬದಲಿಸಲು ಅವನು ಶಕ್ಯನಾದರೆ ಅದು ಮುಂದೆ ಘಟಿಸುತ್ತ ಇರಲಿಲ್ಲವೆಂತಲೇ ಅರ್ಥ! ಆದ್ದರಿಂದ ಮುಂದೇನಾಗುತ್ತದೋ ಆಗೇ ಆಗುತ್ತದೆ. ಅದನ್ನು ತಪ್ಪಿಸಲು ಯಾರ ಕೈಯಲ್ಲೂ ಸಾಧ್ಯವಿಲ್ಲ. ಹಾಗಿದ್ದ ಮೇಲೆ ಜನರು ಮುಂದಾಗುವ ಒಳ್ಳೆಯ - ಕೆಟ್ಟ ವಿಷಯಗಳನ್ನು

ಈಗಲೇ ತಿಳಿದುಕೊಂಡು ಮಾಡುವುದಾದರೂ ಏನು? ಮುಂದೆ ಏನಾಗುವುದಿರುತ್ತದೆಯೋ ಅದು ಸಂಭವಿಸಿಯೇ ತೀರುತ್ತದೆ ಅಲ್ಲವೆ?

ಭಾನುವಾರ ಸಂಜೆ ಆರು ಗಂಟೆಗೆ ಉದಯ ಟೀವಿಯಲ್ಲಿ ರಾಶಿಭವಿಷ್ಯ ಹೇಳಿ ಜನರನ್ನು ವಂಚಿಸುತ್ತಿರುವ ಈ ಎಸ್.ಕೆ. ಜೈನನ ಜನಪ್ರಿಯತೆ ಎಷ್ಟರಮಟ್ಟಿಗಿದೆಯೆಂದರೆ ಜನರು ಆಗ ಬೇರೆ ಚಾನಲ್‌ಗಳಲ್ಲಿ ಅದೆಂಥ ಚಲನಚಿತ್ರ ಬರುತ್ತಿದ್ದರೂ ಈತನ ಭವಿಷ್ಯವನ್ನು ಕೇಳದೆ ಬಿಡುವುದಿಲ್ಲ. ದೇಶದ ಮೂಲೆಮೂಲೆಗಳಿಂದಲೂ, ಇತ್ತೀಚೆಗೆ ವಿದೇಶಗಳಿಂದಲೂ ಸಹ ಜನರು ಈತನ ಬಳಿ ಭವಿಷ್ಯ ಕೇಳಲು ಬರುತ್ತಿದ್ದಾರಂತೆ. ಇವರೆಲ್ಲರನ್ನೂ ಮಂಗ ಮಾಡುತ್ತಿರುವ ಈ ಜೈನ್ ನಿಜಕ್ಕೂ ಐನೂರು ಕೋಟಿ ನುಂಗಿದ್ದ ಹರ್ಷದ್ ಮೆಹತಾನಿಗಿಂತಲೂ ದೊಡ್ಡ ಪ್ರಚಂಡನೇ ಸರಿ. ಆದರೆ ಈತ ತನ್ನ ಈ ಬುದ್ಧಿವಂತಿಕೆಯಿಂದ ಜನರಿಗೆ ಮೋಸ ಮಾಡುತ್ತಿರುವುದು ಖಂಡಿತಾ ಸರಿಯಲ್ಲ. ಈ ವಂಚಕ ನಿಮ್ಮ ಮನಸ್ಸಿನೊಳಕ್ಕೂ ನುಸುಳಬಹುದು. ಆದ್ದರಿಂದ ಎಚ್ಚರದಿಂದಿರಿ. 'ಭವಿಷ್ಯ'ದ ಹೆಸರಿನಲ್ಲಿ ನಿಮ್ಮನ್ನು ದರೋಡೆ ಮಾಡಲು, ಅಜ್ಞಾನದ ಮೂಢನಂಬಿಕೆಯ ಕೂಪಕ್ಕೆ ತಳ್ಳಲು ಹೊರಟಿರುವ ಈ 'ಇಂಡಿಯಾಸ್ ಮೋಸ್ಟ್ ವಾಂಟೆಡ್ ಕ್ರಿಮಿನಲ್ ಎಸ್.ಕೆ.ಜೈನ್' ನಿಂದ ಎಚ್ಚರದಿಂದಿರಿ!

ಅಷ್ಟೇ ದೊಡ್ಡ ಜೋತಿಷಿಯಲ್ಲವೆ? ನಾನು ಎಂದು, ಹೇಗೆ ಸಾಯುತ್ತೇನೆಂದು ಹೇಳಬಲ್ಲಿರಾ? ಬಹುಶಃ, ಬಹುಶಃ ಏನು ನಿಮ್ಮಿಂದ ಅದು ಸಾಧ್ಯವಿಲ್ಲ! ಒಂದೊಮ್ಮೆ ಸಾಧ್ಯವಿದ್ದರೆ ಹೇಳಿ, ಅದರ ಸತ್ಯಾಸತ್ಯತೆಯನ್ನು ಅರಿಯಲು ನಾನಿರದಿದ್ದರೂ ಬೇರೆಯವರಿಗಾದರೂ ಅದು ತಿಳಿದೀತು! ಆದರೆ ನಾನು ಮಾತ್ರ ನನ್ನ ಸಾಮಾನ್ಯ ಜ್ಞಾನದಿಂದ ಇಷ್ಟು ಭವಿಷ್ಯ ಹೇಳಬಲ್ಲೆ - ನಾನು ಮತ್ತು ನೀವು ಇನ್ನು ಐವತ್ತೋ ನೂರೋ ಅಥವಾ ಹೆಚ್ಚೆಂದರೆ ನೂರೈವತ್ತೋ ವರ್ಷಗಳಲ್ಲಿ ಖಂಡಿತ ಸಾಯುತ್ತೇವೆ. ಬೇಕಾದರೆ ಈ ವಿಷಯದಲ್ಲಿ ಕೋಟಿ ರೂಪಾಯಿಗಳ ಬಾಜಿ ಬೇಕಾದರೂ ನಾನು ಕಟ್ಟಲು ಸಿದ್ಧ!

ನೀವು ಇನ್ನೇನೇನೋ ಭಾರತದ ಮುಂದಿನ ಪ್ರಧಾನಿ ಎಷ್ಟು ದಿನ ಹುದ್ದೆಯಲ್ಲಿರುತ್ತಾರೆ, ಮುಂದಿನ ಪ್ರಧಾನಿ ಯಾರಾಗುತ್ತಾರೆ, ನೆಹರೂ ಕುಟುಂಬದ ಎಷ್ಟನೇ ತಲೆಮಾರು ಪುನಃ ಪ್ರಧಾನಿ ಪಟ್ಟಕ್ಕೇರುತ್ತದೆ ಎಂಬ ಕೆಲಸಕ್ಕೆ ಬಾರದ ದೊಡ್ಡ ದೊಡ್ಡ ವಿಷಯಗಳನ್ನೆಲ್ಲ ಹೇಳಿದ್ದೀರ. ಅಂಥದ್ದರಲ್ಲಿ ನಿಮಗೆ ಯಕಶ್ಚಿತ್ ಈ ಒರಿಸ್ಸಾ ಚಂಡಮಾರುತ, ಪಾಕಿಸ್ತಾನದವರು ಚಳಿಗಾಲದ ಸಮಯದಲ್ಲಿ ಸದ್ದಿಲ್ಲದೆ ಬಂದು ನಮ್ಮ ಕಾರ್ಗಿಲ್ ಪ್ರದೇಶದಲ್ಲಿ ನುಸುಳಿ ಠಾಣೆ ಸ್ಥಾಪಿಸಿಕೊಂಡಿದ್ದು, ಅಗಸ್ಟ್ ೨ ರಂದು ದಕ್ಷಿಣ ಭಾರತದಲ್ಲಿ ನಡೆದ ಭೀಕರ ರೈಲು ದುರಂತದ ಬಗ್ಗೆ ತಿಳಿದುಕೊಳ್ಳಲಾಗಲಿಲ್ಲವೆ? ಅಯ್ಯೋ, ಪಾಪ! ಆಗ ಬಹುಶಃ ನೀವು ಮಲಗಿದ್ದಿರೇನೋ ಅಥವಾ ಬೇರೆ... ಹೋಗಲಿ ಬಿಡಿ, ಅದೆಲ್ಲ ನಿಮ್ಮ ಸ್ವಂತ ವಿಷಯ ನನಗ್ಯಾಕೆ? ಆದರೂ... ಇಷ್ಟು ದೊಡ್ಡ ಭವಿಷ್ಯಕಾರರಾದ ನೀವು ಆ ದುರಂತಗಳ ಬಗ್ಗೆ ಎಚ್ಚರಿಸಲೇಬೇಕಿತ್ತು. ಅದು ಸಮಾಜದ ಪ್ರತಿ ನಿಮ್ಮ ಕರ್ತವ್ಯ ಕೂಡ! ನೀವು ಅದರಲ್ಲಿ ತಪ್ಪಿದ್ದೀರೆಂದರೆ ಅದು ಸಮಾಜಕ್ಕೆ, ಮಾನವ

ಜನಾಂಗಕ್ಕೆ ಮಾನವೀಯತೆಗೆ ನೀವು ಎಸಗಿರುವ ಅತಿ ದೊಡ್ಡ ದ್ರೋಹವೆಂದೇ ನನ್ನ ಭಾವನೆ. ಆದರೆ... ಈಗಲೂ ಕಾಲ ಮಿಂಚಿಲ್ಲ. ಒಪ್ಪಿಕೊಳ್ಳಿ. ನೀವು ಹೇಳುವ ಭವಿಷ್ಯವೆಲ್ಲ ಕೇವಲ ಊಹೆಯೆಂದು, ಸೈಕಾಲಜಿಯನ್ನು ಆಧರಿಸಿದ್ದೆಂದು ಆಗ ನೀವು ಈ ದ್ರೋಹವೆಸಗಿದ ಆರೋಪದಿಂದ ಮುಕ್ತರಾಗುತ್ತೀರ! ಆದರೆ ನೀವದನ್ನು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಜನ ನಿಮಗಿಂದು ಅತಿ ದೊಡ್ಡ ಭವಿಷ್ಯಕಾರನ ಪಟ್ಟ ಕೊಟ್ಟಿದ್ದಾರೆ. ಅದನ್ನು ಕಳೆದುಕೊಳ್ಳಲು ನಿಮಗಿಷ್ಟವಿಲ್ಲ. ಅದೂ ಅಲ್ಲದೆ ನಿಮ್ಮಲ್ಲಿರುವ ಅಹಂ ನಿಮ್ಮನ್ನು ಆ ರೀತಿ ಸತ್ಯ ಹೇಳದಂತೆ ತಡೆಯುತ್ತಿದೆ! ಆದ್ದರಿಂದಲೇ ನಾನು ಹೇಳುವುದು - ನೀವು ಭವಿಷ್ಯಕಾರರಲ್ಲ, ನಿಮ್ಮನ್ನೂ ಸೇರಿಸಿ, ಭವಿಷ್ಯದ ಹೆಸರಿನಲ್ಲಿ ಜನರನ್ನು ಮೋಸಮಾಡುತ್ತಿದ್ದೀರ. ಅವರನ್ನು ಇನ್ನಷ್ಟು ಅಜ್ಞಾನದ, ಮೂಢನಂಬಿಕೆಯ ಕೂಪಕ್ಕೆ ತಳ್ಳುತ್ತಿದ್ದೀರಿ! ನಾನು ಹೇಳುವುದು ಕಹಿಯೆನಿಸಿತೆ? ಆದರೆ ಮಿಸ್ಟರ್ ಜೈನ್, ಸತ್ಯವೆಂದೂ ಕಹಿಯೇ ಅಲ್ಲವೆ? ನಿಜ ಹೇಳಿ ನಿಮಗೆ ಮನಸ್ಸಾಕ್ಷಿಯೆಂಬುದು ಇದ್ದರೆ - ನೀವು ಹೇಳುವ ಭವಿಷ್ಯ, ಸರಾಸರಿ ಎಷ್ಟು ಸರಿಯಿರುತ್ತದೆ, ಮತ್ತು ಅದು ಎದುರುಗಡೆ ವ್ಯಕ್ತಿಯ ಮನಸ್ಸನ್ನು ಊಹಿಸಿ ಹೇಳುವುದಾಗಿರುತ್ತದೆಯೋ ಅಥವಾ ಜನ್ಮಕುಂಡಲಿಯನ್ನಾಧರಿಸಿರುತ್ತದೆಯೋ?

**ಭಾಷೆ, ಬದುಕಿನ ಮೇಲೆ ಜಾಗತೀಕರಣದ ಸವಾಲಿ**

**ಡಾ. ಶಿವರಾಂ ಬ್ಯಾಡರಹಳ್ಳಿ**

ಎರಡು ಸಾವಿರ ವರ್ಷಗಳಷ್ಟು ದೀರ್ಘ ಇತಿಹಾಸವಿರುವ ಕನ್ನಡ ಭಾಷೆ ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿರುವ ಸಾಮಾಜಿಕತೆಯ ಹೋರಾಟವನ್ನು ನಾವು ನೋಡುತ್ತಿದ್ದೇವೆ. ಜಾಗತೀಕರಣವೆನ್ನುವುದು ಕೇವಲ ಸಾಮಾಜಿಕ ಆರ್ಥಿಕ, ರಾಜಕೀಯ ಪರಿಭಾಷೆಯಲ್ಲ. ೧೯೯೦ರ ಆದಿಯಲ್ಲಿ ಆರಂಭವಾದ ಜಾಗತೀಕರಣದ ಭರಾಟೆಯನ್ನು ಹಲವು ದೇಶಗಳು ಆರಂಭದಲ್ಲಿ ವಿರೋಧ, ಪ್ರತಿರೋಧವನ್ನು ವ್ಯಕ್ತಪಡಿಸಿದ್ದರೂ ನಿಧಾನವಾಗಿ ಅಲೆ ಅಲೆಯಂತೆ ತೇಲುತ್ತಾ ಮೂಗೊಳಗೆ ನುಸುಳಿ ದೇಹವನ್ನು ಸೇರುವ ಆಮ್ಲಜನಕದಂತೆ ಜಾಗತೀಕರಣವೆಂಬ ಮಾಯಾ ಕಿನ್ನರಿ ಇಂದು ಮಾನವ ಸಮುದಾಯದ ಜೀವನ ಕ್ರಮದ ಮೇಲೆ ಅಷ್ಟೇ ಪ್ರಭಾವ ಬೀರಿದೆ. ಮುಕ್ತ ಮಾರುಕಟ್ಟೆಯ ನೀತಿಯಿಂದಾಗಿ ದೇಶದ ಆರ್ಥಿಕ ಸ್ವರೂಪ, ವಾಣಿಜ್ಯ ರಾಜಕಾರಣದ ಕ್ರಿಯಾಚಟುವಟಿಕೆಗಳು ಭಿನ್ನ ರೀತಿಯಲ್ಲಿ ಗರಿಗೆದರಿಕೊಂಡವು, ಜಾಗತೀಕರಣ ಬಂದ ಹೊಸದರಲ್ಲಿ ಸಾಹಿತ್ಯ, ಸಿನಿಮಾ, ಕಲೆ ಮೂಲಕ ಅಷ್ಟೇ ವಿರೋಧವನ್ನು ವ್ಯಕ್ತಪಡಿಸಿದ್ದಾಗಿಯೂ ನಿಧಾನವಾಗಿ ಮನೆಯೊಳಗೆ ಕಾಲಿಡುತ್ತಾ ಬಂತು. ರಾಗಿ ಕಲ್ಲಿನ ಗೂಟದಿಂದ, ರಾಗಿಹಿಟ್ಟನ್ನು ಮಾಡುತ್ತಿದ್ದುದು, ಪರಂಪರೆಯಾದರೆ ಅದನ್ನು ಮೀರಿ ತಂತ್ರಜ್ಞಾನದ ಆವಿಷ್ಕಾರತೆಯ ರೂಪವಾಗಿ ಬಂದ ಫ್ಲೋರ್ ಮಿಲ್ಲನ್ನು ಆರಂಭದಲ್ಲಿ ಸ್ವೀಕರಿಸದ ಮಹಿಳೆಯರು ಕಿವಿಗೆ ಗಡಚಿಕ್ಕುವ ಶಬ್ದಕ್ಕೆ ನಾಚಿ ಹೋದದ್ದು ಹಳೆಯದೇನಲ್ಲ ಶಬ್ದಕ್ಕೆ ಹೆದರಿಹೋಗುತ್ತಿದ್ದ ಗುಬ್ಬಚ್ಚಿಗಳು ಕೇರುವ ಮೊರದ ಮುಂದೆ ಕುಣಿಯುತ್ತಿದ್ದವುಗಳು ಹೆದರಿ ಹಾರಿ ಹೋಗಿ ದೂರದ ಮರದಲ್ಲಿ ಬಚ್ಚಿಟ್ಟುಕೊಂಡು ಕುಳಿತವು. ಹೀಗೆಯೇ ಸಾಮಾಜಿಕತೆಯ ರೂಪವನ್ನು ಬದಲಾಯಿಸಿದ ಜಾಗತೀಕರಣದ ಪೂರ್ವಪೀಠಿಕೆಗಳು ನಮ್ಮ ಅಂತಸತ್ವವನ್ನು ಅಲುಗಾಡಿಸಿಬಿಟ್ಟವು. ಜಾಗತೀಕರಣವೆಂಬ ವಿಶ್ವಮಾರುಕಟ್ಟೆಯು ಜಾರಿಗೆ ಬಂದ ಮೇಲೆ ದೇಶ ಭಾಷೆಗಳ ಮೇಲಷ್ಟೇ ಅಲ್ಲ, ಮುಕ್ತತೆಯ ಹೆಸರಿನಲ್ಲಿ ಸಮಾನತೆ ಎಂಬ ಹೊಸ ಬೀಜ ಮಂತ್ರವನ್ನು ಹುದುಂಬಿಸಲಾಯಿತು. ಇದರಿಂದ ಹುಸಿನೆಲೆಯ ಸ್ವರೂಪದೊಂದಿಗೆ ರೆಕ್ಕೆ ಬಿಚ್ಚಿ ಹಾರಾಡಿದ ಹದ್ದು, ನಿಧಾನವಾಗಿ ಕುಕ್ಕಿ ತಿನ್ನುತ್ತಾ ದುರ್ಬಲ ರಾಷ್ಟ್ರಗಳ ಮೇಲೆ ಸವಾರಿಯನ್ನು ಮಾಡುತ್ತಾ ಬಂತು. ಜಾಗತಿಕ ಮಟ್ಟದಲ್ಲಿ ನಡೆಯುವ (WTO) ಸಂಘಟನೆ ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ಮತ್ತು ವಿಶ್ವಬ್ಯಾಂಕುಗಳು. ಈ ಎಲ್ಲಾ ಸಂಸ್ಥೆಗಳು ದೇಶದ ಅಭಿವೃದ್ಧಿ ಚಿಂತನೆಯಲ್ಲಿ ಇಂದಿಗೂ ಚಿಂತಿಸುತ್ತಿವೆ. ಆದರೂ ಆಗಾಗ್ಗೆ ತಲೆದೋರುವ ಆರ್ಥಿಕ ಮುಗ್ಗಟ್ಟು, ಆರ್ಥಿಕ ಹಿಂಜರಿತದಿಂದಾಗಿ ದೇಶದ ಆರ್ಥಿಕ ವ್ಯವಸ್ಥೆಯು ಬುಡಮೇಲಾಗುವುದುಂಟು. ಈ ಹಿನ್ನೆಲೆಯಲ್ಲಿ ಅಭಿವೃದ್ಧಿಯ

ಗುರಿಯಾಗಿಸಿಕೊಂಡಿರುವ ಪ್ರಭುತ್ವಗಳು ಬಡತನ, ನಿರುದ್ಯೋಗ, ಜನಸಂಖ್ಯಾ ಸಮಸ್ಯೆಯನ್ನು ಇಂದಿಗೂ ಪೂರ್ಣ ಪ್ರಮಾಣದಲ್ಲಿ ನಿವಾರಣೆ ಮಾಡಲು ಸಾಧ್ಯವಾಗುತ್ತಿಲ್ಲ. ಒಂದು ಅಂದಾಜಿನ ಪ್ರಕಾರ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಇಂದಿಗೂ ೫೦ ಕೋಟಿ ಜನತೆಯು ಒಂದು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದಾರೆ. ಎಂದು ಸಮೀಕ್ಷೆ ಹೇಳಿದೆ. ನೈಜೀರಿಯಾ, ಉಟೋಪಿಯಾ ಅಂತಹ ಚಿಕ್ಕ ಚಿಕ್ಕ ರಾಷ್ಟ್ರಗಳು ಪ್ರತಿನಿತ್ಯವೂ ತಮ್ಮ ಬದುಕಿನೊಂದಿಗೆ ಹೋರಾಟವನ್ನು ಮಾಡುವ ಸ್ಥಿತಿ ನಿರ್ಮಾಣವಾಗಿದೆ. ಪ್ರತಿ ವರ್ಷ ಸಾಯುವ ಅಸಹಜ ಮಕ್ಕಳ ಸಂಖ್ಯೆ, ಮೂಲ ಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಯ ಸುಳಿಯನ್ನು ನೋಡಿದರೆ ತಲ್ಲಣವಾಗುತ್ತದೆ. ಏಷ್ಯಾ ಫೆಸಿಪಿಕ್ ರಾಷ್ಟ್ರಗಳಲ್ಲಿಯೇ ಶೇಕಡ ೬೫ರಷ್ಟು ಮಂದಿ ಬಡತನ ರೇಖೆಗಿಂತ ಕೆಳಗೆ ಬದುಕುತ್ತಿದ್ದಾರೆಂದು ವಿಶ್ವಸಂಸ್ಥೆ ತನ್ನ ವರದಿಯಲ್ಲಿ ದೃಢಪಡಿಸಿರುವುದನ್ನು ಕಾಣಬಹುದು. ಕೆಲವು ರಾಷ್ಟ್ರಗಳು ಬಿತ್ತನೆ ಬೀಜದಿಂದ ಧಾನ್ಯಗಳನ್ನು ಸಂಗ್ರಹಿಸಿಕಟ್ಟುಕೊಂಡು ಬೀಜ ರಾಜಕಾರಣ ಮಾಡಿ ಇಡೀ ಕೃಷಿ ವಲಯವನ್ನು ಕಂಪನಿಯ ಕಪಿಮುಷ್ಠಿಯಲ್ಲಿಟ್ಟುಕೊಂಡು ಜಾಗತಿಕ ಭರಾಟೆಯೊಳಗೆ ರೈತ ನಲುಗುತ್ತಿರುವುದನ್ನು ನಮ್ಮ ಕಣ್ಣೆದುರೇ ನಾವು ಕಾಣುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಸಾಮಾಜಿಕತೆ, ಅಂತಸತ್ವವೇ ಕಳೆದುಕೊಳ್ಳುತ್ತಿರುವ ಅಪಾಯದ ಸ್ಥಿತಿಯಲ್ಲಿರುವಾಗ ಸಾಹಿತ್ಯ, ಸಂಸ್ಕೃತಿಯ ಒಳ ಆಳದ ಬೇರುಗಳನ್ನು ಅಲುಗಾಡಿಸಿ ನಡುಗಿಸುತ್ತಿರುವುದು, ಎಲ್ಲರ ಗಮನಕ್ಕೂ ಬಂದಿದೆ. ಜಗತ್ತಿನ ಹಲವು ರಾಷ್ಟ್ರ ರಾಜ್ಯಗಳು ತನ್ನದೇ ಆದ ಭೌಗೋಳಿಕತೆ ವಿಸ್ತಾರದ ವಿನ್ಯಾಸ ಚೌಕಟ್ಟುಗಳಿಂದ ಪ್ರಾದೇಶಿಕತೆಯ ಅನನ್ಯತೆಯನ್ನು ಪಡೆದುಕೊಂಡು ಭಿನ್ನ ಭಿನ್ನವಾದ ಆಹಾರ ಕ್ರಮ, ಭಾಷೆ, ಉಡುಪು, ಸಂಸ್ಕೃತಿ ಆಚರಣೆಗಳು ನಿಂತಿರುವುದು ಸಾರ್ವಕಾಲಿಕ ಸತ್ಯವಾಗಿದೆ. ಆದರೆ ವಿಶ್ವವ್ಯಾಪಾರ ಸಂಘಟನೆಗಳು ಇಡೀ ದೇಶದಲ್ಲಿ ಬಹುಮುಖತೆಯ, ಉಪಸಂಸ್ಕೃತಿಯ ಲೋಕೋಭಿನ್ನ ರುಚಿಯನ್ನು ಒಡೆದುಹಾಕುತ್ತಾ ಏಕಸಂಸ್ಕೃತಿಯನ್ನು ಬಲವಂತವಾಗಿ ಹೇರುವ ಹೊಸ ಹುನ್ನಾರವೂ ನಡೆಯುತ್ತಿರುವುದನ್ನು ಬಹಳ ಎಚ್ಚರದಿಂದ ನೋಡಬೇಕಾಗಿದೆ. ಇದಕ್ಕೆ ಇಂಬುಕೊಡುತ್ತಿರುವ ಅಮೇರಿಕಾವೆಂಬ ದೊಡ್ಡಣ್ಣನ ಮಸಲತ್ತು ಇದರ ಹಿಂದೆ ಕೆಲಸ ಮಾಡುತ್ತಿದೆ. ಅಧೀನರಾಷ್ಟ್ರಗಳನ್ನು ಅಂಗೈಯಲ್ಲಿಟ್ಟುಕೊಂಡು ತಾಳಕ್ಕೆ ಕುಣಿಸುವ ವ್ಯವಸ್ಥಿತಿ ಹುನ್ನಾರದ ಕುರುಹುಗಳು ಹಲವು ರೂಪದಲ್ಲಿ ನಮ್ಮ ಕಣ್ಣ ಮುಂದಿವೆ.

ಬಹುರಾಷ್ಟ್ರೀಯ ಕಂಪನಿಗಳ ಬಾಲಂಗೋಚಿಯಂತಾಗಿರುವ ಇತರ ಸದಸ್ಯರಾಷ್ಟ್ರಗಳು ಅಮೇರಿಕೀಕರಣದ ತತ್ವಕ್ಕೆ ಬದ್ಧವಾಗುವಂತೆ ನೋಡಿಕೊಳ್ಳುವಲ್ಲಿ ಅಮೇರಿಕಾದ ತೀರ್ಮಾನಗಳೇ ಅಂತಿಮವಾಗಿರುವುದರಿಂದ ಅದೊಂದು ಏಕಮೇವ ನಾಯಕನಂತೆ ವರ್ತಿಸುತ್ತಿದೆ. ವಿಶ್ವವ್ಯಾಪಾರ ಸಂಘಟನೆಯಲ್ಲಿ ಸುಮಾರು ಸದಸ್ಯರಾಷ್ಟ್ರಗಳು ಇದ್ದರೂ ಅದೆಲ್ಲವೂ ಮೂಲ ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳ ನಿರ್ದೇಶನದಂತೆ ನಡೆಯುತ್ತಿದೆ. ಇದರಿಂದ ನಮ್ಮ ಮೂಲಭೂತ ಹಕ್ಕುಗಳ ಚಲಾವಣೆಯನ್ನು ಪ್ರಜಾಪ್ರಭುತ್ವ ಮಾದರಿಯಲ್ಲಿ ಒತ್ತಾಯಿಸಲು ಅಡೆತಡೆಯಾಗಿದೆ. ಆದರೂ ಶಿಕ್ಷಣದಲ್ಲಾಗಲೀ, ಸಾರ್ವಜನಿಕ ಕ್ಷೇತ್ರದ ಯಾವುದೇ ವಲಯದಲ್ಲಾದರೂ ಅದು ಮೊದಲು ತೀರ್ಮಾನಕ್ಕೆ

ಬಂದು ಅನುಷ್ಠಾನಕ್ಕೆ ಬರುವುದು ಇಲ್ಲಿಂದಲೆ ಆಗಿದೆ. ಇದನ್ನು ಹಲವು ರೀತಿಯಲ್ಲಿ ಪ್ರಶ್ನಿಸಿ ಪ್ರತಿಭಟನೆ ಮಾಡಿದರೂ ಉತ್ತರವಿರದ ಪ್ರಶ್ನೆಯಂತೆ ಇಂದಿಗೂ ಕಾಡುತ್ತಿದೆ. ಈ ಕಾಲಮಾನದಲ್ಲಿ ಅಭಿವೃದ್ಧಿಯ ಜೊತೆಯಲ್ಲಿ ಸಮಾನತೆ, ಸ್ವಾತಂತ್ರ್ಯ, ಶಾಂತಿ, ಸಹಬಾಳ್ವೆ ಎಂಬ ಅಸ್ತ್ರವನ್ನು ಇಟ್ಟುಕೊಂಡು ಹಲವು ರಾಷ್ಟ್ರಗಳ ಮೈಸವರಲು ಹವಣಿಸುತ್ತಿರುವ ನವ ವಸಾಹತುಶಾಹಿಯ ಹುನ್ನಾರವನ್ನು ವರ್ಣ, ಜಾತಿ, ಧರ್ಮಭೇದವನ್ನು ಮರೆತು ಒಂದಾಗಿ ವಿರೋಧಮಾಡಬೇಕಾಗಿ ಇದೆ. ಇದಕ್ಕೆ ವಿಶ್ವಸಂಸ್ಥೆ ಮತ್ತು ಐ.ಎಂ.ಫ್‌ಗಳಿಂದ ಸಮಂಜಸ ಉತ್ತರವನ್ನೂ ಕೊಡದೆ ಅದು ನುಣುಚಿಕೊಳ್ಳುತ್ತಿದೆ. ದೇಶದ ತುಂಬೆಲ್ಲಾ ಸಾಮಾಜಿಕ ವಲಯದ ಮೇಲೆ ತೀವ್ರತರವಾದ ಪರಿಣಾಮ ಬೀರುತ್ತಿರುವ ಜಾಗತೀಕರಣ ನಮ್ಮನ್ನು ಸಮೂಹ ಸನ್ನಿಯಂತೆ ತನ್ನತ್ತ ಸೆಳೆಯುತ್ತಿದೆ. ಸುಮ್ಮನೇ ಮಾತನಾಡದೆ ಕಣ್ಣು ಕಿಸಿದು ನೋಡುವ ನೋಡುಗರಂತೆ ಪ್ರದರ್ಶನವಷ್ಟೇ ವೀಕ್ಷಿಸಬೇಕು. ಅದಕ್ಕೆ ಪ್ರತಿಕ್ರಿಯಿಸುವ, ಪ್ರಶ್ನಿಸುವ ಯಾವ ಹಕ್ಕನ್ನೂ ಕೊಡದೆ ಭಿತ್ತಿಯಾಗಿ ರೂಪುಗೊಳ್ಳುತ್ತಿರುವ ಜಾಹೀರಾತುಗಳಂತೆ ಗ್ರಾಹಕರಾದ ನಾವುಗಳು ಬಲವಂತವಾಗಿ ಒಪ್ಪಿಕೊಳ್ಳುವಂತೆ ಮಾಡುತ್ತಿವೆ. ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಇಡೀ ಕಾರ್ಮಿಕವರ್ಗವೇ ಹೈರಾಣಾಗುವಂತೆ ದುಡಿದರೂ ಅವರಿಗೆ ಸಿಗಬೇಕಾದ ಮನ್ನಣೆ ಮತ್ತು ಸೌಕರ್ಯಗಳೂ ಸೇರಿದಂತೆ ಯಾವುದೇ ಉದ್ಯೋಗದ ಭದ್ರತೆಗಳೂ ಲಭ್ಯವಾಗುತ್ತಿಲ್ಲ. ಹಾಗಾಗಿ ಕಂಪನಿ ಮಾಲೀಕರು ಸಾರ್ವಜನಿಕ ಉದ್ದಿಮೆ, ಕೈಗಾರಿಕಾ ವಲಯಗಳನ್ನೆಲ್ಲಾ ಖಾಸಗೀಕರಣದ ಕಪಿಮುಷ್ಠಿಯೊಳಗೆ ತಂದು ಕಾರ್ಮಿಕ ವಲಯವನ್ನು ತನ್ನ ತಾಳಕ್ಕೆ ಕುಣಿಸುತ್ತಿದೆ. ಕಡಿಮೆ ಸಂಬಳದಲ್ಲಿ ಹೆಚ್ಚು ದುಡಿಸಿಕೊಳ್ಳುವ ಚಾಣಾಕ್ಷತೆಯನ್ನು ಕರಗತಮಾಡಿಕೊಂಡಿವೆ. ವಾಣಿಜ್ಯ ಹಿತಾಸಕ್ತಿಗೆ ಬೆಲೆ ಕೊಡುವಷ್ಟು ಮಾನವ ಸಂಪನ್ಮೂಲಕ್ಕೆ ಹಾಗೂ ಮಾನವನ ಕುಶಲತೆಗೆ ಬೆಲೆ ಕೊಡುತ್ತಿಲ್ಲ. ಇದರಿಂದಾಗಿ ಕೈಗಾರಿಕತೆಯ ತಂತ್ರಪರಿಕರಗಳು ಜಾಸ್ತಿಯಾಗಿ ಸ್ಥಾಪಿತವಾಗುತ್ತಿವೆ. ಮಾನವ ಬಲಪ್ರಯೋಗಿಸಿ ಮಾಡುವ ಕೆಲಸದ ಕಡೆಯಲ್ಲೆಲ್ಲಾ ಒಂದು ಯಂತ್ರ ಮಾಡುವಂತೆ ಮಾಡಿ ವಿದ್ಯುತ್ ಅವಲಂಭಿಯಾಗುತ್ತಾ ತನಗೆ ತಾನೇ ಮುಳುವಾಗುವಂತೆ ಕಾರ್ಮಿಕ ವಲಯವನ್ನು ಬೆಚ್ಚಿಬೀಳಸುತ್ತಾ ಬಂದಿದೆ. ಕಾರ್ಮಿಕರ ಶೋಷಣೆಯ ಸರಮಾಲೆಯೇ ಕಣ್ಣ ಮುಂದೆ ನಿಲ್ಲುತ್ತದೆ. ಬಡತನ, ನಿರುದ್ಯೋಗದಿಂದ ನರಳುತ್ತಿರುವ ಕಾರ್ಮಿಕರು ಮಾಲೀಕತ್ವದ ಕತ್ತಿಗೆ ಕೊರಳು ಒಡ್ಡದೇ ತಲೆತಪ್ಪಿಸಿಕೊಂಡು ಬದುಕಬೇಕಾದ ಸ್ಥಿತಿ ನಿರ್ಮಾಣ ವಾಗಬೇಕಾಗಿದೆ. ಹಾಗಾಗಿ ಕೈಗಾರಿಕಾ ವಲಯವೇ ಖಾಸಗೀಸಹಭಾಗಿತ್ವದಲ್ಲಿ ನಡೆಯುತ್ತಾ ಇದು ಮುಂದುವರೆದಂತೆ ಆರೋಗ್ಯ ವಿದ್ಯುತ್ ಸಾರ್ವಜನಿಕ ಕ್ಷೇತ್ರಗಳಾದ ಸೇವಾ ವಲಯವನ್ನು ಖಾಸಗೀ ಕಂಪನಿಗಳು ಆಕ್ರಮಿಸುತ್ತಿರುವುದು ಅಪಾಯದ ದುರಂತವೇ ಆಗಿದೆ. ನಗರ ಸಂಸ್ಕೃತಿಯನ್ನು ಮತ್ತಷ್ಟು ವೈಭವೀಕರಿಸುತ್ತಾ ಹೊಸ ನವೀನರೀತಿಯ ಸೌಕರ್ಯಗಳನ್ನು ತೋರುತ್ತಾ ಆಸೆ ತೋರಿಸಿ ಮಾಯಕಾರನಂತೆ ಮಾಯಾವಿಯಾಗುತ್ತಾ ತಿಮಿಂಗಲದಂತೆ ವರ್ತನೆ ಮಾಡುತ್ತಿದೆ. ಪರಿಸರ ಸಂಪತ್ತೇ ಒಂದು ಕಾಲಕ್ಕೆ ಎಲ್ಲವೂ ಆಗಿದ್ದ ಆ ಪರಿಸರದ ಮೇಲೆ ದಬ್ಬಾಳಿಕೆ ಮಾಡುವ ಕಂಪನಿಗಳು ದಾಳಿ ಇಟ್ಟು ಕಾಡನ್ನು ಕಡಿದು ಕಾಂಕ್ರಿಟ್ ಮಾಡಿ ಅದರಲ್ಲಿರುವ ಜೀವಜಾಲವನ್ನು ಕೊಲ್ಲುತ್ತಿರುವುದು

ಸಾಮಾನ್ಯವಾದ ಸಂಗತಿಯಾಗಿದೆ. ಇಲಿ, ಹೆಗ್ಗಣದಂಥ ಜೀವ ಜಾಲಗಳು, ಇರುವೆಗಳು ತತ್ತರಿಸಿ ಹೋಗುತ್ತಾ, ಜೆ.ಸಿ.ಬಿ, ಇಟಾಚಿಯಂತಹ ಯಂತ್ರಗಳೇ ಸದ್ದು ಮಾಡಿ ನದಿಗಳು ಬೋರ್ಗರೆಯುವ ಜಾಗದಲ್ಲಿ ಯಂತ್ರಗಳು ಸದ್ದುಮಾಡುತ್ತಿವೆ.

ಸ್ಥಳೀಯ ದೇಶೀ ಪದ್ಧತಿಗಳು ತಮ್ಮ ಗುರುತು ಚಹರೆಗಳನ್ನು ಕಳೆದುಕೊಂಡು ಪಾರಂಪರಿಕ ಜ್ಞಾನವನ್ನು ಮರೆಸುವ ಮತ್ತು ಅದರಿಂದ ದೂರಸರಿಯುವ ಎಲ್ಲಾ ವ್ಯವಸ್ಥಿತ ಜಾಲಗಳೂ ತಮ್ಮ ಕಣ್ಣಮುಂದೆಯೇ, ಬಣ್ಣಕ್ಕೆ ಬೆರಗಾಗುವಂತೆ ಧನಿ ಕಳೆದುಕೊಂಡಿದ್ದೇವೆ. ಪೇಟೆಂಟ್ ಎಂಬ ಹಕ್ಕು ಸ್ವಾಮ್ಯದ ಹೆಸರಿನಲ್ಲಿ ಕಂಪನಿಗಳ ಮೆರವಣಿಗೆ ಸರ್ವಾಧಿಕಾರ ಮನೋಭಾವದಿಂದಾಗಿ ಕಂಪನಿಗಳ ಬಾಹುಳ್ಯವೂ ನಿಧಾನವಾಗಿ ಎಲ್ಲಾ ಕ್ಷೇತ್ರವನ್ನು ಕಬಳಿಸುತ್ತಿದೆ. ಜಾಗತೀಕರಣದ ಮೂಲ ಆಶಯವೆಂದರೆ ಕೊಳ್ಳುಬಾಕ ಸಂಸ್ಕೃತಿಯ ವಿಜೃಂಭಣೆಯೇ ಆಗಿದೆ. ಎಲ್ಲವೂ ಕಂಪನಿಯ ನಿರ್ಮಿತಿಯೇ ಆಗಿರುವುದರಿಂದ ವಯಸ್ಸಾದ ವೃದ್ಧ ಊರುತ್ತಿದ್ದ ಊರುಗೋಲು, ಕಂಪನಿಯ ಹಿಡಿತಕ್ಕೆ ಸಿಕ್ಕಿದೆ. ಬಿದಿರಿನ ಏಣಿ ಕಂಪನಿಯ ಸೆರೆಯಲ್ಲಿ ಸಿಕ್ಕಿ ಸ್ಥಳೀಯತೆಯಿಂದ ದೂರವಾಗಿದೆ. ಅಷ್ಟೇ ಅಲ್ಲದೇ ನಾವು ಸೇವಿಸುವ ಬಹುತೇಕ ಆಹಾರದ ಬಿಡಿ ಬಿಡಿ ಪಟ್ಟಣಗಳು, ಸ್ಪರ್ಧೆಯೋಪಾದಿಯಲ್ಲಿ ತಾ ಮುಂದು ನಾ ಮುಂದೆ ಎನ್ನುವಂತೆ ಮುಂದೆ ಬಂದು ನಿಂತಿವೆ. ಬಾಣಂತಿ, ಬಸುರಿ, ಚಿಕ್ಕಮಗುವಿಗೆ ಪಥ್ಯ ಕೊಡುವ ಪಾರಂಪರಿಕ ಜ್ಞಾನ ಹಿಂದೆ ಸರಿಯುತ್ತಿದ್ದು ಎಲ್ಲವೂ ಅಂತರ್ಜಾಲದ ಒಳಗೆ ಸಿಗುವಂತೆ ನೋಡಿಕೊಳ್ಳುವ ಕಂಪನಿಯ ಜಾಹೀರಾತು, ವಿನ್ಯಾಸಕಾರರು ತಮ್ಮ ಯೋಚನಾ ಕ್ರಮವನ್ನು ಕುಂಠಿತ ಮಾಡಿ ಕಂಪನಿಯ ಹಿಡಿತವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ನಾವು ಕಂಡುಕೊಳ್ಳುವ ಪರ್ಯಾಯ ದಾರಿಗಳೇನು ಎಂದು ಯೋಚಿಸಿದರೆ ತಕ್ಷಣಕ್ಕೆ ಎದುರಿಸಲಿಕ್ಕೆ ಆಗದೆ ಹೋದರೂ ಒಕ್ಕೂಟದ ವ್ಯವಸ್ಥೆಯಲ್ಲಿ ಪರ್ಯಾಯ ಮಾರ್ಗಗಳು ಸಿಗುತ್ತವೆ. ಸಾಮಾಜಿಕತೆಯ ಹೊಸ ಹೊಸ ರೂಪರೇಷೆಗಳು ಬದಲಾಗುತ್ತಿದ್ದಂತೆ ಅದರೊಳಗೆ ದೋಷಗಳೂ ಜೊತೆಯಲ್ಲಿರುತ್ತವೆ. ಎಂಬುದನ್ನು ಯಾರೂ ಮರೆಯಬಾರದು, ಆದರೆ ಅದರ ಬಗ್ಗೆ ಆಲೋಚಿಸುವುದು ನಿಧಾನವಾಗುತ್ತದೆ ಅಷ್ಟೆ. ಹಾಗಾಗಿ ತಕ್ಷಣಕ್ಕೆ ಮಿಂಚಿ ಮಿಣುಕುದೀಪಗಳಂತೆ ಉರಿಯುವ, ವಿದ್ಯುತ್ ದೀಪಗಳೂ ಮಿಣುಕುದೀಪಗಳಷ್ಟೇ ಹೊರತು ಪ್ರಕಾಶಮಾನವಾದ ಬೆಳಕು ನೀಡಲು ಸಾಧ್ಯವಿಲ್ಲ. ಇದನ್ನು ನಾಗರೀಕರಾದ ನಾವುಗಳು ಅರ್ಥಮಾಡಿಕೊಳ್ಳಬೇಕು. ಇಲ್ಲದಿದ್ದರೆ ಬಂಡವಾಳವನ್ನು ಹೂಡಿ ಬಂಡವಾಳವನ್ನು ತೆಗೆಯುವ ಉತ್ಪನ್ನಕಾರರಂತೆ ಜಗತ್ತಿನಾದ್ಯಂತ ಅಲೆಯನ್ನು ಸೃಷ್ಟಿಸಿ ಈಗಾಗಲೇ ಬಡವ ಮತ್ತು ಮಧ್ಯಮವರ್ಗವೂ ಸೇರಿದಂತೆ ಹಲವರು ನಿತ್ಯವೂ ಹಲವು ತಲ್ಲಣಗಳನ್ನು ಎದುರಿಸುತ್ತಿದ್ದಾರೆ.

ವಿದ್ಯಾವಂತ ನಾಗರೀಕ ಸಮುದಾಯಗಳೇ ಇಷ್ಟೆಲ್ಲ ತಲ್ಲಣದ ಸ್ಥಿತಿಯಲ್ಲಿ ಬದುಕು ಸವೆಸುತ್ತಿರಬೇಕಾದರೆ ಗುಡ್ಡಬೆಟ್ಟದಲ್ಲಿರುವ ಸಮುದಾಯ ಮುಖ್ಯವಾಹಿನಿಗೆ ಬರುವುದಾದರೂ ಯಾವಾಗ, ಎಂದು ಹಲವು ಸಾರಿ ಅನ್ನಿಸಿದೆ. ಹಣ ಒಂದು ಪ್ರತಿಷ್ಠೆಯ ಸಂಕೇತವಾಗಿದೆ. ಕ್ರೋಢೀಕರಣವೇ ಸಂಪತ್ತಿನ ಸಂಕೇತದಲ್ಲಿ ವಿಜೃಂಭಿಸುತ್ತಿದೆ.

ಹೆಚ್ಚು ಹೆಚ್ಚು ಕೂಡಿಟ್ಟವನು ಶ್ರೀಮಂತರ ಪಟ್ಟಿಯಲ್ಲಿ ಕಂಗೊಳಿಸುತ್ತಿದ್ದಾನೆ. ವಿಶ್ವ ಸಮುದಾಯದೊಳಗೆ ಸರ್ವರಿಗೂ ಸಮಾನತೆ ಸಿಗುವ ಕಾಲದಲ್ಲಿಯೇ ಮತ್ತಷ್ಟು ಅಂತರಗಳು ಹೆಚ್ಚಾಗುತ್ತಿವೆ. ಇದರಿಂದಾಗಿ ಬಡವರ ಬದುಕು ಮೂರಾಬಟ್ಟೆಯಾಗುತ್ತಿವೆ. ರೈತರು ಬೆಳೆದ ದವಸಧಾನ್ಯಗಳು ಸರ್ಕಾರದ ಮೋಸದಿಂದಾಗಿ ಕಂಪನಿಯ ಕಾವಲಿನೊಳಗೆ ಸೇರಿ ರೈತರ ಗೋಳಿಗೆ, ಬೆಲೆಯೇ ಇಲ್ಲದಂತಾಗಿದೆ. ಇಷ್ಟೆಲ್ಲಾ ಒತ್ತಾಯವನ್ನು ಸಾಮಾಜಿಕ ವಲಯ ಎದುರಿಸುತ್ತಿದ್ದರೂ ಸುಮ್ಮನೆ ಕೂತಿಲ್ಲ. ೧೯೯೯ರಲ್ಲಿ ವರ್ಲ್ಡ್ ಸೋಷಿಯಲ್ ಫೋರಮ್ ವೇದಿಕೆ ಹೆಸರಿನಲ್ಲಿ ಅನೇಕ ಬುದ್ಧಿ ಜೀವಿಗಳು, ವಿಷಯ ತಜ್ಞರು, ಪರಿಸರವಾದಿಗಳು ಸೇರಿಕೊಂಡು ಸಾಮಾಜಿಕ ಜಾಗೃತಿಯನ್ನು ಮೂಡಿಸುವಲ್ಲಿ ನಿರತರಾಗಿದ್ದಾರೆ. ಜಿ. ಶೃಂಗಸಭೆಯಲ್ಲಿ ನಡೆಯುವ ತೀರ್ಮಾನಗಳು, ಚರ್ಚೆಗಳು ತೈಲ ಉತ್ಪಾದನಾ ರಾಷ್ಟ್ರಗಳೊಂದಿಗೆ ಮಾಡಿಕೊಳ್ಳುತ್ತಿರುವ ಒಪ್ಪಂದಗಳೂ ಹಾಗೂ ಭಯೋತ್ಪಾದನೆಯಂತಹ ಜೀವ ವಿರೋಧಿ ಸಂಘಟನೆಗಳೂ ಕೋಮುದ್ವೇಷವನ್ನು ಕಾರುತ್ತಾ ರಾಷ್ಟ್ರ ರಾಷ್ಟ್ರಗಳ ನಡುವೆ ವೈರತ್ವವನ್ನು ಹೆಚ್ಚಿಸುತ್ತಿವೆ. ಹಸನಾದ, ಫಲವತ್ತಾದ ಭೂಮಿಯ ಮೇಲೆ ಕಣ್ಣಾಕುವ ಸರ್ಕಾರಗಳು, ತಂದುಕೂರಿಸುವ ಕಂಪನಿಗಳು, ಕಂಪನಿ ನಿರ್ಮಾಣ ಮಾಡುವ ಕ್ರಿಮಿನಾಶಕಗಳಿಂದ ತನ್ನ ಫಲವತ್ತತೆಯನ್ನು ಕಳೆದುಕೊಂಡು ದೇಸೀಯ ಜ್ಞಾನ ಪರಂಪರೆಗಳು ಮಂಗಮಾಯವಾಗುತ್ತಿವೆ. ಸ್ವಂತಿಕೆ, ತನ್ನದು ಎಂಬ ಆಲೋಚನೆಯನ್ನು ಕಳೆದುಕೊಂಡು ವಿದೇಶಿ ವಸ್ತುಗಳ ಮೇಲೆ ವ್ಯಾಮೋಹ ಹೆಚ್ಚಾಗಿ ನಮ್ಮ ಕೌಶಲತೆಯನ್ನು ನಾವೇ ಮರೆತುಹೋಗುವ ಹೊಸ ಅಪಾಯವನ್ನು ಈಗಾಗಲೇ ಕಂಪನಿಗಳು ಮಾಡಿಬಿಟ್ಟಿವೆ. ಹಾಗಾಗಿ ಸಣ್ಣ ಸಣ್ಣ ಹಿಡುವಳಿದಾರರಾಗಲೀ ಕುಶಲಕರ್ಮಿಗಳಾಗಲಿ, ಕೈಯಲ್ಲಿ ಕೆಲಸವಿಲ್ಲದೆ ಕಂಪನಿಯ ಗೇಟಲ್ಲಿ ಕಾವಲುಗಾರನಾಗಿ ಕಾಯುತ್ತಾ ನಿಲ್ಲಬೇಕಾಗಿದೆ. ಹೀಗೆ ಎಲ್ಲವನ್ನು ಅವರ ಕೈಗೆ ಕೊಟ್ಟು ರಣಹದ್ದಿನಿಂದ ತಪ್ಪಿಸಿಕೊಳ್ಳುವ ಕೋಳೀಮರಿಯ ಪಾಡಾಗಿದೆ. ನೆಲದೊಳಗೆ ಹರಿಯುವ ಎರೆ ಹುಳುವಿನ ನಿಧಾನಗತಿಯನ್ನು ಬಹುಸೂಕ್ಷ್ಮತೆಯಿಂದ ಎರಗುವ ಕಂಪನಿಗಳು ವಸಾ ಹತುಶಾಹಿಯ ಹೊಸ ಅವತಾರವನ್ನೇ ನಮ್ಮ ಕಣ್ಣ ಮುಂದೆ ರಾಚಿಸಿಬಿಟ್ಟಿವೆ. ಇದಕ್ಕೆ ಸಾಕ್ಷಿಯಾಗಿ ಹಳ್ಳಿಗಳೆಲ್ಲಾ ಒಡೆದ ಕೋಳಿಮೊಟ್ಟೆಯಂತೆ ಬೆತ್ತಲಾಗಿ ಗೋಚರಿಸುತ್ತಿರುವುದು ಸಾಕ್ಷಿಯಾಗಿ ನಿಂತಿದೆ. ಹಳ್ಳಿಗಳು ವೃದ್ಧಾಶ್ರಮಗಳಾಗಿ ಪರಿವರ್ತಿತವಾಗುವಂತೆ ಭಾಸವಾಗುತ್ತಾ, ಭಾವನಾತ್ಮಕತೆಗಿಂತ ಸಕಾರಣಾತ್ಮಕವಾಗಿ ಹಣದ ಹಿಂದೆ ಬಿದ್ದಿರುವ ಇಂದಿನ ಸಮೂಹ ಹಣಕೊಟ್ಟಾದರು ಹೆಣವನ್ನು ಶೃಂಗರಿಸುವಂತೆ ನಾಜೂಕಿನ ಸಂಸ್ಕೃತಿಯ ಹಿಂದೆ ಬಿದ್ದಿದೆ. ಕೃಷಿ, ಕೃಷಿಯ ಹಿಂದೆ ಇರುವ ಸಂಕಟಗಳು, ರೈತನ ಸಾಮಾಜಿಕ ಬದ್ಧತೆ, ಅವನ ಬದುಕು ಯಾರಮೇಲೆ ಅವಲಂಭಿತವಾಗಿದೆ, ಎನ್ನುವ ಸೂಕ್ಷ್ಮವನ್ನು ಎಚ್ಚರದಿಂದ ನೋಡಬೇಕಾಗಿದೆ. ಭೂಮಿಯನ್ನು ಪಡೆದವ ಒಂದು ಕಾಲಕ್ಕೆ ನಿಜವಾದ ಆಸ್ತಿ ಎನ್ನುತ್ತಿದ್ದ ಕಾಲವೂ ಬದಲಾಗುತ್ತಾ, ಅದು ಸಂಪೂರ್ಣವಾಗಿ ವ್ಯಾಪಾರೀಕರಣದ ಸುಳಿಗೆ ಬಿದ್ದ ಕೂಡಲೇ ಮಾಫಿಯ ಜಗತ್ತು ಚದುರಿ ಹೋಗಿದೆ. ನಗರದ ವಿನ್ಯಾಸ ರೂಪುರೇಖೆಗಳು, ಸಂಪತ್ತಿನ ಅಸಮಾನತೆ ಅಂತರ ಇಂದಿಗೂ ಕಡಿಮೆಯಾಗಿಲ್ಲ. ಒಂದು ಸುಧಾರಣಾ ಕ್ರಮವೆಂದರೆ ಭಾವನಾತ್ಮಕ

ನಂಟಿನ ಬೆಸುಗೆ, ದೇವರು ಧರ್ಮ ಜಾತಿಯ ವಿಚಾರದಲ್ಲಿ ಮುಕ್ತತೆಯ ಬಿಡುಗಡೆ ಹಳ್ಳಿಗಳಿಗಿಂತ ನಗರದಲ್ಲಿ ವಾಸಿ ಎನ್ನುವಷ್ಟು ಮಟ್ಟಿಗೆ ಬದಲಾಗಿದೆ. ಆದರೆ ಅದೊಂದರಿಂದಲೇ ಸಾಮಾಜಿಕ ಕ್ಷೇತ್ರ ಸಂತೃಪ್ತಿಯಿಂದ ಇದೆ ಎಂದು ಭಾವಿಸಲೂ ಬಾರದು. ಜಾನಪದ ಜಗತ್ತು ತನ್ನ ಕಣ್ಣಿನ ಪೊರೆ ಕಳಚಿಕೊಂಡು ಐಟಿಬಿಟಿಗಳ ಮೇಲೆ ದೇಶದ ಕೀರ್ತಿಯನ್ನು ಪ್ರಭಾವಿಸಬೇಕಿದೆ. ಭಾರತದ ಒಟ್ಟು ಅವಲಂಭಿತ ಶೇಕಡ ೭೪ರಷ್ಟು ಇದ್ದರೂ ಕೃಷಿಯನ್ನು ನಂಬಿ ಬದುಕಲು ಇಂದು ಹಾತೊರೆಯುತ್ತಿಲ್ಲ. ನಿರಂತರವಾಗಿ ಗುಳೆ ಹೊರಡುತ್ತಿರುವುದನ್ನು ಯಾವ ಸರ್ಕಾರಗಳು ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಪರ್ಯಾಯವಾಗಿ ಕೇಂದ್ರ ಸರ್ಕಾರದ ನರೇಗಾ ಯೋಜನೆ ಅನುಷ್ಠಾನಗೊಂಡರೂ ಕೂಲಿಕಾರರು ನೆಮ್ಮದಿಯಿಂದ ವರ್ಷಕ್ಕೆ ನೂರು ದಿನಗಳು ಕೂಲಿ ಮಾಡಿ ಬದುಕನ್ನು ಕಂಡುಕೊಳ್ಳುತ್ತಿಲ್ಲ. ಸರ್ಕಾರಗಳು ಯೋಜನೆಯನ್ನು ಬರಪೂರ ಘೋಷಣೆ ಮಾಡುತ್ತಾ ಅದನ್ನು ಸರಿಯಾಗಿ ಅನುಷ್ಠಾನ ಮಾಡದೆ ಇರುವುದರಿಂದ ಹೆಸರಿಗಷ್ಟೇ ಉಳಿಯುವ ಅಪಾಯವೂ ಇದೆ. ಉನ್ನತ ವ್ಯಾಸಂಗದಲ್ಲಿ ದೇಶೀಯ, ಪ್ರಾದೇಶಿಕತೆಯ ಸಂಪೂರ್ಣ ಕಡೆಗಣನೆ ಮಾಡುತ್ತಿರುವುದು ಮತ್ತೊಂದು ಆತಂಕದ ವಿಷಯ. ಇಂಗ್ಲೀಷ್ ಸಾರ್ವಕಾಲಿಕ ಭಾಷೆಯಾಗುತ್ತಾ, ಉದ್ಯೋಗ ನೀಡುವ ಭಾಷೆಯಾಗಿ ಬೆಳೆಸುತ್ತಾ ಬಂದಿರುವ ಕಂಪನಿಗಳು ಪ್ರಾದೇಶಿಕತೆಯ ಭಾಷೆಗಳನ್ನು ಅವಗಣನೆ ಮಾಡುತ್ತಿದ್ದಾರೆ. ಶಿಕ್ಷಣ ಮಾಧ್ಯಮದಲ್ಲೂ ಪ್ರಾದೇಶಿಕ ಭಾಷೆಗಳ ಮೇಲೆ ಸವಾರಿ ಮಾಡುತ್ತಿರುವ ಇತ್ತೀಚಿನ ಘಟನೆಗಳು ತುಂಬಾ ಆಶ್ಚರ್ಯವನ್ನು ತಂದಿದೆ. ಇಂಗ್ಲೀಷಿನ ಒತ್ತಡವನ್ನು ಸುಖಾ ಸುಮ್ಮನೆ ಮೈಮೇಲೆ ಏರುವ ಮತ್ತು ಅದನ್ನು ಜಾಗತಿಕವಾಗಿ ಸಾಧಿಸುತ್ತಾ ಆ ಮೂಲಕ ಪ್ರಾಂತೀಯ ಭಾಷೆಯನ್ನು ದೂರ ತಳ್ಳುತ್ತಿರುವುದನ್ನು ನಿತ್ಯವೂ ನೋಡುತ್ತಿದ್ದೇವೆ. ಹೀಗಾಗಿ ನಮ್ಮ ಬದುಕಿನ ಅಂಗವೇ ಆಗಿರುವ ಭಾಷೆಯನ್ನು ಉಳಿಸಿಕೊಳ್ಳುವ ಮೂಲಕ ನಮ್ಮ ಉಪಸಂಸ್ಕೃತಿಯನ್ನು ಕಾಪಾಡಿಕೊಳ್ಳುವ ಜರೂರು ಇದೆ. ಮುಂದುವರೆದ ದೇಶಗಳಾದ ಜಪಾನಿಯರು, ಚೀನಿಯರು ಈಗಲೂ ತಮ್ಮ ಜಪಾನಿಷ್ ಚೈನೀಸ್ ರಷಿಯನ್ ಫ್ರೆಂಚ್ ಭಾಷೆಗಳ ಮೂಲಕ ಎಲ್ಲವನ್ನೂ ಸಾಧ್ಯವಾಗಿಸಿಕೊಳ್ಳುತ್ತಿರುವ ಈ ಕಾಲದೊಳಗೆ ಮಾದರಿಯಾಗಬೇಕಿದೆ. ಹಾಗಾಗಿ ತಾಂತ್ರಿಕತೆಯಲ್ಲೂ ಪಶ್ಚಿಮ ದೇಶಗಳ ಜೊತೆ ಸ್ಪರ್ಧಿಸುವುದು ಸಾಧ್ಯವಾಗಿದೆ. “ಕೇವಲ ಕನ್ನಡವೇ ಮಾಧ್ಯಮವಾಗಿರುವ ವೈದ್ಯಕೀಯ ಕಾಲೇಜಿನ ಸ್ಥಾಪನೆ ಹಾಗೂ ಕರ್ನಾಟಕದಲ್ಲಿರುವ ಯಾವುದೇ ಸಂಸ್ಥೆ ಕೆಲಸಕ್ಕೆ ಬರುವ ಹೊರಪ್ರಾಂತ್ಯದ ಉದ್ಯೋಗಾರ್ಥಿಗಳು ಒಂದು ನಿಯಮಿತ ಅವಧಿಯೊಳಗೆ ಕಡ್ಡಾಯವಾಗಿ ಕನ್ನಡ ಕಲಿಯುವುದು” ಎಂಬ ಅನಂತ ಮೂರ್ತಿಯವರ ಎಚ್ಚರದ ಮಾತಿನ ಹಿಂದೆ ಪ್ರಾದೇಶಿಕತೆ ಮತ್ತು ಸಂಸ್ಕೃತಿ ಭಾವನಾತ್ಮಕ ಆಸ್ಮಿತೆಯೇ ತುಂಬಿದೆ. ಇಷ್ಟಾದರೂ ತಂತ್ರಜ್ಞಾನದ ಸುಳಿಗೆ ಸಿಕ್ಕಿ ಅದರ ಹಿಂದೆ ಓಡಬೇಕಾಗಿರುವುದರಿಂದ ಪ್ರಾಥಮಿಕ ಹಂತದಲ್ಲಿಯೇ ಕಂಪ್ಯೂಟರ್‌ನಲ್ಲಿ ಕನ್ನಡ ಬೆಳೆಸುವ ಕ್ರಮವು ಜಾರಿಯಾಗಬೇಕು. ಕನ್ನಡ ಭಾಷೆಯ ಕ್ರಮಗಳು ಎಲ್ಲಾ ಕ್ಷೇತ್ರದಲ್ಲೂ ಕಡ್ಡಾಯವಾಗುವುದರ ಜೊತೆಗೆ ಅದನ್ನು ಈ ಕಾಲಕ್ಕೆ ಹೊಂದುವ ರೀತಿಯಲ್ಲಿ ಕಟ್ಟಬೇಕಾಗಿದೆ. ೬ ಸಾವಿರ ಭಾಷೆಗಳಲ್ಲಿ ಶೇಕಡ ೫೦ರಷ್ಟು

ಭಾಷೆಗಳು ಅವನತಿಯ ಅಂಚಿನಲ್ಲಿರುವುದು ತುಂಬಾ ಗಮನಿಸಬೇಕಾದ ವಿಷಯ. ೪ಂರಷ್ಟು ಭಾಷೆಗಳು ಮುಂದಿನ ದಿನ ಮಾನದಲ್ಲಿ ಅಪಾಯದ ಸ್ಥಿತಿಗೆ ತಲುಪುವ ಸಾಧ್ಯತೆಯನ್ನು ಭಾಷಾ ತಜ್ಞರು ಮನವರಿಕೆ ಮಾಡಿಕೊಟ್ಟಿದ್ದಾರೆ. ಇಂದಿನ ಮಕ್ಕಳ ಯುಗವೇ ಇಂಗ್ಲೀಷ್ ಎನ್ನುವಂತೆ ಆಗಿದೆ. ಮಾಧ್ಯಮವಷ್ಟೇ ಅಲ್ಲದೇ ಮಾರುಕಟ್ಟೆಯ ಮಹಾಜಾಲವು ಸಂಪೂರ್ಣವಾಗಿ ಇಂಗ್ಲೀಷ್ ಕುದುರೆಯ ಬೆನ್ನತ್ತುತ್ತಿರುವುದನ್ನು ನೋಡಬಹುದು. ಹೀಗೇ ಮುಂದುವರೆದರೆ ನಮ್ಮ ಸಾಮಾಜಿಕ ಆರ್ಥಿಕತೆಯ ಮೇಲೆ ಹೊಡೆತ ಬೀಳುವುದಲ್ಲದೇ ಅನಾಥ ಪ್ರಜ್ಞೆಯು ಬೆಳೆದು ನಮ್ಮದು ಎಂಬ ದೇಶೀಯತೆಯನ್ನು ಮರೆತು ಪಾಶ್ಚಾತ್ಯ ಸಂಸ್ಕೃತಿಯ ವ್ಯಾಮೋಹಕ್ಕೆ ಒಳಗಾಗಿ ಕಂಪನಿಗಾಗಿಯೇ ಬದುಕುವ ದಾಸರಾಗಬೇಕಾಗುತ್ತದೆ. ಇದರಿಂದ ಪಾರಾಗಬೇಕಾದರೆ ಪ್ರಾಥಮಿಕ ಹಂತವಾಗಲೀ ಅದು ಉನ್ನತ ಶಿಕ್ಷಣವಾಗಲೀ ಎಲ್ಲದರಲ್ಲೂ ದೇಶೀಯ ಚಿಂತನಾಕ್ರಮಗಳು, ತತ್ವಗಳು ಸ್ವದೇಶಿ ಉದ್ದಿಮೆಗಳ ಬಗೆಗೆ ಹೆಚ್ಚು ಗಮನವಿಟ್ಟು ಯೋಜನೆಯನ್ನು ರೂಪಿಸಿ ಕೆಲಸ ಮಾಡಿದರೆ ಅದು ಗಾಂಧಿಯ ಪರಿಕಲ್ಪನೆಯ ಹತ್ತಿರಕ್ಕೆ ಬರಬಹುದು. ಕನ್ನಡವೂ ಬದುಕು ಮತ್ತು ಸಂಸ್ಕೃತಿಯೂ ಆಗುತ್ತಾ ಅನ್ನ ನಿಡುವ ಔದ್ಯೋಗಿಕ ಭರವಸೆ ಕೊಡುವಷ್ಟು ಸರ್ಕಾರಗಳು ಚಿಂತಿಸಬೇಕಾಗಿದೆ.ಇಲ್ಲದಿದ್ದರೆ ಬದುಕು ಮತ್ತೊಬ್ಬರ ಮೇಲೆ ಅವಲಂಬಿತವಾಗುತ್ತಾ ಹೀಗೆಯೇ ಸಾಗುತ್ತಿರುತ್ತದೆ.

ಪರಾಮರ್ಶನ ಗ್ರಂಥಗಳು

೧. ಸಂ.ಜಿ.ಆರ್. ತಿಪ್ಪೇಸ್ವಾಮಿ - ಜಾಗತೀಕರಣ ಮತ್ತು ಪರ್ಯಾಯಗಳು
ಸಿ.ವಿ.ಜಿ ಪ್ರಕಾಶನ, ಬೆಂಗಳೂರು.

೨. ಲಿಂಗದೇವರು ಹಳೇಮನೆ - ಜಾಗತೀಕರಣ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. ಜಗದೀಶ್ ಕೊಪ್ಪ - ಜಾಗತೀಕರಣ ಮತ್ತು ಗ್ರಾಮಭಾರತ
ಬೆಂಗಳೂರು.

೪. ಚಂದ್ರಶೇಖರ ಕಂಬಾರ - ದೇಶೀಯ ಚಿಂತನಗಳು ಅಂಕಿತ ಪ್ರಕಾಶನ,
ಬೆಂಗಳೂರು.

೫. ಕೆ.ವಿ. ತಿರುಮಲೇಶ್ - ನಮ್ಮ ಕನ್ನಡ, ಬೆಂಗಳೂರು,

**['ಸಂವಾದ' - ೨೦೧೮]**

**ಅಸ್ಪೃಶ್ಯ ಕಥನ**

**ಊರ ಬಾಗಿಲು ತೆರೆದಿದೆ, ಎದೆಯ ಬಾಗಿಲುಗಳು ಮಾತ್ರ ಮುಚ್ಚಿಯೇ ಇವೆ...!**

**-ಎನ್. ರವಿಕುಮಾರ್**

ಇನ್ನೂ ಮುಸುಕು ಹರಿದಿರಲಿಲ್ಲ. ಜೋಪಡಿ ಮುಂದಿನ ಅಂಗಳದಲ್ಲಿ ನಿಂತಿದ್ದ ಅಯ್ಯೋರ ಮಗ ಚಿಕ್ಕ ಅನ್ನೋರು 'ನಾರ ಬಾರಲೆ ಸೂಳೆಮಗೆ ಇನ್ನೂ ಮಲಗಿದಿಯಲ್ಲೋ, ಗೌರಿ ಸತ್ತೋಗವೆ, ಸೂತ್ತ, ಹೊತ್ತು ಹರಿಯೋಕು ಮುಂಚೆ ಹೊತ್ಕಂಡ್ ಹೋಗೊ' ಎಂದು ಕೂಗುತ್ತಿದ್ದ. ಚಿಕ್ಕಯ್ಯೋರಿಗೆ ಇನ್ನೂ ೧೪ ವರ್ಷ ಅಷ್ಟೇ. ಅವರಪ್ಪನ ವಯಸ್ಸಿನ ನನ್ನಪ್ಪನನ್ನ ಸಲೀಸಾಗಿ ಏಕವಚನದಲ್ಲಿ ಕರೆಯುತ್ತಿದ್ದ. ಹೀಗೆ ಕರೆಯುವುದು ಅವರ ಪಾಲಿನ ಪ್ರತಿಷ್ಠೆ ಕೂಡ. ಗಡಿಬಿಡಿಯಲ್ಲಿ ಎದ್ದ ಅಪ್ಪ ಮೂಲೆಯಲ್ಲಿ ಕವುಚಿಕೊಂಡಿದ್ದ ನನ್ನನ್ನು ತಿವಿದು ಎಬ್ಬಿಸಿ ಸೂರಿಗೆ ಸಿಕ್ಕಿಸಿದ್ದ ಚಾಕ, ಮೂಲೆಯಲ್ಲಿದ್ದ ಗೋಣಿಚೀಲ ಸುತ್ಕಂಡು ಅಯ್ಯೋರ ಕೊಟ್ಟಿಗೆ ಸೇರಿದ್ವಿ, ನೆನ್ನೆಯಷ್ಟೆ ಮೈತೊಳೆದು ಮೈದಡವಿ ಮುದ್ದಿಸಿದ್ದ ಗೌರಿ ನಿಶ್ಚಲವಾಗಿ ಒರಗಿದ್ದಳು. ಏನಾಗಿತ್ತೋ ಏನೋ? ಗೌರಿ ಉಸಿರು ಚೆಲ್ಲಿದ್ದಳು. ಅವಳು ಬದುಕಿದ್ದವರೆಗೆ ಹಾಲು, ಮೊಸರು, ಬೆಣ್ಣೆ, ತುಪ್ಪ ತಿಂದು ತೇಗಿದ್ದ ಮನೆಯವರು ದೂರದಲ್ಲಿ ನಿಂತು ಮಡಿ ಮಡಿ ಎನ್ನುತ್ತಿದ್ದರು.

ಕೈ ಗಾಡಿಯೊಂದಕ್ಕೆ ಗೌರಿಯನ್ನು ಏರಿಸಿಕೊಂಡು ಊರ ಹೊರಗೆ ಸಾಗಿಸಿದ ನಾವು ಚರ್ಮ ಸುಲಿದು ಹದವಾದ ಎದೆ ಮಾಂಸ, ತೊಡೆ ಮಾಂಸವನ್ನೆಲ್ಲಾ ಗಂಟು ಕಟ್ಟಿಕೊಂಡು ಉಳಿದ ಅವಶೇಷಕ್ಕೆ ಗುಂಡಿತೋಡಿ ಗೌರಿಯನ್ನು ಸಂಸ್ಕಾರಗೊಳಿಸಿ ಬಂದೆವು. ಬರುವಾಗ ಸುತ್ತ ನೆರೆದಿದ್ದ ನಾಯಿಗಳಿಗೂ ಪಾಲು ಹಂಚುವುದು ಮರೆಯಲಿಲ್ಲ. ಹಂಚಿ ಉಂಡ್ರೆ ಹಸಿವಿಲ್ಲ ಎಂಬಂತೆ ಹಟ್ಟಿಗೆಲ್ಲಾ ಬಾಡು ಹಂಚಿ ಉಂಡಿದ್ದಾತು. ಊರ ಚಾಕರಿಯ ಕುಟುಂಬವಾದ ನಮ್ಮದು ಇದು ನಿತ್ಯದ ಕಸುಬು. ತಾತ ಹಟ್ಟಿಯಲ್ಲಿ ಹೊಂಗೆ ಮರದ ಕೆಳೆಗೆ ಚಪ್ಪಲಿ ಹೊಲಿಯುತ್ತಾ, ಊರೂರು ಸುತ್ತಿ ಬಾನಿ ಒಲಿಯುತ್ತಾ ತಿರುಗುತ್ತಿದ್ದ. ಅದರೆ ಬಾವಿ ನೀರಿಗೆ ನನ್ನಟ್ಟಿ ಜನ ಹೋಗುವಂತಿರಲಿಲ್ಲ. ಊರೊಳಗೆ ನಡೆವ ದೇವರ ಆಚರಣೆಯನ್ನು ಬೇಲಿ ಹೊರಗೆ ನಿಂತು ನೋಡಬೇಕಿತ್ತು. ದೇವರೆಂಬ ದೇವರಿಗೆ ದೂರದಿಂದಲೇ ನಿಂತು ಕೈಮುಗಿವ ನನ್ನಟ್ಟಿ ಜನ ಅಷ್ಟರಲ್ಲೇ ಕೃತಾರ್ಥರಾಗಿ ಬಿಡುತ್ತಿದ್ದರು. ಇದೊಂದು ಬರ್ಬರ ಅಸ್ಪೃಶ್ಯತೆ ಎಂದು ಬಹಳಷ್ಟು ಕಾಲ ನನ್ನಟ್ಟಿ ಜನರಿಗೆ ಅನಿಸಿರಲೇ ಇಲ್ಲ. ಹಟ್ಟಿಗೆ ಪ್ರತ್ಯೇಕ ದಾರಿಯಿದೆ. ಗಿಡ-ಗಂಟೆಗಳ ಹಾದು ಹೋಗಬೇಕಿತ್ತು. ಊರಿಗೆ ದೊಡ್ಡ ಕಮಾನು ಹಾದು ರಾಜಬೀದಿಯೊಂದು ತೆರದುಕೊಂಡಿತ್ತು. ತಾತನಿಗೆ ಜೋತು ಬಿದ್ದು ನಾನು ಆಗಾಗ ಕೇಳಿದ್ದೂ ಇದೆ. ಊರ ದಾರಿಯೊಳಗೆ ಯಾಕೆ ನನ್ನನ್ನು ಕರೆದೊಯ್ಯಲ್ಲ? ಎಂದಾಗಲೆಲ್ಲಾ ತಾತ, ಅದು

ಉತ್ತಮರ ದಾರಿ ಅಲ್ಲಿ ಹೋಗಾಕೆ ಬಿಡೋಲ್ಲ...' ಎಂದು ಕಲ್ಲು-ಮುಳ್ಳಿನ ದಾರಿಯಲ್ಲಿ ಕೈಹಿಡಿದು ಮೆಲ್ಲಗೆ ಕರೆದೊಯ್ಯುತ್ತಿದ್ದರು. ಆಗ ಅವರು ಬಿಡುತ್ತಿದ್ದ ನಿಟ್ಟುಸಿರುಗಳೇ ನಮ್ಮ ಬದುಕಿನ ಕಥನಗಳನ್ನು ಹೇಳುತ್ತಿದ್ದವು.

ಬಾವಿ ನೀರಿಗೆ ಬಹಿಷ್ಕಾರವನ್ನು ಪ್ರಶ್ನಿಸುವ, ಊರೊಳಗಿನ ಕಿರು ಹೂವಿನಲ್ಲಿ ಟೀ ಕುಡಿಯಲು ಅಲ್ಯುಮಿನಿಯಂ ಲೋಟವಿಟ್ಟಿದ್ದನ್ನು ಧಿಕ್ಕರಿಸುವ ಕಾಲವೊಂದು ಬಂದೇ ಬಿಟ್ಟಿತು. ನೀರಿಗೋದ ಅವ್ವ, ಚಿಕ್ಕ, ಅತ್ತೆಯ ಗಡಿಗೆ ಒಡೆದು ಕಳುಹಿಸಿದ ಸವರ್ಣೀಯರ ವಿರುದ್ಧ ಕದನ ನಡೆದು ಹೋಯಿತು. ಬಹಿರಂಗ ಅಸ್ಪಶ್ಯತೆ ಅಚರಣೆಗೆ ಕೊನೆ ಬಿದ್ದಿತಾದರೂ ಮೆದುಳ ತುಂಬಾ ಜಾತಿ ಶ್ರೇಷ್ಠತೆಯ ವಿಷ ತುಂಬಿಕೊಂಡ ಮಂದಿಯ ಅಂತರಂಗದಲ್ಲಿ ಅಸ್ಪೃಶ್ಯತೆ ಆಚರಣೆ ನಾಶವಾದಂತೆ ಕಾಣುತ್ತಿಲ್ಲ. ನಮಗೀಗ ಊರ ದಾರಿ ತೆರೆದಿದೆ ನಿಜ, ಆದರೆ ಉತ್ತಮರೆನಿಸಿಕೊಂಡ ಮಂದಿಯ ಎದೆಯ ಬಾಗಿಲುಗಳು ಮಾತ್ರ ಇನ್ನೂ ಮುಚ್ಚಿಯೇ ಇವೆ.

***

ಜೋಪಡಿಯ ಕೂಗಳತೆಯಲ್ಲೇ ಇದ್ದ ಕಲ್ಯಾಣ ಮಂಟಪದಲ್ಲಿ ವಾಲಗದ ಸದ್ದು ಕೇಳಿದ್ದೆ ತಡ ಖಾಲಿ ಬಿದ್ದು ನರಳುತ್ತಿದ್ದ ಕರುಳು ಮುಲುಗುತ್ತಿತ್ತು. ಕೈ ಕಾಲುಗಳಿಗೆ ಅಗೋಚರ ಶಕ್ತಿಯೊಂದು ಹರಿದು ಸೆಟೆದು ನಿಲ್ಲುತ್ತಿದ್ದವು. ಅವನು ಬಾಗಿಲಲ್ಲಿ ಕಾವಲಿಗೆ ನಿಂತು ಬಿಟ್ಟಿದ್ದಾನೆ. ಕೈಯಲ್ಲೊಂದು ಕೋಲು ಇದೆ, ಬಣ್ಣ ಬಣ್ಣದ ಬಟ್ಟೆ ಉಟ್ಟವರು ಒಳ ಹೋಗುತ್ತಿದ್ದಾರೆ. ಅಡಿಗೆಯ ಘಮಲು ಆಹ್ವಾನಿತರು ಪೂಸಿಕೊಂಡ ಸುಗಂಧವನ್ನು ದಾಟಿ ಮೂಗನ್ನು ತಬ್ಬಿಕೊಳ್ಳುತ್ತಿದೆ. ಚೌಟ್ರಿಗೂ ಒಂದು ಹಿಂಬಾಗಿಲು ಇರುವುದು ನೆನಪಾಯಿತು. ನುಗ್ಗಿಬೆಟ್ಟೆ. ಪಂಕ್ತಿಯ ಜಾಗವೂ ಸಿಕ್ಕಿತು. ಮತ್ತೆ ಮತ್ತೆ ಮುಂಬಾಗಿಲ ಕಡೆ ಕಣ್ಣು ಇಣುಕುತ್ತಾ ಕಾವಲಿಗೆ ನಿಂತವನನ್ನೆ ಕಾಯುತ್ತಿದ್ದವು. ಅಬ್ಬಾಬ್ಬಾ! ರಸಕವಳ, ಜಿಲೆಬಿ, ಬಾದುಷಾವನ್ನು ಸದ್ದಿಲ್ಲದೆ ಚೆಡ್ಡಿ ಜೇಬಿಗೆ ಸೇರಿಸಿಕೊಂಡೆ, ಅನ್ನವನ್ನು ಮೇಣದ ಜೀಲಕ್ಕೆ ತುಂಬಿಕೊಂಡು ಮನೆಯಲ್ಲಿದ್ದವರಿಗೂ ಕೊಂಡೊಯ್ಯುವ ಸಂಚಿನಲ್ಲಿದ್ದೆ. ಯಾರದ್ದೋ ದೊಡ್ಡವರ ಮನೆ ಮದುವೆ ಅದು. ಎಲೆ ಮುಂದೆ ೧ರೂ. ಕಾಸು ಕೂಡ ಇಟ್ಟಿದ್ದರು. ಸ್ವರ್ಗಕ್ಕೆ ಮೂರೇ ಗೇಣು! ಕೈ-ಕರುಳು ಎರಡು ತಹತಹಿಸುತ್ತಿದ್ದವು. ಬಾಗಿಲ ಕಡೆ ನೋಡಿದೆ. ಕಾವಲಿಗಿದ್ದವನು ಕಾಣಲಿಲ್ಲ. ಒಂದೇ ಒಂದು ತುತ್ತು ಬಾಯಿಗಿಡುವ ಹೊತ್ತು ಹಿಂದಿನಿಂದ ತಲೆಗೆ ಬಲವಾಗಿ ಗುದ್ದಿದ ಸದ್ದಾಯಿತು. ಗಂಟಲು ತನ್ನನ್ನು ತಾನೆ ಅದುಮಿಕೊಂಡಿತು. ಪಂಕ್ತಿಗೆ ಪಂಕ್ತಿಯೇ ಬಾಯಿ ಚಪ್ಪರಿಸುತ್ತಾ ನನ್ನತ್ತ ತಿರುಗಿತು. ನನ್ನನ್ನು ಕೈದು ಮಾಡಿ ಮ್ಯಾನೇಜರ್ ರೂಂನಲ್ಲಿ ಕೂಡಿಟ್ಟು ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಮೇಣದ ಚೀಲದಲ್ಲಿದ್ದ ಅನ್ನ, ಚಡ್ಡಿ ಜೇಬಿನಲ್ಲಿದ್ದ ಜಿಲೇಬಿ, ಬಾದುಷಾನೆಲ್ಲಾ ಜಪ್ತಿ ಮಾಡಲಾಯಿತು. 'ಮುದ್ರೆ ಯಜಮಾನ' ಬಂದು ವಿಚಾರಣೆಯೂ ನಡೆಯಿತು. 'ದೊಡ್ಡವರ' ಮದುವೆ ಮುಗಿದು ಚೌಟಿ ಖಾಲಿಯಾಗುವವರೆಗೂ ಕೂಡಿಡಲಾಯಿತು. ಜಾತಿ ಹಂಗಿನಲ್ಲಿ ಉರಿದು ಮುಕ್ಕಿಬಿಟ್ಟರು ಆ 'ಮನುಷ್ಯ'ರೆಂದುಕೊಂಡವರು. ಒಣಗಿದ ಬಾಯಿಗೆ ಕಣ್ಣೀರು ಕುಡಿಸುತ್ತಲೇ ದಾಹ ತೀರಿಸಿಕೊಂಡ ನಾನು ಹಸಿವೆ ಜೊತೆ

ಕದನಕ್ಕೆ ಬಿದ್ದವನಂತೆ ಕಿಟಕಿ ಕಡೆ ಇಣುಕಿದೆ. ಜಪ್ತಿ ಮಾಡಿದ್ದ ಅನ್ನವನ್ನು ಕಸದ ತೊಟ್ಟಿಗೆ ತುಂಬಿದ್ದರು. ರಾಶಿ ರಾಶಿ ಅನ್ನವನ್ನು ಎಲೆ ಸಮೇತ ಸುರಿಯುತ್ತಿದ್ದರು. ಅನ್ನ ನನ್ನ ನೋಡಿ ಪಕಪಕನೇ ನಗುತ್ತಿತ್ತು.

ಮೈಮೇಲಿದ್ದ ಬಾಸುಂಡೆಗಳನ್ನು ಮರೆಮಾಚಿಕೊಂಡು ಮನೆ ಸೇರಿದೆ. ಮೋಟು ಗೋಡೆಯ ಮೇಲೆಅವ್ವ ಆಗಷ್ಟೇ ಚಿಮಣಿ ಬುಡ್ಡಿ ಹಚ್ಚಿದ್ದಳು. ಅದು ಕೂಡ ಎಣ್ಣೆ ಇಲ್ಲದೆ ಯಾವ ಹೊತ್ತಿಗಾದರೂ ಆತ್ಮಹತ್ಯೆ ಮಾಡಿಕೊಳ್ಳುವಂತಿತ್ತು. 'ಏನಾದ್ರೂ ತಿನ್ತಿಯಾ ಮಗಾ ಅಂದ್ಲು', ಖಾಲಿ ಮಡಿಕೆಗೆ ಕೈಯಾಡಿಸಿದಳು. ಒಲೆಯೊಳಗಿನ ಬೂದಿಯಲ್ಲಿ ಮಲಗಿದ್ದ ಬೆಕ್ಕು ನಮ್ಮಿಬ್ಬರನ್ನು ನೋಡಿ ನಕ್ಕಿತು.

***

ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ನಮ್ಮೂರಿನ ಅವತ್ತಿನ ಪ್ರತಿಷ್ಠಿತ ಖಾಸಗಿ ಶಾಲೆಯೊಂದರಲ್ಲಿ ಲನೇ ಕ್ಲಾಸ್‌ನಿಂದ ಓದಬೇಕು ಎಂದು ಪಟ್ಟು ಹಿಡಿದ ನನ್ನನ್ನು ಸೇರಿಸಲು ಅವ್ವ ಹರಿದ ಸೆರಗ ತುದಿಯಲ್ಲಿ ಗಂಟಿಕ್ಕಿಕೊಂಡಿದ್ದ ೨೫ ರೂ.ಗಳನ್ನು ಬಿಚ್ಚಿಡುತ್ತಾ ಪ್ರಾಂಶುಪಾಲರ ಮುಂದೆ ಅಂಗಲಾಚುತ್ತಿದ್ದಳು, 'ಇಷ್ಟು ಹಣಕ್ಕೆ ಅಡ್ಮಿಷನ್ ಸಿಗೋದಿಲ್ಲ ಕಣಮ್ಮ. ನಿಮಗೆ ಗೌರಮೆಂಟ್ ಸ್ಕೂಲ್‌ಗಳಿದಾವೆ. ಅಲ್ಲಿಗೆ ಹೋಗಿ' ಎಂದು ಶಾಸ್ತ್ರಿಗಳು ಗದರುತ್ತಿದ್ದರು. ನಿಮಗೆ ಎಲ್ಲಾ ಪುಕ್ಸಟ್ಟೆ ಆಗ್‌ಬೇಕು, ನಿಮ್ಮ ಒಂದು ಜಾತಿನಾ?' ಎಂದು ಹಂಗಿಸಿ ಹರಿಹಾಯುತ್ತಿದ್ದ. ಬರ ಬರನೇ ವಾಪಾಸ್ ಬಂದ ನನ್ನವ್ವ ಅವನು ಕೇಳಿದ ೬೦೦ ರೂ. ಗಳನ್ನು ಜೋಡಿಸಿಕೊಂಡೆ ನನ್ನನ್ನು ಈ 'ಪ್ರತಿಷ್ಠಿತ' ಶಾಲೆಗೆ ಸೇರಿಸಿ ಬಿಟ್ಟಳು.

ಸ್ಕಾಲರ್‌ಶಿಪ್ ಪಡೆಯಲು ಸಾಲು ನಿಂತಾಗ 'ನಿಮ್ಮಪ್ಪನ ಮನೆಯ ಆಸ್ತಿ ಬಂದಿದೆ ನೋಡಿ, ತಗೋಳಕ್ಕೆ ಬಂದ್ ಬಿಟ್ರಾ...' ಎಂದು ಲೇವಡಿ ಮಾಡುತ್ತಿದ್ದ ನಾಮದಾರಿ ಕ್ಲರ್ಕ್‌ಗೆ, ಕ್ಲಾಸ್‌ನಲ್ಲಿ ಇಲ್ಲ ಸಲ್ಲದ ನೆಪದಲ್ಲಿ ಬೆತ್ತದಿಂದ ಬಡಿದು ಕೈ ತೊಳೆದು ಕೊಳ್ಳುತ್ತಿದ್ದ ಅಗ್ರಹಾರದ ಗುರುಗಳಿಗೆ ನಾವು ಎಂದೂ ಮನುಷ್ಯರಾಗಿ ಕಂಡಿದ್ದಿರಲಿಲ್ಲ. ಅದೊಂದು ದಿನ ದಂಗೆ ಏಳದೆ ವಿಧಿಯಿರಲಿಲ್ಲ. ಜಾತಿನಿಕೃಷ್ಣ ದೂಷಣೆಗೆ ಗುರಿಯಾದ ಗೆಳೆಯರೆಲ್ಲಾ ಸೇರಿ ಶಾರದಾ ಪೂಜೆ ನೆಪದಲ್ಲಿ ಪ್ರಿನ್ಸಿಪಾಲ್ ಚೇಂಬರ್‌ನಲ್ಲಿ ಇಡಲು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿತ್ರಪಟವೊಂದನ್ನು ಕೊಡುಗೆಯಾಗಿ ನೀಡಿದೆವು. ಪರಿಸ್ಥಿತಿ ಅರ್ಥಮಾಡಿಕೊಂಡ ಜಾತಿಶ್ರೇಷ್ಠ ಹುಳಗಳು ಅದನ್ನು ನಿರಾಕರಿಸಲು ಧೈರ್ಯ ತೋರಲಿಲ್ಲ. ನಾನು ಈಗಲೂ ಆ ಶಾಲೆಗೆ ಹೋದ ಸಂದರ್ಭ ಬಂದಾಗಲೆಲ್ಲಾ ಗೋಡೆ ಮೇಲೆ ತೂಗು ಬಿದ್ದ ಆ ಮಹಾಬೆಳಕ'ನ್ನು ಕಂಡು ಕಣ್ಣುಂಬಿಕೊಳ್ಳುತ್ತೇನೆ. ಕಂಡುಂಡ ನೋವು ನೆನಪಾದಾಗಲೆಲ್ಲಾ ಕಣ್ಣು ತೇವಗೊಂಡು ನರಳುತ್ತವೆ. ಬದಲಾದ ಕಾಲಘಟ್ಟದಲ್ಲೂ ಜಾತಿಶ್ರೇಷ್ಠತೆಯ ವಿಷ ಜಿನುಗುವುದ ಕಂಡು ಆಕ್ರೋಶ ಕುದಿಯುತ್ತದೆ.

**ಹಳ್ಳಿಯಲ್ಲಿ ದಂತರಿಗೆ ಕೇರಿಗಳು, ಪಟ್ಟಣಗಳಲ್ಲಿ ಕೊಳೆಗೇಲಿಗಳು**

**- ಐಸಕ್ ಅರುಳ್ ಸೆಲ್ವ**

**ಬೆಂಗಳೂರು ನಗರದ ಕೊಳೆಗೇರಿಗಳು, ಧ್ವಂಸ ಹಾಗೂ ಸ್ಥಳಾಂತರ ಒಂದು ನೋಟ**

ಮೊದಲಿಗೆ ಕೆಲವು ಕೊಳೆಗೇರಿ ಧ್ವಂಸ ಹಾಗೂ ಸ್ಥಳಾಂತರದ ಪ್ರಕರಣಗಳನ್ನು ಪಟ್ಟಿ ಮಾಡುತ್ತ, ಆ ಉಧಾರಣೆಗಳ ಮೂಲಕ ನಗರದಲ್ಲಿನ ಕೊಳೆಗೇರಿ ಎತ್ತಂಗಡಿಗಳ ಹಿಂದಿನ ರಾಜಕೀಯ ಹಾಗೂ ಮಾದರಿಗಳನ್ನು ಪರಿಶೀಲಿಸೋಣ. ಸ್ವಾತಂತ್ರದ ನಂತರದ ೫೦ರ ದಶಕದಲ್ಲಿ ರವೀಂದ್ರ ಕಲಾಕ್ಷೇತ್ರ ನಿರ್ಮಿಸುವ ಸಲುವಾಗಿ ಅಲ್ಲಿ ಆಗಾಗಲೆ ಇದ್ದ ಗಂಗಮ್ಮನಚೇರಿ ಎಂಬ ಕೊಳೆಗೇರಿಯ ೩೦೦ ತೆಂಗಿನ ಗರಿ ಗುಡಿಸಲುಗಳನ್ನು ಖಾದರ್ ಶೇರೀಫ್ ಗಾರ್ಡನ್‌ನ ಖಾಸಗೀ ಭೂಮಿಗೆ ಸ್ಥಳಾಂತರಿಸಲಾಯಿತು. ಆ ಜನ ಇವತ್ತಿನವರೆಗೂ ತಮ್ಮ ಭೂಮಿ ಹಕ್ಕಿಗಾಗಿ ಖಾಸಗೀಯವರೊಂದಿಗಿನ ಸೆಣಸಾಟ ಮುಂದುವರೆಯುತ್ತಿದೆ, ಭೂಮಿ ಖಾಸಗಿಯವರದ್ದಾದ ಕಾರಣ, ಅವರಿಗೆ ಸೂಕ್ತ ಮೂಲಭೂತ ಸೌಲಭ್ಯಗಳನ್ನು ಸರ್ಕಾರದಿಂದ ಮಾಡಿಕೊಡಲಾಗಿಲ್ಲ. ಸ್ಲಂ ಘೋಷಣೆ, ರದ್ದು ಮತ್ತೆ ಘೋಷಣೆ ಮತ್ತೆ ರದ್ದು ಎಂಬಂತೆ ಮನುಷ್ಯರ ವಾಸಕ್ಕೆ ಯೋಗ್ಯವಲ್ಲದ ಸ್ಥಿತಿಯಲ್ಲಿ ಇವರ ಬದುಕು ಮುಂದುವರೆಯುತ್ತಿದೆ. ಅದೇ ೫೦ರ ದಶಕದಲ್ಲಿ ಸಂಪಂಗಿಟ್ಯಾಂಕ್ ನಲ್ಲಿ ಇದ್ದ ಗುಡಿಸಲುಗಳು ಬೈರಸಂದ್ರ ಪ್ರದೇಶಕ್ಕೆ ಸ್ಥಳಾಂತರ ಮಾಡಲಾಯಿತು ಎಂದು ನಗರದ ಇತಿಹಾಸಗಾರರಾದ ಜಾನಕಿನಾಯರ್ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸುತ್ತಾರೆ.

ಎರಡನೆ ಅತಿದೊಡ್ಡ ಸ್ಲಂ ಧ್ವಂಸ ಮತ್ತು ಸ್ಥಳಾಂತರದ ಪ್ರಕರಣಗಳು ೧೯೭೫ರಲ್ಲಿನ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಾಣಬಹುದು. ಆಗ ನಾಗರೀಕ ಮತ್ತು ಮೂಲಭೂತ ಹಕ್ಕುಗಳನ್ನು ಪ್ರಭುತ್ವ ಕಿತ್ತು ಕೊಂಡ ಸಂದರ್ಭವಾಗಿದ್ದ ಕಾರಣ, ಜನ ಪ್ರತಿಭಟಿಸುವ ಸನ್ನಿವೇಶ ಇರಲಿಲ್ಲ. ದೇಶದ ಎಲ್ಲಾ ನಗರಗಳ ಬಡಜನತೆ ಎದುರಿಸಿದ ಗುಡಿಸಲುಗಳ ಧ್ವಂಸ ಪ್ರಕರಣಗಳನ್ನು ಬೆಂಗಳೂರು ನಗರವೂ ಎದುರಿಸುವಂತಾಯಿತು. ಜಕ್ಕರಾಯನ ಕೆರೆ ಸ್ಟೇಡಿಯಂ ಜಾಗದಲ್ಲಿದ್ದ ೩೬೦ ಗುಡಿಸಲುಗಳು ಆಗ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿದ್ದ ಕೋರಮಾಂಗಲದ ಕೆರೆಗೆ ಸ್ಥಳಾಂತರಿಸಲಾಯಿತು. ಪೂರ್ಣಿಮಾ ಚಿತ್ರಮಂದಿರ ಎದುರುಗಿರುವ ರಸ್ತೆಗೆ ದಾರಿ ಮಾಡಲು ಅಲ್ಲಿದ್ದ ನೂರಾರು ಗುಡಿಸಲುಗಳನ್ನು ಕಿತ್ತೆಸೆಯಲಾಯಿತು. ಆ ಜನರಿಗೆ ಯಾವುದೆ ಪುನರ್ ವಸತಿ ವ್ಯವಸ್ಥೆ ಮಾಡಿಲ್ಲ. ಅದೇ ೧೯೭೫-೭೬ರಲ್ಲಿ ಲಾಲ್‌ಬಾಗ್ ಹತ್ತಿರವಿರುವ ಹಣ್ಣುಗಳ ಎಪಿಎಂಸಿ ಮಾರ್ಕೆಟ್‌ನ ಪಕ್ಕದಲ್ಲಿದ್ದ ಕೊಳೆಗೇರಿಯನ್ನು ನಿಮಗೆ ಹೊಸದಾಗಿ ಮನೆ ನಿರ್ಮಿಸಿ ಕೊಡುತ್ತೆವೆ ಎಂದು ಹೇಳಿ ಸಿದ್ದಾಪುರದ ಬಳಿ ಟಿನ್ ಶೆಡ್‌ಗಳನ್ನು ನಿರ್ಮಿಸಿ ಸ್ಥಳಾಂತರಿಸಲಾಯಿತು.

ಅವರು ಆಗಾಗಲೆ ವಾಸಮಾಡುತ್ತಿದ್ದ ಭೂಮಿ ಅಧಿಕಾರಿಗಳ ಕುಮ್ಮಕ್ಕಿನಿಂದ ಭೂಕಳ್ಳರ ಪಾಲಾಯಿತು ಜನ ಇನ್ನು ಅದೇ ಸಿದ್ದಾಪುರದ ಟಿನ್ ಶೆಡ್ಡುಗಳ ಪ್ರದೇಶದಲ್ಲಿ ವಾಸವಾಗಿದ್ದಾರೆ.

೧೯೮೫-೮೬ರ ಕಾಲಘಟ್ಟದಲ್ಲಿ ನಗರದಲ್ಲಿ ನಡೆದ ಸಾರ್ಕ್ ಸಮ್ಮೇಳನದ ಸಂದರ್ಭದಲ್ಲಿ ನಗರವನ್ನು ಅಂದ ಗೊಳಿಸುತ್ತೇವೆ, ವಿಶ್ವ ದರ್ಜೆಗೆ ಏರಿಸುತ್ತೇವೆ, ಎಂಬ ನೆಪದಲ್ಲಿ ಮತ್ತೊಂದು ಬೃಹತ್ ಸ್ಲಂ ಧ್ವಂಸ ಪ್ರಕರಣಗಳಿಗೆ ನಗರ ಸಾಕ್ಷಿಯಾಯಿತು. ದಕ್ಷಣ ಏಶಿಯಾದ ನಾಯಕರು ಬೆಂಗಳೂರು ನಗರಕ್ಕೆ ಬರುತ್ತಿದ್ದಾರೆ ಅವರ ದೃಷ್ಟಿಯಿಂದ ನಗರದ ಬಡತನವನ್ನು ಮತ್ತು ಬಡವರನ್ನು ಮರೆಮಾಚಲು, ಎಲ್ಲಿಲ್ಲದ ಕಸರತ್ತುಗಳನ್ನು ಅಂದಿನ ಸರ್ಕಾರ ಮಾಡಿತು. ಆಗ ನಗರದಲ್ಲಿನ ಭಿಕ್ಷುಕರನ್ನು, ಭಿಕ್ಷುಕರ ಕೇಂದ್ರದಲ್ಲಿ ಬಲವಂತವಾಗಿ ಬಂಧಿಸಲಾಯಿತು. ನಗರದ ಕೇಂದ್ರ ಭಾಗದಲ್ಲಿದ್ದ ಹಲವಾರು ಕೊಳೆಗೇರಿಗಳನ್ನು ಒಡೆದು ನಗರದ ಆಚೆ, ನಗರಾಡಳಿತದ ವ್ಯಾಪ್ತಿಯಿಂದ ಹೊರಗಿದ್ದ, ಬನಶಂಕರಿ, ಹೆಗಡೆನಗರ, ಲಗ್ಗೆರೆ, ಕೊರಮಂಗಲ ಎಂಬಂತೆ ನಾಲ್ಕು ಕಡೆಗಗಳಲ್ಲಿ ಸಾವಿರಾರು ಸಂಖ್ಯೆಯ ಗುಡಿಸಲುಗಳನ್ನು ಸ್ಥಳಾಂತರಿಸಲಾಯಿತು. ಅದರ ಪಟ್ಟಿ ಬಹಳ ದೊಡ್ಡದಾಗಿದೆ. ನಗರದಲ್ಲಿ ಸಾರಿಗೆ ವ್ಯವಸ್ಥೆ ಸಮರ್ಪಕವಾಗಿಲ್ಲದ ಆ ಸಂಧರ್ಭದಲ್ಲಿ ಜನರನ್ನು ನಗರದ ಆಚೆ ಸ್ಥಳಾಂತರ ಮಾಡಿದ ಕಾರಣಕ್ಕೆ ಮತ್ತು ಹೊಸ ಪ್ರದೇಶಗಳು ಹಾವು ಚೇಳುಗಳಂತಹ ವಿಷಕಾರಿ ಜಂತುಗಳ ಪ್ರದೇಶವಾದ ಕಾರಣ, ಈ ಜನರ ಮಾನವ ಅಭಿವೃದ್ಧಿ ಸೂಚ್ಯಾಂಕ ಒಂದು ತಲೆಮಾರು ಹಿಂದಕ್ಕೆ ಹೊಗುವಂತ್ತಾಯಿತು. ಆಗ ಎತ್ತಂಗಡಿಯಾದ ಸ್ಲಂಗಳು ವಿಧಾನ ಸೌದದ ಸುತ್ತ-ಮುತ್ತಲಿನ ಐದು ಕಿಲೋಮಿಟರ್ ಒಳಗಿದ್ದು, ಸ್ಥಳಾಂತರಿಸಲಾದ ಭೂಮಿ ಅಲ್ಲಿಂದ ಐದರಿಂದ ಹದಿನೈದು ಕಿಲೋಮಿಟರ್‌ವರೆಗೂ ದೂರದಲ್ಲಿ ಇದ್ದವು. ಹತ್ತಿರದ ಸ್ಥಳಾಂತರ ಪ್ರದೇಶವೆಂದರೆ ಕೊರಮಂಗಲ, ದೂರದ ಸ್ಥಳಾಂತರ ಪ್ರದೇಶವೆಂದರೆ ಬನಶಂಕರಿ, ಹೆಗಡೆನಗರ ಹಾಗೂ ಲೆಗ್ಗೆರೆ ಪ್ರದೇಶಗಳಗಿದ್ದವು. ಈ ಪ್ರದೇಶಗಳ ಆಗಿನ ಸ್ಥಿತಿಯನ್ನು ಉಹಿಸಿಕೊಳ್ಳಿ ೯೦ ಸಾವಿರಕ್ಕೂ ಹೆಚ್ಚಿನ ಕುಟುಂಬಗಳನ್ನು ಈ ಮಾನವ ಡಂಪಿಂಗ್ ಯಾರ್ಡ್‌ಗಳಿಗೆ ಬಲವಂತವಾಗಿ ಸ್ಥಳಾಂತರ ಮಾಡಲಾಯಿತು. ಆಗಿನ ಒಂದು ಸ್ಲಂನ ಸ್ಥಳಾಂತರವನ್ನು ವಿವರಿಸುವುದಾದರೆ, ಮಿಲ್ಲರ್ ಟ್ಯಾಂಕ್ ಒಳಗಿದ್ದ ಸಾವಿರಾರು ಗುಡಿಸಲುಗಳನ್ನು ಲಿಂಗರಾಜಪುರಮ್ ಗ್ರಾಮದ ಸರ್ಕಾರಿ ಭೂಮಿಗೆ ಸ್ಥಳಾಂತರಿಸಲು ಆ ಜನರಿಗೆ ಯಾವುದೆ ಮುನ್ಸೂಚನೆ ನೀಡದೆ, ಒಂದು ದಿನ ಬೆಳಗ್ಗೆ ಸ್ಲಂಗೆ ನುಗ್ಗಿದ ಕೇಂದ್ರ ಮೀಸಲು ಪಡೆಯ ನೂರಾರ ಪೋಲಿಸರು, ನಗರ ಪೋಲಿಸರು ಹಾಗು ಪಾಲಿಕೆಯ ಅಧಿಕಾರಿಗಳು, ಮೊದಲನೆಯ ಸುತ್ತಿನಲ್ಲಿ ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು. ಎರಡನೆಯ ಸುತ್ತಿನಲ್ಲಿ ನಗರ ಪೋಲಿಸರು, ಮೂರನೆ ಸುತ್ತಿನಲ್ಲಿ ಮಿಸಲು ಪಡೆಯ ಪೋಲಿಸರು. ಎಂಬಂತೆ ಜನರಿಗೆ ಹಾಗೂ ಕಾರಕರ್ತರಿಗೆ ಯಾವುದೇ ಪ್ರತಿಭಟನೆಯ ಅವಕಾಶವಿಲ್ಲದಂತೆ ಗುಡಿಸಲುಗಳು, ಅವರ ದಿನ ಬಳಕೆಯ ವಸ್ತುಗಳು ಹಾಗು ಜನರನ್ನು, ಒಂದು ಕಸ ಸಾಗಿಸುವ ಲಾರಿಗೆ ಎರಡು ಮೂರು ಕುಟುಂಬಗಳಂತೆ ತುಂಬಿಸಿ ಲಿಂಗರಾಜಪುರಂಗೆ ಸಾಗಿಸಿ ಸುರಿದು ಬಂದರು. ಅಲ್ಲಿದ್ದ ಅಧಿಕಾರಿಗಳು

ಜನರ ಬಳಿಯಿದ್ದ ಟೋಕನ್‌ಗಳ ಆಧಾರದಲ್ಲಿ ಅವರ ೧೫೨೦ ಅಡಿ ನಿವೇಶನವನ್ನು ಗುರುತಿಸಿ ನೀಡಿ ಅದರೊಟ್ಟಿಗೆ ಒಂದು ಬ್ರೆಡ್ಡು, ಅರ್ಧ ಲೀಟರ್‌ನ ಒಂದು ಪ್ಯಾಕೆಟ್ ಹಾಲು ಎರಡು ಸಿಮೆಂಟ್ ಶೀಟು ಒಂದು ಚೀಲ ಸಿಮೆಂಟ್ ಮತ್ತು ಕೆಲವು ಬಂಬುಗಳನ್ನು ನೀಡಿ ವಾಪಸ್ ಬಂದರು. ಮತ್ತೆ ಅಧಿಕಾರಿಗಳು ಆ ಕಡೆ ತಲೆಯಿಟ್ಟು ಮಲಗಿಲ್ಲ. ಆ ಪ್ರದೇಶ ಆಗ ಪಂಚಾಯತಿ ವ್ಯಾಪ್ತಿಯಲ್ಲಿತ್ತು.

೧೯೯೭ರಲ್ಲಿ ಬೆಂಗಳೂರು ಹಾಗು ಮೈಸೂರು ನಗರಗಳಲ್ಲಿ ನಡೆದ, ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳು ಬಡಜನರ ಪಾಲಿಗೆ ಶಾಪವಾಗಿ ಪರಿಣಮಿಸಿತು. ೧೯೯೪-೯೫ರಲ್ಲಿ ನಗರ ಸುಂದರೀಕರಣ, ಸ್ವಚ್ಚತೆಯ ಹಾಗೂ ವಿವಿಧ ಕಾಮಗಾರಿಗಳ ಹೆಸರಿನಲ್ಲಿ ಸಾವಿರಾರು ಬಡ ಕುಟುಂಬಗಳು ಬೀದಿ ಪಾಲಾಯಿತು. ದೇಶದ ಹಲವಾರು ಭಾಗಗಳಿಂದ ಬರುವ ಕ್ರೀಡಾ ಪಟುಗಳಿಗೆ ಹಾಗು ಜನರಿಗೆ ಬೆಂಗಳೂರು ನಗರವನ್ನು ಸುಂದರವಾಗಿ ಕಾಣಿಸುವ ಯೋಜನೆ ರೂಪಿಸಲಾಗಿ, ನಗರದ ಕೇಂದ್ರ ಭಾಗದ ಪುಟ್ಬಾಲ್ ಕ್ರೀಡಾಂಗಣದ ಹತ್ತಿರವಿದ್ದ ಸ್ಲಂ ಅನ್ನು ಯಾವುದೇ ಮುನ್ಸೂಚನೆ ಇಲ್ಲದೆ ಪರಿಹಾರವೂ ಇಲ್ಲದೆ ಒಂದು ದಿನ ಬೆಳಗ್ಗೆ ಕೆಡವಲಾಯಿತು. ಅದರ ಪಕ್ಕದಲ್ಲಿದ್ದ ಚತ್ರಂ ಸ್ಲಂ ( ಬೆಂಗಳೂರು -ಕೋಲಾರ ರಸ್ತೆಯ ರಾಜರ ಕಾಲದ ಪ್ರಯಾಣಿಕರ ತಂಗುದಾಣ, ನಂತರ ಮನೆಯಿಲ್ಲದವರು ನೆಲೆಸಿ ಸ್ಲಂನ ರೂಪ ಪಡೆಯಿತು) ಸರ್ಕಾರಿ ಭೂಮಿಗೆ ದಾಖಲೆ ಸೃಷ್ಟಿಸಿದ ನೆಲಕಳ್ಳರು ಅಲ್ಲಿ ನೆಲೆಸಿದ್ದ ಜನರನ್ನು ರಾತ್ರೋ ರಾತ್ರಿ ಗುಂಡಾಗಳನ್ನು ಬಳಸಿ ಖಾಲಿ ಮಾಡಿಸಿದರು. ಅನಂತರ ಈ ಭೂಮಿಯಲ್ಲಿ ಲೈಫ್ ಸ್ಟೈಲ್ ಮಾಲ್ ನಿರ್ಮಿಸಲಾಯಿತು. ಮೈಸೂರು ರಸ್ತೆಯ ನಾಯಂಡಹಳ್ಳಿ ಸ್ಲಂ, ವೆಂಕಟೇಶ್ವರ ಸ್ಲಂ, ಈಗಿನ ಶಾಂತಿ ನಗರ ಆಗಿನ ಉತ್ತರಹಳ್ಳಿ ಕ್ಷೇತ್ರದ ಲಕ್ಷ್ಮಣರಾವ್ ನಗರ ಹಾಗು ಇಂದ್ರಾಗಾಂಧಿ ಸ್ಲಂಗಳು ಬೆಂಕಿಯಲ್ಲಿ ಬೂಧಿಯಾದವು. ಈ ಎಲ್ಲಾ ಸ್ಲಂಗಳು ರಾಷ್ಟ್ರೀಯ ಕ್ರೀಡಾಕೂಟಕ್ಕೆ ಸಂಬಂಧಿಸಿದ ಜಾಗಗಳಲ್ಲಿ ಇದ್ದದ್ದು ಕಾಕತಾಳಿಯ. ೧೯೯೭ ರಲ್ಲಿ ಉತ್ತರಹಳ್ಳಿಯ ಭುವನೇಶ್ವರಿನಗರ ಸ್ಲಂ ಯಾವುದೇ ಮುನ್ಸೂಚನೆ ಇಲ್ಲದೆ ಕೆಡವಲಾಯಿತು. ಆ ಗುಡಿಸಲುಗಳು ಒಂದು ಅಪಾರ್ಟ್‌ಮೆಂಟ್‌ಗೆ ಮುಖ್ಯ ರಸ್ತೆಯನ್ನು ಸಂಪರ್ಕಿಸಲು ಅಡ್ಡಿಯಾಗಿತ್ತು ಎಂದು ಬಿಲ್ಡರ್‌ಗಳು, ಪೋಲೀಸ್ ಹಾಗು ಗೂಂಡಾಗಳನ್ನು ಬಳಸಿ ನಿವಾಸಿಗಳನ್ನು ತೆರವು ಗೊಳಿಸಿದರು.

೨೦೦೯ರಲ್ಲಿ ವೀರಭದ್ರನಗರ ಸ್ಲಂ ನೈಸ್ ರಸ್ತೆಗೆ ದಾರಿ ಬಿಡಲು ಖಾಲಿ ಮಾಡಿಸಲಾಯಿತು. ೨೦೦೯ರಲ್ಲಿ ತುಮಕೂರು ರಸ್ತೆಯ ಅಲೆಮಾರಿ ಸ್ಲಂ ಅನ್ನು(ಪೂರ್ತಿ ವಿವಿದ ಅಲೆಮಾರಿ ಜನಾಂಗದವರು ಒಂದು ಕಡೆ ನೆಲೆಸಲು ತೀರ್ಮಾನಿಸಿ ನೆಲೆಸಿದ್ದರು) ಗೂಂಡಾಗಳು ಖಾಲಿ ಮಾಡಿಸಿದರು. ಈಗ ಈ ಭೂಮಿಯಲ್ಲಿ ಮೆಟ್ರೊ ವರ್ಕ್‌ಶಾಪ್ ನಿರ್ಮಿಸಲಾಗಿದೆ. ಕಿಮ್ಸ್ ಎದುರು ಇದ್ದ ಮೇದರಹಟ್ಟಿ ಸ್ಲಂ, ಸಿಟಿ ಮಾರ್ಕೆಟ್ ಒಳಗಿದ್ದ ಗಣೇಶ ಗುಡಿ ಸ್ಲಂ ಮುಂತಾದವು ಮೆಟ್ರೊಗಾಗಿ ಖಾಲಿ ಮಾಡಿಸಲಾದರೂ, ಈ ತರಹದ ಬೃಹತ್ ಯೋಜನೆಗಳಿಗೆ ಅನ್ವಯಿಸುವ

ಯಾವುದೇ ಪರಿಹಾರಗಳನ್ನು ಪಡೆಯುವಲ್ಲಿ ಈ ಸ್ಲಂಗಳು ಸೋತವು. ೨೦೧೩ರಲ್ಲಿ ಕೋರಮಂಗಲದ ಆರ್ಥಿಕವಾಗಿ ಹಿಂದುಳಿದ ವರ್ಗದ ವಸತಿ ಸಮುಚ್ಚಯವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ



ಒಂದು ಮಾಲ್ ನಿರ್ಮಿಸಿಸಲು ಕೆಡವಲಾಯಿತು. ಆ ಜನ ಎಲ್ಲಾ ಕೋರ್ಟುಗಳ ಮೆಟ್ಟಲುಗಳನ್ನು ಹತ್ತಿಯೂ ನ್ಯಾಯ ಸಿಗದೆ ಇಷ್ಟು ವರ್ಷಗಳು ಬೀದಿ ಬದಿಯಲ್ಲಿ ವಾಸ ಮಾಡುತ್ತಿದ್ದು ಈಗ ೧೮ ಕಿ ಮಿ ದೂರವಿರುವ ಸೂಲಿಕುಂಟೆ ಹಳ್ಳಿಯಲ್ಲಿ ಅವರಿಗಾಗಿ ಮನೆಗಳನ್ನು ನಿರ್ಮಿಸಲಾಗಿದೆ. ಈ ಮೂರು ಸ್ಲಂ ಧ್ವಂಸ ಪ್ರಕರಣಗಳಲ್ಲೂ ಖಾಸಗಿ ಕಂಪನಿಗಳು ನೇರವಾಗಿ ಭಾಗಿಯಾಗಿದ್ದವು, ಅವರು ಗೂಂಡಾಗಳನ್ನು ಬಳಸಿ ಈ ಎಲ್ಲ ಸ್ಲಂಗಳನ್ನು ಧ್ವಂಸ ಮಾಡಿದರು ಪೋಲೀಸರು ಅದಕ್ಕೆ ಕಾವಲಾಗಿ ನಿಂತದ್ದು ಈಗಿನ ಬೆಂಗಳೂರು ನಗರಾಭಿವೃದ್ಧಿಯ ಹೊಸ ಬೆಳವಣಿಗೆಯಾಗಿದೆ. ಕೆರೆಗಳ ಸಂರಕ್ಷಣೆಯ ಹೆಸರಿನಲ್ಲಿ ಈಗ ಆರು ಕೊಳೆಗೇರಿಗಳನ್ನು ಎತ್ತಂಗಡಿ ಮಾಡಲಾಗುತ್ತದೆ ಎಂದು ಪಟ್ಟಿಯೊಂದನ್ನು ಬಿಡುಗಡೆ ಮಾಡಲಾಗಿದೆ. ನಗರದ ನಾನೂರಕ್ಕು ಹೆಚ್ಚು ಕೆರೆಗಳಲ್ಲಿ ಆಕ್ರಮಣ ಮಾಡಿರುವುದರಲ್ಲಿ ಸರ್ಕಾರಿ ಸಂಸ್ಥೆಗಳ ಪಾಲು ದೊಡ್ಡದಾಗಿದೆ, ಎರಡನೆಯ ಹಂತದಲ್ಲಿ ರಿಯಲ್ ಎಸ್ಟೇಟ್ ಕಂಪನಿಗಳು ನಿಂತಿವೆ. ಕೆರೆಗಳನ್ನು ಅತಿಕ್ರಮಣ ಮಾಡಿ ಶ್ರೀಮಂತರಿಗೆ ಕೊಟ್ಟಿರುವ ಉದಾರಣೆಗಳು ನೂರಾರು ಇರಬೇಕಾದರೆ, ನಗರದ ಬಹುಪಾಲು ಬಸ್ ನಿಲ್ದಾಣಗಳು, ಕ್ರೀಡಾಂಗಣಗಳು ಕೆರೆಯಲ್ಲಿಯೆ ತಲೆ ಎತ್ತಿ ನಿಂತಿರಬೇಕಾದರೆ, ಬಡವರ ಗುಡಿಸಲುಗಳು ಮಾತ್ರ ನಮ್ಮ ನ್ಯಾಯವ್ಯವಸ್ಥೆಯ ಕಣ್ಣುಗಳಿಗೆ ಕಾಣುತ್ತವೆ. ಹಾಗಾಗಿ ನಗರದಲ್ಲಿ ಬದುಕು ಕಟ್ಟಿಕೊಳ್ಳುಲು ಪ್ರಯತ್ನಿಸುತ್ತಿರುವ ಬಡವರ ಗುಡಿಸಲುಗಳು ಕಾಣೆಯಗುತ್ತವೆ.

ಈ ಮೇಲಿನ ಉದಾರಣೆಗಳ ಮೂಲಕ ಸ್ಲಂ ಧ್ವಂಸ ಹಾಗು ಸ್ಥಳಾಂತರ ಕುರಿತು ಕೆಲವು ನಿರ್ಧಿಷ್ಟ ರೀತಿ ನೀತಿ ಹಾಗು ರಾಜಕೀಯ ಅಂಶಗಳನ್ನು ಅರ್ಥ ಮಾಡಿಕೊಳ್ಳಬಹುದು.

೧, ಕೊಳೆಗೇರಿಗಳ ಪುನರ್ ವಸತಿ ಭೂಮಿಯು ಎಲ್ಲ ಪ್ರಕರಣಗಳಲ್ಲು ನಗರದ ಹೊರಗಡೆಗೆ ಆಯ್ಕೆಯಾಗಿರುವುದು ಹಾಗೂ ಈ ಪುನರ್ ವಸತಿಯ ಸ್ಥಳಗಳಿಗೆ ಜನರು ಹಾಗು ವಸ್ತುಗಳನ್ನು ಸಾಗಿಸಲು ಕಸದ ಲಾರಿಗಳನ್ನು ಬಳಸಿರುವುದು.

೨, ಪ್ರಮುಖ ಕ್ರೀಡಾ ಹಾಗೂ ರಾಜಕೀಯ ಘಟನೆಯ ಸಂದರ್ಭಗಳು ನಗರವನ್ನು ಸ್ವಚ್ಛ ಹಾಗೂ ಸುಂದರಗೊಳಿಸುವ ನೆಪಗಳಾಗಿವೆ.

೩, ಮೆಟ್ರೊ, ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್, ರಸ್ತೆ ಅಗಲೀಕರಣ ಮುಂತಾದ ದೊಡ್ಡಮಟ್ಟದ ನಗರ ಮೂಲ ಸೌಕರ್ಯ ಯೋಜನೆಗಳು ಸ್ಲಂ ಭೂಮಿಯನ್ನು ಗುರಿಯಾಗಿಸುತ್ತವೆ, ಕಾರಣ ಪರಿಹಾರ ಹಾಗು ಪುನರ್‌ವಸತಿಯ ವೆಚ್ಚ ಕಡುಮೆಯಾಗಿರುವುದು. ಎಲ್ಲ ಯೋಜನೆಗಳಲ್ಲು ಭೂಮಿಯ ಒಡೆಯರಿಗೆ ಮಾತ್ರ ಪರಿಹಾರ ನೀಡಲಾಗುತ್ತದೆಯೆ ಹೊರತು 'ಅತಿಕ್ರಮಣಗಾರರಿಗಲ್ಲ'

೪, ಆರ್ಥಿಕ ಉದಾರೀಕರಣ, ನಗರ ಭೂಮಿತಿ ಕಾಯ್ದೆಯ ರದ್ದು, ರಿಯಲ್ ಎಸ್ಟೇಟಿನಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ, ಭೂಮಿ ದಲ್ಲಾಳಿ ಹಾಗು ಕಳ್ಳರ ರಾಜಕೀಯ ಶಕ್ತಿ, ನಗರದ ಕೇಂದ್ರ ಭಾಗದ ಸ್ಲಂಗಳ ಭೂಮಿಗೆ ಬೆದರಿಕೆಯಾಗಿ ಪರಿಣಮಿಸಿದೆ.



೫, ಉದಾರೀಕರಣಕ್ಕೆ ಮೊದಲು ನಗರ ಸಭೆ ಅಥವ ಸರ್ಕಾರಿ ಸಂಸ್ಥೆಗಳು ಮಾತ್ರ ಕೊಳೆಗೇರಿಗಳನ್ನು ಧ್ವಂಸ ಗೊಳಿಸುತ್ತಿದ್ದವು. ಖಾಸಗಿ ಸಂಸ್ಥೆಗಳು ಸಹ ಸರ್ಕಾರಿ ಸಂಸ್ಥೆಗಳನ್ನು ಅವಲಂಬಿಸಿದ್ದವು ಉದಾರೀಕರಣದ ನಂತರದಲ್ಲಿ ಖಾಸಗೀ ಕಂಪನಿಗಳು ನೇರವಾಗಿ ಗೂಂಡಾಗಳ ಮೂಲಕ ಸ್ಲಂಗಳನ್ನು ಧ್ವಂಸಗೊಳಿಸುತ್ತಿವೆ. ಪೋಲಿಸರನ್ನು ಅವರ ಕಾವಲು ಪಡೆಯಾಗಿ ಬದಲಾಯಿಸಲಾಗಿದೆ.

೬, ಸಾರ್ವಜನಿಕ ಖಾಸಗಿ ಸಹಭಾಗಿತ್ವ ಎನ್ನುವುದು ನಗರದಲ್ಲಿ ವಂಚಿತ ಸಮುದಾಯಗಳು ಹೊಂದಿರುವ ಅತ್ಯಲ್ಪ ಪ್ರಮಾಣದ ಭೂಮಿಯನ್ನು ಕಿತ್ತುಕೊಳ್ಳುವ ಯೋಜನೆಯಾಗಿ ಮಾತ್ರವಲ್ಲದೇ, ಸ್ಲಂಗಳ ಎತ್ತಂಗಡಿ ಭೀತಿಯನ್ನು ಹೆಚ್ಚಾಗಿಸಿದೆ.

೭, ಕೊಳೆಗೇರಿಗಳಿಗೆ ಪುನರ್ ವಸತಿ ಕಲ್ಪಿಸಿದ ನಗರದ ಹೊರ ಭಾಗದ ಪ್ರದೇಶಗಳು ನಗರ ಆಡಳಿತದ ವ್ಯಾಪ್ತಿಗೆ ಸೇರ್ಪಡೆಗೊಂಡ ನಂತರವೂ ಮೂಲಭೂತ ನಾಗರೀಕ ಸೌಲಭ್ಯಗಳಿಂದ ವಂಚಿತವಾಗಿವೆ.

೮, ಬಂಡವಾಳಶಾಹಿ ಪರಿಸರ ಸಂರಕ್ಷಣೆ ವಿಧಾನವು ಪರಿಸರಕ್ಕೆ ಹಾನಿ ಮಾಡುತ್ತಿರುವ ನಿಜವಾದ ಅಂಶಗಳನ್ನು ಮರೆಮಾಚಿ ನ್ಯಾಯಾಂಗವನ್ನು ಬಳಸಿ ಸ್ಲಂಗಳ ಧ್ವಂಸಕ್ಕೆ ಕಾರಣವಾಗಿತ್ತಿವೆ.

ಈ ಮೇಲಿನ ಅಂಶಗಳಿಂದ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ದೇಶದಲ್ಲಿನ ಸ್ಲಂಗಳ ಸಮಸ್ಯೆಗೆ ಮೂಲ ಕಾರಣ ಏನು? ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ನಗರ ಬಡತನ ನಿವಾರಣೆ ಯೋಜನೆಗಳು ಕೊಳಗೇರಿ ಮುಕ್ತ ನಗರಗಳ ರಚನೆಯಂತಹ ಯೋಜನೆಗಳನ್ನು ಜಾರಿ ಮಾಡಲಾಗುತ್ತಿಲ್ಲ ಏಕೆ? ದೇಶದಲ್ಲಿ ಕೊಳಗೇರಿ ಸಮಸ್ಯೆ ಎನ್ನುವುದು ಬರಿ ಬಡತನಕ್ಕೆ ಸಂಬಂಧಿಸಿದ ವಿಷಯ ಮಾತ್ರವಲ್ಲ, ಅದು ಮೂಲಭೂತವಾಗಿ ಜಾತಿ ತಾರತಮ್ಯದ

ಆಧಾರಿತವಾಗಿದೆ. ಸ್ಲಂಗಳಲ್ಲಿ ವಾಸಮಾಡುವ ಜನರಲ್ಲಿ ಹೆಚ್ಚಿನ ಸಂಖ್ಯೆಯ ಜನರು ಚಾರಿತ್ರಿಕವಾಗಿ ತುಳಿತಕ್ಕೊಳಗಾದ ಮತ್ತು ಸಾಮಾಜಿಕ ಶೋಷಿತ ಸಮುದಾಯಗಳಿಗೆ ಸೇರಿದವರು ಎಂದರೆ, ದಲಿತರು, ಆದಿವಾಸಿಗಳು, ಹಿಂದುಳಿದವರು ಮತ್ತು ಈ ಸಮುದಾಯಗಳಿಂದ ಇತರೆ ಧರ್ಮಗಳನ್ನು ಸ್ವೀಕರಿಸಿದ ಧಾರ್ಮಿಕ ಅಲ್ಪಸಂಖ್ಯಾತರಾಗಿರುವುದು ಸ್ಲಂಗಳು ನಗರದಲ್ಲಿ ರೂಪಾಂತರಗೊಂಡ ಜಾತಿ ವ್ಯವಸ್ಥೆಯಾಗಿದೆ.

ಹಳ್ಳಿಗಳಲ್ಲಿ ದಲಿತರನ್ನು ಹೇಗೆ ಗುಲಾಮರಾಗಿ, ಹಳ್ಳಿಗರ ಸೇವೆ ಮಾಡುವ ಜೀತದಾಳುಗಳಾಗಿ, ಹಳ್ಳಿಯ ಹೊರಗಡೆ ಕೇರಿಗಳಲ್ಲಿ ವಾಸ ಮಾಡುವವರಾಗಿ ನಡೆಸಿ ಕೊಳ್ಳಲಾಗುತ್ತಿದೆಯೋ, ಅದೇ ರೀತಿಯಾಗಿ ನಗರಗಳಲ್ಲೂ ಅವರ ಬದುಕು ಮುಂದುವರೆಯುತ್ತಿರುವುದಕ್ಕೆ ಸ್ಲಂಗಳು ಜೀವಂತ ಸಾಕ್ಷಿಯಾಗಿದೆ. ಅವರು ಹಳ್ಳಿಗಳಲ್ಲೂ ಭೂರಹಿತರು ಪಟ್ಟಣಗಳಲ್ಲು ಅದೇ, ಹಳ್ಳಿಗಳಲ್ಲೂ ಊರ ಹೊರಗೆ ಪಟ್ಟಣಗಳಲ್ಲೂ ಊರ ಹೊರಗೆ, ಹಳ್ಳಿಗಳಲ್ಲಿ ಮನೆಯಾಳು ಹಿತ್ತಲಿನಿಂದ ಅನ್ನ ಪಡೆಯಬೇಕು, ಇಲ್ಲೂ ಅದೇ, ಎರಡು ಕಡೆಯೂ ಕೂಲಿಯನ್ನು ಧಣಿಯೆ ನಿರ್ಧರಿಸುತ್ತಾನೆ, ಹಳ್ಳಿಗಳಲ್ಲು ಕುಡಿಯುವ ನೀರಿಗೆ ಗತಿಯಿಲ್ಲ ನಗರಗಳಲ್ಲು ಅದೇ ಸ್ಥಿತಿ ಮುಂದುವರೆಯುತ್ತಿದೆ. ಈ



ನಮ್ಮ ಜನರು ಅತಿ ಹೆಚ್ಚಾಗಿ ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವುದರಿಂದ ಆ ವಲಯದಲ್ಲಿ ನಡೆಯುವ ಮಾನವ ಶಕ್ತಿಯ ಶೋಷಣೆ ನ್ಯಾಯಯುತವಲ್ಲದ ವೇತನ ಪದ್ಧತಿಯು ಇವರು, ಸ್ಲಂಗಳಲ್ಲಿ ಬದುಕನ್ನು ನೂಕಲು ಕಾರಣವಾಗಿದೆ.

ಜಾತಿ ಎರಡು ರೀತಿಯಲ್ಲಿ ಕಾರ್ಯಗತ ಗೊಳಿಸಲಾಗುತ್ತದೆ, ಮಡಿ ಮೈಲಿಗೆ ಆಧಾರದಲ್ಲಿ ಹೊರಗಿಡುವುದು, ಸಂಪನ್ಮೂಲಗಳ ಅಸಮಾನ ಹಂಚಿಕೆ ಮತ್ತು ಅವರು ಅವುಗಳನ್ನು ಪಡೆಯದಂತೆ ವ್ಯವಸ್ಥಿತವಾಗಿ ತಡೆಯುವುದು. ಈ ಎರಡು ಆಯಾಮಗಳು ನಗರಗಳಲ್ಲಿ ಜೀವಂತವಾಗಿದೆ. ಮೇಲಿನ ಜಾತಿ ಜನರ ಭೂಮಿ, ವಿದ್ಯೆ, ಸಂಪನ್ಮೂಲಗಳನ್ನು ಪಡೆಯುವ ಸಾಮಾಜಿಕ ಆರ್ಥಿಕ ಬಂಡವಾಳವು ಅವರನ್ನು ನಗರದಲ್ಲೂ ಮೇಲಿನ ಶ್ರೇಣಿಯ ಸ್ಥರದಲ್ಲಿ ಇರಿಸಿದ್ದರೆ, ಅವುಗಳಿಂದ ವಂಚಿತವಾದ ಜನ ಸ್ಲಂಗಳಲ್ಲಿ, ಫ್ಲೈಓವರ್‌ಗಳ ಅಡಿಯಲ್ಲಿ ತಮ್ಮ ಬದುಕನ್ನು ನೂಕುವಂತಾಗಿದೆ.

ಬಡತನದಿಂದ ಲಾಭ ಮಾಡಿಕೊಳ್ಳುವ ಬಂಡವಾಳಿಗರಿಂದ ಬಡತನವನ್ನು ಹೊಸದಾಗಿ ವ್ಯಾಖ್ಯಾನ ಮಾಡುವ ಚಾಳಿ ಉದಾರೀಕರಣದ ನಂತರದಲ್ಲಿ ಶುರುವಾಗಿದೆ. ಬಡವರಿಗೆ ಸಾಲ ಸೌಲಭ್ಯ ದೊರಕದಿರುವುದೆ ಅವರ ಬಡತನಕ್ಕೆ ಮೂಲ ಕಾರಣ ಎನ್ನುತ್ತ ಹಲವು ಯೋಜನೆಗಳನ್ನು ಬಂಡವಾಳಿಗರು ಜಾರಿ ಮಾಡುತ್ತಿದ್ದಾರೆ. ಕಿರು ಸಾಲದ ಕಂಪನಿಗಳು ನಾಯಿ ಕೊಡೆಯಂತೆ ತಲೆ ಎತ್ತುತ್ತಿವೆ, ಅವರು ತಳಸ್ಥರದ ಜನರ ಬಡತನವನ್ನು ಬಳಸಿ ಲೂಟಿ

ಮಾಡುವ ಲಾಭಕೋರರಾಗಿ ಕೋಳೆಗೇರಿಗಳ ಒಳಗೆ ಪ್ರವೇಶಿಸಿದ್ದಾರೆ. ಆ ಕಾರಣ ಒಂದು ಕಡೆ ಸಾಲ ಮಾಡಿ ಅದರ ಬಡ್ಡಿ ನೀಡಲು ಸಾಧ್ಯವಾಗದೆ, ಮತ್ತೊಂದು ಕಡೆ ಸಾಲ ಮಾಡಿ ಸಾಲಗಳು ಬೆಳೆದು ಕೊನೆಗೆ ಊರು ಬಿಡುವುದು ಅಥವ ಪ್ರಾಣ ಬಿಡುವುದು ಎನ್ನುವ ಮಟ್ಟಕ್ಕೆ ಕಿರು ಸಾಲ ಕಂಪನಿಗಳ ಲಾಭಕೋರತನ ಬೆಳೆದು ನಿಂತಿದೆ. ಸರ್ಕಾರಗಳ ನೀತಿಯೂ ಸಹ ಈ ಲಾಭ ಕೋರ ಕಂಪನಿಗಳ ಪರವಾಗಿದೆಯೇ ಹೊರತು ಸಾಮಾಜಿಕ ನ್ಯಾಯದ ಪರವಾಗಿಲ್ಲ.

ಕೊಳೆಗೇರಿಗಳೆನ್ನುವುದು ಜನರ ಸೂರಿನ ಸಮಸ್ಯೆಗೆ ಜನರೆ ಕಂಡುಕೊಂಡ ಪರಿಹಾರವಾಗಿದೆ. ಸ್ಲಂಗಳ ಸಮಸ್ಯೆ ಎನ್ನುವುದು ಮನೆಗಳ ಸಂಖ್ಯೆ ಕೊರತೆ ಮಾತ್ರವಲ್ಲ ಬದಲಿಗೆ 'ಮುಖ್ಯವಾಹಿನಿ' ಜಾತಿ ಹಾಗು ವರ್ಗದ ಆಡಳಿತಗಾರರ ಮಾನವತೆಯ ಕೊರತೆಯೂ ಹೌದು. ಪ್ರಮುಖವಾಗಿ ಈಗಿನ ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆಯು ಮಾನವ ಅಭಿವೃದ್ಧಿ, ಮಾನವ ಘನತೆ ಮತ್ತು ಸಾಮಾಜಿಕ ನ್ಯಾಯದ ವಿರುದ್ಧ ಕಾರ್ಯ ನಿರ್ವಹಿಸುತ್ತಿರುವುದು ಈ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ.

## ಅಂಚಿನ ಸಮುದಾಯಗಳ ಕಣ್ಣುಗಳಲ್ಲಿ ಮೂಡಬೇಕಿದೆ ಸ್ವಾತಂತ್ರ್ಯದ ಬೆಳಕು

**ಹುಲಿಕುಂಟೆ ಮೂರ್ತಿ**

ಭಾರತ ನಾವು ಇತಿಹಾಸದ ಪುಸ್ತಕಗಳಲ್ಲಿ ಕಟ್ಟಿಕೊಂಡದ್ದಕ್ಕಿಂದ ಭಿನ್ನ ಅನ್ನುವುದು ನಮಗೆ ಈಗಾಗಲೇ ತಿಳಿದಿದೆ. ಸ್ವಾತಂತ್ರ್ಯ ಪೂರ್ವದ ಭಾರತದ್ದ ಹೋರಾಟಗಳು, ಆಶೋತ್ತರಗಳು ಎಂದು ಕರೆಯುವ ವಿದ್ಯಾಮಾನಗಳು

ತರತಮದ ಮೂಸೆಯಲ್ಲಿಯೇ ಮೂಡಿಬಂದವು. ಜಾತ್ಯಾಂಧ ಭಾರತದ ಪರಂಪರೆ ಮತ್ತು ಸಂಸ್ಕೃತಿ ಎಂದು ನಾವು ಇಲ್ಲಿಯವರೆಗೆ ಕಟ್ಟಿಕೊಂಡಿರುವುದೆಲ್ಲಾ ಬಹುಜನರ ಸಮಾಧಿಯೇ ಹೊರತು ನೈಜವಲ್ಲ. ಸ್ವಾತಂತ್ರ್ಯ ಹೋರಾಟವನ್ನೂ ನಾವು ಇನ್ನೂ ಅಂಚಿನ ಸಮುದಾಯಗಳ ಕಣ್ಣುಗಳಿಂದ ನೋಡುವ ಪರಿಕರಗಳನ್ನು ಹುಡುಕುತ್ತಿದ್ದೇವೆ. ಬಾಬಾ ಸಾಹೇಬರು ತಳ ಸಮುದಾಯಗಳ ನೋಟ ಕ್ರಮದ ಮೂಲಕ ಭಾರತವನ್ನು ನೋಡುವ ಕನ್ನಡಕವನ್ನು ನಮಗೆ ಕೊಡುವ ಹೊತ್ತಿಗೆ ನಾವು ಕಣ್ಣುಗಳನ್ನೇ ಕಳೆದುಕೊಂಡುಬಿಟ್ಟಿದ್ದೆವು. ಈಗ ಆ ಕುರುಡನ್ನು ಅನುಭವಿಸುತ್ತಿದ್ದೇವೆ ಅನ್ನಿಸುತ್ತದೆ.

ಇದರ ಜತೆಗೆ ವಾಸ್ತವ ಮತ್ತು ಕನಸುಗಳ ಬಗ್ಗೆ ಮಾತಾಡುವುದಾದರೆ, ಈ ದೇಶದ ಬಹುಸಂಖ್ಯಾತ ಬಹುಜನರಿಗೆ ತಮ್ಮ ಗತವನ್ನು ಅರ್ಥಮಾಡಿಕೊಳ್ಳುವ ಹಾಗೂ ವರ್ತಮಾನವನ್ನು ತಮ್ಮ ಕಣ್ಣಳತೆಯಲ್ಲಿ ಹಿಡಿದಿಡುವ ಕ್ರಮ ಇನ್ನೂ ದಕ್ಕಿಲ್ಲ. ಸಾಂಸ್ಕೃತಿಕ ರಾಜಕಾರಣ, ಪಕ್ಷ ರಾಜಕಾರಣ ಮೊದಲಾದ 'ಮೀರಿಕೊಳ್ಳುವ ಪ್ರಕ್ರಿಯೆಗಳು ನಮ್ಮ ಬದುಕುಗಳಿಗಂಟಿದ ಅಸ್ಪೃಶ್ಯತೆಯನ್ನು ಕಡಿಮೆ ಮಾಡಿಲ್ಲ. ಇವತ್ತಿಗೂ ಅವತ್ತಿನಂತೆಯೇ ಜಾತಿ ಅಸಮಾನತೆಗೆ ಒಳಗಾಗುತ್ತಲೇ ಇದ್ದೇವೆ. ದಲಿತ ಹೋರಾಟಗಳಿಂದ ಒಂದಿಷ್ಟು ಸ್ವಾಭಿಮಾನದಿಂದ ಬದುಕುವ ಆಸೆ ಚಿಗುರಿದರೂ ವರ್ತಮಾನದ ಬೇಗುದಿಗಳು ಇನ್ನಷ್ಟು ನಮ್ಮನ್ನು ಬೇಯಿಸಲು ಪ್ರಾರಂಭಿಸಿವೆ. ಹೊಸ ಹೊಸ ವಿಧಾನಗಳಲ್ಲಿ ಕನಸುಗಳನ್ನು ಕೊಲ್ಲುವುದನ್ನು ರೂಢಿ ಮಾಡಿಕೊಂಡಿವೆ. ಶಿಕ್ಷಣ, ಆರ್ಥಿಕತೆ, ರಾಜಕಾರಣ ಮೊದಲಾದ ಕ್ಷೇತ್ರಗಳಲ್ಲಿ ಸರೀಕರೊಡನೆ ಸರಿಯಾಗಿ ನಿಲ್ಲಬೇಕಾದರೆ ಇನ್ನೂ ಶತಮಾನ ಬೇಕಾಗುತ್ತದೆ. ಇಂತಹ ಸಮಯದಲ್ಲಿ ನಾವು ಕಾಣುವ ಕನಸಿಗೂ ವೈರಸ್ ಹತ್ತಿಸುವ ಹುನ್ನಾರ ನಡೆಯುತ್ತಿದೆ.

ನಮ್ಮ ಕನಸಿನ ಭಾರತ ಸಂವಿಧಾನದ ಆಶಯಗಳ ದಮನದೊಂದಿಗೆ ಇಕ್ಕಟ್ಟಿಗೆ ಸಿಲುಕಿದೆ. ಸಂವಿಧಾನದ ಯಥಾವತ್ತು ಪಾಲನೆಯಾಗಿದ್ದರೆ ಇಷ್ಟು ಹೊತ್ತಿಗೆ ಭಾರತ ನಮ್ಮ ಬಾವುಣಿಕೆಗೆ ದಕ್ಕುತ್ತಿತ್ತು. ಈಗ ಕಾಲ ಮಿಂಚಿದೆ ಅನ್ನುವಷ್ಟರ ಮಟ್ಟಿಗೆ ದೂರ ಹೋಗಿಬಿಟ್ಟಿದೆ. ಆದರೂ ಹೋರಾಟಗಳ ಮೂಲಕ ತಳ ಸಮುದಾಯಗಳನ್ನು

ಎಚ್ಚರಿಸುತ್ತಾ, ತಾರತಮ್ಯವನ್ನು ವಿರೋಧಿಸುತ್ತಾ ಬಂದ ಸಾವಿರಾರು ಹೋರಾಟಗಾರರು ಇಂದು ಆತಂಕಗೊಂಡಿದ್ದಾರೆ. ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷಗಳಾದರೂ ಈ ನೆಲದ ಮಕ್ಕಳಿಗೆ ಸಲ್ಲಬೇಕಾದ ನ್ಯಾಯಕ್ಕಾಗಿ ಇಷ್ಟು ವರ್ಷ ಶ್ರಮಿಸಿದ್ದಾರೆ; ಆದರೆ, ಕಾಲದ ಕುತಂತ್ರಕ್ಕೆ ಅವರೆಲ್ಲಾ ಹೆದರಿದ್ದಾರೆ. ದೇಶ ಉಳಿಯಬೇಕಾದರೆ ಅವರೆಲ್ಲರೂ ಉಳಿಯಬೇಕು. ಅವರ ಶ್ರಮ ಸಾರ್ಥಕವಾಗಬೇಕು. ಮುಂದಿನ ಭಾರತ ವಂಚಿತರ ಕಣ್ಣೋಟದಿಂದ ಅರಳಬೇಕು. ಆ ಕಾರಣಕ್ಕಾಗಿ ನಮ್ಮೆಲ್ಲಾ ಆಲೋಚನೆಗಳನ್ನೂ ಒರೆಗಲ್ಲಿಗೆ ಹಚ್ಚಿ ಈ ಕಾಲಕ್ಕೆ ಬೇಕಾದ ಔಷಧಿಯನ್ನು ತಯಾರು ಮಾಡಬೇಕು. ಅಂಬೇಡ್ಕ ಕನಸನ್ನು ನಿಜವಾಗಿ ಅರ್ಥಮಾಡಿಕೊಳ್ಳುವ ದಾರಿಗಳಿಗೆ ಒಗ್ಗಬೇಕು.

ಸಮಾಜವಾದಿ ಚಿಂತನೆಯ ಮೂಲದ ಪ್ರಶ್ನೆ ನಿಜಕ್ಕೂ ಅದರ ವಿರುದ್ಧದ ಅಸಹನೆ. ಹಾಗೆ ನೋಡಿದರೆ ರಾಷ್ಟ್ರವಾದದ ಮೂಲವೂ ಇಲ್ಲಿಯದ್ದಲ್ಲ. ಏಕ ಸಂಸ್ಕೃತಿಯ ಹೇರಿಕೆಯ ಸಿದ್ಧಾಂತಕ್ಕೆ ಹೇಗೆ ಎಲ್ಲೆಗಳಿಲ್ಲವೋ ಹಾಗೇ ಸಮಾಜವಾದಿ ಸಿದ್ದಾಂಥಗಳಿಗೂ ಎಲ್ಲೆಯಿಲ್ಲ. ಜಗತ್ತಿನ ಎಲ್ಲಾ ಮೂಲೆಗಳಲ್ಲಿ ತಾರತಮ್ಯವಿದೆ.. ಅದರ ಜೊತೆಗೇ ತಾರತಮ್ಯರಹಿತ ಸಮಾಜದ ಕನಸೂ ಇದೆ. ಇದನ್ನು ವೈರುಧ್ಯವೆಂದು ನೋಡಲೂ ಬರುವುದಿಲ್ಲ. ಸಮಾಜವಾದಿ ಆಶಯಗಳಿಗೆ ವಿರುದ್ಧವಾದುದು ಏನೂ ಇರಲೂಬಾರದು. ಭಾರತದ ಮಟ್ಟಿಗೆ ಬುದ್ಧ ಫುಲೆ ಬಾಬಾ ಸಾಹೇಬರ ಚಿಂತನೆಗಳು ಜಗತ್ತಿನ ಇತರ ದೇಶಗಳ ಜನಮುಖಿ ಚಿಂತನೆಗಳನ್ನೇ ಹೋಲುತ್ತವೆ ಎಂದರೆ ನಾವದನ್ನು ಸಂಭ್ರಮಿಸಬೇಕು.

ಖಂಡಿತಾ ಸಂಘ ಪರಿವಾರದ ಈ ಎರಡು ಅಜೆಂಡಾಗಳೇ ಅವರನ್ನು ಗೆಲ್ಲಿಸಿವೆ ಮತ್ತು ಅದರ ಜತೆಗೆ ಸಾಮಾಜಿಕ ವಾಸ್ತವಕ್ಕೆ ಕುರುಡಾಗಿ ಬದುಕುವ ಮಧ್ಯಮ ವರ್ಗದ ಉಡಾಫೆ ಇದರಲ್ಲಿ ಹೆಚ್ಚು ಕೆಲಸ ಮಾಡಿದೆ. ಚುನಾವಣೆಯಲ್ಲಿ ಚಲಾವಣೆಯಾದ ಮತಗಳ ಲೆಕ್ಕವನ್ನು ನೋಡಿದರೆ ಭಾರತದ ಜನಸಂಖ್ಯೆಯಲ್ಲಿ ಶೇಕಡಾ ೩ಂಕ್ಕೂ ಕಡಿಮೆ ಜನರು ಅವರಿಗೆ ಮತ ಹಾಕಿದ್ದಾರೆ. ಖಂಡಿತವಾಗಿ ಅವರಲ್ಲಿ ಹೆಚ್ಚು ಜನ ಮಧ್ಯಮ ವರ್ಗದವರು. ಅವರು ಮತ ಹಾಕುವಾಗ ಸಂಘ ಪರಿವಾರದ ಸುಳ್ಳುಗಳನ್ನು ವಿಮರ್ಶಿಸಿ ನೋಡುವ ಗೋಜಿಗೇ ಹೋಗದೆ ಕುರುಡಾಗಿ ನಿರ್ಧಾರ ಮಾಡಿದ್ದಾರೆ. ಈ ಕುರುಡಿಗೆ ಪಕ್ಷ ರಾಜಕಾರಣದ ತಂತ್ರವೂ ಕಾರಣವಾಗಿದೆ ಅಂದುಕೊಂಡರೂ ನವ ಆರ್ಥಿಕತೆಯ ಹುದಲಲ್ಲಿ ಅರ್ಧ ದೇಹ ಹೂತುಹೋಗಿದ್ದರೂ ರಾಷ್ಟ್ರ ನಿರ್ಮಾಣ ಮತ್ತು ಧರ್ಮದಂತಹ ಹುಸಿ ಭಾವನಾತ್ಮಕ ಅಂಶಗಳಿಗೆ ಒಳಗಾಗಿದ್ದಾರೆ. ಸಂಘಿಗಳ ಇಂತಹ ಅಜೆಂಡಾಗಳನ್ನು ವಿರೋಧೀಸುವ ಜನರನ್ನು

ಪ್ರತಿಭಟನೆಗೆ ಇಳಿಯಲು ಅವಕಾಶ ಮಾಡಿಕೊಟ್ಟು ವಿರೋಧಿಗಳನ್ನು ಗುರುತಿಸಿಕೊಂಡು ಅವರನ್ನು ತೋರಿಸುತ್ತಾ ತಮ್ಮ ಪರವಾಗಿರುವವರನ್ನು ಸೃಷ್ಟಿಸಿಕೊಳ್ಳುವ ಹೊಸ ತಂತ್ರಗಳನ್ನು ಮಾಡಲಾಯಿತು.

ಸಂಘಿಗಳ ಸಿದ್ಧಾಂಥಗಳಿಗೆ ಬದ್ಧರಾದವರು ಎಂದು ಹೇಳಿಕೊಳ್ಳುವ ಕೆಲವು ಶೂದ್ರರಿಂದ ಸಮಾಜದ ಸ್ವಾಸ್ಥ್ಯ ಕೆಡಿಸುವ ಧರ್ಮದ ಪರವಾದ ಮಾತುಗಳನ್ನಾಡಿಸಿ ಅದನ್ನು ಒಪ್ಪುವ ಮತ್ತು ವಿರೋಧಿಸುವ ಜನರನ್ನು ಲೆಕ್ಕ ಹಾಕುವ ಮೂಲಕ ಅವರ



ಶಕ್ತಿಯನ್ನು ಅಂದಾಜು ಮಾಡಲಾಯಿತು. ಈ ಪ್ರಯೋಗ ಕರ್ನಾಟಕದಲ್ಲಿ ಜೋರಾಗೇ ನಡೆಯಿತು. ಇದನ್ನು ಕಂಡ ಪ್ರಗತಿಪರರು ಇಂಥವರಿಗೆ ಜನ ಸರಿಯಾದ ಪಾಠ ಕಲಿಸುತ್ತಾರೆ ಅಂತ ತೃಪ್ತಿ ಪಟ್ಟುಕೊಂಡರೂ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸೋತರು. ವಿರೋಧದಲ್ಲಿ ಕಳೆದುಹೋಗಿ ನಿಜಕ್ಕೂ ಮಾಡಬೇಕಿದ್ದ ಕೆಲಸಗಳನ್ನು ಬಿಟ್ಟರು. ಇದು ಅವರ ಗೆಲುವಿಗೆ ಕಾರಣವಾಯಿತು.

ಹಿಂದೂ ರಾಷ್ಟ್ರ ನಿರ್ಮಾಣ ಎನ್ನುವ ಭ್ರಮಾತ್ಮಕ ಪ್ರಯೋಗಕ್ಕೆ ಸಿಕ್ಕ ಗೆಲುವು ತಾತ್ಕಾಲಿಕವಾದದ್ದು. ಸಾಧ್ಯವೇ ಇಲ್ಲದ ಈ ನಿರ್ಮಾಣ ಸಿದ್ಧಾಂತ ಮುಂದೊಂದು ದಿನ ಜನರಿಂದ ವಿಮುಖವಾಗುತ್ತದೆ ಅನ್ನುವುದರಲ್ಲಿ ಸಂಶಯವಿಲ್ಲ. ಆದರೆ, ಈ ಗೆಲುವಿನೊಂದಿಗೆ ದಮನಕ್ಕೆ ಒಳಗಾಗುತ್ತಿರುವ ತಳ ಸಮುದಾಯಗಳ ನಡೆ ಹೊಸ ಸೂಕ್ಷ್ಮಗಳಿಗೆ ಒಡ್ಡಿಕೊಳ್ಳಬೇಕು. ಹಿಂದೂ ರಾಷ್ಟ್ರ ನಿರ್ಮಾಣದ ಬಗ್ಗೆ ನೇರವಾಗಿ ಹೋರಾಟ ರೂಪಿಸಿ ಜನಾಂದೋಲನ ಮಾಡುವ ಜತೆಗೇ ಅಂತರ್ಮುಖಿಯಾಗಿ ಗಟ್ಟಿಗೊಳ್ಳಬೇಕು. ಸಮುದಾಯಗಳನ್ನು ಎಲ್ಲಾ ಮೂಲಗಳಿಂದ ಸದೃಡಗೊಳಿಸಬೇಕು. ಅಂಬೇಡ್ಕರ್ ಮೂಲಕ ಫುಲೆ ದಂಪತಿಗಳ ಆಶಯಕ್ಕೆ ಅನುಗುಣವಾಗಿ ಸಿದ್ಧಗೊಳಿಸಬೇಕು. ಪ್ರಸ್ತುತ ರಾಜಕೀಯ ದರ್ದುಗಳಿಗೆ ತಕ್ಕನಾಗಿ ವರ್ತಿಸುವ ಸಮುದಾಯಗಳನ್ನು ನೈಜ ರಾಜಕೀಯ ಚಿಂತನೆಗಳಿಗೆ ಹಚ್ಚಬೇಕು. ಆಗ ಮಾತ್ರ ನಮ್ಮ ಬದುಕಿಗೆ ಘನತೆ ಮತ್ತು ವಿರೋಧಕ್ಕೆ ಅರ್ಥ ದಕ್ಕುತ್ತದೆ.

ಗಾಂಧಿ ಬಾಬಾ ಸಾಹೇಬರಂತೆಯೇ ಭಾರತದ ಪ್ರಜ್ಞೆಯಾಗಬೇಕಾದವರು ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರ ಹಠದಿಂದಾಗಿ ದಲಿತರಿಗೆ ಅನ್ಯಾಯವಾದಾಗ ಅಂಬೇಡ್ಕರರು ಹೆಚ್ಚು ನೊಂದಿದ್ದರು. ಆದರೆ, ಭಾರತದ ದಲಿತ ಸಮುದಾಯ ಆ ಕಾಲದಲ್ಲಿ ಈ ಕುರಿತು ಪ್ರತಿಕ್ರಿಯಿಸುವ ಕಸುವಿಲ್ಲದೆ ಅದಾದ ಎಪ್ಪತ್ತು ವರ್ಷಗಳ ನಂತರ ಪೂನಾ ಪ್ಯಾಕ್ಸ್ ಕುರಿತು ಪ್ರತಿಕ್ರಿಯಿಸಲಾರಂಭಿಸಿತು. ಅಂಬೇಡ್ಕರರ ಭೌತಿಕ ಗೈರಿನಿಂದಾಗಿ ಅವರ ಬರಹಗಳ ಮೂಲಕವೇ ಗಾಂಧಿಯೊಂದಿಗಿನ ವಾಗ್ವಾದಗಳನ್ನು ಅರ್ಥಮಾಡಿಕೊಳ್ಳಬೇಕಾದ ಅನಿವಾರ್ಯತೆಗೆ ಪಕ್ಕಾದ ದಲಿತ ಸಮುದಾಯ ಪೂನಾ ಫ್ಯಾಕ್ಸ್‌ಗೆ ಪ್ರತಿಕ್ರಿಯಿಸುವಾಗ ವಿಶಿಷ್ಟ ರಾಜಕೀಯ ಪ್ರಜ್ಞೆಯನ್ನು

ಮೈಗೂಡಿಸಿಕೊಂಡಿತು. ಬಹುಜನ ಸಮಾಜ ಪಕ್ಷ ಇದನ್ನು ಹೆಚ್ಚು ಆಗು ಮಾಡಿತು. ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ವಿರೋಧ ಮಾಡಿದ್ದಕ್ಕೆ ಗಾಂಧಿ ಕೊಟ್ಟ ಕಾರಣ ಬಾಲಿಷವಾಗಿದ್ದುದಲ್ಲದೆ ಬಾಬಾ ಸಾಹೇಬರ ಶ್ರಮವನ್ನು, ಕಾಳಜಿಯನ್ನು ಅಪಮಾನಿಸುವಂತಾಯಿತು. ಇದರೊಂದಿಗೆ ಗಾಂಧಿಯ ಗ್ರಾಮ ಸ್ವರಾಜ್ಯದ ಕಲ್ಪನೆಯೊಳಗೆ 'ಜಾತಿ ವಿನಾಶದ ಘೋಷಣೆಗಳಿದ್ದುವೇ ಹೊರತು ಪರಿಪೂರ್ಣ ಕಾರ್ಯಕ್ರಮಗಳಿರಲಿಲ್ಲ; ಜೊತೆಗೆ ಅವರು ಹಿಂದೂ ಧರ್ಮದ ಹುಸಿ ತಾತ್ವಿಕತೆಗೆ ಉದಾತ್ತತೆಯ ಬಣ್ಣ ಬಳಿಯುತ್ತಿದ್ದರು. ಈ ಕಾರಣದಿಂದಾಗಿ ಅವರ ಜಾತಿ ವಿರುದ್ಧದ ಹೋರಾಟ ಮೇಲ್ನೋಟದ್ದಾಗಿತ್ತು. ಈ ಕಾರಣಕ್ಕೆ ದಲಿತರ ತಾತ್ವಿಕ ಸಿಟ್ಟು ಗಾಂಧಿ ಮತ್ತವರ ಸಿದ್ಧಾಂತಗಳ ಮೇಲೆ ಸಹಜವಾಗೇ ಇದೆ ಮತ್ತು ಅದು ಇರಬೇಕಾದದ್ದೇ.



ಆದರೆ, ಯಾವ ಗಾಂಧಿ ಹಿಂಧೂ ಧರ್ಮದ ಘನತೆಯ ಬಗ್ಗೆ ಮಾತನಾಡಿದರೋ ಅದೇ ಧರ್ಮದ ಪ್ರಚಾರಕರು ಗಾಂಧಿಯನ್ನು ಕೊಂದರು ಮತ್ತು ವಿಚಾರಗಳನ್ನೂ ಕೊಲ್ಲಲು ಯತ್ನಿಸಿದರು. ದಲಿತರು ಗಾಂಧಿಯನ್ನು ವಿರೋಧಿಸುವುದಕ್ಕೂ ಸಂಘಗಳು ಗಾಂಧಿಯನ್ನು ವಿರೋಧಿಸುವುದಕ್ಕೂ ವ್ಯತ್ಯಾಸವಿದೆ. ನಮ್ಮ ವಿರೋಧಗಳು ಸೈದ್ಧಾಂತಿಕವಾಗಿರಬೇಕೇ ವಿನಃ ವ್ಯಕ್ತಿಗತ ಅಸಹನೆಯಾಗಬಾರದು ಅನ್ನುವ ಪ್ರಜ್ಞೆದಲಿತರಿಗಿದೆ.

ಮುಖ್ಯವಾಗಿ ಪ್ರಭುತ್ವದ ವಿರುದ್ಧದ ಜನ ಚಳವಳಿ ಜನರ ನಡುವಿನಲ್ಲಿ ನಿಂತು ಪ್ರಭುತ್ವವನ್ನು ಪ್ರಶ್ನಿಸುವ ಮೂಲಕ, ಪ್ರತಿಭಟಿಸುವ ಮೂಲಕ ಎಚ್ಚರಿಸುವ ಕೆಲಸ ಮಾಡುತ್ತಿತ್ತು. ಈ ರೀತಿಯ ವಿರೋಧಕ್ಕೆ ಸಂವಿಧಾನಾತ್ಮಕ ಅವಕಾಶವೂ ಇತ್ತು. ಆದರೆ ಈಗ ಎಂಥದ್ದೇ ಚಳವಳಿಯನ್ನು ಹತ್ತಿಕ್ಕುವ ಹತಾರಗಳನ್ನು ಪ್ರಭುತ್ವ ಹೆಚ್ಚು ಮಾಡಿಕೊಂಡಿದೆ. ಸುಳ್ಳುಗಳ ಮೂಲಕ ಜನರನ್ನು ವಂಚಿಸಲಾಗುತ್ತಿದೆ. ಜನರ ಪ್ರತಿರೋಧದ ಶಕ್ತಿಯನ್ನೇ ಕುಂದಿಸಿ ಆಡಳಿತ ನಡೆಸುವ ಹೊಸ ಪಟ್ಟುಗಳನ್ನು ಪ್ರಭುತ್ವ ರೂಢಿಸಿಕೊಂಡಿದೆ.

ಮುಖ್ಯವಾಗಿ ಜನ ಚಳವಳಿ ಸಕಲ ಜನ ಸಮುದಾಯಗಳ ಅಶೋತ್ತರಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸೋತಿದೆ. ನವ ಆರ್ಥಿಕತೆಯೊಂದಿಗೆ ನವ ಜಾತೀಯತೆಯೂ ತಲೆದೋರಿ ಸಮುದಾಯಗಳೆಲ್ಲಾ ಸೋರಿಹೋಗಿ ವ್ಯಕ್ತಿಗತ ಆಲೋಚನಾ ಕ್ರಮವೇ ಪ್ರಧಾನವಾಗುತ್ತಿದೆ. ಇದರೊಂದಿಗೆ ಜನ ಚಳವಳಿಗಳು ಹಳೆಯ ಕಾಲದ ಸಂಘಟನಾ ವಿಧಾನಗಳನ್ನು ಹೋರಾಟದ ಮಾದರಿಗಳನ್ನು ಇನ್ನೂ ಬಳಸುತ್ತಿದ್ದಾವೆ. ಜನರ ಕಾಲ ಬುಡದಿಂದ ಸಮಸ್ಯೆ ಅರ್ಥವಾಗುವ ಹಾಗೆ ಮಾಡಿ ಅದರ ವಿರುದ್ಧ ಕನಿಷ್ಠ ಚಿಂತಿಸುವ ಕೆಲಸ ಮಾಡಿದರೆ ಜನರು ಪ್ರತಿಭಟಿಸುತ್ತಾ ಆರೋಗ್ಯವಾಗಿರುತ್ತಾರೆ.

ಮೇಲ್ನೋಟಕ್ಕೆ ದ್ವಂದ್ವವಿರುವುದು ನಿಜವೆನ್ನಿಸಿದರೂ ಈ ಪ್ರಶ್ನೆಯೇ ಒಂದು ಷಡ್ಯಂತ್ರವಾಗಿದೆ. ಇದು ಪ್ರಜಾಪ್ರಭುತ್ವದ ಬಗೆಗೆ ಅಸಹನೆ ಹುಟ್ಟಲು ಕಾರಣವಾಗುತ್ತದೆ. ಪ್ರಜಾಪ್ರಭುತ್ವ ಎನ್ನುವ ತತ್ವವನ್ನು ಆಚರಿಸಿದರೆ ಅದು ಮುಕ್ಕಾಗಲು ಸಾಧ್ಯವಿಲ್ಲ; ಸಮಸ್ಯೆಯೆಂದರೆ ಆಚರಿಸುವುದೇ ಆಗಿದೆ. ಪ್ರಜಾಪ್ರಭುತ್ವದ ಕುರಿತು ಇಂತಹ ಪ್ರಶ್ನೆಗಳನ್ನು ಮೊದಲು ಹುಟ್ಟಿಹಾಕಿದ್ದು ಕಮ್ಯುನಿಷ್ಟರು; ಅದೂ ಅಂಬೇಡ್ಕರರ ಸಂವಿಧಾನದ ಬಗ್ಗೆ ಅವರಿಗೆ ಪ್ರಶ್ನೆಗಳಿದ್ದ ಕಾಲದಲ್ಲಿ. ಈಗವರಿಗೆ ಸಂವಿಧಾನ ಕುರಿತ ತಕರಾರುಗಳಿಲ್ಲದಿದ್ದರೂ ಸಂಘಪರಿವಾರದ ವಿರುದ್ಧದ ತಮ್ಮ ಹೋರಾಟಕ್ಕೆ ಬಾಬಾ ಸಾಹೇಬರು ಮತ್ತು ಪ್ರಜಾಪ್ರಭುತ್ವವನ್ನು ಬಳಸಿಕೊಳ್ಳುತ್ತಿದ್ದಾರೆ. ಇದು ಆಗಬೇಕಾದ್ದೇ ಆದರೂ ಇಂತಹ ಅವಳಿ ವೈರುಧ್ಯಗಳನ್ನು ಸೃಷ್ಟಿಸಿ ಸಮಾಜದಲ್ಲಿ ಹರಿಬಿಟ್ಟ ಕಾರಣದಿಂದಾಗಿ ಈಗ ಇದೇ ದ್ವಂದ್ವದ ಪ್ರಶ್ನೆಯನ್ನು ಮನುಷ್ಯ ವಿರೋಧಿ ಸಂಘಿಗಳು ರಸ್ತೆಗಳಲ್ಲಿ ಎಸೆಯುತ್ತಿದ್ದಾರೆ. ಪ್ರಜಾಪ್ರಭುತ್ವ, ರಾಜಕಾರಣ, ರಾಜಕಾರಣಿಗಳ ಕುರಿತಾದ ಅಸಂಖ್ಯ ಅಸಹನೆಯ ಕತೆಗಳನ್ನು ಸೃಷ್ಟಿಸಲಾಗಿದೆ.

ಆದರೆ, ಸಾಮ್ರಾಜ್ಯಶಾಹಿ ಆರ್ಥಿಕತೆಯು ಪ್ರಜೆಗಳ ಅಸ್ತಿತ್ವವನ್ನು ಗುಲಾಮಗಿರಿಯ ಮಟ್ಟದಲ್ಲಿ ಮಾತ್ರ ಕಾಣಲಿಚ್ಛಿಸುತ್ತದೆ. ಇಂಥಾ ಸಂದರ್ಭದಲ್ಲಿ ಸಂವಿಧಾನ ಮುಕ್ಕಾಗದಂತೆ ಹಾಗೂ ಅದು ಇನ್ನಷ್ಟು ಗಟ್ಟಿಗೊಳ್ಳುವಂತೆ ನೋಡಿಕೊಳ್ಳುವ ಮೂಲಕ ಪ್ರಜಾಪ್ರಭತ್ವವನ್ನು



ಕಾಪಾಡಿಕೊಳ್ಳಬೇಕಿದೆ. ಮುಖ್ಯವಾಗಿ ಜನ ಹೋರಾಟಗಳ ಮೂಲಕ ಆಳುವವರ ಸಂವಿಧಾನ ವಿರೋಧಿ ಧೋರಣೆಗಳನ್ನು ಖಂಡಿಸುವ ಪ್ರತಿಭಟಿಸುವ ಕಾರ್ಯಗಳಾಗಬೇಕಿದೆ.

ಖಂಡಿತಾ ಕರ್ನಾಟಕದ ಪ್ರಗತಿಪರರು ಹಾಗೆ ನಡೆದುಕೊಂಡರು. ಕಳೆದ ಆರು ವರ್ಷಗಳಲ್ಲಿ ಕರ್ನಾಟಕದ ಪ್ರತಿರೋಧದ ದನಿ ಕ್ಷೀಣವಾಗಿದೆ. ಕನ್ನಡದ ಪ್ರಗತಿಪರ ಪರಂಪರೆಯ ಜನಮುಖಿ ಕಾಳಜಿ ಮುಕ್ಕಾಗಿದೆ. ದಲಿತ

ಮಹಿಳಾ ಹೋರಾಟಗಳು ಆಯ್ಕೆಯ ವಿಷಯಗಳಾಗಿವೆ. ಅದರಲ್ಲೂ ದಲಿತರ ಮೇಲಿನ ದೌರ್ಜನ್ಯಗಳನ್ನು ಉಡಾಫೆಯ ನೋಟದಿಂದ ನೋಡುವ ಪ್ರಗತಿಪರರು ಅದನ್ನು ರಾಜಕೀಯ ಹಿತಾಸಕ್ತಿಗೆ ತಕ್ಕನಾಗಿ ಯೋಚಿಸಿದ್ದಿದೆ. ಇದಕ್ಕೆ ಪ್ರತಿಫಲವಾಗಿ ಕಳೆದ ಅರ್ಧ ದಶಕದಲ್ಲಿ ದೌರ್ಜನ್ಯಕ್ಕೆ ಒಳಗಾದ ಯಾವ ದಲಿತರಿಗೂ ನ್ಯಾಯ ಸಿಕ್ಕಿಲ್ಲ. ಚಳವಳಿಗಾರರಂತೂ ದೌರ್ಜನ್ಯಕ್ಕೊಳಗಾದವರ ಉಪಜಾತಿಗಳನ್ನು ಹುಡುಕಿ ಕ್ರೌರ್ಯ ಮೆರೆದಿದ್ದಾರೆ.

ಚಳವಳಿ, ಹೋರಾಟಗಳಿಗೆ ವ್ಯಕ್ತಿಗಳನ್ನು ಅವಲಂಭಿಸಿದರೆ ಇಂತಹ ಅಪದ್ಧಗಳು ತಲೆದೋರುತ್ತವೆ. ವ್ಯಕ್ತಿಗತ ಆಲೋಚನೆಯಿಂದ ಸಾಮುದಾಯಿಕ ಆಲೋಚನಾ ಕ್ರಮಕ್ಕೆ ಹೆಚ್ಚು ಒತ್ತು ನೀಡಬೇಕು; ಅದು ಮೇಲಿನ ಎಲ್ಲಾ ಷರತ್ತುಗಳಿಗೆ ಅನ್ವಯವಾಗಿರಬೇಕು. ಹಾಗಾದಾಗ ಮಾತ್ರ ಜನಪರ ಚಿಂತನೆ ಮತ್ತು ಚಳವಳಿಗಳು ತಮ್ಮ ಆಶಯಗಳನ್ನು ಉಳಿಸಿಕೊಳ್ಳಲು ಸಾಧ್ಯ. ಗ್ರಾಮಿ ಹೇಳುವ ಹಾಗೆ ಪ್ರಭುತ್ವದ ಪ್ರೀತಿ ದೊಡ್ಡ ಖೆಡ್ಡಾ... ನಮ್ಮ ಪರಗತಿಪರ ಚಿಂತಕರು ಮತ್ತು ಹೋರಾಟಗಾರರು ಆ ಖೆಡ್ಡಾದಿಂದ ದೂರವಿರಬೇಕು.

**ಅಭಿವೃದ್ಧಿಯಲ್ಲಿ ಅಗೋಚರವಾಗಿ ಉಳದವರು**

**ಡಾ. ಆರ್. ವಿ. ಚಂದ್ರಶೇಖರ್ ರಾಮೇನಹಳ್ಳಿ**

ಭಾರತದಲ್ಲಿ ನಾವು ಎರಡು ರೀತಿಯ ಭಾರತಗಳನ್ನು ಕಾಣುತ್ತೇವೆ. ಒಂದು ದೊಡ್ಡ ದೊಡ್ಡ ಅಪಾರ್ಟ್‌ಮೆಂಟುಗಳ ಕಟ್ಟಡಗಳು, ಶಾಪಿಂಗ್ ಮಾಲ್‌ಗಳು, ಕನ್ನಡಿಗಳಿಂದ ಅಲಂಕೃತಗೊಂಡಿರುವ ಕಟ್ಟಡಗಳು ತಮ್ಮ ಅವಶ್ಯಕತೆಗಿಂತ ಹೆಚ್ಚು ವಸ್ತುಗಳನ್ನು ಬಳಸುತ್ತಿರುವವರು. ಇನ್ನೊಂದೆಡೆ ದುಡಿಯುವ ವರ್ಗ ಮತ್ತು

ಕೃಷಿಕಾರರು. ಇವರನ್ನು ಸೇವಕರ ರೀತಿಯಲ್ಲಿ ಉದ್ಯೋಗಗಳು ಯಾರಿಗಾಗಿ ಯಾರು ಇವರ ಆಯ್ಕೆಗಳನ್ನು ಕಸಿದುಕೊಂಡಿದ್ದಾರೆ. ಅವರಿಗಾಗಿ ನಾವು ಗುತ್ತಿಗೆ ಪೌರಕಾರ್ಮಿಕರನ್ನು ಅರ್ಥಮಾಡಿಕೊಳ್ಳಬೇಕಾದರೆ ಭಾರತದ ಒಟ್ಟು ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಶ್ರೀಮಂತ ಭಾರತವು ಬಡಭಾರತದ ಪಾಲನ್ನು ಕಸಿಯುತ್ತಿರುವ ಸಂದರ್ಭವನ್ನು ಅರ್ಥಮಾಡಿಕೊಳ್ಳಬೇಕು.

ಪ್ರತಿದಿನ ಪ್ರತಿಯೊಂದು ನಗರದಲ್ಲಿ ಸೂರ್ಯ ಉದಯಿಸುವ ಮೊದಲೇ ಗುತ್ತಿಗೆ ಪೌರಕಾರ್ಮಿಕರು ತಮ್ಮ ಕುಟುಂಬ ಮತ್ತು ಮನೆಗಳನ್ನು ಬಿಟ್ಟು ರಸ್ತೆಯ ಕಸಗುಡಿಸುವ ಮತ್ತು ಕೊಳಕನ್ನು ತೆಗೆಯುವ ಕಾರ್ಯದಲ್ಲಿ ತೊಡಗುತ್ತಿದ್ದಾರೆ. ನಗರದ ಸ್ಥಳೀಯ ಸರ್ಕಾರ ಪ್ರತಿದಿನ ಮಾಡಲೇಬೇಕಾದ ಕರ್ತವ್ಯಗಳು ಕೊಳಚೆ, ಕಲ್ಮಶ ತೆಗೆಯುವುದು, ಕಸ ತೆಗೆಯುವುದು ಮತ್ತು ಕೆಟ್ಟ ವಸ್ತುಗಳನ್ನು ರಸ್ತೆಗಳ ಮೇಲೆ ಹಾಗೂ ಕಲ್ಲು ಹಾಸಿನ ದಾರಿಗಳಲ್ಲಿ ಶೇಖರಣೆಯಾಗಲು ಯಾವುದೇ ಕಾರಣಕ್ಕೂ ಬಿಡಬಾರದು. ಕೊಳೆತ ವಸ್ತುಗಳು ಮತ್ತು ಕಸ ಇದ್ದರೆ ಅದರಿಂದ ಆರೋಗ್ಯಕ್ಕೆ ತೊಂದರೆಯಾಗುತ್ತದೆ. ಮತ್ತು ತೀಕ್ಷ್ಮವಾದ ಬಿಕ್ಕಟ್ಟು ಏರ್ಪಡುತ್ತದೆ. ಆದ್ದರಿಂದ ನಗರದ ನಾಗರೀಕರ ಬದುಕನ್ನು ರಕ್ಷಣೆ ಮಾಡಲು ಗುತ್ತಿಗೆ ಪೌರಕಾರ್ಮಿಕರು ಪ್ರತಿದಿನ ಬಿಡುವಿಲ್ಲದೆ ಸ್ವಚ್ಛಗೊಳಿಸಬೇಕು. ಆದರೆ ಇವರನ್ನು ನಾಗರೀಕ ಸಮಾಜ ಗೌರವದಿಂದ ಕಾಣುವುದಿಲ್ಲ. ಅವರು ಮಾಡುವ ಕಾರ್ಯಕ್ಕೆ ಗೌರವಯುತ ವೇತನವನ್ನು ನೀಡುವುದಿಲ್ಲ. ಇವರು ಕಾರ್ಯನಿರ್ವಹಿಸುವಾಗ ಇತರರು ಮೂಗಿಗೆ ಬಟ್ಟೆ ಹಿಡಿದುಕೊಳ್ಳುತ್ತಾರೆ ಇದು ಸಾಮಾನ್ಯ ಪೌರಕಾರ್ಮಿಕರು ಬರೀಗೈಯಲ್ಲಿ ಈ ಕಸವನ್ನು ತೆಗೆಯುತ್ತಾರೆ.

ಜಾಗತೀಕರಣವು ಪೌರಕಾರ್ಮಿಕರನ್ನು ವಸಾಹತುಶಾಹಿಗಿಂತ ಹಿಂದಿನ ಪರಿಸ್ಥಿತಿಗೆ ತಳ್ಳಲ್ಪಟ್ಟಿದೆ. ಪೌರಕಾರ್ಮಿಕರು ಎಮದು ಗುರುತಿಸಿದ ವ್ಯವಸ್ಥೆಯಲ್ಲಿ ಬದಲಾದ ಸಂದರ್ಭದಲ್ಲಿ ಗುತ್ತಿಗೆ ಪೌರಕಾರ್ಮಿಕರು ಎಂದು ಕರೆಯಲಾಗುತ್ತಿದೆ. ಅವರ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಇದರಿಂದ ಅವರ ಜೀವನ ನಿರ್ವಹಣೆ ಕಷ್ಟವಾಗಿದೆ. ಅವರಿಗೆ ನೀಡುತ್ತಿದ್ದ ವೇತನ ಕಡಿತಗೊಂಡಿದೆ. ಉದ್ಯೋಗ ಮತ್ತು ಸಾಮಾಜಿಕ ಭದ್ರತೆ



ಇಲ್ಲದಂತಾಗಿದೆ. ಈ ವ್ಯವಸ್ಥೆ ಸಂಪೂರ್ಣವಾಗಿ ಬದಲಾಗಿದ್ದು, ೧೯೯೦ ರಲ್ಲಿ ಭಾರತವು ಸಮಗ್ರ ಆರ್ಥಿಕ ಪುನರಚನೆಯನ್ನು ವಿಶ್ವಬ್ಯಾಂಕ್ ಮತ್ತು ಡಬ್ಲ್ಯು.ಟಿ.ಒ. ಸಂಸ್ಥೆಗಳಿಗೆ ಪೂರಕವಾಗಿ ರೂಪಿಸಲು ಪ್ರಾರಂಭಿಸಿತು. ಆರ್ಥಿಕವಾಗಿ ಸಹಾಯ ಪಡೆಯಬೇಕಾದರೆ ಕೆಲವು ನಿಬಂಧನೆಗಳಿಗೆ ಒಳಪಡಬೇಕಾಯಿತು. ಅದೇನೆಂದರೆ ಮುಕ್ತಮಾರುಕಟ್ಟೆ ವ್ಯವಸ್ಥೆಯ ಮೂಲಕ ಅಂತರರಾಷ್ಟ್ರೀಯ ಹೂಡಿಕೆಗೆ ಮುಕ್ತವಾದ ಅವಕಾಶಗಳನ್ನು

ರೂಪಿಸುವುದು. ಅಕ್ಕಾಗಿಯೇ ರೂಪಿಸಿದ ನಿಬಂಧನೆಗಳಲ್ಲಿ ಬಹುತೇಕವುಗಳನ್ನು ಅಳವಡಿಸಿಕೊಳ್ಳಲಾಯಿತು. ಅದರಲ್ಲಿ ಒಂದು ಕಾರ್ಮಿಕರ ನೇರ ಖಾಯಂನೇಮಕಾತಿಯನ್ನು ಬದಲಾಯಿಸಿ ಗುತ್ತಿಗೆ ಆಧಾರದಲ್ಲಿ ಡಿ ದರ್ಜೆ ವೃತ್ತಿಗಳಿಗೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನಿಸಿದರು. ಅದರಿಂದಾಗಿ ಸರ್ಕಾರದ ಮತ್ತು ಸ್ಥಳೀಯ ಸಂಸ್ಥೆಗಳ ಪಾತ್ರ ಕಡಿಮೆಯಾಯಿತು. ಅಲ್ಲಿಂದ ನೇರ ನೇಮಕಾತಿ ಇಲ್ಲದೆ ಗುತ್ತಿಗೆ ಪದ್ಧತಿ ಜಾರಿಗೆ ಬಂದಿತು. ಒಬ್ಬ ಗುತ್ತಿಗೆಯವನು ಗುತ್ತಿಗೆ ಪಡೆದು ಕೆಲಸವನ್ನು ಕಾರ್ಮಿಕರಿಂದ ಮಾಡಿಸುವುದು. ಇದಕ್ಕೆ ಗುತ್ತಿಗೆ ಪೌರಕಾರ್ಮಿಕರು ಎಂದು ಕರೆದರು. ಇವರು ಘನ ತ್ಯಾಜ್ಯ ಸಂಗ್ರಹಣೆ ಮತ್ತು ನಿರ್ವಹಕರಾಗಿ ಕಾರ್ಯನಿರ್ವಹಿಸಬೇಕು.

ಭಾರತವು ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಹೊಂದುತ್ತಿದೆ. ವಿಜ್ಞಾನ ತಂತ್ರಜ್ಞಾನ ಹೊಸ ಅವಿಷ್ಕಾರಗಳು ದೇಶವನ್ನು ಮುನ್ನಡೆಸುತ್ತಿವೆ ಎನ್ನುತ್ತೇವೆ. ಆದರೆ, ರಾಜ್ಯಾದ್ಯಂತ ಗುತ್ತಿಗೆ ಪೌರಕಾರ್ಮಿಕರು ಕಸ ತೆಗೆಯಲು ಮತ್ತು ರಸ್ತೆ ಗುಡಿಸಲು ಸಾಂಪ್ರದಾಯಿಕ ವಿಧಾನಗಳನ್ನೇ ಮುಂದುವರೆಸುತ್ತಿದ್ದೇವೆ. ಸೊಂಟಬಾಗಿಸಿ ಕಸಗುಡಿಸಬೇಕು. ತಳ್ಳುವ ಗಾಡಿಗಳನ್ನು ಕೈಯಿಂದ ತಳ್ಳಬೇಕು. ಸತ್ತಪ್ರಾಣಿಗಳನ್ನು ಹಾಗೂ ಕಸವನ್ನು ಬರಿಗೈಯಲ್ಲಿ ತೆಗೆಯಬೇಕು ಮಾನವನ ತ್ಯಾಜ್ಯಗಳನ್ನು ಬರಿಗೈಯಲ್ಲಿ ಸ್ವಚ್ಛಗೊಳಿಸಬೇಕು. ೧,೪೨,೨೯೧ಕ್ಕೂ ಹೆಚ್ಚು ದುಡಿಯುವ ವರ್ಗ ಗುತ್ತಿಗೆ ಪೌರಕಾರ್ಮಿಕರು ಮುಂಜಾನೆ ೬.೩೦ ರಿಂದ ಮಧ್ಯಾಹ್ನ ೨.೩೦ ರ ವರೆಗೆ ಪ್ರತಿದಿನ ನಗರಗಳ ಸ್ವಚ್ಛತೆಗಾಗಿ ದುಡಿಯುತ್ತಿರುವುದನ್ನು ಕರ್ನಾಟಕದ ಎಲ್ಲಾ ನಗರಗಳಲ್ಲಿ ಕಾಣಬಹುದು. ಬಹುಮುಖ್ಯವಾಗಿ ಗಮನಿಸಬೇಕಾಗಿರುವುದು ಬೆಂಗಳೂರು ಮತ್ತು ಮೈಸೂರನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ನಗರ ಸ್ಥಳೀಯ ಆಡಳಿತಕ್ಕೊಳಪಟ್ಟ ಪ್ರದೇಶಗಳಲ್ಲಿ ಕಸಗುಡಿಸುವುದು ಮತ್ತು ನಿರ್ವಹಣೆ ಮಾಡುತ್ತಿರುವುದು ಸ್ಥಳೀಯ ಆಡಳಿತ. ಒಳಚರಂಡಿ ವ್ಯವಸ್ಥೆ, ನೈರ್ಮಲೀಕರಣ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಪೌರಕಾರ್ಮಿಕರು. ಕೆಲವೇ ಕೆಲವು ಬೆರಳೆಣಿಕೆಯಷ್ಟು ಖಾಯಂ ಪೌರಕಾರ್ಮಿಕರು. ಉಳಿದ ಬಹುಸಂಖ್ಯಾತ ಪೌರಕಾರ್ಮಿಕರು ಗುತ್ತಿಗೆ ಪೌರಕಾರ್ಮಿಕರು. ಅದರಲ್ಲಿ ದಿನಗೂಲಿ ಕಾರ್ಮಿಕರು ಐದು ವರ್ಷದಿಂದ ಇಪ್ಪತ್ತು ವರ್ಷಗಳಿಗಿಂತ ಹೆಚ್ಚು ಕಾಲದಿಂದ ಇದೇ ಕಾರ್ಯವನ್ನು ಮುಂದುವರೆಸುತ್ತಿರುವವರೆ ಹೆಚ್ಚು.

ಪ್ರತಿದಿನ ಪ್ರತಿಯೊಂದು ನಗರದಲ್ಲಿ ಸೂರ್ಯ ಉದಯಿಸುವ ಮೊದಲೇ ಪೌರಕಾರ್ಮಿಕರು ತಮ್ಮ ಕುಟುಂಬ ಮತ್ತು ಮನೆಗಳನ್ನು ಬಿಟ್ಟು ರಸ್ತೆಯ ಕಸಗುಡಿಸುವ ಮತ್ತು ಕೊಳಕನ್ನು ತೆಗೆಯುವ ಕಾರ್ಯದಲ್ಲಿ ತೊಡಗುತ್ತಿದ್ದಾರೆ. ನಗರದ ಸ್ಥಳೀಯ ಸರ್ಕಾರಗಳು ಪ್ರತಿದಿನ ಮಾಡಲೇಬೇಕಾದ ಕರ್ತವ್ಯಗಳು ಕೊಳಚೆ, ಕಶಲ ತೆಗೆಯುವುದು, ಕಸ ತೆಗೆಯುವುದು ಮತ್ತು ಕೆಟ್ಟ ವಸ್ತುಗಳನ್ನು ರಸ್ತೆಗಳ ಮೇಲೆ ಹಾಗೂ ಕಲ್ಲುಹಾಸಿನ

ದಾರಿಗಳಲ್ಲಿ ಶೇಖರಣೆಯಾಗಲೂ ಯಾವುದೇ ಕಾರಣಕ್ಕೂ ಬಿಡಬಾರದು. ಕೊಳೆತ ವಸ್ತುಗಳು ಮತ್ತು ಕಸ ಇದ್ದರೆ ಅದರಿಂದ ಆರೋಗ್ಯಕ್ಕೆ ತೊಂದರೆಯಾಗುತ್ತದೆ ಮತ್ತು ತೀಕ್ಷ್ಣವಾದ ಬಿಕ್ಕಟ್ಟು ಏರ್ಪಡುತ್ತದೆ. ಆದ್ದರಿಂದ ನಗರದ ನಾಗರೀಕರ ಬದುಕನ್ನು ರಕ್ಷಣೆಮಾಡಲು ಗುತ್ತಿಗೆ ಪೌರಕಾರ್ಮಿಕರು ಪ್ರತಿದಿನ ಬಿಡುವಿಲ್ಲದೆ ಸ್ವಚ್ಛಗೊಳಿಸಬೇಕು. ಆದರೆ ಇವರನ್ನು ನಾಗರೀಕ ಸಮಾಜ ಗೌರವದಿಂದ ಕಾಣುವುದಿಲ್ಲ. ಅವರು ಮಾಡುವ ಕಾರ್ಯಕ್ಕೆ ಗೌರವಯುತ ವೇತನವನ್ನು ನೀಡುವುದಿಲ್ಲ. ಇವರು ಕಾರ್ಯನಿರ್ವಹಿಸುವಾಗ ಇತರರು ಮೂಗಿಗೆ ಬಟ್ಟೆ ಹಿಡಿದುಕೊಳ್ಳುತ್ತಾರೆ ಇದು ಸಾಮಾನ್ಯ. ಪೌರಕಾರ್ಮಿಕರು ಬರಿಗೈಯಲ್ಲಿ ಈ ಕಸವನ್ನು ತೆಗೆಯುತ್ತಾರೆ.

ಭಾರತವು ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿಹೊಂದುತ್ತಿದೆ. ವಿಜ್ಞಾನ ತಂತ್ರಜ್ಞಾನ ಹೊಸ ಆವಿಷ್ಕಾರಗಳು ದೇಶವನ್ನು ಮುನ್ನೆಡೆಸುತ್ತಿವೆ ಎನ್ನುತ್ತೇವೆ. ಆದರೆ ರಾಜ್ಯಾದ್ಯಂತ ಗುತ್ತಿಗೆ ಪೌರಕಾರ್ಮಿಕರು ಕಸ ತಗೆಯಲು ಮತ್ತು ರಸ್ತೆಗುಡಿಸಲು ಸಾಂಪ್ರದಾಯಕ ವಿಧಾನಗಳನ್ನೇ ಮುಂದುವರೆಸುತ್ತಿದ್ದಾರೆ. ಸೊಂಟಬಾಗಿಸಿ ಕಸಗುಡಿಸಬೇಕು. ತಳ್ಳುವ ಗಾಡಿಗಳನ್ನು ಕೈಯಿಂದ ತಳ್ಳಬೇಕು. ಸತ್ತಪ್ರಾಣಿಗಳನ್ನು ಹಾಗೂ ಕಸವನ್ನು ಬರಿಗೈಯಲ್ಲಿ ತಗೆಯಬೇಕು ಮಾನವನ ತ್ಯಾಜ್ಯಗಳನ್ನು ಬರಿಗೈಯಲ್ಲಿ ಸ್ವಚ್ಛಗೊಳಿಸಬೇಕು. ಗುತ್ತಿಗೆ ಪೌರಕಾರ್ಮಿಕರು ಮುಂಜಾನೆ ೬.೩೦ ರಿಂದ ಮಧ್ಯಾಹ್ನ ೧.೩೦ರ ವರೆಗೆ ಪ್ರತಿದಿನ ನಗರಗಳ ಸ್ವಚ್ಛತೆಗಾಗಿ ದುಡಿಯುತ್ತಿರುವುದನ್ನು ಕರ್ನಾಟಕದ ಎಲ್ಲಾ ನಗರಗಳಲ್ಲಿ ಕಾಣಬಹುದು. ಬಹುಮುಖ್ಯವಾಗಿ ಗಮನಿಸಬೇಕಾಗಿರುವುದು ಬೆಂಗಳೂರು ಮತ್ತು ಮೈಸೂರನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ನಗರ ಸ್ಥಳಿಯ ಆಡಳಿತಕ್ಕೊಳಪಟ್ಟ ಪ್ರದೇಶಗಳಲ್ಲಿ ಕಸಗುಡಿಸುವುದು ಮತ್ತು ನಿರ್ವಹಣೆ ಮಾಡುತ್ತಿರುವುದು ಸ್ಥಳೀಯ ಆಡಳಿತ. ಒಳಚರಂಡಿ ವ್ಯವಸ್ಥೆ, ನೈರ್ಮಲೀಕರಣ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಗುತ್ತಿಗೆ ಪೌರಕಾರ್ಮಿಕರು, ಕೆಲವೇ ಕೆಲವು ಬೆರಳಣಿಕೆಯಷ್ಟು ಖಾಯಂ ಪೌರಕಾರ್ಮಿಕರು. ಉಳಿದ ಬಹುಸಂಖ್ಯಾತ ಪೌರಕಾರ್ಮಿಕರು ಗುತ್ತಿಗೆ ಪೌರಕಾರ್ಮಿಕರು, ಅದರಲ್ಲಿ ದಿನಗೂಲಿ ಕಾರ್ಮಿಕರು ಇವರು ಐದು ವರ್ಷದಿಂದ ಇಪ್ಪತ್ತು ವರ್ಷಗಳಿಗಿಂತ ಹೆಚ್ಚು ಕಾಲದಿಂದ ಇದೇ ಕಾರ್ಯವನ್ನು ಮುಂದುವರೆಸುತ್ತಿರುವವರೇ ಹೆಚ್ಚು.

ಕರ್ನಾಟಕದ ವಿವಿಧ ನಗರಗಳಲ್ಲಿ ಹದಿನೈದರಿಂದ ಇಪ್ಪತ್ತು ವರ್ಷಗಳಿಂದ ಗುತ್ತಿಗೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಬೆಂಗಳೂರಿನ ಸ್ವಚ್ಛತೆ ಮತ್ತು ಘನತ್ಯಾಜ್ಯ ಸಂಗ್ರಹಣೆ ಹಾಗೂ ನಿರ್ವಹಣೆಯ ಕಾರ್ಯವನ್ನು ಮಾಡುತ್ತಿದ್ದಾರೆ. ಗುತ್ತಿಗೆ ಪೌರಕಾರ್ಮಿಕರು ಮುಂಜಾನೆ ಮತ್ತು ಮಧ್ಯಾಹ್ನದ ಪಾಳೆಗಳಲ್ಲಿ ಶೋಚನೀಯವಾದ ಕೆಲಸ ಮಾಡಬೇಕಾಗಿದೆ. ಸಣ್ಣ ಮೊರಕೆಗಳಿಂದ ರಸ್ತೆ ಗುಡಿಸಬೇಕು. ತಳ್ಳುವ ಗಾಡಿಗಳ ಮೂಲಕ ಕಸ ಸಂಗ್ರಹಿಸಬೇಕು. ಸತ್ತ ಪ್ರಾಣಿಗಳನ್ನು ಬರಿಗೈಯಲ್ಲಿ ತೆಗೆದುಕೊಂಡು ಹೋಗಬೇಕಾಗುತ್ತದೆ. ತೆರೆದ ಮೋರಿಗಳನ್ನು ಶುದ್ಧಗೊಳಿಸಬೇಕು. ಪ್ರತಿ ಮನೆಯ ಬಾಗಿಲಿಗೆ ಹೋಗಿ ಕಸ ಸಂಗ್ರಹಿಸಬೇಕು. ಅವರಿಗೆ ಯಾವುದೇ ಸೌಲಭ್ಯಗಳನ್ನು ನೀಡುವುದಿಲ್ಲ. ಕಡಿಮೆ ಸಂಬಳ ನೀಡುತ್ತಾರೆ. ಅವರು ಎರಡು ದಶಕಗಳಿಂದ ಗುತ್ತಿಗೆ ಪೌರಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಯಾವುದೇ ರಕ್ಷಣಾ ಕವಚಗಳಿಲ್ಲದೆ ಬರಿಗೈಯಲ್ಲಿ

ಸ್ವಚ್ಛಗೊಳಿಸಬೇಕು. ಅದರ ಪರಿಣಾಮವಾಗಿ ಅನೇಕ ರೀತಿಯ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ನಿರಂತರವಾಗಿ ಈ ಕಾರ್ಯ ಮಾಡುವುದರಿಂದ ತೀಕ್ಷ್ಣವಾದ ವೃತ್ತಿಯಾಧಾರಿತ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಉದಾಹರಣೆ: ಬೆನ್ನುನೋವು, ಕೀಲುನೋವು, ಟಿಬಿ ಕಾಯಿಲೆ, ಚರ್ಮರೋಗ, ಮಲೇರಿಯ, ಹೃದಯ ಸಂಬಂಧಿಕಾಯಿಲೆಗಳು, ಮಾನಸಿಕವಾಗಿ ಖಿನ್ನತೆಗೊಳಗಾಗುತ್ತಾರೆ.

ನಗರದ ಜನರ ಆರೋಗ್ಯವನ್ನು ಕಾಪಾಡಲು ಗುತ್ತಿಗೆ ಪೌರಕಾರ್ಮಿಕರು ನೈರ್ಮಲ್ಯದ ಕೆಲಸಗಳನ್ನು ಮಾಡುತ್ತಾರೆ. ಆದ್ದರಿಂದ ಅವರ ಜೀವನ ದಿನದಿಂದ ದಿನಕ್ಕೆ ಕುಗ್ಗುತ್ತಾ ಹೋಗುತ್ತದೆ. ಹೃದಯ ಕಾಯಿಲೆ, ಬೆನ್ನು ಮತ್ತು ಸೊಂಟದ ನೋವಿನ ಸಮಸ್ಯೆಗಳು, ದೈಹಿಕವಾಗಿ ಕ್ಷೀಣಿಸುವಂತಹ ಕಾಯಿಲೆಗಳಿಂದ ನರಳುತ್ತಿದ್ದಾರೆ. ಈ ಶೋಷಣೆಯ ವಿರುದ್ಧ ಅನೇಕ ವರ್ಷಗಳಿಂದ ಗುತ್ತಿಗೆ ಪೌರಕಾರ್ಮಿಕರು ಹೋರಾಟಗಳನ್ನು ಮಾಡುತ್ತಿದ್ದಾರೆ. ಹೋರಾಟದ ಫಲವಾಗಿ ಕನಿಷ್ಠ ವೇತನ ಸಂಬಳ ನೀಡುತ್ತಿದ್ದಾರೆ. ಆದರೆ ಅವರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ, ಶೌಚಾಲಯದ ವ್ಯವಸ್ಥೆಯಿಲ್ಲ. ದೈಹಿಕವಾಗಿ ಮತ್ತು ಮಾನಸಿಕವಾಗಿ ಹಾಗೂ ಲೈಂಗಿಕವಾಗಿ ಗುತ್ತಿಗೆದಾರರು ಹಾಗೂ ಮೇಸ್ತ್ರಿ ಮತ್ತು ನಿರ್ವಾಹಕರಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ. ಅಧಿಕಾರಿಗಳಿಂದಲೂ ಶೋಷಣೆ ನಡೆಯುತ್ತಿದೆ. ಜಾತಿ ಮತ್ತು ವರ್ಗಗಳ ಪೂರ್ವಗ್ರಹಗಳಿಂದಲೂ ಶೋಷಣೆಗೆ ಒಳಗಾಗುತ್ತಿದ್ದಾರೆ. ಪೌರಕಾರ್ಮಿಕರು ಕುಡಿಯಲು ನೀರು ಕೇಳಿದರೂ ಮನೆಗಳಲ್ಲಿ ಇರುವ ಜನರು ನೀರು ಕೊಡುವುದಿಲ್ಲ. ಮನೆಯಲ್ಲಿ ಸ್ವಲ್ಪ ಕಸವಿದ್ದರೂ ತಂದು ಕೊಡುವವರೆಗೆ ಬಾಗಿಲಿನಲ್ಲಿ ನಿಂತು ಕಾಯಬೇಕು. ಜನ ಕೆಟ್ಟದಾಗಿ ಮಾತನಾಡುತ್ತಾರೆ. ಹೀಯಾಳಿಸುತ್ತಾರೆ. ಮಾನಸಿಕವಾಗಿ ಹಿಂಸಿಸುತ್ತಾರೆ.

ಮೇಲಿನ ಸ್ಥಿತಿಯನ್ನು ಗಮನಿಸಿದರೆ ಅವರು ನೇರವಾಗಿ ಕಾನೂನುಗಳನ್ನು ಉಲ್ಲಂಘಿಸುತ್ತಿದ್ದಾರೆ. ದುಡಿಯುವ ಹಕ್ಕು ಮತ್ತು ಸಂವಿಧಾನದ ವಿವಿಧ ಕಾನೂನುಗಳಲ್ಲಿ ಒಂದಾದ ಗುತ್ತಿಗೆ ಕಾರ್ಮಿಕ ಕಾಯಿದೆ ೧೯೭೦ (ನಿರ್ವಹಣೆ ಮತ್ತು ನಿರ್ಮೂಲನೆ) ಕನಿಷ್ಠ ಕೂಲಿ ಕಾಯಿದೆ ೧೯೪೮, ಇಎಸ್ಐ ಕಾಯಿದೆ ೧೯೪೮, ಕಾರ್ಮಿಕರ ಭವಿಷ್ಯ ನಿಧಿ ಮತ್ತು ಇತರೆ ಸೌಲಭ್ಯಗಳ ಕಾಯಿದೆ ೧೯೫೨, ಸಂಬಳ ಕಾಯಿದೆ ೧೯೩೬ ಮುಂತಾದವು. ಈ ಎಲ್ಲಾ ಕಾಯಿದೆಗಳು ಗುತ್ತಿಗೆ ಪೌರಕಾರ್ಮಿಕರ ಸಂವಿಧಾನಾತ್ಮಕ ಹಕ್ಕುಗಳನ್ನು ರಕ್ಷಿಸಲು ಇವೆ. ಆದರೆ ಗುತ್ತಿಗೆ ಪೌರಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಯಾವುದೇ ರೀತಿಯ ರಾಜಕೀಯ ದೃಷ್ಠಿಕೋನ ಇಲ್ಲದಂತಾಗಿದೆ.

ಗುತ್ತಿಗೆ ಪೌರಕಾರ್ಮಿಕರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರೇ ಆಗಿದ್ದಾರೆ. ಇವರಲ್ಲಿ ಶೇ. ೮೬ ರಷ್ಟು ಜನ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು. ಅದರಲ್ಲೂ ಶೇ. ೭೬ ರಷ್ಟು ಮಹಿಳೆಯರು,

ಗುತ್ತಿಗೆ ಪೌರಕಾರ್ಮಿಕರ ವೃತ್ತಿಗೆ ಬರಲು ವಂಶಪರಂಪರೆ ಮತ್ತು ಜಾತಿ ಹಾಗೂ ಆರ್ಥಿಕ ಅಂಶಗಳ ಕಾರಣದಿಂದಾಗಿ ಈ ವೃತ್ತಿಯನ್ನು ಅನಿವಾರ್ಯವಾಗಿ ಆಯ್ಕೆಮಾಡಿಕೊಂಡು, ಗುತ್ತಿಗೆ ಪೌರಕಾರ್ಮಿಕರಾಗಿ ೧೫ ರಿಂದ ೨೦ ವರ್ಷಗಳಿಂದ ಕರ್ನಾಟಕದ ಎಲ್ಲಾ ನಗರಗಳನ್ನು ಸ್ವಚ್ಛಗೊಳಿಸಿ, ನಗರ ಜನರ ಮತ್ತು ರಾಜ್ಯದ ಆರೋಗ್ಯವನ್ನು ಕಾಪಾಡಿಕೊಂಡು ಎಲ್ಲವನ್ನು ತಮ್ಮ



ಕುಟುಂಬ ಮತ್ತು ಆರೋಗ್ಯವನ್ನು ಹದಗೆಡೆಸಿಕೊಂಡು ಕೇವಲ ೬ ಸಾವಿರ ವೇತನಕ್ಕೆ ಗುತ್ತಿಗೆದಾರರ ಬಳಿದುಡಿಯುತ್ತಿದ್ದು, ಅವರು ಕಾರ್ಮಿಕರಿಗೆ ನೀಡಬೇಕಿದ್ದ ಮೂಲಭೂತ ಸೌಲಭ್ಯಗಳಾದ ಪಿ.ಎಫ್, ಇ.ಎಸ್.ಐ, ಕನಿಷ್ಟ ಕೂಲಿಯನ್ನು ನೀಡದೇ ಕಾರ್ಮಿಕರನ್ನು ನಿರಂತರವಾಗಿ ಶೋಷಿಸುತ್ತಿದ್ದಾರೆ. ಕಾರ್ಮಿಕರಿಗೆ ಸುರಕ್ಷಾ ಪರಿಕರಗಳನ್ನು ನೀಡುತ್ತಿರಲಿಲ್ಲ. ಇದನ್ನು ಪ್ರಶ್ನಿಸಿದರೆ ಕೆಲಸದಿಂದ ತೆಗೆದುಹಾಕುತ್ತೇವೆ ಎಂದು ಬೆದರಿಸುತ್ತಿದ್ದರು. ಇದರ ವಿರುದ್ದ ಪೌರಕಾರ್ಮಿಕ ಸಂಘಟನೆಗಳು, ಹೋರಾಟವನ್ನು ಪ್ರಾರಂಭಿಸಿ ಸರ್ಕಾರದ ಮೇಲೆ ಗುತ್ತಿಗೆ ಪದ್ದತಿಯನ್ನು ರದ್ದುಗೊಳಿಸಲು ಹೋರಾಟಗಳನ್ನು ಮಾಡಿ ಸರ್ಕಾರದ ಗಮನ ಸೆಳೆದವು. ಇದರ ಪ್ರತಿಫಲವಾಗಿ ೨೦೧೭ ರಲ್ಲಿ ಗುತ್ತಿಗೆ ಪೌರಕಾರ್ಮಿಕರಿಗೆ ಕನಿಷ್ಠ ವೇತನ ನೀಡಬೇಕು ಮತ್ತು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಆದೇಶವನ್ನು ಹೊರಡಿಸಿತು. ಆದರೆ ಯಾವುದೇ ಗುತ್ತಿಗೆದಾರರು ಅದನ್ನು ಪಾಲಿಸಲಿಲ್ಲ. ಸ್ಥಳೀಯ ನಗರಾಡಳಿತದ ಅಧಿಕಾರಿಗಳನ್ನು ಕಾರ್ಮಿಕರು ಕೇಳಿದರೆ ನಮಗೆ ಸಂಬಂಧವಿಲ್ಲ. ಗುತ್ತಿಗೆದಾರರನ್ನು ಕೇಳಿ ಎಂದು ಕೈಚೆಲ್ಲಿಕೊಳ್ಳುತ್ತಾರೆ. ಕಾರ್ಮಿಕರಿಗೆ ಈ ಎಲ್ಲಾ ಸೌಲಭ್ಯಗಳನ್ನು ನೀಡಲು ಸರ್ಕಾರ ಗುತ್ತಿಗೆದಾರರಿಗೆ ಹಣ ನೀಡುತ್ತಿತ್ತು. ಆದರೆ ಗುತ್ತಿಗೆದಾರರು ಸೌಲಭ್ಯ ನೀಡುತ್ತಿರಲಿಲ್ಲ. ಇದರ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ಹಮ್ಮಿಕೊಂಡು ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕು, ಪೌರಕಾರ್ಮಿಕ ವೃತ್ತಿಯನ್ನು ಖಾಯಂಗೊಳಿಸಬೇಕು ಎಂಬ ಹೋರಾಟಗಳು ತೀವ್ರಗೊಂಡವು. ಇದರ ಪ್ರತಿಫಲವಾಗಿ ೨೦೧೭ರ ಮೇ ಒಳಗೆ ಎಲ್ಲಾ ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂಗೊಳಿಸಬೇಕು ಎಂಬ ಕ್ಯಾಬಿನೆಟ್ ತೀರ್ಮಾನ ಹೊರಬಿತ್ತು.

ಭಾರತವು ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿಹೊಂದುತ್ತಿದೆ. ವಿಜ್ಞಾನ ತಂತ್ರಜ್ಞಾನ ಹೊಸ ಆವಿಷ್ಕಾರಗಳು ದೇಶವನ್ನು ಮುನ್ನೆಡುತ್ತಿವೆ ಎನ್ನುತ್ತೇವೆ. ಆದರೆ ರಾಜ್ಯಾದ್ಯಂತ ಗುತ್ತಿಗೆ ಪೌರಕಾರ್ಮಿಕರು ಕಸ ತೆಗೆಯಲು ಮತ್ತು ರಸ್ತೆಗುಡಿಸಲು ಸಾಂಪ್ರದಾಯಿಕ ವಿಧಾನಗಳನ್ನೇ ಮುಂದವರೆಸುತ್ತಿವೆ. ಸೊಂಟಬಾಗಿಸಿ ಕಸಗುಡಿಸಬೇಕು. ತಳ್ಳುವ ಗಾಡಿಗಳನ್ನು ಕೈಯಿಂದ ತಳ್ಳಬೇಕು. ಸತ್ತಪ್ರಾಣಿಗಳನ್ನು ಹಾಗೂ ಕಸವನ್ನು ಬರಿಗೈಯಲ್ಲಿ ತೆಗೆಯಬೇಕು ಮಾನವನ ತ್ಯಾಜ್ಯಗಳನ್ನು ಬರಿಗೈಯಲ್ಲಿ ಸ್ವಚ್ಛಗೊಳಿಸಬೇಕು. ಗುತ್ತಿಗೆ ಪೌರಕಾರ್ಮಿಕರು ಮುಂಜಾನೆ ೬.೩೦ ರಿಂದ ಮಧ್ಯಾಹ್ನ

೨.೩೦ರ ವರೆಗೆ ಪ್ರತಿದಿನ ನಗರಗಳ ಸ್ವಚ್ಛತೆಗಾಗಿ ದುಡಿಯುತ್ತಿರುವುದನ್ನು ಕರ್ನಾಟಕದ ಎಲ್ಲಾ ನಗರಗಳಲ್ಲಿ ಕಾಣಬಹುದು.

ಪೌರಕಾರ್ಮಿಕರು ಎಂದರೆ ಎಲ್ಲರೂ ಒಂದೇ ರೀತಿಯ ಪೌರಕಾರ್ಮಿಕರಲ್ಲ ಖಾಯಂ ಸಫಾಯಿ ಕರ್ಮಚಾರಿಗಳ ಸಮಸ್ಯೆಗಳೇ ಬೇರೆ, ಗುತ್ತಿಗೆ ಸಫಾಯಿ ಕರ್ಮಚಾರಿಗಳ ಸಮಸ್ಯೆಗಳೇ ಬೇರೆ, ಹೊರಗುತ್ತಿಗೆ ಸಫಾಯಿ ಕರ್ಮಚಾರಿಗಳ ಸಮಸ್ಯೆಗಳೇ ಬೇರೆ, ಖಾಸಗಿ ಸಫಾಯಿ ಕರ್ಮಚಾರಿಗಳ ಸಮಸ್ಯೆಗಳೇ ಬೇರೆ, ಇಲ್ಲಿ ವಿಶೇಷವೆಂದರೆ ಸರ್ಕಾರಿ ಮತ್ತು ಗುತ್ತಿಗೆ ಪೌರಕಾರ್ಮಿಕರಿಗೆ ಸರ್ಕಾರವನ್ನು ಪ್ರಶ್ನಿಸುವ ಮತ್ತು ಸಂಘಟನೆ ಕಟ್ಟಿಕೊಂಡು ಹೋರಾಟ ಮಾಡುವ ಹಕ್ಕುಗಳಿವೆ. ಈ ವಿಭಾಗಗಳಲ್ಲಿ ಪುರುಷರ ಸಂಖ್ಯೆ ಹೆಚ್ಚಾಗಿವೆ. ಆದರೆ ಹೊರಗುತ್ತಿಗೆ ಪೌರಕಾರ್ಮಿಕರಲ್ಲಿ ಶೇ. ೮೦ ರಷ್ಟು ಜನ ಮಹಿಳೆಯರು ಇದ್ದಾರೆ. ಅವರಿಗೆ ಯಾವುದೇ ರೀತಿಯಾದಂತಹ



ಹಕ್ಕುಗಳಿರುವುದಿಲ್ಲ. ಅವರನ್ನು ನೇಮಿಸಿಕೊಳ್ಳುವವರು ಖಾಸಗಿ ಗುತ್ತಿಗೆದಾರರಾಗಿರುತ್ತಾರೆ ಮತ್ತು ಅವರೇ ವೇತನವನ್ನು ನಿಗದಿಗೊಳಿಸಿ ಕಾರ್ಮಿಕರಿಗೆ ನೀಡುತ್ತಾರೆ. ಕಾರ್ಮಿಕ ಕಲ್ಯಾಣ ಇಲಾಖೆ ಮತ್ತು ಸರ್ಕಾರದ ಇತರೆ ಸೌಲಭ್ಯಗಳು ದೊರೆಯುವುದಿಲ್ಲ. ಇವರು ಕಾರ್ಯನಿರ್ವಹಿಸುವ ಅಧಿಕೃತ ದಾಖಲೆ, ಮೇಲುಸ್ತುವಾರಿ ತಿಂಗಳ ವೇತನ ಎಲ್ಲವನ್ನು ಗುತ್ತಿಗೆದಾರನೆ ನೋಡಿಕೊಳ್ಳುತ್ತಾನೆ. ಇಲ್ಲಿ ಗುತ್ತಿಗೆದಾರನ ತೀರ್ಮಾನವೇ ಅಂತಿಮವಾಗಿರುತ್ತದೆ.

**ಜಾತಿ ಮತ್ತು ಗುತ್ತಿಗೆ ಪದ್ಧತಿ**

ಪೌರಕಾರ್ಮಿಕ ಎಂದರೆ ಕೇವಲ ವ್ಯಕ್ತಿಯಲ್ಲ, ಅವನು ನೈರ್ಮಲೀಕರಣದಲ್ಲಿ ತೊಡಗಿರುವ ಕಾರ್ಮಿಕರ ಶಕ್ತಿಯ ಸದಸ್ಯ. ಅವನ ಇಚ್ಛೆಯಿಂದ ಆತ ಸದಸ್ಯ. ತನ್ನ ಗುರುತನ್ನು ಅನೇಕ ಶತಮಾನಗಳಿಂದ ಹಿಗ್ಗಿಸಿಕೊಳ್ಳುತ್ತಿದ್ದಾನೆ. ಭಾರತೀಯ ಜಾತಿ ವ್ಯವಸ್ಥೆಯು ಅವನನ್ನು ಬಲವಂತವಾಗಿ ಈ ವೃತ್ತಿಗೆ ತಳ್ಳಲ್ಪಟ್ಟಿದೆ. ಇದು ಬಹುತೇಕ ಎಲ್ಲ ಪೌರಕಾರ್ಮಿಕರು ಜಾತಿ ಏಣಿ ಶ್ರೇಣಿಯಲ್ಲಿ ಕೆಳಗಿರುವ ಜಾತಿಯವರೇ ಇದ್ದಾರೆ. ಅವರನ್ನು ಅಸ್ಪೃಶ್ಯರು ಎಂದು ಕರೆಯುತ್ತಾರೆ. ಉದಾಹರಣೆ: ಬಂಗಿ, ಮಾದಿಗ, ಹೊಲೆಯ, ಚಮ್ಮಾರ, ಅಲಾತ್ಕರ್, ಎನ್‌ಡಿ, ಬಾಲ್‌ಮಿಕ್ಸ್, ತೋಟಿ ಹೀಗೆ ಬೇರೆ ಬೇರೆ ಹೆಸರುಗಳಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಒಂದೇ ರೀತಿಯ ಕೆಲಸಗಳನ್ನು ಮಾಡುತ್ತಿದ್ದಾರೆ.

ಮೂಲಭೂತವಾಗಿ ಈ ವೃತ್ತಿಯನ್ನು ಮಾಡುತ್ತಿರುವವರು ಪರಿಶಿಷ್ಟ ಜಾತಿಯವರು. ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದರಲ್ಲೂ ತೆಲುಗು ಮಾತನಾಡುವ ಮಾದಿಗ ಸಮುದಾಯ ಹಾಗೂ ತಮಿಳು ಮತ್ತು ಕನ್ನಡ ಮಾತನಾಡುವ ದಲಿತ ಸಮುದಾಯಕ್ಕೆ ಸೇರಿದವರು, ಕ್ರಿಶ್ಚಿಯನ್ ಸಮುದಾಯಕ್ಕೆ ಮತಾಂತರಗೊಂಡ ದಲಿತ ಸಮುದಾಯ ಮತ್ತು ಕೆಲವು ಮುಸ್ಲಿಂರಿದ್ದಾರೆ. ಐಪಿಡಿ ಸಾಲಪ್ಪ ಸಮಿತಿ ವರದಿಯಲ್ಲಿ ಶೇ. ೯೭ರಷ್ಟು ತೆಲುಗು ಮಾತನಾಡುವ ಮಾದಿಗ ಸಮುದಾಯದವರು ಗುತ್ತಿಗೆ ಪೌರಕಾರ್ಮಿಕ ರಾಗಿದ್ದಾರೆ. ಆದರೆ ಗುತ್ತಿಗೆದಾರರು ಬಹುತೇಕರು ಬಲಿಷ್ಠ ಜಾತಿಯವರು, ಬೆಂಗಳೂರಿನಲ್ಲಿ ರೆಡ್ಡಿ ಸಮುದಾಯದವರು. ಅವರು ಹೇಳಿದ ಕೆಲಸ ಮಾಡಲೇಬೇಕು. ನಾವು ಚಿತ್ತೂರು, ನಲ್ಲೂರು, ಅನಂತಪುರ ಮತ್ತು ಇತರೆ ಆಂಧ್ರಪ್ರದೇಶದ ಇತರೆ ಜಿಲ್ಲೆಗಳಿಂದ ಜಾತಿ (ಕಾಪು, ಕಮ್ಮ, ರೆಡ್ಡಿ) ಶೋಷಣೆಯಿಂದ ತಪ್ಪಿಸಿಕೊಳ್ಳಲು ಬೆಂಗಳೂರಿಗೆ ಬಂದೆವು. ಅವರು ನಮ್ಮನ್ನು ಹಿಂಬಾಲಿಸಿಕೊಂಡು ಇಲ್ಲಿಗೂ ಬಂದು ನಗರಗಳಲ್ಲಿ ನಮ್ಮ ರಕ್ತದಲ್ಲಿ ಅವರು ಸುಖವಾಗಿದ್ದಾರೆ. ಅವರು ಗುತ್ತಿಗೆದಾರರಾದರು, ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡುವೆ ಅನೈತಿಕವಾದ ಒಪ್ಪಂದ ಮಾಡಿಕೊಂಡು ಅವರನ್ನು ಬಳಸಿಕೊಂಡು ಕಸದ ಹಣವನ್ನು ಕೊಳ್ಳೆಹೊಡೆಯುತ್ತಿದ್ದಾರೆ. ಆದರೆ ಗುತ್ತಿಗೆ ಪೌರಕಾರ್ಮಿಕರು ಪ್ರತಿದಿನ ತಮ್ಮ ಉಳಿವಿಗಾಗಿ ಕೆಲಸ ಮಾಡಲೇಬೇಕು. ಪ್ರತಿದಿನ ಅವರನ್ನು ಶೋಷಣೆ ಮಾಡುತ್ತಾರೆ. ಅವರಿಗೆ ಗೌರವ ನೀಡುವುದಿಲ್ಲ. ಕಡಿಮೆ ಸಂಬಳ ನೀಡುತ್ತಾರೆ. ಅವರು ಕೆಲಸ ಮಾಡುವ ವಾತಾವರಣ ಕೆಲಸ ಮಾಡಲು ಸಾಧ್ಯವಾಗದಷ್ಟು ಕಲುಷಿತಗೊಂಡಿದೆ. ಜಾತಿಯಲ್ಲಿ ಕೀಳೆಂಬ ಧೋರಣೆ ಮತ್ತು ಗುತ್ತಿಗೆದಾರನ ಪೂರ್ವ

ಗ್ರಹಗಳು ಅವರನ್ನು ಶೋಷಿಸುತ್ತಿವೆ. ಬಹುತೇಕ ನಾಗರೀಕ ಸಮಾಜ ಮತ್ತು ಆಡಳಿತ ಶಾಹಿ ಇವರನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತದೆ.

ಕೇವಲ ಜಾತಿಯಾಧಾರಿತ ಶೋಷಣೆ ಮಾತ್ರವಲ್ಲದೆ. ಗುತ್ತಿಗೆದಾರರು ಅವರ ಲಾಭಕ್ಕಾಗಿ ಅಥವಾ ಅಧಿಕಾರಿಗಳು ಅವರ ಲಾಭಗಳಿಗಾಗಿ ಶೋಷಣೆ ಮಾಡುತ್ತಾರೆ. ಗುತ್ತಿಗೆ ಪೌರಕಾರ್ಮಿಕರು ಅವರ ಜಾತಿಯಾಧಾರಿತ ವೃತ್ತಿಗಳನ್ನು ಮಾಡಿಕೊಂಡು ಸಮಾಜದ ಮುಖ್ಯವಾಹಿನಿಗೆ ಬಾರದ ಸ್ಥಿತಿ ನಿರ್ಮಿಸಿದ್ದಾರೆ. ಹೇಳಲೇಬೇಕಾಗಿರುವ ವಿಚಾರವೆಂದರೆ ಸಫಾಯಿ ಕರ್ಮಚಾರಿಗಳ ವೃತ್ತಿಯು ಅಶುದ್ಧ ಎಂದು ತಿಳಿದು ಉಳಿದ ಜಾತಿಗಳು ಈ ವೃತ್ತಿಗೆ ಬರುತ್ತಿಲ್ಲ. ಅಶುದ್ಧ ಮತ್ತು ಅನಿಷ್ಠದ ಹೆಸರಿನಲ್ಲಿ ಪೌರಕಾರ್ಮಿಕರು ಮತ್ತು ಅವರ ಕುಟುಂಬಗಳು ನಿರಂತರವಾಗಿ ಕಷ್ಟಗಳನ್ನು ಎದುರಿಸಬೇಕಾಗಿದೆ. ಅವರ ಜೀವನಕ್ಕೆ ಸಾಮಾಜಿಕವಾದ ಚಲನೆಗಳಿಲ್ಲದೆ ಹೀನಾಯ ಸ್ಥಿತಿಯಲ್ಲಿ ಬದುಕುತ್ತಾ ಕೀಳರಿಮೆಯಲ್ಲಿ ನರಳುತ್ತಿದ್ದಾರೆ. ಅನೇಕ ದುಶ್ಚಟಗಳಿಗೆ ಒಳಗಾಗುತ್ತಿರುವ ಉದಾಹರಣೆಗಳಿವೆ. ಬೇರೆಲ್ಲಾ ವೃತ್ತಿಗಳಿಗೆ ಹೋಲಿಸಿದರೆ ಪೌರಕಾರ್ಮಿಕರು ಮಾಡಲಾಗದ ಕೆಲಸಗಳನ್ನು ಮಾಡಲು ಒತ್ತಡ ಹೇರಿ ಶೋಷಣೆ ಮಾಡಿ ಕೆಲಸ ಮಾಡಿಸುತ್ತಾರೆ. ಸಮಾಜದಲ್ಲಿ ಸಿಕ್ಕಿರುವ ಸಾಮಾಜೀಕರಣದ ಪ್ರಕ್ರಿಯೆಯಿಂದಾಗಿ ಈ ಕೆಲಸ ಮಾತ್ರ ಮಾಡಲು ಸಾಧ್ಯ ಎಂಬ ನಂಬಿಕೆ ಅವರಲ್ಲಿ ರೂಪುಗೊಂಡಿದೆ. ಅದರಿಂದ ಅವರು ಮಾತ್ರ ಈ ಕೆಲಸಕ್ಕೆ ಸರಿಹೊಂದುತ್ತಾರೆ ಎಂಬ ಅಭಿಪ್ರಾಯವಿದೆ. ಏಕೆಂದರೆ ಇದು ಗೌರವಯುತ ಕೆಲಸ, ಇದನ್ನು ಇತರೆ ಜಾತಿಗಳು ಮಾಡುವುದಿಲ್ಲ. ಸಫಾಯಿ ಕರ್ಮಚಾರಿಗಳ ಕೆಲಸ ಎನ್ನುವುದು ತಲತಲಾಂತರಗಳಿಂದ ಬಂದಿದೆ, ಅದರಲ್ಲಿ ಆಯ್ಕೆಗಳಿಲ್ಲ ಜಾತಿಯಾಧಾರದ ವೃತ್ತಿ ಜಾತಿ ಅಸಮಾನತೆಯ ಆಧಾರದಲ್ಲಿ ಶೋಷಣೆ ಮತ್ತು ತಾರತಮ್ಯ ಮಾಡುತ್ತದೆ, ಅದೊಂದೇ ವೃತ್ತಿಗೆ ಇಂತಹ ಸಾಮಾಜಿಕ ಆಚರಣೆ ಎನ್ನುವುದು ಈ ಸಮುದಾಯವನ್ನು ಆ ವೃತ್ತಿಗೆ ಎಳೆದೊಯ್ಯುತ್ತದೆ.

ಕರ್ನಾಟಕ ಸರ್ಕಾರ ೧೪-೦೮-೨೦೧೭ರಲ್ಲಿ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ಗುತ್ತಿಗೆ ಪೌರಕಾರ್ಮಿಕರಿಗೆ ಸ್ಥಳೀಯ ಸರ್ಕಾರ ನೇರವಾಗಿ ವೇತನ ನೀಡಬೇಕೆಂಬ ಆದೇಶವನ್ನು ಹೊರಡಿಸಿತ್ತು. ಆದರೆ ಈ ಆದೇಶಕ್ಕೆ ಸ್ಥಳೀಯ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಗುತ್ತಿಗೆದಾರರೊಂದಿಗೆ ಸೇರಿ ನೇರ ವೇತನವನ್ನು ನೀಡದಂತೆ ಕ್ರಮವಹಿಸಿದ್ದಾರೆ. ಇಲ್ಲಿಯವರೆಗೆ ಗುತ್ತಿಗೆ ಪೌರಕಾರ್ಮಿಕರಿಗೆ ವೇತನವನ್ನು ನೀಡಿಲ್ಲ. ಕಾರ್ಮಿಕರು ವೇತನ ನೀಡಿ ಎಂದು ಕೇಳಿದರೆ ತಾಂತ್ರಿಕ ಕಾರಣಗಳನ್ನು ನೀಡುತ್ತಿದ್ದಾರೆ. ಯಾವ ಖಾತೆಯಿಂದ ವೇತನ ನೀಡಬೇಕೆಂದು ನಿರ್ದೇಶನ ನಮಗಿಲ್ಲ ಎಂದು ಜಾರಿಕೊಳ್ಳುತ್ತಿದ್ದಾರೆ. ಕಳೆದ ೫-೬ ತಿಂಗಳುಗಳಿಂದ ಗುತ್ತಿಗೆ ಪೌರಕಾರ್ಮಿಕರು ವೇತನವಿಲ್ಲದೇ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ನೀಡುವ ಕನಿಷ್ಠ ವೇತನ ಅದನ್ನು ನೀಡದೇ ಇರುವುದರಿಂದ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿದೆ. ದಿನನಿತ್ಯದ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳಲು ಅವರ ಬಳಿ ಹಣವಿಲ್ಲ, ಆರೋಗ್ಯ ಸಮಸ್ಯೆಗಳಿಗೆ ವೈದ್ಯರ ಬಳಿ ಹೋಗಲು ಸಾಧ್ಯವಾಗುತ್ತಿಲ್ಲ. ಮಕ್ಕಳನ್ನು ಶಾಲೆಗಳಿಗೆ ದಾಖಲಾತಿ ಮಾಡಲು ಕಷ್ಟವಾಗಿದೆ. ತಮ್ಮ ಜೀವನ ನಿರ್ವಹಣೆಗೆ ಸ್ಥಳೀಯ ಬಡ್ಡಿದಾರರಿಂದ ೫

ರಿಂದ ೧೦ ರೂ. ಗಳ ಬಡ್ಡಿ ದರ ನೀಡಿ ಸಾಲಪಡೆದಿದ್ದಾರೆ. ವೇತನಗಳು ಬಾರದೇ ಇರುವುದರಿಂದ ಬಡ್ಡಿಯೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ, ಅದನ್ನು ಹಿಂತಿರುಗಿಸಲಾಗದೇ ಸಮಸ್ಯೆಗೆ ಸಿಲುಕಿದ್ದಾರೆ. ಸಾಲದ ಹಣ ಹಿಂತಿರುಗಿಸುವಂತೆ ಲೇವಾದೇವಿದಾರರು ಒತ್ತಡ ಹೇರುತ್ತಿದ್ದಾರೆ. ಆದ್ದರಿಂದ ಕಾರ್ಮಿಕರು ಆತಂಕಗೊಂಡು ಹೋರಾಟಗಳನ್ನು ಪ್ರಾರಂಭಿಸಿದ್ದಾರೆ. ಆದರೂ ಸಹ ಸ್ಥಳೀಯ ಸರ್ಕಾರಗಳು ಅವರಿಗೆ ಸ್ಪಂದಿಸುತ್ತಿಲ್ಲ. ಹುಬ್ಬಳ್ಳಿ ಧಾರವಾಡದಲ್ಲಿ ಗುತ್ತಿಗೆ ಪೌರಕಾರ್ಮಿಕರು ತಮ್ಮ ಜೀವನ ನಿರ್ವಹಣೆಗಾಗಿ ಭಿಕ್ಷೆ ಬೇಡಿ ವೇತನ ನೀಡುವಂತೆ ಹೋರಾಟವನ್ನು ಮುಂದುವರಿಸುತ್ತಿದ್ದಾರೆ.

ಗುತ್ತಿಗೆ ಪೌರಕಾರ್ಮಿಕರು ಇಡೀ ನಗರಗಳನ್ನು ಸ್ವಚ್ಛಗೊಳಿಸಿ ನಮ್ಮೆಲ್ಲರ ಆರೋಗ್ಯವನ್ನು ರಕ್ಷಿಸುತ್ತಿದ್ದಾರೆ. ಕಳೆದ ೬ ತಿಂಗಳುಗಳಿಂದ ಅವರಿಗೆ ವೇತನ ನೀಡುತ್ತಿಲ್ಲ ಎಂದರೆ ನಾಗರಿಕ ಸಮಾಜ ಅವರೆಲ್ಲ ಸೇವೆಗಳನ್ನು ಪಡೆದುಕೊಂಡು ಅವರ ಪರವಾಗಿ ಮಾತನಾಡುತ್ತಿಲ್ಲ. ನಾಗರೀಕ ಸಮಾಜವಾಗಿ ನಮ್ಮ ಜವಾಬ್ದಾರಿ ಇಲ್ಲವೇ? ಪೌರಕಾರ್ಮಿಕರು ಪ್ರತಿದಿನ ಸ್ವಚ್ಛತೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ತಕ್ಷಣ ನಾವು ಅವರ ವಿರುದ್ಧ ದೂರು ನೀಡುತ್ತೇವೆ. ಅಧಿಕಾರ ಚಲಾಯಿಸುತ್ತೇವೆ, ಅವರಿಗೆ ಸಮಸ್ಯೆಯಾದಾಗ ನಾವ್ಯಾಕೆ ಮಾತನಾಡುವುದಿಲ್ಲವೆಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

**ಕನ್ನಡ ಶಾಸ್ತ್ರೀಯ ಭಾಷೆ: ಆಗಬೇಕಿರುವುದೇನು?**

**- ಪ್ರದೀಪ್ ಎಲ್ ಮಾಲ್ಗುಡಿ**

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಕೇಂದ್ರ ಸರ್ಕಾರ ೨೦೦೮ರಲ್ಲಿ ಕನ್ನಡ ರಾಜ್ಯೋತ್ಸವದ ಕೊಡುಗೆಯಾಗಿ ನೀಡಿತ್ತು. ಇದಕ್ಕೆ ಸಂಬಂಧಿಸಿದ ಕೆಲಸವನ್ನು ನಿರಹಿಸುವ ಹೊಣೆಯನ್ನು ಮೈಸೂರಿನ ಕೇಂದ್ರೀಯ ಭಾಷಾ ಸಂಸ್ಥಾನಕ್ಕೆ ಕಾಟಕ ಸರ್ಕಾರ ವಹಿಸಿತ್ತು. ಆದರೆ, ಇದು ಕೇವಲ ಎರಡು ವಿದ್ವಾಂಸರ ಸಭೆಗಳನ್ನು

ನಡೆಸುವಷ್ಟಕ್ಕೆ ಸೀಮಿತವಾಯಿತು. ಅಲ್ಲದೆ ಶಾಸ್ತ್ರೀಯ ಭಾಷೆಗಾಗಿ ಒದಗಿಸಲಾದ ಅನುದಾನವನ್ನು ಬೇರೆಯವರ ಪ್ರಾಯೋಜಕತ್ವದಲ್ಲಿ ಕರ್ನಾಟಕದ ವಿವಿಧೆಡೆ ಎಂಟು ವಿಚಾರ ಸಂಕಿರಣಗಳನ್ನು ನಡೆಸುವಷ್ಟಕ್ಕೆ ತನ್ನ ಕೆಲಸವನ್ನು ಸೀಮಿತಗೊಳಿಸಿಕೊಂಡಿತ್ತು. ಈ ಅವಧಿಯನ್ನು ಬಹುತೇಕ ನಿಷ್ಕ್ರಿಯವಾಗಿಯೇ ಕಳೆಯಲಾಯಿತು. ಕಡೆಗೆ ರಾಜ್ಯ ಸರ್ಕಾರ ಮೈಸೂರಿನಿಂದ ಬೆಂಗಳೂರಿಗೆ ಈ ಸಂಸ್ಥೆಯನ್ನು ವರ್ಗಾಯಿಸಲು ಆಜ್ಞೆ ಹೊರಡಿಸಿದಾಗ ಮೈಸೂರಿನ ಸಾಹಿತಿ, ವಿದ್ವಾಂಸರು ಇದನ್ನು ವಿರೋಧಿಸಿದರು. ಆದರೆ ಕೇಂದ್ರೀಯ ಭಾಷಾ ಸಂಸ್ಥಾನದ ನಿಷ್ಕ್ರಿಯತೆಯನ್ನು ಪ್ರಶ್ನಿಸುವ ದಿಟ್ಟತನವನ್ನು ಇವರು ಪ್ರದರ್ಶಿಸಿರಲಿಲ್ಲ. ಸರ್ಕಾರದ ಪ್ರತಿಷ್ಠಿತ ಸಂಸ್ಥೆಯೊಂದು ಮೈಸೂರಿನಿಂದ ದೂರವಾಗುತ್ತದೆಂದು ಮನದಟ್ಟಾದಾಗ ಕ್ರಿಯಾಶೀಲರಾದರು. ಪ್ರಸ್ತುತ ಸನ್ನಿವೇಶದಲ್ಲಿ ಶಾಸ್ತ್ರೀಯ ಭಾಷೆಗಾಗಿ ಹೋರಾಟ ನಡೆಸಿದಂತೆ ಮತ್ತೆ ಶಾಸ್ತ್ರೀಯ ಭಾಷಾ ಅಧ್ಯಯನ ಸಂಸ್ಥೆಗಾಗಿಯೂ ಹೋರಾಟಗಳು ನಡೆಯಬೇಕಾದ ಅನುಮಾನಗಳನ್ನು ಸರ್ಕಾರಗಳು ಹಾಗೂ ಅಧಿಕಾರಿಗಳು ಸೃಷ್ಟಿಸಿದ್ದಾರೆ.

ಸದ್ಯಕ್ಕೆ ತುರ್ತಾಗಿ ಆಗಬೇಕಿರುವ ಕೆಲಸವೆಂದರೆ ಶಾಸ್ತ್ರೀಯ ಭಾಷೆಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸಲು ತಮಿಳುನಾಡಿನ ಮಾದರಿಯಲ್ಲಿ ಕನ್ನಡ ಶಾಸ್ತ್ರೀಯ ಅಧ್ಯಯನ ಸಂಸ್ಥೆಯನ್ನು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸರ್ಕಾರದಿಂದ ತೆರೆಯಬೇಕಾಗಿದೆ. ಅದನ್ನು ಅಧಿಕಾರಿಗಳ ಹಿಡಿತಕ್ಕೆ ಸಿಲುಕಿಸದೇ ಸ್ವಾಯತ್ತ ಸ್ಥಾನವನ್ನು ನೀಡಿ ಅದಕ್ಕೊಂದು ಸ್ವತಂತ್ರ ಸ್ಥಳ, ಕಟ್ಟಡವನ್ನು ಶೀಘ್ರವಾಗಿ ಒದಗಿಸಿ ಉಳಿದ ಆಡಳಿತಾತ್ಮಕ ಹಾಗೂ ಆರ್ಥಿಕ ನೆರವನ್ನು ನೀಡಬೇಕಿದೆ. ಆದರೆ ಇದನ್ನು ಮತ್ತೊಂದು ವಿಶ್ವವಿದ್ಯಾಲವನ್ನಾಗಿಸಬಾರದು. ಈಗಾಗಲೇ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೊದಲಾದವುಗಳು ಸಾವಿರಾರು ಕೃತಿಗಳನ್ನು ಪ್ರಕಟಿಸಿವೆ. ಇಂತಹ ಕೃತಿಗಳ ಪುನರ್ಮುದ್ರಣಕ್ಕೆ ಶಾಸ್ತ್ರೀಯ ಅಧ್ಯಯನ ಸಂಸ್ಥೆ ಮೀಸಲಾಗದಂತೆ ಹೊಸ ಯೋಜನೆಗಳನ್ನು ರೂಪಿಸಬೇಕಾಗಿದೆ.



ಕರ್ನಾಟಕ ಸುವರ್ಣ ಮಹೋತ್ಸವದ ಸಮಯದಲ್ಲಿ ಹಾಗೂ ಶಾಸ್ತ್ರೀಯ ಸ್ಥಾನ ಲಭಿಸಿದ ಸಮಯದಲ್ಲಿ ಸರ್ಕಾರ ವಿವಿಧ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ಕೋಟಿಗಟ್ಟಲೆ ಅನುದಾನವನ್ನು ಬಿಡುಗಡೆ ಮಾಡಿತ್ತು. ಬೆಂಗಳೂರು ವಿಶ್ವವಿದ್ಯಾಲಯ ಯಾವ ಯೋಜನೆಗಳನ್ನು ಜಾರಿಗೆ ತರಬೇಕೆಂದು ಯೋಚಿಸುವುದರಲ್ಲೇ ಕಾಲಕಳೆಯಿತು. ಇಂತಹ ಅಚಾತುರ್ಯ ಹಾಗೂ ವಿಳಂಬಾವಸ್ಥೆಗೆ ಈ ಸಂಸ್ಥೆ ತಲುಪಬಾರದು.

ಶಾಸ್ತ್ರೀಯ ಸ್ಥಾನ ಲಭಿಸಿ ೫ ವರ್ಷಗಳಾದರೂ ಇದಕ್ಕೆ ನಿರ್ದೇಶಕರನ್ನು ಇದುವರೆಗೆ ನೇಮಿಸಿಲ್ಲ. ತಮಿಳುನಾಡು ಈಗಾಗಲೇ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ನಿರಂತರ ಅನುದಾನವನ್ನು

ಪಡೆಯುತ್ತಿದೆ. ಈ ವಿಷಯದಲ್ಲಿ ತಮಿಳುನಾಡು ಕನ್ನಡ ಹಾಗೂ ಕರ್ನಾಟಕಕ್ಕಿಂತ ನೂರು ವರ್ಷ ಮುಂದಿದೆ. ಪ್ರತಿವರ್ಷ ಕೇವಲ ಅನುದಾನ ಪಡೆಯುವುದರಿಂದಲೇ ಕನ್ನಡದ ಉದ್ಧಾರವಾಗುತ್ತದೆಂದು ಯಾರೂ ಭ್ರಮಿಸಬೇಕಿಲ್ಲವಾದರೂ ಲಭ್ಯ ಆರ್ಥಿಕ ಸಂಪನ್ಮೂಲವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುವ ಯುವ ಉತ್ಸಾಹಿ, ಕ್ರಿಯಾಶೀಲ, ಅನ್ವೇಷಣಾತ್ಮಕ ಮನೋಧರ್ಮವುಳ್ಳ ವಿದ್ವಾಂಸರು, ಚಿಂತಕರು ಸದ್ಯಕ್ಕೆ ಕನ್ನಡಕ್ಕೆ ಅತ್ಯಗತ್ಯವಾಗಿದ್ದಾರೆ. ಪ್ರಾಚೀನ ಶಾಸನ, ಹಸ್ತಪ್ರತಿ, ಸಾಹಿತ್ಯ ಕೃತಿಗಳನ್ನು ಆಳವಾಗಿ ಅಭ್ಯಸಿಸಿರುವ ಶಾಸ್ತ್ರೀಯ ಓದು, ಸಿದ್ಧತೆ ಹಾಗೂ ಆಧುನಿಕ ತಂತ್ರಜ್ಞಾನವೆರಡನ್ನೂ ಹೊಂದಿರುವ ಯುವ ಸಮೂಹ ಕನ್ನಡ ಶಾಸ್ತ್ರೀಯ ಅಧ್ಯಯನ ಸಂಸ್ಥೆಯಲ್ಲಿ ದುಡಿಯುವಂತಾಗಬೇಕು. ಇಲ್ಲವಾದಲ್ಲಿ ಮತ್ತೆ ಕುಟ್ಟುವ ಕೆಲಸಗಳಿಗೆ ಮಾತ್ರ ಈ ಸಂಸ್ಥೆ ಮೀಸಲಾಗಲಿದೆ.

ಚಿತ್ರಕಲೆ, ಶಿಲ್ಪಕಲೆ, ಸಾಹಿತ್ಯ, ಸಂಗೀತ, ರಂಗಭೂಮಿ, ಸಿನಿಮಾ, ನೃತ್ಯ, ಜನಪದ, ಜನಸಮುದಾಯಗಳೆಲ್ಲವನ್ನೂ ಒಳಗೊಳ್ಳುವ ಹಾಗೂ ಇವೆಲ್ಲವುಗಳಿಂದ ಕನ್ನಡ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಶಾಸ್ತ್ರೀಯ ಅಧ್ಯಯನ ಸಂಸ್ಥೆ ಕ್ರಿಯಾಶೀಲವಾಗಬೇಕಿದೆ. ಅದರ ಜತೆಗೆ ನಾಡಿನ ರೈತರು, ಉದ್ಯಮಿಗಳು, ಕಾರ್ಮಿಕರ ಹಿತಾಸಕ್ತಿಯನ್ನು ಕಾಯುವ ಕೆಲಸವೂ ಇದರ ಆದ್ಯತೆಯಾಗಬೇಕು. ಏಕೆಂದರೆ; ನಾಡಿನ ಗಡಿ ಸುತ್ತ ಕನ್ನಡ ಭಾಷಿಕರ ಮೇಲೆ, ಆ ಮೂಲಕ ಕನ್ನಡದ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ಇದುವರೆಗೆ ಸರ್ಕಾರ ಹಾಗೂ ನಾಡಿನ ವಿವಿಧ ಸಾಂಸ್ಕೃತಿಕ ಅಕಾಡೆಮಿ, ಪ್ರಾಧಿಕಾರಗಳು ತಡೆಯುವಲ್ಲಿ ವಿಫಲವಾಗಿವೆ. ಇನ್ನು ಮುಂದಾದರೂ ಇಂತಹ ಅನಾಹುತಗಳು ನಡೆಯದಂತೆ ದೀರ್ಘಕಾಲೀನ ಪರಿಹಾರಗಳನ್ನು ಕಂಡುಹಿಡಿಯುವಲ್ಲಿ ಇನ್ನಾದರೂ ಆರಂಭದ ಹೆಜ್ಜೆ ಇಡಬೇಕಾಗಿದೆ.

ಸರ್ಕಾರ ೨೦೧೪ರ ಆಗಸ್ಟ್ ಒಂದರಂದು ನೇಮಿಸಿರುವ ಆಡಳಿತ ಮಂಡಳಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಿಂಹಪಾಲು ಸಿಕ್ಕಿದೆ. ಇದರ ಮುಂದುವರಿದ ಭಾಗ ಏನಾಗಲಿದೆ? ಎಂದು ಸದ್ಯಕ್ಕೆ ಕಾದು ನೋಡಬೇಕಿದೆ. ಆದರೆ ಶಾಸ್ತ್ರೀಯ ಕನ್ನಡ ಸಂಸ್ಥೆ ಯಾವುದೇ ವಿಶ್ವವಿದ್ಯಾಲಯದ ಹಿಡಿತದಲ್ಲಿರಬಾರದು. ಸಾಂಸ್ಕೃತಿಕ ತಿಳಿವಳಿಕೆಯಿಲ್ಲದ ವ್ಯಕ್ತಿಗಳು ಈ ಸಂಸ್ಥೆಯ ನಿರ್ಣಾಯಕ ಹಂತದಲ್ಲಿ ಒಂದು ತಪ್ಪು ಹೆಜ್ಜೆಯನ್ನಿಟ್ಟರೆ ಕನ್ನಡದ ಅಸ್ಮಿತೆ, ಕನ್ನಡ ಚಿಂತನೆ, ಕನ್ನಡದ ಭವಿಷ್ಯ, ಶಾಸ್ತ್ರೀಯ



ಭಾಷೆಯ ಸ್ಥಾನಕ್ಕಾಗಿ ನಡೆದ ಹೋರಾಟಗಳೆಲ್ಲವೂ ಮಣ್ಣುಪಾಲಾಗುತ್ತವೆ. ಈ ಸಂಬಂಧವಾಗಿ ತರಾತುರಿಯಲ್ಲಿ ನಿರ್ಣಯಗಳನ್ನು ಯಾರೂ ತೆಗೆದುಕೊಳ್ಳಬಾರದು.

**ತುರ್ತಾಗಿ ಕೈಗೊಳ್ಳಬೇಕಾದ ಕ್ರಮಗಳು**

೧. ನಾಡಿನ ಕನ್ನಡ ಅಧ್ಯಯನಕಾರರ ಸಭೆ ನಡೆಸುವುದು. ಅವರಿಂದ ಕನ್ನಡಕ್ಕಾಗಿ ಯೋಜನೆಗಳನ್ನು ರೂಪುಗೊಳಿಸುವ ಪ್ರಸ್ತಾವಗಳನ್ನು ಸ್ವೀಕರಿಸುವುದು

೨. ಕನ್ನಡ ನಾಡು, ನುಡಿ, ಗಡಿ, ಜಲ ಕುರಿತ ಅರಿವನ್ನು ಹೊಂದಿರುವ ಹಾಗೂ ಇವುಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಆಸಕ್ತರಾಗಿರುವ ಹಿರಿ-ಕಿರಿಯರಿಂದ ಸಲಹೆ-ಸಹಕಾರಗಳನ್ನು ಪಡೆಯುವುದು

೩. ನಿರ್ದೇಶಕರ ನೇಮಕ

೪. ಕನ್ನಡ ಶಾಸ್ತ್ರೀಯ ಭಾಷೆಯ ಅಧ್ಯಯನಕ್ಕೆ ಅವಶ್ಯಕವಾದ ತಜ್ಞರು, ವಿದ್ವಾಂಸರು, ಸಂಶೋಧಕರ ನೇಮಕ

೫. ಅವಶ್ಯಕ ಸಿಬ್ಬಂದಿಗಳ ನೇಮಕ

೬ ಕನ್ನಡ ಶಾಸ್ತ್ರೀಯ ಸಂಸ್ಥೆಗೆ ಸೂಕ್ತವಾದ ಸ್ಥಳ ಹಾಗೂ ಕಟ್ಟಡವನ್ನು ಒದಗಿಸುವುದು ವಿಶಾಲವಾದ ಗ್ರಂಥಾಲಯಕ್ಕೆ ಒತ್ತು ನೀಡಿ, ಕನ್ನಡದ ಪ್ರಾಚೀನ ಗ್ರಂಥಗಳನ್ನೆಲ್ಲ ಅಂತರ್ಜಾಲದಲ್ಲಿ ಸುಲಭವಾಗಿ ಓದಲು ಹಾಗೂ ಬರೆಯಲು ಅನುಕೂಲ ವಾಗುವಂತೆ ವ್ಯವಸ್ಥೆ ಮಾಡುವುದು

೮. ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿರುವ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರಗಳನ್ನು ತೆರೆಯುವುದು

೯. ಶಾಸ್ತ್ರೀಯ ಸಂಸ್ಥೆಯನ್ನು ರಾಜ್ಯ ನ್ನಾಗಿಸಬೇಕು. ಸರ್ಕಾರದ ಪ್ರತಿಷ್ಠಿತ ಅಕಾಡೆಮಿಕ್ ಸಂಸ್ಥೆಯನ್ನಾಗಿಸಬೇಕು.

೧೦. ಕನ್ನಡದ ಪ್ರಾಚೀನತೆಯ ಸಾಕ್ಷಾಧಾರಗಳನ್ನು ಪುನರಾವಲೋಕಿಸಿ, ಅಧಿಕೃತ ಗ್ರಂಥ ಸರಣಿಯನ್ನು ಪ್ರಕಟಿಸಬೇಕು. ಮತ್ತು ಈ ಮಾಹಿತಿ ಅಂತರ್ಜಾಲದ ಮೂಲಕ ದೊರೆಯುವಂತೆ ಮಾಡಬೇಕು

೧೧. ಪ್ರಾಚೀನ ಕನ್ನಡ ಕಾವ್ಯಗಳೆಲ್ಲವನ್ನು ಬಹುಮಾಧ್ಯಮಕ್ಕೆ ಅಳವಡಿಸುವುದು. (ಓದು, ಗಮಕ, ವ್ಯಾಖ್ಯಾನ ಮತ್ತು ಸಾಧ್ಯವಾದ ಭಾರತೀಯ ಹಾಗೂ ವಿದೇಶೀ ಭಾಷೆಗಳಲ್ಲಿ ಅರ್ಥ ವಿವರಣೆ ಸಹಿತ) ಹಾಗೂ ಈ ಕಾವ್ಯಗಳನ್ನು ಭಾರತದ ಮತ್ತು ಜಗತ್ತಿನ ಆಯ್ದ ಇತರ ಭಾಷೆಗಳಿಗೆ ಅನುವಾದಿಸುವುದು.

೧೨. ಪ್ರಮುಖ ಪ್ರಾಚೀನ ಶಾಸ್ತ್ರ ಗ್ರಂಥಗಳನ್ನು ಮರು ಮುದ್ರಿಸುವುದು. ಇವುಗಳನ್ನು ಭಾರತದ ಮತ್ತು ಜಗತ್ತಿನ ಆಯ್ದ ಇತರ ಭಾಷೆಗಳಿಗೆ ಅನುವಾದಿಸುವುದು.

೧೩. ಕನ್ನಡ ಪ್ರಾಚೀನ ಗ್ರಂಥಗಳ ಸುಸಜ್ಜಿತವಾದ ಗ್ರಂಥಾಲಯವನ್ನು ಸ್ಥಾಪಿಸುವುದು. ಅಲ್ಲಿನ ಗ್ರಂಥಗಳನ್ನು ಡಿಜಿಟಲ್ ತಂತ್ರಜ್ಞಾನದ ಮೂಲಕ ದೊರೆಯುವಂತೆ ಮಾಡುವುದು.

೧೪. ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನಕ್ಕೆ ಪೂರಕವಾದ ತರಗತಿಗಳನ್ನು ನಡೆಸುವುದು ೧೫. ಮುಂದಿನ ೫೦ ವರ್ಷಗಳ ಕನ್ನಡ ಭಾಷೆಯ ಸ್ಥಿಗತಿಗಳನ್ನು ಗಮನದಲ್ಲಿಟ್ಟುಕೊಂಡು ಅದರ ಸರ್ವತೋಮುಖ ಬೆಳವಣಿಗೆಯ ಯೋಜನೆಗಳನ್ನು ರೂಪಿಸಿ, ಕಾರ್ಯ ರೂಪಕ್ಕೆ ತರುವುದು.

೧೬. ಈ ಸಂಸ್ಥೆಯ ಮೂಲಕ ಯುವ ವಿದ್ವಾಂಸರನ್ನು ಸೃಷ್ಟಿಸುವುದು. ಇಲ್ಲಿ ಕಲಿತ ವಿದ್ವಾಂಸರು ಇತರ ವಿಶ್ವವಿದ್ಯಾಲಯಗಳಲ್ಲಿ ಪಡೆದ ಪದವಿಗಳಂತೆ ಉದ್ಯೋಗಾವ ಕಾಶಗಳನ್ನು ಪಡೆಯಲು ಅರ್ಹರಾಗಿರುವಂತೆ ನಿಯಮಗಳನ್ನು ರೂಪಿಸುವುದು.

೧೭. ಈ ಸಂಸ್ಥೆ ಮುಖ್ಯವಾಗಿ ಸಂಶೋಧನೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಮತ್ತು ಪಿಎಚ್.ಡಿ., ಮತ್ತು ಡಿ.ಲಿಟ್., ಪದವಿಯ ಅಧ್ಯಯನಕ್ಕೆ ಪೂರಕವಾದ ಅಕಾಡೆಮಿಕ್ ವಾತಾವರಣವನ್ನು ಹೊಂದಿರಬೇಕು.

೧೮. ಮೈಸೂರಿನಲ್ಲಿ ಈ ಸಂಸ್ಥೆಗೆ ಪೂರಕವಾದ ಕ್ಯಾಂಪಸ್‌ಅನ್ನು ನಿರ್ಮಾಣ ಮಾಡು ವುದು. ಏಕೆಂದರೆ, ಮೈಸೂರಿನಲ್ಲಿ ಶಾಸ್ತ್ರೀಯ ಕನ್ನಡಕ್ಕೆ ಸಂಬಂಧಪಟ್ಟ ಓಲೆಗ್ರಂಥ ಗಳು, ಕಲ್ಲಚ್ಚು ಪ್ರತಿಗಳು, ಪ್ರತಿ ಮಾಡಲ್ಪಟ್ಟ ಕಾಗದದ ಹಸ್ತಪ್ರತಿಗಳು ಹಾಗೂ ಶತಮಾನಕ್ಕೂ ಹಿಂದೆ ಮುದ್ರಿತವಾಗಿರುವ ಅನೇಕ ಪ್ರಾಚೀನ ಗ್ರಂಥಗಳು ಮೈಸೂರಿನ ಓ.ಆರ್.ಐ. ಮತ್ತು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಮೈಸೂರು ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿವೆ. ಆದ್ದರಿಂದ ಈ ಸಂಸ್ಥೆ ಮೈಸೂರಿನಲ್ಲಿ ಕಾರ್ಯ ನಿರ್ವಹಿಸುವುದು ಸೂಕ್ತವಾಗಿದೆ.

೧೯. ವಿವಿಧ ವಿಷಯಗಳ ಪರಿಣತ ವಿದ್ವಾಂಸರನ್ನು ನಿಯೋಜನೆಯ ಮೇರೆಗೆ, ಒಪ್ಪಂದದ ಮೇರೆಗೆ ಹಾಗೂ ಖಾಯಂ ಆಗಿ ನೇಮಕ ಮಾಡಿಕೊಳ್ಳುವುದು.

೨೦. ಪೂರಕ ಕಚೇರಿಯ ಸಿಬ್ಬಂದಿಯನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳುವುದು.

೨೧. ವಿದ್ವಾಂಸರ ಅಧ್ಯಯನಕ್ಕೆ ಪೂರಕವಾದ ಹಾಗೂ ಗ್ರಂಥಾಲಯವನ್ನು ಹೊಂದುವ ಸೂಕ್ತ ಕಟ್ಟಡಗಳನ್ನು ನಿರ್ಮಾಣ ಮಾಡುವುದು.

೨೨. ಈ ಸ್ವಾಯತ್ತ ಸಂಸ್ಥೆಗೆ ಮುಖ್ಯಮಂತ್ರಿಗಳು ಅಧ್ಯಕ್ಷರಿದ್ದು, ೫ ಜನರ ಉನ್ನತ ಸಮಿತಿಯನ್ನು ಹೊಂದಿರಬೇಕು.

೨೩. ಈ ಸಮಿತಿಯ ೫ ಜನರ ಸಮಿತಿ ಕನ್ನಡ ವಿದ್ವಾಂಸರಾಗಿದ್ದು, ಸಂಸ್ಥೆಯ ನಿರ್ದೇಶಕರು ಸದಸ್ಯ ಕಾವ್ಯದರ್ಶಿಗಳಾಗಿಸಬೇಕು. ಈ ಸಂಸ್ಥೆಯು ಆಯವ್ಯಯದ ನೇರ ಅನುದಾನಕ್ಕೆ ಒಳಪಡಬೇಕು.

೧೪. ಸಂಸ್ಥೆಯ ದೈನಂದಿನ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳಲು ಕೆ.ಎ.ಎಸ್. ಅಧಿಕಾರಿಯೊಬ್ಬರು ಆಡಳಿತಾಧಿಕಾರಿಯಾಗಿರಬೇಕು. (ಇವರಿಗೆ ಭಾಷೆ, ಕಲೆ, ಸಾಹಿತ್ಯ, ಸಂಸ್ಕೃತಿಗಳ ಪರಿಚಯವಿರಬೇಕು.)

೧೫. ಕಾರ್ಯಯೋಜನೆಗೆ ತಕ್ಕಂತೆ ಅಗತ್ಯವಿರುವ ವಿದ್ವಾಂಸರನ್ನು ಹಾಗೂ ಸಿಬ್ಬಂದಿಯನ್ನು ಉನ್ನತ ಸಮಿತಿಯ ಅಭಿಪ್ರಾಯಗಳಿಗನುಗುಣವಾಗಿ ಹೊಂದುವ ಸಾಧ್ಯತೆಗಳನ್ನು ಸಂಸ್ಥೆ ಹೊಂದಿರಬೇಕು.

೧೬. ವಿವಿಧ ವಿದ್ವಾಂಸರ ಚರ್ಚೆ, ಸಂವಾದ, ಸಲಹೆಗಳನ್ನಾಧರಿಸಿ ಕ್ರಿಯಾಯೋಜನೆಯನ್ನು ರೂಪಿಸುವಂತಿರಬೇಕು.

೧೭ ಈ ಸಂಸ್ಥೆಯು ಸ್ವಾಯತ್ತ ವಿಶ್ವವಿದ್ಯಾಲಯದ ಮಾದರಿಯಲ್ಲಿ ಅಧ್ಯಯನಾಂಗ, ಬೋಧನಾಂಗ ಹಾಗೂ ಪ್ರಸಾರಾಂಗಗಳನ್ನು ಒಳಗೊಂಡಿರಬೇಕು. ಆದರೂ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿರಬೇಕು.

೧೮. ಈ ಮೂಲಕ ಅನೇಕ ಉದ್ಯೋಗಗಳನ್ನು ಸೃಷ್ಟಿಸುವುದು.

ಹಾಗೆಯೇ ನಿವೃತ್ತರನ್ನು ಈ ಸಂಸ್ಥೆಯ ನಿರ್ದೇಶಕ ಹುದ್ದೆಗೆ ಪರಿಗಣಿಸದಿರುವುದು ಸೂಕ್ತ. ಅಂತಹವರನ್ನು ಸಲಹಾ ಸಮಿತಿಯಲ್ಲಿ ಮಾರ್ಗದರ್ಶಿಗಳಾಗಿ ನೇಮಿಸಿಕೊಳ್ಳುವುದು ಒಳಿತು. ಈ ಕೆಲಸಗಳು ಅತ್ಯಂತ ತುರ್ತಾಗಿ ನಡೆಯಬೇಕಿದೆ. ಇದರಲ್ಲಿ ಯಾವ ಆಮಿಷ ಅಥವಾ ಒತ್ತಡಗಳಿಗೂ ಒಳಗಾಗದೆ ಕನ್ನಡಪರವಾದ ಆಲೋಚನೆಯೊಂದನ್ನೇ ಮುನ್ನೆಲೆಯಾಗಿಟ್ಟುಕೊಂಡಿರುವ ಸಮಾನಮನಸ್ಕರನ್ನು ಒಂದುಗೂಡಿಸಬೇಕಾಗಿದೆ. ಆ ಮೂಲಕ ಕನ್ನಡದ ಭವಿಷ್ಯವನ್ನು ಉಜ್ವಲಗೊಳಿಸುವ ಸಾಧ್ಯತೆಗಳೆಡೆಗೆ ಸಾಗಲು ದಾರಿಯನ್ನು ನಿರ್ಮಿಸಬೇಕಿದೆ.

## ಶಿಕ್ಷಣ ಮತ್ತು ಉದ್ಯೋಗದ ಜನಪದೀಕರಣ

**- ಡಾ. ಅರುಣ್ ಜೋಳದಕೂಡ್ಲಿಗಿ**

ನಾವು ಆಧುನಿಕ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನದಿಂದ ಯಾವುದನ್ನು ಇಂದು ಅಭಿವೃದ್ಧಿಯ ಸಂಕೇತ ಎನ್ನುತ್ತೇವೆಯೋ ಅದಕ್ಕೆ ಪರ್ಯಾಯವಾದ ಮೂಲ ಜ್ಞಾನವನ್ನು ದೇಸಿ ಎನ್ನುತ್ತೇವೆ. ಇದನ್ನು ಚರ್ಚೆಯ ಕಾರಣಕ್ಕೆ ಸ್ಥೂಲವಾಗಿ ಮಾರ್ಗ ಮತ್ತು ದೇಸಿ ಎಂದು ವಿಭಾಗಿಸಿಕೊಳ್ಳೋಣ. ಇವೆರಡರ ನಡುವೆ ಸೂಕ್ಷ್ಮವಾಗಿ ಕೊಡುಕೊಳುವಿಕೆ ಇರುವುದನ್ನು ಮರೆಯದಿರೋಣ. ಹಾಗಿದ್ದೂ ಕೆಲವು ಮೂಲಭೂತ ವ್ಯತ್ಯಾಸಗಳಿರುವುದನ್ನು ಅಲ್ಲಗಳೆಯುವಂತಿಲ್ಲ. ಮಾರ್ಗವು ಆಧುನಿಕ ಶಿಕ್ಷಣದಿಂದ ಪ್ರೇರಿತವಾಗಿದ್ದರೆ, ದೇಸಿ ಪಾರಂಪರಿಕ ಜನವಿವೇಕದ ಅರಿವಿನಿಂದ ರೂಪುಗೊಂಡಿದೆ. ಹೀಗೆ ನೋಡುವಾಗ ಮಾರ್ಗದಲ್ಲಿ ಏನೇನಿದೆಯೋ ಅದೆಲ್ಲವೂ ದೇಸಿ ತಿಳಿವಿನ

ತಳಹದಿಯ ಮೇಲೆ ಕಟ್ಟಲ್ಪಟ್ಟ ಕಟ್ಟಡ. ಆದರೆ ಇಂದು ಕಟ್ಟಡವೇ ಮೇಲಾಗಿ ಅದರ ಬುನಾದಿ ಕಡೆಗಣಿಸಲ್ಪಟ್ಟಿದೆ. ಅಂದರೆ ಮಾರ್ಗ ಅಥವಾ ಶಿಷ್ಟವೆ ಮೇಲಾಗಿ ದೇಸಿ ಎನ್ನುವ ಎಲ್ಲವೂ ಕಡೆಗಣನೆಗೆ ಒಳಗಾಗಿದೆ. ಅಂತೆಯೇ ದೇಸಿ ಜ್ಞಾನವನ್ನೂ ಮಾರುಕಟ್ಟೆ ಶಕ್ತಿಗಳು ಸರಕನ್ನಾಗಿಸಿ ಬಳಸುತ್ತಿವೆ.

ಇದನ್ನು ವಿಸ್ತರಿಸುವುದಾದರೆ, ಮಾರ್ಗದಲ್ಲಿರುವ ಎಲ್ಲಕ್ಕೂ ದೇಸಿಯ ಮೂಲ ಪರ್ಯಾಯಗಳಿವೆ. ದೇಸಿ ಆಹಾರ, ವೈದ್ಯ, ಉಡುಪು, ವಸತಿ ವಿನ್ಯಾಸಗಳು, ತಂತ್ರಜ್ಞಾನ, ಸಾಹಿತ್ಯ, ಸಂಸ್ಕೃತಿ, ಕಲೆ, ನುಡಿ, ಆರ್ಥಿಕತೆ, ಶಿಕ್ಷಣ, ಮನರಂಜನೆ ಹೀಗೆ ನಾವು ಮಾರ್ಗದಲ್ಲಿ ಏನೇನಿದೆಯೋ ಅದೆಲ್ಲಕ್ಕೂ ಮೂಲ ಜನ ಪರ್ಯಾಯಗಳಿವೆ. ಆಧುನಿಕ ಶಿಕ್ಷಣವು ಎರವಲು ತಂದ ತಿಳಿವಾಗಿರುವಂತೆಯೇ, ಈ ಮೂಲ ಪರ್ಯಾಯಗಳಲ್ಲಿ ಮೊಳಕೆಯೊಡೆದು ಆಧುನಿಕ ಜ್ಞಾನಶಾಖೆಗಳಾಗಿ ಹುಟ್ಟಿದವುಗಳೂ ಇವೆ. ವಿಪರ್ಯಾಸವೆಂದರೆ ಈ ಎರಡೂ ನೆಲೆಗಳು ದೇಸಿ ಜ್ಞಾನಶಾಖೆಗಳನ್ನು ಮೆಟ್ಟಿ ನಿಂತು ಅಬ್ಬರಿಸುತ್ತಿವೆ. ಇಲ್ಲಿ ದೇಸಿಯ ಜ್ಞಾನದ ಉತ್ಪಾದಕರು ಮತ್ತು ಫಲಾನುಭವಿಗಳು ಬಹುಪಾಲು ಗ್ರಾಮೀಣರು, ಅನಕ್ಷರಸ್ಥರು, ಆರ್ಥಿಕವಾಗಿ ಬಡವರು, ಕೆಳವರ್ಗದವರು, ದಲಿತ ದಮನಿತರು, ಮಹಿಳೆಯರು, ಆದಿವಾಸಿ ಅಲೆಮಾರಿ ಬುಡಕಟ್ಟುಗಳು, ಒಟ್ಟಾರೆ ದುರ್ಬಲರು, ಮಾರ್ಗದ ಉತ್ಪಾದನೆ ಮತ್ತು ಫಲಾನುಭವಿಗಳಲ್ಲಿ ಹೆಚ್ಚಾಗಿ ಮೇಲೆ ಹೇಳಿದ್ದಕ್ಕೆ ವಿರುದ್ಧವಾದ ಬಲಾಢ್ಯ ಜನರು.

ಜಾಗತೀಕರಣದ ಆರ್ಥಿಕ ಬೆಳವಣಿಗೆಯಲ್ಲಿ ಈ ಬಲಾಢ್ಯರ ಉತ್ಪಾದನೆಗೆ ದುರ್ಬಲರು ಗಿರಾಕಿಗಳಾಗಿದ್ದಾರೆ. ಹಾಗಾಗಿ ಜನಸಾಮಾನ್ಯರು ತಮ್ಮದೇ ಪರ್ಯಾಯ ಜ್ಞಾನವನ್ನು ಬಳಕೆಗೆ ತರದೆ ಗೆದ್ದಲು ಹಿಡಿಸಿದ್ದಾರೆ. ಇದರಿಂದಾಗಿ ಶಿಷ್ಟ ಲೋಕ



ನಿರ್ಣಾಯಕ ಸ್ಥಿತಿಯಲ್ಲಿಯೂ, ದೇಸಿ ದುರ್ಬಲವಾಗಿಯೂ ಮುಂದುವರೆದಿವೆ. ಇದನ್ನು ಸ್ಪಷ್ಟವಾಗಿ ಹೇಳುವುದಾದರೆ ಮಾರ್ಗವನ್ನು ಜಾಗತೀಕರಣಕ್ಕೆ ಒಳಗಾದ ಮಾರುಕಟ್ಟೆಯ ಜಗತ್ತೆಂದೂ, ದೇಸಿಯನ್ನು ಇಂತಹ ಮಾರುಕಟ್ಟೆ ರಹಿತ ಜನಸಾಮಾನ್ಯರ ಅನುತ್ಪಾದಕ ಲೋಕವೆಂದೂ ನೋಡಲಾಗುತ್ತಿದೆ. ಹೀಗಿರುವಾಗ ಶಿಷ್ಟದಲ್ಲಿ ದೇಸಿಯನ್ನು ಬೆಸೆದು ಹೊಸ ಪರ್ಯಾಯ ಕಟ್ಟುವ ಬಗೆಗೆ ಚಿಂತಿಸಬೇಕಿದೆ. ಮೊದಲ ಹಂತದಲ್ಲಿ ದೇಸಿ ಜ್ಞಾನಪರಂಪರೆಯನ್ನು ಒಳಗೊಂಡ ಶಿಕ್ಷಣ ಮತ್ತು ಉದ್ಯೋಗದ ಸಾಧ್ಯತೆಯ ಬಗ್ಗೆ ಚಿಂತಿಸಬೇಕಿದೆ.

ಇದೀಗ ಭಾರತದ ಗ್ರಾಮಗಳು ಸಂಪೂರ್ಣ ಪರಾವಲಂಬಿಗಳಾಗಿವೆ. ದೇಸಿ ಶಿಕ್ಷಣದ ಪುನರುಜ್ಜೀವನದ ಮೊದಲ ಉದ್ದೇಶ ಇಂತಹ ಗ್ರಾಮ ಜಗತ್ತನ್ನು ಮತ್ತೆ ಸ್ವಾವಲಂಬಿಗಳನ್ನಾಗಿ ರೂಪಿಸುವುದು. ಇದೊಂದು ಅಸಾಧ್ಯದ ಸಂಗತಿಯಂತೆಯೇ ಗೋಚರಿಸುತ್ತದೆ. ಆದರೆ ಇದನ್ನು ಮಾಡದೆ ಹೋದರೆ ದೇಸೀಯ ಜನರು ಈಗಿರುವುದಕ್ಕಿಂತ

ಮತ್ತಷ್ಟು ದುರಂತದ ಕಡೆ ಚಲಿಸುತ್ತಾರೆ. ಹಾಗಾಗಿ ಶಿಕ್ಷಣ ಮತ್ತು ಉದ್ಯೋಗವನ್ನು ಎರಡು ನೆಲೆಗಳಲ್ಲಿ ನೋಡಬೇಕಾಗಿದೆ. ಒಂದನೆಯದು ಈಗಿರುವ ಶಿಕ್ಷಣ ಮತ್ತು ಉದ್ಯೋಗದಲ್ಲಿ ಜಾನಪದವನ್ನು ಸೇರಿಸುವುದು ಹೇಗೆ ಎನ್ನುವುದು. ಎರಡನೆಯದು ಈಗಾಗಲೆ ಇರುವ ಪಾರಂಪರಿಕ ಜ್ಞಾನವನ್ನು ಪುನರುಜ್ಜೀವನಗೊಳಿಸುವುದು ಹೇಗೆ ಎನ್ನುವುದು. ಎರಡೂ ಒಂದಕ್ಕೊಂದು ಪೂರಕವಾಗಿದ್ದರೂ ಈ ಮಧ್ಯೆ ಸೂಕ್ಷ್ಮ ವ್ಯತ್ಯಾಸಗಳೂ ಇವೆ.

ಈಚೆಗೆ ಜಾನಪದ ವಿಶ್ವವಿದ್ಯಾನಿಲಯದಲ್ಲಿ ಘಟಿಕೋತ್ಸವ ನಡೆದಾಗ ಜಾನಪದ ವಿವಿಯ ಗೌರವ ಡಾಕ್ಟರೇಟ್ ಪಡೆದ ಶಿಗ್ಗಾಂ ಭಾಗದ ಹಿರಿಯ ಕಲಾವಿದರಾದ ತೀಬ ಸೊಲಬಕ್ಕನವರ್ ಮಾತನಾಡುತ್ತಾ, ಜಾನಪದ ವಿವಿಯಲ್ಲಿ ಓದಿ ಡಿಗ್ರಿ ಪಡೆದವರು ಎಲ್ಲಿ ಕೆಲಸ ಮಾಡಬೇಕು? ಅವರಿಗೆ ಉದ್ಯೋಗದ ಸಾಧ್ಯತೆ ಏನು, ಉದ್ಯೋಗವಿಲ್ಲದ ಶಿಕ್ಷಣವನ್ನು ಕೊಡುವುದು ಏಕೆ? ಎನ್ನುವ ಪ್ರಶ್ನೆಯನ್ನು ಎತ್ತಿದರು. ಸೊಲಬಕ್ಕನವರ್ ಕಲಾಪ್ರಕಾರದಲ್ಲಿ ಜಾನಪದ ಬದುಕನ್ನು ಪುನರ್ ರೂಪಿಸಿ ಕರ್ನಾಟಕದ ಸಂದರ್ಭದಲ್ಲಿ ವಿಶಿಷ್ಟ ಮಾದರಿಯನ್ನು ನಿರ್ಮಿಸಿದ್ದಾರೆ. ಕಲಾಕೃತಿಗಳಲ್ಲಿ ಜನರು ತಮ್ಮನ್ನು ತಾವೇ ನೋಡಿ ಪುಳಕಿತರಾಗುವಂತಹ ಪ್ರಯೋಗ ಮಾಡಿದ 'ರಾಕ್ ಗಾರ್ಡನ್' ಒಂದು ಯಶಸ್ವೀ ಪ್ರಯೋಗವಾಗಿದೆ. ಇಂತಹ ಅನುಭವದ ನೆಲೆಯಲ್ಲಿ ಜಾನಪದ ಕಲಿತವರಿಗೆ ಉದ್ಯೋಗದ ಪ್ರಶ್ನೆಯನ್ನು ಎತ್ತಿದ್ದರು. ಈ ಪ್ರಶ್ನೆಯ ಗಂಭೀರತೆಯನ್ನು ಘಟಿಕೋತ್ಸವ ಭಾಷಣ ಮಾಡಿದ ಪ್ರೊ.ಬರಗೂರು ರಾಮಚಂದ್ರಪ್ಪ ಅವರು ವಿಸ್ತಾರವಾಗಿ ಚರ್ಚಿಸಿದರು. ಅಂತೆಯೇ ಜಾನಪದ ಪದವೀಧರರು ತಾವು ಕಲಿತದ್ದಕ್ಕೆ ಉದ್ಯೋಗದ ಆಯ್ಕೆಯ ಬಗೆಗೆ ಹೋರಾಟ ರೂಪಿಸುವ ಅಗತ್ಯವನ್ನು ವಿವರಿಸಿದರು.

ಈ ಬಗೆಯ 'ಜಾನಪದ ಕಲಿತವರ ಉದ್ಯೋಗದ ಸಮಸ್ಯೆಗೆ ಐದು ದಶಕದ ಇತಿಹಾಸವಿದೆ. ೧೯೬೬ ರಲ್ಲಿ ದೇಜಗೌ ಅವರು ಮೈಸೂರು ವಿವಿಯ ಕನ್ನಡ ವಿಭಾಗದ ಕನ್ನಡ ಎಂ.ಎ ನಲ್ಲಿ ಜಾನಪದವನ್ನು ಒಂದು ಐಚ್ಚಿಕ ವಿಷಯವನ್ನಾಗಿ ಅಧ್ಯಯನಕ್ಕೆ ಸೇರಿಸಿದ ದಿನದಿಂದ ಕಳೆದ ನಾಲ್ಕು ದಶಕಗಳಲ್ಲಿ 'ಜಾನಪದ ಕಲಿತವರಿಗೆ ಉದ್ಯೋಗದ



ಪ್ರಶ್ನೆ' ಕಾಲಕಾಲಕ್ಕೆ ನವೀಕರಣಗೊಳ್ಳುತ್ತಿದೆ. ಜಾನಪದಕ್ಕಾಗಿ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪನೆಯಾಗಿ ಎಂಟನೆ ವರ್ಷಕ್ಕೆ ಕಾಲಿಡುತ್ತಿದೆ. ಅಲ್ಲಿಂದ ಜಾನಪದ ಪದವೀಧರರು ಹೊರಬರುತ್ತಿದ್ದಾರೆ. ಹಾಗಿದ್ದು ಜಾನಪದ ಓದಿದವರಿಗೆ ಭವಿಷ್ಯ ಮಾತ್ರ ಶೂನ್ಯವಾಗಿದೆ.

ಕನಿಷ್ಠ ಇದೀಗ ಕರ್ನಾಟಕದಲ್ಲಿ ಒಂದುಸಾವಿರದ ಐದನೂರರಷ್ಟು ಜಾನಪದ ಓದಿದ ಪದವೀಧರರಿದ್ದಾರೆ. ಅವರಾರಿಗೂ ಉದ್ಯೋಗದ ಆಯ್ಕೆಗಳಿಲ್ಲ. ನಾನೊಬ್ಬ ಜಾನಪದ ಪದವೀಧರನಾಗಿ ಕಳೆದ ಒಂದು ದಶಕದಿಂದಲೂ ಈ ಚರ್ಚೆಯನ್ನು ಸ್ನೇಹಿತರೊಡಗೂಡಿ ಬೇರೆ ಬೇರೆ ನೆಲೆಯಲ್ಲಿ ಸರಕಾರದ ಗಮನಕ್ಕೆ ತರಲು ಪ್ರಯತ್ನಿಸಿದ್ದೇನೆ. ಈತನಕ ಅದು ಫಲಕಾರಿಯಾಗಿಲ್ಲ. ಇದೀಗ ಜಾನಪದ ಕಲಿತ ಎಲ್ಲಾ ಪದವೀಧರರು ಒಟ್ಟಾಗಿ ಅಂತಿಮ

ಹೋರಾಟಕ್ಕೆ ಸಜ್ಜಾಗುವ ಸಿದ್ಧತೆಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಜಾನಪದ ಶಿಕ್ಷಣ ಮತ್ತು ಉದ್ಯೋಗದ ಪಠ್ಯವಾಗುವ ಸಾಧ್ಯತೆ ಬಗೆಗೆ ಗಂಭೀರ ಚರ್ಚೆಗಳು ನಡೆಯಬೇಕಾಗಿದೆ.

ಜಾನಪದ ಎನ್ನುವುದು ಶಿಕ್ಷಣ ಮತ್ತು ಉದ್ಯೋಗದ ಪಠ್ಯವಾಗಬೇಕೆಂದರೆ, ಈ ಎರಡೂ ಜನಪದೀಕರಣ ಪ್ರಕ್ರಿಯೆಗೆ ಒಳಗಾಗಬೇಕು. ಈಚೆಗೆ ನಾಡಿನ ಪ್ರಾಥಮಿಕ ಶಾಲೆಗಳು ಪ್ರತಿಭಾ ಕಾರಂಜಿಯನ್ನು ನಡೆಸಿದವು. ಆಗ ಎಲ್ಲಾ ಶಾಲಾಮಕ್ಕಳು ಜನಪದ ಕಲೆಯೊಂದನ್ನು ಅಭಿನಯಿಸಿದರು. ಇದಕ್ಕೆ ದೊಡ್ಡಮಟ್ಟದಲ್ಲಿ ಜನಸ್ಪಂದನೆ ಸಿಕ್ಕಿತು. ಇದು ಜನಪದ ಕಲಾಲೋಕವನ್ನು ಹೊಸ ತಲೆಮಾರಿಗೆ ಹಾಯಿಸುವ ಒಂದು ಮಾದರಿಯಾಗಿತ್ತು. ಈ ಅಭಿನಯವನ್ನು ಶಾಲೆಯ ಶಿಕ್ಷಕರೆ ಅವರಿಗಿರುವ ತಿಳಿವಿನಲ್ಲಿ ಜನಪದ ಕಲೆಗಳನ್ನು ಕಲಿಸಿದ್ದರು. ಈ ವೇಳೆಯಲ್ಲಿ ಈಗಾಗಲೆ ಪ್ರತಿ ಸರಕಾರಿ ಶಾಲೆಯಲ್ಲಿರುವ ದೈಹಿಕ ಶಿಕ್ಷಣ, ಸಂಗೀತ, ದೃಶ್ಯಕಲೆ, ನಾಟಕಕ್ಕೆ ಪ್ರತ್ಯೇಕ ಶಿಕ್ಷಕರಿರುವಂತೆ ಶಾಲೆಗೊಬ್ಬ 'ಜಾನಪದ ಶಿಕ್ಷಕ'ರ ಅಗತ್ಯ ಎದ್ದು ಕಾಣುತ್ತಿತ್ತು. ಅಂದರೆ ಗ್ರಾಮದ ಜತೆ ಸಾವಯವ ಸಂಬಂಧ ಬೆಸೆದು, ಗ್ರಾಮ ಪರಂಪರೆಯ ಜತೆ ಮಕ್ಕಳ ಕಲಿಕೆಯನ್ನು ಕಲಿಸಿ ದೇಸಿ ಶಿಕ್ಷಣ ಪದ್ಧತಿಯೊಂದನ್ನು ರೂಪಿಸಲು ಜಾನಪದ ಶಿಕ್ಷಕರ ಅಗತ್ಯವಿದೆ. ಈ ಅಗತ್ಯ ಪೂರೈಕೆಯಾದರೆ, ಇದು ಸರಕಾರಿ ಕನ್ನಡ ಶಾಲೆಗಳ ಉಳಿವಿನ ಒಂದು ಶಕ್ತಿಯೂ ಆಗಬಲ್ಲದು.

ಈ ಜಾನಪದ ಶಿಕ್ಷಕರನ್ನು ತರಬೇತಿಗೊಳಿಸಲು ಪ್ರತ್ಯೇಕ ಜಾನಪದ ಶಿಕ್ಷಕ ತರಬೇತಿ ಕೇಂದ್ರಗಳನ್ನು ತೆರೆಯಬೇಕು, ಅಥವಾ ಈಗಿರುವ ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿಯೇ ಜಾನಪದವನ್ನು ಐಚ್ಛಿಕ ಅಥವಾ ಕಡ್ಡಾಯ ವಿಷಯವಾಗಿ ಕಲಿಯಲು ಅನುವಾಗಬೇಕು. ಹೀಗೆ ತರಬೇತಿ ಪಡೆದ ಶಿಕ್ಷಕರು ಪ್ರತಿ ಶಾಲೆಗೆ ಒಬ್ಬರಂತೆ ನೇಮಕವಾಗಬೇಕು. ಎರಡನೆ ಹಂತದಲ್ಲಿ ಹೀಗೆ ಶಿಕ್ಷಕ ತರಬೇತಿಗೆ ಪಿ.ಯುನ ಯಾವುದೇ ವಿಭಾಗದಲ್ಲಿ ಜಾನಪದವನ್ನು ಐಚ್ಛಿಕ ಪಠ್ಯವನ್ನಾಗಿ ಓದಿದವರನ್ನು ಅರ್ಹರನ್ನಾಗಿಸಬೇಕು. ಹೀಗೆ ಪ್ರಾಥಮಿಕದ ಜಾನಪದ ಪಠ್ಯ, ಹೈಸ್ಕೂಲಿನಲ್ಲೂ ಮುಂದುವರಿಯಬೇಕು. ಅದಕ್ಕಾಗಿ ಬಿಇಡಿಯಲ್ಲಿಯೂ ಜಾನಪದ ಐಚ್ಛಿಕ ವಿಷಯದಲ್ಲಿ ತರಬೇತಿ ಪಡೆದ ಶಿಕ್ಷಕರನ್ನು ಆಯ್ಕೆ ಮಾಡಬೇಕು. ಇದಕ್ಕೆ ಮೊದಲು ಪದವಿ ತರಗತಿಗಳಲ್ಲಿಯೂ ಜಾನಪದ ಐಚ್ಛಿಕ



ವಿಷಯವಾಗಿ ಕಲಿತ ವಿದ್ಯಾರ್ಥಿಗಳು ಬಿಇಡಿ ತರಬೇತಿಗೆ ಅವಕಾಶವಿರಬೇಕು. ಈ ಪದವಿ ವಿದ್ಯಾರ್ಥಿಗಳಿಗೆ ಬೋಧಿಸಲು ಜಾನಪದ ಸ್ನಾತಕೋತ್ತರ ಪದವೀಧರರು ಈಗಾಗಲೆ ಕೆಲವರು ಸಿದ್ಧವಿದ್ದಾರೆ. ಉಳಿದಂತೆ ಸ್ನಾತಕೋತ್ತರ ಪದವಿ ಕೊಡುವ ಕೆಲಸವನ್ನು ಜಾನಪದ ವಿವಿ, ಮೈಸೂರು, ಕರ್ನಾಟಕ, ಕನ್ನಡ ವಿವಿಗಳಲ್ಲಿ ಈಗಾಗಲೆ ನಡೆಯುತ್ತಿದೆ. ಈ ವೃತ್ತದಲ್ಲಿ ಪ್ರಾಥಮಿಕ, ಹೈಸ್ಕೂಲ್, ಪಿಯು, ಪದವಿ, ಸ್ನಾತಕೋತ್ತರ ಪದವಿ ಇವಕ್ಕೆ ಬೇಕಾಗುವ ಶಿಕ್ಷಕರ ತರಬೇತಿ ಎಲ್ಲದರಲ್ಲೂ ಜಾನಪದ ಒಂದು ಐಚ್ಛಿಕ ಅಥವಾ ಕಡ್ಡಾಯ ಪಠ್ಯವಾಗಬೇಕು.

ಮುಂದುವರಿದು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಆಧುನಿಕ ಶಿಕ್ಷಣದ ಕಲಿಕೆ ಇರುವಂತೆ ದೇಸಿ ಕೃಷಿಯನ್ನು ಅರಿತುಕೊಳ್ಳಲು ಬಿಎಸ್ಸಿ ಮತ್ತು ಎಂಎಸ್ಸಿ ಅಗ್ರಿಯಲ್ಲಿ ಜಾನಪದ ಕೃಷಿಯ ಒಂದು ಪಠ್ಯವನ್ನು ಕಡ್ಡಾಯಗೊಳಿಸಬೇಕು.

ಅಂತೆಯೇ ಕಲಾಕಾಲೇಜುಗಳ ಕಲಾ ಪದವಿಗಳಲ್ಲಿ ಜಾನಪದ ಕಲೆಯನ್ನೂ, ಸಂಗೀತದ ಶಿಕ್ಷಣದಲ್ಲಿ ಜಾನಪದ ಸಂಗೀತವನ್ನೂ, ವೈದ್ಯಕೀಯ ಪದವಿಗಳಲ್ಲಿ ಜನಪದ ವೈದ್ಯವನ್ನೂ, ಅರಣ್ಯ ಕುರಿತ ಫಾರೆಸ್ಟ್ ಪದವಿಗಳಲ್ಲಿ ಬುಡಕಟ್ಟುಗಳ ಅರಣ್ಯ ಜ್ಞಾನವನ್ನೂ, ಹೋಟೆಲ್ ಮ್ಯಾನೇಜ್ ಮೆಂಟ್ ಕೋರ್ಸಗಳಲ್ಲಿ ದೇಸಿ ಆಹಾರ ಪದ್ಧತಿಯನ್ನೂ, ಗ್ರಾಮೀಣ ಅಭಿವೃದ್ಧಿಯ ಪದವಿಗಳಲ್ಲಿ ಗ್ರಾಮೀಣ ಉತ್ಪದನೆಯನ್ನೂ, ಬಿಕಾಂ ಮತ್ತು ಎಂಕಾಂ ಪದವಿಗಳಲ್ಲಿ ಜನಪದರ ಆರ್ಥಿಕತೆಯ ವ್ಯವಹಾರವನ್ನೂ, ಪತ್ರಿಕೋದ್ಯಮದ ಪದವಿಗಳಲ್ಲಿ ಸಾಂಸ್ಕೃತಿ ವರದಿಗಾರಿಕೆಯನ್ನೂ ಹೀಗೆ ಯಾವುದು ಮುಖ್ಯಧಾರೆಯ ಶಿಕ್ಷಣದ ಕಲಿಕೆ ಇದೆಯೋ ಅದೆಲ್ಲದರಲ್ಲೂ 'ದೇಸಿ ಜ್ಞಾನವನ್ನು ಒಂದು ಪಠ್ಯವನ್ನಾಗಿ ಸೇರಿಸುವ ಅಗತ್ಯವಿದೆ. ಹೀಗಾದಲ್ಲಿ ಎಲ್ಲಾ ಕಲಿಕೆಗಳಿಗೂ 'ದೇಸಿ ಕಣ್ನೋಟ' ವನ್ನು ರೂಪಿಸಲು ಸಾಧ್ಯವಿದೆ. ಅಂತೆಯೇ ಈಗಿರುವ ಆಧುನಿಕ ಶಿಕ್ಷಣ ಪದ್ದತಿಯ ಒಳಗೇ ದೇಶಿ ಶಿಕ್ಷಣದ ಎಳೆಗಳನ್ನು ಪೋಣಿಸಿ ನೇಯ್ಗೆ ಮಾಡಬಹುದು.

ಎರಡನೆಯದಾಗಿ ಹೀಗೆ ಜಾನಪದ ಶಿಕ್ಷಣ ಪಡೆದು ಹೊರಬಂದ ಪದವೀಧರರಿಗೆ ಪೂರಕವಾಗಿ ಉದ್ಯೋಗದ ಜನಪದೀಕರಣವಾಗಬೇಕಿದೆ. ಆಡಳಿತ ಯಂತ್ರವನ್ನು ಜನಪರವಾಗಿಸಲು ಆಡಳಿತವನ್ನು ದೇಸೀಯಗೊಳಿಸುವ ಅಗತ್ಯವಿದೆ. ಮುಖ್ಯವಾಗಿ ಗ್ರಾಮಜಗತ್ತಿನ ಸಮುದಾಯಗಳೊಂದಿಗೆ ನಂಟು ಬೆಸೆದ ಎಲ್ಲಾ ಉದ್ಯೋಗಗಳಲ್ಲಿ ಜಾನಪದ ಪದವಿ ಪಡೆದವರಿಗೆ ಮೀಸಲು ಕಡ್ಡಾಯವಾಗಬೇಕು. ಉದಾಹರಣೆಗೆ ಸಂಸ್ಕೃತಿ ಇಲಾಖೆಯ ಉದ್ಯೋಗಗಳಲ್ಲಿ ಜಾನಪದ ಕಲಿತವರಿಗೆ ಆದ್ಯತೆಯಾಗಬೇಕು. ಅಂತೆಯೇ ಪಂಚಾಯ್‌ರಾಜ್, ಕೃಷಿ, ನೀರಾವರಿ, ಪ್ರವಾಸೋಧ್ಯಮ, ರಕ್ಷಣೆ, ಅರಣ್ಯ, ಲೋಕೋಪಯೋಗಿ, ಆರೋಗ್ಯ, ವಾರ್ತಾ ಇಲಾಖೆಗಳನ್ನು ಒಳಗೊಂಡಂತೆ ಜನರ ಜತೆ ಸಂಪರ್ಕಕ್ಕೆ ಬರುವ ಎಲ್ಲಾ ಉದ್ಯೋಗಗಳ ಆಯ್ಕೆಯಲ್ಲಿ ಜಾನಪದ ಓದಿದವರನ್ನು ಒಳಗೊಳ್ಳಬೇಕು. ಮಾಧ್ಯಮಗಳಲ್ಲಿ ಸಾಂಸ್ಕೃತಿಕ ವರದಿಗಾರಿಕೆಗೆ ಪತ್ರಿಕೋಧ್ಯಮದಲ್ಲಿ ಜಾನಪದವನ್ನು ಐಚ್ಛಿಕವಾಗಿ ಓದಿದವರಿಗೆ ಕೊಡಬೇಕು. ಅಂತೆಯೇ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಮ ಲೆಕ್ಕಾಧಿಕಾರಿಗಳು, ಪಂಚಾಯ್ ಅಭಿವೃದ್ಧಿ ಅಧಿಕಾರಿಗಳು ಒಳಗೊಂಡಂತೆ ಜಾನಪದ ಓದಿದವರಿಗೆ ಉದ್ಯೋಗದ ಆಯ್ಕೆಗಳಲ್ಲಿ ಕಡ್ಡಾಯ ಮೀಸಲು ಸೃಷ್ಠಿಯಾಗಬೇಕು.



ಜಾನಪದ ಶಿಕ್ಷಣದ ಭಾಗವಾಗಿಯೇ ಪ್ರಜಾಪ್ರಭುತ್ವವನ್ನು ಬಲಪಡಿಸಲು ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗವನ್ನು 'ದೇಸೀ ಸೂಕ್ಷ್ಮ'ಗೊಳಿಸುವ ಅಥವಾ 'ಜನಪದ ಕಣ್ನೋಟವನ್ನು' ಮಾನವೀಯಗೊಳಿಸಲು ಈ ಎಲ್ಲಾ ಅಂಗದ ಅಧಿಕಾರಿಶಾಹಿಗಳಿಗೆ 'ದೇಸಿ ಸೂಕ್ಷ್ಮ'ದ ತರಬೇತಿಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ. ತಹಶೀಲ್ದಾರ್, ಜಿಲ್ಲಾಧಿಕಾರಿ, ನ್ಯಾಯಾಧೀಶರು, ಸಚಿವರು ಹೀಗೆ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗವನ್ನು ದೇಸಿಸೂಕ್ಷ್ಮಗೊಳಿಸುವ ಪ್ರಯತ್ನವನ್ನೂ ಶಿಕ್ಷಣದ ಜನಪದೀಕರಣದ ಭಾಗವಾಗಿಯೇ ರೂಪಿಸುವ ಅಗತ್ಯವಿದೆ.

ಹೀಗೆ ಶಿಕ್ಷಣವನ್ನು ಜನಪದೀಕರಣಗೊಳಿಸುವ ಪ್ರಕ್ರಿಯೆಯಲ್ಲಿ ದೇಸಿ ಜ್ಞಾನವನ್ನು ಒಳಗೊಂಡ ಜನಸಾಮಾನ್ಯರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿಸಬೇಕಿದೆ. ಅವರ ಪಾರಂಪರಿಕ ಜ್ಞಾನವು ಹೊಸ ತಲೆಮಾರಿಗೆ ಹರಿಯುವಂತಹ ವಿಧಾನವನ್ನು ರೂಪಿಸಬೇಕಿದೆ. ಹೀಗೆ ಜಾನಪದವನ್ನು ಒಂದು ಜ್ಞಾನವನ್ನಾಗಿ ಶಿಕ್ಷಣ ಕಲಿತ ಹೊಸ ತಲೆಮಾರಿನ ಜತೆ, ಸ್ವತಃ ದೇಸಿ ಜ್ಞಾನಪರಂಪರೆಯ ಪ್ರತಿಭೆಗಳನ್ನು ಒಳಗೊಂಡು ಮುಖಾಮುಖಿ ಮಾಡಬೇಕಿದೆ. ಇಲ್ಲಿ ಶಿಕ್ಷಣದ ಥಿಯರಿ ಜಾನಪದವಾದರೂ, ಇದರ ಪ್ರಾಯೋಗಿಕತೆಗೆ ಬೇಕಾಗುವ ಪ್ರಯೋಗ ಶಾಲೆ ಸಮಾಜವೆ ಆಗಿರುತ್ತದೆ. ಹಾಗಾಗಿ ಶಿಕ್ಷಣದ ಜನಪದೀಕರಣ ಬಹು ಎಚ್ಚರದ ಮತ್ತು ಸೂಕ್ಷ್ಮವಾದ ಸಂಗತಿಯಾಗಿದೆ.

ಹೀಗೆ ಓದು ಮತ್ತು ಉದ್ಯೋಗಕ್ಕೆ ಪೂರಕವಾಗಿ 'ಜಾನಪದ' ದ ವ್ಯಾಖ್ಯೆಯನ್ನು ಮೂಢನಂಬಿಕೆಯನ್ನಾಧರಿಸಿದ ಸಾಂಪ್ರದಾಯಿಕ ಚೌಕಟ್ಟಿನಿಂದ ಬಿಡಿಸಬೇಕು. ಮೊದಲನೆಯದಾಗಿ ಸಂವಿಧಾನಿಕ ಆಶಯಗಳಿಗೆ ವಿರುದ್ಧವಿರುವ ಸಂಗತಿಗಳನ್ನು ಕಿತ್ತೊಗೆಯಬೇಕಿದೆ. ಕುವೆಂಪು ಅವರು ಮೈಸೂರು ವಿವಿಯ ಕುಲಪತಿಗಳಾಗಿದ್ದ ಸಂದರ್ಭದಲ್ಲಿ ಜಾನಪದ ವಿದ್ವಾಂಸರ ಸಂಗ್ರಹದ ಬಗೆಗೆ ಮಾತನಾಡುತ್ತಾ 'ಪಾರಂಪರಿಕವಾಗಿ ಹರಿದು ಬಂದ ಮೌಢ್ಯವನ್ನೂ ನೀವು ಜಾನಪದದ ಹೆಸರಲ್ಲಿ ಸಂಗ್ರಹಿಸಿ ಪ್ರಕಟಿಸುತ್ತಿದ್ದೀರಿ, ಹಾಗಾಗಿ ನಿಮ್ಮ ಸಂಗ್ರಹಗಳನ್ನು ಸೋಸಿ ಒಳಿತನ್ನು ತೆಗೆಯಬೇಕು' ಎಂದಿದ್ದರು. ಆದರೆ ಕುವೆಂಪು ಅವರ ಎಚ್ಚರಿಕೆಯ ಸೂಚನೆಯನ್ನು ಯಾವೊಬ್ಬ ಜಾನಪದ ವಿದ್ವಾಂಸರೂ ಪಾಲಿಸಿದಂತೆ ಕಾಣಲಿಲ್ಲ. ಹಾಗಾಗಿ ಸಮಾನತೆಯ ಆಶಯಕ್ಕೆ ವಿರುದ್ಧವಾಗಿ ಅಸಮಾನತೆಯ ಆಧಾರದಲ್ಲಿ ಕೆಲವು ನಂಬಿಕೆಗಳು ಜಾನಪದದ ಹೆಸರಲ್ಲಿ ಬೇರುಬಿಟ್ಟಿವೆ. ಅದರಲ್ಲಿ ಕ್ರೂರ ಜಾತಿ ಪದ್ದತಿಯೂ ಮುಖ್ಯವಾಗಿದೆ. ಹೀಗೆ ತರತಮ ಮೇಲುಕೀಳು ಗಂಡುಹೆಣ್ಣು ಮೊದಲಾದ ಅಸಮಾನತೆಯ ಕಟ್ಟಳೆಗಳನ್ನು ಬಿಗಿಗೊಳಿಸುವ ಯಾವುದೇ ಅಚರಣೆ ಮತ್ತು ಕಲೆಗಳನ್ನು ಸಮತೆಯ ಆಧಾರದಲ್ಲಿ ಮರುರೂಪಾಂತರ ಮಾಡಬೇಕಿದೆ. ಪಾರಂಪರಿಕ ಪರ್ಯಾಯ ಜ್ಞಾನವೂ ಕೂಡ ಕೆಲವು ಜಾತಿ ಪಂಗಡಗಳಿಗೆ ಸೀಮಿತವಾಗಿದೆ. ಇಂತಹ ಸೀಮಿತತೆಯನ್ನೂ ಕೂಡ ಮುಕ್ತಗೊಳಿಸಬೇಕಿದೆ.

ಗ್ರಾಮಜಗತ್ತಿನ ಜಾನಪದ ಇರುವಂತೆಯೇ, ಹೊಸ ಕಾಲದ 'ನಗರ ಜಾನಪದ 'ಡಿಜಿಟಲ್ ಜಾನಪದ' ಇರುವುದನ್ನೂ ಅಧ್ಯಯನಕ್ಕೊಳಪಡಿಸಬೇಕು. ಇದರ ಆಧಾರದಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಕೆ ಪೂರಕವಾಗುವಂತೆ ದೇಸಿ ಜ್ಞಾನವನ್ನು ಪಠ್ಯಗಳನ್ನಾಗಿ

ಸಜ್ಜುಗೊಳಿಸಬೇಕು. ಹೀಗೆ ಶಿಕ್ಷಣ ಮತ್ತು ಉದ್ಯೋಗ ಜನಪದೀಕರಣಗೊಂಡರೆ ಜಾನಪದ ವಿಶ್ವವಿದ್ಯಾಲಯದ ಹೊಣೆಗಾರಿಕೆ ಅಗಾಧವಾಗಿ ವಿಸ್ತಾರಗೊಳ್ಳುತ್ತದೆ. ಹೀಗಾದಾಗ ಜಾನಪದವನ್ನು ಉಳಿಸಿ ಎನ್ನುವ ಭಾಷಣದ ವಿಷಯ ಪ್ರಾಯೋಗಿಕ ನೆಲೆಯಲ್ಲಿ ಮರುಹುಟ್ಟು ಪಡೆಯುತ್ತದೆ.

ಜಾನಪದ ಸಂವೇದನೆಯನ್ನು ಸೃಜನಶೀಲ ಸಾಹಿತ್ಯಕ್ಕೆ ಬೆಸೆದು ಜ್ಞಾನಪೀಠ ಪಡೆದ ಈಗಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಕಂಬಾರರನ್ನು ಒಳಗೊಂಡಂತೆ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿನ ಜಾನಪದ ವಿಭಾಗಗಳು, ಅಂತೆಯೇ ಜಾನಪದ ಕ್ಷೇತ್ರವನ್ನು ಕಟ್ಟಿದ ಜಾನಪದ ವಿದ್ವಾಂಸರು. ಸಂಸ್ಕೃತಿ ಚಿಂತಕರು ಒಟ್ಟಾಗಿ ಶಿಕ್ಷಣ ಮತ್ತು ಉದ್ಯೋಗದ ಜನಪದೀಕರಣಕ್ಕೆ ಸರಕಾರವನ್ನು ಒತ್ತಾಯಿಸಬೇಕಿದೆ. ಅಂತೆಯೇ ಈಗಿನ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಅವರು ಇಂತಹದ್ದೊಂದು ಯೋಜನೆಯನ್ನು ಜಾರಿಮಾಡಿದರೆ ಇಡೀ ದೇಶದಲ್ಲಿಯೆ ಒಂದು ಹೊಸ ಆಡಳಿತ ಮಾದರಿಯನ್ನು ರೂಪಿಸಿದ ಸಂಗತಿ ಚಾರಿತ್ರಿಕ ಮಹತ್ವದ್ದಾಗುತ್ತದೆ.

ಜಾನಪದ ಶಿಕ್ಷಣ ಎಂದಾಗಲೂ ಆಯಾ ಪ್ರದೇಶಿಕ ನೆಲೆಯಲ್ಲಿ ಪಾರಂಪರಿಕ ಜ್ಞಾನವನ್ನು ಆಧರಿಸಿದ ಗುಡಿ ಕೈಗಾರಿಕೆಗಳ ಬಗೆಗೂ ಯೋಚಿಸಬೇಕಾಗಿದೆ. ಆಯಾ ಭಾಗದಲ್ಲಿ ಬೃಹತ್ ಕೈಗಾರಿಕೆಗಳು ಬರುವುದನ್ನು ಜನರು ಆರಂಭಕ್ಕೆ ಸ್ವಾಗತಿಸುತ್ತಾರೆ. ಗದಗ ಭಾಗದಲ್ಲಿ ಪೋಸ್ಕೋ ಎಂಬ ಬಹುರಾಷ್ಟ್ರೀಯ ಕಂಪನಿ ಕಾಲೂರುವ ಪ್ರಯತ್ನ ಮಾಡಿದಾಗ, ಅಲ್ಲಿನ ಜನರಿಗೆ ತಮಗೆಲ್ಲ ಉದ್ಯೋಗ ಸಿಗುತ್ತದೆ ಎಂಬ ನಂಬಿಕೆಯನ್ನು ಬಲವಾಗಿಸಿದ್ದರು. ನಂತರ ಅದರ ಅಪಾಯಗಳು ಜನರಿಗೆ ಮನವರಿಕೆಯಾಗಿ, ಹೋರಾಟ ಮಾಡಿದಾಗ ಪೋಸ್ಕೋ ಕಾಲೆಗೆಯಿತು. ಆದರೆ ಜನರಿಗೆ ಬೃಹತ್ ಉದ್ಯಮಗಳಿಂದ ಉದ್ಯೋಗ ದೊರೆಯುತ್ತದೆ ಎನ್ನುವ ಸುಳ್ಳನ್ನು ಎಲ್ಲೆಡೆಯೂ ಹಬ್ಬಿಸಿ ಜನರ ಸಮ್ಮತಿ ಪಡೆಯಲಾಗುತ್ತದೆ. ವಾಸ್ತವದಲ್ಲಿ ಅದೊಂದು ಭ್ರಮೆ. ಕಾರಣ ಬೃಹತ್ ಕಂಪನಿ ಸ್ಥಳೀಯ ಉತ್ಪಾದನೆಯನ್ನಾಧರಿಸಿ ನಡೆಯುವುದಿಲ್ಲ. ಕಂಪನಿಗಳಲ್ಲಿ ಕೆಲಸ ಮಾಡುವ ತಾಂತ್ರಿಕ ಶಿಕ್ಷಣ ಆಯಾ ಭಾಗದ ಪ್ರಾದೇಶಿಕ ಜನರಿಗೆ ಇರುವುದಿಲ್ಲ. ಬದಲಾಗಿ ಇಲ್ಲಿಯ ಭೂಮಿ, ನೀರು, ವಿದ್ಯುತ್, ಕೆಳದರ್ಜೆಯ ಕೆಲಸಗಳಿಗೆ ಸ್ಥಳೀಯ ಮಾನವ ಸಂಪನ್ಮೂಲ ಬಳಸಿಕೊಂಡು ತನ್ನ ರಾಕ್ಷಸೀ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತವೆ.

ಹಾಗಾಗಿ ಬೃಹತ್ ಕಾರ್ಖಾನೆ ಸ್ಥಾಪನೆಯಾದರೆ, ಸ್ಥಾಪಿತ ಸ್ಥಳದ ಸುತ್ತಮತ್ತ ಒಂದಷ್ಟು ಅಂಗಡಿ ಮುಗ್ಗಟ್ಟುಗಳು, ಕೆಲವು ಜನರಿಗೆ ಗೇಟು ಕಾಯುವ ಕೆಲಸ, ಉಳಿದಂತೆ ಒಂದಷ್ಟು ಕೆಳದರ್ಜೆಯ ಕೆಲಸಗಳು ಸಿಗುವುದನ್ನು ಬಿಟ್ಟರೆ ಅದರಿಂದ ಪ್ರಾದೇಶಿಕವಾಗಿ ದೊಡ್ಡ ಉಪಕಾರವಾಗದು. ಆದರೆ ಅದು ಉಂಟು ಮಾಡುವ ದಮನಕಾರಿ ಪರಿಣಾಮಗಳನ್ನು ಮಾತ್ರ ಆಯಾ ಪ್ರದೇಶದ ಜನತೆ ಸಮಾನವಾಗಿ ಅನುಭವಿಸಬೇಕಾಗುತ್ತದೆ. ಇದಕ್ಕೆ ದೊಡ್ಡ ಉದಾಹರಣೆ ಬೇಕಿಲ್ಲ. ಬಳ್ಳಾರಿ ಜಿಲ್ಲೆ ತೋರಣಗಲ್ಲು ಸಮೀಪದ ಜಿಂದಾಲ್‌ನ ಸುತ್ತಮುತ್ತಲ ಹಳ್ಳಿಗಳು ರೋಗಿಷ್ಟವಾಗಿ ನರಳುತ್ತಿರುವುದನ್ನು ನೋಡಿದರೆ ತಿಳಿಯುತ್ತದೆ.

ಹಾಗಾಗಿ ಆಯಾ ಭಾಗದ ಪ್ರಾದೇಶಿಕ ನೆಲೆಯಲ್ಲಿ ಜನರ ಕೌಶಲ್ಯ ಮತ್ತು ಉತ್ಪಾದನೆಯನ್ನಾಧರಿಸಿದ ಶಿಕ್ಷಣ ಮತ್ತು ಉದ್ಯೋಗದ ಪರಿಕಲ್ಪನೆಯನ್ನು ಮರುರೂಪಿಸಬೇಕಾಗುತ್ತದೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ನಿವಾಸಿಯಾದ ನಾನು ಈ ಭಾಗದ ಜನರ ಉತ್ಪಾದನೆ ಮತ್ತು ಪಾರಂಪರಿಕ ಜ್ಞಾನವನ್ನು ಆಧರಿಸಿ ಒಂದು ಪುಟ್ಟ ಯೋಜನ ಪ್ರಸ್ತಾವವನ್ನು ಉದಾಹರಣೆಯಾಗಿ ನೀಡುವ ಪ್ರಯತ್ನ ಮಾಡುತ್ತೇನೆ. ಮೊದಲನೆಯದಾಗಿ ಪ್ರಧಾನವಾಗಿ ಈ ಭಾಗ ಮಳೆ ಆಶ್ರಯಿಸಿದ ವ್ಯವಸಾಯ ಇರುವ ಕಾರಣ ಕೂಡ್ಲಿಗಿ ಭಾಗಕ್ಕೆ ಬೇಕಾಗಿರುವುದು ಬೃಹತ್ ಕಂಪನಿಗಳಲ್ಲ, ಬದಲಾಗಿ ಗಾಂಧೀಜಿ ಹೇಳಿದ ಗುಡಿ ಕೈಗಾರಿಕೆಗಳು. ಈ ನೆಲೆಯಲ್ಲಿ ಕೂಡ್ಲಿಗಿಯ ನಿಧಾನಗತಿಯ ಸಮಗ್ರ ಅಭಿವೃದ್ಧಿಯ ಬಗ್ಗೆ ಯೋಚಿಸಬಹುದು. ಕೂಡ್ಲಿಗಿ ಹಿಂದುಳಿದ ತಾಲೂಕುಗಳಲ್ಲಿ ಒಂದು. ಇದು ಎರಡೂವರೆ ಲಕ್ಷ ಜನಸಂಖ್ಯೆ, ೨೧೭ ಹಳ್ಳಿಗಳ, ಬೆರಳಣಿಕೆಯ ಪಟ್ಟಣಗಳ ತಾಲೂಕು. ಇಲ್ಲಿ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಸಮಗ್ರ ಅಭಿವೃದ್ಧಿ ಕೈಗೊಳ್ಳಲು ಸಾಕಷ್ಟು ಅವಕಾಶಗಳಿವೆ.

ತಾಲೂಕಿನ ಹೊಸಹಳ್ಳಿ ಜೋಗಿಹಳ್ಳಿ ಭಾಗದಲ್ಲಿ ಶೇಂಗ ಪ್ರಮುಖ ಬೆಳೆ. ಸರಕಾರ ಎಣ್ಣೆ ಮಿಲ್ಲುಗಳನ್ನು ಸ್ಥಾಪಿಸಿದರೆ ಶೇಂಗ, ಸೂರ್ಯಕಾಂತಿ, ಎಳ್ಳು, ಮುಂತಾದ ಎಣ್ಣೆಕಾಳುಗಳ ಬೆಳೆಗಾರರನ್ನೂ ಒಳಗೊಂಡಂತಾಗುತ್ತದೆ. ಅಂತೆಯೇ ನಿಂಬಳಗೆರೆ ಮುಂತಾದ ಕಡೆ ರೇಷ್ಮೆ ಬೆಳೆ ಹೆಚ್ಚಾಗಿದೆ. ಇಲ್ಲಿ ರೇಷ್ಮೆ ಗೂಡುಗಳನ್ನು ಮಾರಲು ದೂರದ ರಾಮನಗರಕ್ಕೆ ಒಯ್ಯುತ್ತಾರೆ. ಈ ರೇಷ್ಮೆ ಬೆಳೆಗಾರರನ್ನು ಆಶ್ರಯಿಸಿ ರೇಷ್ಮೆ ನೂಲು ತೆಗೆವ, ರೇಷ್ಮೆ ಸೀರೆಗಳನ್ನು ನೇಯುವ ಗುಡಿ ಕೈಗಾರಿಕೆಯನ್ನು ಸ್ಥಾಪಿಸಬೇಕಿದೆ. ಅಂತೆಯೇ ಕೂಡ್ಲಿಗಿಯಲ್ಲಿ ಯಥೇಚ್ಚವಾಗಿ ಹತ್ತಿ ಬೆಳೆಗಾರರಿದ್ದಾರೆ. ಹಾಗಾಗಿ ಸರಕಾರ ಹತ್ತಿ ಗಿರಣಿಗಳನ್ನು ಸ್ಥಾಪಿಸುವ ಅಗತ್ಯವಿದೆ. ಉಜ್ಜಿನಿ ಮುಂತಾದ ಭಾಗಗಳಲ್ಲಿ ಕುರಿ ಸಾಕಣೆಯೂ, ಕುರಿ ಉಣ್ಣೆಯಿಂದ ಕಂಬಳಿ ನೇಯ್ದೆಯೂ ಇದೆ. ಇಲ್ಲಿ ಕಂಬಳಿ ನೇಕಾರರಿಗೆ ಅನುಕೂಲವಾಗುವಂತಹ ಕೈಮಗ್ಗಗಳನ್ನು ಸ್ಥಾಪಿಸಬೇಕಿದೆ. ಅಂತೆಯೇ ಕಂಬಳಿ ಮಾರಾಟಕ್ಕೆ ವ್ಯವಸ್ಥಿತ ಮಾರುಕಟ್ಟೆಯನ್ನು ರೂಪಿಸಬೇಕಿದೆ.

ಕೂಡ್ಲಿಗಿ ತಾಲೂಕು ಹುಣಸೆ ವ್ಯಾಪಾರಕ್ಕೆ ರಾಜ್ಯದಲ್ಲಿಯೇ ಹೆಸರುವಾಸಿ. ಈ ಹುಣಸೆ ವ್ಯಾಪಾರದ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಬೇಕಿದೆ. ಗುಡೇಕೋಟೆ ಭಾಗದ ಸೀತಾಫಲ ಹಣ್ಣುಗಳು ದೇಶವಿದೇಶಗಳಿಗೆ ರಫ್ತಾಗುತ್ತಿವೆ. ಈ ಸೀತಾಫಲದ ಬೆಳೆಯ ಅಭಿವೃದ್ಧಿಗಾಗಿ ತೋಟಗಾರಿಕೆ ಇಲಾಖೆಯವರು ಯೋಜನೆಗಳನ್ನು ರೂಪಿಸಬೇಕು. ಅಂತೆಯೇ ಗುಡೇಕೋಟೆಯ ಜೇನು ತುಂಬಾ ಪ್ರಸಿದ್ಧ. ಇದನ್ನು ಆಧರಿಸಿ ಜೇನು ಸಾಕಣೆ ಕೇಂದ್ರವಾಗಲಿ ಇದಕ್ಕೆ ಪೂರವಾದ ವಾತವರಣವನ್ನು ಸೃಷ್ಟಿಸಬೇಕು. ಈಗ ಮೆಕ್ಕೆಜೋಳದ ಬೆಳೆ ಹೆಚ್ಚಾಗಿದೆ. ಮೆಕ್ಕೆಜೋಳದ ಉಪ ಉತ್ಪನ್ನಗಳನ್ನು ತಯಾರಿಸುವ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಬೇಕಿದೆ. ಕೊಟ್ಟೂರಿನ

ಮಂಡಕ್ಕಿ (ಪುರಿ) ಹೆಚ್ಚು ಪ್ರಸಿದ್ಧಿ. ಹಾಗಾಗಿ ಸರಕಾರ ಮಂಡಕ್ಕಿ ಭಟ್ಟಿಗಳನ್ನು ಸ್ಥಾಪಿಸಿ, ಪೂರಕವಾದ ಮಾರುಕಟ್ಟೆಯನ್ನು ಸೃಷ್ಟಿಸಬೇಕು.

ಈಗ ಕೂಡ್ಲಿಗಿಯಲ್ಲಿ ಹೈನುಗಾರಿಕೆ ಹೆಚ್ಚಾಗುತ್ತದೆ. ಹೈನುಗಾರಿಕೆಯನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ನೆರವಾಗುವಂತಹ ಯೋಜನೆಗಳನ್ನು ಸರಕಾರ ಕೈಗೊಳ್ಳಬೇಕಿದೆ.



ಚರ್ಮೋಧ್ಯಮವನ್ನು ಅವಲಂಬಿಸಿದವರೂ ಹೆಚ್ಚಿದ್ದಾರೆ, ಹಾಗಾಗಿ ಚರ್ಮೋಧ್ಯಮವನ್ನೂ ಅಭಿವೃದ್ಧಿಪಡಿಸಬೇಕಿದೆ. ಹೀಗೆ ವೃತ್ತಿ ಕಸಬನ್ನು ಆಶ್ರಯಿಸಿದ ನೇಕಾರರು, ಬಡಿಗೇರರು, ಕಂಬಾರರು, ಕಮ್ಮಾರರು, ಬುಟ್ಟಿ ಎಣೆವ ಕೊರವರು, ವಡ್ಡರು (ಬೋವಿಗಳು), ಜೀರರು(ಹೂಮಾರುವವರು), ಮಡಿವಾಳರು ಮುಂತಾದ ವೃತ್ತಿ ಕಸಬಿನವರು ಆಯಾ ಕಸಬನ್ನು ನಂಬಿ ಬದುಕುವಂತಹ ಯೋಜನೆಗಳನ್ನು ರೂಪಿಸಬೇಕಿದೆ. ಹಾಗಾದಲ್ಲಿ ಕೂಡ್ಲಿಗಿ ತಾಲೂಕಿನ ಸಮಗ್ರ ಅಭಿವೃದ್ಧಿ ನಿಧಾನಗತಿಯಲ್ಲಿ ಆಗುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ.

ಇಲ್ಲಿ ಹೇಳಿದ ಅಭಿವೃದ್ಧಿಯ ಮಾದರಿ ಕೇವಲ ಕೂಡ್ಲಿಗಿ ತಾಲೂಕಿಗೆ ಮಾತ್ರ ಅನ್ವಯವಾಗದೆ, ಎಲ್ಲಾ ತಾಲೂಕುಗಳ ಅಭಿವೃದ್ಧಿಯ ನೆಲೆಯಲ್ಲೂ ಅನ್ವಯಿಸಬಹುದು. ಈ ಬಗೆಯ ಅಭಿವೃದ್ಧಿಯ ಮಾದರಿಯಿಂದ ಜನರು ತಾವು ನಂಬಿದ, ತಮಗೆ ತಿಳಿದ ವೃತ್ತಿ ಕಸಬುಗಳಲ್ಲಿ ಹೊಸ ನಂಬಿಕೆ ಬರುತ್ತದೆ. ಅವರುಗಳಲ್ಲಿ ತಮ್ಮ ಬದುಕಿನ ಕ್ರಮದ ಬಗ್ಗೆ ಆತ್ಮವಿಶ್ವಾಸ ಹೆಚ್ಚುತ್ತದೆ. ಹೆಚ್ಚು ಶಿಕ್ಷಣ ಕಲಿಯದೆ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿದ ತಮ್ಮ ಮಕ್ಕಳನ್ನು ಆಯಾ ಕಸಬುಗಳಲ್ಲಿ ಮುಂದುವರೆಸಲು ದೈರ್ಯವೂ ಬರುತ್ತದೆ. ಅವರುಗಳಿಗೆ ಅದಕ್ಕಾಗಿ ಪ್ರತ್ಯೇಕ ತರಬೇತಿಗಳ ಅಗತ್ಯವೂ ಇರುವುದಿಲ್ಲ, ಅದು ಅವರ ಬದುಕಿನ ಭಾಗವೇ ಆಗಿರುತ್ತದೆ. ಈ ಬಗೆಯ ಯೋಜನೆಗಳಲ್ಲಿ ಜನರು ಸ್ವತಃ ಪಾಲುದಾರರಾಗುತ್ತಾರೆ. ಕೇವಲ ಗುಡಿಕೈಗಾರಿಕೆಯಲ್ಲಿ ಕೆಲಸ ಮಾಡುವವರಲ್ಲದೆ, ಆ ಕೈಗಾರಿಕೆಗೆ ಕಚ್ಚಾ ಸಾಮಗ್ರಿಯನ್ನು ಒದಗಿಸುವವರೂ ಸಹ ಆ ಕೈಗಾರಿಕೆಯ ಫಲಾನುಭವಿಗಳಾಗುತ್ತಾರೆ. ಆಗ ಆಯಾ ಬೆಳೆ, ಆಯಾ ಕಸುಬನ್ನು ಅಭಿವೃದ್ಧಿಪಡಿಸಿದಂತಾಗುತ್ತದೆ.

ಮುಖ್ಯವಾಗಿ ಇಲ್ಲಿ ಹೇಳಿದ್ದನ್ನು ಸರಕಾರ ಮಾಡಲು ಕಾನೂನು ರೀತ್ಯವಾಗಿಯೇ ಹಲವಾರು ಅವಕಾಶಗಳಿವೆ. ಅಂತೆಯೇ ಇದಕ್ಕಾಗಿ ಕೆಲವು ಹೊಸ ಕಾನೂನು ಕಾಯ್ದೆಗಳನ್ನೂ ಮಾರ್ಪಡಿಸುವ ಅಗತ್ಯವೂ ಇದೆ. ಹೀಗೆ ಹೇಳಿದ ಎಲ್ಲಾ ಬಗೆಯ ಗುಡಿ ಕೈಗಾರಿಕೆಗಳು ಇದ್ದಾಗಲೂ ಅವುಗಳನ್ನು ನಿರ್ವಹಿಸುವ ಅಧಿಕಾರಿಗಳಿಗೆ ಜನರೊಂದಿಗೆ ಬೆರೆಯುವ, ಜನರ ಶ್ರಮಸಂಸ್ಕೃತಿಯನ್ನು ಗೌರವಿಸುವ ಮತ್ತು ಆ ಮೂಲಕ ಕ್ರಿಯಾಶೀಲವಾಗಿ ದುಡಿವ ಮನಸ್ಸು ಇಲ್ಲದಿದ್ದರೆ ಅವೂ ಸಹ ಜಿಡ್ಡುಗಟ್ಟುತ್ತವೆ.

ಕೂಡ್ಲಿಗಿಯಲ್ಲಿ ಯಾವುದೇ ಗುಡಿ ಕೈಗಾರಿಕೆಗಳು ಇಲ್ಲವೆಂತಲ್ಲ. ಇದ್ದರೂ ಇಲ್ಲದಂತಿರುವುದು ಇಂದಿನ ಸಮಸ್ಯೆ ಅಂತೆಯೇ ಅವುಗಳ ವ್ಯಾಪ್ತಿಯೂ ಬಹುಜನರನ್ನು ಒಳಗೊಳ್ಳುವಷ್ಟು ಹಿರಿದಾಗಿಲ್ಲ. ಅದರಲ್ಲೂ ಇದ್ದ ಕೆಲವಾದರೂ ಎಣ್ಣೆ ಗಿರಣಿ, ಹತ್ತಿ ಗರಣಿಗಳು ಖಾಸಗಿ ಧಣಿಗಳ ಕೈವಶದಲ್ಲಿವೆ. ಕೂಡ್ಲಿಗಿ ತಾಲೂಕಿನಲ್ಲಿ ಹೆಚ್ಚಿನ ಅರಣ್ಯ ಭೂಮಿಯಿದೆ, ಅದನ್ನು ಪುಡಾರಿ ನಾಯಕರುಗಳು ರೈತರ ಹೆಸರಲ್ಲಿ ಸಾಗುವಳಿ ಭೂಮಿಯನ್ನಾಗಿ ಸೃಷ್ಟಿಸಿ ಕೊಳ್ಳಹೊಡೆಯುತ್ತಿದ್ದಾರೆ. ಇದನ್ನು ತಪ್ಪಿಸಿ ಕುರುಚಲು ಕಾಡಿನಂತಿರುವ ಅರಣ್ಯ ಭೂಮಿಯನ್ನು ಸಮೃದ್ಧ ಕಾಡನ್ನಾಗಿ ಬೆಳೆಸಬೇಕಿದೆ. ನೀರು ತಡೆಯ ಗೋಕಟ್ಟೆಗಳನ್ನು ಹೆಚ್ಚಾಗಿ ನಿರ್ಮಿಸಿ, ಆ ಮೂಲಕ ಅಂತರ್ಜಲ ಹೆಚ್ಚಿಸುವ



ಅಗತ್ಯವಿದೆ. ಈ ಮಾತು ಮತ್ತು ಯೋಜನೆಗಳು ಕಾರ್ಯಗತಗೊಳ್ಳಲು ಆಯಾ ಕ್ಷೇತ್ರದ ಶಾಸಕರು, ತಹಶೀಲ್ದಾರರು, ಜಿಲ್ಲಾ ಪಂಚಾಯಿತಿ, ತಾಲೂಕು ಮತ್ತು ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳು, ಸದಸ್ಯರುಗಳು, ತಾಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳು ಕ್ರಿಯಾಶೀಲವಾಗಬೇಕು.

ಹೀಗೆ ಜಾನಪದ ಅಥವಾ ದೇಸಿ ಎನ್ನುವುದು ನಶಿಸುತ್ತಿದೆ, ಉಳಿಸಬೇಕು ಎನ್ನುವ ಸಿನಿಕತನದ ಅವಿಮರ್ಶಾತ್ಮಕ ಭಾಷಣಗಳಿಂದ ಅದನ್ನು ಉಳಿಸಲು ಸಾಧ್ಯವಿಲ್ಲ. ಬದಲಾಗಿ ಬದಲಾದ ಕಾಲವನ್ನು ಜಾನಪದಕ್ಕೆ ಒಗ್ಗಿಸುವ, ಅಥವಾ ಜಾನಪದವನ್ನು ಬದಲಾದ ಕಾಲಕ್ಕೆ ರೂಪಾಂತರಗೊಳಿಸುವ ಬುಡಮಟ್ಟದ ಚಿಂತನೆ, ಸಂವಾದ, ಹೋರಾಟಗಳು ಸಾಧ್ಯವಾಗಬೇಕು. ಅಂದಾಗ ಮಾತ್ರ ದೇಸಿ ಜ್ಞಾನ ವಿವೇಕಕ್ಕೆ ಮರುಹುಟ್ಟು ಸಾಧ್ಯವಾಗುತ್ತದೆ.

## ಗುಣಗಾನವಿಲ್ಲದ ಕವಿ ಮತ್ತು ಕವಿತೆಗಳ ಸುತ್ತ

**- ಗುರುಪ್ರಸಾದ್ ಕಂಟಲಗೆರೆ**

ಇತ್ತೀಚೆಗೆ ಒಂದು ರಾತ್ರಿ ಕವಿಗೋಷ್ಠಿ ನಡೆಯಿತು. ಎಂದಿನಂತೆ ಗೋಷ್ಠಿ ಮುಗಿದಾದ ನಂತರದಲ್ಲಿ, ಅಲ್ಲಿ ಪಾಲ್ಗೊಂಡಿದ್ದ ಕೆಲ ಕವಿಮಹೋದಯರ ಪಾನಗೋಷ್ಠಿ ಸ್ಥಳೀಯ ಡಾಬ ಒಂದರಲ್ಲಿ ಏರ್ಪಟ್ಟಿತ್ತು. ತಲಾ ಮುವತ್ತರಂತೆ ಮೊದಲ ಸುತ್ತು ಮುಗಿದಾದ ನಂತರದಲ್ಲಿ ಎರಡನೆ ಸುತ್ತಿಗೆ ಕವಿಗಳು ಕಿಕ್ಕಾಗಿ, ಗೋಷ್ಠಿಯಲ್ಲಿ ವಾಚಿಸಲ್ಪಟ್ಟ ಕವಿತೆಗಳ ಮೌಲ್ಯಾಂಕನ ಶುರುವಿಟ್ಟುಕೊಂಡರು. ಪಾನಗೋಷ್ಠಿಯಲ್ಲಿದ್ದ ಐವರೂ ಸಮಾನ ಅಭಿರುಚಿ

ಉಳ್ಳವರಾಗಿದ್ದರಿಂದ ಸುಮಾರು ಇಪ್ಪತ್ತು ಜನ ಪಾಲ್ಗೊಂಡಿದ್ದ ಕವಿಗೋಷ್ಠಿಯಲ್ಲಿ ಸ್ವಾತಂತ್ರ್ಯ, ಸಮಾನತೆ, ದಲಿತ, ಮಹಿಳೆ ಎಂದೆಲ್ಲಾ ಒಂದಷ್ಟು ಸೂಕ್ಷ್ಮತೆ ಇಟ್ಟುಕೊಂಡು ಬರೆದಿದ್ದ ಕವಿತೆಗಳು ಮತ್ತು ಕವಿಗಳು ಹೆಚ್ಚು ಚರ್ಚೆಗೆ ಬಂದು, ಉಳಿದ ಕವಿಗಳ ಕವಿತೆಗಳು ನಿರ್ಲಕ್ಷ್ಯಕ್ಕೆ ಒಳಗಾಗಿದ್ದವು. ಇದೇ ಸುಸಂದರ್ಭದಲ್ಲಿ ತನ್ನ ಮನಸ್ಸಿನಲ್ಲಿ ಕೊರೆಯುತ್ತಿದ್ದ ಪ್ರಶ್ನೆಯೊಂದನ್ನು ಯುವ ಕಪ್ಪು ಕವಿಯೊಬ್ಬ ನಾವು ಅಲ್ಲಿ ವಾಚಿಸಿದವರ ಕೆಲವು ಕವಿತೆಗಳನ್ನು ಶ್ರೇಷ್ಠ ಎಂದೂ, ಇನ್ನೂ ಕೆಲವನ್ನ ಕನಿಷ್ಠ ಎಂದೂ ಹೇಳುತ್ತಿದ್ದೇವಲ್ಲ, ಹಾಗಾದರೆ ಕವಿತೆಯೊಂದನ್ನು ಶ್ರೇಷ್ಠ ಕನಿಷ್ಠ ಎಂದು ಹೇಳಲು ನಮಗಿರುವ ಮಾನದಂಡವಾದರು ಏನು ಎಂದು ಕೇಳಿದ. ಕವಿತೆಗಿರುವ ಗುಣ, ತುಡಿತ, ಭಾಷೆ ಮುಂತಾದವುಗಳ ಆಧಾರವಾಗಿ ಶ್ರೇಷ್ಠ ಎಂದು ಹೇಳಬಹುದು ಎಂದು ಒಬ್ಬನಿಂದ ಉತ್ತರ ಬಂದಿತು. ಅಲ್ಲಿ ಹಾಗಾದರೆ ವಾಚನಕ್ಕೆ ಒಳಪಟ್ಟ ಬಹುತೇಕ ಕವಿತೆಗಳು ಬಡತನ, ಭ್ರಷ್ಠವ್ಯವಸ್ಥೆ, ಅತ್ಯಾಚಾರ, ಶೋಷಣೆಯನ್ನೇ ಧ್ವನಿಸುತ್ತಿದ್ದವಲ್ಲ, ಆದರೂ ನೀವು ಕೆಲವೇ ಕೆಲವನ್ನ ಶ್ರೇಷ್ಠ ಎನ್ನುತ್ತಿದ್ದೀರಲ್ಲ ಇದು ಹೇಗೆ ಎಂದು ಮತ್ತೆ ಕೇಳಿದ ಕಪ್ಪು ಕವಿ. ಕೆಲವು ವಾಚ್ಯವಾಗಿದ್ದವು, ಕೆಲವು ಗದ್ಯ ರೂಪದಲ್ಲಿದ್ದವು, ಅದರಲ್ಲಿ ಕವಿತ್ವ ಇರಲಿಲ್ಲ ಎಂದು ಉತ್ತರಿಸಿದನು ಮತ್ತೊಬ್ಬ. ದಲಿತರು ಮೊದ ಮೊದಲು ಬರೆಯಲು ಶುರುವಾದಾಗ ಸಾಂಸ್ಕೃತಿಕ ವಲಯದ ಪಟ್ಟಭದ್ರರು ಈ ಮೇಲಿನ ಮಾನದಂಡವನ್ನೇ ಅನುಸರಿಸಿ ಇವು ಕವಿತೆ ಅಲ್ಲ ಎಂದಿದ್ದರು ಎಂದು ಸಿದ್ದಲಿಂಗಯ್ಯನ ಇಕುಲಾ ವದಿಲ್ಲಾ ಕವಿತೆಯನ್ನು ಎಳೆದು ತಂದ.

ಇಪ್ಪತ್ತು ಕವಿಗಳಿದ್ದ ಗೋಷ್ಠಿಯಲ್ಲಿ ಅಭಿಪ್ರಾಯ ಹಂಚಿಕೊಳ್ಳುವಾಗ ಕೇವಲ ಈ ಐವರೇ ಬೆರಳೆಣಿಕೆಯ ಕವಿತೆಗಳನ್ನು ಅತ್ಯುತ್ತಮ ಎಂದು ಚಪ್ಪರಿಸಿದ್ದು ಉಳಿದ ಹದಿನೈದಕ್ಕೂ ಹೆಚ್ಚು ಮಂದಿ ಕೇವಲ ಕೇಳುಗರಾಗಿದ್ದು, ಏನನ್ನು ಹೇಳದೆ ಇದ್ದುದರಿಂದ ಕಪ್ಪು ಕವಿ, ಮತ್ತೆ ಅಲ್ಲಿ ಎಲ್ಲರ ಧ್ವನಿಯನ್ನೂ ನಾವೇ ಕಿತ್ತುಕೊಂಡು ಮಾತಾಡಿದೆವೆನಿಸುತ್ತಿದೆ,



ಅಕಸ್ಮಾತ್ ಇನ್ನುಳಿದವರ ಆಯ್ಕೆ ಬೇರೆ ರೀತಿ ಇತ್ತೇನೋ ಅಂದನು. ಪುರಾವೆಯಾಗಿ ಪ್ರಗತಿಪರ ಬುದ್ಧಿ ಜೀವಿಗಳ ನಿಲುವೊಂದೆ ಈಗಿನ ಪ್ರಭುತ್ವದ ವಿರುದ್ಧವಾಗಿದ್ದರೆ ಆಯಿತೆ, ಜನಾದೇಶ ಇವರು ದೂರುವ ವ್ಯವಸ್ಥೆಯ ಪರವಾಗಿಯೇ ಮತ್ತೆ ಮತ್ತೆ ಚುನಾವಣೆಗಳಲ್ಲಿ ಸಾಬೀತಾಗುತ್ತಿದೆಯಲ್ಲ ಎಂದು ರಾಜಕೀಯವನ್ನು ಎಳೆದು ತಂದ. ತಕ್ಷಣವೇ ಪ್ರತಿಕ್ರಿಯಿಸಿದ ಮತ್ತೊಬ್ಬ ರಾಜಕೀಯಕ್ಕು ಸಾಹಿತ್ಯಕ್ಕು ಹೋಲಿಕೆ ಸರಿಯಲ್ಲ ಎಂದ. ಶ್ರೇಷ್ಠ ಕನಿಷ್ಠತೆಯನ್ನು

ಸಾಹಿತ್ಯಕವಾಗಿ ಇನ್ನಷ್ಟು ಸರಳೀಕರಿಸಲು ಸಾಹಿತ್ಯದಲ್ಲಿ ನವೋದಯ ಪ್ರಕಾರವನ್ನ ನವ್ಯ ತಿರಸ್ಕರಿಸಿತು, ನವ್ಯವನ್ನ ಬಂಡಾಯ ಮೀರಿತು. ಇಂದಿಗೂ ಎಡದ ಶ್ರೇಷ್ಠ ಬರಹಗಾರರನ್ನ, ಬಲದವರು ಒಪ್ಪಲ್ಲ. ಬಲದವರನ್ನ ಎಡದವರು ಒಪ್ಪಲ್ಲ ಹಾಗಾದರೆ ಯಾವುದನ್ನ ಶ್ರೇಷ್ಠ ಎಂದು ಒಪ್ಪಿಕೊಳ್ಳುವುದು. ನಾವೊಂದಿಷ್ಟು ಮಂದಿ ಮಾತ್ರ ಇಚ್ಚೆ ಪಟ್ಟು ಕೊಂಡುಕೊಳ್ಳುವ ಲಂಕೇಶ್, ಅನಂತಮೂರ್ತಿ, ಕಾರಂತರ ಕಾದಂಬರಿಗಳಿಗಿಂತ ಅಧಿಕವಾಗಿ ರುಚಿಕರ ಅಡುಗೆ, ರಂಗೋಲಿ, ಮನೆ ಔಷದಿ ಪುಸ್ತಕಗಳೇ ಸಮ್ಮೇಳನಗಳಲ್ಲಿ ಹೆಚ್ಚಾಗಿ ಖರ್ಚಾಗುತ್ತವಲ್ಲ ಹಾಗಾದರೆ ಜನಮನ್ನಣೆಯ ಸಾಹಿತ್ಯಕೃತಿಯ ಮುಂದೆ ನಿಮ್ಮ ವಿಮರ್ಶೆಯಲ್ಲಿ ಶ್ರೇಷ್ಠವೆನ್ನಿಸಿದ ಕೃತಿ ಸೋತಂತಾಗುತ್ತದೆ. ಶ್ರೇಷ್ಠವೆಂದು ಮುದ್ರೆ ಒತ್ತಿಸಿಕೊಂಡಿರುವುದು ಮಾತ್ರವೇ ಶ್ರೇಷ್ಠವಲ್ಲ, ಶ್ರೇಷ್ಠತೆ ಎಂಬುದು ವಿಭಿನ್ನ ಓದುಗರ ಮನಸ್ಥಿತಿ, ಅಭಿರುಚಿ, ಅನುಭವ ಮತ್ತು ಓದಿನ ಗುಣಮಟ್ಟ ಮುಂತಾದವುಗಳನ್ನೂ ಅವಲಂಬಿಸಿರುತ್ತೆ. ಒಬ್ಬನಿಗೆ ಶ್ರೇಷ್ಠವೆನಿಸಿದ್ದು ಇನ್ನೊಬ್ಬನಿಗೆ ಕನಿಷ್ಠವಾಗಿಯೂ ಕಾಣಬಹುದು, ಇದು ಸಾರ್ವತ್ರಿಕವಾಗಿ ಏಕಪ್ರಕಾರವಾಗಿ ಉಳಿಯಲು ಸಾಧ್ಯವಿಲ್ಲ ಎಂಬ ತನ್ನ ಚಿಂತನಾ ಲಹರಿಯನ್ನು ಹರಿಬಿಟ್ಟು, ಕುವೆಂಪು ವಿಮರ್ಶಕರನ್ನು 'ನಾನೇರಿದ ಮಟ್ಟಕ್ಕೆ ನೀ ತಲುಪಬಲ್ಲೆಯ' ಎಂದು ಪ್ರಶ್ನಿಸಿದ್ದನ್ನು ಸೇರಿಸಿದ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಲಘು, ಗುರು ಇಷ್ಟೇ ಮಾತ್ರಾಗಣ ಹೊಂದಿದ್ದರೆ ಮಾತ್ರ ಅದು ಸಲ್ಲತಕ್ಕದೆಂಬ ನಿಯಮಾವಳಿಗಳಿದ್ದವು. ಆದರೆ ಇಂದು ಅವೆಲ್ಲವನ್ನೂ ಮೀರಿ ನವೋದಯ, ನವ್ಯ, ಬಂಡಾಯ ಬೆಳೆದು ನಿಂತಿದೆ. ಅದರಲ್ಲೂ ಈ ಆಧುನಿಕ ಯುಗದಲ್ಲಿ ಫೇಸ್‌ಬುಕ್ ಕವಿತೆಗಳು, ಎರಡು ಮೂರು ಸಾಲಿನ ಹಾಯ್ಕುಗಳು ಹೆಚ್ಚಾಗಿವೆ. ಇಂದಿನ ಯುವ ಸಾಹಿತಿಗಳ ಈ ಆಯ್ಕೆಯನ್ನು ಪುರಾತನ ನಮ್ಮ ವಿಮರ್ಶಾ ಮಾನದಂಡಗಳನ್ನಿಟ್ಟುಕೊಂಡು ತಪ್ಪೆನ್ನಲಾಗುತ್ತದೆಯೆ? ಹಾಗೇನಾದರು ಅಂದರೆ ಮುಂದಿನ ಪೀಳಿಗೆಗೆ ಕವಿಯೆಂದು ನೀವು ಯಾರನ್ನು ತೋರಿಸುತ್ತೀರಿ? ಆಧುನಿಕ ಕವಿಗಳಿಗೆ ವಾಚ್ಯ, ಗದ್ಯರೂಪ ಎಂಬ ಋಣಾತ್ಮಕ ಅಂಶಗಳು ಪ್ರಶ್ನೆಯೇ ಆಗದಿದ್ದರೆ ಅವರು ಕವಿಗಳಾಗಿ ಉಳಿಯುವುದಿಲ್ಲವೆ? ಎಂಬಿತ್ಯಾದಿಯಾದ ಅನುಮಾನಗಳನ್ನು, ಪ್ರಶ್ನೆಗಳನ್ನು ಕೇಳಿ ಸಿಕ್ಕಾಕಿಕೊಂಡ ಕಪ್ಪು ಕವಿ ಆ ನಂತರದಲ್ಲಿ ಎದುರಾಳಿ ವಿಮರ್ಶಕರಿಂದ ವೈಯಕ್ತಿಕವಾಗಿಯೂ, ಸಮಷ್ಠಿಯಾಗಿಯೂ ದಾಳಿಗೆ ತುತ್ತಾಗಬೇಕಾಗಿ ಬಂತು.

ಕೆಂದಗಿದ್ದ ಒಬ್ಬ ಹಾಗಾದರೆ ನಾವು ಕವಿತೆಯನ್ನು ವಿಮರ್ಶಿಸಿದ್ದೆ ತಪ್ಪಾ? ಎಂದನು. ಕೆಂಪನೆಯವನು ಯಾರೂ ಒಪ್ಪದ ಆತನ ಕವಿತೆಯನ್ನು ನೀನೊಬ್ಬನೆ ಸಮರ್ಥಿಸುತ್ತಿದ್ದೀಯ ಇದು ವಿತಂಡವಾದ ಎಂದನು. ಹಳದಿಯ ಇನ್ನೊಬ್ಬ ಯಾರೋ

ಒಬ್ಬನ (ಜಾತಿ, ವರ್ಗ?) ಕವಿತೆಗಾಗಿ ನಮ್ಮನ್ನೆಲ್ಲ ಕಟಕಟೆಗೆ ನಿಲ್ಲಿಸಿ ನಮ್ಮಿಂದ ದೂರ ಆಗುತ್ತಿದ್ದೀಯ ಎಂದನು. ಹಸಿರಿನವನು ಅವನು ಕವಿಯೇ ಅಲ್ಲ, ಅವನು ಯಾಕಾದರೂ ಕವಿತೆ ಬರೆದು ಹಾಡುತ್ತಾನೆ ಎಂದನು. ಮೇಲಿನ ಟೀಕೆಗಳಿಂದ ಮತ್ತೊಷ್ಟು ರಚ್ಚೆ ಹಿಡಿದ ಕಪ್ಪು ಕವಿ, ಅಕ್ಷರ ಕಾಣದ, ನಿರ್ಲಕ್ಷ್ಯಕ್ಕೊಳಗಾದ ಸಮುದಾಯದಿಂದ ಬಂದ ಆ ಕವಿಯ ಕವಿತೆಗಳಿಗೆ ಒಂದಷ್ಟು ರಿಯಾಯಿತಿ ಕೊಟ್ಟು ಕೇಳಿಸಿಕೊಳ್ಳಬೇಕಾದ ಮಾತ್ರ ಹೃದಯ ಇರಬೇಕಾದ ಸಮಾನ ಮನಸ್ಕರ ಈ ಅಸೂಕ್ಷ್ಮತೆಗೆ ದಿಕ್ಕಾರ ಎಂದ. ನೀನು ಹೀಗೆಲ್ಲಾ ಮಾತಾಡೋದಾದ್ರೆ ನೀನು ಕರೆಯುವ ಮುಂದಿನ ಯಾವ ಸಭೆಗೂ ನಾನು ಬರುವುದಿಲ್ಲ, ನನ್ನನ್ನು ಕರೆಯ ಬೇಡ ಎಂದು ಕುಡಿದ ಅಮಲಿನಲ್ಲಿ ಖಾರವಾಗಿ ಹೇಳಿದ. ಇನ್ನುಳಿದವರೂ ಅವನ ಮಾತನ್ನು ಅನುಮೋದಿಸುವಂತೆ ಇವನನ್ನೇ ತಿನ್ನುವಂತೆ ನೋಡಿದರು, ತನ್ನೊಳಗೆ ಹೊಳೆದ ಹೊಸ ವಿಚಾರಗಳನ್ನು ಸಮಾನ ಮನಸ್ಕರೊಡನೆ ಹಂಚಿಕೊಂಡು ಸ್ಪಷ್ಟಗೊಳಿಸಿಕೊಳ್ಳಲು ಆಡಿದ ಮಾತುಗಳಿಂದ ತಾನು ಗೌರವಿಸುವ ಮಿತ್ರರಿಂದ ದೂರಾಗುತ್ತೇನೆಂಬ ಬೆದರಿಕೆ ಸೂಕ್ಷ್ಮ ಮನಸ್ಸಿನ ಕಪ್ಪು ಕವಿಗೆ ದುಬಾರಿಯದ್ದಾಗಿತ್ತು, ಅಂತೂ ಗಲಾಟೆ ಗದ್ದಲ, ವಾಗ್ವಾದ, ಮುನಿಸಿನೊಂದಿಗೆ ಅಂದಿನ ಪಾನಗೋಷ್ಠಿ ಮುಗಿಸಿ ಮನೆಗೆ ಬಂದ ಕಪ್ಪು ಕವಿಗೆ ಏನು ಮಾಡಿದರೂ ನಿದ್ದೆ ಹತ್ತಲಿಲ್ಲ. ಕಣ್ಣು ಮುಚ್ಚಿದರೂ, ತೆಗೆದರೂ ಪಾನಗೋಷ್ಠಿಯಲ್ಲಿ ಎದುರಾದ ಮುಖಗಳೇ, ವಾಗ್ದಾಣಗಳೇ. ಕೊನೆಗೆ ತನ್ನ ವಾದದಲ್ಲೆ ಏನಾದರೂ ದೋಷವಿದ್ದಿತೆ ಎಂದು ಸ್ವವಿಮರ್ಶೆ ಮಾಡಿಕೊಳ್ಳಲು ಪ್ರಯತ್ನಿಸಿದಾಗಲೂ ತನ್ನ ಮಾನವೀಕ ಶಾಸ್ತ್ರದ ತಳಹದಿಯಲ್ಲೆಲ್ಲೂ ತನ್ನ ವಾದ ತಪ್ಪೆನಿಸುವ ಸಣ್ಣ ಅಂಶವೂ ಸುಳಿಯಲಿಲ್ಲ. ಬದಲಿಗೆ ತಾನು ಪಾಲ್ಗೊಂಡಿದ್ದ ಹಿಂದಿನ ಕೆಲ ಕವಿಗೋಷ್ಠಿಗಳಲ್ಲಿ ಯಾವುದೇ ರೀತಿಯ ಗುಣಗಾನಗಳಿಗೆ ಇತ್ತ ವಿಮರ್ಶಕರಿಂದಲೂ, ಗೋಷ್ಠಿಯ ಅಧ್ಯಕ್ಷರ ಅಧ್ಯಕ್ಷೀಯ ಭಾಷಣದಲ್ಲೂ ಮೆಚ್ಚಿಗೆಗೆ ಒಳಗಾಗದ ಅಸಂಖ್ಯಾತ ಕವಿಗಳ ಕಾತುರ, ನಿರೀಕ್ಷೆಯ ಮಾನಸಿಕ ಸ್ಥಿತಿ ನೆನಪಿಗೆ ಬಂತು. ಕವಿತೆ ವಾಚಿಸಿದ ಯಾವುದೇ ಕವಿಗೆ ಅಲ್ಲಿನ ಕೇಳುಗರಿಂದ ಅಥವ ಸದರಿ ಗೋಷ್ಠಿಯ ಅಧ್ಯಕ್ಷರಿಂದ ನನ್ನ ಕವಿತೆ ಬಗ್ಗೆ ಯಾವ ರೀತಿಯ ಅಭಿಪ್ರಾಯ ಬರಬಹುದೆಂಬ ನಿರೀಕ್ಷೆ ಇದ್ದೇ ಇರುತ್ತದೆ. ಆದರೆ ಮತ್ತೆ ಆ ಗೋಷ್ಠಿಯಲ್ಲೂ ಹಿಂದಿನಂತೆಯೇ ಕೆಲವೇ ಕೆಲವು ಪರಿಚಿತ ಪ್ರಸಿದ್ದರ ಹೆಸರು ಮತ್ತು ಕವಿತೆಯನ್ನು ಹೆಸರಿಸಿ ಬಾಯಿ ಚಪ್ಪರಿಸಿ ಮುಗಿಸುತ್ತಾರೆ. ಇನ್ನುಳಿದ ಅನೇಕರು ಆಳಿಗೊಂದಾಳಷ್ಠೆ ಆಗುತ್ತಾರೆ. ಇನ್ನೂ ಕೆಲವೊಮ್ಮೆ ಈ ನಿರ್ಲಕ್ಷಿತ ಕವಿ ಓದಲು ಎದ್ದನೆಂದರೆ ಕೇಳಿಸಿಕೊಳ್ಳುವುದನ್ನ ಮೊಟಕುಗೊಳಿಸಿ ತಮ್ಮ ತಮ್ಮ ಕೆಲಸಗಳಲ್ಲಿ ಬ್ಯುಸಿಯಾಗುತ್ತಾರೆ. ಆದರೂ ಈ ಹಳೆಯ ಕವಿ 'ಯಾರು ಕಿವಿ ಮುಚ್ಚಿದರೂ ನನಗಿಲ್ಲ ಚಿಂತೆ' ಎಂಬಂತೆ ಹೇಳುತ್ತಲೇ ಇರುತ್ತಾನೆ. ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟದ ಯಾವುದೇ ಗೋಷ್ಠಿಗಳಲ್ಲೂ ಈ ರೀತಿಯ ಕವಿಗಳ ಸಂಖ್ಯೆ ಕೆಲವೊಮ್ಮೆ ಶೇಕಡ ಎಂಬತ್ತನ್ನು ಮೀರಿರುತ್ತದೆ. ಇಂಥಹ ಕವಿಗಳಿಗೆ ತನ್ನ ಕವಿತೆ ಕನಿಷ್ಠ ಮಟ್ಟದ್ದೆಂದು ಮೊದಲೇ ಅನ್ನಿಸಲು ಸಾಧ್ಯವೇ ಆಗಿರುವುದಿಲ್ಲ. ಯಾವುದೇ ಕವಿ ತನ್ನಿಂದ ಬಂದದ್ದು ಮಹತ್ವದ್ದೆಂದೇ ಭಾವಿಸಿರುತ್ತಾನೆ. ಅವನ ಮಟ್ಟಕ್ಕೆ ಅದು ಶ್ರೇಷ್ಠವಾಗಿಯೇ

ಇರುತ್ತದೆ. ಬಲದವನು ಬಲ ಶ್ರೇಷ್ಠವೆನ್ನುವಂತೆ, ಎಡದವನು ಎಡ ಶ್ರೇಷ್ಠವೆನ್ನುವಂತೆ, ಮಾಂಸಹಾರಿ ತನ್ನದ್ದನ್ನು, ಸಸ್ಯಾಹಾರಿ ಅವನದ್ದನ್ನು, ಬ್ರಾಹ್ಮಣ ಪೌರೋಹಿತ್ಯವನ್ನು, ಅಸ್ಪೃಷ್ಯ ತನ್ನ ಬದುಕನ್ನು ಪ್ರೀತಿಸಿ ಗೌರವಿಸುವಂತೆ. ಹೀಗಿರುವಾಗ ತನ್ನ ಕವಿತೆಗೆ ಹೊರಗಿನವನಾದ ಯಾರೋ ಒಬ್ಬ ಇದು ಕವಿತೆಯಲ್ಲ, ಆತ ಯಾಕಾದರೂ ಕವಿತೆ ಬರೆಯುತ್ತಾನೆ ಎಂದರೆ ಅವನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು, ಆತ್ಮಗೌರವವನ್ನು ಗೌರವಿಸಿದಂತಾಗುತ್ತದೆಯೇ? ರಾತ್ರಿಯೆಲ್ಲಾ ಕಾಡಿದ ಈ ಚಿಂತನೆಗಳಿಂದಾಗಿ ಕಪ್ಪು ಕವಿಗೆ ಅನಿಸಿದ್ದು 'ಗುಣಗಾನವಿಲ್ಲದ ಕವಿಗಳ ಕವಿತೆಗಳು' ಎಂಬ ವಿಷಯದ ಮೇಲೆ ಸಂಶೋಧನೆಯನ್ನೇ ಕೈಗೊಳ್ಳಬಹುದಲ್ಲವೇ? ಡಿ.ಆರ್ ನಾಗರಾಜ್ ಅಮೃತಕ್ಕೆರಗಿದ ಗರುಡವನ್ನು ಇನ್ನೊಂದು ರೀತಿಯಲ್ಲಿ ಅರ್ಥೈಸಿಕೊಳ್ಳುವುದಾದರೆ, ಕವಿಯ ಕಾವ್ಯಪ್ರೀತಿಯನ್ನು ಕೆಲವೊಮ್ಮೆ ವಿಮರ್ಶೆ ಗರುಡನಂತೆ ಬಂದು ಹೊತ್ತೊಯ್ಯುತ್ತದೆಯೆ?

**ಮಾಂಸ, ಎಂಜಲು, ಮಿಲನ ಮತ್ತು ಭಕ್ತಿಯ ಅನುಸಂಧಾನ**

**- ಗೋವಿಂದರಾಜು ಎಂ ಕಲ್ಲೂರು**

ಇತಿಹಾಸದುದ್ದಕ್ಕೂ ಭಾರತವನ್ನು ಪ್ರಭಾವಿಸಿರುವ ಪ್ರಧಾನ ಧಾರೆಗಳಲ್ಲಿ ಭಕ್ತಿಗೆ ಅಗ್ರಸ್ಥಾನವಿದ್ದು ಸಂಸ್ಕೃತಿಯ ಚಲನಶೀಲತೆಯಲ್ಲಿ ಭಕ್ತಿ ಬಹುರೂಪತೆಯನ್ನು ಪಡೆದಿದೆ. ಪ್ರಾಚೀನ, ಆರ್ಯರನಂತರ, ವಚನಕಾಲ, ಮಧ್ಯಕಾಲೀನ ಮೊದಲ್ಗೊಂಡ ಕಾಲಗಳ ಭಿನ್ನ ಭಿನ್ನ ಭಕ್ತಿಯ ಸ್ವರೂಪಗಳನ್ನು ತನ್ನಲ್ಲಿ ಜೀರ್ಣಿಸಿಕೊಂಡು ಧರ್ಮಗಳಲ್ಲಿ ಭಕ್ತಿಯ ಹಿಡಿತ ಬಿಗಿಯಾದಾಗ ಭಕ್ತವಲಯವು ಆ ಧರ್ಮದಿಂದಲೇ ಹೊರಸಿಡಿದು ತಮಗೊಪ್ಪುವಂತಹ ಮುಕ್ತ ಭಕ್ತಿಯನ್ನು ಅಪ್ಪಿದ್ದು ಇತಿಹಾಸ.

ಸಮಕಾಲೀನದಲ್ಲಿ ಅಂತಹ ಮುಕ್ತಭಕ್ತಿ ಮರೆಯಾಗಿ ಅದು ಬಹುಸಂಕೀರ್ಣವಾಗಿ ಬೆಳೆದು ಆಚರಣೆಯ ಬಂಧನಗಳಲ್ಲಿ ತನ್ನನ್ನು ತಾನು ಬಂಧಿಯಾಗಿಸಿಕೊಂಡಿದೆ. ಸಮಕಾಲೀನ ಭಕ್ತಿಯ ಆವರಣದೊಳಗೆ 'ಅಶುದ್ಧ-ಅಶ್ಲೀಲ'ವೆಂದು ಕರೆಯಲ್ಪಡುವ ಅನೇಕ ನಡಾವಳಿಗಳು ಸಿಕ್ಕುಗೊಂಡಿದ್ದು ಇವುಗಳೊಂದಿಗಿನ ಭಕ್ತಿ, ಪೂಜೆ, ಅರ್ಪಣೆ ಪ್ರಾಮಾಣಿಕವಲ್ಲ ಎಂಬುದು ಒಪ್ಪಿತಸಾಮಾಜಿಕ ಸತ್ಯವಾಗಿ ರೂಪಾಂತರ ಹೊಂದಿದೆ.

ಈ ಲೇಖನವು ವರ್ತಮಾನದ ದೇವಾಲಯಗಳು ಮತ್ತು ಧಾರ್ಮಿಕ ಆಚರಣೆಗಳು ಪಡೆದುಕೊಂಡಿರುವ ವಿಕಾರ ಸಂಕೀರ್ಣತೆಗಳ ಕುರಿತ ಅನುಸಂಧಾನವೊಂದಕ್ಕೆ ಪ್ರಯತ್ನಿಸುತ್ತಿದೆ. ಭಕ್ತಿಯೊಂದಿಗೆ ಸಾತತ್ಯ ಸಾಧಿಸಲು ಹೆಣಗಿರುವ ಮಾಂಸ,ಎಂಜಲು,ಮಿಲನ ಮಾನವನ ಅವಿಭಾಜ್ಯಗಳೇ ಆಗಿವೆ. ಆದರೆ ಇವುಗಳ ತಿರಸ್ಕಾರವೇ ಶುದ್ಧಭಕ್ತಿಯೆಂಬ ಬೌದ್ಧಿಕವಿಕಲ್ಪವು ಮನುಷ್ಯನ ಸಹಜ ಜೀವನವನ್ನು ಅಲ್ಲಗಳೆದು ಅಮೂರ್ತಗಳೊಂದಿಗೆ ವ್ಯವಹರಿಸುವ ಉದ್ದೀಪನವನ್ನು ಸಮಾಜದಲ್ಲಿ ಹರಡುತ್ತಿದೆ. ಹಿಂದಿನ ಜನಜೀವನದಲ್ಲಿ ಚಾಲ್ತಿಯಲ್ಲಿದ್ದ ಅನೇಕಾನೇಕ ಸಂಗತಿಗಳು, ಉದಾಹರಣೆಗಳು ಇಲ್ಲಿ ಪ್ರಸ್ತಾಪಗೊಂಡಿದ್ದು ಇವು ಹಳೆಯವಾದರೂ ಹಳತಾದ ಮಾತ್ರಕ್ಕೆ ಸತ್ಯವು ಅಸತ್ಯವಾಗುವುದಿಲ್ಲವೆಂಬುದನ್ನು ಮರೆಯಬಾರದು.

**ಮಾಂಸ ಮತ್ತು ಭಕ್ತಿ:** ವರ್ತಮಾನವು ಮಾಂಸಾಹಾರ ಮತ್ತು ದುಷ್ಟಗುಣಗಳನ್ನೂ ಸಮೀಕರಿಸುತ್ತಿದೆ. ಚರಿತ್ರೆಯ ಹಿಂದಿನ ಪುಟಗಳು ಮಾಂಸಾಹಾರದ ಪರ್ವಗಳನ್ನೇ ಕಣ್ಣೆದುರಿಗಿರಿಸುತ್ತವೆ. ಭಕ್ತಿಯ ಸಾಂಸ್ಕೃತಿಕ ಚಲನದಿ ಮಾಂಸಾಹಾರ ವಿಭಿನ್ನ ಛದ್ಮದಿ, ವಿಭಿನ್ನ ವೇಗದಿ ಸಾಗುತ್ತಲೇ ಇದೆ. ಇತಿಹಾಸದಲ್ಲಿ ಪ್ರಮುಖ ಎಂದೆನಿಸಿದ್ದ ಮಾಂಸ ಆಲಯದವರ ಕಣ್ಣಲ್ಲಿ ಅದು ಹೊಲಸಾಗಿ ಮಾಂಸತಿಂದು ಮಾಡುವ ಭಕ್ತಿ ಅಪವಿತ್ರವೆಂಬ ಪ್ರಕ್ಷಿಪ್ತ ಭಕ್ತಿವಲಯದ ತುಂಬಾ ಬಂದಳಿಕೆಯ ರೀತಿ ಹುಟ್ಟಿ ವಿಸ್ತರಣೆ ಪಡೆದಿದೆ. ಬಹುಸಂಸ್ಕೃತಿಯ ಅನೇಕ ದೇವಾಲಯಗಳಲ್ಲಿ ದೈವವ ತಲುಪಲು ಇರುವ ಆದ್ಯ



ಮೆಟ್ಟಿಲೇ ಮಾಂಸಾಹಾರದ ನಿರಾಕರಣೆ ಎನ್ನುವುದನ್ನು ಕಲ್ಪಿಸಿ ಒಪ್ಪಿಸಲಾಗಿದ್ದು ಸಮಕಾಲೀನವೂ ಇದನ್ನೇ ಶುದ್ಧ ಭಕ್ತಿಯ ಸಂಕೇತವಾಗಿ ಸ್ವೀಕರಿಸಿದೆ.

ಅಲೆಮಾರಿ ಮಾನವನಿಂದ ಆರಂಭಗೊಂಡ ಸಂಸ್ಕೃತಿಯು ಮಾಂಸಾಹಾರವನ್ನು ಬಿಟ್ಟು ಉದ್ಘಾಟನೆಗೊಂಡಿರುವುದಿಲ್ಲ. ದೇವನಿಂದ ಮಾಂಸವನ್ನು ಪ್ರತ್ಯೇಕಿಸಿರುವ ಪುರೋಹಿತ ಸಂಸ್ಕೃತಿಯು ಆರಂಭ

ಕಾಲದಲ್ಲಿ ಮಾಂಸ ಪ್ರಿಯವಾಗಿದ್ದು ಯಾಗದ ಪೂರ್ಣಫಲಕ್ಕಾಗಿ ಆಡು, ಕುದುರೆ, ಮತ್ತು ದನಗಳನ್ನು ಬಲಿಕೊಟ್ಟು ದೇವರುಗಳನ್ನು ತೃಪ್ತಿಗೊಳಿಸಿದ, ಯಜ್ಞ, ಶ್ರಾದ್ಧಗಳಲ್ಲಿ ಪ್ರಾಣಿಬಲಿ ಹಾಗೂ ಮಾಂಸದಡಿಗೆಗಳನ್ನು ಪವಿತ್ರಾಚರಣೆಯಾಗಿ ಹೊಂದಿದ್ದ ವೈದಿಕರ ಚಾರಿತ್ರಿಕ ಇತಿಹಾಸವಿದೆ. ಇಲ್ಲಿ ವೈದಿಕರು ನೀಡುತ್ತಿದ್ದ ಪ್ರಾಣಿಬಲಿಯೂ ಕೂಡಾ ಭಕ್ತಿಯ ಚೌಕಟ್ಟನ್ನು ಮೀರಿದ್ದಲ್ಲವೆಂಬುದನ್ನು ಗಮನಿಸಬೇಕು.

ನಮ್ಮಲ್ಲಿ ಬಹುಶ್ರದ್ಧೆಯಿಂದ ಜರುಗುವ ದೈವಿಕಾರಾಧನೆಗಳಲ್ಲಿ ಶಾಖಾಹಾರ ಕ್ಕಿರುವಷ್ಟೇ ಪ್ರಾಧಾನ್ಯತೆ ಮಾಂಸ ನೈವೇದ್ಯಕ್ಕೂ ಇದೆ. ಇಲ್ಲಿ ಸಮರ್ಪಣೆಗೊಳ್ಳುವ ನೈವೇದ್ಯವು ಪೂಜಿಸುವವರ ಸಾಂಸ್ಕೃತಿಕ ಸಮಾಜ ಜೀವನದ ಮೇಲೆಯೇ ಅವಲಂಬಿಂತವಾಗಿರುತ್ತದೆ. ಶಾಖಾಹಾರಿ ಗಣಪನಿಗೆ ಕೊಪ್ಪಳದ ಭಾಗ್ಯನಗರದಲ್ಲಿ ಮಾಂಸ ಮಧ್ಯದ ನೈವೇದ್ಯವೂ ನಡೆಯುತ್ತದೆ. ಮಾಂಸಾಹಾರಕ್ಕೂ ಶೂದ್ರ ದೇವತೆಗಳಿಗೂ ಗಾಢ ಸಂಬಂಧವಿದ್ದು ಮಾಂಸ ನೈವೇದ್ಯವನ್ನೇ ಪ್ರಧಾನವಾದ ದೈವಿಕ ಆಚರಣೆಯಾಗಿ ಹೊಂದಿರುವ ಜನಾಂಗಗಳು ಭಾರತದಲ್ಲಿ ಹಲವಿವೆ. ಊರಿನಕೇಡು ಕಳೆಯಲು ಬಲಿಕೊಟ್ಟ ಪ್ರಾಣಿಯ ರಕ್ತದ ಜೊತೆಗೆ ಅನ್ನವನ್ನು, ಮಾಂಸವನ್ನು ಕಲಸಿ ಊರಸುತ್ತ ಚೆಲ್ಲುವ(ಬಲಿ ಹಾಕುವುದು) ಸಂಕೀರ್ಣ ನಡಾವಳಿಯಿದ್ದು ಇದನ್ನು ಇಂದಿಗೂ ಗ್ರಾಮ ದೇವತೆ ಜಾತ್ರೆಗಳಲ್ಲಿ ಕಾಣಬಹುದು.

ಭಕ್ತ ಕಣ್ಣಪ್ಪ ಶಿವನಿಗೆ ನೈವೇದ್ಯವಿಟ್ಟಿದ್ದು ಮೊಲದಮಾಂಸವನ್ನು. ಶಿವಲಿಂಗಕ್ಕೆ ಚೂರೂ ಮೈಲಿಗೆಯಾಗಬಾರದು ಎನ್ನುವವರ ಮುಂದೆ ಶಿವನ ಕಣ್ಣಿನ ಗುರುತಿಗೆ ಕಾಲಿಟ್ಟು, ಲಿಂಗದ ಮೇಲೆ ರಕ್ತ ಹರಿಸಿ ಹರನ ಒಲಿಸಿಕೊಂಡು ಮಾಂಸ, ರಕ್ತ, ಕಾಲಿನ ಸ್ಪರ್ಷಕ್ಕೆ ದೇವರು ಒಲಿಯುವುದಿಲ್ಲವೆಂಬ ನಮ್ಮ ಜಡ ನಂಬಿಕೆಗಳನ್ನು ಈತ ಮುರಿದು ಕಟ್ಟುತ್ತಾನೆ. ಭಕ್ತನ ಪರೀಕ್ಷಿಸಲು ಬರುವ ಶಿವ ಸ್ವತಃ ಸಿರಿಯಾಳ ದಂಪತಿಯ ಮಗನ ತಲೆ ಮಾಂಸವನ್ನೇ ಪ್ರಸಾದವಾಗಿ ಕೇಳುತ್ತಾನೆ. ಭಕ್ತ ಸತಿಪತಿಯರೂ ಅದನ್ನು ನಡೆಸುತ್ತಾರೆ.

ಭಾರತದ ಮುಖ್ಯ ಧಾರ್ಮಿಕ ಗ್ರಂಥಗಳಾದ ರಾಮಾಯಣ, ಮಹಾಭಾರತಗಳು ಮಾಂಸಪರ್ವಗಳನ್ನೇ ಓದುಗರ ಮುಂದೆ ತೆರೆಯುತ್ತವೆ. ಡಿ.ಎ.ಶಂಕರ್‌ರ 'ಶ್ರೀಮದ್ವಾಲ್ಮೀಕಿ ರಾಮಾಯಣದ ಮಡಿಪೆಟ್ಟಿಗೆಯೊಳಗೆ' ಲೇಖನವು ರಾಮಾಯಣದ ಮಾಂಸ ಭಕ್ಷ್ಯಗಳನ್ನು ಓದುಗರಿಗೆ ಬಡಿಸುತ್ತದೆ. ಅಯೋಧ್ಯಾಕಾಂಡದಲ್ಲಿ ಗಂಗಾನದಿಯನ್ನು ದಾಟಿ ಹೋಗಬೇಕಾದಾಗ ಸೀತೆ ಗಂಗೆಯನ್ನು ಕುರಿತು

ದೇವಿ ನಾನು ಅಯೋಧ್ಯೆಗೆ ಬಂದ ಮೇಲೆ ವ್ರತ ನಿಷ್ಠಳಾಗಿ ಬಂದು ಸಾವಿರ ಮಧ್ಯ ಕಳಶಗಳನ್ನರ್ಪಿಸಿ ಮಾಂಸದಿಂದ ನಿನಗೆ ಮಹಾಬಲಿಯನ್ನು ಸಮರ್ಪಿಸುವೆ

(ಅಯೋಧ್ಯಾಕಾಂಡ ಸರ್ಗ-೫೨ ಶ್ಲೋಕ-೮೯ ಪುಟ-೪೦೯) ಈ ಮಾತನ್ನು ಇಂದಿನ ಸಮಾಜದಲ್ಲಿ ನಿಂತು ಊಹಿಸಲೂ ಸಾಧ್ಯವಿಲ್ಲ. ಸಾಕ್ಷಾತ್ ಸೀತೆ ಗಂಗೆಗೆ ಮಾಂಸ ನೈವೇದ್ಯ ನೀಡುತ್ತಿದ್ದಾಳೆ. ಗಂಗಾ ನದಿಯನ್ನು ದಾಟಿಬಂದ ರಾಮ ಲಕ್ಷ್ಮಣರು ವರಾಹ ಮತ್ತು ರಷ್ಯ, ಪೃಷತ್, ಮಹಾರುರು ಎಂಬ ಜಾತಿಯ ಜಿಂಕೆಗಳಲ್ಲಿ ಒಂದೊಂದನ್ನು ಸಂಹರಿಸಿ ಆ ನಾಲ್ಕು ಮೃಗಗಳ ಪರಿಶುದ್ಧ ಮಾಂಸ ಸ್ವೀಕರಿಸುತ್ತಾರೆ. ಭಾರಧ್ವಾಜ ಮಹಾಮುನಿಯು ಶ್ರೀ ರಾಮನಿಗೆ ಏರ್ಪಡಿಸಿದ್ದ ಔತಣದಲ್ಲಿ ಜಿಂಕೆ, ನವಿಲು, ಕೋಳಿ, ಹಂದಿಯ ಮಾಂಸವೇ ಪ್ರಧಾನ ಆಹಾರವಾಗಿತ್ತು.(ಅದೇ ಕಾಂಡ ಪುಟ:೪೩೪- ೪೩೬) ಇಲ್ಲಿ ಆಹಾರ-ಜೀವನದ ನಡುವೆ ಮಡಿ-ಮೈಲಿಗೆ ಸುಳಿದಿಲ್ಲ. ಬಗೆ ಬಗೆಯ ಮಾಂಸಾಹಾರ ದೇವಕಾರ್ಯಕ್ಕೆ, ಶ್ರಾದ್ಧಕಾರ್ಯಕ್ಕೆ ಎಲ್ಲ ಕಡೆಯೂ ಸಲ್ಲುತ್ತಿತ್ತು. ಅದರ ಬಳಕೆಯ ಬಗ್ಗೆ ಇದ್ದುದು ಸಂಕೋಚರಾಹಿತ್ಯವಷ್ಟೇ ಅಲ್ಲ ಪರಿಶುದ್ಧ ಸ್ವೀಕಾರಾರ್ಹತೆ. ಸಾತ್ವಿಕತೆಯನ್ನೂ-ಸಸ್ಯಾಹಾರವನ್ನು ಸಮೀಕರಿಸುವ ನಮ್ಮಂಥವರಿಗೆ ಇದು ತಲ್ಲಣ ಉಂಟುಮಾಡುತ್ತದೆ.

ಎಂಜಲು ಮತ್ತು ಭಕ್ತಿ: ಭಕ್ತವಲಯದಿ ಎಂಜಲು ಮಾಡದ ಪದಾರ್ಥವೇ ನೈವೇದ್ಯವಾಗಬೇಕು ಎಂಬುದು ವಿಧಿತವಾಗಿದೆ. ಕಾಡಿನಲ್ಲಿ ತನ್ನ ದೈವಕ್ಕಾಗಿ ಹಣ್ಣುಗಳನ್ನು ಹೆಕ್ಕಿ ಕಾದಿದ್ದ ಮಾತಂಗ ಕನ್ಯೆಯಾದ (ಮಾದಿಗರ ಹೆಣ್ಣು ಮಗಳು) ಶಬರಿಯ ಮುಂದೆ ಬಂದ ರಾಮನಿಗೆ ಆಕೆ ನೀಡಿದ್ದು ತನ್ನ ಬೋಳು ಬಾಯಲ್ಲಿ ಕಚ್ಚಿದ ಎಂಜಲು- ಎಂಜಲು ಹಣ್ಣುಗಳನ್ನು, ದೈವ ಮತ್ತು ಭಕ್ತ ಜೊತೆಯಾಗಿ ಸವಿಯುವ ಅಂಬಲಿ,(ಮಾದಾರ ಚನ್ನಯ್ಯ) ಕೊಡಗೂಸು ರುಚಿಸಿದ ಹಾಲುಣ್ಣುವ ಶಿವ, ಮಣೇವು ಎಂಬ ಜನಪದ ಆಚರಣೆಯಲ್ಲಿ ದೇವರ ಮೂರ್ತಿ ಹಿಡಿದವರು ಅರೆ ತಿಂದು ಬಿಟ್ಟ ಪ್ರಸಾದ, ಮಡೆಸೇವೆಯ ಉರುಳಾಟ, ಪುಣ್ಯಕ್ಕಾಗಿ ಪಂಕ್ತಿಯಲ್ಲಿ ಎತ್ತುವ ಎಂಜಲು ಎಲೆ, ಬಸವನ ಹಬ್ಬದಂದು ಹಸುಗಳಿಗೆ ಪೂಜೆಸಲ್ಲಿಸಿ ಪ್ರಸಾದ ಇಟ್ಟು ಹಸು ತಿಂದು ಉಳಿದದ್ದನ್ನು ಭಕ್ತಿಯಿಂದ ಸ್ವೀಕರಿಸುವ ಮತ್ತು ಗಿಳಿ,ಅಳಿಲು ತಿಂದು ಬಿಟ್ಟ ಹಣ್ಣಿನ ರುಚಿ ಹೆಚ್ಚೆನ್ನುವ ಜನಪದರು ಇಲ್ಲಿರುವುದೆಲ್ಲಾ ಎಂಜಲಿನ ವಿಶ್ವರೂಪವೇ ಆಗಿದೆ. ಇಲ್ಲೆಲ್ಲಾ ಎಂಜಲಿಗೆ ಉತ್ಥಾನವಿದ್ದರೂ ನೈವೇದ್ಯದಿ ಎಂಜಲು ಅವಸಾನ ಕಂಡಿದೆ. ಭಕ್ತಿ ಮಾಡುವಲ್ಲಿ ಎಂಜಲು ಪ್ರಮಾಣದಂತಿದ್ದು ಸಮಕಾಲೀನ ಭಕ್ತರಲ್ಲಿರುವ ಎಂಜಲಿನ ಭ್ರಾಂತಿಯನ್ನು ಅಲ್ಲಮನ ವಚನವೊಂದು ಛಿದ್ರಗೊಳಿಸುತ್ತದೆ. ಎಂಜಲು ಇಲ್ಲದ ಭಕ್ತಿಯಿಲ್ಲ ಎಂಬ ಮಾತಿಗೆ ಅಧಿಕೃತ ಮುದ್ರೆಯೊತ್ತುತ್ತದೆ.

ಶಬ್ದವೆಂಬೆನೆ ಶೋತ್ರದೆಂಜಲು, ಸ್ಪರ್ಷವೆಂಬೆನೆ ತ್ವಕ್ಕಿನೆಂಜಲು

ರೂಪೆಂಬೆನೆ ನೇತ್ರದೆಂಜಲು, ರುಚಿಯೆಂಬೆನೆ ಜಿ.ಯೆಂಜಲು

ಪರಿಮಳವೆಂಬೆನೆ ಘ್ರಾಣದೆಂಜಲು, ನಾನೆಂಬೆನೆ ಅರಿವಿನೆಂಜಲು

ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗುಹೇಶ್ವರ ಲಿಂಗವು!

- ಎಂಬ ಮಾತುಗಳಲ್ಲಿ ದೈವಕ್ಕೆ ಎಂಜಲು ಗೌಣವಾಗಿ ಭಕ್ತಿಯೇ ಘನವಾಗುತ್ತದೆ. ಮಿಲನ ಮತ್ತು ಭಕ್ತಿ: ಲೈಂಗಿಕತೆ ಮತ್ತು ಭಕ್ತಿಯನ್ನು ಸಮಪಾತಳಿಯಲ್ಲಿಟ್ಟು ನೋಡುವುದೆಂದರೆ ಅದು ಪುರಾಣ ಭಂಜನವಾಗಿಯೇ

ಕಾಣುತ್ತದೆ. ಮನುಷ್ಯ ನಿರ್ಮಿತ ದೇವರುಗಳು ಮನುಷ್ಯ ಸಹಜ ಕಾಮನೆಗಳಿಂದ ದೂರಾದುವೇನಲ್ಲ. ಕಾಮದ ಉರಿಯಲ್ಲಿ



ಬೆಂದು ಶರಣಾದ ದೇವರುಗಳ ಚರಿತ್ರೆ ಕಣ್ಣ ಮುಂದಿದ್ದರೂ ಆಲಯದ ಪ್ರಭಾವಳಿಯಲ್ಲಿ ಅದು ಅಶ್ಲೀಲವಾಗಿದೆ. 'ದೇವಾಲಯಗಳು ಮತ್ತು ಲೈಂಗಿಕಶಿಲ್ಪ' ಎಂಬ ತಾಪಿಧರ್ಮರಾವ್‌ರ ಪುಸ್ತಕವು ಮಿಲನವು ದೇವರಿಗೆ ನೀಡುವ ಚೈತನ್ಯಶಕ್ತಿಯೆಂದೂ ಜೀವಸೃಷಿಯೇ ದೈವವಾಗಿದ್ದ ದಿನಗಳಲ್ಲಿ ಆಲಯಗಳೆಲ್ಲಾ ಸ್ವಚ್ಛ ಲೈಂಗಿಕ ಕೇಂದ್ರಗಳಾಗಿದ್ದವೆಂಬುದಕ್ಕೆ ಸಾಕ್ಷಿ ಒದಗಿಸುತ್ತದೆ.

ಬಹುತ್ವ ಭಾರತದ ಧರ್ಮಗ್ರಂಥವಾದ ರಾಮಾಯಣ ಹುಟ್ಟುವುದು ಮಿಥುನದಲ್ಲಿದ್ದ ಎರಡು ಪಕ್ಷಿಗಳನ್ನು ಕೊಲ್ಲುವುದರಿಂದ, ಮಹಾಭಾರತ ಕಥೆ ಆರಂಭ ಪಡೆಯುವುದೂ ಜಿಂಕೆಗಳೆರಡು ಸೇರಿದ್ದಾಗಲೇ. ಲೈಂಗಿಕತೆಯೇ ಎರಡೂ ಕಾವ್ಯಗಳ ಆರಂಭ ಬಿಂದುವಾಗಿ ಹೊಸದೊಂದರ ಹುಟ್ಟಿಗೆ ಭೂಮಿಕೆಯಾಗಿದೆ. ನಮ್ಮ ಪುರಾಣಗಳಲ್ಲಿ ಬಹುಪಾಲು ಮಿಲನವೇ ತುಂಬಿದೆ. ಹೆಂಡತಿಯನ್ನು ಶಂತನೊಂದಿಗೆ ಕಳುಹಿಸುವ ಶಿವ, ಮಗಳನ್ನೇ ಮದುವೆಯಾಗುವ ಬಹ್ಮ, ಬೃಂದೆಯನ್ನು ಅತ್ಯಾಚಾರ ಮಾಡುವ ವಿಷ್ಣು, ಅಹಲ್ಯೆಯ ಮೋಹಿಸಿ ಮಾರುವೇಷದಿ ಕೂಡಲು ಬರುವ ಇಂದ್ರ ಹೀಗೆ ಕಾಮ ಗೆದ್ದು ದೈವ ಸೋತ ಸಾಲು ದೃಷ್ಟಾಂತಗಳಿವೆ.

ಹದಿನೆಂಟು ಪುರಾಣಗಳನ್ನು ಬರೆದ ವೇದವ್ಯಾಸರ ಹುಟ್ಟು ಪರಾಶರ- ಸತ್ಯವತಿಯರ ಮುಕ್ತಕೂಡುವಿಕೆಯಿಂದಲೇ ಆಗಿದೆ. ಮಹಾಭಾರತದ ಅಂಬಿಕೆಯನ್ನು ವ್ಯಾಸರ ಸಂಗಕ್ಕೆ ಹೋಗಲು ರಾಜಮಾತೆ ಸತ್ಯವತಿ ಪ್ರೋತ್ಸಾಹಿಸುತ್ತಾಳೆ. ಮಹರ್ಷಿ ಭಾರಧ್ವಾಜರು ಅಪ್ಸರೆ ಧೃತಾಚಿಯ ರೂಪಾತಿಶಯಕ್ಕೆ ಸ್ತಂಭೀಭೂತರಾಗಿ ಆಕೆಯನ್ನೇ ನೋಡುವಾಗ ಸ್ಖಲನವಾದ ಅವರ ದಿವ್ಯ ತೇಜಸ್ಸನ್ನು ಕುಂಭ(ಸೊನ್ನೆ)ದಲ್ಲಿಟ್ಟು ರಾಜಗುರು ದ್ರೋಣ ಜನಿಸಿದರೆ, ಯಜ್ಞವೊಂದಕ್ಕೆ ಬಂದಿದ್ದ ಊರ್ವಶಿಯ ಕಂಡ ವರುಣನ (ಒಬ್ಬ ಋಷಿ) ವೀರ್ಯ ಸ್ಕಲನವಾಗಿ ಜನಿಸಿದ ಎರಡು ಮಕ್ಕಳು ಅಗತ್ಯ ಮತ್ತು ವಶಿಷ್ಠ, ವಿಭಾಂಡಕ ಮುನಿ ಸ್ನಾನ ಮಾಡುತ್ತಿದ್ದಾಗ ಆತನ ವೀರ್ಯವು ಚೆಲ್ಲಲ್ಪಟ್ಟು ಅಲ್ಲೇ ನೀರು ಕುಡಿಯುತ್ತಿದ್ದ ಹೆಣ್ಣು ಜಿಂಕೆಯ ಉದರ ಸೇರಿ ಜನಿಸಿದ ಋಷ್ಯಶೃಂಗ ದಶರಥನ ಪುತ್ರಕಾಮೇಷ್ಠಿಯಾಗದಲ್ಲಿ ಮುಖ್ಯ ಪುರೋಹಿತನಾಗುತ್ತಾನೆ. ವಿಶ್ವಾಮಿತ್ರನ ಧರ್ಮಪತ್ನಿ ಹೈಮವತಿಯಾಗಿದ್ದರೂ ಈತನ ಹೆಸರು ಹೆಚ್ಚು ಕೇಳಿದ್ದು ಮಾತ್ರ ಇಂದ್ರನ ಅಪ್ಸರೆ ಮೇನಕೆಯೊಂದಿಗೆ. ಹೀಗೆ ಬಹುತೇಕ ಋಷಿಗಳು ಅಪ್ಸರೆಯರೊಂದಿಗೆ ಸಂಪರ್ಕ ಹೊಂದಿರುವುದನ್ನು ಪುರಾಣಗಳು ದೃಢಪಡಿಸುತ್ತಲೇ ಸಾಗುತ್ತವೆ.

ಅಶ್ವಮೇಧ ಯಾಗ, (ಕುದುರೆಯೊಂದಿಗೆ ಯಾಗ ಪುರುಷನ ಪಟ್ಟದ ರಾಣಿಯನ್ನು ಸಂಭೋಗಕ್ಕಿಳಿಸುವುದು.) ಪೌಂಡರೀಕ ಯಾಗಗಳು (ಯಜ್ಞಕುಂಡದ ಮೇಲೆ ಹೆಣೆಯಲ್ಪಟ್ಟ ಚಪ್ಪರದ ಮೇಲೆ ಯಾಗಪುರುಷ ಆತನ

ಹೆಂಡತಿಯನ್ನು ಬಹಿರಂಗವಾಗಿ ಕೂಡುವುದು.) ಅಸಹ್ಯದ ಪರಮಾವಧಿ ಎಂದು ನಿಷಿದ್ಧಗೊಂಡಿವೆ. ಒಂದು ಕಾಲದಲ್ಲಿ ಇವೆಲ್ಲವೂ ಪವಿತ್ರ ದೈವೀಕ ಆಚರಣೆಗಳಾಗಿ ಶ್ರದ್ಧಾಭಕ್ತಿಯಿಂದ ಚಲಾವಣೆಗೊಳ್ಳುತ್ತಿದ್ದವೆಂಬ ನೆನಪು ಉಳಿಸಿಕೊಳ್ಳಬೇಕು.

ಮಾಂಸ, ಎಂಜಲು, ಮಿಲನ ಮತ್ತು ಭಕ್ತಿಯ ಅನುಸಂಧಾನ ೧೭೭

ಸಂಭೋಗ ಮತ್ತು ದೈವಾರಾಧನೆ ಪರಸ್ಪರ ವಿರುದ್ಧವಾದವುಗಳೆಂದೇ ಬಿಂಬಿಸಿದ್ದು, ಆಧ್ಯಾತ್ಮ ಸಾಧನೆಗೆ ಸ್ತ್ರೀಯ ಸಂಗವು ತೊಡಕಾಗುತ್ತದೆಂಬುದನ್ನು ಒಪ್ಪಿಸಿದ್ದಾರೆ. ಚಿತ್ತ ಚಂಚಲವಾಗಿ ಸಮಾಗಮದ ಸಣ್ಣ ನೆನಪೂ, ಭಾವವೂ ಆರಾಧನೆಯ ಸಮಯದಲ್ಲಿ ಸುಳಿಯಬಾರದೆಂಬುದು ಬಹುತೇಕರಲ್ಲಿರುವ ಕಲ್ಪನೆ. ಹೆಂಡತಿಯೊಂದಿಗೆ ಸರಸದಲ್ಲಿದ್ದ ಜೈಮಿನಿ ಭಾರತದ ನಿಸ್ಸಿಮ ಭಕ್ತ ಸುಧನ್ವನು ಸಂಗಮದಿಂದೆದ್ದು ತುರ್ತು ರಾಜಸಭೆಗೆ ಬಂದ ಕಾರಣಕ್ಕೆ ಕಾದ ಎಣ್ಣೆ ಕೊಪ್ಪರಿಗೆಯಲ್ಲಿ ಮುಳುಗಿಬರುವ ಪರೀಕ್ಷೆಯನ್ನು ಕೃಷ್ಣನಾಮ ಸ್ಮರಣೆಯಿಂದ ಚೂರೂ ಬೇಯದೆ ಗೆದ್ದುಬರುತ್ತಾನೆ. ಕನ್ನಡದ 'ಗುರು ಶಿಷ್ಯರು' ಚಲನಚಿತ್ರವು ಇಂಥದ್ದೇ ರೂಪಕವೊಂದನ್ನು ಕಟ್ಟಿಕೊಡುತ್ತಾ ಭಕ್ತಿಯ ಉನ್ನತಿಯಲ್ಲಿ ದೈವವನ್ನು ನಿಂತಲ್ಲಿಯೇ ಕಾಣಬಹುದಾದ ಸನ್ನಿವೇಶವೊಂದನ್ನು ನೀಡಿದೆ. ನಿತ್ಯ ಶಿವಪೂಜೆಗೆ ಬದ್ಧನಾದ ರಾಜನು ರಾತ್ರಿ ತನ್ನೊಂದಿಗೆ ಸುಖಿಸಿದ ರಾಜನರ್ತಕಿಯ ಸ್ತನಗಳಲ್ಲೇ ದೈವವನ್ನು ಕಂಡು ಆರಾಧಿಸುತ್ತಾನೆ. ಸ್ನಾನವಿಲ್ಲ, ಗಂಧವಿಲ್ಲ, ಆದರೂ ಆತ ಚೆಲ್ಲುವ ಹೂವು ಶಿವನಿಗರ್ಪಿತ.

ಹುಸಿಸಾಂಸ್ಥಿಕ ಧರ್ಮ ಮತ್ತು ದೇಹಧರ್ಮದ ನಡುವಿನ ಸಂಘರ್ಷದಲ್ಲಿ ದೇಹ ಧರ್ಮವು ದಿಗ್ವಿಜಯ ಸಾಧಿಸಿ ಸಮಾಗಮ ಸ್ವಾತಂತ್ರ್ಯದ ವಿರಾಟ್ರೂಪ ಪ್ರದರ್ಶನವಾಗಿದ್ದು ಭಕ್ತಿಯು ಮಿಲನ ಬಯಸಿದವರ ಪರವಾಗಿ ನಿಂತಿರುವುದು ಬಹುಮುಖ್ಯವಾಗುತ್ತದೆ. ಭಕ್ತಿ ಮುಖ್ಯವೇ ಹೊರತು ಮಧ್ಯ, ಮಾಂಸ, ಮಡಿ, ಲೈಂಗಿಕತೆಗಳಾಗಲಿ ಅಲ್ಲವೆಂಬುದನ್ನು ಭಕ್ತಿಯ ಸಾಂಸ್ಕೃತಿಕ ಚಲನವು ದೃಢಪಡಿಸುತ್ತದೆ. ಹುಸಿಪರಂಪರೆಯನ್ನು ವೈಭವೀಕರಿಸುವ ಆಚರಣೆಗಳೆಲ್ಲವೂ ದಿಟ ಭಕ್ತಿಯ ಮುಂದೆ ರದ್ದಿಯಾಗುತ್ತವೆ ಎಂಬುದನ್ನು ವಿವೇಚಿಸಬೇಕಾದ ತುರ್ತು ಸಮಕಾಲೀನದ್ದಾಗಿದೆ.

**ವಿಳಾಸವಿಲ್ಲದ ಪತ್ರ : ಎನ್.ಕೆ. ಕಾವ್ಯ**

**ಎಸ್.ಕೆ. ಮಂಜುನಾಥ್**

**ವಿಳಾಸವಿಲ್ಲದ ಪತ್ರಕ್ಕೆ ಸಾವಿನ ಸಹಿ**

ಸಮಕಾಲೀನ ಕನ್ನಡ ಕಾವ್ಯ ಸಂದರ್ಭದಲ್ಲಿ ಎನ್.ಕೆ.ಹನುಮಂತಯ್ಯ (೧೯೭೪- ೨೦೧೦) ಎಂಬ ಹೆಸರು ಚಿರಪರಿಚಿತ. ಇವರು ೧೭ ಏಪ್ರಿಲ್ ೨೦೧೧ರಲ್ಲಿ ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳು ಕಳೆದಿವೆ. ಎನ್.ಕೆ ಎಂದೇ ಪರಿಚಿತ ವಲಯದಲ್ಲಿ ಗುರ್ತಿಸಿಕೊಂಡ ಕವಿ.ತನ್ನೊಳಗೆ ಕುದಿವ ಕುಲುಮೆಯಲ್ಲಿ ಉರಿವ ನಿಗಿನಿಗಿ ಕೆಂಡದಂತೆ ಸದಾ ಚಡಪಡಿಸುವ ವ್ಯಕ್ತಿಯೊಬ್ಬನ ಚರಮಗೀತೆಯನ್ನು ನಾನೀಗ ಬರೆಯುತ್ತಿದ್ದೇನೆ. ಎನ್‌ಕೆ ಎಂದಾಗ ಏನೋ ವಿಚಿತ್ರ ಸಂಕಟವು ಆವರಿಸಿ ಪಾಪದವನು ಬದುಕನ್ನು ಅರಿಯದೆ ಹೋದನಲ್ಲ ಎಂಬ ಹತಾಶೆ, ಕೋಪ, ಪ್ರೀತಿ ಎಲ್ಲವೂ ಒಟ್ಟಿಗೆ ಬರುತ್ತದೆ. ಆದರ್ಶವಾಗಿ ನಿಲ್ಲಬಲ್ಲವನೊಬ್ಬ ದುರಂತಕ್ಕೀಡು ಮಾಡಿಕೊಂಡ ಬಗ್ಗೆ ಬರೆಯಲೇಬೇಕಾದ ಅನಿವಾರ್ಯಕ್ಕಿಂತ ತನ್ನನ್ನು ತಾನು ಬಿಡುಗಡೆಗೊಳಿಸುವ ಸಲುವಾಗಿ ಬರೆಯುತ್ತಿದ್ದೇನೆ. “ಎಲ್ಲರಿಗೂ ಅರ್ಥವಾಗದ ಸತ್ಯವೊಂದು ಹಗಲುರಾತ್ರಿಗಳನ್ನು ಆಳುತ್ತಿರುತ್ತದೆ' ಎಂದ ಎನ್‌ಕೆ ಸತ್ಯದ ಮತ್ತು ಆದರ್ಶದ ಬೆನ್ನಹತ್ತಿ ಬದುಕಿಗೆ ಬೆನ್ನು ಮಾಡಿ ಎಚ್ಚರದಲ್ಲಿದ್ದು ಎಚ್ಚರತಪ್ಪಿದ ಬಗ್ಗೆ ವಿಷಾದವೆನಿಸುತ್ತದೆ. 'ಹೊಸತಲೆಮಾರಿನ ಅಸಲಿ ತಲ್ಲಣ' ಎಂದ ನಟರಾಜ್ ಹುಳಿಯಾರ್, 'ಸದಾ ತೀವ್ರ ತಳಮಳದಲ್ಲಿ ಅದ್ದಿರುವಂತಿದ್ದ ಜೀವ' ಮತ್ತು “ಎನ್‌ಕೆ, ಕಷ್ಟವಿಲ್ಲದೆ ಲೋಕಾಭಿರಾಮವಾಗಿ ಮಾತನಾಡುವಷ್ಟು ಸಹಜವಾಗಿ ಕವಿತೆ ಬರೆಯಬಲ್ಲ ಕವಿ' ಎಂದ ರಹಮತ್ ತರೀಕೆರೆ, 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ತಮಾಷೆ ಮಾಡಿದ ಕೆ. ರಾಮದಾಸ್ ಹಾಗೂ 'ಕನ್ನಂಬಾಡಿ ಎಷ್ಟಾದರೂ ನೀರನ್ನು ನಿಲ್ಲಿಸಿಕೊಳ್ಳುತ್ತದೆ.ಆದರೆ ಎನ್‌ಕೆ ಎದೆಯಲ್ಲಿರುವ ಕವಿತೆಗಳನ್ನು ಯಾರಿಂದಲೂ ತಡೆದು ನಿಲ್ಲಿಸಲು ಸಾಧ್ಯವಿಲ್ಲ' ಎಂದ ಸಿಜಿಕೆ ಈ ಎಲ್ಲರ ಮಾತುಗಳು ಎನ್‌ಕೆಗಿದ್ದ ಜೀವನಪ್ರೀತಿ, ಚಡಪಡಿಕೆ ಮತ್ತು ಕುತೂಹಲವನ್ನು ನಿರೂಪಿಸುತ್ತವೆ.

ದಲಿತ ಬದುಕಿನ ದಮನಿತ ಕಥೆಗಳ ಆಶೋತ್ತರವಾಗಿ ನಿಲ್ಲುವ ಸೂಚನೆಯ ಹುಸಿಮಾಡಿದ ಬಗ್ಗೆ ಮಾತ್ರ ಯಾವತ್ತಿಗೂ ಕೂಡ ರಾಜಿಯಿಲ್ಲ. ಸಾವು ಎಂಬುದು ಇಂದಲ್ಲ ನಾಳೆ ಬಂದೇ ಬರುತ್ತದೆ. ಇಲ್ಲಿ ಹುಟ್ಟಿದ ಎಲ್ಲರಿಗೂ ಸಾವಿದೆ. ಬದುಕಿಗೆ ಅಭಿಮುಖವಾಗಿ ನಿಲ್ಲಬೇಕಾದ ಹೊತ್ತಿನಲ್ಲಿ, ದಣಿದ ಜೀವದ ಸಾರ್ಥಕತೆಯ ಕ್ಷಣದಲ್ಲಿ ಕೆಟ್ಟಸಾವನ್ನು ಆಹ್ವಾನಿಸಿಕೊಂಡ ಈ ಕವಿಗೆ ಯಾರು ಕ್ಷಮಿಸುವ ಮನಸ್ಸು ಮಾಡಲಿಲ್ಲ. ಈ ದುರಂತಗಳ ನಡುವೆ ಯಾರಿಗೂ ಹೇಳಿಕೊಳ್ಳಲಾಗದ ನೋವಿಗೆ ಕತ್ತಲ ಕೋಣೆಯಲ್ಲಿ ಸದ್ದಿಲ್ಲದೆ ಅಳುತ್ತಾ, ಲೋಕದೆದುರು ನಗುತ್ತ ಬದುಕು ಮಾತ್ರ ಸಂಘಮಿತ್ರೆಯ

ಮೌನದೊಂದಿಗೆ ಸಾಗುತ್ತಿದೆ. ನಾಡಿನ ತುಂಬೆಲ್ಲಾ ಎನ್‌ಕೆಯ ಒಡನಾಡಿಗಳು ತುಂಬಾ ಇದ್ದಾರೆ. ಅಷ್ಟೇ ಏಕೆ ಅನಂತಮೂರ್ತಿ ಅವರು ಟಿ.ವಿ ಕಾರ್ಯಕ್ರಮವೊಂದರಲ್ಲಿ ಎನ್‌ಕೆ ಕುರಿತು ಹೇಳಿದ ಮಾತು, ದೇವನೂರು ಮಹಾದೇವರು ಎನ್‌ಕೆಯ ಕವಿತೆ ಕುರಿತು 'ಭಾರತಮಾತೆ' ಎಂದದ್ದು ಮತ್ತೆ ಮತ್ತೆ ಅನುರಣನಗೊಳ್ಳುತ್ತಿದೆ. ತಿಪಟೂರಿನ ಸಾಂಸ್ಕೃತಿಕ ತಿಕ ರಾಜಕೀಯದ ನಡುವೆ ಎದೆಯುಬ್ಬಿಸಿಕೊಂಡು ಬದುಕುತ್ತಿದ್ದ ಕವಿಯ ಕರೆಯೋಲೆಗೆ ಕಿವಿಗೊಟ್ಟು ಜೊತೆಯಲ್ಲಿ ಕಾಲಕಳೆದ, ಅಲ್ಲ ಅವರೊಡನೆ ಹರಟೆಯಿಂದ ಗಳಿಸಿದ ಕ್ಷಣಗಳಲ್ಲಿ ಎನ್‌ಕೆ ಎಂತಹ ಭಾವಜೀವಿ ಎಂಬುದು ಅರಿವಿಗೆ ಬಂದದ್ದು. 'ಗೋವು ತಿಂದು ಗೋವಿನಂತಾದವನು' ಎಂಬ ಮಹಾಪ್ರತಿಮೆಯಿಂದ ಜನರಲ್ಲಿ ಪ್ರತಿಮೆಯಾಗಿ ನಿಂತವನು, ತನ್ನದೇ ಪ್ರತಿಮೆಯನ್ನು ತಾನೇ ಭಗ್ನಗೊಳಿಸಿಕೊಂಡ ಪರಿಗೆ ಅನೇಕ ಪ್ರಶ್ನೆಗಳು ನಮ್ಮೆದೆಯಲ್ಲಿವೆ. ಆದರೆ, ಆ ಪ್ರಶ್ನೆಗಳಿಗೆಲ್ಲಾ ಉತ್ತರಿಸಬೇಕಾಗಿದ್ದ ಎನ್‌ಕೆ ಮಾತ್ರ ನಮ್ಮೊಡನೆ ಇಲ್ಲ. ಕಿರಂ ಆಗಾಗ ಉಚ್ಚರಿಸುತ್ತಿದ್ದ 'ಕರುಣಾಳುಗಳು ನೀವು/ ಲೋಕದ ಸಂತೆಯಲ್ಲಿ/ ನನಗೊಂದು ಅಂಗಡಿ ಹಾಕಿ/ ಕಣ್ಣೀರು ಮಾರುವ ಕೆಲಸ ಕೊಟ್ಟಿದ್ದೀರಿ/ ನಿಮಗೆ ಚಿರಋಣಿ' ಎನ್ನುವ ಸಾಲುಗಳನ್ನು ನೀಡಿದ ಕವಿಯೊಬ್ಬನ ಮುಗಿಯದ ಹಾಡು ಇನ್ನೂ ಇತ್ತು.

ಬದುಕಿನ ಪಯಣದಲ್ಲಿ ದಣಿದ ಪಯಣಿಗನಿಗೆ ತುಸು ದೂರದಲ್ಲಿ ದೊರೆಯುವ ತಂಗುದಾಣದ ಮುನ್ನವೇ ಪಯಣ ಬೇಸರವಾದರೆ ಹಾದಿ ಸಾಗುವುದು ಹೇಗೆ? ಶಿಲೆಯಾದ ಕಲ್ಲು ಪೂಜಿಸಿಕೊಳ್ಳುವ ಬದಲು ಉಗಿಸಿಕೊಳ್ಳುವುದೆಂದರೆ ಏನರ್ಥ! ಜಗತ್ತಿಗೆ ಬೇಕಾದರೆ ಮೋಸಮಾಡಿ ಬದುಕಬಹುದು. ಆದರೆ ತನಗೆ ತಾನೆ ಮೋಸಮಾಡಿಕೊಂಡು ಬದುಕಲು ಸಾಧ್ಯವೇ?ಎನ್‌ಕೆ ಮೋಸ ಮಾಡಿದ್ದು ಜಗತ್ತಿಗಲ್ಲ, ತನಗೆ ತಾನೇ ಮೋಸಮಾಡಿಕೊಂಡು ಜಗದ ಜನರೆದುರು ಅಸಹಾಯಕ ಖೈದಿಯಂತೆ ನಿಲ್ಲುತ್ತಾರೆ. ಅಪ್ಪ ಇದರೊಳಗೆ ಧುಮುಕುವ ಮುನ್ನ ಒಂದುಗಳಿಗೆ ನೆನಪಿನ ಕೊಂಬೆ ಹಿಡಿದು ತೂಗಾಡಿದ್ದರೆ ಉಳಿಯುತ್ತಿದ್ದ. ನೆನಪಿನೊಳಗೆ ಬಿಟ್ಟುಬಂದ ಬದುಕುವ ಛಲವನ್ನು ಹುಡುಕುತ್ತಿದ್ದ"(ಕತ್ತಲೆಗೆ ಕಾಯುವುದಿಲ್ಲ) ಎಂದು ಬರೆದ ಎನ್‌ಕೆ ನೆನಪಿನ ಕೊಂಬೆಯಲ್ಲಿ ತಾನು ಮಾತ್ರ ನೇತಾಡದೆ ಸರಿದದ್ದು ವಿಪರ್ಯಾಸ. ಇದ್ದು ಮಹತ್ಮಾನಾಗಬೇಕಿಲ್ಲ ಸತ್ತು ಹುತಾತ್ಮನಾಗಬೇಕಿಲ್ಲ ಕಡೇಪಕ್ಷ ಒಂದುಕ್ಷಣ ಯೋಚಿಸಿದ್ದರೆ ಸಾಕಾಗಿತ್ತು, ಕತ್ತಲದಾರಿಯ ದಾರಿದೀಪವಾಗಿ ನನ್ನಂತಹವರಿಗೆ ತುಸುದೂರ ದಾರಿ ತೋರಿಸಬಹುದಾಗಿತ್ತು. ತಾನು ಕಟ್ಟಿಕೊಂಡಿದ್ದ ವೈಯಕ್ತಿಕತೆ ಪೊಳ್ಳು ಅನಿಸಿದಾಗಲೋ ಏನೋ ಎನ್‌ಕೆ ಸಾವಿನ ಮನೆಯ ಕದ ಬಡಿಯುವ ನಿರ್ಧಾರಮಾಡಿ ಬದುಕಿಗೆ ವಿಮುಖನಾಗಿ ಬೆನ್ನು ತಿರುಗಿಸಿದ್ದು, ಅವರೆ ಬರೆದ "ಅಗ್ನಿಮಾಂಸದ ಕುಲುಮೆಯಲಿ/ ನನ್ನ ಕಾಯಿಸಿ ಬಣ್ಣವ ಮಾಡಿ ಮರಳಿ ನನ್ನ ರೂಪನೇ ಕಡೆವ/ ಏ ನನ್ನಾಳದ ಅಳುವೇ/ ನನ್ನ ಚಿತ್ರಕ್ಕೇಕೆ ಬೆನ್ನು ಬರೆವೆ?"(ಚಿತ್ರದ ಬೆನ್ನು) ಸಾಲುಗಳನ್ನು ಗಮನಿಸಿದಾಗ ತಾನು ಹೆಚ್ಚುದಿನ ಬದುಕುವುದಿಲ್ಲ ಎಂಬುದನ್ನು ಮೊದಲೆ ತಿಳಿದಿದ್ದರೆ?ಎಂಬಂತೆ ಕವಿತೆಯು ಬೊಟ್ಟು ಮಾಡಿ ತೋರುತ್ತದೆ.

ಒಂದು ಸಾವಿಗೆ ಎಷ್ಟೆಲ್ಲಾ ಕಥೆಗಳಿರುತ್ತವೆ. ಮನುಷ್ಯ ಸತ್ತ ಮೇಲೆ ಅವನು ಬದುಕಿದ ರೀತಿ, ಅವನ ಒಡನಾಡಿಗಳಿಂದ ವ್ಯಕ್ತವಾಗುತ್ತದೆ.ಒಳ್ಳೆಯವನೊ ಕೆಟ್ಟವನೊ

ಎಂಬುದು ಸಮಾಜದ ಜನರು ಸತ್ತವನ ಸುತ್ತ ಕಟ್ಟಿಕೊಂಡ ನಿಲುವುಗಳು ಒಂದೊಂದೇ ಅರಿವಿಗೆ ಬರುತ್ತವೆ. ಭ್ರಮೆಗಳು ಯಾವತ್ತೂ ವಾಸ್ತವತೆಯನ್ನು ಹುಸಿಗೊಳಿಸಲಾರವು. ಆ ನಿಟ್ಟಿನಲ್ಲಿ ಎನ್‌ಕೆ ನಾವೆಲ್ಲಾ ಕಟ್ಟಿಕೊಂಡ 'ಭ್ರಮೆ' ಎಂಬಂತೆ ಒಮ್ಮೆ ನಮ್ಮನ್ನು ನಾವೇ ಮುಟ್ಟಿ ನೋಡಿಕೊಳ್ಳುವಂತೆ ಮಾಡಿರುವುದು ಮಾತ್ರ ವರ್ತಮಾನದ ವಿದ್ಯಮಾನ. "ಬದುಕಿನ ಬಗ್ಗೆ ಭರವಸೆ ಮೂಡಿಸಿ/ ನೀನೆ ಏಕೆ ಕಳೆದುಕೊಂಡೆ/ ತನ್ನ ತಾನೇಕೆ ಕೊಂದುಕೊಂಡೆ ತನ್ನಡಿಯ ಕತ್ತಲ ಕಳೆಯಲಾಗದ ದೀಪದಂತೆ/ ಹೋಗಿರುವೆ ಮತ್ತೆ ಬರದ ಕಡೆಗೆ ಜೊತೆಗೆ ಯಾರೂ ಬರದಷ್ಟು ದೂರ" ಎಂಬ ಸಾಲುಗಳನ್ನು ಎದೆಗಿಲಕಿಯಲ್ಲಿ ಗೀಚುವಂತೆ ಕಾಡಿದೆ. "ಮಹಾರಿನ ಮಹಾನದಿ/ ಅಕ್ಷರದ ಹನಿಹನಿಯಲು/ ಉಕ್ಕಿ ಹರಿದ ಪ್ರೇಮನದಿ/ ಬಿಡುಗಡೆಯ ಹಸಿರ ಉಸಿರ/ ಬುದ್ಧನಗೆಯ ತಾಯಿನದಿ/ ದನಿಯ ಆಲಿಸಿ, ನದಿಯ ದನಿಯ ಆಲಿಸಿ" ಎಂದು ಅಂಬೇಡ್ಕರ್ ಅವರನ್ನು ಕುರಿತು ಹಾಡಿ-ಹೊಗಳಿದ ಕವಿ ತಾನು ಮಾತ್ರ ಆ ದನಿಗಳ ಸಪ್ಪಳವನ್ನು ಕೇಳಿಸಿಕೊಳ್ಳದೆ ಹೀಗೆ ಹೊರಟುಬಿಡುವುದೇ? ಬದುಕು-ಬರೆಹದ ನಡುವಿನ ವ್ಯತ್ಯಾಸದ ಸಣ್ಣ ಎಳೆಯೊಂದು ಗೋಚರಿಸಿದಾಗ ಎನ್‌ಕೆ ಆದರ್ಶವಾಗಿ ಉಳಿಯಲಿಲ್ಲ. ಇತ್ತೀಚೆಗೆ ಬಹಳವಾಗಿ ಕಾಡಿದ ಎನ್‌ಕೆಗೆ ಒಂದು ಪತ್ರವನ್ನು ಬರೆಯುತ್ತಿದ್ದೇನೆ. ವಿಳಾಸ ಸರಿಯಿರದೆ ಬಟವಾಡೆಯಾಗದೆ ಉಳಿದಿರುವ ಸಾವಿರಾರು ಪತ್ರಗಳಿರಬಹುದು.ಅದರಲ್ಲಿ ಇದು ಒಂದಾದರೆ ತಪ್ಪೇನಿಲ್ಲ. ಏಕೆಂದರೆ, ವಿಳಾಸವಿಲ್ಲದವನಿಗೆ ಪತ್ರ ಬರೆಯುವುದು ಹೇಗೆ?

**ಎಚ್ಚರದ ಗೈರುಹಾಜರಿ**

ಎನ್‌ಕೆ ಕಾವ್ಯವನ್ನು ಕುರಿತು ಇದುವರೆಗೂ ಬಂದಿರುವ ಎಲ್ಲಾ ವಿಮರ್ಶೆಯನ್ನು ಹಾಗೂ ಅಭಿಪ್ರಾಯಗಳನ್ನು ಒಟ್ಟಿಗೆ ನೋಡಿದರೆ, ಎನ್‌ಕೆ ನಮ್ಮೊಡನೆ ಇಲ್ಲದಿರುವ ಸಂದರ್ಭದಲ್ಲಿ ಭಾವುಕ ನೆಲೆಯಲ್ಲಿ ನಾವು ಅವರ ಕಾವ್ಯವನ್ನು ನೋಡಬೇಕಾ?ಅನುಕಂಪದ ನೆಲೆಯಲ್ಲಿ ಈ ಎಲ್ಲಾ ಸಾಧ್ಯತೆಗಳು ಎನ್‌ಕೆ ಕಾವ್ಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತವೆ?ಅದರಿಂದಾಗುವ ಅಪಾಯಗಳೇನು?ಈ ಕುರುಡು ಮೋಹವನ್ನು ದಾಟುವುದು ಹೇಗೆ?ಎನ್‌ಕೆ ಕಾವ್ಯವನ್ನು ಕುರಿತು ಮಾತಾಡುತ್ತಲೇ ಸ್ವತಃ ತಮ್ಮನ್ನು ತಾವು ಹೊಗಳಿಕೊಳ್ಳುವಷ್ಟರ ಮಟ್ಟಿಗಿನ ಅಪಾಯಗಳೇನು?ಅಸ್ಪೃಶ್ಯತೆಯ ನೋವಿನಲ್ಲೂ ತನ್ನ ಕುಲಮೀಮಾಂಸೆಯ ತುಡಿತಗಳನ್ನು ಕಾವ್ಯತತ್ವವಾಗಿ ರೂಪಿಸುವಲ್ಲಿ ಎನ್‌ಕೆಯ ಕಾವ್ಯದಲ್ಲಿ ಸಾಧ್ಯತೆಗಳಿವೆಯೇ?ಎಂಬ ಪ್ರಶ್ನೆಗಳನ್ನಿಟ್ಟುಕೊಂಡೇ ಎನ್‌ಕೆಯನ್ನು ಅವರ ಕಾವ್ಯಮಾರ್ಗದ ಮೂಲಕವೇ ಎದುರುಗೊಳ್ಳಬೇಕಾಗಿದೆ.ಆಶಯವನ್ನೇ ಆಕೃತಿಯಾಗಿಸುವ ಸಮಪಾತಳಿಯಲ್ಲಿ ಬರೆಯುವ ಎನ್‌ಕೆ ತಣ್ಣನೆಯ ತೀವ್ರತೆ, ಆದ್ರ್ರ ಮುಗ್ಧತೆ, ಸುಡುವ ಮಂಜಿನ ಮೌನದಲ್ಲಿ ದಲಿತತ್ವದ ಮಾರ್ಗವೊಂದನ್ನು ಶೋಧಿಸಲು ಪ್ರಯತ್ನಿಸುತ್ತಾರೆ. ಕೆ.ಬಿ.ಸಿದ್ದಯ್ಯನವರ 'ಬಕಾಲ' ನನ್ನ ಕಾಡುವ ಕೃತಿಯೆಂದು

ಸಾಪ್ತಾಹಿಕ ವಿಜಯದಲ್ಲಿ ಹೇಳಿಕೊಂಡ ಕವಿಯು ಅಸ್ಪಶ್ಯತೆಯ ಒಳಗಿರುವ ಜಾತಿಸೂತಕವನ್ನು ಕವಿತೆಯಾಗಿಸಲು ಸಾಧ್ಯವಾಗಿಲ್ಲ. ಆದರೆ, ಆ ಸಾಧ್ಯತೆಗಳ ಕುರುಹುಗಳನ್ನು ಅವರ ಕವಿತೆಗಳಲ್ಲಿ ಅಲ್ಲಲ್ಲಿ ಗುರ್ತಿಸಬಹುದು. ಕುಲಪುರಾಣಗಳ ಒಳಗುದಿಯಲ್ಲಿರುವ ಸ್ವಂತಿಕೆಯನ್ನು ಎನ್‌ಕೆ ಕಾವ್ಯ ಗಟ್ಟಿಯಾಗಿ ಪ್ರಕಟಿಸುವುದಿಲ್ಲ. ದಲಿತ ಮೀಮಾಂಸೆಯನ್ನು ಕಟ್ಟಬಯಸುವ



ಎನ್‌ಕೆ ಕಾವ್ಯವು, ಕುಲಮೀಮಾಂಸೆಯ ಸಾಧ್ಯತೆಯೊಂದಿಗೆ ಸಶಕ್ತವಾದ ದಲಿತ ಮೀಮಾಂಸೆಯನ್ನು ಕಟ್ಟುವಲ್ಲಿ ಗೈರುಹಾಜರಾಗಿರುವುದು ಅವರ ಕವಿತೆಗಳ ಒಡಲಲ್ಲಿ ಕಾಣಬಹುದು. ಇಕ್ರಲಾ ವದೀರಾ' ಎಂದು ಬೀದಿಯಲ್ಲಿ ಅಬ್ಬರಿಸಿದ ಆಕ್ರೋಶದ ಧಾಟಿಯಿಂದ ಪಾರಾಗಿ ತನ್ನದೇ ದಾರಿಯನ್ನು ಮತ್ತು ದಲಿತತ್ವದ ಮರುನಿರೂಪಣೆಯನ್ನು ಅನ್ವೇಷಿಸುವ ಹೊರಳುದಾರಿಯಲ್ಲಿ ಹೊಸ ನುಡಿಗಟ್ಟುಗಳ ಮೂಲಕ, ರೂಪಕಗಳ ಮೂಲಕ ಕಾವ್ಯದ ತಾತ್ವಿಕತೆಯನ್ನು ಮಂಡಿಸುತ್ತವೆ. ಇಷ್ಟೆಲ್ಲಾ ಪ್ರಶ್ನೆಗಳನ್ನು ಇಟ್ಟುಕೊಂಡೆ ಎನ್‌ಕೆ ಕಾವ್ಯವು ಕಟ್ಟಿಕೊಡಬಹುದಾದ ತಾತ್ವಿಕತೆ ಏನೆಂಬುದನ್ನು ಮುಂದೆ ನೋಡೋಣ.

**ಕಾವ್ಯದ ಕುಲುಮೆಯಲಿ**

ಎನ್‌ಕೆ ರೂಪಕ, ಪ್ರತಿಮೆಗಳ ಪಾಕವನ್ನು ಎರಕ ಹೊಯ್ದಂತೆ ಕಾವ್ಯ ಕಟ್ಟುವ ಕಲೆಗಾರ.ಕವಿತೆಯೇ ಈತನನ್ನು ಆವರಿಸಿಕೊಂಡು ಬಿಟ್ಟಿದೆಯೇನೋ ಅನ್ನುವಷ್ಟು ತೀವ್ರವಾಗಿ, ಆದ್ರವಾಗಿ ಬರೆದ ಕವಿ. ಹತ್ತಾರು ಸಾಲುಗಳಲ್ಲಿ ಹೇಳುವುದನ್ನು ಒಂದೇ ಒಂದು ರೂಪಕದಲ್ಲಿ ಹೇಳಿಬಿಡುವ ಪ್ರತಿಭೆ ಎನ್‌ಕೆಯದು. ಏಕಲವ್ಯ ಧ್ಯಾನದಂತೆ ಕಾವ್ಯವನ್ನು ಧ್ಯಾನಿಸಿದ ಕವಿ ಎನ್‌ಕೆ.ಈ ಕಾರಣಕ್ಕಾಗಿಯೇ ಸಮಕಾಲೀನ ಕವಿಗಳ ಸಾಲಿನಲ್ಲಿ ಎನ್‌ಕೆ ಭಿನ್ನವಾಗಿ ಗುರುತಿಸಿಕೊಂಡಿದ್ದು, ಹೊಸತಲೆಮಾರಿನ ಯಾವ ಕವಿಗಳೊಂದಿಗೂ ಹೋಲಿಸಲು ಸಾಧ್ಯವಾಗದ ಹಾಗೆ ತನ್ನ ಕಾವ್ಯಮಾರ್ಗವನ್ನು ರೂಪಿಸಿಕೊಂಡ ಕವಿ ಮತ್ತೆ ಸಮಕಾಲೀನ ಕವಿಗಳು ಹೊಟ್ಟೆಕಿಚ್ಚು ಪಟ್ಟುಕೊಳ್ಳುವ ಹಾಗೆ ಕವಿತೆ ಬರೆದರು.

"ಎನ್‌ಕೆ ಕಾವ್ಯವು ಅಂಬೇಡ್ಕರ್ ವೈಚಾರಿಕ ಎಚ್ಚರ, ಬುದ್ಧನ ತಾಯಕರುಣೆ, ಅಲ್ಲಮನ ಆನುಭಾವಿಕ ಬೆಡಗು, ಲಂಕೇಶರ ವೈಯಕ್ತಿಕ ತಳಮಳ ಮತ್ತು ಅಂತರ್ಮುಖತ್ವಗಳೆಲ್ಲವೂ ಸಂಗಮಗೊಂಡು ಹುಟ್ಟಿದ್ದು ಇಲ್ಲಿನ ಕಾವ್ಯದ ಕಸುವೆಂದರೆ; ರೂಪಕಗಳ ನುಡಿಗಟ್ಟು, ಭಾವನಾತ್ಮಕ ತೀವ್ರತೆ, ದಾರ್ಶನಿಕ ಜಿಗಿತ ಹಾಗು ಮೇರೆಯಿಲ್ಲದ ಜೀವ ಪ್ರೀತಿ.ಇವು ಎನ್‌ಕೆಯನ್ನು ಸಮಕಾಲೀನ ಕವಿಗಳಲ್ಲಿ ವಿಶಿಷ್ಟರನ್ನಾಗಿಸಿದವು" ಎಂದು ರಹಮತ್ ತರೀಕೆರೆ ಗುರ್ತಿಸಿದ್ದಾರೆ. ಇದನ್ನು ಹೊರತುಪಡಿಸಿ ಎನ್‌ಕೆ ಕಾವ್ಯದ ಆಳದಲ್ಲಿ ವಚನ, ಜಾನಪದ, ಮಂಟೆಸ್ವಾಮಿ, ಮಾದೇಶ್ವರ, ಸೂಫಿ ಕಾವ್ಯದ ಬನಿಯು ಕಂಡುಬರುತ್ತದೆ. 'ಕತ್ತಲೆಗೆ ಕಾಯುವುದಿಲ್ಲ' ಕವಿತೆಯಲ್ಲಿ ಬಂದ ಪಾದ್ರಿಯ ಮಾತುಗಳು ಬದುಕಿನ ತಾತ್ವಿಕತೆಯನ್ನು ಗಟ್ಟಿಯಾಗಿ ಹೇಳುತ್ತವೆ. 'ಹೊಸ ಸುದ್ದಿ ತಂದಿರುವೆ' ಕವಿತೆಯ ಲಯ, ಬೆಡಗು ಸಾಂದ್ರಗೊಂಡ ವಿನ್ಯಾಸವು ವಚನ, ಸೂಫಿ, ಜಾನಪದದಿಂದ ಕೂಡಿದೆ.ಅವ್ವನ ಮೂಲಕ 'ಅವ್ವ...ಅವ್ವಳ್ಳಿ....ಅಲ್ಲಿ ಸೂರ್ಯನಿಲ್ಲದ ಬೆಳಗು, ಚಂದ್ರನಿಲ್ಲದ ಇರುಳು' ಎಂದು ಶೂನ್ಯದರ್ಶನವನ್ನು ದಾರ್ಶನಿಕ ಜಿಗಿತದೊಂದಿಗೆ ಮಂಡಿಸುತ್ತದೆ.ಇಂತಹ ಕಡೆಯಲ್ಲಿ ಎನ್‌ಕೆ ಎತ್ತರದಲ್ಲಿ ನಿಲ್ಲುವುದು.

**ಅವ್ವ : ದಲಿತ ಮೀಮಾಂಸೆಯ ಪ್ರತೀಕ**

"ಒಳಗೆ ಬರುವಾ ಮೊದಲು/ ನಿನ್ನ ಮೆದುಳನು ಬಗೆದು ನನ್ನ ನಾಯಿಗೆ ಹಾಕು/ ಅಲ್ಲೇ ಲದ್ದಿಯಿದೆ/ ಯಾರೂ ಮುಟ್ಟದ ನಿನ್ನ ಧ್ಯಾನದ ಲದ್ದಿ/ ಒಳಗೆ ಯಾರು

ಇಲ್ಲ/ ಅದನೆ ತಿನ್ನು" ಎಂಬುದು ಶತ-ಶತಮಾನಗಳ ಜಾತಿಮನಸ್ಸಿನೊಳಗೆ ನಡೆದ ಸಂಘರ್ಷವು ಆಧುನಿಕ ತಂತ್ರಜ್ಞಾನದ ಹೊತ್ತಿನವರೆಗೂ ಅಸ್ಪೃಶ್ಯತೆಯ ಬೇರುಗಳು ಬದಲಾಗದಿರುವ ಸ್ಥಿತಿಯನ್ನು ಹಾಗೂ ಮರುರೂಪಗೊಳ್ಳುತ್ತಿರುವ ಜಾತಿಯ ಚಿತ್ರಣವನ್ನು ಯಾವುದೆ ಆಕ್ರೋಶವಿಲ್ಲದೆ ವಿಡಂಬಿಸುತ್ತದೆ. ಮನುಷ್ಯರನ್ನು ಪ್ರಾಣಿಗಿಂತಲೂ ಕೀಳಾಗಿ ಕಾಣುವವರನ್ನು 'ಕೊಲ್ವ ಬತ್ತಳಿಕೆ ಬಿಲ್ಲು ಬಾಣವನು ಅಲ್ಲೇ ಬಿಟ್ಟು ಬಾ' ಎಂಬಂತೆ ಅದೆಷ್ಟು ದೃಢವಾಗಿ ಪ್ರಶ್ನಿಸುತ್ತದೆ.ನಿಮ್ಮ ಮೆದುಳಿನ ಕುತಂತ್ರಗಳಿಗಿಂತ ನಾಯಿಯ ಪ್ರಾಮಾಣಿಕತೆಯೇ ಬಹಳ ಮುಖ್ಯವಾದುದು. ಹಾಗಾಗಿ ಮನುಷ್ಯತ್ವ ಇಲ್ಲದ ಮೆದುಳು ಲದ್ದಿಗೆ ಸಮಾನವಾದುದು. ಒಳಗೆ ಬರುವ ಮೊದಲು ಮಾನವತೆಯಿಲ್ಲದ, ಪ್ರೀತಿಯಿಲ್ಲದ, ಕರುಣೆಯಿಲ್ಲದ, ಸಮಾನತೆಯಿಲ್ಲದ ಆ ಮೆದುಳನ್ನು ನನ್ನ ನಾಯಿಗೆ ಹಾಕು; ಇವೆಲ್ಲವನ್ನು ಪಡೆದುಕೊಂಡು ಮನುಷ್ಯನಾದ ಮೇಲೆ ಒಳಗೆ ಬಾ ಎನ್ನುವ ಲೋಕವಿವೇಕವನ್ನು ವ್ಯಕ್ತಪಡಿಸುತ್ತದೆ.ಜಗದ ಜನರ ನಾಟಕೀಯತೆಯನ್ನು ಕಂಡು ಎದೆಯಲಿ ನೋವಿನ 'ಮಗುವನು ಬಿಟ್ಟು/ ತೂಗಲು ನೆನೆಪಿನ ತೊಟ್ಟಿಲ ಕೊಟ್ಟು' ಎಂದು ಮಾನವ ಸ್ವಭಾವದಲ್ಲಿ ಅಡಗಿರುವ ಕ್ರೌರ್ಯ, ಹಿಂಸೆಯ ಮುಖಗಳನ್ನು ನೋಡುವ ಕ್ರಮವೊಂದು ಅಭಿವ್ಯಕ್ತಗೊಂಡಿದೆ. 'ಎದೆ' ತಾಯ್ತನದ ರೂಪವಾಗಿ ನೋವಿನ ಮಗುವನ್ನು ನೆನಪಿನ ತೊಟ್ಟಿಲಲ್ಲಿ ತೂಗುತ್ತಾ ಕನಸು ಕಾಣುವ ಹೊಂಬಲವಿದೆ.ಕ್ರೌರ್ಯ, ಹಿಂಸೆ, ಶೋಷಣೆ, ದಬ್ಬಾಳಿಕೆ ಮಾಡುತ್ತಿರುವ ಎಲ್ಲರನ್ನು ಕ್ಷಮಿಸುವ ಅವ್ವ ಮಗುನೀಡುವ ನೋವನ್ನು ಸಹಿಸಿ ಆ ನೆನಪಿನ ತೊಟ್ಟಿಲಲಿ ಕನಸನ್ನು ಜೀಕುತ್ತಿರುತ್ತಾಳೆ.ಎದೆಯಲಿ ನೋವಿದ್ದರೂ ಮುಖದಲ್ಲಿ ನಗುವಿರುವ ಮಗುತನವೇ ದಲಿತತ್ವದ ಪ್ರತಿರೂಪ. ಇಲ್ಲಿ ಮೆದುಳು ಮತ್ತು ಎದೆಯು ಮಾನವನ ಅಂಗಗಳಾದರೂ ಮೆದುಳು ನೀಡುವ ಬುದ್ಧಿವಾದಕ್ಕಿಂತ ಹೃದಯ ನೀಡುವ ಸಾಂತ್ವನವೇ ಸಮತೆ ಮತ್ತು ಮಮತೆಯಾಗಿ ಉಸಿರಾಗುವುದು.ಇಂತಹ ಉಸಿರನ್ನು ಮೆದುಳು ನೀಡುವ ಕೌರದಿಂದ ಉಳಿಸಿಕೊಂಡು ಉಸಿರಾಗಿ ಬದುಕುತ್ತಿರುವುದೇ ದಲಿತತ್ವವಾಗಿದೆ.

ಅವ್ವ ಕೇವಲ ಮಹಿಳೆಯಲ್ಲ. 'ತಾಯ್ತನ, ಹೆಂಡತಿತನ, ದಲಿತತನ'ದ ನಾಡಿಮಿಡಿತವಾಗಿದ್ದಾಳೆ.ಆಕೆಯ ವೇದನೆಯನ್ನೆ ಸಂವೇದನೆಯಾಗಿಸಿ ಕಾವ್ಯತತ್ವವನ್ನು ಕಟ್ಟಬಲ್ಲ ಕವಿ, ನೋವಿನ ಪರಿಭಾಷೆಯಿಂದಾಗಿ ಭಾವುಕತೆಯಿಂದ ಭಾಷೆಯನ್ನು ಅಳುವಂತೆ ಮಾಡುವುದಿಲ್ಲ. ಬದಲಾಗಿ ತಮ್ಮದೇ ರೂಪಕ ಶಕ್ತಿಯಿಂದ ತನ್ನೆದುರಿನ ಲೋಕಕ್ಕೆ ದಲಿತತನದಿಂದಲೇ ದಾಟಿಸುತ್ತಾರೆ. 'ಅವ್ವಾ ಹೊಲೆಯವ್ವ ಮಾದಿಗಿತ್ತಿ' ಎನ್ನುವಲ್ಲಿ ಅವಮಾನದ ರೂಪವಾಗಿ ಕಂಡರೂ ತನ್ನ ಜನಾಂಗದ ನೆನಪಿನಲ್ಲಿ ಸ್ವಾಭಿಮಾನದ ಪ್ರತೀಕವಾಗಿ ಅಭಿವ್ಯಕ್ತಗೊಂಡಿದೆ. "ಎಂಥ ನಾತವೆ ತಾಯಿ ನಿನ್ನ ರಕುತ ಓಡಿಬಂದೆವು ನಾಯಿ ಮೈಯ ನೆಕುತ ದಿನದ ಮಾಳಿಗೆಯೊಳಗೆ ಉಂಡ ಊರಿನ ಉಸಿರು/ ಆಚೆಗಟ್ಟಿತು ನನ್ನ ಕೇಳಿ ಹೆಸರು ಜಗಕೆ ತೊಡೆತೆರೆದ ಮುಂಡೆಯಂತೆ! ಇವರೂ ಬೈದರವ್ವ. ನಿನ್ನ ಬೆವರೊಳಗೆ ಈಜಿದವರು.....(ಹೊಸಸುದ್ದಿ ತಂದಿರುವೆ) ಎನ್ನುವಲ್ಲಿ ಕವಿ ಅಸ್ಪೃಶ್ಯತೆಯ ಕರಾಳಮುಖವನ್ನು ಹಾಗೂ ತನ್ನ ತಾಯಿಯನ್ನು ಸಮಾಜವು ನಡೆಸಿಕೊಂಡಿರುವ ರೀತಿಯಲ್ಲಿ ದುಃಖವನ್ನು ಮೀರಿದ ದಲಿತತ್ವವನ್ನು ಕಾವ್ಯದಲ್ಲಿ ಹುಡುಕುತ್ತಾರೆ. ಯಾವುದೆ ಆಕ್ರೋಶವಿಲ್ಲದೆ ತಣ್ಣಗೆ ರೂಪಕ-ಪ್ರತಿಮೆಗಳಲ್ಲಿ ಅಭಿವ್ಯಕ್ತಿಸುವ

ಮಾದರಿಯೊಂದು ಸಮಕಾಲೀನ ಕವಿಗಳಲ್ಲಿ ಎನ್‌ಕೆಯನ್ನು ವಿಶಿಷ್ಟಗೊಳಿಸಿದವು. 'ಹೆತ್ತ ರಕ್ತದ ಮೇಲೆ/ ಸತ್ತು ಹೋದಳು ತಾಯಿ/ ಇರುಳ ಸುರುಳಿಯ ನಡುವೆ ಕರುಳ ಬಿಟ್ಟು/ ಅಳುತಲಿದೆ ಮಗು' (ರಕ್ತಗಮಲೆ), 'ಹರಿದ ಸೀರೆಯ ತೂರಿ ನನ್ನ ಪುಟ್ಟ ಕಾಲುಗಳು/ ಅವ್ವನತೊಡೆಗೆ ತಗುಲಿದಾಗ ಕುಡಿದು ಸತ್ತ ಅಪ್ಪನ ನೆನೆದು ಬೆಚ್ಚಿದ್ದಳು'(ಅವ್ವ ಮತ್ತು ಸೀರೆ), 'ಮಳೆ ಬಂತು ಮಳೆ ಬಂತು ಮಕ್ಕಳಿರಾ....ಹೊಕ್ಕುಳ ಬಳ್ಳಿಲೆ ಹೊಕ್ಕಾಳಿರಾ (ರಂಗೋಲಿಯೊಳಗೆ), 'ಹೊಲಸ ಕೆರೆ ತೊರೆದು ವಲಸೆ ಹೋದ ಹಕ್ಕಿ ನಾನು/ ಮತ್ತೆ ಬಂದಿರುವೆ ಮೈಸುಟ್ಟು/ ಅವ್ವ ನಿಂತೆಯಿದ್ದಾಳೇ/ ನೀರಿಲ್ಲದ ಕೆರೆಯಲ್ಲಿ ಒಣಗಿದ ಏಡಿಯಂತೆ ನನ್ನ ನೋಡದೆ (ಅವ್ವ ನಿಂತೆ ಇದ್ದಾಳೆ) ಅವ್ವನ ಕುರಿತು ಮಾತಾಡುವ ಬೆನ್ನಲ್ಲೆ ಅಪ್ಪನ ನೆರಳುಗಳು ಕುಣಿದುಬಿಡುತ್ತವೆ. ಸಾಮಾನ್ಯ ಹೆದ್ದೊಬ್ಬಳ ನೋವು- ನಲಿವಿಗಿಂತ ದಲಿತ ಮಹಿಳೆಯ ನೋವು-ನಲಿವುಗಳು ಭಿನ್ನವಾಗಿರುತ್ತವೆ. ಇಲ್ಲಿನ ಕವಿತೆಗಳಲ್ಲಿರುವ ಅವ್ವ ದಲಿತತ್ವದ ರೂಪವಾಗಿ, ಮಗನ ಮತ್ತು ಗಂಡನ ಸಿಟ್ಟಿಗೂ, ಸಾವಿಗೂ ಪ್ರತಿಮೆಯಾಗಿದ್ದಾಳೆ. ಅಪ್ಪನನ್ನು ಕಳೆದುಕೊಂಡು ಹೊಲಸಕೆರೆಯ ತೊರೆದು ಹೋದ ಮಗ ಮತ್ತೆ ಬಂದಿದ್ದಾನೆ. ಕಿಟಕಿ ಕಂಬಿಗಳಲ್ಲಿ ಬಂಧಿತವಾಗಿರುವ ಅವ್ವನ ಕಣ್ಣಲ್ಲಿ ನೀರು ಸೇಂಧಿ ತೊಟ್ಟಿಕ್ಕುವಂತೆ ಇರುವ ಚಿತ್ರ ಉಹೆಗೂ ಮೀರಿದ್ದು. ಇದನ್ನು ಪದಗಳಲ್ಲಿ ವಿವರಿಸಲು ಸಾಧ್ಯವೇ? ಹೀಗಾಗಿ ಅವ್ವ ಕೇವಲ ಹೆಣ್ಣಲ್ಲ. ಒಬ್ಬ ಮಹಿಳೆಯಾಗಿ, ಹೆಂಡತಿಯಾಗಿ, ತಾಯಿಯಾಗಿ, ದಲಿತ ಮಹಿಳೆಯಾಗಿ ತನ್ನ ನೋವಿನ ಸಂಕಥನದ ಸಂವೇದನೆಯಾಗಿದ್ದಾಳೆ.ಇಂತಹದನ್ನೆ ಕವಿತೆಯಾಗಿಸುವಲ್ಲಿ ಎನ್‌ಕೆ ಗೆದ್ದಿರುವುದು.

"ನಿದ್ದೆ ನುಂಗಿದ ಯಜಮಾನರ ನೆಲಗಳಲ್ಲಿ ಅವ್ವ ಸೀರೆ ಎತ್ತಿ ದುಡಿಯುತ್ತಾಳೆ ಅಪ್ಪ ತಲೆಬಾಗಿ ಕಣ್ಣೀರ ಭಾರ ಹೊರುತ್ತಾನೆ/ ತಂಗಿ ಒಲೆಮುಂದೆ ಮೇಣದಂತೆ ಕರಗುತ್ತಿದ್ದಾಳೆ"(ಗಡಿಯಾರವಾಗುವವನು) ಅಸ್ಪೃಶ್ಯತೆಯ ಕರಾಳ ರೂಪಗಳಲ್ಲಿ ಬೆಂದವರು ಬದುಕನ್ನು ಬದುಕುವ ನೆಲೆಗಳಲ್ಲಿ 'ಚಿತ್ರದ ಬೆನ್ನು' ಯಾವುದು ಇರಬಹುದು? ಅಸ್ಪೃಶ್ಯತೆ ಎನ್ನುವುದೇ ಗುರುತಿರದ ಚಿತ್ರರಕ್ತ-ಬೆವರು ಸುರಿಸಿ ದುಡಿವ ವರ್ಗವೊಂದರ ಚಿತ್ರದ ಬೆನ್ನನ್ನು ಯಾರೂ ಗುರುತಿಸಲಿಲ್ಲ. 'ಈ ಕರಿಯ ಬೆನ್ನಲ್ಲಿ/ ಸದಾ ಉರಿ ಉರಿ/ ಹಳೆಯ ಗಾಯಗಳು ನಗುತ್ತಿರಬಹುದೇ.. ಈಕರಿಯ ಬೆನ್ನಿಗೆ ಶತ-ಶತಮಾನಗಳ ನೋವಿನ ನೆನಪಿದೆ.ಎಷ್ಟೆಲ್ಲಾ ಭಾರವನ್ನು ಹೊತ್ತುಕೊಂಡು ಸಹಿಸಿದೆ. ಹಾಗಾಗಿ ಕರಿಬೆನ್ನು ನೋವಿನ ಪರಂಪರೆಯ ಕೊಂಡಿಯಾಗಿದೆ. ಆ ಬೆನ್ನಿನ ಹಿಂದೆ ಇರುವ ನೋವಿನ ಸಂಕಥನವೇ ದಲಿತ ಮೀಮಾಂಸೆ, ಇರುವೆಯ ಚಲನಶೀಲತೆ, ಹುಳುವಿನ ಮೃದುತ್ವ, ನೂಲಿನ ಗಾತ್ರದ ಕಡ್ಡಿಯ ಜೀವಚೈತನ್ಯವನ್ನು ಅದಮ್ಯ ಪ್ರೀತಿಯಿಂದ ಕಾಣುವ ಕವಿಗೆ ತನ್ನಾಳದ ಅಳುವಿಗೆ ಇರುವ ಬೆನ್ನಿನ ಹೊರೆಯನ್ನು ಯಾರು ಇಳಿಸಲಾರದ ಇಳಿಸಲಾಗದ ದುಸ್ಥಿತಿಗೆ ಮರುಗುತ್ತಾರೆ. ಈ ಕರಿಬೆನ್ನಿಗೆ ಆದ ಗಾಯಗಳ ನೆನಪಿನಲ್ಲಿ ತಣ್ಣಗೆ ಸುಡುವ ಕನಸನ್ನು ಪೊರೆಯುತ್ತಿದ್ದಾರೆ. ಮನುಷ್ಯ ಸಹಜ ವರ್ತನೆಗಳಾದ ನಗು-ಅಳು ವರ್ತಮಾನದಲ್ಲಿ ಅಭಿನಯಿಸುತ್ತಿರುವುದನ್ನು ಕಂಡ

ಕವಿ ಗೆಳತಿಯನ್ನು ಕರೆದುಕೊಂಡು “ಎಲ್ಲಾದರು ಅಳು ಅಂಟಿಕೊಂಡಿದ್ದರೆ ಕಣ್ಣುಗಳಿಗೆ ಬಸಿದುಕೊಳ್ಳೋಣ/ ಚೂರಾದ ಎದೆಗಳನ್ನು ಆಯೋಣ/ ಎಲ್ಲಾದರು ಹದವಿದ್ದರೆ, ಅಲ್ಲಿ ಬೀಜಗಳಾಗಿ ಮೊಳೆಯೋಣ” ಎಂದು ಅಭಿವ್ಯಕ್ತಿಸುವ ರೀತಿ ಮನುಷ್ಯತ್ವ ಅನ್ವೇಷಿಸುವ ವಿಭಿನ್ನ ಮಾರ್ಗವಾಗಿದೆ.



'ಎಲ್ಲಾದರೂ' ಎಂಬುದು ಮತ್ತೆ ಮತ್ತೆ ಬಂದು ಇಡೀ ಕಾವ್ಯವನ್ನು ಭಾವತೀವ್ರತೆಗೆ ಆವರಿಸಿ ಹೊಸಹುಟ್ಟಿಗಾಗಿ ಹಾತೊರೆಯುವ ಜೀವಪ್ರೀತಿಯನ್ನು ವ್ಯಕ್ತಗೊಳಿಸುತ್ತದೆ. ಚೂರಾದ ಎದೆಗಳನ್ನು ಹದಮಾಡಿ ಬಿತ್ತುವ ಆಶಯವನ್ನು ಆಕೃತಿಯಾಗಿಸಲು ಸಶಕ್ತನಾಗಿದ್ದಾನೆ ಕವಿತೆಯ ನಾಯಕ. ಇಲ್ಲಿ ಬರುವ ಕವಿತೆಯ ನಾಯಕ ಹೇಡಿಯಲ್ಲ. ಬದಲಾಗಿ ಎದೆಗಾರ, ಛಲಗಾರ. 'ಅಸ್ಪೃಶ್ಯ...ಹೌದು! ನಾನು ವಿದ್ಯುತ್ತಿನ ಹಾಗೆ ನಿಮ್ಮ ತಣ್ಣನೆಯ ಸ್ಪರ್ಶಕ್ಕೆ ಸಿಕ್ಕಲಾರೆ' ಎಂಬಲ್ಲಿ “ಹೌದು” ಎಂದು ದೃಢವಾಗಿ ಹೇಳುವ ಕವಿ ತನ್ನ ದಲಿತತನವನ್ನು ಅಭಿವ್ಯಕ್ತಿಸುವಾಗ ವಿಷಾದಕ್ಕೆ ಒಳಗಾಗುತ್ತಾನೆ. 'ಅವನ ಜಾರುವ ಸೆರಗಿಗೆ ಕೊರಗಿ ನನ್ನೊಡಲ ಗೋಳ ಗುಮ್ಮಟದೊಳಗೆ ಗಳಗಳನೆ ಅಳುತ್ತಿರುವ ಅಪ್ಪನ' ಮುತ್ತುಗಳ ಹುಡುಕುವ ಕವಿ ತಾನು ನುಸುಳಿ ಬಂದ ಕೋಟೆಗಳ ಕಿಂಡಿಗೆ ತನ್ನನ್ನೇ ತುರುಕಿ ಮುಚ್ಚುತ್ತಿರುವ ಈ ಸಮಾಜದ ನಡೆಗೆ ವಿಷಾದಗೊಳ್ಳುತ್ತಾನೆ. ಈ ವಿಷಾದದ ಸ್ಥಾಯಿಯೇ ನಿಜವಾದ ದಲಿತ ಮೀಮಾಂಸೆಯನ್ನು ರೂಪಿಸುತ್ತಿರುವುದು ಹಾಗೂ ಜಗತ್ತನ್ನು ಮುನ್ನಡೆಸುತ್ತಿರುವುದು. 'ಮುಟ್ಟಲಾರದ ಮಾತ ಮುಟ್ಟಿ ಹಾಡಾಗಿಸುವ ನನ್ನ ತಳ್ಳಿದ ನೆಲದಿ ಎದೆಗವಚಿ ಮುತ್ತಿಡುವ' ಮಾನವೀಯ ಗುಣವೇ ದಲಿತತತ್ವವನ್ನು ಉನ್ನತೀಕರಣಗೊಳಿಸಿದ್ದು.

ಇರುವೆ ಮತ್ತು ನವಿಲು : ದಲಿತರ ಅಸ್ಮಿತೆಯ ರೂಪಗಳು

ಇರುವೆಯ ಕ್ರಿಯಾಶೀಲ ಗುಣವೂ ಹಾಗೂ ನವಿಲು ಕನಸಿನ ಪ್ರತಿರೂಪವಾಗಿಯೂ ದಲಿತರ ಅಸ್ಮಿತೆಗಳು ಇರುವೆಯ ಕ್ರಿಯಾಶೀಲಗುಣವನ್ನು ಅಸ್ಪಶ್ಯರ ದುಡಿಮೆಯಲ್ಲಿ ಕಾಣಬಹುದು.ದಿನವಡೀ ದುಡಿದರು ದುಗ್ಗಾಣಿ ಸಿಗದ ಜೀತದ ಕರಾಳ ಮುಖಗಳ ನೆನಪುಗಳಲ್ಲಿ ವರ್ತಮಾನದಲ್ಲಿ ಕನಸನ್ನು ಕಾಣುತ್ತಿರುವುದು ಸ್ವಷ್ಟ ಕುಸುಮಬಾಲೆಯಲ್ಲಿ ಚೆನ್ನನ ಬರುವಿಕೆಗೆ ಕಾಯುವಂತೆ, ಮುಂದೊಂದು ದಿನ ನಮಗೂ ಒಳ್ಳೆಯ ಕಾಲ ಬಂದೇಬರುತ್ತೆ ಎಂಬ ನಂಬಿಕೆಯೇ ಇಲ್ಲಿಯವರೆಗೂ ಮುನ್ನಡೆಸಿಕೊಂಡು ಬಂದಿರುವುದು. ಹಸಿವು, ಅಸಹಾಯಕತೆ, ನೋವು, ಅವಮಾನ, ಸಿಟ್ಟು ಎಲ್ಲವೂ ಇಲ್ಲಿ ತಮಟೆಯ ಸದ್ದಿನಲ್ಲಿ ಲೀನವಾಗಿಬಿಡುವ ದಲಿತತನವನ್ನು ಒಡಲಲ್ಲಿರಿಸಿಕೊಂಡಿದೆ. ಹಸಿವು ಒಡಲ ಕಾಡೊಳಗಿಳಿದು ಕೂಗುವಾಗ, ಹಸಿವಿನ ಹಿಮತಂತಿಯಿಂದ ನಮ್ಮನ್ನು ಕಟ್ಟಿರುವಾಗ, ಕೂಳಿಗಾಗಿ ನೆಲದ ತುಂಬೆಲ್ಲಾ ಹರಿವ ಇರುವೆಯಂತೆ ಹಸಿದ ಈ ಜನರು ಕಣಜಗಳ ಕಣಿವೆಯಲ್ಲಿ ಒಂಟಿಯಾಗಿ ಕಾಳಿಗೆ ಕೂಗಿದರು ಕಾಳು ದೊರೆಯುವುದಿಲ್ಲ. 'ಹಸಿವಿನ ಬಿಸಿಗೆ ನೆಲಕುದ್ದು ಜಲಕುದ್ದು/ ತಮ್ಮಟೆಯ ಸದ್ದು/ ಆಕಾಶ ಪಾತಾಳ ತಾಳಲಾರದ

ತಾಳ/ ಹಸಿವೆ ಕುಣಿತ' ಮಾಂಸದಂಗಡಿಯ ನವಿಲ ಹಸಿವಿನ ನರ್ತನ ರೊಮ್ಯಾಂಟಿಕ್ ಅಲ್ಲ. ತಿನ್ನುವುದು ಕೆಲವರಿಗೆ ಫ್ಯಾಶನ್ ಆಗಿದೆ. ಆದರೆ ಹಸಿವಿನ ಪರಂಪರೆಯ ನೋವಿನವರಿಗೆ ತಿನ್ನುವುದು ಜೀವ ಉಳಿಸಿಕೊಳ್ಳುವ ಜೀವನ್ಮರಣದ ಪ್ರಶ್ನೆಯಾಗಿದೆ.ಕೊಳೆತ ನಗು-ಅಳುವನ್ನೆ ತಿನ್ನುವಾಗ ತಮಟೆಯ ಸದ್ದು ಹಸಿವನ್ನು ಮರೆಸಿ ಜೀವನೋತ್ಸಾಹವನ್ನು ತುಂಬಿ ಸಲಹುತ್ತಿದೆ. ಹಾಗಾಗಿ ತಮಟೆ ಹಸಿವನ್ನು ಮುಂದುದೂವ ವಾದ್ಯವಾಗಿಯೂ ಮತ್ತೆ ನಮ್ಮ ಹಸಿವಿಗೆ ಕಾರಣರಾದವರ ವಿರುದ್ಧ ಪ್ರತಿರೋಧದ ಅಸ್ತ್ರವಾಗಿ ಏಕಕಾಲದಲ್ಲಿ ಆಕರವಾಗಿ ಬಿಡುತ್ತದೆ.

ವಿಳಾಸವಿಲ್ಲದ ಪತ್ರ : ಎನ್. ಕೆ. ಕಾವ್ಯ ೧೮೫

'ಇರುವೆ ಹೆಜ್ಜೆಗಳಲ್ಲಿ/ ಹೊಲಗದ್ದೆಗಳು ಮೂಡಿ/ ವೃಕ್ಷ ಪರ್ವತ ಬೇರು/ ನಭ ತಾಕಿ ಉಸಿರಾಡಿ ಊರಾಯಿತು/ ಹರಿಯುತ್ತಲಿವೆ ಇರುವೆ/ ಈ ಮಹಾಬೆಳಕಿನ ಮಾಂಸದಂಗಡಿಯಲ್ಲಿ/ತಲೆಕೆಳಗಾಗಿ ತೂಗುತ್ತಿರುವ ನನ್ನ ಮೇಲೆ' ಎಂಬ ಪ್ರತಿಮೆ- ರೂಪಕಗಳಲ್ಲಿ ಇರುವೆ ನವಿಲಿನ ಕ್ರಿಯಾಶೀಲ ಕನಸಿನ ತುಡಿತವಿದೆ. 'ದಲಿತ ಚಳುವಳಿಗೆ ನೆರವಾದ ನವಿಲು ಕ್ರಾಂತಿಯ ಮೊಟ್ಟೆಗಳನ್ನಿಟ್ಟು ಕ್ರಾಂತಿಯ ಮುಂದುವರೆಸುವ ಕೆಲಸದಲ್ಲಿ ಬಿಕರಿಯಾಗಿ ಕಸಾಯಿಖಾನೆಯಲ್ಲಿ ಪುಕ್ಕ ತರೆಸಿಕೊಂಡು ತೂಗುತ್ತಿದೆ'. ಈ ತೂಗುತ್ತಿರುವ ನನ್ನ ಮೇಲೆ ಹೆಜ್ಜೆ-ಹೆಜ್ಜೆಗಳಲ್ಲಿ ಜೀವ ಮೊರೆಯುತ್ತ ಬಂದ ಇರುವೆ ಹರಿಯುತ್ತಿರುವುದು ಯಾವುದರ ದ್ಯೋತಕ?ಬಿಕರಿಗೊಂಡ ಕನಸಿನ ಮೇಲೆ ಇರುವೆ ಹರಿಯುವ ಚಿತ್ರ ಜಾಗತಿಕ ವಿದ್ಯಮಾನದ ಸಂಕೇತವಾಗಿದೆ.ಕರಿನವಿಲು, ಬಿಳಿನವಿಲು, ನೀಲಿನವಿಲು ರಕ್ತನವಿಲಾಗಿ ಕಣ್ಣೀರ ಗುಡ್ಡದಲ್ಲಿ ಕೇಕೆ ಹಾಕುವಾಗ ನವಿಲಿಗೆ ಬಣ್ಣ ಬಂದಿದೆ. 'ನವಿಲ ನೆತ್ತರಿನಲ್ಲಿ ಹಗಲ ಮುಳುಗಿಸಬೇಕು' ಎಂಬಲ್ಲಿ ನನ್ನಂತೆ ನಿನ್ನಂತೆ ಕೂಗಿ ಕೊಲ್ಲುವ ಕಲೆಗಾರರಿಂದ ಎಚ್ಚರವಿರಬೇಕಾಗಿದೆ. ಮುಗ್ಧ ದಲಿತರ ಕನಸುಗಳನ್ನು ಮಾರಿಕೊಂಡ ದಲಿತರು ಒಂದೆಡೆಯಾದರೆ, ಇದ್ಯಾವುದರ ಪರಿವೆ ಇಲ್ಲದೆ ಇರುವೆಯಂತೆ ದುಡಿಯುವ ವರ್ಗ ಇನ್ನೊಂದೆಡೆ ಇದೆ. ದಲಿತರ ನಿಜವಾದ ಅಸ್ಮಿತೆಯಾಗಿ ಇರುವೆ ಮತ್ತು ನವಿಲು ಕ್ರಿಯಾಶೀಲ ಕನಸುಗಳಾಗಿವೆ.

ಇವುಗಳಲ್ಲದೆ ಎನ್‌ಕೆ ಅವರ ಕಾವ್ಯದಲ್ಲಿ ಸಾವಿನ ಚಿತ್ರಗಳು, ಪ್ರಾಣಿ-ಪಕ್ಷಿಯ ರೂಪಕಗಳು, ರಕ್ತದ ಕಲೆಗಳು, ಸೂರ್ಯನ ಪ್ರತಿಮೆಗಳು ಮತ್ತೆಮತ್ತೆ ಕಾಡುತ್ತವೆ. ಎನ್‌ಕೆ ಕಾವ್ಯ ಇದುವರೆಗೂ ದಲಿತ ಕಾವ್ಯ ಅಭಿವ್ಯಕ್ತಗೊಳ್ಳುತ್ತಿದ್ದ ಮಾದರಿಗಳನ್ನು ಪ್ರಜ್ಞಾಪೂರ್ವಕವಾಗಿ ಬಿಟ್ಟು ಹೊಸ ರೂಪಕ ಪ್ರತಿಮಾ ಮಾದರಿಯನ್ನು ಶೋಧಿಸುತ್ತಿರುವುದನ್ನು ಕಾಣಬಹುದು. ಹಿಂದಿನ ಕವಿತೆಗಳ ಜಾಡಿನಿಂದ ತಪ್ಪಿಸಿಕೊಂಡು ಹೊಸ ದನಿ, ತೇಜಸ್ಸು, ನುಡಿಗಟ್ಟು ಪಡೆಯಲು ಹವಣಿಸುತ್ತಿರುವ ಕವಿತೆಗಳ ದಂಡೇ ಇಲ್ಲಿ ಸಿಗುತ್ತದೆ.ಇಲ್ಲಿ ಅಭಿವ್ಯಕ್ತಗೊಂಡಿರುವ ಭಾಷೆ ನರ್ತನ 'ಮುಟ್ಟಲಾರದ ಮಾತ ಮುಟ್ಟಿ ಹಾಡಾಗಿಸುತ ನನ್ನ ತಳ್ಳಿದ ನೆಲದಿ ಎದೆಗವಚಿ ಮುತ್ತಿಡುವ ಜೀವಪ್ರೀತಿಯ ಹಾಡಾಗಿದೆ.

**ವೆಂಕಬಾಲದ ಚರ್ಚ್ - ಒಂದು ನೆನಪು**

**- ಮಂಜುನಾಥ ವಿ ಎಂ**

ಡಿಸೆಂಬರ್ ಬಂತೆಂದರೆ ಅದೆಂಥಾ ಖುಷಿ, ಸಂಭ್ರಮ, ನೋವಿನ ಹರ್ಷೋಲ್ಲಾಸದಲ್ಲಿ ಲೀನರಾಗಿಬಿಡುತ್ತಿದ್ದೆವು! ಕುಡುಕ ಪಾದ್ರಿ, ಕ್ರೈಸ್ತ ಸನ್ಯಾಸಿನಿಯರು, ನಿರ್ಗತಿಕ ಹೆಣ್ಣುಗಳನ್ನೊಳಗೊಂಡ ಇಡೀ ಚರ್ಚ್ ಅನ್ನು ಹಾದರ ಮತ್ತು ಮದ್ಯದಿಂದಲೇ ಹೆಬ್ಬಾವಿನಂತೆ ನುಂಗಿಹಾಕಿ ತೇಗಿದ ಸ್ಟೀಫನ್ ನಮ್ಮನ್ನೆಲ್ಲ ಜೊತೆಗಿಟ್ಟುಕೊಂಡು ದೇವಾಲಯದ ಒಳಾಂಗಣವನ್ನು ಅಲಂಕರಿಸುತ್ತಿದ್ದ, ಕ್ರಿಸ್‌ಮಸ್ ಮರಗಳಿಗೆ ಹೂದೀಪಗಳನ್ನು ಕಟ್ಟಲು, ರಕ್ತದಂತೆ ಬೆಳಗುವ ನಕ್ಷತ್ರ ದೀಪವನ್ನು ತೂಗಿಬಿಡಲು ನಮ್ಮನ್ನು ತುದಿಗೆ ಏರಿಸುತ್ತಿದ್ದ. ತಪ್ಪು ಮಾಡಿದರೆ ಹೊಡೆದು ಹೊರಕ್ಕೆ ಅಟ್ಟುತ್ತಿದ್ದ. ಕುಡುಕ ಪಾದ್ರಿಗೆ ಮ್ಯಾಕ್‌ಡೊವೆಲ್ ವಿಸ್ಕಿ ತರಲು ಎಂಥಾ ರಾತ್ರಿಯಲ್ಲೂ ಕಳುಹಿಸುತ್ತಿದ್ದ. ಹಾವುಗಳು ಹೇರಳವಾಗಿ ಓಡಾಡುವ ಸಿಲ್ವರ್ ಮರಗಳ ಕಾಡಿನ ಮಧ್ಯೆ ಪಾದ್ರಿ ತುಡಿಯನ್ ಕೋಣೆ ಇತ್ತು. ಅಲ್ಲಲ್ಲಿ ಗೇರುಮರಗಳು, ಪೈನ್ ಮರಗಳು, ಸಂಪಗೆ ಮರಗಳು, ತೊಗರಿಗಿಡಗಳ ಸಾಲು, ಈಜಿಮರಗಳು, ಫರಂಗಿ ಗಿಡಗಳು, ತೆಂಗಿನಮರಗಳೂ ಇದ್ದವು. ಜೇನನ್ನು ಸಾಕುವ ಹವ್ಯಾಸ ಇಟ್ಟುಕೊಂಡಿದ್ದ ಆ ಪಾದ್ರಿ ತನ್ನ ಕೋಣೆಯ ಎದುರಿಗೆ ಸಣ್ಣ ಕೊಳವೊಂದನ್ನು ಕಟ್ಟಿಸಿ ಅದರಲ್ಲಿ ಬಾತುಕೋಳಿಗಳು ಮತ್ತು ಮೀನುಗಳನ್ನು ಸಾಕುವುದರೊಂದಿಗೆ ತಾವರೆ ಗಿಡಗಳನ್ನೂ ಬೆಳೆಸಿಕೊಂಡಿದ್ದ. ಅಮ್ಮ ನೀರು ಕಾಯಿಸಲು ತರಗೆಲೆಗಾಗಿ ಸಿಲ್ವ ಕಾಡಿಗೆ ಬಂದಾಗ ತಾವರೆ ಪಕಳೆಗಳನ್ನು ಕದ್ದು ತರುತ್ತಿದ್ದಳು. ಕಾಲಿಗೆ ತೊಡರುವ ಜರೋಪಾತ ಹಾವುಗಳನ್ನು ಕೈಯಲ್ಲಿ ಹಿಡಿದುಕೊಂಡು, ತುಟಿಯಲ್ಲಿ ಸಿಗರೇಟು ಕಚ್ಚಿಕೊಂಡು ದೊಣ್ಣೆಯಿಂದ ಸಾಯಿಸುವುದರಲ್ಲಿ ನಿಷ್ಣಾತನಾದ ಇವನು, ಸನ್ಯಾಸಿನಿಯರ ಮಡಿಲಿನಲ್ಲಿ ತುಂಟಮಗುವಿನಂತೆ ಮಲಗಿಕೊಂಡು ವಿನೋದಿಸುತ್ತಿದ್ದ. ಕೇರಳದ ಆ ಪಾದ್ರಿ ವಿಪರೀತ ಕುಡಿದು ಸಂಜೆಯಷ್ಟೊತ್ತಿಗೆ ಚರ್ಚ್ ಗೇಟಿನ ಬಳಿ ಬಂದು ಬಿದ್ದಿರುತ್ತಿದ್ದ ಅಥವಾ ಸಿಲ್ವರ್ ಮರಗಳ ಕಾಡಿನಲ್ಲಿ ಬಿದ್ದುಕೊಂಡಿರುತ್ತಿದ್ದ. ನಾವು ಅವನ ಕೋಣೆಯ ಹಿಂದೆ ಬಂದು ಅವನು ಕುಡಿದೆಸೆದ ಮದ್ಯದ ಸೀಸೆಗಳನ್ನು ಕದಿಯಲು ಬೆಳಗಿನ ಜಾವದಲ್ಲಿ ಹೋಗುತ್ತಿದ್ದೆವು. ಅದರಿಂದ ಬಂದ ಹಣದಲ್ಲಿ ನಮ್ಮ ಒಂದು ದಿನದ ಹಸಿವು ನೀಗುತ್ತಿತ್ತಲ್ಲದೆ ಅಪ್ಪನಿಗೆ ಸಾರಾಯಿಗೂ ಆಗುತ್ತಿತ್ತು. ಆಗ ಅವನು ಬಂದೂಕು ಹಿಡಿದುಕೊಂಡು ಅಲ್ಲೇ ಸನ್ಯಾಸಿನಿಯರ ಕಕ್ಕಸುಕೋಣೆಯ ಹಿಂದೆ, ಗೇರು ಮರದ ಒಳಗೆ ಎಲ್ಲಾದರೂ ನಮಗಾಗಿ ಹೊಂಚು ಹಾಕುತ್ತ ಅಡ್ಡಾಡುತ್ತ ನಿಂತಿರುತ್ತಿದ್ದ. ಮೈಯೆಲ್ಲಾ ಬಿಳಿಕೂದಲನ್ನು ಹುಲುಸಾಗಿ ಬೆಳೆಸಿಕೊಂಡಿದ್ದ ಅವನು ಸಂಪೂರ್ಣ ಬೆತ್ತಲಾಗಿರುತ್ತಿದ್ದ. ನಾವು ಕೂಡ ಅವನಷ್ಟೇ ಜಾಗರೂಕರಾಗಿ ಕಳ್ಳಹೆಜ್ಜೆಗಳಲ್ಲಿ ಕಕ್ಕಸು ಕೋಣೆಯ ಗಟಾರದಂಚಿನಿಂದ

ಒಳಸರಿಯುತ್ತಿದ್ದೆವು. ನಮ್ಮ ಗದ್ದಲದಿಂದ ಏಳುವ ವಿಷದ ಸೊಳ್ಳೆಗಳ ಆಕಾರವೇ ವಿಚಿತ್ರವಾದದ್ದು. ಕೆಂಪು, ಕಪ್ಪು ಮತ್ತು



ಹಸಿರುಬಣ್ಣದ್ದಾಗಿರುತ್ತಿದ್ದ ಅವು ಜೇನ್ನೊಣಗಳ ಗಾತ್ರದವು. ಕಚ್ಚಿದರೆ ಮೂರಾಲ್ಕು ದಿನಗಳಾದರೂ ಬೊಬ್ಬೆಗಳು ಆರುತ್ತಿರಲಿಲ್ಲ. ಸಣ್ಣ ಮಕ್ಕಳಾದರಂತೂ ಪ್ರಜ್ಞೆ ತಪ್ಪಿ ಬೀಳುತ್ತಿದ್ದರು.

ಬೆಳಿಗ್ಗೆ ಮೂರು ಗಂಟೆಗೆ ನಮ್ಮನ್ನು ಎಚ್ಚರಿಸುತ್ತಿದ್ದದ್ದು ಆಶ್ರಮದ ಅರೆಹುಚ್ಚರ ಮಾನಸಿಕ ರೋಗಿಗಳ ರೋದನ. ಅವರು ಊಳಿಡುತ್ತಿದ್ದ ಬಗೆ ಇವೊತ್ತಿಗೂ ನಮ್ಮ ಕಿವಿಗಳಲ್ಲಿ ಗುಗ್ಗೆಯಂತೆ ಮಡುಗಟ್ಟಿದೆ. ಅವರ ಶುಶೂಶೆಗಾಗಿ ಬರುತ್ತಿದ್ದ ಸನ್ಯಾಸಿನಿಯರು, ಅವರು ಹೇಳಿದ ಮಾತು ಕೇಳದೇಹೋದಾಗ ಬಿದಿರುದೊಣ್ಣೆಗಳಿಂದ ಅವರ ತಲೆ, ಮೊಣಕಾಲುಗಳಿಗೆ, ಗೇಣುಗಳಿಗೆ ರಕ್ತ ಸುರಿಯುವಂತೆ ಬಾರಿಸುತ್ತಿದ್ದರು. ತೀರಾ ಕೃಶರಾದವರು ಬಿಸಿಲು ಬರುವಷ್ಟರಲ್ಲಿ ಚರ್ಚ್ ಹಿಂದಿನ ಫರಂಗಿ ತೋಟದ ಗೋರಿಗಳಲ್ಲಿ ತಣ್ಣಗೆ ನಿದ್ರಿಸುತ್ತಿದ್ದರು. ಕೆಲವರು ಚುರುಕಿನವರು ತಪ್ಪಿಸಿಕೊಂಡು ಹೈವೆಯಲ್ಲಿ ಹಾದುಹೋಗುವ ಲೈಲ್ಯಾಂಡ್ ಟ್ರಕ್ ಹತ್ತಿ ಎಲ್ಲೋ ಪರಾರಿಯಾದ ಲೆಕ್ಕವಿಲ್ಲದಷ್ಟು ವೃತ್ತಾಂತಗಳು.

ಹಾಗೆ ಕ್ರೈಸ್ತ ಸನ್ಯಾಸಿನಿಯರಿಂದ ಕೊಲೆಯಾದವರಲ್ಲಿ ನಮ್ಮ ಜೊತೆ ನಾಲ್ಕನೆ ತರಗತಿವರೆಗೆ ಓದಿದ ಜೇಮ್ಸ್, ಮಣಿಗಾರ ಮತ್ತು ಶ್ರೀನಿವಾಸ ಜ್ಞಾಪಕದಲ್ಲಿದ್ದಾರೆ. ಇವರಿಬ್ಬರಲ್ಲಿ ಜೇಮ್ಸ್‌ಗೆ ಸೊಂಟ ಇರಲಿಲ್ಲ, ಅವನು ಟ್ರೈಸೈಕಲ್‌ನಲ್ಲಿ ಬರುತ್ತಿದ್ದ. ಪೋಲಿಯೋ ಪೀಡಿತ ಶ್ರೀನಿವಾಸ ನಡೆದುಕೊಂಡೇ ಬರುತ್ತಿದ್ದ. ಈ ಇಬ್ಬರು ನಮಗೆಲ್ಲ ಚರ್ಚಿನಿಂದ ಬಿಸ್ಕತ್ತು, ಹಾಲುಪೌಡರ್, ಬಟ್ಟೆ, ನೆಲ್ಲಿಕಾಯಿ, ಆಟದ ಸಾಮಾನನ್ನು ತಂದುಕೊಡುತ್ತಿದ್ದರು. ನಾವು ಕೂಡಿಟ್ಟುಕೊಂಡಿರುತ್ತಿದ್ದ ಹತ್ತುಹದಿನೈದು ಪೈಸೆಯಷ್ಟು ಕಾಸನ್ನು ಅವರಿಗೆ ಕೊಡುತ್ತಿದ್ದೆವು. ಇವರಿಬ್ಬರಲ್ಲಿ ಜೇಮ್ಸ್‌ನನ್ನು ಬಹುದಾರುಣವಾಗಿ ಕೊಂದು ನೇಣು ಹಾಕಿದರೆಂದು ಅಲ್ಲಿ ಕೂಲಿಗೆ ಹೋಗುತ್ತಿದ್ದವರಾರೋ ಹೇಳಿದ ನೆನಪು. ನೆನೆಸಿಕೊಂಡರೆ ಅವರಿಬ್ಬರೂ ನನ್ನನ್ನು ಅಳಿಸುತ್ತಾರೆ, ಈಗಲೂ ಅವರು ತೋರಿದ ಪ್ರೀತಿ ನನ್ನ ಎದೆಯಾಳದಲ್ಲಿದೆ, ಹಾಡಾಗಿ, ಅಲ್ಲಿನ ಗಿಡಮರಗಳಲ್ಲಿ ಹಕ್ಕಿಯೊಂದು ಗುಟುರು ಹಾಕಿದರೂ ಹನಿ ಕಣ್ಣೀರು ಬೀಳದೇ ಇರದು.

ನಿರ್ಗತಿಕರು, ಮನೋವಿಕಲರು, ಅಂಗವೈಕಲ್ಯದಿಂದ ನರಳುವವರು, ನಿವೃತ್ತ ಮುದಿಸೂಳೆಯರು, ಕೆಮಿಕಲ್‌ನಿಂದ ಮುಖ, ಮೈ ಸುಟ್ಟುಕೊಂಡವರು, ನರನಾಡಿಗಳೇ ಇಲ್ಲದ ಕ್ರಿಮಿನಲ್‌ಗಳು ಇಲ್ಲಿ ಬಂದು ದಾಖಲಾಗುತ್ತಿದ್ದರು, ಅದು ಇಲ್ಲಿನ ಚರ್ಚ್‌ನವರಿಗೆ ಪ್ರಭಾವಿ ಜನವರ್ಗ ಪರಿಚಯವಿದ್ದು ಅವರು ಸೇರಿಸಿದರೆ ಮಾತ್ರ

ಯಾರನ್ನಾದರೂ ಸೇರಿಸಿಕೊಳ್ಳುತ್ತಿದ್ದರು. ಸಾಮಾನ್ಯ ಜನರಾರಾದರೂ ಬಂದರೆ ಸೇರಿಸಿಕೊಳ್ಳುತ್ತಿರಲಿಲ್ಲ. ಗದರಿಸಿ ಕಳುಹಿಸುತ್ತಿದ್ದರು. ಆಗ ಸ್ಥಳೀಯರಾದ ನಾವು ಅವರಿಗೆ ಚರ್ಚ್ ಒಳಗೆ ಇರುವ ಸಂಪಗೆ ಮರದ ಹತ್ತಿರ ಅವರನ್ನು ಬಿಟ್ಟುಹೋಗುವ ಉಪಾಯ ಹೇಳಿಕೊಡುತ್ತಿದ್ದೆವು, ಬೇರೆ ದಾರಿಯಿಲ್ಲದೆ ಒಳ ಕರೆದುಕೊಳ್ಳುತ್ತಾರೆಂದು. ಆದರೆ ಅಲ್ಲಿ ನಡೆಯುತ್ತಿದ್ದದ್ದೇ ಬೇರೆ. ಸನ್ಯಾಸಿನಿಯರು ಬಂದವರೆ ಅವರನ್ನು ಹೊರಹೋಗಲು ಸೂಚಿಸುತ್ತಿದ್ದರು. ಅಳುತ್ತಾ ಗೋಗರೆದರೆ ಕಾಲಿನಿಂದ ತಳ್ಳಲೆತ್ನಿಸುತ್ತಿದ್ದರು. ಅದೂ ಸಾಧ್ಯವಾಗದೆ ಹೋದಾಗ ಅಲ್ಲಿನ ಹುಚ್ಚರ ಸಹಾಯದಿಂದ ಅವರನ್ನು ಹಿಡಿದು



ಚರ್ಚ್‌ನಿಂದ ಹೊರಗೆಳೆದು ರಸ್ತೆಗೆ ಬಿಸಾಡುತ್ತಿದ್ದರು. ಅವರು ಚರ್ಚ್‌ನ ಕಡೆಗೆ ನೋಡುತ್ತಾ ಅವರು ಗೋಳಾಡುವುದನ್ನೇ ಸಹಿಸಲಾಗದೆ ನಾವು ಅವರಿಗೆ ಅಲ್ಲೇ ಹುಣಸೆಮರದ ಕೆಳಗೆ ಮಲಗಲು ಜಾಗ ಮಾಡಿಕೊಟ್ಟು ರೊಟ್ಟಿ, ನೀರನ್ನು ನೀಡುತ್ತಿದ್ದೆವು. ಎಷ್ಟೋ ದಿನಗಳವರೆಗೆ ಅಲ್ಲೇ ಇರುತ್ತಿದ್ದ ಅವರು ಯಾವಾಗಲೋ ನಮಗೆ ಗೊತ್ತಿಲ್ಲದಂತೆ ಸತ್ತುಹೋಗಿರುತ್ತಿದ್ದರು.

ನಮ್ಮ ಮನೆಯ ಎದುರಿಗೇ ಇದ್ದ ಈ ರೋಮನ್ ಕ್ಯಾಥೋಲಿಕ್ ಚರ್ಚ್‌ಗೆ ಸ್ಕೂಲು ಬಿಟ್ಟೊಡನೆ ಅಕ್ಕ, ಅಣ್ಣಂದಿರು, ಗ್ರಾಮದ ಗೆಳೆಯರ ಜೊತೆಗೂಡಿ ಚೀಟಿಗಾಗಿ ಅಲ್ಲಿಗೆ ಓಡಿಹೋಗುತ್ತಿದ್ದೆವು. ಹಬ್ಬದ ದಿನ ಆ ಚೀಟಿ ತೆಗೆದುಕೊಂಡು ಹೋದರೆ ಒಳಗೆ ಬಿಡುತ್ತಿದ್ದರು. ವಿಧವಿಧವಾದ ಆಟ ಆಡಿಸಿ, ಗೆದ್ದವರಿಗೆ ಬಹುಮಾನ ನೀಡುವುದರ

ಜೊತೆಗೆ ಸೋಪಿನ ಡಬ್ಬ, ಟವೆಲ್ಲು, [ಈಗಲೂ ನನ್ನಲ್ಲಿ ಇದರಲ್ಲಿ ಕೆಲವು ವಸ್ತುಗಳನ್ನು ಸುರಕ್ಷಿತವಾಗಿಟ್ಟುಕೊಂಡಿದ್ದೇನೆ] ಬಟ್ಟೆ, ಬ್ರೆಡ್ಡು, ಬಿಸ್ಕತ್ತು, ಬಾತುಕೋಳಿ ಮೊಟ್ಟೆ ದವಸಧಾನ್ಯವನ್ನೂ ಕೊಟ್ಟು ಕಳುಹಿಸುತ್ತಿದ್ದರು. ರಾತ್ರಿ ಕ್ರಿಸ್ತನ ಕುರಿತಾದ ಸಿನೆಮಾ ತೋರಿಸುತ್ತಿದ್ದರು. ಇದಕ್ಕಾಗಿ ಅಕ್ಕಪಕ್ಕದ ಗ್ರಾಮಗಳಿಂದ ಸಾವಿರಾರು ಜನ ಬಡಬಗ್ಗರು, ರೋಗಗ್ರಸ್ತರು, ಅಂಗವಿಕಲರು, ನನ್ನ ತಾಯಿ ಕಡೆಯ ಸಂಬಂಧಿಕರಾದ ಇದ್ದಿಲು ಮಾರುವ ಹೆಂಗಸರು, [ನನ್ನ ಲೆವೆಲ್ ಕ್ರಾಸಿಂಗ್ ಕೃತಿಯಲ್ಲಿ ಇವರ ಕುರಿತ ಕವಿತೆ ಇದೆ] ಮತ್ತು ಅವಳ ತಾಯಿಯ ದೂರದ ಹಳ್ಳಿಯ ಕುಷ್ಠ ರೋಗಿಗಳೂ ಇರುತ್ತಿದ್ದರು. ಇದೆಲ್ಲ ಆದ ನಂತರ ಇಂಡಿಯನ್ ಏರ್ ಫೋರ್ಸಿನ ಸಿನಿಮಾ ಥಿಯೇಟರ್‌ಗೆ ಕರೆದುಕೊಂಡು ಹೋಗಿ ವಿದೇಶಿ ಚಲನಚಿತ್ರವನ್ನು ತೋರಿಸುತ್ತಿದ್ದರು. ಹಾಗೆ ನೆನಪಿರುವ ಚಿತ್ರ ಆಫ್ರಿಕನ್ ಸಫಾರಿ, ಈ ಹಬ್ಬಕ್ಕೆ ಮುಂಚಿತವಾಗಿ ಡಿಸೆಂಬರ್ ತಿಂಗಳಿನ ಪ್ರಾರಂಭದಲ್ಲೇ ಚೀಟಿ ಹಂಚಲು ತೊಡಗುತ್ತಿದ್ದರು. ನಮ್ಮ ಮನೆಗಳಿಗೆ ಬಂದು ಚೀಟಿ ಕೊಡುತ್ತಿದ್ದರೂ ನಾವು ಇನ್ನೂ ಹೆಚ್ಚಿನ ಚೀಟಿಗಳಿಗಾಗಿ ಗೋಗರೆಯುತ್ತಿದ್ದೆವು. ಯಾಕೆಂದರೆ, ಎರಡನೇ ಸರದಿಗೆ ಒಳಹೋಗಿ ಪ್ಯಾಕೇಜುಗಳನ್ನು ಪಡೆಯುವುದಕ್ಕಾಗಿ, ಕ್ರೈಸ್ತ ಸನ್ಯಾಸಿನಿಯರು ಗೇಟಿನಲ್ಲಿ ನಿಂತುಕೊಂಡು ನಮ್ಮ ಗುಂಪನ್ನು ಸಂಭಾಳಿಸಲು ಸಜ್ಜಾಗಿ ನಿಂತಿರುತ್ತಿದ್ದರು ಕೈಗಳಲ್ಲಿ ಬಿದಿರು ದೊಣ್ಣೆಗಳನ್ನು ಹಿಡಿದುಕೊಂಡು ತಿರುಗಿಸುತ್ತಾ, ಸಿಸ್ಟರ್, ಸಿಸ್ಟರ್, ಸಿಸ್ಟ... ಎಂದು ಗೇಟಿನಿಂದ ಅವರತ್ತ ಕೈ ತೂರಿಸಿ ಅಂಗಲಾಚುತ್ತಿದ್ದೆವು. ಆಗ ಅವರು ರೋಸಿ, ಬಿದಿರುದೊಣ್ಣೆಗಳಿಂದ ನಮ್ಮ ಎಳೆಕೈಗಳಿಗೆ ಬಾರಿಸುತ್ತಿದ್ದರು. ಈಗ ಬರೆಗಳ ಗುರುತಿಲ್ಲವಾದರೂ ಅದರ ಸುಖವಿನ್ನೂ ಹೃದಯದಲ್ಲಿ ಬೇರೂರಿದೆ. ನಂತರ ನಮ್ಮನಮ್ಮಲ್ಲೇ ನಾಲ್ಕೈದು ಗುಂಪು ಮಾಡಿ [Holy rosary church] [Mother Teresa's home for the destitute] ಆಶ್ರಮ, ಕಾಂಪೌಡಿನ ಸುತ್ತಮುತ್ತಲು ಕಾಡಿನಂತೆ ಬೆಳೆದುಕೊಂಡಿದ್ದ ಪಾರ್ಥೇನಿಯಮ್ ಸಸಿಗಳನ್ನು ಕೀಳಲು ಕಳುಹಿಸುತ್ತಿದ್ದರು. ಈ ಕೆಲಸ ಮುಗಿಸಿದ ನಂತರ ನೆಲ್ಲಿಕಾಯಿ ಮರ ಇರುವ ಸಣ್ಣ ಗುಡಿಯ ಹತ್ತಿರದ ಹುಲ್ಲು ಮೈದಾನದಲ್ಲಿ ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದ ಕತ್ತರಿಗಳು, ಕೀವುರಕ್ತದಿಂದ ಒರೆಸಿ, ಹಿಂಡಿದ ಬ್ಯಾಂಡೇಜ್ ಬಟ್ಟೆ, ಸಿರಂಜ್‌ಗಳು, ಯಾವ್ಯಾವುದೋ ಕಾಯಿಲೆಯ ಸೀಸೆಗಳು, ಮುಲಾಮು ಡಬ್ಬಿಗಳು- ಇವೆಲ್ಲವನ್ನೂ ಒಟ್ಟು ಮಾಡಿ ಗುಂಡಿಗೆ ಹೊತ್ತು ಹಾಕಿ ಬೆಂಕಿ ಇಟ್ಟು, ತಿರುಗಿ ಬರುವಷ್ಟೊತ್ತಿಗೆ ಸಂಜೆ ಕಳೆದು ಸರಿಸುಮಾರು ರಾತ್ರೆಯಾಗಿರುತ್ತಿತ್ತು.



ಪ್ರಾರ್ಥನಾ ಗೃಹದ ಎದುರಿಗಿನ ಸಂಪಗೆ ಮರದ ಕೆಳಗೆ ನಿಂತು ಮತ್ತೆ ಸಿಸ್ಟರ್, ಸಿಸ್ಟರ್, ಸಿಸ್ಟರ್ ಎಂದು ಕರೆಯುತ್ತಿದ್ದೆವು. ಕಾಫೀನೊ, ಮದ್ಯವೋ ಗೊತ್ತಿಲ್ಲ ಕುಡಿಯುತ್ತಾ ಹೊರಬಂದವರು, ದೊಡ್ಡಗಾತ್ರದ ಬಿಳಿಬಣ್ಣದ ಬಿಸ್ಕತ್ತುಗಳನ್ನು ನಮ್ಮ ಕೈಗಳಿಗೆ ಎಸೆದು, ಅಲ್ಲಿನ ಅರೆ ಹುಚ್ಚ ಹೆಂಗಸರನ್ನು ಕರೆದು ಅವರಿಂದ ಒಳಗಿನಿಂದ ರಾಶಿರಾಶಿ ಬಟ್ಟೆ ಗಂಟುಗಳನ್ನು ಬಿಚ್ಚಿ ನಮ್ಮೆದುರಿಗೆ ಹರಡುತ್ತಿದ್ದರು. ಹೆಚ್ಚಾಗಿ ಮಲೇಶಿಯಾ, ಕೊರಿಯಾ, ಇಂಡೋನೇಶಿಯಾ, ಚೀನಾ ದೇಶದ ಬಟ್ಟೆಗಳೇ ಬಂದು ಬೀಳುತ್ತಿದ್ದವು. ಉಣ್ಣೆಯ ಸ್ವೆಟರ್‌ಗಳು, ಓವರ್ ಕೋಟುಗಳು, ಎಳೆದೆಳೆದು ಹಿಗ್ಗಿಕೊಂಡ ರೂಪದರ್ಶಿಯರದ್ದೂ, ಸೂಳೆಯರದ್ದೂ ಹಲವು ಬಣ್ಣಗಳ ಬ್ರಾ, ಕಾಚಾಗಳು, ಸ್ಟಾಕಿನ್‌ಗಳು, ಜೀನ್ಸ್ ಪ್ಯಾಂಟುಗಳು, ಅಂಗಿಗಳು, ಫುಟ್‌ಬಾಲ್, ರ, ಬೇಸ್‌ಬಾಲ್, ಬುಲ್ ಫೈಟಿಂಗ್, ರಿಯಲ್

ಮ್ಯಾಡ್ರಿಡ್ ತಂಡದ ಆಟಗಾರರ ಜರ್ಸಿಗಳ ಜೊತೆಗೆ ಪಾಶ್ಚಿಮಾತ್ಯ ದೇಶದ ಉಚ್ಚವರ್ಗದವರೆಲ್ಲರೂ ಧರಿಸಬಹುದಾದ ವೆಲ್ಲಿಂಗ್‌ಟನ್ ಬೂಟುಗಳು, ಹೀಲ್ಡ್ ಎಕ್ಕಡಗಳು, ಕಟ್‌ಗಳು, ಪಂಪ್‌ಗಳು, ಸೋತ ಹೆಣ್ಣುಗಳಂತಿರುವ ವಿಚಿತ್ರ ವಿನ್ಯಾಸದ ಚಪ್ಪಲಿಗಳೂ ಇರುತ್ತಿದ್ದವು. ಅವುಗಳಲ್ಲಿ ಗಂಡಿಗೆ ಯಾವುದು ಹೆಣ್ಣಿಗೆ ಯಾವುದೆಂದು ಗೊತ್ತಾಗದೆ ತೀವ್ರ ಗೊಂದಲಕ್ಕೀಡಾಗುತ್ತಿದ್ದೆವು. ಈಗ ಪುಡಿಡಾನ್ ಆಗಿ ರೋಲ್ ಕಾಲ್ ಮಾಡಿಕೊಂಡು ಬದುಕುತ್ತಿರುವ ಸ್ನೇಹಿತನೊಬ್ಬ ಹೆಂಗಸರು ಧರಿಸಬಹುದಾದ ಶೂಸ್‌ವೊಂದನ್ನು ನನಗೆ ನೆನಪಿರುವಂತೆ ಐದಾರು ವರ್ಷಗಳ ಕಾಲ ಬಳಸಿದ್ದ.

ಹೀಗೆ ಅವರ ಅನುಮತಿಗೆ ಕಾದಿರುತ್ತಿದ್ದ ನಾವು, ಕ್ಷಣಾರ್ಧದಲ್ಲಿ ಒಬ್ಬರ ಮೇಲೊಬ್ಬರು ಬಿದ್ದು ಒಂದೇ ಒಂದು ತುಂಡು ಬಟ್ಟೆಯಿಲ್ಲದಂತೆ ನಮ್ಮ ಶಕ್ತಿಗೆ ಅನುಗುಣವಾಗಿ ಸಾಧ್ಯವಾದಷ್ಟು ಬಾಚಿಕೊಂಡಿರುತ್ತಿದ್ದೆವು. ಆ ನೂಕುನುಗ್ಗಲಿನಲ್ಲಿ ಅವರಿಂದ ಮತ್ತೆ ಒದೆತ ತಿಂದಿರುತ್ತಿದ್ದೆವು. ಆ ಸಂತಸದಲ್ಲಿ ಅದು ಅಷ್ಟಾಗಿ ಅರಿವಿಗೆ ಬರುತ್ತಿರಲಿಲ್ಲ. ಎಲ್ಲರೂ ತಮ್ಮತಮ್ಮ ಬಟ್ಟೆಗಂಟುಗಳನ್ನು ತಲೆ ಮೇಲೆ ಹೊತ್ತುಕೊಂಡು ಗೇಟಿನ ಹತ್ತಿರ ಬರುತ್ತಿದ್ದಂತೆ ಗ್ರಾಮದ ದಲಿತರೊಡಗೂಡಿ ಮೇಲ್ಜಾತಿಯವರೆಲ್ಲರೂ ಓಡಿಬರುತ್ತಿದ್ದರು. ಅಲ್ಲಿ ಹೋಗಿ ಏನೂ ಸಿಗದೇಹೋದಾಗ ನಿರಾಶೆಗೊಂಡು ನಮ್ಮ ಹತ್ತಿರ ಏನಾದರೂ ಸಿಗಬಹುದೆಂಬ ಸಣ್ಣ ಆಸೆಯಲ್ಲಿ ಕೇಳಲು ಬರುತ್ತಿದ್ದಂತೆ ನಾವು ಮನೆ ಸೇರಿರುತ್ತಿದ್ದೆವು.

ನಮ್ಮ ಬಟ್ಟೆ ಗಂಟುಗಳನ್ನು ಒಮ್ಮೆಲೇ ಮನೆಯ ಅಂಗಳದಲ್ಲಿ ಎಸೆಯುತ್ತಿದ್ದಂತೆ- ಅಮ್ಮ ಒಂದೊಂದೇ ಬಟ್ಟೆಗಳನ್ನು ಪರೀಕ್ಷಿಸಿ, ನಮಗೆಲ್ಲ ಹೊಂದುವಂತಿದ್ದರೆ ತೆಗೆದು ಬೇರೆ ಹೊರೆ ಕಟ್ಟಿ ಉಳಿದೆಲ್ಲವನ್ನೂ ತಲೆಮೂಟೆ, ಬೊಂತೆಗಾಗಿ ಇಟ್ಟುಕೊಳ್ಳುತ್ತಿದ್ದಳು. ತರಹೇವಾರಿ ವಿದೇಶಿ ಸುಗಂಧ ದ್ರವ್ಯದಿಂದ ನಾರುತ್ತಿದ್ದ ಆ ಬಟ್ಟೆಗಳಲ್ಲಿ ರೋಗದ ಕೀವು, ರಕ್ತದ ಕಲೆಗಳು ಸ್ಪಷ್ಟವಾಗಿ ಕಾಣುತ್ತಿತ್ತಾದರೂ, ಒಗೆಯದೆ ಧರಿಸಿಕೊಂಡು ಊರೆಲ್ಲಾ ಓಡಾಡುತ್ತ ಎಲ್ಲರಿಗೂ ತೋರಿಸಿಕೊಂಡು, ಕ್ರಿಕೆಟ್, ಫುಟ್‌ಬಾಲ್ ಆಟವಾಡುತ್ತಾ, ಅದೇ ರೋಗರುಜಿನ ವಾಸನೆಯಲ್ಲೇ ಹಸಿವು ನೀಗಿಸಿಕೊಂಡು, ಚಳಿಗಾಲದಲ್ಲಿ ಬೆಚ್ಚಗೆ ಮಲಗಿಕೊಳ್ಳುತ್ತಿದ್ದೆವು.

**ಹಲಿಹರನ ರಗಳೆಗಳಲ್ಲಿ ಮಾದರ ಚನ್ನಯ್ಯ**

**- ಟಿ.ಆರ್. ಭಾಸ್ಕರ್ ಪ್ರಸಾದ್**

ರಾಜನಾದರೇನು ಸಾಮ್ರಾಟನಾದರೇನು? ಸಾವುವವರ ಚರಿತ್ರೆಯ ಹಾಡಿ ಹೊಗಳಿ, ಇಂದ್ರ ಚಂದ್ರರ ಬಣ್ಣ ತುಂಬಿ, ಹೊಗಳಿ ಅಟ್ಟಕ್ಕೇರಿಸಿ ಸಾಹಿತ್ಯ ಬರೆದು ಹೊಟ್ಟೆ ಹೊರೆಯುವ ಸಾಹಿತಿ, ಸಾಹಿತ್ಯಗಳ ಬಗ್ಗೆ ಅಪಾರ ಸಿಟ್ಟು ಹರಿಹರನಿಗೆ.

ಮನುಷ್ಯನನ್ನು ದೇವತ್ವಕ್ಕೇರಿಸಿ, ಪವಾಡಗಳ ಗುಣಗಳನ್ನಾರೋಪಿಸಿ ಮಾನವನ ಸಾಧನೆಗಳಗೆಲ್ಲ ದೈವತ್ವದ ಗುಣಧರಿಸಿ ಮನುಷ್ಯ ಸಾಧನೆಯ ಅಲ್ಲಗಳೆವವರ ಕಂಡರೆ ಕಡುಗೋಪ ಹರಿಹರನಿಗೆ.

ಹರಿಹರ, ತಮಿಳುನಾಡಿನ ಅರವತ್ತೂರು ಪ್ರಥಮರೂ ಸೇರಿದಂತೆ ಆದ್ಯ ವಚನಕಾರ ಮಾದರ ಚೆನ್ನಯ್ಯ, ದೇವರ ದಾಸಿಮಯ್ಯ, ಅಲ್ಲಮ ಪ್ರಭು, ಬಸವಣ್ಣ, ಅಕ್ಕ ಮಹಾದೇವಿಯೇ ಮುಂತಾವರ ಕುರಿತು ತನ್ನ ರಗಳೆಗಳಲ್ಲಿ ಬಲು ಚಂದವಾಗಿ ಕಟ್ಟಿಕೊಡುತ್ತಾನೆ.

ಮನುಷ್ಯ ಸಾಧನೆಯನ್ನು ದೈವತ್ವಕ್ಕೇರಿಸುವುದು, ಇಲ್ಲದ ಗುಣಾವಗುಣಗಳನ್ನು ಹಾಡಿಹೊಗಳುವುದನ್ನು ಕಂಡರಾಗದ ಹರಿಹರ, ಮಾದರ ಚೆಮ್ಮಯ್ಯನ ಮನೆಯಲ್ಲಿ ಅಂಬಲಿಯುಂಡ ಶಿವನ ವರ್ಣನೆ ಕಟ್ಟಿಕೊಡುವುದರ ಹಿಂದೆ, ವೈದಿಕರು ನಂಬಿಸಿರುವ ದಶಾವತಾರಗಳ ಹುನ್ನಾರವನ್ನು, ಜಾತಿ ಶ್ರೇಷ್ಟತೆಯ ವ್ಯಸನವನ್ನು ಅವರ ನಂಬಿಕೆಯ ಕತ್ತಿಯಿಂದಲೇ ತುಂಡರಿಸುವ ಯೋಚನೆ ಇದ್ದಂತೆ ಕಾಣುತ್ತದೆ.

ದಶಾವತಾರಗಳು ಭೂಲೋಕೋದಲ್ಲಿ ದುಷ್ಟ ಶಿಕ್ಷಣೆ ಮಾಡಿ, ಶಿಷ್ಟ ರಕ್ಷಣೆಯ ನೆಪದಲ್ಲಿ ಕೊಲೆ, ರಕ್ತಪಾತ ಮಾಡಿದ್ದೇ ಕಾರಣವಾಗಿ ದೇವರಾಗಿರುವದಾದರೆ, ನಿಮ್ಮೊಳಗಿನ ಅಜ್ಞಾನ, ಜಾತಿವಾದಿತನ, ಮೌಢ್ಯಗಳಿಗೆಲ್ಲಾ ಅಂತ್ಯ ಹಾಡಲೆಂದೇ ವಚನ ಚಳುವಣಿಯ ಮೂಲಕ ವೇದಗಳಿಗೆ ಹೊರೆಕಟ್ಟಿ, ಆಗಮ ಉಪನಿಷತ್ತುಗಳಿಗೆ ಉರಿ ಹಚ್ಚಿ, ಹೊಲೆ ಸೂತಕಗಳಿಗೆಲ್ಲಾ ಸಮಾಧಿ ಕಟ್ಟಿ, ಗುಣ ಮತ್ತು ಕಾಯಕದಿಂದ ಶ್ರೇಷ್ಠ ನೀಚನೆಂಬ ಎರಡು ಕುಲವಲ್ಲದೆ, ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲವೆಂದು ಸಾರಿದ ಶರಣರ ಕೈತುತ್ತು ಉಣ್ಣಲೆಂದು ಶಿವನೇ ಬರುತ್ತಾನೆಂದು ಹೇಳುವ ಹರಿಹರನ ಮಾತುಗಳಲ್ಲೇ ಹೇಳಬಹುದಾದರೆ,

"ಹೀಗೆಯೇ ಒಂದು ದಿನ ಕಾಡಿನಿಂದ ಹುಲ್ಲು ಹೊರೆ ತಂದು ಕುದುರೆ ಲಾಯದಲ್ಲಿ ಇಳಿಸಿ ಬರಬರನೆ ಮನೆಗೆ ಬಂದ. ಪತ್ನಿ ತಾನು ಮಾಡಿದ ಅಂಬಲಿಯ ಜೊತೆ ನಂಚಿಕೆಗೆ ಉಪ್ಪಿನಕಾಯಿತ್ತಳು. ಒಂದು ಬಟ್ಟಲಲ್ಲಿ ಮೊದಲಿಗೆ ಅಂಬಲಿಯನ್ನು



ಲಿಂಗಾರ್ಪಿತವೆಂದು ಎಡೆಮಾಡಲು ಮೊಟ್ಟಮೊದಲ ತುತ್ತು ಶಿವನ ನಾಲಗೆ ರುಚಿಗೆ ಸಂದಿತು. ಶಿವನಿಗೆ ನುಚ್ಚಿನ ಅಂಬಲಿಯು ಸುದೆಗಿಂತ ನೂರುಮಡಿ ಸವಿಯಾಯಿತಂತೆ! ಚೆನ್ನಯ್ಯನೊಡನೆ ಒಂದಾಗಿ ಅಂಬಲಿಯನ್ನು ಲವಲವಿಸಿ ಸವಿದನಂತೆ! ಶಿವನಿಗನ್ನಿಸಿತು. "ಒಂದು ಸುರಿಗೆ ಶಿವಪದ! ಮುಂದೆ ಅರ್ಪಿಸುವ ಸುರಿಗೆ ಶಿವಪದಕ್ಕೆ ಮಿಗಿಲಾದ ಘನಪದವೆಲ್ಲಿದೆ? ಶಿವನೂ ಉಂಡು ತಣಿದ. ಚೆನ್ನಯ್ಯನೂ ಸಂತೃಪ್ತನಾದ

ಆವಾಗ-

"ಅಂದು ಶಿವನೊಡನುಂಡ ಚೆನ್ನನಂದುತ್ತಂ

ಭಾಪು ಭಾಗ್ಯವೇ ಚೆನ್ನನಿಂದಕರುಂಟೆ

ಭಾಪು ಭಾಗ್ಯವೇ ಶಿವನ ಕಾರಣ್ಯವಿನಿತುಂಟೆ

ಇಂತು ಶಿವನೂ ಚೆನ್ನನೂ ತಣಿಪುತಲಿರುತ್ತ

ಸಂತ ಸುಖದಿಂದ ಭಾಸ್ಕರನುದಯವಾಗುತ್ತ'

ಹೀಗೆ ಸಾಕ್ಷಾತ್ ಶಿವನೇ ಮಾದರ ಚೆನ್ನಯ್ಯನ ಮನೆಯ ಅಂಬಲಿಯ ಸವಿದು ಇದೇ ನನಗೆ ಪರಮಾನ್ನ, ಅಮೃತಾನ್ನ, ದೇವಾನ್ನ, ದಿವ್ಯಾನ್ನವೆಂದು, ರಾಜ ಕರಿಕಾಲ ಚೋಳನ ಮನೆಯ ಆತಿಥ್ಯವನ್ನೇ ಮರೆತು ಕುಳಿತಿರುವಾಗ, ಮಾದಿಗರ ಜೊತೆ ಸಹಭೋಜನವಿರಲಿ ಅವರನ್ನು ಮುಟ್ಟಿಸಿಕೊಳ್ಳುವುದೇ ಪಾಪವೆಂದು ಹೇಳುವ ನೀವೆಷ್ಟರವರು ಎಂದು ವೈದಿಕರು ಪುಂಗಿದ ಪುರಾಣಗಳನ್ನೇ, ದೇವರುಗಳನ್ನೇ ಅವರ ಮುಖಕ್ಕಿಡಿದು ವೈದಿಕರ ಅಹಂಕಾರಕ್ಕೆ ಮಣ್ಣು ಮುಕ್ಕಿಸಿದ್ದಾನೆ.

ಮಾದರ ಚೆನ್ನಯ್ಯನ ಮನೆಯ ಅಂಬಲಿಗೆ ಮನಸೋತು ತನ್ನರಮನೆಯ ಆಥಿತ್ಯಕ್ಕೆ ಬರದೆ ಹೋದ ಶಿವ, ಮಾದರ ಚೆನ್ನಯ್ಯನ ಗುಪ್ತ ಭಕ್ತಿಯ ಕುರಿತು ಕರಿಕಾಲ ಚೋಳನಲ್ಲಿ ವಿವರವಾಗಿ ಹೇಳಿ, ಚೆನ್ನಯ್ಯನ ಗುಪ್ತ ಭಕ್ತಿಯ ಅಂಬಲಿಗೆ ಸಮಾನಾದ ರುಚಿ ಈ ಲೋದಲ್ಲಿ ಯಾವುದೂ ಇಲ್ಲ. ಕ್ಷೀರ, ಮಧು, ಮಾವು, ತವರಾಜ, ಜಂಬೂ, ದ್ರಾಕ್ಷಿ,...ಊಹೂಂ....! ಇನ್ನಾವುದು ಅವನಂಬಲಿಗೆ ಸಮವಲ್ಲ ಎಂದೇಳಿ, ಲಿಂಗದಲ್ಲಿ ಸೇರಿಕೊಂಡು ಬಿಡುತ್ತಾನೆ.

ಇತ್ತ ಕರಿಕಾಲ ಚೋಳನು ಮಾದರ ಚೆನ್ನಯ್ಯನ ಅರಸುತ್ತಾ ಮಾದಿಗರ ಕೇರಿ ಕೇರಿಗೆ ಬರುತ್ತಾ...

ತೋರಿರೇ ಚಂದ್ರ ಮೌಳಿಯ ಭಕ್ತ ಚನ್ನನಂ

ತೋರಿರೇ ಷಡ್ವರ್ಣಕರ್ಣನಂ ಚೆನ್ನನಂ

ಚೆನ್ನನಂ ತೋರಿಯನ್ನು ಕಾಯ್ದುಕೊಳ್ಳಿರೇ

ಚೆನ್ನಯ್ಯ ನೆನ್ನಯ್ಯ ಕಾಯ್ದುಕೊಳ್ಳಿರೇ

ಹೀಗೆ ಚೆನ್ನಯ್ಯನನ್ನು ಅರಸುತ್ತಾ ಬರುವ ರಾಜ ಕರಿಕಾಲಚೋಳ ಊಟ ನೀರು ನಿದ್ದೆ ಬಿಟ್ಟು ಊರೂರು ಅಲೆಯುತ್ತಾನೆ. ಚೆನ್ನಯ್ಯನನ್ನು ಹೇಗಾದರೂ ಸರಿ ಪತ್ತೆ ಹಚ್ಚಿ ತೋರಿಸಿರೆಂದು ಆಳು ಕಾಳುಗಳನ್ನು ದಿಕ್ಕು ದಿಕ್ಕಿಗಟ್ಟುತ್ತಾನೆ. ಚೆನ್ನಯ್ಯನ ಕಾಲ್ ಗೆನ್ನ ಹಣೆತಾಗಿಸದೆ ನನಗಿನ್ನು ಮುಕ್ತಿ ಇಲ್ಲವೆಂದು ಕಣ್ಣೀರಾಗುತ್ತಾನೆ.

ಹೀಗೆ ಚನ್ನಯ್ಯನ ಗುಡಿಸಲಿಗೆ ಬಂದ ಚೋಳರಾಜನ ಹರಿಹರನ ಮಾತಲೇ ಕೇಳುವುದಾದರೆ,

ಚೋಳರಾಜನು ತನ್ನೆಲ್ಲ ಭಾವಗಳನ್ನು ತಂದುಕೊಂಡು ಚೆನ್ನಯ್ಯನ ಕಾಲಿಡಿದು ಭಕ್ತಿಯಿಂದ ನಮಸ್ಕರಿಸಿ 'ಪಾದಮಂ ಬಂದೆ ಬಿಡನೆಂದು ಹೆಣಗುತಿರೆ' ಚೆನ್ನಯ್ಯನಿಗೆ ಮಾತೇ ಹೊರಡದಾಯ್ತು. "ಏಳಯ್ಯ ಚೋಳ ನೃಪನಿಂತು - ಬರ್ಪರೆ, ಎನ್ನ ಕುಲಮಂ ನೋಡದಿಂತು ಬರ್ಪರೆ ಚೋಳ? ನನ್ನ ಜಾತಿಯನ್ನು ಲೆಕ್ಕಿಸದೆ ನೀವಿಂತು ಮಾಡುವುದೆಂದು ಲಜ್ಜೆಯಿಂದ ಹಿಂದೆ ಸರಿಯುತ್ತಾನೆ. ಗದಗದನೆ ನಡುಗಿದ ಚೆನ್ನ ನಿನಗೆ ನಿನ್ನಾಣೆ ಯನ್ನಾಣೆ ಬಿಡು ಬಿಡು ಚೋಳನೆಂದರೆ

ಎನೆ ದೇವ ದೇವನೊಲಿದವನ ಕುಲಂ ಸತ್ಕುಲಂ

ಘನ ಮಹಿಮನೊಲಿದ ಜಾತಿಯೇ ಜಾತಿ ನಿರ್ಮಲಂ

ಶರ್ವನೊಡನುಂಡ ನಿಮ್ಮ ಜಾತಿಗಾಂ ಸರಿಯೇ

ಸರ್ವಜ್ಞನಿಮ್ಮ ಕೆರ್ಪಿಗೆನ್ನ ಶಿರ ಸರಿಯೇ.

ಹರಿಹರ ಇದೊಂದು ರಗಳೆಯ ಮೂಲಕ ಜಾತಿ ಮೇಲರಿಮೆಯ ರೋಗಿಷ್ಟ ಸಮಾಜಕ್ಕೆ ಅತಿ ದೊಡ್ಡ ಪೆಟ್ಟನ್ನೇ ಕೊಟ್ಟಿದ್ದಾನೆಂದುಕೊಂಡರಡ್ಡಿಯಿಲ್ಲ.

ಸಮಾಜದ ಎಲ್ಲ ಸ್ಥರದಲ್ಲೂ ವಂಚಿತರಾಗಿ, ವಿದ್ಯೆ,ಆಸ್ತಿಗಳಿಂದ ವಂಚಿತರಾಗಿ, ಮಲ ಬಾಚುವ, ಸತ್ತ ದನ ಹೊರುವ, ಬಿಟ್ಟಿ ಚಾಕರಿಗಳಲ್ಲಿ ತೊಡಗಿದ್ದ ಮಾದರ ಸಮುದಾಯದ ಚೆನ್ನಯ್ಯನ ಮನೆಯಲ್ಲಿ ಅಂಬಲಿಯುಂಡ ಶಿವನ ಕಾರಣಕ್ಕಾಗಿ ಚೆನ್ನಯ್ಯನ ಕಾಲಿನ ಚಪ್ಪಲಿಗೆ ನನ್ನ ಶಿರದ ಕಿರೀಟ ಸಾಟಿಯಾಗಲಾರದೆಂದು ಸ್ವತಃ ರಾಜನೇ ಅಂದರೆ, ರಾಜ ಪ್ರತ್ಯಕ್ಷ ದೈವವೆಂದು ಭಾವಿಸುವ ಕಾಲದಲ್ಲಿ ಮಾದರ ಚೆನ್ನಯ್ಯನ ಭಕ್ತಿಯ ಮುಂದೆ ಯಾವ ವೇದ ಪುರಾಣ ಆಗಮ ಉಪನಿಷತ್ತುಗಳಿಂದೇನು ಪ್ರಯೋಜನ ಎನ್ನುವ ಪ್ರಶ್ನೆಗಳನ್ನೆಬ್ಬಿಸಿ ವೈದಿಕರ ಶ್ರೇಷ್ಟತೆಯ ವ್ಯಸನದ ನಡು ಮುರಿಯುವ ಕೆಲಸ ಮಾಡಿದ್ದಾನೆ ಹರಿಹರ,

ಮಾದರ ಚೆನ್ನಯ್ಯ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವಿಯಲ್ಲಿ ಹನ್ನೊಂದನೆ ಶತಮಾನದಲ್ಲಿ ಜೀವಿಸಿದ್ದ ಶಿವಶರಣ. ಉದ್ಯೋಗಾರ್ಥವಾಗಿ ಕಂಚಿ ಪಟ್ಟಣಕ್ಕೆ ಬಂದು ಕುದುರೆಗಳಿಗೆ ಹುಲ್ಲು ತರುವ ಕಾಯಕ ಮಾಡಿಕೊಂಡು ತನ್ನ ವಚನಗಳ ಮೂಲಕ ಸಮಾಜದ ಮೌಢ್ಯಗಳಿಗೆದುರಾಗಿ ನಿಂತ ಗುಪ್ತ ಶಿವಭಕ್ತ, ಅಂಬಲಿಯುಂಡ ಶಿವನ ಮೂಲಕ ತನ್ನ ಗುಪ್ತಭಕ್ತಿಯ ಬಯಲಾಗಿ ಕಂಚಿಯಿಂದ ಬಳ್ಳಿಗಾವಿಗೆ ಬಂದು ಶಿವೈಕ್ಯನಾಗುತ್ತಾನೆ. ಅತ್ತ ಹನ್ನೆರಡನೆ ಶತಮಾನದಲ್ಲಿ ವೈದಿಕಶಾಹಿಗಳ ವಿರುದ್ಧ ಬಂಡೆದ್ದು ಸಮಸಮಾಜದ ನಿರ್ಮಾಣದ ಪಣತೊಟ್ಟ ಬಸವಣ್ಣನಿಗೆ ಜನ ಸಾಮಾನ್ಯರಿಗೂ ಹತ್ತಿರವಾಗಬಲ್ಲ ರಚನೆ ಮತ್ತು ಭಾಷಾ ಬಳಕೆಯ ಬಗ್ಗೆ ಗೊಂದಲವೆರ್ಪಟ್ಟಿದ್ದಾಗ ಮಾದರ ಚೆನ್ನಯ್ಯನ ವಚನ ಪರಂಪರೆಯ ಸುಳಿವು ಸಿಕ್ಕಿ ಸ್ವತಃ ಬಸವಣ್ಣನೇ ಕಂಚಿ ಮತ್ತು ಬಳ್ಳಿಗಾವೆಗೆ ಬಂದು ಚನ್ನಯ್ಯನ

ವಚನಗಳ ಅಧ್ಯಯನ ನಡೆಸಿ ಅವುಗಳನ್ನು ಸಾಧ್ಯವಾದಷ್ಟೂ ಸಂಗ್ರಹಿಸಿ, ಸಂಸ್ಕೃತದ ಸೋಂಕಿಲ್ಲದೆ ಜನಸಾಮಾನ್ಯರಿಗೂ



ಅರ್ಥವಾಗುವಂತಿದ್ದ ವಚನಗಳ ಪರಂಪರೆಯನ್ನು ಮುಂದುವರೆಸಿ, ವಚನಗಳ ಚಳುವಳಿಗೆ ನಾಂದಿ ಹಾಡಿದವನು ಬಸವಣ್ಣ. ಕಲ್ಯಾಣ ಕ್ರಾಂತಿಯ ದಳ್ಳುರಿಗೆ ಸಿಕ್ಕಿ ನಾಶವಾದ ಅಪಾರ ವಚನ ಸಾಹಿತ್ಯಗಳ ಜೊತೆಯಲ್ಲಿ ಮಾದರ ಚೆನ್ನಯ್ಯನ ವಚನಗಳೂ ಸೇರಿ ಸುಟ್ಟುಹೋದ ಪರಿಣಾಮ ಇವತ್ತಿಗೂ ಚನ್ನಯ್ಯನ ವಚನಗಳ ಪೈಕಿ ನಮಗೆ ಲಭ್ಯವಿರುವುದು ಕೇವಲ ಹನ್ನೊಂದು ವಚನಗಳು ಮಾತ್ರ. ಆದರೂ ಆ ಹನ್ನೊಂದು ವಚನಗಳು ಎತ್ತುವ ಅನೇಕ ಪ್ರಶ್ನೆಗಳ ಮುಂದೆ ಯಾವ ಕುಲಶ್ರೇಷ್ಟತೆಯ ವಾದಗಳೂ ನಿಲ್ಲಲಾರವೆಂಬುದು ಸೂರ್ಯ ಚಂದ್ರರಷ್ಟೇ ಸತ್ಯ. ಕೊನೆಗೆ ಮಾದರ ಚನ್ನಯ್ಯನ ಈ ವಚನದೊಂದಿಗೆ ಈ ಲೇಖನಕ್ಕೆ ವಿರಾಮ ನೀಡುತ್ತಿದ್ದೇನೆ.

ಸಾಂಖ್ಯ ಸ್ವಪಚ, ಅಗಸ್ತ್ರ ಕಬ್ಬಿಲ
ದೂರ್ವಾಸ ಮಚ್ಚಿಗ, ದದೀಚಿ ಕೀಲಿಗ
ಕಶ್ಯಪ ಚಮ್ಮಾರ, ರೋಮಜ ಕಂಚುಗಾರ
ಕೌಂಡಿಲ್ಯ ನಾವಿಧನೆಂಬುದನರಿದು
ಮತ್ತೆ ಕುಲವುಂಟೆಂದು ಛಲಕ್ಕೆ ಹೊರಲೇತಕ್ಕೆ?
ಇಂತೀ ಸಪ್ತ ಋಷಿಯರುಗಳೆಲ್ಲರೂ
ಸತ್ಯದಿಂದ ಮುಕ್ತರಾದುದನರಿಯದೆ
ಅಸತ್ಯದಲಿ ನಡೆದು, ವಿಪ್ರರು ನಾವು ಘನವೆಂದು
ಹೋರುವ ಹೊತ್ತು ಹೋಕರ ಅದೇತಕ್ಕೆ?
ಕೈಯುಳಿ ಕತ್ತಿ ಅಡಿಗೊಂಟಕ್ಕಡಿಯಾಗಬೇಡ
ಅರಿ ನಿಜಾತ್ಮರಾಮ ರಾಮನಾ..

**ಶರೀಫ ಮತ್ತು ಕೋಮು ಸೌಹಾರ್ದತೆ**

**ಡಾ. ನಾಗಭೂಷಣ ಬಗ್ಗನಡು**

ಭಾರತ ಇಡೀ ಜಗತ್ತಿನಲ್ಲಿಯೇ ವೈವಿಧ್ಯಮಯ ದೇಶ. ಇಲ್ಲಿ ಮೂವತ್ತೊಂದು ರಾಜ್ಯಗಳು ಸಾವಿರದ ಆರುನೂರ ಹದಿನೆಂಟು ಭಾಷೆಗಳು, ಆರು ಸಾವಿರದ ನಾಲ್ಕು ನೂರು ಜಾತಿಗಳು, ಆರು ಧರ್ಮಗಳು, ಆರು ಜನಾಂಗೀಯ ಸಮುದಾಯಗಳು, ಇಪ್ಪತ್ತೊಂಬತ್ತು ಪ್ರಮುಖ ರಾಷ್ಟ್ರೀಯ ಹಬ್ಬಗಳಿಂದ ಕೂಡಿದ, ಸಹಬಾಳ್ವೆ ನಡೆಸುತ್ತಿರುವ ದೇಶ, ಈ ದೇಶದ ಇತಿಹಾಸವನ್ನು ತೆರೆದು ನೋಡಿದರೆ ಮಧ್ಯಕಾಲೀನಯುಗದಲ್ಲಿ ಅನ್ಯರ ಆಕ್ರಮಣದಿಂದ ಸ್ವಲ್ಪಮಟ್ಟಿಗೆ ತತ್ತರಿಸಿದ್ದರೂ, ಎಲ್ಲದನ್ನು ಒಳಗು ಮಾಡಿಕೊಂಡು "ಸಹಬಾಳ್ವೆಯೇ ಧ್ಯೆಯವೆಂದು ನಂಬಿಕೊಂಡು ಬಂದಿರುವುದು ಈ ದೇಶದ ಆತ್ಮಚರಿತ್ರೆಯ ಒಂದು ವಿಚಿತ್ರವೇ ಸರಿ ಎಂದು ಹೇಳಬೇಕು.

ಭಾರತ ತನ್ನ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದ ದಿನಗಳಲ್ಲಿ ಒಗ್ಗಟ್ಟಿನ, ಏಕತೆಯ ಪರಾಕಾಷ್ಠತೆಯನ್ನು ಕಾಣಬಹುದು. ೧೯೪೮ರಲ್ಲಿ ಗಾಂಧೀಜಿಯವರ ಸಾವಿನೊಂದಿಗೆ `ಕೋಮು' ಎನ್ನುವ ಬೀಜ ಮೊಳೆತು, ಅದೂ ಇಂದಿರಾಗಾಂಧಿಯ ಸಾವಿನೊಂದಿಗೆ ಅದರ ವಿಕಾರರೂಪಗಳು ಒಂದೊಂದೇ ಕಾಣತೊಡಗಿದವು. ೧೯೯೨ ಡಿಸೆಂಬರ್ ೬ರಂದು ಬಾಬರಿ ಮಸೀದಿಯನ್ನು ಕೆಡುವುದರೊಂದಿಗೆ ಅದರ ಕರಾಳ ರೂಪದ ಅಧ್ಯಾಯಗಳು ತೆರೆದುಕೊಂಡವು. ೨೦೦೨ರಲ್ಲಿ ಗೋಧ್ರಾಹತ್ಯಾ ಘಟನೆ, ೧೯೯೦ ರಲ್ಲಿ ನಡೆದ ಮುಂಬೈ ಸ್ಫೋಟ ಪ್ರಕರಣ, ೨೦೦೮ರಲ್ಲಿ ಒರಿಸ್ಸಾ ಕೋಮು ಗಲಭೆ ಮತ್ತು ೨೦೦೮ ನವೆಂಬರ್ ೨೬ರಂದು ನಡೆದ ಮುಂಬೈ ತಾಜ್ ಹೋಟೆಲ್ ಬಾಂಬ್ ಸ್ಫೋಟ ಹಾಗೂ ಕರ್ನಾಟಕದ ವಿವಿಧ ಮೂಲೆಗಳಲ್ಲಿ ನಡೆಯುತ್ತಿರುವ ಚರ್ಚೆಗಳ ಮೇಲಿನ ದಾಳಿಗಳು ಇಡೀ ಭಾರತವನ್ನು ತಲ್ಲಣಗೊಳಿಸುತ್ತಿವೆ.

ಜಾಗತೀಕರಣದ ತಪ್ಪು ನೀತಿಯಿಂದಾಗಿ ಸಾಮಾನ್ಯ ಜನ ಬೀದಿಗೆ ಬೀಳುತ್ತಿದ್ದರೆ, ಕೋಮುದಳ್ಳುರಿಯಿಂದ ಅಲ್ಪಸಂಖ್ಯಾತ ಸಮುದಾಯಗಳು ಆತಂಕದಲ್ಲಿ ಸಿಲುಕಿಕೊಂಡಿವೆ. ಕೋಮುವಾದದ ವಿಷವರ್ತುಲ ಅಗ್ನಿಜ್ವಾಲೆಗೆ ಅನೇಕ ಅಸುಕಂದಮ್ಮಗಳು, ಮಹಿಳೆಯರು, ನಿರ್ಗತಿಕರು, ಅಸಹಾಯಕರು ಬಲಿಯಾಗುತ್ತಿದ್ದಾರೆ. ಹಾಗೆ ನೋಡಿದರೆ ಇತಿಹಾಸದಲ್ಲಿ ಕೋಮುಗಲಭೆಗಳು ನಡೆದಿಲ್ಲವೆಂದಲ್ಲ, ಆಯಾಕಾಲದಲ್ಲಿ ಸಹಿಷ್ಣತೆಯುಳ್ಳರಾಜರು ಕೋಮುಗಲಭೆಯನ್ನು ಹತ್ತಿಕ್ಕುವಲ್ಲಿ ಸಫಲರಾದವರೇ, ಅನ್ಯಧರ್ಮಗಳ ಬಗ್ಗೆ ಅಸಹನೆಯನ್ನು ತುಂಬುತ್ತಿದ್ದ ಅಧರ್ಮೀಯರಿಗೆ ಸಾಹಿತ್ಯ ಎಂಬುದು ನೀತಿಪಾಠ ಹೇಳುತ್ತಿತ್ತು. ಹಾಗಾಗಿ ಕೋಮುಗಲಭೆಯ ವಿಕಾರಗಳು ರೂಪ ಪಡೆಯುವುದಕ್ಕಿಂತ ಮುಂಚೆಯೇ ಸಾಹಿತ್ಯವು ಅವುಗಳನ್ನು ಶಮನಗೊಳಿಸುತ್ತಿದ್ದವು.

ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಕೋಮುಗಲಭೆ ಮತ್ತು ಕೋಮುಸೌಹಾರ್ದತೆ ಎರಡು ಅಧ್ಯಾಯಗಳನ್ನೂ ಕಾಣಬಹುದು. ಪಂಪ ಜಿನಧರ್ಮವನ್ನು ಹೇಳುತ್ತಲೇ ಮಾನವ ಧರ್ಮಕ್ಕೆ ಪ್ರಾಶಸ್ತ್ರವನ್ನು ನೀಡಿದ. ಆದರೆ ಇದೇ ಕಾಲಘಟ್ಟದ ಕೊನೆಯಲ್ಲಿ ಬಂದ ಬ್ರಹ್ಮಶಿವನ ಸಮಯಪರೀಕ್ಷೆ, ನಯಸೇನನ ಧರ್ಮಾಮೃತ ಕೃತಿಗಳು ಮಾನವೀತೆಯನ್ನು ಮೀರಿದ ಸ್ಥಗಿತ ಧರ್ಮಕ್ಕೆ ಗಂಟು ಬೀಳುತ್ತಾ, ಪರಮತ ವಿಂಡಂಬನೆ ಸ್ವಮತ ಪ್ರಶಂಸೆ ಮಾಡುತ್ತಾ ಬಂದರು. ಮುಂದೆ ಹನ್ನೆರಡನೆ ಶತಮಾನದಲ್ಲಿ ಬಸವಣ್ಣ ಅಲ್ಲಮಾದಿಗಳು ವೀರಶೈವ ಧರ್ಮದೊಂದಿಗೆ 'ಕಾಯಕ'ಕ್ಕೆ ಹೆಚ್ಚು ಮಹತ್ವ ಕೊಡುವ ಮೂಲಕ ಎಲ್ಲಾ ರೀತಿಯ ಕಾಯಕಗಳಿಗೂ ("ಕಮ್ಮಾರಿಕೆ ಚಮ್ಮಾರಿಕೆ') ಅಸ್ಮಿತೆಗಳನ್ನು ದೊರಕಿಸಿಕೊಟ್ಟರು. ಆದರೆ ಇದರ ತುದಿ ಚೆನ್ನಬಸವಣ್ಣನವರ ಮೂಲಕ ಮತ್ತೆ ವೀರಶೈವ ಧರ್ಮ ಸ್ಥಗಿತ ಧರ್ಮವನ್ನೇ ಪ್ರತಿಪಾದಿಸಿತು. ಅದು ವಚನಗಳನ್ನು ಶಾಸ್ತ್ರೀಕರಿಸುವುದರ ಮೂಲಕ ಮತ್ತಷ್ಟು ಜಡತ್ವವನ್ನು ಮೈಗೂಡಿಸಿಕೊಂಡಿತು. ೧೭-೧೮ನೇ ಶತಮಾನ ಸಾಹಿತ್ಯಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಸಂಕ್ರಮಣ ಸ್ಥಿತಿಯನ್ನು ತಲುಪಿದ ಕಾಲ. ಹರಿ-ಹರ, ವೈದಿಕ-ಅವೈದಿಕ, ವೈಷ್ಣವ-ಶೈವ-ಜಿನ ಈ ಎಲ್ಲಾ ಪರಂಪರೆಗಳು ತಮ್ಮೊಳಗೆ ವೈರತ್ವವನ್ನು ಕಟ್ಟಿಕೊಳ್ಳತೊಡಗಿದ್ದವು. ಈ ವೈರತ್ವಗಳನ್ನು ದಾಟಿಬಂದವರೆಂದರೆ ತತ್ವಪದಕರಾರು, ಅವಧೂತರು, ಸೂಫಿಗಳು, ಸರ್ವಜ್ಞ ನವಿಲುಗುಂದದ ನಾಗಲಿಂಗ ಯತಿಗಳು, ಗರಗದ ಮಡಿವಾಳಪ್ಪನವರು, ನಾಯಕನಹಟ್ಟಿ ತಿಪ್ಪೇಸ್ವಾಮಿ, ಸಂತ ಶಿಶುನಾಳ ಷರೀಫರು.

ಅವಧೂತರು, ತತ್ವಪದಕಾರರು, ಸೂಫಿಗಳು ಜಡಗೊಂಡ ಮೂಲ ಧರ್ಮಗಳನ್ನು ನಿರಾಕರಿಸಿ ಸ್ವಚ್ಛಂದವಾದ ಮಾನವೀಯ ಧರ್ಮವನ್ನು ಬೋಧಿಸಿದರು. 'ಪರಕ್ಕಿಂತ 'ಇಹ'ದ ಬದುಕಿನ ಮಹತ್ವವನ್ನು ಸಾರಿದರು. 'ಧರ್ಮ'ದ ಮೂಲಭೂತವಾದವನ್ನು ಬಿಟ್ಟು, ಮಾನವೀಯತೆಯನ್ನು ಮನುಷ್ಯನ ಬದುಕಿನಲ್ಲಿ ತರಲು ಪ್ರಯತ್ನಿಸಿದರು. ಮನುಷ್ಯ ಮನುಷ್ಯರ ನಡುವೆ ಇದ್ದ ಧರ್ಮದ ಗೋಡೆಗಳನ್ನು ಕೆಡವಿ ಸೌಹಾರ್ದ ಬದುಕಿಗಾಗಿ ಹಂಬಲಿಸಿದರು. ಆಗಾಗ ಇಣುಕುತ್ತಿದ್ದ ಜಾತಿ ಭೇದಗಳನ್ನು, ಅನ್ಯಧರ್ಮದ ಅಸಹನೆಯನ್ನು, ಕುಲಗಳನ್ನು ಖಂಡಿಸುತ್ತಾ ಬಂದರು. ಶರೀಫರು ಮಹಮ್ಮದಿಯರಾದರು. ಹರಿಹರ-ಹಜರತ್ ಎಂಬ ತತ್ವಗಳ ಸಂಗಮವೆನಿಸಿ ಬಾಳಿದವರು. ಇವರ ತತ್ವಪದಗಳು ಬಹುತೇಕವಾಗಿ ಹಿಂದೂ ವೇದಾಂತ ಪುರಾಣಗಳ ದೃಷ್ಟಿಕೋನದಿಂದ ಮೂಡಿಬಂದಂತಹವು.

ಶರೀಫರು ಸ್ಥಗಿತ ಧರ್ಮಗಳಲ್ಲಿರುವ ಜಡ ಮೌಲ್ಯಗಳನ್ನು ಅಮಾನವೀಯತೆಯನ್ನು ವಿರೋಧಿಸುತ್ತಿದ್ದರು. ಇವರು ಹತ್ತೊಂಬತ್ತನೆಯ ಶತಮಾನದಲ್ಲಿ ಬಾಳಿ ಬದುಕಿದವರು. ಆ ಸಂದರ್ಭದಲ್ಲಿ "ಕೋಮುಗಲಭೆ" ಮತ್ತು "ಕೋಮು ಸೌಹಾರ್ದತೆ" ಪದಗಳು ಪ್ರಚಲಿದಲ್ಲಿರಲಿಲ್ಲ. ಆಗ ಧರ್ಮ ಧರ್ಮಗಳ ನಡುವೆ ಅಸಹನೆ, ಜಾತಿ ಜಾತಿಗಳ ಮಧ್ಯೆ ಮೇಲು-ಕೀಳು ಎಂಬ ಭಾವನೆ ಬೇರೂರಿದ್ದ ಕಾಲ. ಹಾಗಾಗಿ ಶರೀಫರ ತತ್ವ ಪದಗಳಲ್ಲಿ ಈ ರೀತಿ ಪದ ಪ್ರಯೋಗಗಳನ್ನು ಕಾಣಲು ಸಾಧ್ಯವಿಲ್ಲ. ಕೋಮು ಸೌಹಾರ್ದತೆ

ಎಂಬುದು 'ಕೋಮು' ಮತ್ತು 'ಸೌಹಾರ್ದತೆ' ಎಂಬೆರಡು ಶಬ್ದಗಳಿಂದ ನಿಷ್ಪನ್ನವಾದ ಸಮಸ್ತ ಪದ. 'ಕೋಮು' ಎಂದರೆ ಜಾತಿ, ಸಮುದಾಯ, ವರ್ಗ, ಪಂಗಡ ಎಂಬರ್ಥಗಳಿವೆ. ಸೌಹಾರ್ದತೆಯು ಸುಹೃದ್ ಅಥವಾ ಸಾಹೃದ್‌ದಿಂದ ಬಂದಿದೆ. ಹೀಗೆಂದರೆ ಸ್ನೇಹ, ಆಕರ್ಷಣೆ, ಸಹಕಾರ, ಪ್ರೀತಿ ಎಂದರ್ಥ. ಈ ಎರಡು ಶಬ್ದಗಳು ಕೂಡಿದಾಗ ಜಾತಿ ಜಾತಿಗಳಲ್ಲಿ ಸಮುದಾಯ ಸಮುದಾಯಗಳಲ್ಲಿ, ಗುಂಪು ಪಂಗಡಗಳಲ್ಲಿ ಪರಸ್ಪರ ಸಹೃದಯತೆ, ಸ್ನೇಹಪರತೆ, ಸಹಕಾರ ಸೌಜನ್ಯ ಇರುವುದು ಎಂದರ್ಥ. ಅಂದರೆ ಧರ್ಮ ಧರ್ಮಗಳಲ್ಲಿ ಪ್ರೀತಿ, ಸಹನೆಯ ಬಾವ ಬೆಸೆದುಕೊಂಡಿರುವುದು.

ಶರೀಫರು ಕೋಮು ಸೌಹಾರ್ದತೆಯನ್ನು ತಮ್ಮ ತತ್ವಪದಗಳಲ್ಲಿ ಹರಿಯಬಿಟ್ಟಿದ್ದಾರೆ. ಇವರು ಬಹುತೇಕವಾಗಿ 'ಈಶ್ವರ' ಪರಿಕಲ್ಪನೆಯಲ್ಲಿ ವಿಶ್ವಾಸ ಇಟ್ಟವರು. ಅದರಲ್ಲಿಯ ಅಮಾನವೀಯತೆಯನ್ನೂ ವಿರೋಧಿಸಿದವರು. ಮಠ-ಮಸೀದಿಗಳಲ್ಲಿ ಮಾತ್ರ ದೇವರಿದ್ದಾನೆ ಎಂದು ಪುರೋಹಿತರು, ಮೌಲ್ವಿಗಳು ನಂಬಿದ್ದನ್ನು ನಿರಾಕರಿಸಿದರು. 'ಮಣ್ಣ ಬಿಟ್ಟು ಮಡಿಕೆ ಇಲ್ಲ, ತನ್ನ ಬಿಟ್ಟು ದೇವರಿಲ್ಲ' ಎಂಬ ಅದ್ವೈತ ಸಿದ್ಧಾಂತ ಬೋಧಿಸಿ ಮನುಷ್ಯನ ಆತ್ಮಕ್ಕೆ ಮತ್ತು ದೇಹಕ್ಕೆ ಹೆಚ್ಚು ಮಹತ್ವ ಕೊಟ್ಟರು.

“ಗುಡಿಯ ನೋಡಿರಣ್ಣಾ ದೇಹದ

ಗುಡಿಯ ನೋಡಿರಣ್ಣಾ

ಗುಡಿಯ ನೋಡಿರದ

ಪೊಡವಿಗೆ ಒಡೆಯನು

ಅಡಗಿಕೊಂಡು ಕಡು ಬೆಡಗಿನೊಳಿರುತಿಹ'

ಎಂಬುದಾಗಿ ಹಾಡಿದರು ಶರೀಫ.

ದೇಹವನೇ ಗುಡಿಯನ್ನಾಗಿ, ಮಸೀದಿಯನ್ನಾಗಿ ಮಾಡಿಕೊಂಡು ಕರ್ಮಠಗಳಂತಿದ್ದ ಗುಡಿ ಮಸೀದಿಯನ್ನು ನಿರಾಕರಿಸಿದರು. 'ಶಿವಪಥವನರಿವಡೆ ಗುರು ಪಥವೇ ಮೊದಲು' ಎನ್ನುತ್ತಾ ಗುರುವಿನ ಮೂಲಕ ಜ್ಞಾನಿಯಾದ ಮನುಷ್ಯನಿಗೆ ಅಗ್ರಸ್ಥಾನ ನೀಡಿದ್ದರು. ಇವರು ಮಹಮ್ಮದೀಯರಾದರೂ ಪಡೆದ ಗುರು ವೈದಿಕ, ಹಾಗಾಗಿ ಮತಧರ್ಮಗಳ ಬೇಲಿಗಳನ್ನು ಮೀರಿ 'ಜ್ಞಾನ' ಮತ್ತು 'ವಿದ್ವತ್'ಗೆ ಹೆಚ್ಚಿನ ಮಹತ್ವ ನೀಡಿದರು ಶರೀಫರು.

ಶರೀಫರ ರಚನೆಗಳು ಬದುಕಿನ ಮೂಲದಿಂದ ಬಂದತಹವು. ಬದುಕು ಮತ್ತು ಜ್ಞಾನದ ಮುಖಾಂತರ ದೇವರ ಪರಿಕಲ್ಪನೆಯನ್ನು ತೆರೆದಿಡುವುದರ ಮೂಲಕ ಮತ ಬೇಧಗಳನ್ನು ದಾಟಲಿಕ್ಕೆ ಸಾಧ್ಯವಾಗಿದ್ದು, ಅವರ

ರಚನೆಗಳಾದ ದೇವಸ್ತುತಿ, ಶಕ್ತಿಸ್ತುತಿ, ಗುರುಸ್ತುತಿ, ದಂಡಕಗಳು, ಕಾಲಜ್ಞಾನ ಇವು ಭಾರತೀಯ ಪರಂಪರೆಯಲ್ಲಿರುವ ಒಳಿತನ್ನು ತೆರದಿಟ್ಟಿವೆ. ಸವಾಲ್ ಜವಾಬ್, ಅಲಾವಿ ಪದ, ಹಿಂದೂ ಮುಸ್ಲಿಂ ಸಂಸ್ಕೃತಿ ಸಂಗಮ ಪದಗಳು ಎರಡು ಪಂಥಗಳ ಸಂಗಮ ಸ್ಥಿತಿಯನ್ನು ತೆರೆದಿಡುತ್ತದೆ. ಶರೀಫರ ಮೇಲೆ ಹನ್ನೆರಡನೆ ಶತಮಾನದ ಬಸವಣ್ಣ ಅಲ್ಲಮಾದಿಗಳು ಹೆಚ್ಚಾಗಿ ಪ್ರಭಾವ ಬೀರಿದ್ದಾರೆ. ವೈದಿಕ ಧರ್ಮವನ್ನು ಅಷ್ಟಾಗಿ ಪ್ರಸ್ತಾಪಿಸದ ಶರೀಫ, ರಾಮಾಯಣ ಮಹಾಭಾರತ ಘಟನೆಗಳನ್ನು ತತ್ವ ಪದಗಳಾನ್ನಾಗಿ ಮಾಡಿಕೊಂಡಿದ್ದಾರೆ. ಮುಸ್ಲಿಂ ಆಚರಣೆಗಳು



ಹಬ್ಬಗಳು, ಇವುಗಳಲ್ಲಿರುವ ಮೌಢ್ಯತೆಗಳನ್ನು ತೀಕ್ಷ್ಮವಾಗಿ ವಿರೋಧಿಸಿದ್ದಾರೆ. ಮೊಹರಮ್ ಹಬ್ಬದ ಆಚಾರಣೆಯಾದ ಕೆಂಡ ತುಳಿಯುವುದನ್ನು ವಿರೋಧಿಸುತ್ತಿದ್ದರು.

ಅಲಾವಿ ಇನ್ಯಾತಕ್ಕಾಡಬೇಕು.
ಭೇದವನರಿಯದೆ ನೀವು ಸಾಲ ತುರುಕುರು ಕೂಡಿ
ಕುಂದನಿಟ್ಟು ಕುಣಿಸ್ಯಾಡೋ ಅಲಾವಾ ಯಾತಕ್ಕಾಡಬೇಕು..
ಆರು ಶಾಸ್ತ್ರ ಹದಿನೆಂಟು ಪುರಾಣ
ಓದಿಕೋ ಪುರಾಣ ಓದಿಕೋ ಕಿತಾಬಯಾತಾಕ್ಕಾಡಬೇಕು.
ಇದು ಕಂಡು ಶಿಶುನಾಳ ಭೂವರ ಕವಿಗಳ
ಮೂರು ಮಾತು ತಿಳಿದು ಹಾಡ ಬ್ಯಾಡದೋ ಮೂಳಾ ಯಾತಕ್ಕಾಡಬೇಕು.

ಅಂದು ಮತಗಳಲ್ಲಿ ಇದ್ದ ಕುಂದುಗಳನ್ನು ಶರೀಫರು ದಿಟ್ಟತನದಿಂದ ಬಯಲಿಗೆಳೆಯುತ್ತಾರೆ. ಮತಭೇದಗಳನ್ನು ಪರಿಗಣಿಸದೆ, ಮನುಷ್ಯನಲ್ಲಿರುವ ವಿಶ್ವಮಾನವ ಪ್ರಜ್ಞೆಯ ಬಗ್ಗೆ ಮಾತನಾಡುತ್ತಾರೆ. ಇವರ ಬಹುತೇಕ ರಚನೆಗಳು ಭಾರತೀಯ ಬಹುಪರಂಪರೆಗಳ ಆಧ್ಯಾತ್ಮಿಕತೆಯನ್ನು ಸಾರುತ್ತವೆ. ಹರಿ-ಹರ ಪರಂಪರೆಗಳು ಪ್ರಭಾವ ಬೀರಿದ್ದರೂ ಶರೀಫರ ಒಲವು ವೀರಶೈವ ಮತದ ಕಡೆಗೆ, ಆದರೆ ವೀರಶೈವವನ್ನು ಕುರುಡಾಗಿ ನಂಬುವುದಿಲ್ಲ. ಅದನ್ನು ಮನುಷ್ಯ ಬದುಕಿನ ತಕ್ಕಡಿಗೆ ಹಾಕಿ ತೂಗುತ್ತಾರೆ. ಅಲ್ಲಿ ವೈದಿಕ ದೇವಸ್ತುತಿಗಳನ್ನು ಮಾಡಿದರೂ ವಾಯುವಿನ ರೂಪದಲ್ಲಿರುವ ಪ್ರಾಣಕ್ಕೆ ಹೆಚ್ಚು ಮಹತ್ವ ನೀಡುತ್ತಾರೆ. ಅವರ 'ಬುಡುಬುಡಿಕ್ಕಾ' ತತ್ವಪದದಲ್ಲಿ ಮನುಷ್ಯನ ಬದುಕಿನ ಸೆಲೆಯಿಂದ ಹೊರಟ ಆಧ್ಯಾತ್ಮಿಕತೆಯನ್ನು ತೆರೆದಿಡುವುದನ್ನು ಕಾಣಬಹುದು.

ಹೆಣ್ಣನ್ನು ಸಂಬೋಧಿಸುವ ಈ ರಚನೆ ಧರ್ಮ ನೆಲೆಯಿಂದ ಹೊರಡುವ ಆಧ್ಯಾತ್ಮಿಕತೆಯನ್ನು ನಿರಾಕರಿಸಿ ಮನುಷ್ಯನ ಬದುಕಿನ ಸೆಲೆಯಿಂದ ಹೊರಡುವ ಆಧ್ಯಾತ್ಮಿಕತೆಯನ್ನು ತೆರದಿಡುತ್ತಾರೆ.

ದೇಹದ ಮರ್ಮವನೆಲ್ಲವ ಬಲ್ಲೆ

ಕಾಯದೊಳಗೆ ಒಂದು ದೇವರುಂಟು

ಮೋಹ ಮಾಯಗಳು ತೊಲಗಲು ತಾಯಿ

ಶ್ರೇಯದ ಸಾಧನ ತಿಳಿವದು ಕೇಳೆ.

ತೈಲವಿಲ್ಲದೊಂದು ಜ್ಯೋತಿಯು ಉಂಟು

ತಲೆಯೊಳಗೆ ತಾ ಬೆಳಗುತದವ್ವಾ

ನಯನ ಹಿಡಿದು ನೀ ನೋಡವ್ವ ತಂಗಿ

ಬೈಲಿಗೆ ಬಯಲಾಗಿ ಹೋಯಿತು ಮಗಳೆ.

ಯಾವ ದೇವರೂ ದೇವರಲ್ಲ

ವಾಯು ದೇವನೇ ದೇವ ನಮ್ಮ

ಜೀವ ಅದರೊಳು ಇರುವುದು ತಂಗಿ

ಸಾವು ಇಲ್ಲದೊಂದು ಗಿಡ ಉಂಟಮ್ಮ

ದೇವರ ಮೂರ್ತತೆಯನ್ನು ನಿರಾಕರಿಸಿ ಆ ಮೂರ್ತತೆಯಾದ ಪ್ರಾಣವಾಯುವಿಗೆ ಅಗ್ರಸ್ಥಾನವನ್ನು ಶರೀಫರು ನೀಡುತ್ತಾರೆ. ಹಿಂದೂ ಮೂಲ ಪ್ರೇರಿತವಾದ ಆಧ್ಯಾತ್ಮಿಕತೆಯನ್ನು ನಿರಾಕರಿಸಿ, ಮನುಷ್ಯತ್ವ ಮೂಲದಿಂದ ಹೊರಟ ಶರೀಫರ ಆಧ್ಯಾತ್ಮಿಕತೆ ಜನರ ಬದುಕಿನೊಂದಿಗೆ ಹಾಸು ಹೊಕ್ಕಾಗಿದೆ.



ಭಾರತವು ಬಹುಸಂಸ್ಕೃತಿಗಳ ದೇಶ ಭಿನ್ನ ಸಮುದಾಯಗಳು, ಭಿನ್ನ ಜನಾಂಗಗಳು, ಭಿನ್ನ ಸಂಸ್ಕೃತಿಗಳನ್ನೊಳಗೊಂಡ ನಾಡು. ಇಲ್ಲಿ ಧರ್ಮಗಳಿವೆಯಾದರೂ ಜನಸಾಮಾನ್ಯರು ಯಾವೊಂದು ಧರ್ಮಕ್ಕೆ ಗಂಟು ಬೀಳದೆ ಎಲ್ಲಾ ಧರ್ಮಗಳ ಒಳಿತನ್ನು ತಮ್ಮ ಬದುಕಿಗೆ ಬಳಸಿಕೊಂಡವರು. ಹಾಗಾಗಿ 'ಮುಸ್ಲಿಂರು ಹಿಂದೂ ದೈವಗಳನ್ನು ನಂಬುವ, ಹಿಂದೂಗಳು 'ಮುಸ್ಲಿಂ' 'ಬಾಬಾ'ಗಳನ್ನು ನಂಬುವ ಪರಂಪರೆ ನಮ್ಮಲ್ಲಿದೆ. ಇವುಗಳ ಅಂತರಂಗದಲ್ಲಿ ಪರಸ್ಪರ ಕೊಳು ಕೊಡುಗೆಗಳು ನಡೆದಿವೆ. ಇವುಗಳಲ್ಲಿ ಅನೇಕ ಒಳ ಪಂಗಡಗಳು ವಿಶಿಷ್ಟ

ಆಚರಣೆಗಳು ವಿಭಿನ್ನ ತತ್ವಾಲೋಚನೆಗಳಿವೆ. ಹಿಂದೂಗಳಲ್ಲಿ ವೀರಶೈವ, ವೈಷ್ಣವ, ಸ್ಮಾರ್ತ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರಾದಿ ವರ್ಣಗಳಿವೆ. ಇವೆಲ್ಲ ಹಿಂದೂ ಧರ್ಮವನ್ನು ಚಾಚು ತಪ್ಪದೇ ಪಾಲಿಸುತ್ತವೆ ಎಂದಲ್ಲ. ಇವುಗಳೊಳಗೆ ಅನೇಕ ವೈರುಧ್ಯಗಳಿವೆ, ವಿರೋಧಗಳಿವೆ. ಇಸ್ಲಾಂ ಧರ್ಮದಲ್ಲಿ ಶಿಯಾ, ಸುನ್ನಿ, ಪಂಗಡಗಳು ಶೇಕ್, ಸಯ್ಯದ್, ಮೊಘಲ್, ಪಠಾಣಗಳಂಥ, ವಂಶಗಳು; ಫೀರ್- ಮುರ್ಶಾಗ್‌ರಂಥ ಧರ್ಮಗುರುಗಳು ಫಕೀರ-ದರವೇಶಿಯಂಥ ಧರ್ಮ ಭಿಕ್ಷುಗಳು; ಪಿಂಜಾರ ಜಾತಿಗಾರರಂಥ ಪದ ದಲಿತರು ಇದ್ದಾರೆ. ಇವರೆಲ್ಲ ಅಲ್ಲಾ'ನೇ ಸರ್ವ ಶ್ರೇಷ್ಠನೆಂದು ನಂಬುವುದಿಲ್ಲ. ಈ ಎಲ್ಲಾ ಸ್ಥಗಿತ ಧರ್ಮಗಳಾಚೆ ಮನುಷ್ಯ ಸಂಬಂಧವನ್ನು ತತ್ವಪದಗಳ ಮೂಲಕ ಘಟ್ಟಿಗೊಳಿಸಲು ಪ್ರಯತ್ನಪಟ್ಟವರು ಎಂದರೆ ಶರೀಫರು. ಬ್ರಾಹ್ಮಣರಾದ ಗುರು ಗೋವಿಂದಭಟ್ಟರನ್ನು ಶರೀಫರು ಗುರುವಾಗಿ ಸ್ವೀಕರಿಸಿದವರು. ಇಸ್ಲಾಂ ಧರ್ಮದ ಪ್ರಕಾರ ಇಸ್ಲಾಂ ಅಲ್ಲದವನು 'ಕಾಫಿರ'ನಿಗೆ ಸಮ ಶರೀಫ ಹಿಂದೂಗಳ ದೃಷ್ಟಿಯಿಂದ ಮೇಚ್ಛ, ಆದರೆ ಇವರಿಬ್ಬರ ಸಂಗಮ ಹಿಂದೂ ಮುಸ್ಲಿಂ ಧರ್ಮಗಳ ಸೌಹಾರ್ದತೆಯನ್ನು ಸೂಚಿಸುವಂತಹದ್ದು.

ಹಾಕಿದ ಜನವಾರವ ಸದ್ಗುರುನಾಥ

ಹಾಕಿದ ಜನಿವಾರವ

ಶಿಶಿನಾಳಧೀಶಗುರು ತನ್ನೊಡಲೊಳು

ವಶವಾದ ಸೂತ್ರವನು

ನಸು ನಗುತಲಿ ತೆಗೆದಲ್ಲಿಯೇ ತೊಡಿಸಿದ

ಉಸುರಿದ ಮಂತ್ರವ ಹೊಸಬನಮಾಡುತ

ಹಾಕಿದ ಜನಿವಾರವ

'ಉಸುರಿದ ಮಂತ್ರವ ಹೊಸಬನ ಮಾಡುತ್ತ' ಎಂಬಲ್ಲಿ ಧರ್ಮದ ಪಾಪಭೀತಿಗಳಿಂದ ಮುಕ್ತಿಗೊಳಿಸಿದವನನ್ನು ಈ ತತ್ವಪದದಲ್ಲಿ ನೆನೆಯುತ್ತಾರೆ.

ಮೂರ್ತಿ ಪೂಜೆಯನ್ನು ನಿರಾಕರಿಸಿ ಇಸ್ಲಾಂ ಧರ್ಮ ಮೊಹರಮ್ ಸಂದರ್ಭದಲ್ಲಿ ಪಂಪ-ಭೂತಗಳ ಪೂಜೆ ಮಾಡುವುದು ಹಾಗೂ ಅವುಗಳಿಗೆ ನೈವೇದ್ಯೆ ರೂಪದಲ್ಲಿ ಬೆಲ್ಲ, ಕಂದೂರಿಗಳನ್ನು ಸಲ್ಲಿಸಲಿಕ್ಕೆ ಭಕ್ತರನ್ನು ಅಪ್ರತ್ಯಕ್ಷವಾಗಿ ಪ್ರಚೋದಿಸುವ ಮುಲ್ಲಾ- ಮೌಲವಿಗಳನ್ನು ಶರೀಫರು ತರಾಟೆಗೆ ತೆಗೆದುಕೊಳ್ಳುತ್ತಾರೆ.

ಐಸುರ ಛೇ ಇದು ಏನು ಮೋಹರ ಹಬ್ಬ

ಮಾಡಿ ಧೀನ್ ದೀನ್ ಅಂಬುವರು

ಕೈಲೆ ಕೈವಾಲಿ ಕಟ್ಟಿ

ತಗಡಿನ ಹಸ್ತವ ನಿಟ್ಟಿ

ಶಾಸ್ತ ಧರ್ಮವ ಬಿಟ್ಟಿ

'ಇಸ್ಲಾಂ' ಧರ್ಮ ಹಿಡಿಯುತ್ತಿರುವ ತಪ್ಪು ಮಾರ್ಗಗಳನ್ನು ಸಾಕ್ಷಿ ಸಮೇತ ತೋರಿಸುತ್ತಾರೆ. ಜಗತ್ತು ಸೃಷ್ಟಿಯ ಆರಂಭದಲ್ಲಿ ಕುಲವನ್ನರಿಯದ ಈ ಮನುಷ್ಯ ಇಂದು ಕುಲದ ಬಿಗುಮಾನ ತಳೆಯುವುದನ್ನು ನೋಡಿ ಕೋಪಗೊಳ್ಳುತ್ತಾರೆ ಶರೀಫರು

ಬೋಕಿ ಒಳಗ ಮೂರು ಲೋಕ ಹುಟ್ಟಿತು

ಆ ಕುಲ ಈ ಕುಲ ಎಲ್ಲಿತ್ತೋ

ಜೋಕಿಲೆ ಹದಿನೆಂಟು ಜಾತಿಗೆ ಹೇಳುತೇನಿ

ಏಕ ಮುಂಡಗಿ ಮಾತಿದು ಗೊತ್ತೋ

ಎಂದು ಹಿಂದು ಧರ್ಮದಲ್ಲಿ ಜಾತಿಗಳ ಮೇಲು ಕೀಳುಗಳನ್ನು ವಿಡಂಬಿಸುತ್ತಾರೆ. ಜಾತಿಯೆಂಬುದು ಏಕಕಾಲದಲ್ಲಿ ಮೇಲ್ವರ್ಗದವರಿಗೆ ಅಭಿಮಾನವಾಗಿಯೂ ಕೆಳವರ್ಗದವರಿಗೆ ಅವಮಾನವಾಗಿಯೂ ಕಾಡುವ ಈ ಸಾಂಕ್ರಾಮಿಕ ರೋಗವನ್ನು ಎಂಡಬಿಸುತ್ತದೆ.

ಬಲ್ಲವರಾದರೆ ತಿಳಿದು ಹೇಳಿರಿ

ಮುಲ್ಲಾನ ಮಸೀದಿ ಎಲ್ಲಿತ್ತೋ

ಗುಲ್ಲಮಾಡಿ ಗುದ್ದಾಟದಲಾವಿಗೆ

ಬೆಲ್ಲ ಓದಿಸುವುದು ಎಲ್ಲಿತ್ತೋ ಎಂದು ಇಸ್ಲಾಂದಲ್ಲಿರುವ

ಮೊಹರಮ್ ಆಚರಣೆಯ ದುಷ್ಟ ಪದ್ಧತಿಯನ್ನು ಹೀಗಳೆಯುತ್ತಾರೆ. ಏಕೇಶ್ವರ ವಾದದಲ್ಲಿ ನಂಬಿಕೆಯನ್ನು ಇರಿಸಿಕೊಂಡಿದ್ದ ಶರೀಫರು ಅಲ್ಲಾ-ಅಲ್ಲಮರಲ್ಲಿ ಏಕತೆ ಕಂಡವರು.

“ಅಲ್ಲಮ ಪ್ರಭು ಏನು ಅರಿಯ ತುರುಕರು

ಪಂಜ ಪೂಜ ಮಾಡುವುದು ವ್ಯರ್ಥ

ಎಂದು ವಿವರಿಸಿ ಇಸ್ಲಾಂ ಧರ್ಮದವರನ್ನು ಎಚ್ಚರಿಸಿದರು. ಮೊಹರಮ್‌ನ ನಿಜವಾದ ಹಿನ್ನೆಲೆಯರಿಯದೆ ಕುಡಿದು ತಿಂದು ಕೇಕೆ ಹಾಕಿ ನಲಿದಾಡುವುದನ್ನು ನೋಡಿ; ಹಿಜರೀಶಕ ಅರವತ್ತೊಂದರಲ್ಲಿ ದರ್ಪ, ದೌರ್ಜನ್ಯ,

ಅನ್ಯಾಯ, ಅಧರ್ಮಗಳ ಸಾಕಾರ ರೂಪನಾದ ಯಜೀದನನ್ನು ಕಬಡಲಾ ಮೈದಾನದಲ್ಲಿ ಪ್ರತಿಭಟಿಸಿ ಅಮರವಾದ ಇಮಾಮ್ ಹಸನ ಹುಸೇನರ ಹಾಗೂ ಅನುಯಾಯಿಗಳ ಆತ್ಮಗಳಿಗೆ ಶಾಂತಿಯನ್ನುಂಟುಮಾಡುವ ಕಾರ್ಯ ಇಲ್ಲವೆಂದು ಮರುಗಿದರು.

ದುಃಖದಲಾವಿ ಐಸುರ ಪೇಳುವೆ ಸುದ್ದಿ

ಮಕ್ಕಾಮದೀನ ವಿಸ್ತಾರ

ಎಂದು ಹಾಡಿ ಸರ್ವರ ಲಕ್ಷ್ಯ ತಮ್ಮೆಡೆಗೆ ಸೆಳೆದುಕೊಂಡು

ಮಾಡ ಬಾ ದೋಕ ಈ ಮೊಹರದಬ್ಬ

ಮಾಡಲಿದು ಕೇಡಲಿದು ಕಾಡ ಕರ್ಬಲ



ಕಡಿದಾಡುವ ಹಬ್ಬ ಮಾಡಬಾರ್ದೊ

ಕತ್ತಲ ಶಹಾದತ್ತ ಮಥನ ದೋನ್ಮಥಗತಿ

ಶರಣ ಸಮತವಾಗದ ಹಬ್ಬ ಮಾಡ ಬಾರ್ದೊ

ಎಂದು ಮುಸ್ಲಿಂರ ಕುರಾನ್ ತಪ್ಪು ತಿಳುವಳಿಕೆಯನ್ನು ಮತ್ತು ಹಿಂಸೆಯನ್ನು ಖಂಡಿಸಿದರು. ಇಲ್ಲಿ ಹರಿಹರ-ಹಜರತ್‌ಗಳ ಮಧ್ಯೆ ಸಂಗಮವನ್ನಿಡಲು ಪ್ರಯತ್ನಿಸಿದರು.

ಶರೀಫರು ನಾಡಿನ ಉದ್ದಗಲಕ್ಕೂ ಕಂಡು ಬರುವ, ಬಗೆ ಬಗೆಯ ಆಚರಣೆ, ಮನುಷ್ಯನ ಬದುಕು, ಸಂಸ್ಕೃತಿಗಳನ್ನು ಅರ್ಥಮಾಡಿ ಕೊಂಡು ಧರ್ಮಗಳಲ್ಲಿರುವ ಮೂಢ ನಂಬಿಕೆಗಳನ್ನು, ಅಜ್ಞಾನಗಳನ್ನು ತಿದ್ದಿ ಸರಿದಾರಿಗೆ ತರಲು ಪ್ರಯತ್ನ ಪಟ್ಟವರು.

ಕನ್ನಡ ಸಾಹಿತ್ಯ ಚರಿತ್ರೆ ಮರೆತ ಈ ಶರೀಫ ಜನ ಮಾನಸದಲ್ಲಿ ಅಜರಾಮರಾಗಿ ಉಳಿದಿದ್ದಾರೆ. ಹಿಂದು ಮುಸ್ಲಿಂ ಭಾವೈಕತೆಗೆ ಸೇತುವೆಯನ್ನು ಕಟ್ಟಿ ಅದೇ ರೀತಿ ಬದುಕಿದವರು ಶರೀಫ. ಸಾಹಿತ್ಯವಲಯ ಅವರ ತತ್ವ ಪದಗಳನ್ನು ಕೇವಲ ಹಾಡಿನ ಮೋಜಿಗಾಗಿ ಬಳಸಿಕೊಳ್ಳುತ್ತಿರುವುದು ದುರ್ದೈವದ ಸಂಗತಿ, ಹಾಡಿನ ಮೋಜಿನ ಆಚೆ ಶರೀಫ ಜನಮಾನಸದಲ್ಲಿ ಮೂಡಿ ಭಾವೈಕ್ಯತೆಯ ಪ್ರತಿನಿಧಿಯಾಗಿ ಕನ್ನಡ ಚರಿತ್ರೆಯಲ್ಲಿ ಕಂಗೊಳಿಸುತ್ತಾರೆ ಎಂಬುದು ಸರ್ವವಿಧಿತ ಸತ್ಯ.

**ಕನ್ನಡ ದಲಿತ ಸಾಹಿತ್ಯ ಮೀಮಾಂಸೆಯನ್ನು ಕಟ್ಟುವಾಗಿನ**

**ಕೆಲವು ಬಿಕ್ಕಟ್ಟುಗಳು**

**- ಅಪ್ಪಗೆರೆ ಸೋಮಶೇಖರ್**

'ಕಾವ್ಯ ಮೀಮಾಂಸೆ' ಎಂಬ ಸೀಮಿತ ಅರ್ಥ ಪರಿಕಲ್ಪನೆಯು ಇಂದು 'ಸಾಹಿತ್ಯ ಮೀಮಾಂಸೆ' ಎಂಬ ವಿಶಾಲ ವ್ಯಾಖ್ಯಾನದ ನೆಲೆಗಟ್ಟಿನಲ್ಲಿ ಚರ್ಚೆಗೆ ಒಳಗಾಗುತ್ತಿದೆ. ಸಂಸ್ಕೃತ ಕೇಂದ್ರಿತ ಭಾರತೀಯ ಕಾವ್ಯ ಮೀಮಾಂಸೆ ಕುರಿತ ಹಲವು ಜಿಜ್ಞಾಸೆಗಳು ಭಿನ್ನ ಭಿನ್ನ ದೇಸೀ ಸಾಹಿತ್ಯ ಮೀಮಾಂಸೆಯ ಹುಡುಕಾಟಕ್ಕೆ ಹಾಗೂ ಚಿಂತನೆಗೆ ದಾರಿ ಮಾಡಿಕೊಟ್ಟಿದೆ. ಹಲವು ವರ್ಷಗಳ ಕಾಲ ಸಂಸ್ಕೃತ ಪ್ರಣೀತ ಭಾರತೀಯ ಕಾವ್ಯ ಮೀಮಾಂಸೆಯ ನೆರಳಿನಲ್ಲಿಯೇ ಸಾಗಿದ್ದ ಕನ್ನಡ ಸಾಹಿತ್ಯ ಮೀಮಾಂಸೆಯು ಇಂದು ಭಿನ್ನ ಧಾರೆಗಳನ್ನು ಕಂಡುಕೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆ, ದೇಸಿ ಭಾಷೆಗಳಲ್ಲಿ ಸೃಜನಶೀಲ ಸಾಹಿತ್ಯವು ಹೇಗೆ ವಿಸ್ತಾರವಾಗಿ ಬೆಳೆದಿದೆಯೋ ಹಾಗೆಯೇ, ಆಯಾ ದೇಸಿ ಭಾಷೆಯ ಸಾಹಿತ್ಯದ ಆಳದಲ್ಲಿ ವಿಫುಲವಾದ ಸಾಹಿತ್ಯ ಮೀಮಾಂಸೆಯ ಎಳೆಗಳಿದ್ದು, ಅವುಗಳನ್ನು ವಿಸ್ತಾರವಾಗಿ ಕಟ್ಟಿಕೊಳ್ಳಬೇಕಾಗಿದೆ. ಆ ನಿಟ್ಟಿನಲ್ಲಿ ಹೊಸದಾಗಿ ಕಟ್ಟಿಕೊಳ್ಳುತ್ತಿರುವ ದೇಸಿ ಸಾಹಿತ್ಯ ಮೀಮಾಂಸೆಯ ಧಾರೆಗಳಲ್ಲಿ 'ಕನ್ನಡ ದಲಿತ ಸಾಹಿತ್ಯ ಮೀಮಾಂಸೆ'ಯು ಒಂದಾಗಿದೆ. ಯಾವುದೇ ಭಾಷೆಯ ಹಿರಿಮೆಯ ದೃಷ್ಟಿಯಿಂದ ಆ ಭಾಷೆಯ ಸೃಜನಶೀಲ ಸಾಹಿತ್ಯ ಎಷ್ಟು ಮುಖ್ಯವೋ; ಅದರಷ್ಟೇ ಪ್ರಧಾನವಾದದ್ದು ಆ ಭಾಷಾ ಸಾಹಿತ್ಯದ ತಾತ್ವಿಕತೆಯನ್ನು ಮಂಡಿಸುವ ಸೈದ್ಧಾಂತಿಕ ಮೀಮಾಂಸೆಯನ್ನು ಕಟ್ಟಿಕೊಳ್ಳುವುದು. ಒಂದು ಭಾಷೆಯ ಕಲ್ಪಿತ ಅಥವಾ ಅನುಭವದ ಅಭಿವ್ಯಕ್ತಿ 'ಸಾಹಿತ್ಯ'ವಾದರೆ; ಆ ಸಾಹಿತ್ಯಾಭಿವ್ಯಕ್ತಿಯ ತಾತ್ವಿಕತೆ 'ಮೀಮಾಂಸೆ'ಯಾಗಿದೆ. ಅಂದರೆ, ಆಯಾ ಸಾಹಿತ್ಯದ ಆಳದಲ್ಲಿಯೇ ಮೀಮಾಂಸೆ ಇರುತ್ತದೆ. ಒಂದು ಭಾಷೆಯ ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ಆ ಸಾಹಿತ್ಯದ ಮೀಮಾಂಸೆಯ ತಾತ್ವಿಕ ಪ್ರಮೇಯವನ್ನು ನಿರ್ಮಿಸಿಕೊಳ್ಳಬೇಕು; ಹಾಗೆ ಕಂಡುಕೊಂಡ ಮೀಮಾಂಸೆಯ ಪ್ರಮೇಯವನ್ನು ಇಟ್ಟುಕೊಂಡು ಒಟ್ಟಾರೆ ಆ ಭಾಷಾ ಸಾಹಿತ್ಯದ ತಾತ್ವಿಕತೆಯನ್ನು ದಾಖಲಿಸಬೇಕು. ಈ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳು ಎದುರಾಗುತ್ತವೆ. ಒಂದು ಭಾಷೆಯ ಮೀಮಾಂಸೆಯ ಪ್ರಮೇಯವನ್ನು ಇಟ್ಟುಕೊಂಡು ಮತ್ತೊಂದು ಭಾಷೆಯ ಸಾಹಿತ್ಯವನ್ನು ಜಿಜ್ಞಾಸೆಗೆ ಒಳಪಡಿಸಲಿಕ್ಕೆ ಸಾಧ್ಯವಿಲ್ಲವೆ? ಯಾಕೆ ಸಾಧ್ಯವಿಲ್ಲ? ತನ್ನದಲ್ಲದ ಭಾಷಾ ಕಾವ್ಯ ಮೀಮಾಂಸೆಯನ್ನು ಮತ್ತೊಂದು ಭಾಷೆ ಯಾಕೆ ಅನುಸರಿಸಬೇಕು? ಸಂಸ್ಕೃತ ನಿಷ್ಠ ಭಾರತೀಯ ಕಾವ್ಯ ಮೀಮಾಂಸೆಯನ್ನು ಇಟ್ಟುಕೊಂಡು ಕನ್ನಡ ಸಾಹಿತ್ಯವನ್ನು ಪರಿಣಾಮಕಾರಿಯಾಗಿ ಪರಿಭಾವಿಸಲಿಕ್ಕೆ ಸಾಧ್ಯವೆ? ಯಾಕೆ ಸಾಧ್ಯವಿಲ್ಲ? ಒಂದು ನಿರ್ದಿಷ್ಟ ಕಾವ್ಯ ಮೀಮಾಂಸೆಯನ್ನು ಬಳಸಿ ಅನುಸರಿಸುವುದರಿಂದ ಆಯಾ ಭಾಷೆಗಳು ತಮ್ಮದೇ ಆದ ಸ್ವತಂತ್ರ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳಲು ತೊಡಕಾಗಬಹುದೆ?

ಪ್ರತಿಯೊಂದು ಭಾಷಾ ಸಾಹಿತ್ಯವು ತನ್ನದೇ ಆದ ಸ್ವತಂತ್ರ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳುವುದು ಉಚಿತವಲ್ಲವೆ? ಎಂಬ ಪ್ರಶ್ನೆಗಳು ಈಗಾಗಲೇ ಹಲವು ಬಗೆಯ ಚರ್ಚೆಗಳನ್ನು ಹುಟ್ಟುಹಾಕಿವೆ. ಒಂದು ಭಾಷೆಯ ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ಆ ಭಾಷೆಯ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳುವುದು ಹೆಚ್ಚು ಸೂಕ್ತವೆನಿಸುತ್ತದೆ. 'ಮೀಮಾಂಸೆ' ಎಂಬ ಪರಿಕಲ್ಪನೆಯನ್ನು ವಿಮರ್ಶೆ, ತಾತ್ವಿಕತೆ, ಚಿಂತನೆ, ಅಧ್ಯಯನ ಎಂಬ ಅರ್ಥಗಳಲ್ಲಿಯೂ ಬಳಸಲಾಗಿದೆ. ವಿಮರ್ಶೆ ಹಾಗೂ ಮೀಮಾಂಸೆಯ ನಡುವೆ ಸಣ್ಣ ಪ್ರಮಾಣದ ವ್ಯತ್ಯಾಸವನ್ನಷ್ಟೇ ಗಮನಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ವಿಮರ್ಶೆಯು ಕೃತಿಯ ಮೌಲ್ಯಮಾಪನ ಮಾಡಿದರೆ, ಮೀಮಾಂಸೆಯು ಕೃತಿಯ ಹುಟ್ಟಿಗೆ ಕಾರಣವಾದ ಪ್ರೇರಣಾ ಸಂಗತಿಗಳು ಹಾಗೂ ಆ ಕೃತಿಯು ವಿವಿಧ ಮಜಲುಗಳಲ್ಲಿ ಮಂಡಿಸಿರುವ ತಾತ್ವಿಕತೆಯನ್ನು ಹುಡುಕಲೆತ್ನಿಸುತ್ತದೆ. ರಹಮತ್ ತರೀಕೆರೆ ಅವರು ಹೇಳುವ ಹಾಗೆ: "...ಸಾಹಿತ್ಯದ ಹುಟ್ಟಿನ ಪ್ರೇರಣೆಗಳು, ಅದು ಸೃಷ್ಟಿಯಾಗುವ ಕ್ರಮಗಳು, ಅದು ಅಭಿವ್ಯಕ್ತವಾಗುವ ಪ್ರಕಾರಗಳು, ಅದು ಭಾಷೆಯನ್ನು ಬಳಸುವ ವಿಧಾನ, ಅನುಸರಿಸುವ ಶೈಲಿ, ಅದನ್ನು ಅನುಸಂಧಾನ ಮಾಡುವ ಜನ ಮತ್ತು ಸಂಸ್ಥೆಗಳು, ಸಮಾಜದ ಮೇಲಾಗುವ ಪರಿಣಾಮ ಇವೆಲ್ಲವನ್ನು ಕುರಿತ ತಾತ್ವಿಕ ಚಿಂತನೆಯನ್ನು ಸಾಹಿತ್ಯ ಮೀಮಾಂಸೆ ಎನ್ನಬಹುದು."(ಇಲ್ಲಿ ಯಾರೂ ಮುಖ್ಯರಲ್ಲ -ರಹಮತ್ ತರೀಕೆರೆ, ಪು-೧೨)

ಕನ್ನಡ ದಲಿತ ಸಾಹಿತ್ಯವು ಹಲವು ಮಹತ್ವದ ಸೃಜನಶೀಲ ಮಾದರಿಗಳನ್ನು ದಾಖಲಿಸುವ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಶ್ರೀಮಂತಗೊಳಿಸಿದೆ. ದಲಿತ ಸಾಹಿತ್ಯದ ಸೃಜನಶೀಲತೆಯ ಆಳದಲ್ಲಿರುವ ದಲಿತತ್ವದ ತಾತ್ವಿಕತೆಯೇ 'ದಲಿತ ಸಾಹಿತ್ಯ ಮೀಮಾಂಸೆ'ಯಾಗಿದೆ. ದಲಿತ ಸಾಹಿತ್ಯ ಮೀಮಾಂಸೆಯು ಒಂದರ್ಥದಲ್ಲಿ 'ಸಮಾಜ ಮೀಮಾಂಸೆ'ಯೂ, 'ಸಮುದಾಯ ಮೀಮಾಂಸೆ'ಯೂ ಹಾಗೂ 'ಮನುಷ್ಯ ಬದುಕಿನ ಮೀಮಾಂಸೆ'ಯೂ ಹೌದು. ದಲಿತ ಸಾಹಿತ್ಯ ಸಮಾಜ, ಸಮುದಾಯ ಹಾಗೂ ಮನುಷ್ಯ ಬದುಕನ್ನು ಹೇಗೆ? ಯಾವ ಸ್ವರೂಪದಲ್ಲಿ ಅಭಿವ್ಯಕ್ತಿಸಿದೆ? ಎಂಬುದನ್ನು ತಾತ್ವಿಕ ಜಿಜ್ಞಾಸೆಗೆ ಒಳಪಡಿಸುವ ಮೂಲ ತುಡಿತವೇ ದಲಿತ ಸಾಹಿತ್ಯ ಮೀಮಾಂಸೆಯಾಗಿದೆ. ದಲಿತ ಸಾಹಿತ್ಯ ಮೀಮಾಂಸೆಯು 'ದಲಿತ ಸಾಹಿತ್ಯ, ಸಮಾಜ, ಸಮುದಾಯ'ಗಳ ನಡುವಿನ ತಾತ್ವಿಕ ಕೊಂಡಿಯಾಗಿ ಕೆಲಸ ಮಾಡುತ್ತದೆ. ಈಗಾಗಲೇ ಉಲ್ಲೇಖಿಸಿರುವ ರಹಮತ್ ತರೀಕೆರೆ ಅವರ ಮಾತಿನ ಹಾಗೆಯೇ; ಬಿ.ಎಂ. ಪುಟ್ಟಯ್ಯ ಅವರು ತಮ್ಮ "ದಲಿತ ಸಾಹಿತ್ಯ ಮೀಮಾಂಸೆ" ಲೇಖನದಲ್ಲಿ, ಮೊಗಳ್ಳಿ ಗಣೇಶ್ ಅವರು ತಮ್ಮ "ಜಾತ್ಯಾತೀತ ದಲಿತ ಮೀಮಾಂಸೆ" ಲೇಖನದಲ್ಲಿ ಹಾಗೂ ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆಯ ತಾತ್ವಿಕ ಸಂಪುಟದಲ್ಲಿ ಅರವಿಂದ ಮಾಲಗತ್ತಿ ಅವರು ಎತ್ತಿರುವ ಪ್ರಶ್ನೆಗಳು ಹಾಗೂ ಮಂಡಿಸಿರುವ ಚಿಂತನೆಗಳ

ಆಧಾರದ ಮೇಲೆ ದಲಿತ ಸಾಹಿತ್ಯ ಮೀಮಾಂಸೆಯನ್ನು ಕಟ್ಟುವಾಗ ಪ್ರಮುಖವಾಗಿ "ದಲಿತ ಸಾಹಿತ್ಯದ ಹುಟ್ಟಿನ ಹಿನ್ನಲೆಯಲ್ಲಿರಬಹುದಾದ ಪ್ರೇರಣಾ ಪ್ರಭಾವಿತ ಸಂಗತಿಗಳಾವುವು; ದಲಿತ ಸಾಹಿತ್ಯಕ್ಕೂ ಸಮಾಜ-ಸಮುದಾಯ-ಸಂಸ್ಕೃತಿ-ಲೇಖಕ-ಓದುಗರಿಗೂ ಇರುವ ಸಂಬಂಧ ಯಾವ



ಬಗೆಯದು; ಅಭಿವ್ಯಕ್ತಿಯ ಕ್ರಮ, ಭಾಷಾ ಶೈಲಿ, ರಚನೆ ಯಾವ ರೀತಿಯದು; ಕೃತಿಯಲ್ಲಿ ಬಳಸಲಾಗಿರುವ ಪ್ರತಿಮೆ-ರೂಪಕ ಯಾವ ಸ್ವರೂಪದ್ದು: ಲಿಖಿತ ಸಾಹಿತ್ಯದ ಆಚೆಗಿರುವ ಮೌಖಿಕ(ಜಾನಪದ) ಸಾಹಿತ್ಯಕ ಸಂಗತಿಗಳು ಯಾವುವು; ದಾಖಲಾಗಿರುವ ಲಿಖಿತ ದಲಿತ ಸಾಹಿತ್ಯ ಹಾಗೂ ದಾಖಲಾಗದಿರುವ ಮೌಖಿಕ ದಲಿತ ಸಾಹಿತ್ಯದ ನಡುವಿನ ಅಂತರ್ ಸಂಬಂಧವೇನು; ಪ್ರಾಚೀನ, ವಚನ, ಮಧ್ಯಕಾಲೀನ, ಶಾಸನ ಹಾಗೂ ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ದಾಖಲಾಗಿರುವ ದಲಿತತ್ವದ ನೆಲೆಗಳನ್ನು ಗುರುತಿಸುವ ಮಾನದಂಡಗಳಾವುವು; ದಲಿತ ಸಾಹಿತ್ಯ ಹಾಗೂ ದಲಿತ ಚಳವಳಿಯ ಪರಸ್ಪರ ಪ್ರೇರಣೆ-ಪ್ರಭಾವ-ಸಂಬಂಧಗಳೇನು; ಈಗಾಗಲೇ ಪ್ರಕಟಿತ, ಅಪ್ರಕಟಿತ ಮತ್ತು ಮೌಖಿಕವಾಗಿರುವ ಸಮಗ್ರ ದಲಿತ ಸಾಹಿತ್ಯವನ್ನು ಪರಿಗಣಿಸಿ ದಲಿತ ಸಾಹಿತ್ಯ ಮೀಮಾಂಸೆಯನ್ನು ಕಟ್ಟಲಿಕ್ಕೆ ಸಾಧ್ಯವಿದೆಯೇ; ಹೋರಾಟದ ಹಾಡು, ಘೋಷಣೆ, ಗೋಡೆ ಬರಹ, ಕರಪತ್ರ, ಬೀದಿ ನಾಟಕಗಳನ್ನು ಮೀಮಾಂಸೆಯ ಚೌಕಟ್ಟಿನಲ್ಲಿ ಒಳಗೊಳ್ಳಲಿಕ್ಕೆ ಸಾಧ್ಯವೆ; ದಲಿತ ಸಾಹಿತ್ಯವು ಚರಿತ್ರೆ ಹಾಗೂ ವರ್ತಮಾನಗಳನ್ನು ಹೇಗೆ ಬೆಸೆಯುತ್ತದೆ ಅಥವಾ ಮುಖಾಮುಖಿಯಾಗಿಸುತ್ತದೆ; ದಲಿತ ಸಾಹಿತ್ಯವು ಅಸಮಾನತೆ, ಶೋಷಣೆಯನ್ನು ಪ್ರತಿರೋಧಿಸುವ ಹಾಗೂ ಸಮಾನತೆ, ಸಂಬಂಧದ ಮೌಲ್ಯಗಳನ್ನು ಪ್ರತಿಪಾದಿಸುವ ಕ್ರಮಗಳು, ಬಗೆಗಳು ಯಾವುವು; ದಲಿತ, ದಲಿತತತ್ವ, ದಲಿತ ಪ್ರಜ್ಞೆ, ದಲಿತ ಸಂವೇದನೆ, ದಲಿತ ಸಂಸ್ಕೃತಿ, ದಲಿತ ವಿಮರ್ಶೆ, ದಲಿತ ವಿಚಾರವಾದ, ದಲಿತವಾದಿ ಇತ್ಯಾದಿ ಪರಿಕಲ್ಪನೆಗಳನ್ನು ವ್ಯಾಖ್ಯಾನಿಸುವ ಬಗೆ ಹೇಗೆ; ದಲಿತ ಸಾಹಿತ್ಯ ಪ್ರಕಾರಗಳನ್ನು ಒಳಗು ಮಾಡುವ ಕ್ರಮ ಯಾವುದು; ಅದರಲ್ಲಿಯೂ ದಲಿತ ವಿಮರ್ಶೆಯು ಪ್ರತಿಪಾದಿಸುವ ದಲಿತತ್ವದ ತಾತ್ವಿಕತೆಯನ್ನು ನಿರ್ಧರಿಸಿಕೊಳ್ಳುವ ದೃಷ್ಟಿಕೋನವನ್ನು ಹೇಗೆ ಗರುತಿಸಿಕೊಳ್ಳುವುದು; ದಲಿತ ಸಾಹಿತ್ಯಕ್ಕಿರುವ ವಿಭಿನ್ನ ನೆಲೆಗಳನ್ನು ಕಂಡುಕೊಳ್ಳುವ ಬಗೆ ಹೇಗೆ; ದಲಿತ ಸಾಹಿತ್ಯ ಚಳವಳಿಯನ್ನು ಪ್ರಭಾವಿಸಿರುವ ಬುದ್ಧ, ಬಸವಣ್ಣ, ಫುಲೆ, ಪೆರಿಯಾರ್, ಅಂಬೇಡ್ಕರ್ ಅಂತಹ ವ್ಯಕ್ತಿವಾದಿ ಚಿಂತನೆಗಳನ್ನು ಹೇಗೆ ಪರಿಭಾವಿಸುವುದು" ಎಂಬಿತ್ಯಾದಿ ಪ್ರಶ್ನೆಗಳು ಮುಖಾಮುಖಿಯಾಗುತ್ತವೆ. ಇದೇ ಸಂದರ್ಭದಲ್ಲಿ ಬಿ.ಎಂ.ಪುಟ್ಟಯ್ಯನವರು ತಮ್ಮ 'ದಲಿತ ಸಾಹಿತ್ಯ ಮೀಮಾಂಸೆ' ಲೇಖನದ ಕೊನೆಯಲ್ಲಿ ಎತ್ತಿರುವ ಗಂಭೀರ ಪ್ರಶ್ನೆಯನ್ನು ಕಡೆಗಣಿಸಲಿಕ್ಕೆ ಸಾಧ್ಯವಿಲ್ಲ. ಆ ತಾರ್ಕಿಕ ಪ್ರಶ್ನೆ ಯಾವುದೆಂದರೆ: "ಒಂದು ವೇಳೆ ಹಠಕ್ಕೆ ಬಿದ್ದು ದಲಿತ ಸಾಹಿತ್ಯಕ್ಕೆ ಸಾಹಿತ್ಯ ಮೀಮಾಂಸೆ ಬರೆಯಲು ಹೊರಟರೆ ಆಗ ಕೆಲವೇ ಬರಹಗಾರರ ಕೆಲವೇ ಕೃತಿಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆ ಆಯ್ಕೆಯು

ಉಳಿದ ಬಹುಸಂಖ್ಯಾತ ಬರಹಗಾರರನ್ನು ಮತ್ತು ಅವರ ಬಹುಸಂಖ್ಯೆಯ ಕೃತಿಗಳನ್ನು ನಿರಾಕರಿಸುತ್ತದೆ. ...ಆದರೆ ನಾವು ಪರಿಗಣಿಸಬೇಕಾದುದು ಔಪಚಾರಿಕ ಶಿಕ್ಷಣದ ಪಠ್ಯಕ್ರಮಕ್ಕೆ ಆಯ್ಕೆಗೊಳ್ಳುವ ಕೃತಿಗಳನ್ನಲ್ಲ; ಹಾಗೆ ಆಯ್ಕೆ ಮಾಡಿದ ಕಾರಣಕ್ಕೆ ಇನ್ಯಾವುದು ನಿರಾಕರಣೆಗೆ ಒಳಗಾಗುತ್ತದೆ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕು. ದಲಿತ ಸಾಹಿತ್ಯ ಕೇವಲ ಗ್ರಾಂಥಿಕ ರೂಪದಲ್ಲಿ ಮಾತ್ರವೇ ಇಲ್ಲ ಎಂಬುದನ್ನು ಈಗಾಗಲೇ ಚರ್ಚಿಸಲಾಗಿದೆ. ಅದನ್ನು ಇಲ್ಲಿ ಮತ್ತೆ ನೆನಪಿಸಿಕೊಳ್ಳಬೇಕು. ಸಾಹಿತ್ಯ ಮೀಮಾಂಸೆಯನ್ನು ರೂಪಿಸುವಾಗ ಆಯ್ಕೆ



ಮತ್ತು ನಿರಾಕರಣೆ ನಿರ್ಣಾಯಕವಾಗಿ ಕೆಲಸ ಮಾಡುತ್ತದೆ. ದಲಿತ ಸಾಹಿತ್ಯ ತನ್ನ ಒಡಲಾಳದಲ್ಲಿ ಈ ಬಗೆಯ ತಾರತಮ್ಯವನ್ನು ಅತ್ಯಂತ ಕ್ರಾಂತಿಕಾರಕವಾಗಿ ವಿರೋಧಿಸುತ್ತದೆ. ಆ ಮೂಲಕ ಸಮಾನತೆಯ ಹಾಗೂ ಪ್ರಜಾತಾಂತ್ರಿಕ ಸಾಮಾಜಿಕ ಅಪೇಕ್ಷೆಯನ್ನು ಮಂಡಿಸುತ್ತದೆ. ಒಂದು ವೇಳೆ ಯಾವುದೋ ಒತ್ತಡಕ್ಕೂ, ಯಾರದೊ ಒತ್ತಡಕ್ಕೊ ಮಣಿದು ದಲಿತ ಸಾಹಿತ್ಯಕ್ಕೂ ಒಂದು ಮೀಮಾಂಸೆಯನ್ನು ರೂಪಿಸುವುದಾದರೆ ಅದು ದಲಿತ ಸಾಹಿತ್ಯವನ್ನು ದಲಿತೇತರ ಸಾಹಿತ್ಯ ಮೀಮಾಂಸೆಯ ಶೋಷಣೆಗೆ ನೇರವಾಗಿ ಬಲಿ ಕೊಟ್ಟಂತೆ ಆಗುತ್ತದೆ."(ಕನ್ನಡ ಸಾಹಿತ್ಯ ಮೀಮಾಂಸೆ, ಪು-೧೫೩) ಈ ತಾತ್ವಿಕ ಪ್ರಶ್ನೆಗಳಿಗೆ ಸಮರ್ಥವಾಗಿ ಉತ್ತರವನ್ನು ಕಂಡುಕೊಳ್ಳದ ಹೊರತು ದಲಿತ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಈ ಎಲ್ಲ ತಾತ್ವಿಕ ಪ್ರಶ್ನೆಗಳ ನಡುವೆಯೂ ಮೊಗಳ್ಳಿ ಗಣೇಶ್ ಅವರು ಹೇಳುವ ಹಾಗೆ : "ಗತಕಾಲ ಹಾಗೂ ವರ್ತಮಾನದ ಎರಡು ಅತಿಮಿತಿಗಳ ನಡುವೆ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಹುಡುಕಾಟದಲ್ಲಿ ದಲಿತ ಮೀಮಾಂಸೆಯು ವೈಚಾರಿಕವಾದ ನಿರಂತರ ಮುಖಾಮುಖಿಯಿಂದ ಖಚಿತವಾದ ಆಯಾಮವನ್ನು ಪಡೆದುಕೊಳ್ಳಬಲ್ಲದು."(ಜಾತಿ ಮೀಮಾಂಸೆ'-ಮೊಗಳ್ಳಿ ಗಣೇಶ್, ಪು- ೩೪೪)

ಮೊದಲ ತಲೆಮಾರಿನ ದಲಿತ ಸಾಹಿತಿಗಳಾದ ಸೋಸಲೆ ಎಸ್. ಸಿದ್ದಪ್ಪ, ಡಿ. ಗೋವಿಂದದಾಸ್, ದೇವರಾಯ ಇಂಗಳೆ, ಬಿ.ಶ್ಯಾಮಸುಂದರ್, ಕುಮಾರ ಕಕ್ಕಯ್ಯ ಪೋಳ ಮುಂತಾದವರ ಸೃಜನಶೀಲ ಬರಹದಲ್ಲಿ; ಎಪ್ಪತ್ತರ ದಶಕದಲ್ಲಿ ದಲಿತ ಸಾಹಿತ್ಯಕ್ಕೆ ಅಧಿಕೃತತೆಯನ್ನು ತಂದುಕೊಟ್ಟ ದೇವನೂರು ಮಹಾದೇವ, ಸಿದ್ದಲಿಂಗಯ್ಯ, ದೇವಯ್ಯ ಹರವೆ, ಬಿ.ಕೃಷ್ಣಪ್ಪ, ಮುಳ್ಳೂರು ನಾಗರಾಜ, ಕೆ. ಬಿ. ಸಿದ್ದಯ್ಯ, ಸುಕನ್ಯ ಮಾರುತಿ, ಅರವಿಂದ ಮಾಲಗತ್ತಿ, ಮ. ನ. ಜವರಯ್ಯ, ಕೋಟಗಾನಹಳ್ಳಿ ರಾಮಯ್ಯ ಮುಂತಾದವರ ಆದಿಯಾಗಿ; ಮೊಗಳ್ಳಿ ಗಣೇಶ್, ಬಿ.ಎಂ.ಪುಟ್ಟಯ್ಯ, ಸುಬ್ಬು ಹೊಲೆಯಾರ್, ಎನ್. ಕೆ. ಹನುಮಂತಯ್ಯ, ಎಂ. ಎಸ್. ಶೇಖರ್, ಶಂಕನಪುರ ಮಹಾದೇವ, ಅನಸೂಯ ಕಾಂಬ್ಳೆ, ದು.ಸರಸ್ವತಿ ಮುಂತಾದವರ ಅಭಿವ್ಯಕ್ತಿಯ ನೆಲೆಯಲ್ಲಿ ಹಾಗೂ ದಲಿತ ಚಳವಳಿ

ಕಟ್ಟಿದ ಹೋರಾಟದ ಹಾಡುಗಳಲ್ಲಿ, ಘೋಷಣೆಗಳಲ್ಲಿ, ಗೋಡೆ ಬರಹಗಳಲ್ಲಿ, ಕರಪತ್ರಗಳಲ್ಲಿ ಅಂತರ್‌ಜಲದಂತಿರುವ ಕನ್ನಡ ದಲಿತ ಸಾಹಿತ್ಯ ಮೀಮಾಂಸೆಯ ತಾತ್ವಿಕತೆಯನ್ನು ಗಂಭೀರವಾದ ಅಧ್ಯಯನಕ್ಕೆ ಒಳಪಡಿಸಬೇಕಿದೆ. ಇದಕ್ಕಿಂತ ಪೂರ್ವದಲ್ಲಿ ದಲಿತ ಸಾಹಿತ್ಯ ಮೀಮಾಂಸೆಯ ಆದಿಮ ನೆಲೆಗಳನ್ನು ಬುದ್ಧತ್ವದ ಚಿಂತನ ಕ್ರಮದಲ್ಲಿ ಹಾಗೂ ಜನಪದಕಾರರು, ಮಂಟೇಸ್ವಾಮಿ, ಮಹದೇಶ್ವರರಂತಹ ಜನಪದ ಸಂತರು ಕಟ್ಟಿರುವ ಜನಪದ ಮೌಖಿಕ ಕಥನಗಳಲ್ಲಿ ಹಾಗೂ ತಳಸಮುದಾಯದ ವಚನಕಾರರ ರಚನೆಗಳಲ್ಲಿ ಗುರುತಿಸಿಕೊಳ್ಳಬೇಕಿದೆ. ಆಗ ಮಾತ್ರ ದಲಿತ ಸಾಹಿತ್ಯ ಮೀಮಾಂಸೆಗೆ ಒಂದು ಚಾರಿತ್ರಿಕವಾದ ಪಾರಂಪರಿಕ ನೆಲೆಗಟ್ಟನ್ನು ಕಟ್ಟಿಕೊಳ್ಳಲಿಕ್ಕೆ ಸಾಧ್ಯ. ಇದರ ಜೊತೆಗೆ ದಲಿತ ಸಮುದಾಯದ ಕ್ರಿಯಾತ್ಮಕ ಆಚರಣೆಗಳ ಆಳದಲ್ಲಿ ಅಡಗಿರಬಹುದಾದ ತಾತ್ವಿಕ ವಿಚಾರಧಾರೆಗಳನ್ನು



ಗುರುತಿಸುವ ಮೂಲಕ ದಲಿತ ಸಾಹಿತ್ಯ ಮೀಮಾಂಸೆಯ ಪರಿಧಿಯನ್ನು ವಿಸ್ತರಿಸಿಕೊಳ್ಳಲಿಕ್ಕೆ ಸಾಧ್ಯವೆ? ಎಂಬುದನ್ನು ಚಿಂತಿಸಬೇಕಿದೆ.

ದಲಿತ ಸಾಹಿತ್ಯ ಮೀಮಾಂಸೆಯು ಸಮುದಾಯದ ವೈಚಾರಿಕ ನೆಲೆಗಟ್ಟು, ಲೋಕಜ್ಞಾನ, ಮಾನವೀಯತೆ, ಮನುಷ್ಯ ಸಂಬಂಧ, ಸಮಾನತೆಯ ತತ್ವ, ತಾಯ್ತನದ ಮೌಲ್ಯಗಳನ್ನೇ ಅಂತಿಮವಾಗಿ ಪ್ರತಿಪಾದಿಸುತ್ತದೆ. ನಿಸರ್ಗ ಪ್ರಣೀತ ಸಮಾಜಮುಖಿಯಾಗಿ ಚಿಂತಿಸುವ ದಲಿತ ಸಾಹಿತ್ಯ ಮೀಮಾಂಸೆಯು ಜೀವಪರತೆಯನ್ನು ಮಿಡಿಯುತ್ತದೆ. ಈ ಹಿನ್ನೆಲೆಯಲ್ಲಿ ಒಟ್ಟು ದಲಿತ ಸಾಹಿತ್ಯವು ಪ್ರತಿಪಾದಿಸುವ ವೈಚಾರಿಕ ತಾತ್ವಿಕತೆಯನ್ನು ದಲಿತ ಸಾಹಿತ್ಯ ಮೀಮಾಂಸೆಯ ಮೂಲ ತಿರುಳೆಂದು ಪರಿಭಾವಿಸಬಹುದು. ಮೊಗಳ್ಳಿ ಗಣೇಶ್ ವ್ಯಾಖ್ಯಾನಿಸುವ ಹಾಗೆ : “ದಲಿತ ಮೀಮಾಂಸೆ ಮುಖ್ಯವಾಗಿ ಮಾನವೀಯತೆಯ ಕನಸನ್ನು ವಾಸ್ತವೀಕರಿಸಲು ತೊಡಗುವ ಆಲೋಚನೆ. ಸಮಾಜದ ಹುಸಿಯನ್ನು ಬಯಲು ಮಾಡುವ ಪ್ರಜ್ಞೆಯಾಗಿ ಅದು ಹೊಸ ಕಾಲದ ಅನುಭವಗಳನ್ನು ಗತಕಾಲದ ಬದುಕಿನ ದುರಂತದ ಜೊತೆಗೆ ನಿಕಷಕ್ಕೆ ಒಡ್ಡಿ ಆಶಾದಾಯಕ ಮೌಲ್ಯಗಳಿಗಾಗಿ ಒತ್ತಾಯಿಸುತ್ತದೆ. ನ್ಯಾಯದ ಸಾಕ್ಷಾತ್ಕಾರಕ್ಕಾಗಿ ದಲಿತ ಮೀಮಾಂಸೆಯು ಹಂಬಲಿಸುತ್ತದೆ. ಶೋಷಣೆಯ ವಿರುದ್ಧದ ಪ್ರತಿರೋಧದ ಧ್ವನಿಯು ಇದರ ಬಾಹ್ಯ ರೂಪ. ಮಾನವೀಕರಣ ಅಂತರಂಗದ ಧ್ಯಾನ. ಹೀಗಾಗಿ ದಲಿತ ಮೀಮಾಂಸೆಯು ಭಕ್ತಿ ರಸವಲ್ಲ. ಶೃಂಗಾರ ವರ್ಣನೆಯಲ್ಲ ಅಥವಾ ಗೊಡ್ಡು ಆರಾಧನೆಯೂ ಅಲ್ಲ. ಅಷ್ಟಾದಶ ವರ್ಣನೆಗಳ ವಿವೇಕ ಅದಕ್ಕೆ ಮುಖ್ಯವಲ್ಲ. ಸರಳವಾಗಿ ಹೇಳುವುದಾದರೆ ದಲಿತ ಮೀಮಾಂಸೆಯು ಜಾತ್ಯಾತೀತ ಸಂವೇದನೆ, ಧರ್ಮಾತೀತವಾದ ಹಾಗೂ ಮತೀಯರಹಿತವಾದ ಆಶಯ ದಲಿತ ಮೀಮಾಂಸೆಯದು. ...ಅಂಬೇಡ್ಕರ್ ರೂಪಿಸಿದ ಎಲ್ಲಾ ಬಗೆಯ ವೈಚಾರಿಕ ಗದ್ಯವು ದಲಿತ ಮೀಮಾಂಸೆಯ ಪೂರ್ವ ಪಠ್ಯವೇ ಆಗಿದೆ....ಮೇಲುನೋಟಕ್ಕೆ ದಲಿತ ಮೀಮಾಂಸೆಯು ರಮ್ಯ ವೈಚಾರಿಕತೆಯ ಮಾದರಿಯಂತೆ; ವ್ಯಕ್ತಿವಾದಿ ವ್ಯಾಖ್ಯಾನದಂತೆ ಕಂಡುಬಂದರೂ ಮೂಲತಃ ಇದು ಸಮಾಜದ

ಗತಿಶೀಲತೆಯನ್ನು ಎಚ್ಚರಿಸುವ ಕರೆಯೂ ಹೌದು. ಬಹುರೂಪಿ ಸಮಾಜಗಳ ವೈರುಧ್ಯಗಳನ್ನು ಬಿಡಿಸಿ ಪುನರ್ ಸಂಘಟಿಸುವ ತಾತ್ವಿಕ ನೆಲೆಯೂ ಹೌದು."(ಜಾತಿ ಮೀಮಾಂಸೆ'-ಮೊಗಳ್ಳಿ ಗಣೇಶ್, ಪು-೩೧೫) ದಲಿತ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳುವ ಬಗೆ ಎಂದರೆ, ಸೃಜನಶೀಲ ದಲಿತ ಸಾಹಿತ್ಯದ ಆಳದಲ್ಲಿ ಅಡಗಿರುವ ತಾತ್ವಿಕತೆಯನ್ನು ಹುಡುಕಿಕೊಳ್ಳುವುದು ಎಂದರ್ಥ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಯೋಜನೆಯ ಅಡಿಯಲ್ಲಿ ಡಾ.ರವಿಕುಮಾರ್ ನೀಹ ಅವರು ಸಿದ್ಧಪಡಿಸಿರುವ "ದಲಿತ ಸಾಹಿತ್ಯ ಮೀಮಾಂಸೆ" ಕೃತಿಯು ಕನ್ನಡ ದಲಿತ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವಾಗಿದೆ. ಈ ಕೃತಿಯಲ್ಲಿ ನೀಹಾ ಅವರು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮೀಮಾಂಸೆ ಕುರಿತು ನಡೆದಿರುವ ಪ್ರಧಾನ ಚರ್ಚೆಗಳನ್ನು ಬಹಳ ವಿಸ್ತಾರವಾಗಿ ಮಂಡಿಸಿದ್ದಾರೆ. ದಲಿತ ಪದದ ಸುತ್ತ ನಡೆದಿರಬಹುದಾದ ತಾತ್ವಿಕ ಚರ್ಚೆಗಳಿಂದ ಮೊದಲುಗೊಂಡು, ದಲಿತ



ಚಳವಳಿ, ದಲಿತ ಸಾಹಿತ್ಯ ಪರಂಪರೆ ಕುರಿತ ವಿಶ್ಲೇಷಣೆ; ಕನ್ನಡ ಕಾವ್ಯ ಮೀಮಾಂಸೆಯ ಚಾರಿತ್ರಿಕ ನೆಲೆಗಳು; ಸಂಸ್ಕೃತ ಕಾವ್ಯ ಮೀಮಾಂಸೆಯ ಸಾಧ್ಯತೆ ಹಾಗೂ ಕನ್ನಡ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳುವ ಸಂದರ್ಭದಲ್ಲಿನ ಅದರ ತೊಡಕುಗಳು; ಮೀಮಾಂಸೆ ಕುರಿತ ಚರ್ಚೆಯ ಸಂದರ್ಭದಲ್ಲಿ ಹೊಸ ತಲೆಮಾರಿನ ಸ್ಪಂದನೆ; ದೇವಯ್ಯ ಹರವೆ, ಅರವಿಂದ ಮಾಲಗತ್ತಿ, ಮೊಗಳ್ಳಿ ಗಣೇಶ್, ಬಿ. ಎಂ. ಪುಟ್ಟಯ್ಯ ಅವರು ದಲಿತ ಸಾಹಿತ್ಯ ಮೀಮಾಂಸೆಯನ್ನು ತಾತ್ವಿಕರಿಸಿರುವ ಬಗೆ; ಕೆಲವು ಪಠ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ದಲಿತ ಸಾಹಿತ್ಯ ಮೀಮಾಂಸೆಯನ್ನು ಜಿಜ್ಞಾಸೆಗೆ ಒಳಪಡಿಸಿರುವ ರೀತಿ; ಕುಲ ಕಥನ ಹಾಗೂ ಜಾನಪದ ಮಾದರಿಗಳನ್ನು ಚರ್ಚಿಸುತ್ತಲೇ ಮೀಮಾಂಸೆಯನ್ನು ಅರ್ಥೈಸುವ ಪ್ರಯತ್ನ ಹಾಗೂ ದಲಿತ ಸಾಹಿತ್ಯ ಮೀಮಾಂಸೆಯನ್ನು ಕಟ್ಟುವಾಗಿನ ಬಿಕ್ಕಟ್ಟನ್ನು ಕುರಿತು ಇಲ್ಲಿ ವಿಸ್ತೃತವಾಗಿ ವಿಶ್ಲೇಷಿಸಲಾಗಿದೆ. ಮೀಮಾಂಸೆ ಕುರಿತ ಚರ್ಚೆಯನ್ನು

ಆರಂಭಿಸುವ ಕೃತಿ, ನಡುವೆ ದಲಿತ ಸಾಹಿತ್ಯದ ವಸ್ತು ವಿಷಯದ ವಿಶ್ಲೇಷಣೆಯ ಕಡೆಗೆ ಹೊರಳಿಬಿಡುತ್ತದೆ. ಮೀಮಾಂಸೆ ಕುರಿತ ನಿರಂತರವಾದ ಜಿಜ್ಞಾಸೆಗೆ ಇದು ತೊಡಕಾಗಿ ಪರಿಣಮಿಸುತ್ತದೆ. ಇಲ್ಲಿ ಲೇಖಕರು ಉಲ್ಲೇಖಿಸಿರುವ ಪಠ್ಯಗಳ ವಸ್ತು, ಆಶಯಗಳ ವಿಶ್ಲೇಷಣೆಗೆ ಸೀಮಿತವಾಗದೆ, ಅವುಗಳು ಕಟ್ಟಿಕೊಡುವ ಮೀಮಾಂಸೆಯ ಚಹರೆಗಳು ಯಾವುವು ಎಂಬುದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಗುರುತಿಸುವ ಪ್ರಯತ್ನವಾಗಿದ್ದರೆ ಅರ್ಥಪೂರ್ಣವೆನಿಸುತ್ತಿತ್ತು. ಈ ಇಡೀ ಪುಸ್ತಕವು ಒಂದಷ್ಟು ಮೀಮಾಂಸೆಯ ಸಂಗತಿಯನ್ನು; ಮತ್ತೊಂದಷ್ಟು ದಲಿತ ಸಾಹಿತ್ಯದ ತಾತ್ವಿಕತೆ ಕುರಿತ ಪರಿಚಯಾತ್ಮಕ, ವಿಮರ್ಶಾತ್ಮಕ, ವಸ್ತು ವಿವರಣಾತ್ಮಕ ವಿಶ್ಲೇಷಣೆಯನ್ನು ಒಳಗೊಂಡಿದೆ.

ಈ ಕೃತಿಯಲ್ಲಿ ಕುವೆಂಪು ಆದಿಯಾಗಿ ಪು.ತಿ.ನ., ಜಿ. ಎಸ್. ಶಿವರುದ್ರಪ್ಪ, ಕೆ. ಕೃಷ್ಣಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಡಿ. ಆರ್. ನಾಗರಾಜ್, ಕೆ. ವಿ. ನಾರಾಯಣ, ರಹಮತ್ ತರೀಕೆರೆ, ನಟರಾಜ ಬೂದಾಳ ಮುಂತಾದವರ ಸಾಹಿತ್ಯ ಮೀಮಾಂಸೆ ಕುರಿತ ಚಿಂತನೆಗಳನ್ನು ಸಾಂದರ್ಭಿಕವಾಗಿ ಚರ್ಚೆಗೆ ಒಳಪಡಿಸಲಾಗಿದೆ. ಅದರೆ ಆ ಒಟ್ಟು ಚಿಂತನೆಗಳನ್ನು ತಾತ್ವಿಕರಿಸಿದ್ದರೆ ಇನ್ನಷ್ಟು ಸೂಕ್ತವೆನಿಸುತ್ತಿತ್ತು. ಸಿದ್ಧಲಿಂಗಯ್ಯ, ಜಂಬಣ್ಣ ಅಮರಚಿಂತ, ಕೆ. ಬಿ. ಸಿದ್ದಯ್ಯ, ಸತ್ಯಾನಂದ ಪಾತ್ರೋಟ, ಎನ್. ಕೆ. ಹನುಮಂತಯ್ಯ, ಸುಬ್ಬು ಹೊಲೆಯಾರ್, ಎಂ. ಎಸ್. ಶೇಖರ್, ಟಿ. ಯಲ್ಲಪ್ಪ ಮುಂತಾದವರ ರಚನೆಗಳನ್ನು ಪ್ರಾಯೋಗಿಕವಾಗಿ ಬಳಸುವ ಮೂಲಕ ದಲಿತ ಸಾಹಿತ್ಯ ಮೀಮಾಂಸೆಯ ನೆಲೆಗಟ್ಟನ್ನು ಕಟ್ಟಿಕೊಳ್ಳಲು ಪ್ರಯತ್ನಿಸಲಾಗಿದೆ. ಸಿದ್ಧಲಿಂಗಯ್ಯ ಅವರ “ಅಲ್ಲೆ ಕುಂತವರೆ', ಕೆ.ಬಿ.ಸಿದ್ದಯ್ಯ ಅವರ 'ಬಕಾಲ' 'ದಕಕಥಾದೇವಿ ಕಾವ್ಯ' 'ಗಲ್ಲೇಬಾನಿ', - ವಡ್ಡಗೆರೆ ನಾಗರಾಜಯ್ಯ ಅವರ 'ಅಸಾದಿ' ಮುಂತಾದ ದಲಿತ ಖಂಡಕಾವ್ಯಗಳನ್ನು ಇಟ್ಟುಕೊಂಡು ಕುಲಕಥನ ಮೀಮಾಂಸೆಯನ್ನು ಕುರಿತು ಚಿಂತಿಸಲಾಗಿದೆ. ಈ ಚರ್ಚೆಯ ಸಂದರ್ಭದಲ್ಲಿ ಮಂಟೇಸ್ವಾಮಿ, ಮಹದೇಶ್ವರದಂತಹ ಜನಪದ ಮಹಾಕಾವ್ಯಗಳಲ್ಲಿನ ಸೃಷ್ಟಿ ಪುರಾಣಗಳನ್ನು ಬಳಸಿಕೊಳ್ಳುವ ಮೂಲಕ ದಲಿತ ಸಾಹಿತ್ಯ ಮೀಮಾಂಸೆಯ



ತಾತ್ವಿಕತೆಯನ್ನು ಇನ್ನಷ್ಟು ಖಚಿತಪಡಿಸಬಹುದಿತ್ತು. ದಲಿತ ಸಾಹಿತ್ಯದ ರಚನೆ, ನಿರೂಪಣೆ, ಛಂದೋಲಯ ಹಾಗೂ ಓದುವಿಕೆಯ ದೃಷ್ಟಿಯಲ್ಲಿ ದಲಿತ ಸಾಹಿತ್ಯ ಮೀಮಾಂಸೆಯ ಸ್ವರೂಪವೇನು ಎಂಬುದನ್ನು ವಿಶ್ಲೇಷಿಸಲಾಗಿದೆ. ಒಟ್ಟಾರೆ ದಲಿತ ಸಾಹಿತ್ಯ ಮೀಮಾಂಸೆಯ ತಾತ್ವಿಕತೆಯನ್ನು ಕಟ್ಟಿಕೊಡಬೇಕೆನ್ನುವ ನಿಟ್ಟಿನಲ್ಲಿ ರವಿಕುಮಾರ್ ನೀಹಾ ಅವರ ಓದಿನ ದಾಹ, ಪ್ರಾಮಾಣಿಕ ಪ್ರಯತ್ನವನ್ನು ಈ ಕೃತಿಯಲ್ಲಿ ಕಾಣಬಹುದು. ಅಲ್ಲಲ್ಲಿ ವಿಷಯ ವಿಶ್ಲೇಷಣೆಯ ಪುನರಾವರ್ತನೆ, ಆತುರದ ವ್ಯಾಖ್ಯಾನ ಹಾಗು ಅಭಿಪ್ರಾಯ ಮಂಡನೆ, ಆಧಾರ ರಹಿತವಾದ ತೀರ್ಮಾನಗಳನ್ನು ಕೊಡುವ ಕ್ರಮಗಳನ್ನು ಹೊರತುಪಡಿಸಿದರೆ; ದಲಿತ ಸಾಹಿತ್ಯ ಮೀಮಾಂಸೆಯ ಕುರಿತ ಆಶಾದಾಯಕ ಚರ್ಚೆ ಇದಾಗಿದೆ.

## ಪರಂಪರೆ ಮತ್ತು ಆಧುನಿಕ ಸಂಸ್ಕೃತಿಯ ಜ್ಞಾನದ ನೆಲೆಗಳು

**ವಡ್ಡಗೆರೆ ನಾಗರಾಜಯ್ಯ**

ಸಂಸ್ಕೃತಿ ಮತ್ತು ಪರಂಪರೆಗಳು ಸಮಾಜದ ಜೀವವಿಕಾಸದ ದಾರಿಯಲ್ಲಿ ಮಾನವನೊಂದಿಗೆ ನಿತ್ಯ ಹರಿವಿನ ಜಲಯೂಟೆಯಾಗಿ ಹರಿದು ನಾಗರಿಕತೆಯ ತೊಟ್ಟಿಲು ತೂಗಿವೆ. ಸಾಂಸ್ಕೃತಿಕ ಅನನ್ಯತೆ ಮತ್ತು ಪರಂಪರೆಗಳನ್ನು ಸಾಮಾಜಿಕತೆಯ ಅಥವಾ ನಾಗರಿಕತೆಯ ಆಚೆಗಿರುವ ಸಂಗತಿಗಳೆಂದು ಗ್ರಹಿಸಬಾರದು. ಟಿ.ಎಸ್.ಎಲಿಯೆಟ್‌ನ 'ಖಿಡಿಚಿಜಿಣಿಂಟಿ ಚಿಟಿಜ ಖಿಜ ಖಟಿಜಿತುಜಣಚಿಟ ಖಿಚಿಟಜಟಿಣ' ಪ್ರಬಂಧದ ಪ್ರಕಟಣೆಯೊಂದಿಗೆ ಪರಂಪರೆ ಎಂಬ ಶಬ್ದದ ಚರ್ಚೆಗೆ ಎಲ್ಲಿಲ್ಲದ ಆವರಣವೊಂದು ಸೃಷ್ಟಿಯಾಯಿತು.

ಪರಂಪರೆಯೊಂದಿಗೆ ವ್ಯಕ್ತಿ ಪ್ರತಿಭೆಯನ್ನು ಅವಿನಾಭಾವ ಸಮೀಕರಣದಲ್ಲಿರಿಸಿ ಸಂಸ್ಕೃತಿಯ ನಿರ್ವಚನ ಮಾಡುತ್ತಾನೆ ಎಲಿಯೆಟ್. ವ್ಯಕ್ತಿಯು ತನ್ನ ವಿಶಷ್ಟ ಪ್ರತಿಭೆಯ ಮೂಲಕ ಸಂಸ್ಕೃತಿಗೆ ಸಾಧ್ಯಂತ ಕೊಡುಗೆಗಳನ್ನು ನೀಡುತ್ತಾ ಪರಂಪರೆಯನ್ನು ರೂಪಿಸುತ್ತಾನೆಂದು ಗ್ರಹಿಸಬೇಕಾಗುತ್ತದೆ. ಪರಂಪರೆಯ ನಿರ್ಮಾಣಕ್ಕೆ ನಡೆಸುವ ಪ್ರಯತ್ನಗಳು ಚಲನಶೀಲತೆಯ ಗುಣವನ್ನು ಸಂಸ್ಕೃತಿಯ ಅನನ್ಯತೆಯನ್ನಾಗಿ ರೂಪಿಸುತ್ತವೆ. ಸಂಸ್ಕೃತಿಯ ಗುಣಸ್ವಭಾವವನ್ನು ಸಾಂಸ್ಕೃತಿಕ ಅನನ್ಯತೆಯೆಂದು ಪರಿಗಣಿಸಲಾಗುತ್ತದೆ. ಪ್ರತಿಯೊಂದು ಸಾಮಾಜಿಕ ವಲಯವೂ ತನ್ನದೇ ವಿಶಿಷ್ಟ ಬಗೆಯ ಹವಣಿಕೆಗಳಿಂದ ಸಾಂಸ್ಕೃತಿಕ ನಡಿಗೆಯೊಂದನ್ನು ರೂಪಿಸಿಕೊಳ್ಳುತ್ತಲೇ ಪರಂಪರೆಯ ಹೊನಲನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ.

'ಸಂಸ್ಕೃತಿ' ಎಂಬ ಶಬ್ದದ ಅರ್ಥವು ಒಂದು ಅರ್ಥದಿಂದ ಮತ್ತೊಂದಕ್ಕೆ ನೆಗೆಯುತ್ತಿರುತ್ತದೆ. ಸಂಸ್ಕೃತಿಯ ಅರ್ಥದ ತನ್ನ ನೆಗೆತದ ಗುಣದಿಂದಾಗಿ, ಸಂಸ್ಕೃತಿ ಎಂದರೇನೆಂದು ವಿವರಿಸಿಕೊಳ್ಳುವಲ್ಲಿ ಅನೇಕ ಗೊಂದಲಗಳನ್ನು ಸೃಷ್ಟಿಸಿದೆ. ಇವೊತ್ತು ನಾವು ಯಾವ ಸಂದರ್ಭಕ್ಕೆ ಯಾವ ಅರ್ಥದಲ್ಲಿ ಸಂದರ್ಭಾನುಸಾರ ಸಂಸ್ಕೃತಿ ಪದದ ಶಬ್ದಾರ್ಥ ನಿರ್ವಚಿಸುತ್ತೇವೋ ಹಾಗೂ ಯಾವ ಉದ್ದೇಶಿತ ಅರ್ಥ ಹೊರಡಿಸಲು ಸಂಸ್ಕೃತಿ ಎಂಬ ಪದವನ್ನು ಪ್ರಯೋಗಿಸುತ್ತೇವೋ ಅದೇ ಅರ್ಥದಲ್ಲಿ ಅದು ನಮಗೆ ದಕ್ಕುತ್ತದೆಂದು ಹೇಳಲಾಗುವುದಿಲ್ಲ. ಸಾಮಾಜಿಕತೆ ಅಥವಾ ನಾಗರಿಕತೆಯ ಜೀವವಿಕಾಸಕ್ಕೆ ನೆರವಾಗುವ ಬದುಕಿನ ಬಹುತೇಕ ಎಲ್ಲಾ ನೆಲೆಗಳನ್ನು ಆವರಿಸಿಕೊಂಡು ಸಂಸ್ಕೃತಿಯ ಶಬ್ದನಿರ್ವಚನ ಮಾಡುತ್ತೇವಾದ್ದರಿಂದ ಸಂಸ್ಕೃತಿಯೆಂದರೆ ಇದೇ ಎಂದು ಸಲೀಸಾಗಿ ಸಂಸ್ಕೃತಿಯ ಪರಿಕಲ್ಪನೆಯನ್ನು ವಿವರಿಸಲಾಗದು. ಕೃಷಿ, ಭಾಷೆ, ಜನಾಂಗ, ಶಿಕ್ಷಣ, ಧರ್ಮ, ತತ್ವಶಾಸ್ತ್ರ, ಅಧ್ಯಾತ್ಮ, ವಿಜ್ಞಾನ ಹೀಗೆ ಪ್ರತಿಯೊಂದರ ವಿಮರ್ಶೆಯಲ್ಲಿ ಸಂಸ್ಕೃತಿಯ ಪರಿಕಲ್ಪನೆ ಇಣುಕಿಕೊಂಡು ತೂರಿಬರುತ್ತದೆ. ಹಾಗಾಗಿಯೇ ಸಂಸ್ಕೃತಿ ಎಂಬುದು



ಇತ್ತೀಚೆಗೆ ಹೆಚ್ಚು ಬಳಕೆಯಲ್ಲಿರುವ ಗೊಂದಲಕಾರಿ ಪರಿಕಲ್ಪನೆಯಾಗಿದೆ. ಈ ಪರಿಕಲ್ಪನೆಯನ್ನು ಒಂದು ಹಾದಿಬೀದಿ ಜಗಳದ ಬೈಗುಳದ ಭಾಷೆಯ ಸಾಮಾನ್ಯ ಸಂಗತಿಯಿಂದ ಹಿಡಿದು ವ್ಯಕ್ತಿಯ ಚೈತನ್ಯವು ತಲುಪಬಲ್ಲ ಅಧ್ಯಾತ್ಮಾನುಭೂತಿಯ ಅಮೂರ್ತ ಸಂಗತಿಗಳನ್ನು ವಿವರಿಸುವ ಅಸಾಮಾನ್ಯ ಅನುಭಾವಿಕ ಮೀಮಾಂಸೆಯವರೆಗೆ ಸಂಸ್ಕೃತಿಯ ಪರಿಕಲ್ಪನೆ ವ್ಯಾಪಿಸಿಕೊಂಡಿದೆ. ಸಾಂಸ್ಕೃತಿಕ ಅನನ್ಯತೆ ಎಂದರೆ ಇದ್ದಕ್ಕಿದ್ದಂತೆ ರೂಪ ತೋರಿಸಿ ಮಾಯವಾಗುವ ಮಾಯಾವಿಯ ಆಟದಂತಲ್ಲ. ಅದೊಂದು ನಿರಂತರ ಪ್ರಕ್ರಿಯೆ. ಜೀವಿಯ ಉಗಮ ಮತ್ತು ವಿಕಾಸ ಹೇಗೋ ಹಾಗೆ ಸಂಸ್ಕೃತಿಯೆಂಬುದು ವಿಕಾಸಶೀಲ. ಜೀವಿಯು ವಿಸರ್ಜಿಸಿದ ದೇಹ ಹೇಗೆ ಕ್ಷಯಗೊಳ್ಳುವುದೋ ಹಾಗೆ ಸಂಸ್ಕೃತಿಗೂ ಕ್ಷಯಗೊಳ್ಳುವ ಗುಣವಿದೆ. ಚಲನೆಯೇ ಇರದೆ ಸ್ಥಗಿತಗೊಂಡು ತುಕ್ಕಿಡಿದು ನಿಷ್ಪ್ರಯೋಜಕವಾಗುವ

ವಸ್ತುಗಳಂತೆ ಸಂಸ್ಕೃತಿಯೂ ಸ್ಥಗಿತಗೊಳ್ಳುವ ಗುಣವನ್ನು ಹೊಂದಿದೆ. ಚಲನಶೀಲ (ಲಿವಿಂಗ್) ಮತ್ತು ಸ್ಥಗಿತ (ಡೆಡ್) ನೆಲೆಗಳೆರಡರಲ್ಲೂ ಸಂಸ್ಕೃತಿ ಎಂಬ ಪರಿಕಲ್ಪನೆಗೆ ಸಮಾನ ಸ್ಥಾನವಿದೆ.

ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪರಂಪರೆಯ ಹೆದ್ದೊರೆಯನ್ನು ಈಜುತ್ತಲೇ ಸಂಸ್ಕೃತಿಯ ಜ್ಞಾನದ ನೆಲೆಗಳಿಗೆ ತನ್ನದೇ ಬಗೆಯ ಕಾಣೆ ನೀಡುವ ಹಂಬಲವನ್ನು ಕಾಣುತ್ತಾನೆ. ತನ್ನದೇ ಅಸ್ಮಿತೆಯನ್ನು ಛಾಪಿಸಲು ಹವಣಿಸುತ್ತಾನೆ. ಪರಂಪರೆ ಎಂಬ ಪದವೇ ಆಕರ್ಷಣೀಯ. ಯಾಕೆಂದರೆ ಅದು ಗತದ ವೈಭವದ ಭ್ರಾಮಕತೆಗೋ, ಗತದ ದಾರಿದ್ರದ ಮರುಕ, ಕಳೆದುಹೋದ ಸುಂದರ ಗತದ ಬಗ್ಗೆ ಹಳಹಳಿಕೆಗೋ ನಮ್ಮನ್ನು ಹೊಯ್ದು ಮುಟ್ಟಿಸಬಲ್ಲ ಮಹಿಮೆಯುಳ್ಳದ್ದು. ಪರಂಪರೆಯನ್ನು ಒಳಗೊಳ್ಳುವ ವಿಸ್ತರಿಸುವ ಅಥವಾ ಪರಂಪರೆಯನ್ನು ಮೀರುವ, ಮುರಿದು ಕಟ್ಟುವ ಪ್ರಯತ್ನಗಳಿಗೆ ಪ್ರತಿಯೊಬ್ಬರೂ ಒಡ್ಡಿಕೊಳ್ಳುತ್ತೇವೆ. ಕವಿ ಸಾಹಿತಿಗಳಾದವರು ತಮ್ಮ ಸೃಜನಶೀಲ ಉಪಕ್ರಮಗಳ ಮೂಲಕ ಪರಂಪರೆಯ ಸಾಂಸ್ಕೃತಿಕ ನೆಲೆಗಳ ಹುಡುಕಾಟಕ್ಕೆ ಬೇಕಾದ ದಾರಿಗಳನ್ನು ಶೋಧಿಸಿಕೊಳ್ಳುತ್ತಾರೆ. ರೈತನಾದವನು ತನ್ನ ನೇಗಿಲಗುಳದ ಅಧ್ಯಾತ್ಮದಿಂದ ಹಿಡಿದು ಬಹುರಾಷ್ಟ್ರೀಯ ಕಂಪನಿಗಳ ಬೀಜರಹಿತ ತಳಿಗಳ ಉತ್ಪಾದನೆಯ ನಿರ್‌ಬೀಜೀಕರಣದ ವಿಪತ್ತಿನವರೆಗೆ ತನ್ನನ್ನು ಒಂದು ಪ್ರಯೋಗದ ಪಶುವಾಗಿ ಒಡ್ಡಿಕೊಂಡು ನಿಲ್ಲುತ್ತಾನೆ. ಇದು ರೋಹಿಣಿ ನದಿ ನೀರಿಗಾಗಿ ರೈತರು ಕಾದಾಟ ನಡೆಸಿದ ಬುದ್ಧಗುರುವಿನ ಕಾಲಘಟ್ಟದಿಂದ ಹಿಡಿದು ಇವತ್ತಿನ ಗ್ಯಾಟ್ ಒಪ್ಪಂದ ಕಾಲದ ಮೈಕ್ರೋಬಯೋಲಜಿ, ಬಯೋಟೆಕ್ನಾಲಜಿಗಳವರೆಗೆ ಕೃಷಿ ಪರಂಪರೆಯ ಹೆದ್ದೊರೆ ಹರಿದುಬಂದಿದೆ.

'ಸ್ಥಳೀಯ ಭೂಗೋಳ'ದ ದೇಸಿ ನೆಲೆಗಳ ಉಳಿವು ಮತ್ತು ಹೈಟೆಕ್ ತಂತ್ರಜ್ಞಾನದ 'ವಿಶ್ವಗ್ರಾಮ' ಪರಿಕಲ್ಪನೆಗಳ ನಡುವೆ ಸಂಘರ್ಷ ತೀವ್ರಗೊಳ್ಳುತ್ತಿರುವ ಜಾಗತೀಕರಣದ ಈ ಹೊತ್ತಿನಲ್ಲಿ ಸ್ಥಳೀಯತೆಯ ನೆಲೆಗಳೇನೆಂಬುದನ್ನು ಅರಿಯುವ ಮುನ್ನವೇ ವಿಶ್ವಗ್ರಾಮ ನಿರ್ಮಿಸುವ ಜಾಗತಿಕ ಪ್ರಕ್ರಿಯೆಗೆ ಒಡ್ಡಿಕೊಂಡು ಸ್ಥಳೀಯ ನೆಲೆಗಳನ್ನು ನಿರ್ಲಕ್ಷಿಸುತ್ತಾ ಜಾಗತೀಕರಣದ ರೂವಾರಿಗಳಾದ ಬಂಡವಾಳಶಾಹಿಗಳ ಕಾವಲು ನಾಯಿಗಳಾಗಿ ನಿಯೋಜಿತಗೊಳ್ಳುತ್ತಿದ್ದೇವೆ. ಸ್ಥಳೀಯ ಗ್ರಾಮೀಣ ಭೂಗೋಳದಲ್ಲಿ ಕಾಲೂರಿ



ನಿಂತುಕೊಳ್ಳಲು ಕಲಿಯದ ನಾವು ವಿಶ್ವಗ್ರಾಮದ ಸೌಕರ್ಯಗಳನ್ನು ಹೊಂದಲು ಹಸಿದ ನಾಯಿಗಳಂತೆ ಚಡಪಡಿಸುತ್ತೇವೆ. ನೆಲದ ಮೇಲೆ ಕಾಲೂರದೆ ಮುಗಿಲು ಮುಟ್ಟಿಸಿಕೊಳ್ಳುವ ಹಂಬಲ ಹೊತ್ತು ನೆಲಮುಗಿಲುಗಳ ಸಂಬಂಧ ಸೂತ್ರ ತಪ್ಪಿದ ಅಪನಡೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಇಂಥ ಅಪನಡೆಯ ದಾರಿಯಲ್ಲಿ ಸಾಕಷ್ಟು ದೂರ ಸಾಗಿದ್ದೇವೆ. ವಿಶ್ವಗ್ರಾಮ ಎಂಬ ಜಾಗತಿಕ ಮುಗಿಲನ್ನು ಎಟುಕಿಸಿಕೊಳ್ಳುವ ನಮ್ಮ ಪ್ರಯತ್ನಗಳಲ್ಲಿ ಸ್ಥಳೀಯ ಭೂಗೋಳ ಮತ್ತು ಅಲ್ಲಿನ ದೇಸಿ ಜ್ಞಾನದ ನೆಲೆಗಳಿಗೆ ಎರವಾಗಿದ್ದೇವೆ.

ಸ್ಥಳೀಯ ನೆಲೆಯಲ್ಲಿಯೇ ಜ್ಞಾನದ ಸೃಷ್ಟಿಕರ್ತರಾಗಿರುವ ಜನಪದರು ಗ್ರಾಮಭಾರತದ ನಿಜವಾದ ರೂವಾರಿಗಳು. ಗ್ರಾಮಸಂಸ್ಕೃತಿಯ ಶ್ರದ್ಧಾವಂತ ಹೆಣಿಗೆಕಾರರಾದ ಅವರು ಶ್ರಮಸಂಸ್ಕೃತಿಯ ಅಸಲಿ ವಕ್ತಾರರು.

ಜಾತಿ ಆಧಾರಿತ ಮೇಲುಕೀಳುಗಳ ವಿಕೃತ ಸಾಮಾಜಿಕ ರಚನೆಯ ಭಾರತ ದೇಶದಲ್ಲಿ ಕುಲಕಸುಬುಗಳ ಆಧಾರದ ಮೇಲೆ ಜಾತಿಗಳು ಉಗಮವಾಗಿ ಅವರ ಕಸುಬುಗಳು ಸಹ ಶ್ರೇಣೀಕರಣ ಪ್ರಕ್ರಿಯೆಗೆ ಒಳಪಟ್ಟಿವೆ. ಬ್ರಾಹ್ಮಣರು ವಿಶ್ರಮ ಪೂಜಾರಿ ವರ್ಗವಾಗಿದ್ದು ಶ್ರಮಜೀವಿಗಳ ಬೆವರ ಕೊಡುಗೆಗಳನ್ನು ಅನಾಯಾಸವಾಗಿ ಅನುಭವಿಸುವಂಥವರಾಗಿದ್ದಾರೆ. ಸಂಸ್ಕೃತ ಭಾಷೆಯ ಕಲಿಕೆಯಿಂದ ಅನ್ನ ಸಿಕ್ಕುವ ಕಾಲದಲ್ಲಿ ಅಪಾರ ಶ್ರಮಜೀವಿವರ್ಗವನ್ನು ಸಂಸ್ಕೃತವನ್ನು ಕಿವಿಯಿಂದ ಕೇಳಿಸಿಕೊಳ್ಳದಂತೆ, ನಾಲಗೆಯಿಂದ ನುಡಿಯದಂತೆ ಆಚೆಗಿರಿಸಲಾಗಿತ್ತು. ಘನತರ ಅಕ್ಷರ ವಿದ್ಯೆಗಳನ್ನು ಹೇಳಿಕೊಡದಂತೆ ಅಕ್ಷರದ ಗುಡಿಯಿಂದ ಹೊರಗಿರಿಸಲಾಗಿತ್ತು. ಭೂಮಿಯಲ್ಲಿ ದುಡಿದು ಬದುಕುತ್ತೇವೆಂದರೆ ಭೂಮಿಯ ಹಕ್ಕಿನಿಂದ ವಂಚಿಸಲಾಗಿತ್ತು. ಆಂಗ್ಲರು ಕೆಳಜಾತಿಗಳಿಗಾಗಿ ಶಾಲೆ ತೆರೆಯುವತನಕ ಹಾಗೂ ಫುಲೆ ದಂಪತಿಗಳು ಅಸ್ಪೃಶ್ಯರಿಗಾಗಿ ಶಾಲೆ ತೆರೆಯುವತನಕ ಅಪಾರ ಜನಸ್ತೋಮವನ್ನು ಶಿಕ್ಷಣದಿಂದ ವಂಚಿಸಲಾಗಿತ್ತು. ಯಾವುದೇ ಸಂಪತ್ತು ಮತ್ತು ಅಧಿಕಾರದಿಂದ ವಂಚಿಸಿ ಹೊರಗಿಡಲಾಗಿತ್ತು. ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ಹೋರಾಟದ ಫಲವಾಗಿ ದೊರಕಿದ ಮೀಸಲಾತಿಯಿಂದ ಅನ್ನ ಸಿಕ್ಕುತ್ತದೆಂದು ನೆಚ್ಚಿದಾಗ ಖಾಸಗೀಕರಣ, ಉದಾರೀಕರಣ, ಜಾಗತೀಕರಣಗಳಿಂದ ಸಾರ್ವಜನಿಕ ರಂಗದ ಮೀಸಲಾತಿಯೂ ಅಪ್ರಸ್ತುತಗೊಳ್ಳುವಂತೆ ಆಧುನಿಕ ಜ್ಞಾನಗಳನ್ನು ಸೃಷ್ಟಿಸಿ ಕಡುಬಡವರು ಎಟುಕಿಸಿಕೊಳ್ಳದಂತೆ ನೋಡಿಕೊಳ್ಳಲಾಗುತ್ತಿದೆ. ಹೀಗೆ ದುಡಿಯುವ ಜನರನ್ನು ಉತ್ಪಾದನಾ ವಲಯಗಳಿಂದ ಹೊರದಬ್ಬುವ ಆಳುವವರ್ಗಗಳ ಕುತ್ಸಿತ ರಾಜಕಾರಣಕ್ಕೆ ದೀರ್ಘ ಇತಿಹಾಸವೇ ಇದೆ.

ದುಡಿಯುವ ಶ್ರಮಜೀವಿಗಳ ಪಾಲಿಗೆ ನಿಕೃಷ್ಟವೆಂದು ಹೀನಾಯಿಸಿ ತಿರಸ್ಕರಿಸಿದ ಸತ್ತದನಗಳನ್ನು ಹೊತ್ತೊಯ್ದು ತೊಗಲು ಸುಲಿಯುವ ತೋಟಿ ಕೆಲಸ, ಮಲಿನವೆಂದು ಯಾರೂ ಅವಲಂಬಿಸಲಾರದ ಮಲವನ್ನು ಹೊರುವ ಭಂಗಿ ಕೆಲಸ ಮತ್ತು ಊರಿನ ಬೀದಿಗಳ ಕಸ ಗುಡಿಸುವ ಜಾಡಮಾಲಿ ಕೆಲಸ, ಚರ್ಮ ಮತ್ತು ಎಲುಬುಗಳನ್ನು ಸಂಸ್ಕರಿಸಿ ಶೂದ್ರ ಜಾತಿಗಳಿಗೆ ಕೃಷಿ ಸಲಕರಣೆಗಳನ್ನು ತಯಾರಿಸಿಕೊಡುವ ಚಮ್ಮಾರಿಕೆ ಕೆಲಸ ಇನ್ನು ಮುಂತಾದ ಕಸುಬುಗಳಲ್ಲಿಯೇ ತೊಡಗಿಸಿ ಸ್ಥಿರಗೊಳಿಸಲಾಗಿತ್ತು. ಮಧ್ಯಮ



ಜಾತಿಗಳನ್ನು ಕುಂಬಾರಿಕೆ, ಕಮ್ಮಾರಿಕೆ, ನೇಕಾರಿಕೆ, ಮೀನುಗಾರಿಕೆ, ದನ ಆಡು ಕುರಿ ಸಾಕಾಣಿಕೆ, ಕಂಚುಗಾರಿಕೆ, ಚೆನಿವಾರಿಕೆ, ಕೆರೆಕಟ್ಟೆ ಬಾವಿ ಕೋಟೆಕೊತ್ತಲಗಳ ನಿರ್ಮಾಣ ಹೀಗೆ ಅನೇಕ ಕಸುಬುಗಳಲ್ಲಿ ನಿಯಮಿಸಲಾಗಿತ್ತು. ಈ ಕೆಲಸಗಳನ್ನೆಲ್ಲ ಕುಶಲಕರ್ಮಿತ್ವದ ಜ್ಞಾನ ಮತ್ತು ಕಲೆಗಳಮಟ್ಟಕ್ಕೆ ಎತ್ತರಿಸಿದ ಕೀರ್ತಿ ಉದ್ಯಮಶೀಲ ಶ್ರಮಜೀವಿಗಳಿಗೆ ಸಲ್ಲುತ್ತದೆ. ಜಾತಿ ಸರಳುಗಳ ಕೌಲ್ಯದ ವಿರುದ್ಧ ದುಡಿಯುವ ಜನ ಎಚ್ಚರವಾದಾಗಲೆಲ್ಲಾ ಸಾಮಾಜಿಕ ವಿಮೋಚನಾ ಚಳವಳಿಗಳು ಹುಟ್ಟಿವೆ. ಚಮ್ಮಾರಿಕೆ ವೃತ್ತಿಯನ್ನು ಅವಲಂಬಿಸಿದ ಮಾದಾರ ಧೂಳಯ್ಯನು ಚಮ್ಮಾವುಗೆಯ ಅಟ್ಟೆ ಚುಚ್ಚುವ ಉಳಿಮೊನೆಯಲ್ಲಿ ಶಿವ ಪ್ರತ್ಯಕ್ಷನಾದರೂ ಆ ಶಿವನ ದರ್ಶನವನ್ನು ನಿರಾಕರಿಸಿ 'ಇತ್ತಲೇಕೆ ಬಂದೆ ಚರ್ಮದ ತಿತಿಯ ಹೊತ್ತಾಡುವವನ ಮುಂದೆ?' ಎಂದು ತನ್ನ ಕಾಯಕದಲ್ಲಿಯೇ ಅಧ್ಯಾತ್ಮಾನುಭೂತಿಯನ್ನು ಕಂಡವನು. ಸಂತ ರವಿದಾಸ ಚಮ್ಮಾರಿಕೆಯ ಕಸುಬಿನಲ್ಲಿಯೇ ಅಧ್ಯಾತ್ಮಿಕ ಔನ್ನತ್ಯ

ಕಂಡುಕೊಂಡವನು. ಕುವೆಂಪು ಅವರು ತಮ್ಮ ಜಲಗಾರ ನಾಟಕದಲ್ಲಿ ಬರುವ ಜಲಗಾರನಲ್ಲಿ ಜಗದ ಜಲಗಾರನಾದ ಪರಶಿವನನ್ನು ಕಂಡುಕೊಂಡವರು. ದನದ ಸಗಣಿ ಉಂಡೆಯನ್ನು ಪಿಳ್ಳೆರಾಯನೆಂದು ಗಣಪತಿ ರೂಪದಲ್ಲಿ ಪೂಜಿಸಿ, ಬಳಿಕ ತಿಪ್ಪೆಗೆಸೆದು ತಿಪ್ಪೆಯ ಗೊಬ್ಬರದ ಮಹಿಮೆಯನ್ನು ಕಂಡುಂಡು ತನ್ನ ಮಕ್ಕಳಿಗೆ ತಿಪ್ಪಯ್ಯ, ತಿಪ್ಪಮ್ಮ, ತಿಪ್ಪೇಶ, ತಿಪ್ಪೇಸ್ವಾಮಿಯೆಂದು ಹೆಸರು ಕಟ್ಟಿ ಕರೆದ ರೈತಾಪಿಯ ಸ್ವಾಭಿಮಾನದ ಬದುಕಿನ ಚಿತ್ತಾರದ ಮುಂದೆ ಅಧ್ಯಾತ್ಮವನ್ನು ಮಾರುಕಟ್ಟೆಯಲ್ಲಿ ಮಾರುವ ಡೋಂಗಿ ಅಧ್ಯಾತ್ಮ ಗುರುಗಳು ನಿಲ್ಲಲಾರರು. ಹೀಗೆ ನಿರಾಕರಿಸಲಾದ ನೆಲೆಗಳಿಂದಲೇ ಅರಿವಿನ ಕಿಡಿಗಳು ದಗ್ಗನೆ ಹೊತ್ತಿಕೊಂಡು ದುಡಿಯುವ ಚೇತನಗಳು ಚಳವಳಿಗಾರರಾಗಿ ಮೂಡಿದ್ದಾರೆ.

ಭೂಮಿಗೆ ಬೆವರು ಬಸಿದು ದುಡಿಯುವ ನೆಲಜೀವಿಗಳ ಜೀವನಶೈಲಿಯು ಬೆವರುಗಂಧದ ವಿನ್ಯಾಸದಲ್ಲಿ ಕುಸುರಿಗೊಂಡ ಸುಂದರ ಕಸೂತಿ ಇದ್ದಂತೆ. ರಾಗಿ, ನವಣೆ, ಭತ್ತ, ಬರಗು, ಜೋಳ, ಸ್ಯಾವೆ, ಸಜ್ಜೆ, ಆರಕ, ಕೊರಲೆ, ಹುಚ್ಚೆಳ್ಳು, ಹೂಚೆಂಡು, ದವನ, ಮಲ್ಲಿಗೆ, ಇರುವಂತಿಗೆ, ಸೇವಂತಿಗೆ, ಕನಕಾಂಬರ, ಜಾಜಿ, ಜಾಲಗಿರಿ ಹೀಗೆ ಸಕಲವೂ ಮೇಲೈಸಿದ ಸುಂದರ ಬೆಳೆಸುಗೆ ಅವರದು. ಈ ಬಹುರೂಪಿ ಬೆಳೆಸುಗೆಯಂತೆಯೇ ಹುಲುಸು ವೈವಿಧ್ಯತೆಯ ಜನಪದ ಕಲೆ, ಆಚರಣೆ, ಸಂಪ್ರದಾಯ, ಹಾಡ್ಗತೆ, ಪದಪುರಾಣ, ಲಾವಣಿ, ಒಡಪು, ಗಾದಿ-ಗಾಥೆ-ತಗಾದೆಗಳು ಇಲ್ಲಿನ ಎಲ್ಲವೂ ಬಹುರೂಪಿ, ರೊಟ್ಟಿ, ಮುದ್ದೆ, ಕಡುಬು, ಅಂಬಲಿ, ಎಳೆನೀರು, ಪಾನಕ, ಷರಬತ್ತು, ಹಣ್ಣಿನ ರಸಗಳ ಸ್ಥಾನವನ್ನು ಫಾಸ್ಟ್ ಫುಡ್, ಜಂಕ್ ಫುಡ್, ರಾಸಾಯನಿಕ ಪಾನೀಯಗಳು ಮುಂತಾದವುಗಳು ಪಲ್ಲಟಗೊಳಿಸುತ್ತಿವೆ. ಕನ್ನಡ, ತುಳು, ಕೊಡವ ಮುಂತಾದ ಜನಭಾಷಿಕ ದೇಶಭಾಷೆಗಳು ಇಂಗ್ಲಿಷ್‌ನಂತಹ ಪ್ರಭುತ್ವ ಭಾಷೆಯಿಂದ ದಮನಕ್ಕೊಳಗಾಗುತ್ತಿವೆ. ರಾಪ್ ಮ್ಯೂಸಿಕ್, ಪಾಪ್‌◌ಾ◌ಂಗ್‌ಗಳ ಅಬ್ಬರದಲ್ಲಿ ಜಾನಪದ ಸಂಗೀತ ಮತ್ತು ಸುಗ್ಗಿ ಕುಣಿತದಂತಹ ಕಲೆಗಳು ನಿರ್ವಸತೀಕರಣ ಪ್ರಕ್ರಿಯೆಗೆ ಗುರಿಯಾಗಿವೆ. ಆಹಾರ ಪದ್ಧತಿ, ಕೃಷಿ ಪದ್ಧತಿ, ಔಷಧೀಯ ಪದ್ಧತಿ, ಸಂಗೀತ, ಕಲೆ, ನೀರು ಮಾತ್ರವಲ್ಲದೆ ಪ್ರಕೃತಿಯ ಮರಗಿಡಗಳೂ ಸೇರಿದಂತೆ ಇಡೀ ಜೀವಜಾಲ ಇಂದು ಏಕಾಕಾರಿ ಅನ್ಯ ಪ್ರವೇಶಗಳಿಂದ ಪಲ್ಲಟಗೊಳ್ಳುತ್ತಿವೆ,



ಭ್ರಷ್ಟಗೊಳ್ಳುತ್ತಿವೆ. ಏಕಾಕೃತಿಯ ಯಂತ್ರಜಗತ್ತಿನ ಹರಿಕಾರರ ಮೂರ್ಖರ ಪೆಟ್ಟಿಗೆ, ತಂಗಳು ಪೆಟ್ಟಿಗೆ, ಅಲರಾಂ ಕೋಳಿ, ಆನಿಮೇಷನ್, ನೆಟ್ಟು-ಟ್ಯಾಬ್ಲೆಟ್ಟು-ಗ್ಯಾಜೆಟ್ಟು, ಟ್ವಿಟರ್, ವಾಟ್ಸಾಪ್, ಇ-ಮೇಲ್, ಇ-ಬುಕ್, ಇ-ನ್ಯೂಸ್, ವೆಬ್‌ಮ್ಯಾಗ್, ಫೇಸ್‌ಬುಕ್, ಆಂಡ್ರಾಯ್ಡ್‌ಗಳ ಸೈಬರ್ ವೈರಸ್‌ಗಳಿಲ್ಲದ ಗ್ರಾಮಭಾರತದ ಜನರು ಸೈಬರಿಕರಲ್ಲ; ನಾಗರಿಕರು ನೆಟಿಜನ್‌ಗಳಲ್ಲ; ಸಿಟಿಜನ್‌ಗಳು, ಹೈಟೆಕ್ ಸೈಬರಿಕರಲ್ಲದ ಕೇವಲ ಸಾಮಾನ್ಯ ನಾಗರಿಕರು. ನಾಗರಿಕತೆಯ ವಿಕಸನದ ದಾರಿಯಲ್ಲಿ ವಿಜ್ಞಾನದ ಕೊಡುಗೆಗಳು ಎಷ್ಟರ ಮಟ್ಟಿಗೆ ಪರಿಸರಸ್ನೇಹಿ ಮತ್ತು ಮಾನವೀಯ ಮುಖಮೌಲ್ಯ ಉಳ್ಳವು ಎಂಬುದನ್ನು ಕುರಿತು ನಾವು ಯೋಚಿಸಬೇಕಿದೆ. ಅಂತೆಯೇ ಆಧುನಿಕ

ಜ್ಞಾನಕ್ಷೇತ್ರಗಳಿಂದ ಹಾಗೂ ಅಭಿವೃದ್ಧಿ ಫಲಗಳಿಂದ ಆದಿವಾಸಿಗಳು, ಅಲೆಮಾರಿಗಳು ಮುಂತಾದ ನಿರ್ಗತಿಕ ನೆಲೆಗಳಲ್ಲಿರುವ ಅಪಾರ ಜನಸಮೂಹವನ್ನು ಹೊರದಬ್ಬಿದ ಸೈಬರಿಕ ಸಂಸ್ಕೃತಿಯ ಆತ್ಮದ ಕಣ್ಣು ಕುರುಡಾಗಿರುವುದನ್ನು ಡಯಾಗೋಸ್ ಮಾಡುವ ಬಗೆ ಮತ್ತು ದಾರಿಗಳನ್ನೂ ಕುರಿತು ಯೋಚಿಸಬೇಕಿದೆ.

ನಗರೀಕರಣ ಮತ್ತು ಕೈಗಾರೀಕರಣದ ಪ್ರಭಾವಗಳಿಂದಾಗಿ ಹಸಿರು ವಲಯ ಕಣ್ಮರೆಯಾಗುತ್ತಿದ್ದು ಪರಿಸರ ಸಮತೋಲನದ ಮೇಲೆ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತಿವೆ. ಹತ್ತಿ ಬೆಳೆಯುವ ಗ್ರಾಮೀಣ ನಾಗರಿಕರ ನೆಲ ಪಾಲಿಫೈಬರ್ ಕೃತಕ ನೂಲು ಉತ್ಪಾದಿಸುವ ನಗರದ ಸೈಬರಿಕರ ಪಾಲಾಗುತ್ತಿದೆ. ಆಧುನಿಕ ಸೈಬರಿಕರ ಮಿದುಳಿಗೆ ರಾಗಿ ಭತ್ತದ ಕಣಜವಾಗುವ ಭೂಮಿ, ಹಕ್ಕಿಪಕ್ಷಿ ಚಿಟ್ಟೆ ದುಂಬಿಗಳು ಜೇಂಕರಿಸುವ ಕಾಡು, ಜಲಸಂಪನ್ಮೂಲ ಎಲ್ಲವೂ ಸಾವಿರ ಕೋಟಿಯ ಬಿಕರಿಯಲ್ಲಿ ಕೊಳ್ಳಬಹುದಾದ ಮಾರುಕಟ್ಟೆಯ ಸರಕು! ಮುಕ್ತ ಮಾರುಕಟ್ಟೆಯ ಬಾಗಿಲು ತೆರೆದ ಭಾರತ ದೇಶದ ಆರ್ಥಿಕತೆಯು ಜನರ ಕಣ್ಣು- ಹೃದಯಗಳನ್ನು ಕಿತ್ತುಕೊಂಡು ಗಾವಿಲರನ್ನಾಗಿಸಿ ಬಂಡವಾಳ ಹೂಡಿಕೆಯ ವಲಯಗಳಿಗೆ ನುಗ್ಗಿಸಿ ಸಂಪತ್ತು ಸಂಗ್ರಹಣೆಯ ಸ್ಪರ್ಧೆಗೆ ಇಳಿಸಿದೆ ಮತ್ತು ಬಳಕೆದಾರ ಸಂಸ್ಕೃತಿಯ ಹುಚ್ಚು ಕುದುರೆಯ ಮೇಲೆ ಕೂರಿಸಿ ನಾಗಾಲೋಟಕ್ಕೆ ದಬ್ಬಿದೆ. ಸಂಪತ್ತು ಮತ್ತು ಸೌಕರ್ಯಗಳ ವ್ಯಸನಿಗಳಾಗಿರುವ ನಾವು ಶತಮಾನಗಳಿಂದ ಬಾಧಿಸುತ್ತಿರುವ ನಮ್ಮ ಅಸಲಿ ಸಮಸ್ಯೆಗಳನ್ನು ಮರೆತುಬಿಟ್ಟಿದ್ದೇವೆ. ಆದುದರಿಂದಲೇ ನಾವು ಜೀವಿಸುತ್ತಿರುವ ನಮ್ಮ ಸುತ್ತಲ ಸಮಾಜದೊಳಗಿರುವ ಅಸ್ಪೃಶ್ಯತೆ, ಲಿಂಗ ತಾರತಮ್ಯ, ಹಸಿವು, ಅನಕ್ಷರತೆ, ಅಜ್ಞಾನ, ಅನೈತಿಕತೆ, ಭ್ರಷ್ಟಾಚಾರ ಮುಂತಾದ ಯಾವ ಸಮಸ್ಯೆಗಳ ವಿರುದ್ಧವೂ ಜನ ಧ್ವನಿ ಎತ್ತುತ್ತಿಲ್ಲ. ಧ್ವನಿ ಎತ್ತುವ ಅತ್ಯಂತ ಪ್ರಸ್ತುತ ಮತ್ತು ಮಾನವೀಯ ಚಳವಳಿಗಳು ವಿಸ್ತರಣೆಯಾಗದೆ ಚಳವಳಿಯ ಉಗಮದ ಬಿಂದುವಿನಲ್ಲಿಯೇ ಕ್ಷೀಣವಾಗಿ ಕ್ರಮೇಣ ಲಾಭಕೋರ ಸಮಯಸಾಧಕರ ಕೈಗೆ ಸಿಕ್ಕಿ ಅಪ್ರಸ್ತುತವಾಗಿ ಕರಗಿಹೋಗುತ್ತಿವೆ. ಆದುದರಿಂದಲೇ ಅಸ್ಪೃಶ್ಯತೆ, ಅನಕ್ಷರತೆ, ಹಸಿವು, ಬಡತನ, ಲಿಂಗತಾರತಮ್ಯ ಮುಂತಾದ ಸಮಸ್ಯೆಗಳ ಬೇರುಗಳನ್ನು ಇಂದಿಗೂ ನಮ್ಮಿಂದ ಸಡಿಲಿಸಲಾಗಿಲ್ಲ. ಜನಚಳವಳಿಗಳನ್ನು ಬಗ್ಗುಬಡಿಯುವುದನ್ನೇ ಧರ್ಮವನ್ನಾಗಿಸಿಕೊಂಡಿರುವ ಪುರೋಹಿತಶಾಹಿಗಳು ಜಾಗತಿಕ ಬಂಡವಾಳಶಾಹಿಗಳೊಂದಿಗೆ ಮಧುರಮೈತ್ರಿ ಬೆಳೆಸಿಕೊಂಡು ಸುಖವಾಗಿದ್ದಾರೆ, ಅಷ್ಟೇ



ಆನಂದವಾಗಿದ್ದಾರೆ. ಇಂತಹ ವಿದ್ಯಮಾನಗಳ ಕಾರಣದಿಂದಾಗಿಯೇ ದಲಿತ ಸಂಘರ್ಷ ಸಮಿತಿ, ರೈತ ಸಂಘ, ಪರಿಸರ ಚಳವಳಿ, ಭಾಷಾ ಚಳವಳಿ, ಅಹಿಂದ, ಕಡೆಗೆ ಅಲೆಮಾರಿಗಳ ಮಾನವಹಕ್ಕು ಚಳವಳಿಗಳೂ ಸಹ ವಿಘಟನೆಯಾಗಿ ನೂಲು ಸವೆದು ಇಂಜಿಹೋದ ಹೊಲಿಯಲಿಕ್ಕಾಗದ ಜೆಲ್ಲಿ ಬಟ್ಟೆಗಳಂತಾಗಿವೆ. ಜೆಲ್ಲಿ ಬಟ್ಟೆಗಳನ್ನೆ ಬತ್ತಿಯಾಗಿ ಹೊಸೆದು ತಮ್ಮದೇ ನೆತ್ತರೆಣ್ಣೆ ಎರೆದು ಹೋರಾಟದ ದೀಪ ಬೆಳಗಿಸಿ ಬೆಳಕು ನೀಡಬಲ್ಲ ಹೊಸ ಚಳವಳಿಗಾರರು ಹುಟ್ಟಿಬರುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಿದೆ.

ಅನೇಕ ಅಂತರಾಷ್ಟ್ರೀಯ ಬಂಡವಾಳಿಗರು ಭಾರತ ದೇಶಕ್ಕೆ ಬಂಡವಾಳದ ಪ್ರವಾಹವನ್ನೇ ಹರಿಸುತ್ತಿದ್ದಾರೆ. ಈ ಬೆಳವಣಿಗೆಯು ಶ್ರೀಮಂತ ರಾಷ್ಟ್ರಗಳ ಜನರಂತೆ ಭಾರತೀಯರೂ ಸಹ ವಿಲಾಸಿ ವಸ್ತುಗಳನ್ನು ಉತ್ಪಾದಿಸುವಂತೆ ಪ್ರಚೋದಿಸಿ ದೇಶಿ ಆರ್ಥಿಕ ಜ್ಞಾನಸಂರಚನೆಯ ಸಮಾಧಿಯ ಮೇಲೆ ದೊಡ್ಡದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. ಉಳ್ಳವರ ಮತ್ತು ಇಲ್ಲದವರ ನಡುವಿನ ಕಂದಕವನ್ನು ಮತ್ತಷ್ಟು ಹೆಚ್ಚಿಸಲಾಗಿದೆ. ಉಳ್ಳವರು ವಿಲಾಸಿ ವಸ್ತುಗಳನ್ನು ಖರೀದಿಸುವ ಬಳಕೆದಾರ ಸಂಸ್ಕೃತಿಯ ಸದಸ್ಯರಾಗುವ ವ್ಯಾಮೋಹಕ್ಕೆ ಒಳಗಾಗುತ್ತಿದ್ದರೆ, ಇಲ್ಲದವರು ಅದೇ ವಸ್ತುಗಳನ್ನು ಖರೀದಿಸಬೇಕೆಂಬ ಆಸೆಯಿಂದ ತಮ್ಮ ಬದುಕಿನ ಸ್ಥಿರ ಆಧಾರಗಳಾದ ಆಡು ಕುರಿ ನೆಲ ಮನೆಮಠ ಮಾರಿಕೊಂಡು ತಾತ್ಕಾಲಿಕ ಪರಿಣಾಮಗಳನ್ನು ಅನುಭವಿಸಿ ಶಾಶ್ವತ ನಿರುದ್ಯೋಗ ಸಮಸ್ಯೆಗಳಿಗೆ ತಮ್ಮನ್ನು ದೂಡಿಕೊಳ್ಳುತ್ತಿದ್ದಾರೆ. ಜಾಗತೀಕರಣದ ಮುಕ್ತಮಾರುಕಟ್ಟೆಯು ಬಳಕೆದಾರ ಸಂಸ್ಕೃತಿಗೆ ರಹದಾರಿಯಾಗಿ ಪರಿಣಮಿಸಿತು. ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳಶಾಹಿಗಳ ಹಿಡಿತಕ್ಕೆ ಭಾರತ ಸಿಕ್ಕಿಕೊಂಡಿದೆ. ನವಬಂಡವಾಳವಾದವು ಇಡೀ ವಿಶ್ವವನ್ನು ತನ್ನ ಅಧೀನ ಮಾಡಿಕೊಳ್ಳುವ ಹುನ್ನಾರಗಳನ್ನು ರೂಪಿಸಿ ಇಲ್ಲಿನ ನೀರು ನೆಲ ಆಹಾರ ಬಟ್ಟೆ ಮನರಂಜನೆ ಸಾಹಿತ್ಯ ಸಂಗೀತ ಕ್ಷೇತ್ರಗಳನ್ನೂ ಬಿಡದೆ ಅಲ್ಲೆಲ್ಲಾ ಹೊಸ ಸರಕುಗಳನ್ನು ತುಂಬಿ ಮಾರುಕಟ್ಟೆಯ ಏಕಸ್ವಾಮ್ಯವನ್ನು ಸಾಧಿಸುತ್ತಿದೆ. ನವಬಂಡವಾಳವಾದಿ ಮತ್ತು ಉದಾರವಾದಿ ಸಾಮ್ರಾಜ್ಯಶಾಹಿಗಳು ಹೀಗೆ ಏಕಸ್ವಾಮ್ಯವನ್ನು ಸ್ಥಾಪಿಸಿಕೊಳ್ಳಲು ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವವ್ಯಾಪಾರ ಸಂಘಟನೆಗಳು ಇನ್ನಿಲ್ಲದಂತೆ ಶ್ರಮಿಸುತ್ತಿವೆ.

ಕೃತಕ ಉಪಗ್ರಹಗಳನ್ನು ಅಂತರಿಕ್ಷಕ್ಕೆ ಉಡ್ಡಯನ ಮಾಡಿ ಹೊಸಹೊಸ ಗ್ರಹಗಳನ್ನು ಅನ್ವೇಷಿಸುತ್ತಿರುವ ನಾವು ಅಲ್ಲಿಯೂ ನಮ್ಮ ನೆಲೆ ನಿರ್ಮಾಣಗಳ ಸಾಧ್ಯತೆಗಳನ್ನು ಕುರಿತು ಚಿಂತಿಸುತ್ತಿದ್ದೇವೆ. ಹೊರ ದೇಶಗಳನ್ನು ಕೇಲವೇ ಗಂಟೆಗಳಲ್ಲಿ ತಲುಪಬಲ್ಲ ಹಾಗೂ ಅಲ್ಲಿನವರೊಂದಿಗೆ ಕೆಲವೇ ಸೆಕೆಂಡುಗಳಲ್ಲಿ ಸಂಪರ್ಕಿಸಿ ಮಾತನಾಡಬಲ್ಲ ತಂತ್ರಜ್ಞಾನದ ಪ್ರಗತಿಯಿಂದಾಗಿ ಇಡೀ ಪ್ರಪಂಚ ಚಿಕ್ಕದಾಗಿದೆ. ಬೆಂಕಿಪೆಟ್ಟಿಗೆಯಷ್ಟು ಚಿಕ್ಕದಾಗಿರುವ ಪ್ರಪಂಚದಲ್ಲಿ ಎಟುಕಿಸಿಕೊಳ್ಳಲು ಖಂಡ ಖಂಡಗಳ ನಡುವಿನ ಅಂತರವೂ ಕಮ್ಮಿಯಾಗಿದೆ. ನಮ್ಮನ್ನು ಆಳಿದ ವಸಾಹತುಶಾಹಿಗಳ ಕ್ರಿಕೆಟ್ ಆಟ ನಮ್ಮ ದೇಶದಲ್ಲಿ ಮಾತ್ರವಲ್ಲದೆ ಎಲ್ಲ ದೇಶಗಳ ಜಾಗತಿಕ ಏಕಾಕಾರಿ ಆಟವಾಗಿ ಮನ್ನಣೆ ಗಳಿಸಿಕೊಳ್ಳುತ್ತಿದೆ.



ಸ್ಥಳೀಯ ಭೂಗೋಳದ ಅನೇಕ ಉಲ್ಲಾಸದಾಯಕ ಆಟಗಳನ್ನು ಕ್ರಿಕೆಟ್ ಆಟ ಬಲಿ ತೆಗೆದುಕೊಳ್ಳುತ್ತಿದೆ. ಕಂಪ್ಯೂಟರ್ ಮುಂದೆ ಕುಳಿತು ಮೌಸ್ ಹಿಡಿದು ಗೂಗಲಾಡುತ್ತಾ ವಿಡಿಯೋ ಗೇಮ್ಸ್ ಆಡುವವರಿಗೆ ಗ್ರಾಮೀಣ ಪ್ರದೇಶದ ಸ್ಥಳೀಯತೆಯ ಬೆವರಿನಲ್ಲಿ ಅರಳಿದ ಕುಂಟೋಬಿಲ್ಲೆ, ಮರಕೋತಿ, ಲಗೋರಿ, ಬುಗುರಿ, ಈಜಾಟ, ಜೂಟಾಟ, ಕಾಕಮ್ಮನ ಗೂಡು, ಮರಳು ಮನೆ, ಅಟುಗುಣಿ ಮಣೆ, ಚನ್ನೆಮಣೆ, ಚಿಣ್ಣಿದಾಂಡು, ಕೇಸೋಗುಡ್ಡೆ, ಕಲ್ಲು ಕುಟಿಕುಟಿ ಮುಂತಾದ ಯಾವ ಆಟದ ಕಲ್ಪನೆಯೂ ಬರಲಾರದು. ಹಳೆಯ ಮತ್ತು ಹೊಸದರ ನಡುವಿನ ದ್ವಂದ್ವವನ್ನಾಗಲೀ ಸಂಘರ್ಷವನ್ನಾಗಲೀ ವಿವರಿಸುವ ಉದ್ದೇಶ ನನಗಿಲ್ಲ. ಆದರೆ ಉತ್ಪಾದಕರಾದ ಗ್ರಾಮಸಂಸ್ಕೃತಿ ನೆಲೆಯ

ಶ್ರಮಜೀವಿಗಳು ಅನುತ್ಪಾದಕ ವಿಶ್ರಮಜೀವಿಗಳಾದ ಸೈಬರಿಕ ಸಂಸ್ಕೃತಿಯ ಸಂಗ್ರಾಹಕರ ಉನ್ನತಿಗಾಗಿ ದುಡಿಯುವ ಪಶುಗಳಂತಾಗಿದ್ದಾರೆ. ಹೀಗೆ ಮನುಷ್ಯರನ್ನು ಪಶುಗಳನ್ನಾಗಿ ಪರಿವರ್ತಿಸುವ ಆಧುನಿಕ ಜ್ಞಾನದ ಕೌರ ಎಂಥದ್ದೆಂಬುದು ನನ್ನ ಪ್ರಶ್ನೆ, ಹೊಂಗೆ, ಬೇವು, ಮಾವು, ಆಲ ಅರಳಿ, ತಂಗಡಿ ಮುಂತಾದ ಹಲವಾರು ಗಿಡಮರಗಳ ಹಸಿರೆಲೆ; ಹಸು, ಕುದುರೆ, ಕುರಿ, ಎಮ್ಮೆ, ಮೇಕೆ, ಕೋಳಿ, ಕತ್ತೆ, ಹಂದಿ ಮುಂತಾದವುಗಳ ಸಗಣಿ ಗಂಜಳ; ಕೆಮ್ಮಣ್ಣು, ಎರೆಮಣ್ಣು, ಕೆರೆಗೋಡು, ಕಳೆತ್ಯಾಜ್ಯ, ಕಣತ್ಯಾಜ್ಯ ಎಲ್ಲವನ್ನು ತಿಪ್ಪೆಗೇರಿ ಗೊಬ್ಬರ ಮಾಡಿ; ಹೇರು ಕಟ್ಟಿ ಹೊಲಗದ್ದೆಗಳಿಗೆ ಹರಡಿ ಉತ್ತಿಬಿತ್ತಿ ಬೆಳೆಯುತ್ತಿದ್ದ ಪುಷ್ಟಿದಾಯಕ ಆಹಾರಧಾನ್ಯಗಳೆದುರು ಅಧಿಕ ಇಳುವರಿ ನೀಡುವ ಬೀಜರಹಿತ ಸಂಕರ ತಳಿಗಳ ಫಸಲು ಪಡೆದು ತಾಕ್ಷಣಿಕ ಪರಿಣಾಮದ ಸುಖದಲ್ಲಿ ಮೈಮರೆತು ಬೀಜೋತ್ಪಾದನೆಯ ಜ್ಞಾನ ಮತ್ತು ಅಧಿಕಾರ ಎರಡನ್ನೂ ಕಿತ್ತುಕೊಳ್ಳುತ್ತಿರುವ ರಾಕ್ಷಸರೆದುರು ಗ್ರಾಮೀಣ ಕೃಷಿಕರು ಕೈಕಟ್ಟಿ ನಿಂತಿದ್ದಾರೆ. ಬೀಜೋತ್ಪಾದನೆ ಮಾಡಲಾರದಂತೆ ಆಹಾರಧಾನ್ಯಗಳನ್ನು ನಿರ್ವೀರ್ಯ ಜೀನ್‌ಗಳಿಂದ ಉತ್ಪಾದಿಸಿ ಕೊಡುವ ಕೌರಕ್ಕೆ ಏನು ಹೇಳಬೇಕು? ಇದು ಮಾನವನು ತನ್ನ ಸ್ವಾಯತ್ತ ನೆಲೆಗಳನ್ನು ನಾಶಪಡಿಸಿಕೊಂಡು ತನ್ನದೇ ಕೃತಕ ಜೈವಿಕ ಜ್ಞಾನಕ್ಕೆ ತಾನೇ ಬಲಿಯಾಗುವ ಯಜ್ಞಪಶುವಿನ ಸ್ಥಿತಿಯಂತಾಗಿದೆ.

ನಮ್ಮ ಪೂರ್ವಿಕರು ತಮ್ಮ ಜೀವಯಾನದ ಅಸ್ತಿತ್ವದ ಭಾಗವಾಗಿ ಅನೇಕ ಪ್ರಯೋಗಗಳಿಂದ ಶೋಧಿಸಿದ ಸ್ಥಳೀಯ ಭೂಗೋಳದ ದೇಶಿ ಬೀಜತಳಿಗಳು ತಮ್ಮ ಒಡಲಾಳದಲ್ಲಿ ಯಾವೊತ್ತಿಗೂ ಬರಡಾಗದ ಸತ್ವಶೀಲ ಬೀಜೋತ್ಪಾದಕ ಗುಣವನ್ನು ಧಾರಣೆ ಮಾಡಿಕೊಂಡಿವೆ. ಇದು ದೇಶೀ ಸಂಸ್ಕೃತಿನಿಷ್ಠ ನೆಲಜೀವಿಗಳ ಸೃಜನಶೀಲ ಶೋಧದ ದ್ಯೋತಕವೂ ಆಗಿದೆ. ಸಾವಿರಾರು ವರ್ಷಗಳ ಪ್ರಯೋಗದ ಬಳಿಕವೂ ಮತ್ತೆ ಮಣ್ಣು ಸೇರಿ ನಿರಂತರವಾಗಿ ಬೀಜೋತ್ಪಾದಿಸುವ ಗುಣ ಉಳಿಸಿಕೊಂಡುಬಂದಿದ್ದ ಸತ್ವಶೀಲ ದೇಶಿ ಬೀಜತಳಿಗಳೆದುರು ಬೀಜರಹಿತ ಫಸಲನ್ನು ಉತ್ಪಾದಿಸುವ ಆಧುನಿಕ ತಳಿಗಳು ಮೀಸೆ ತಿರುವುತ್ತಿರುವುದನ್ನು ನೋಡಿ ಏನು ಹೇಳಬೇಕು? ಆಯಾ ಸ್ಥಳೀಯ ಭೂಗೋಳದ ಜ್ಞಾನದ ನೆಲೆಗಳು ಅಲ್ಲಲ್ಲಿಗೆ ಹೊಂದಾಣಿಕೆಯಾಗಿ ಪ್ರತಿ ಘಟಕವೂ ಜೀವಸರಪಳಿಯಲ್ಲಿ ಒಂದನ್ನೊಂದು ಕೇಡಿಲ್ಲದಂತೆ ಬೆಸೆದು ವಿಕಸನಗೊಳ್ಳುವ ನಿರಂತರ ಸೃಷ್ಟಿಶೀಲತೆಯ ಅನನ್ಯತೆಯನ್ನು ಉಳಿಸಿಕೊಂಡಿವೆ. ಇದು ಸಂಸ್ಕೃತಿಯೊಂದರ ಸತ್ವಶೀಲತೆಯ ಅಭಿವ್ಯಕ್ತಿಯೂ ಹೌದು. ಇದು ಕೇವಲ ತಳಿವಿಜ್ಞಾನ(ಜೆನಿಟಿಕ್ಸ್)ದ



ಸಂಗತಿಗಳಿಗೆ ಮಾತ್ರ ಸೀಮಿತಗೊಳ್ಳದೆ ಸಾಹಿತ್ಯದ ಸೃಜನಶೀಲ ಸಂಗತಿಗಳಿಗೂ ಚಾಚಿಕೊಂಡಿದೆ. ದೇಶಿ ಸಾಹಿತ್ಯ ಹಾಗೂ ಶಿಷ್ಟವೆಂದು ಕರೆಸಿಕೊಳ್ಳುವ ಮಾರ್ಗ ಸಾಹಿತ್ಯ ಪ್ರಕಾರಗಳ ಸೃಜನಶೀಲ ಅಭಿವ್ಯಕ್ತಿಯಲ್ಲಿಯೂ ಇದು ಕಾಣಸಿಗುತ್ತದೆ.

ದೇಶಿ ಮತ್ತು ಮಾರ್ಗ ಪರಿಕಲ್ಪನೆಗಳು ಈಗಿನವಲ್ಲ. ಸಮಾಜದ ಕೆನೆಪದರದ ಸೀಮಿತ ಆಳುವವರ್ಗಗಳ ಮಾರ್ಗ ಸಾಹಿತ್ಯ ಮೀಮಾಂಸೆಯ ವಿಪತ್ಕಾರಕಗಳೆದುರು ಪ್ರತಿಸವಾಲು ಸ್ವೀಕರಿಸಿದ ಅಸ್ಪೃಶ್ಯ ಮತಂಗಮುನಿಯು

'ಬೃಹದ್ದೇಶಿ' ಎಂಬ ಸಂಗೀತ ಶಾಸ್ತ್ರಗ್ರಂಥವನ್ನು ರಚಿಸುವ ಮೂಲಕ 'ದೇಶಿ' ಎಂಬ ಪರಿಕಲ್ಪನೆಗೆ ಬೃಹತ್ ರೂಪ ನೀಡಲು ಪ್ರಯತ್ನಿಸಿದ. ಸ್ಥಳೀಯ ಭೂಗೋಳದಲ್ಲಿ ವಿಕಸನಗೊಂಡ ಸಂಗೀತ ಜ್ಞಾನದ ಪ್ರಚ್ಛನ್ನ ಸೃಜನಶೀಲತೆಯ ಮಹಿಮೆಯನ್ನು ಬೃಹದ್ದೇಶಿ' ಎಂದು ಹಾಡಿ ಹೊಗಳಿದ. ಇಂಗ್ಲೆಂಡಿನಲ್ಲಿ ೨೦ನೇ ಶತಮಾನದ ಆಧುನಿಕ ಕವಿಗಳು ತಮ್ಮ ಕಾವ್ಯದಲ್ಲಿ ಹುಡುಕಲು ಪ್ರಯತ್ನಿಸುತ್ತಿದ್ದ ಸೃಜನಶೀಲ ಭಾಷೆಭಾವಗಳೇ ಎಲಿಯೆಟ್ ಕವಿಗೆ ತನ್ನ ಪೂರ್ವದ ೧೭ನೇ ಶತಮಾನದ ಮೆಟಫಿಸಿಕಲ್ ಕವಿಗಳಲ್ಲಿ ಕಾಣಿಸಿದವು. ಮೆಟಫಿಸಿಕಲ್ ಕವಿಗಳೇ ನಿಜವಾದ ಆಧುನಿಕ ಸಾಹಿತ್ಯ ಪರಂಪರೆಯ ನಿರ್ಮಾಣಕಾರರೆಂದು ಅವನು ಗುರುತಿಸಿದ. ದೇಶೀ ಪರಂಪರೆ, ಪರಂಪರೆಯಿಂದ ದತ್ತವಾದ ಚಾರಿತ್ರಿಕ ಪ್ರಜ್ಞೆ ಮತ್ತು ಸಂಸ್ಕೃತಿಯ ಸೊಬಗು ಸತ್ವಗಳುಳ್ಳ ಪೂರ್ವಿಕ ಮೆಟಫಿಸಿಕಲ್ ಕವಿಗಳು ತಮ್ಮ ವಿಶಿಷ್ಟ ವ್ಯಕ್ತಿಪ್ರತಿಭೆಯಿಂದ ಪರಂಪರೆಗೆ ನೀಡಿದ ಚಾರಿತ್ರಿಕ ಕೊಡುಗೆಯನ್ನು ಅವನು ವಿವರಿಸಿದ.

ದೇಶೀಯವಲ್ಲದ ಮತ್ತು ಸ್ಥಳೀಯ ಭೂಗೋಳಕ್ಕೆ ಒಗ್ಗದ ಯಾವುದೇ ಸಂಗತಿಗಳ ಗುಣದೋಷಗಳನ್ನು ಗುರುತಿಸುವುದರ ಮೂಲಕವೇ ದೇಶೀಯ ರಚನೆಗಳ ಉಳಿವನ್ನು ಕುರಿತು ತಾರ್ಕಿಕವಾಗಿ ಆಲೋಚಿಸಬೇಕಾಗುತ್ತದೆ. ದೇಶೀಯ ಜ್ಞಾನರಚನೆಗಳು ಇಂದು ಜಾಗತಿಕ ಮಟ್ಟದ ಎರವಲು ಜ್ಞಾನಗಳಿಂದ ನಿರ್ವಸತೀಕರಣಗೊಳ್ಳುತ್ತಿವೆ. ಮಾನವ ತನ್ನ ನಾಗರಿಕತೆಯ ವಿಕಾಸಪಥದಲ್ಲಿ ಏರ್ಪಡಿಸಿಕೊಂಡ ಕೊಡುಕೊಳೆಯ ಆರ್ಥಿಕ ವ್ಯವಹಾರಗಳಾಗಲೀ, ವಲಸೆಗಳಾಗಲೀ, ಊರುಕೇರಿ ನೆಲೆಸುಗೆಗಳಾಗಲೀ ಜೀವವಿಕಾಸದ ಸಹಜ ಸೃಷ್ಟಿಕಾಮದ ಕ್ರಿಯೆಯಂತೆಯೇ ನಿಧಾನಗತಿಯಲ್ಲಿ ತನ್ನ ಬದುಕಿನ ಜೀವಂತಿಕೆಯ ಲಕ್ಷಣಗಳಾಗಿ ಬೆಳೆದವು. ಅಭಿವೃದ್ಧಿ ಮಂತ್ರ ಜಪಿಸುವ ಇಂದಿನ ದಿನಗಳಲ್ಲಿ ತಾಯಿಯ ಗರ್ಭವನ್ನೂ ಬಾಡಿಗೆ ಪಡೆಯುವ ವೇಗದ ಬದಲಾವಣೆಯ ಗತಿಯು ಯಂತ್ರಲೈಂಗಿಕತೆಯ ತಾಕ್ಷಣಿಕ ಪರಿಣಾಮಗಳಿಂದ ಸಮಾದಾನಪಡಿಸಿ ಸೃಷ್ಟಿಕಾಮದ ಸೃಜನಶೀಲ ಅನುಭವಗಳಿಂದಲೂ ವಂಚಿತರನ್ನಾಗಿಸುತ್ತಿದೆ. ಜಾಗತಿಕ ಜ್ಞಾನಗಳು ಸ್ಥಳೀಯ ಭೂಗೋಳದ ಸಮಷ್ಟಿ ಅನುಭವದಿಂದ ವಂಚಿತವಾಗಿ, ಅವು ಪ್ರಕೃತಿಯ ಸಹಜೀವನ ಕ್ರಮದಲ್ಲಿ ಜೀರ್ಣಗೊಳ್ಳುವುದು ಸಾಧ್ಯವಾಗುತ್ತಿಲ್ಲ. ಏಳೆಂಟು ಸಾವಿರ ವರ್ಷಗಳಷ್ಟು ಕಾಲದ ನಡಿಗೆಯ ಇತಿಹಾಸವುಳ್ಳ ನೇಗಿಲನ್ನು ಒಮ್ಮೆಲೇ ಒಂದು ಟೆಲ್ಲರ್ ಯಂತ್ರ, ಜಾವದ ಕೋಳಿ ಕೂಗನ್ನು ಅಥವಾ ಮಿದುಳಿನ ಕಾಲನಿರ್ಣಯ ಶಕ್ತಿಯನ್ನು ಒಂದು ಅಲರಾಂ ಕೋಳಿ ಪಲ್ಲಟಮಾಡುತ್ತದೆಯೆಂದರೆ ಆಧುನಿಕ ಮಾನವನ ಇಂಥ ಯಂತ್ರಾವಲಂಬನ ದಾಸ್ಯವನ್ನು ಏನೆಂದು ಕರೆಯಬೇಕು? ಸಾಮ್ರಾಜ್ಯಶಾಹಿ ಮತ್ತು



ಬಂಡವಾಳಶಾಹಿ ವ್ಯವಸ್ಥೆಯು ಉತ್ಪಾದನಾ ವಲಯಗಳ ಮೇಲೆ ಅಧಿಕಾರ ಸ್ಥಾಪಿಸಿ ಶ್ರಮಜೀವಿಗಳನ್ನು ಅಧೀನದಲ್ಲಿರಿಸಿಕೊಳ್ಳುತ್ತದೆ.

ಯಂತ್ರಗಳ ಬಳಕೆಯು ಮಾನವನ ಶ್ರಮವನ್ನು ಉಳಿಸುವಲ್ಲಿ ನೆರವಾಗುತ್ತವೆಯಾದರೂ ಯಂತ್ರಗಳ ಅತಿಯಾದ ಬಳಕೆ ಮತ್ತು ಅವಲಂಬನೆಯು ಮನುಷ್ಯನ ಬೌದ್ಧಿಕ ಹಾಗೂ ಮಾನಸಿಕ ಶ್ರಮಗಳ ಕುಶಲತೆ ಮತ್ತು ಸೃಜನಶೀಲ ಜ್ಞಾನಗಳನ್ನು ಕಿತ್ತುಕೊಳ್ಳುತ್ತದೆ. ಇದರ ಪರಿಣಾಮ ಮನುಷ್ಯನು ಪ್ರಕೃತಿಯಿಂದ ಕ್ರಮೇಣವಾಗಿ

ದೂರವಾಗುತ್ತಾ ಯಂತ್ರಗಳ ದಾಸನಾಗುತ್ತಾನೆ. ಸಿ.ಇ.ಎಂ.ಜೋಡ್ ಎಂಬ ಆಂಗ್ಲ ಪ್ರಬಂಧಕಾರನು Our Own Civilisation ಎಂಬ ತನ್ನ ಪ್ರಬಂಧದಲ್ಲಿ ಹೇಳುವಂತೆ ಇವತ್ತಿನ ಮನುಷ್ಯನನ್ನು ಬೆಳಗ್ಗೆ ಎಬ್ಬಿಸುವುದರಿಂದ ಹಿಡಿದು ರಾತ್ರಿಯ ನಿದ್ರೆಗೆ ದೂಡುವವರೆಗೆ ಮನುಷ್ಯ ತನ್ನ ಮಿದುಳನ್ನು ಯಂತ್ರದ ದಾಸ್ಯಕ್ಕೆ ಒಪ್ಪಿಸಿರುತ್ತಾನೆ. ಅವನು ಅನುಭವದ ಅರಿವಿಗೆ ಹೊರತಾದ ಯಂತ್ರದ ಮಾಹಿತಿಗಳಿಂದ ನಿರ್ದೇಶಿತನಾಗುತ್ತಾನೆ. ಮಾಹಿತಿ ತಂತ್ರಜ್ಞಾನ ಯುಗದ ಇಂದು ಮಾಹಿತಿಯ ಸಾಫ್ಟ್‌ವೇರ್ ಉಗ್ರಾಣಗಳಾದ ಸೈಬರ್ ಕೆಫೆ, ಗೂಗಲ್ ಇಂಟರ್‌ನೆಟ್, ಕಂಪ್ಯೂಟರ್, ಲ್ಯಾಪ್‌ಟಾಪ್, ಸ್ಮಾರ್ಟ್‌ಫೋನ್, ಸೆಲ್‌ಫೋನ್, ಆಂಡ್ರಾಯ್ಡ್, ಹೈಪ್ಯಾಡ್, ಎಲ್ಸಿಡಿ, ಟೀವಿ ಸೆಟ್, ಮೆಮೋರಿ ಚಿಪ್ಸ್, ಗ್ಯಾಜೆಟ್ ಟ್ಯಾಬ್ಲೆಟ್ ಮುಂತಾದವುಗಳು ಯಾರಿಂದಲೂ ಹಾಳಾಗದಿರಲೆಂದು ಕಣ್ಣೆಚ್ಚರದಲ್ಲಿ ಕಾಯ್ದುಕೊಂಡು ಜೋಪಾನ ಮಾಡುತ್ತಾನೆ. ರೈತನೊಬ್ಬ ಕುಂಟೆ, ಕೂರಿಗೆ, ರಂಟೆ, ನೇಗಿಲು, ಮೀಟುಗೋಲು, ಮಿಣಿ, ಮಕಾಡ ಮುಂತಾದ ವಸ್ತುಗಳನ್ನು ನೆಲದ ಮೇಲೆ, ತಿಪ್ಪೆ ಮೇಲೆ, ಅಟ್ಟದ ಮೇಲೆ, ಬೆಟ್ಟದ ಮೇಲೆ ಹೀಗೆ ಎಲ್ಲೆಂದರಲ್ಲಿ ಇರಿಸುವ ಹಾರ್ಡ್‌ವೇರ್‌ಗಳಂತಲ್ಲ. ಸಾಫ್ಟ್‌ವೇರ್‌ಗಳೆಂದರೇನು ಸಾಮಾನ್ಯವೇ? ಅವು ಎ/ಸಿ ರೂಮುಗಳಲ್ಲಿಯೂ ವೈರಸ್ ತುಂಬಿಕೊಂಡು ಸಾಫ್ಟ್‌ವೇರ್ ಬ್ರೈನ್ ನಾಶವಾಗುತ್ತದೆ. ಅವುಗಳನ್ನು ಯಾರಾದರೂ ಮುಟ್ಟಿ ತಲೆ ಕೆಡಿಸಿಬಿಟ್ಟಾರೆಂಬ ಆತಂಕ ಆಧುನಿಕರನ್ನು ನಿಸೂರಾಗಲು ಬಿಡುವುದಿಲ್ಲ. ಒಂದು ಸಣ್ಣ ಗುಂಡುಸೂಜಿಯಿಂದ ಹಿಡಿದು ರಾಕೆಟ್ ನಿರ್ಮಾಣದವರೆಗೆ ಆಧುನಿಕ ಜ್ಞಾನಗಳು ಬಂಡವಾಳಶಾಹಿಗಳ ಕೈಯಲ್ಲಿ ವಿಕ್ರಯಕ್ಕಿರುವ ಮಾರುಕಟ್ಟೆ ಜ್ಞಾನಗಳಾಗುತ್ತವೆ.

ಆರಂಭಗಾರನು ನೇಗಿಲಿಡಿದು ಮೇಣಿಹಾಲು ಕುಡಿಸಲು, ಜಾನಪದ ಕಲಾವಿದನು ಹಾಡು ಕುಣಿತ ಕಲಿಸಲು, ಅರೆ ತಮಟೆ ನುಡಿಸುವುದನ್ನು ಕಲಿಸಲು, ಮೀನು ಹಿಡಿಯುವ, ಜೇನು ಇಳಿಸುವ, ಈಜಾಟ ಆಡುವ ಮುಂತಾದ ಮಾನವಿಕ ವಿದ್ಯೆಗಳನ್ನು ಕಲಿಸಿಕೊಡಲು ಯಾರೂ ದುಡ್ಡು ಕೊಡಬೇಕಾಗಿಲ್ಲ ಮತ್ತು ಅವು ವಿಕ್ರಯಕ್ಕಿರುವ ಸರಕುಗಳಲ್ಲ. ಅಂತಹ ಜ್ಞಾನಗಳ ಕಲಿಕೆಯ ಹಿಂದೆ ಅನುಭವದ ಅನುಭೂತಿ ಇರುತ್ತದೆ. ಅನುಭವದ ಅನುಭೂತಿಯನ್ನು ನೀಡದ ಜ್ಞಾನಗಳನ್ನು ಮಾರುಕಟ್ಟೆ ಸರಕಾಗಿಸುವುದು ಜಾಗತಿಕ ಸೈಬರಿಕರ ಜಾಯಮಾನ. ಹಣ ಸಂಪಾದನೆಯ ಚಾಣಾಕ್ಷತೆಯನ್ನು ಕಲಿಸುವುದೇ ಶಿಕ್ಷಣವೆಂದು ನಂಬಿರುವ ಇಂತಹ ಜಾಗತಿಕ ಸೈಬರಿಕರು ಸಾವಿರಾರು ಲಕ್ಷ ಸಂಬಳವನ್ನು ಸೆಳೆಯುವ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಜೀತಗಾರರನ್ನು ಉತ್ಪಾದಿಸುವ



ಸಾಫ್ಟ್‌ವೇರ್ ಇಂಜಿನಿಯರಿಂಗ್, ಇನ್‌ಫರೇಷನ್ ಟೆಕ್ನಾಲಜಿ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ಸ್, ಕಂಪ್ಯೂಟರ್ ಸೈನ್ಸ್, ಬಯೋಟೆಕ್ನಾಲಜಿ ಮುಂತಾದ ಹೊಸ ಜ್ಞಾನಗಳನ್ನು ಸೃಷ್ಟಿಸಿ ಶಿಕ್ಷಣ ಕ್ಷೇತ್ರದ ಮಾನವಿಕ ಶಾಖೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಲ್ಲಿ ಕೀಳರಿಮೆ ಸೃಷ್ಟಿಸುತ್ತಿದ್ದಾರೆ. ಉಳ್ಳವರು ಮಾತ್ರ ಹೊಸ ಜ್ಞಾನಗಳ ಶಿಕ್ಷಣ ಪಡೆದುಕೊಂಡರೆ ಇಲ್ಲದವರ ಪಾಲಿಗೆ ಈ ಜ್ಞಾನಗಳು ಎಟುಕಿಸಿಕೊಳ್ಳಲಾರದ ಗಗನ ಕುಸುಮದಂತಾಗುತ್ತವೆ. ಉಳ್ಳವರು ಮತ್ತು ಇಲ್ಲದವರ ನಡುವಿನ ಕಂದರವನ್ನು ಹೆಚ್ಚಿಸುವ ಭೇದನ್ಯಾಯದ ನೆಲೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿಯೇ ತುಂಬಿದರೆ ಅಂತಹ ಶಿಕ್ಷಣವು ಮಾನವೀಕರಣದಿಂದ ಆಚೆಗುಳಿದಿರುತ್ತದೆ. ಆರ್ಥಿಕವಾಗಿ ದುರ್ಬಲರಾದವರು

ಶಿಕ್ಷಣದಿಂದಲೂ ದುರ್ಬಲರಾಗಿ ಸಮಾಜಕ್ಕೆ ಕಂಟಕಿಗಳಾಗಿಯೋ, ಹೊರೆಯಾಗಿಯೋ, ಪರಾಧೀನರಾಗಿಯೋ, ಮೈಮುರಿದು ದುಡಿಯುವ ಮೂಕ ಪಶುಗಳಾಗಿಯೋ ತಮ್ಮ ನಿತ್ಯ ಬದುಕಿನ ಸಂಕಟಗಳಲ್ಲಿ ನರಳಬೇಕಾಗುತ್ತದೆ. ಆದುದರಿಂದ ಎಲ್ಲರಿಗೂ ತಂತಮ್ಮ ಪ್ರತಿಭೆ ಮತ್ತು ಕೌಶಲ್ಯಾನುಸಾರ ಏಕರೂಪದ ಸಮಾನ ಶಿಕ್ಷಣ ಹಾಗೂ ಸಮಾನ ಅವಕಾಶಗಳು ಲಭಿಸುವಂತಾಗಬೇಕು. ಆದರೆ ಯಾವುದೇ ಜ್ಞಾನ ತನ್ನ ಸಾಮಾಜಿಕ ಅನ್ವಯತೆಯಲ್ಲಿ ವ್ಯಕ್ತಿಯ ಆತ್ಮಶ್ರೀ ಮತ್ತು ಸಂಸ್ಕೃತಿಯ ಸೊಬಗನ್ನು ಬೆಳಗಿಸುವಂತಿರಬೇಕು. ಸದ್ಯದ ಪರಿಸ್ಥಿತಿಯಲ್ಲಿ ಸೈಬರಿಕರು ಸೃಷ್ಟಿಸಿರುವ ಹೊಸ ಜ್ಞಾನಗಳಿಂದ ಇದನ್ನು ನಿರೀಕ್ಷಿಸುವುದು ಸಿನಿಕತನ ಅನ್ನಿಸುತ್ತದೆ. ಆರ್ಥಿಕವಾಗಿ ಬಲಿಷ್ಟವಾಗಿರುವ ಸೈಬರಿಕರು ಮತ್ತು ದುರ್ಬಲವಾಗಿರುವ ನಾಗರಿಕರು ಇಬ್ಬರೂ ಜಾಗತೀಕರಣದ ಗಾಯಾಳುಗಳೇ ಆಗಿದ್ದಾರೆ.

ದೇಶೀಯ ನೆಲಮೂಲ ಜ್ಞಾನಗಳು ನಾಶವಾಗದಂತೆ, ಭ್ರಷ್ಟವಾಗದಂತೆ, ದುರ್ಬಲಗೊಳ್ಳದಂತೆ, ಅನಾಧರಣೆಗೆ ಈಡಾಗದಂತೆ ಕಾಪಾಡುವ ಪ್ರತಿರೋಧವೇ ಒಂದು ದೊಡ್ಡ ಚಳವಳಿಯಾಗಿದೆ. ವ್ಯಕ್ತಿಯನ್ನು ಅಪ್ರಜ್ಞಾವಸ್ಥೆಗೆ ದೂಡಿ ತನ್ನ ಜೀವಿತ ಕಾಲದಲ್ಲೇ ಸತ್ತಂತಿರಿಸುವ ವಿಸ್ಮತಿಯ ಅರಿವಳಿಕೆಯೇ ಜಾಗತೀಕರಣ, ಜಾಗತೀಕರಣದ ಅರಿವಳಿಕೆ ನೀಡಿ ನಮ್ಮನ್ನು ಅರೆಪ್ರಜ್ಞಾವಸ್ಥೆಗೆ ಅಥವಾ ಸಂಪೂರ್ಣ ವಿಸ್ಮೃತಿಗೆ ದೂಡಲಾಗುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಭಿವೃದ್ಧಿಯೊಂದಿಗೆ ದೇಶಿ ಆರ್ಥಿಕ ಉತ್ಪಾದನಾಂಗಗಳ ಏಕಸ್ವಾಮ್ಯವನ್ನು ಸಾಧಿಸುವ ಅಧಿಕಾರ ಕೇಂದ್ರಗಳ ಮೂಲಕ ಬಂಡವಾಳಶಾಹಿ ಮಾರುಕಟ್ಟೆ ರಚನೆಗಳನ್ನು ರೂಪಿಸಲಾಯಿತು. ಇಂತಹ ಮಾರುಕಟ್ಟೆ ರಾಜಕಾರಣವು ಸ್ಥಳೀಯ ಭೂಗೋಳದಲ್ಲಿ ಬೇರುಬಿಟ್ಟು ಸಾವಿರಾರು ವರ್ಷಗಳಿಂದ ಬೆಳೆದುಬಂದ ದೇಶಿ ಜೀವನವಿಧಾನ, ಭಾಷೆ, ದೈವ, ಸಾಮಾಜಿಕ ಸಂರಚನೆ, ಆಹಾರ ಸಂಸ್ಕೃತಿ, ಔಷಧ ಜ್ಞಾನ, ಆಹಾರೋತ್ಪಾದನೆ, ಲಿಂಗ ಸಮಾನತಾ ತತ್ವ ಮುಂತಾದ ಎಲ್ಲವನ್ನೂ ತನ್ನ ಉದ್ದೇಶಿತ ಆರ್ಥಿಕ ಗತಿಗೆ ಅನುಗುಣವಾಗಿ ಹೊಂದಿಸಿಕೊಳ್ಳುತ್ತದೆ. ಇದನ್ನು ಜಾಗತಿಕ ಬಂಡವಾಳಶಾಹಿಗಳು ತಮಗಾಗಿಯಲ್ಲದೆ ಲೋಕಹಿತಸಾಧನೆಗಾಗಿ ಎಂದು ಬಿಂಬಿಸಿಕೊಳ್ಳುವ ಔದಾರ್ಯವನ್ನು ತೋರಿಸುತ್ತಾರೆ. ಈ ಔದಾರ್ಯದ ಅಹಂಕಾರದಿಂದ ವಿಜ್ಞಾನಿಗಳು ಶಸ್ತ್ರಾಸ್ತ್ರಗಳನ್ನು ತಯಾರಿಸುವ ಸಾವಿನ ವ್ಯಾಪಾರಿಗಳಾಗುತ್ತಿದ್ದಾರೆ. ಅಧಿಕ ಇಳುವರಿ ಪಡೆಯುವ ಸಲುವಾಗಿ ರಾಸಾಯನಿಕ ರಸಗೊಬ್ಬರಗಳನ್ನು ಮಣ್ಣಿಗೆ ಸೇರಿಸಿ ಹಾಗೂ ಕ್ರಿಮಿಕೀಟಗಳ ಬಾಧೆಯಿಂದ ಬೆಳೆಗಳನ್ನು

ರಕ್ಷಿಸುವ ನೆಪದಲ್ಲಿ ಕೀಟನಾಶಕಗಳನ್ನು ಸಿಂಪಡಿಸಿ ಅನೇಕ ಸೂಕ್ಷ್ಮಜೀವಿಗಳು ಮಣ್ಣಿನಿಂದಲೇ ಮರೆಯಾಗುತ್ತಿವೆ. 'ಸಮುದ್ರ ವಸನೇದೇವಿ ಪರ್ವತಸ್ಥನ ಮಂಡಲೇ ಎಂದು ಸ್ತೋತ್ರಗಳನ್ನು ಕಟ್ಟಿ ಕೀರ್ತಿಸುತ್ತಲೇ ನೆಲತಾಯಿಯ ಅಂಗಾಂಗಗಳಾದ ಬೆಟ್ಟಗುಡ್ಡಗಳನ್ನು ಕತ್ತರಿಸಿ, 'ರತ್ನಗರ್ಭ ವಸುಂಧರಾ' ಎಂದು ಅವಳ ಗರ್ಭವನ್ನು ಬಗೆದುತೆಗೆದು ನಾವು ಕಲ್ಪಿಸಿಕೊಳ್ಳಲೂ ಸಾಧ್ಯವಿರದಷ್ಟು ಭೌತಿಕ ಸುಖಸೌಕರ್ಯದ ಸಲಕರಣೆಗಳನ್ನು ಭೋಗಜೀವನದ ಉಗ್ರಾಣದಲ್ಲಿ ಗುಡ್ಡೆಹಾಕಿಕೊಂಡಿದ್ದೇವೆ. ಕೃತಕ ಸೌಂದರ್ಯದ ಮಾರುಕಟ್ಟೆ ಸಂಕೇತಗಳ ಬೆನ್ನತ್ತಿ ಓಡುತ್ತಾ ನಮ್ಮ ಇಡೀ ಪರಿಸರವನ್ನು ಇದೇ ಸಂಕೇತಗಳಿಂದ ಅಲಂಕರಿಸಿದ್ದೇವೆ. ತೀವ್ರಗತಿಯ ಅಭಿವೃದ್ಧಿಯ ವಿಕೃತಿಗಳು ಮತ್ತು ಕೊಳ್ಳುಬಾಕ ಸಂಸ್ಕೃತಿಯಿಂದಾಗಿ ನಿಸರ್ಗದೊಂದಿಗೆ ಮನುಷ್ಯನ ಹಸ್ತಕ್ಷೇಪ ಅಥವಾ ಕೌಲ್ಯದ ಮೂಲಕ ನಮ್ಮ ಕಣ್ಣೆದುರಿನ ಜೈವಿಕ ಸರಪಳಿ ಕತ್ತರಿಸಿ ತುಂಡಾಗುತ್ತಿದೆ.

ಬಂಡವಾಳಶಾಹಿಯು ಬಳಕೆದಾರರ ದುರ್ಬಲ ಭಾವನೆಗಳನ್ನು ಉದ್ದೀಪಿಸುವ ಜಾಹೀರಾತು ಭಾಷೆಯ ಮೂಲಕ ಆಧುನಿಕತೆಯ ಸಂಕೇತಗಳಾದ ಸರಕುಗಳನ್ನು ಹೊಂದುವ ಹುಚ್ಚು ಹಿಡಿಸಿದೆ. ಬಹುರಾಷ್ಟ್ರೀಯ ಕಂಪನಿಗಳು ತಾವು ತಯಾರಿಸುವ ಕೃತಕ ಸೌಂದರ್ಯಗಳನ್ನು ಬಳಕೆದಾರರು ಮುಗಿಬಿದ್ದು ಕೊಳ್ಳುವ ಚಟವನ್ನು ಜಾಹೀರಾತು ಭಾಷೆಯ ಮೂಲಕ ರೂಢಿಸುತ್ತಿವೆ. ಪುರುಷಪಾರಮ್ಯ ಸಮಾಜದ ಮಾರುಕಟ್ಟೆ ವ್ಯಾಕರಣವು ಮೊಟ್ಟಮೊದಲಿಗೆ ಹೆಣ್ಣಿನ ದೇಹವನ್ನು ಒಂದು ಅಲಂಕಾರ ಮೀಮಾಂಸೆಯನ್ನಾಗಿಯೇ ಪರಿಭಾವಿಸುತ್ತದೆ. ತನ್ನ ಜಾಹೀರಾತು ಭಾಷೆಯಲ್ಲಿ ಹೆಣ್ಣಿನ ನೆತ್ತಿಯ ತಲೆಗೂದಲಿನಿಂದ ಹಿಡಿದು ಪಾದದ ಉಗುರುಗಳವರೆಗೂ ಅವಳ ಪ್ರತಿಯೊಂದು ಅಂಗಾಂಗವನ್ನು ಅಲಂಕಾರ ಅಭಿವ್ಯಕ್ತಿ ಉದ್ದೇಶಗಳಿಗಾಗಿ ಭೇದಿಸಿ ಒಂದೊಂದು ಅಂಗಕ್ಕೂ ಅನ್ವಯಿಸುವ ಕೃತಕ ಸೌಂದರ್ಯ ಸಾಧನಗಳಿಂದ ಅಲಂಕರಿಸಲಾಗುತ್ತದೆ. ತಲೆಗೂದಲು ಉದುರದಂತೆ, ಬೆಳ್ಳಗಾಗದಂತೆ, ಸೊಂಪಾಗಿ ಬೆಳೆಯುವಂತೆ, ಅನಗತ್ಯ ಕೂದಲು ತೆಗೆಯುವಂತೆ, ಮಿರುಗುವ ರೇಷಿಮೆ ನೂಲೆಳೆಗಳು ಹಾರಾಡುವಂತೆ ಕೂದಲನ್ನು ನುಣುಪು ಮಾಡುವ ಬಗೆಬಗೆ ಉತ್ಪನ್ನಗಳು, ತುಟಿಯ ಲಿಪ್‌ಸ್ಟಿಕ್, ಕಣ್ಣಿನ ಕಾಡಿಗೆ, ಹೇರ್ ರಿಮೂವರ್, ಕಂಕುಳದ ಬೆವರು ದುರ್ಗಂಧ ಕಳೆಯುವ ಪರಿಮಳದ್ರವ್ಯ, ಎದೆಕಟ್ಟು ಬಿಗಿದು ನೆಟ್ಟಗೆ ನಿಲ್ಲಿಸುವ ಒಳ ಉಡುಪುಗಳು, ಕಾಂಡೋಮ್, ಕಾಮೋತ್ತೇಜಕಗಳು, ಸ್ಯಾನಿಟರಿ ವಸ್ತುಗಳು, ಉಗುರು ಬಣ್ಣಗಳು, ಮಲ್ಲಿಗೆ ಮೊಗ್ಗುಗಳಂತೆ ಹಲ್ಲುಗಳನ್ನು ಹೊಳೆಯಿಸುವ ಟೂತ್‌ಪೇಸ್ಟ್, ಮ್ಯಾಚಿಂಗ್ ಮ್ಯಾಚಿಂಗ್ ಬಣ್ಣಗುರುಡು ಸೌಂದರ್ಯ ಸಾಧನಗಳು ಹೀಗೆ ನೂರಾರು ಉತ್ಪನ್ನಗಳನ್ನು ಪ್ರೊಮೋಟ್ ಮಾಡುವ ಜಾಹೀರಾತುಗಳಲ್ಲಿ ಹೆಣ್ಣಿನ ದೇಹ ಬಳಕೆಯಾಗುತ್ತಾ ಪುರುಷಕೌರ ವಿಜೃಂಬಿಸುತ್ತಿದೆ. ಇಂತಹ ಉತ್ಪನ್ನಗಳ ಉತ್ಪಾದನೆ ಮತ್ತು ಉಪಯೋಗಗಳನ್ನು ಕುರಿತು ಅಧ್ಯಯನ ಮಾಡುವ ಫ್ಯಾಷನ್ ಟೆಕ್ನಾಲಜಿ, ಬ್ಯೂಟಿಷಿಯನ್ ಕೋರ್ಸುಗಳು ಹಾಗೂ ಖಾಸಗಿ ರಂಗಗಳಲ್ಲಿ ಸ್ವ-ಉದ್ಯೋಗಗಳನ್ನು ಸೃಷ್ಟಿಸುವ ಬ್ಯೂಟಿ ಪಾರ್ಲರ್, ಮಸಾಜ್ ಕ್ಲಿನಿಕ್, ಜಿಮ್ ಸೆಂಟರ್ ಮುಂತಾದ ಮಳಿಗೆಗಳು ಹಾದಿಬೀದಿಗಳಲ್ಲಿ ತಲೆಯೆತ್ತಿ ನಿಂತಿವೆ.

ದೃಶ್ಯ-ಶ್ರವ್ಯ-ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಪ್ರಕಟವಾಗುವ ಜಾಹೀರಾತು ಭಾಷೆಯು ಬಳಕೆದಾರರನ್ನು ಎಷ್ಟೊಂದು ಚೆನ್ನಾಗಿ ನಂಬಿಸುತ್ತದೆಯೆಂದರೆ ಮತ್ತು ಅವರಲ್ಲಿ ಆಧುನಿಕ ಮೌಢ್ಯವನ್ನು ಬಿತ್ತುತ್ತದೆಯೆಂದರೆ ಈ ಆಧುನಿಕ ಸಂಕೇತಗಳು ಮಾತ್ರ ಆತ್ಮರಕ್ಷಕಗಳಾಗಿ ತಮ್ಮ ಶಕ್ತಿಚೈತನ್ಯ, ಆರೋಗ್ಯ, ಸೌಂದರ್ಯ, ನಾಗರಿಕತೆ, ಸಂಸ್ಕೃತಿ ಎಲ್ಲವನ್ನೂ ರಕ್ಷಿಸಬಲ್ಲವೆಂದು ಸಾರ್ವಜನಿಕ ಸ್ವೀಕೃತಿ ಮತ್ತು ಸಾರ್ವಜನಿಕ ಒಪ್ಪಿಗೆಯ ಮುದ್ರೆ ಒತ್ತಿಬಿಡುತ್ತಾರೆ. ಜಾಹೀರಾತು ಭಾಷೆಯಿಂದಲೇ ಆಧುನಿಕ ಮೂಢಮತಿಗಳನ್ನು ಸೃಷ್ಟಿಸುವ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪನ್ನಗಳಿಗೆ ಸಾರ್ವಜನಿಕ ವಿಶ್ವಾಸಭಾವನೆ ಮತ್ತು ಒಪ್ಪಿಗೆಯನ್ನು ಪಡೆದುಕೊಳ್ಳಲು ಕ್ರಿಕೆಟ್ ತಾರೆಯರು, ಸಿನಿಮಾ ತಾರೆಯರು ಮುಂತಾದ ಸೆಲೆಬ್ರಿಟಿಗಳ ಮೂಲಕವೂ ಜಾಹೀರಾತು ಭಾಷೆಯ ಬೀಜಾಕ್ಷರಗಳ ಬಿತ್ತನೆ ಮಾಡಿಸುತ್ತಿವೆ. ಇದಕ್ಕೆ ಜನಪ್ರಿಯ ಉದಾಹರಣೆ ನೀಡುವುದಾದರೆ ಕೋಕ ಕೋಲ ತಂಪು ಪಾನೀಯದ ಜಾಹೀರಾತೊಂದು ಸಿನಿಮಾ ತಾರೆಯರನ್ನು ಬಳಸಿಕೊಂಡು ಹಳ್ಳಿಗಾಡಿನ ರೈತಾಪಿಗಳು ಬೆಳೆದ ಕಬ್ಬಿನ ಹಾಲಿಗಿಂತಲೂ ಎಳನೀರಿಗಿಂತಲೂ ಕೋಕ ಕೋಲವೇ ಮಿಗಿಲಾದುದೆಂದು ನಂಬಿಸುತ್ತದೆ. ಬಿಸಿಲಿನಲ್ಲಿ ಬಳಲಿ ಬಾಯಾರಿದ ಲಲನೆಯರು ಕಬ್ಬು- ಎಳನೀರನ್ನು ನಿರಾಕರಿಸಿ ಗದ್ದೆ ಬದುವಿನಗುಂಟ ಬಾವಿಯ ಬಳಿಗೆ ನೀರು ಕುಡಿಯಲೆಂದು ನಡೆದುಬರುತ್ತಾರೆ. ಕುಡಿಯುವ ನೀರಿನ ಬಾವಿಯೊಳಗಿಂದ ಕೋಲ ಬಾಟಲಿಯನ್ನು ಹಗ್ಗದಿಂದ ಸೇದಿ ಕುಡಿಯಲು ಕೊಡಲಾಗುತ್ತದೆ. ಕೋಲ ಕುಡಿದು ಎಲ್ಲರೂ ಹಾಯಾಗುತ್ತಾರೆ. ಬಾಯಾರಿಕೆ ತಣಿಸಿಕೊಂಡು ಚೈತನ್ಯ ಪಡೆದುಕೊಳ್ಳಲು ಜಾಗತಿಕ ಕೋಕ ಕೋಲವೇ ಉತ್ತಮವೆಂದು ನಂಬಿಸುವ ಈ ಜಾಹೀರಾತು ಸ್ಥಳೀಯ ಭೂಗೋಳದ ಶ್ರಮಸಂಸ್ಕೃತಿಯ ಉತ್ಪನ್ನಗಳನ್ನು ನಿರಾಕರಣೆಗೆ ಗುರಿಮಾಡುತ್ತದೆ. ಇದು ರೈತಾಪಿಗಳ ದೇಶಿ ಆಹಾರ ಸಂಸ್ಕೃತಿಯನ್ನು ಕೀಳನಕ್ಕೆ ತಳ್ಳುತ್ತದೆ. ಬಹುರಾಷ್ಟ್ರೀಯರು ರೂಪಿಸುವ ಇಂತಹ ಜನವಿರೋಧಿ ಮಾರುಕಟ್ಟೆ ರಾಜಕಾರಣದ ವಿರುದ್ಧ ರೈತ ಚಳವಳಿಗಳು ಅಥವಾ ಯಾವುದೇ ಜನಚಳವಳಿಗಳು ಸಿಡಿದೇಳದೆ ಮಗುವಾಗುತ್ತವೆ. ಇದಕ್ಕೆ ಪ್ರಮುಖ ಕಾರಣ ಇಲ್ಲಿ ಬಳಸಲಾಗಿರುವ ಜಾಹೀರಾತು ಭಾಷೆಯು ರೈತಾಪಿಗಳ ಪರಿಭಾಷೆ ಮತ್ತು ಸಂಕೇತಗಳಲ್ಲಿಯೇ ವ್ಯವಹರಿಸುತ್ತದೆ. ಅಂದರೆ ಮಾರುಕಟ್ಟೆ ಭಾಷೆಯನ್ನು ಪ್ರಯೋಗಿಸುವವರು ದುಡಿಯುವ ಜನರ ಎಚ್ಚರ ತಪ್ಪಿಸುವ ಅರಿವಳಿಕೆಯ ಜ್ಞಾನವನ್ನು ತಮ್ಮ ಕೈವಶದಲ್ಲಿರಿಸಿಕೊಂಡಿರುತ್ತಾರೆ. ಪ್ರತಿರೋಧದ ಧ್ವನಿಗಳನ್ನು ದಮನಿಸುವ ಭಾಷೆ ಅವರಿಗಷ್ಟೇ ಗೊತ್ತಿದೆ. ಭಾಷೆಗಳ ಒಳಮರ್ಮವನ್ನು ಯಾರಿಂದಲೂ ಭೇದಿಸಲಾಗಬಾರದೆಂದು ಬಯಸಿದ ಅಲೆಮಾರಿ ಜನಾಂಗಗಳು ಮತ್ತಿತರ ಗುಪ್ತ ಸಮಾಜಗಳು ತಮ್ಮ ಮರುಗು ಭಾಷೆಯೂ ಒಳಗೊಂಡಂತೆ ಸಂಸ್ಕೃತಿಯ ಅನೇಕ ನೆಲೆಗಳನ್ನು ಗುಪ್ತವಿದ್ಯೆಗಳಲ್ಲಿ, ಆಚರಣೆ ಮತ್ತು ಸಂಪ್ರದಾಯಗಳಲ್ಲಿ ಅಡಗಿಸಿಟ್ಟರು. ಚಳವಳಿಗಳಿಗೂ ಇಂಥ ಗುಪ್ತ ವಿದ್ಯೆಗಳು ಸಿದ್ಧಿಸಬೇಕೆಂಬ ಭಾವುಕ ಆಶಯ ತಳೆಯುವುದರಿಂದ ಯಾವ ಪ್ರಯೋಜನವೂ ಇಲ್ಲ. ಯಾಕೆಂದರೆ ಭಯೋತ್ಪಾದಕ ಚಳವಳಿಗಳು

ಮತ್ತು ಪುರೋಹಿತಶಾಹಿ ಚಳವಳಿಗಳು ಇಂಥ ಗುಪ್ತತೆಯಿಂದಾಗಿಯೇ ಸಮಾಜಕ್ಕೆ ಎರವಾಗಿ ಪರಿಣಮಿಸಿವೆ. ಯಾವುದೇ



ಚಳವಳಿ ನಮ್ಮ ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಆಶಯಗಳಿಗೆ ತಕ್ಕಂತೆ ಜನಮುಖಿಯಾದ, ಜೀವಪರವಾದ ಮಾನವೀಯ ಆಶಯಗಳನ್ನೇ ಧಾರಣೆ ಮಾಡಿಕೊಳ್ಳಬೇಕಾಗುತ್ತದೆ.

ಭಾರತದ ರಾಷ್ಟ್ರೀಯತೆಯ ನಿರ್ಮಾಣ ಕಾಲದಲ್ಲಿ ಸ್ವಾಭಿಮಾನ ಸ್ವಾವಲಂಬನೆ ಮತ್ತು ಆತ್ಮಾಭಿಮಾನದ ಸಂಕೇತವಾಗಿದ್ದ ಗಾಂಧೀಜಿಯವರ ಸರಳ ಉಡುಪು ಮತ್ತು ಸರಳ ಆಹಾರ ಸಂಸ್ಕೃತಿಯ ಮೌಲ್ಯಗಳು ಇವತ್ತಿನ ದುಂದುಗಾರಿಕೆ ಮೌಲ್ಯದ ಎದುರು ಅಪಹಾಸ್ಯದ ಸಂಗತಿಗಳಾಗಿ ಕಾಣಿಸುತ್ತಿವೆ. ದುಂದುಗಾರಿಕೆಯ ಅನಿಷ್ಟ ಅಸ್ತ್ರದಿಂದ ಸರಳತೆಯ ಕುತ್ತಿಗೆ ಕತ್ತರಿಸಿ ಸರಕು ಸಂಸ್ಕೃತಿಯ ಚಿನ್ನದ ಕತ್ತಿಯನ್ನು ಬಲು ಮೋಹದಿಂದ ಮುದ್ದಿಸುತ್ತಿದ್ದೇವೆ. ಜಾಗತೀಕರಣವೆಂಬುದು ಚಿನ್ನದ ಕತ್ತಿ ಜಳಪಿಸಿ ಎರಗುತ್ತಿರುವ ಮೋಹ ಮಾಯಾಂಗನೆ. ಈ ಮಾಯೆಯ ಮಾಯಾಜಾಲದಲ್ಲಿ ಸಿಲುಕಿರುವ ನಾವು ಮಾಯಾಜಾಲದ ಆವರಣದಿಂದ ಹೊರಬರುವುದು ಇನ್ನು ಸಾಧ್ಯವಿರದ ಮಾತು. ಆದರೆ ಮಾಯಾಜಾಲವನ್ನು ಭೇದಿಸುವ ಪ್ರತಿಮಾಂತ್ರಿಕ ವಿದ್ಯೆಗಳನ್ನು ಪ್ರಯೋಗಿಸುವ ದಿಕ್ಕಿನಲ್ಲಿ ನಾವು ಆಲೋಚಿಸಬೇಕು. ಸಮಸ್ತ ಜೀವಪರಿಸರಕ್ಕೆ ಎರವಾಗದ ನಮ್ಮ ಸ್ವಾಯತ್ತ ನೆಲೆಗಳಿಂದಲೇ ಪ್ರತಿರೋಧದ ಧಾತುಗಳಿರುವುದನ್ನು ಶೋಧಿಸಿ ಅವುಗಳನ್ನು ಉದ್ದೀಪಿಸಬೇಕು. ಇದರರ್ಥ ಸ್ಥಳೀಯ ಭೂಗೋಳದ ದೇಶಿ ಜ್ಞಾನನೆಲೆಗಳು ಜಾಗತಿಕ ಸಂಸ್ಕೃತಿಯ ಯಜಮಾನಿಕೆಯ ವಿರುದ್ಧ ಯಾವೊತ್ತೂ ಸೆಡ್ಡುಹೊಡೆದು ನಿಲ್ಲುತ್ತವೆಂದಲ್ಲ. ಆದರೆ ದೇಶಿ ಜ್ಞಾನನೆಲೆಗಳಲ್ಲಿ ಅತ್ಯಂತ ಮಹತ್ತರವಾದ ಪ್ರತಿರೋಧದ ಧಾತುಗಳು ಅಂತಸ್ಥಗೊಂಡಿದ್ದು ಅವು ಅನ್ಯ ಸಂಸ್ಕೃತಿಯ ಯಾಜಮಾನ್ಯದ ವಿರುದ್ಧ ಪ್ರತಿರೋಧ ಒಡ್ಡಲು ಹವಣಿಸುತ್ತಿರುತ್ತವೆ. ಗಾಂಧೀಜಿಯವರ ಗ್ರಾಮಸ್ವರಾಜ್ಯ ಚಿಂತನೆಗಳು ಭಾರತದ ಬಹುಮುಖಿ ಸಂಸ್ಕೃತಿ ಮತ್ತು ವಿಶೇಷವಾಗಿ ಪೂರ್ವೀಕರ ದೇಶಿ ಜ್ಞಾನಗಳ ಪ್ರಸ್ತುತತೆಯ ಬಗ್ಗೆ ಗಾಂಧೀಜಿಯವರು ಇರಿಸಿಕೊಂಡಿದ್ದ ಅಪಾರ ನಂಬಿಕೆಯನ್ನು ಕುರಿತು ಒತ್ತಿ ಹೇಳುತ್ತವೆ. ಬುದ್ಧಗುರು, ಮಹಾವೀರ, ಬಸವಣ್ಣ ಮತ್ತಿತರ ದಾರ್ಶನಿಕರ ದೃಷ್ಟಿಯಲ್ಲಿ ಸಕಲ ಜೀವರಾಶಿಗಳಿಗೆ ಎರವಾಗದಂತೆ ಮನುಷ್ಯ ಬದುಕುವುದು ಮುಖ್ಯವಾಗಿತ್ತು. ಜಲಮೂಲಗಳು, ಬೆಟ್ಟಗುಡ್ಡಗಳು, ಕಾಡುಕಣಿವೆಗಳು, ಜೀವಜಾಲಗಳು ಕರಗುತ್ತಿರುವಾಗ ಇವರು ನೆನಪಾಗುತ್ತಾರೆ. ಮಳೆಗಾಲದಲ್ಲಿ ಭೂಮಿ ತಾಯಿಯು ಹೊಸಜೀವಿಗಳಿಗೆ ಜನ್ಮ ನೀಡುತ್ತಾಳಾದ್ದರಿಂದ ಭಿಕ್ಕುಗಳ ಪಾದಾಕ್ರಾಂತದಿಂದ ಆ ಜೀವಿಗಳು ಸಾಯಬಾರದೆಂದು ಯಾರೇ ಭಿಕ್ಷುಗಳು ಅನಗತ್ಯವಾಗಿ ಪ್ರಕೃತಿಯ ಮಧ್ಯದಲ್ಲಿ ತಿರುಗಾಡಬಾರದೆಂದು ಬುದ್ಧಗುರು ತನ್ನ ಭಿಕ್ಕುಗಳಿಗೆ ತಿಳಿವಳಿಕೆ ನೀಡಿದ್ದ, ಬುದ್ಧಗುರುವಿನಂತೆಯೇ ಮಹಾವೀರನು ತನ್ನ ಅನುಯಾಯಿಗಳು ತಮ್ಮ ಪಾದಗಳಿಗೆ ಅಳಲೆ

(ಹತ್ತಿ) ಕಟ್ಟಿಕೊಂಡು ಓಡಾಡುವಂತೆ ಕಟ್ಟಳೆ ವಿದಿಸಿದ್ದ. ಇದೊಂದು ಜೀವಪರ ಚಳವಳಿ, ಚಳವಳಿ ಎಂಬುದು ಸದಾ ಎಚ್ಚರದಲ್ಲಿರುವ ಸಂಕೇತ. ನಿದ್ದೆಯಲ್ಲಿಯೂ ಇಬ್ಬನಿ ಹನಿ ಬೀಳುವ ಸದ್ದಿಗೆ ಕಣ್ಣು ತೆರೆಯುವ, ಇರುವೆಯ ಕಾಲು ಮುರಿದ ಶಬ್ದವನ್ನು ಕೇಳಿಸಿಕೊಳ್ಳುವ ಎಚ್ಚರವೇ ಚಳವಳಿ. ಪಂಚೇಂದ್ರಿಯಗಳನ್ನು ಎಚ್ಚರದಲ್ಲಿರಿಸಿಕೊಳ್ಳುವುದು ಚಳವಳಿಯ ಜೀವಂತಿಕೆಯ ಮುಖ್ಯ ಲಕ್ಷಣ. ಜಾಗತೀಕರಣದ ಪ್ರಭಾವದಿಂದ ದಿಕ್ಕೆಟ್ಟ ಆಧುನಿಕ ಜಗತ್ತಿಗೆ ಇಂತಹ



ದಾರ್ಶನಿಕರು ದಿಕ್ಕು ತೋರಿಸುವ ಕೈಮರಗಳಾಗಿದ್ದಾರೆ. ಚಳವಳಿಗಳಾಗಿ ಸ್ಫೋಟಿಸಿದ ದಾರ್ಶನಿಕರನ್ನು ಕೇವಲ ಪ್ರತಿಮೆಗಳನ್ನಾಗಿಯೋ ಭಾವಚಿತ್ರಗಳನ್ನಾಗಿಯೋ ಕಡೆದು ನಿಲ್ಲಿಸಿ ಭಜಿಸುವ ಭಕ್ತಮಂಡಲಿಯಿಂದ ಯಾವುದೇ ಲಾಭವಿಲ್ಲ. ಅಂತಹ ಭಕ್ತಶಿರೋಮಣಿಗಳಿಂದ ದಾರ್ಶನಿಕರ ಆದರ್ಶಗಳು ಸಾಂಸ್ಥಿಕರಣಗೊಂಡು ನಿಂತ ಜಾಗದಲ್ಲೇ ನಿಂತುಬಿಡುವ ಅಪಾಯವಿದೆ. ದಾರ್ಶನಿಕರ ಆದರ್ಶಗಳ ಭಾವಬಿಂಬಗಳನ್ನು ಸಮಾಜದಲ್ಲಿ ಕಾಣುವಂತಾಗಬೇಕು. ಹಿಂದಿನ ದಾರ್ಶನಿಕರ ತತ್ವಗಳನ್ನು ವರ್ತಮಾನದ ಹೊಸ ಸವಾಲುಗಳಿಗೆ ಮುಖಾಮುಖಿಯಾಗಿಸುವ ನಿಟ್ಟಿನಲ್ಲಿ ಮರುವ್ಯಾಖ್ಯಾನಿಸುವ ಮತ್ತು ಮರುರೂಪಿಸುವ ಪ್ರಯತ್ನಗಳನ್ನು ನಡೆಸಬೇಕು. ಮನುಷ್ಯ ಮತ್ತು ನಿಸರ್ಗವನ್ನು ಕುರಿತ ಅವರ ಚಿಂತನೆಗಳಲ್ಲಿ ಅಧ್ಯಾತ್ಮಿಕ ಸ್ಪರ್ಶವಿತ್ತು. ಸಕಲ ಜೀವಿಗಳಿಗೂ ಲೇಸನ್ನು ಬಯಸುವ ಬಸವಣ್ಣನ ಅಧ್ಯಾತ್ಮಿಕ ಎಚ್ಚರ ನಮ್ಮ ಬೆನ್ನಿಗಿದೆ ಎಂಬುದನ್ನು ನಾವು ಮರೆಯಬಾರದು. ನಿಸರ್ಗದ ಕೊಡುಗೆಗಳಾದ ನೀರು, ಗಾಳಿ, ಮಣ್ಣು, ಮರಗಿಡ ಎಲ್ಲವೂ ಭೂಮಿ ಮೇಲೆ ಜೀವಿಸುವ ಪ್ರತಿಯೊಂದು ಜೀವಿಯ ಹಕ್ಕು, ಇವು ಈಗ ಉಳ್ಳವರ ಸ್ವತ್ತಾಗಿವೆ. ನಿಸರ್ಗದಿಂದ ಎಲ್ಲವನ್ನೂ ಪಡೆದುಕೊಳ್ಳುವ ನಾವು ನಿಸರ್ಗ ಸ್ನೇಹಿಗಳಾಗಿ ಬದುಕದ ಹೊರತು ನಿಸರ್ಗದ ಕೊಡುಗೆಗಳನ್ನು ಅನುಭೋಗಿಸುವ ನೈತಿಕ ಹಕ್ಕು ನಮಗಿಲ್ಲ ಎಂಬ ವಿವೇಕ ನಮಗೆಲ್ಲರಿಗೂ ಪಾಠವಾಗಬೇಕು.

**ಮ್ಯಾಡಳ್ಳಿ ಗಿಡ್ಡೆಗೌಡ**

**ಡಾ. ಬಾಲಗುರುಮೂರ್ತಿ**

ನನ್ನ ಅಪ್ಪ ನನ್ನ ತಾತ ಈಬೂತಪ್ಪನ ಜೊತೆ ರೈತಂಗು ಮಾಡಿದ. ರೈತಂಗು ಅಂದರೆ ಮಾವನ ಮನೆಯಲ್ಲಿ ಮದುವೆಯಾಗುವ ಮೊದಲು ಮಾವನಿಗೆ ಸೇವೆ ಮಾಡಿ ಸೈ ಎನಿಸಿಕೊಳ್ಳುವ ಕಾಲ. ಅವನು ತರುವ ಭಿಕ್ಷೆ, ಬೇಟೆ-ಅವನಿಗಿರುವ ಕಲಾ ಪತಿಭೆ ಜೊತೆಗೆ ಮದುವೆಯಾಗುವ ಹುಡುಗಿ ಸಂಪೂರ್ಣವಾಗಿ ಅವನನ್ನು ಅರ್ಥ ಮಾಡಿಕೊಳ್ಳುವ ಕಾಲ. ಇದರಲ್ಲಿ ಯಶಸ್ವಿಯಾದರೆ ಹೆಣ್ಣಿನ ತಂದೆಗೆ-ತಾಯಿಗೆ ವಧುದಕ್ಷಿಣೆ ಕೊಟ್ಟು, ಹೆಂಡ ಕೊಟ್ಟು ಮಾವನನ್ನು ಸಂಪ್ರೀತಿಗೊಳಿಸಿದರೆ ಹೆಣ್ಣು ಕೊಡುವುದು ಆಮ್ಯಾಲಿನ ವಿಷಯ. ಈ ರೈತಂಗು ಕಾಲದಲ್ಲಿ ನನ್ನ ತಂದೆ

ಎರಡು ಮೂರು ಬಾರಿ ಅಜ್ಜನ ಸಂಗ ಬಿಟ್ಟು ಮೇಡಹಳ್ಳಿಗೆ ಪಲಾಯನ ಮಾಡಿದ್ದರೂ ನನ್ನ ಅಮ್ಮನ ಮೇಲಿನ ಮೋಹದಿಂದ ಮತ್ತೆ ರೈತಂಗು ಮುಗಿಸಿದ್ದ ಅಪ್ಪ. ಹೊಸೂರು ಬೆಟ್ಟದ ತಪ್ಪಲಲ್ಲಿ ನನ್ನ ಅಪ್ಪ-ಅಮ್ಮನಿಗೆ ಮದುವೆಯಾಯಿತು. ಮದುವೆಯಾದ ಮಾರನೇ ದಿನವೆ ನನ್ನ ಅಮ್ಮ ಮೇಡಹಳ್ಳಿಯತ್ತ ನಡೆದಳಂತೆ. ಇತ್ತ ಮದುವೆಯಾದ ಮ್ಯಾಲೆ ನನ್ನ ತಾತ ಈಬೂತಪ್ಪನಿಗೆ ಉಳಿದಿದ್ದು ಕೊನೆ ಮಗಳು ಚಿಕ್ಕವೆಂಕಟಮ್ಮ, ಈಬೂತಪ್ಪನ ಮೂರೂ ಹೆಣ್ಣುಮಕ್ಕಳಲ್ಲಿ ಕೊನೆಯವಳು ಅಂದರೆ ನನ್ನ ಚಿಕ್ಕಮ್ಮ ಬುರಕಥಾ ಕಲಾವಂತೆ ಜೊತೆಗೆ ತತ್ವಪದಗಳನ್ನು ಹಾಡುವುದರಲ್ಲಿ ಎತ್ತಿದ ಕೈ.

ಆಲದೇನಹಳ್ಳಿಯಲ್ಲಿಯೇ ನೆಲೆ ನಿಂತ ಈಭೂತಪ್ಪನ ಈ ಕೊನೆಯ ಮಗಳನ್ನು ಕೇಳಲು ಪಾನಿಗಂಟಿ ಚೊಕ್ಕ ತನ್ನ ಮಗ ಗೋಪಾಳನ ಜೊತೆ ಬಂದ. ಈ ಗೋಪಾಳ ಮಹಾನ್ ಕೇಳಿಕೆ ಕಲಾವಿದ. ಹಿಂದಕ್ಕೆ ತಲೆಗೂದಲು ಬಾಚಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಬೃಹನ್ನಳೆ ನೃತ್ಯ ಮಾಡುತ್ತಿದ್ದ. ಅದಾಗಲೇ ಎರಡು ಹೆಂಡ್ತಿಯರನ್ನು ಮದುವೆಯಾಗಿ ಇಡದಲು ಮಾಡಿಕೊಂಡಿದ್ದ ಗೋಪಾಳ ನನ್ನ ಚಿಕ್ಕಮ್ಮನನ್ನು ಪ್ರೇಮದ ಬಲೆಗೆ ಹಾಕಿಕೊಂಡ. ಅವಳು ಬುರಕಥೆ ಹಾಡಲು ಹೋಗುವ ಊರಿಗೆ ಇವನೂ ಹಿಂಬಾಲಿಸುತ್ತಿದ್ದ. ಅವಳು ಊರೆಲ್ಲಾ ತಿರುಗಿ ಹಿಂದಿರುಗುವಾಗ ಊರಾಚೆಯ ಕಾಲುದಾರಿಯಲ್ಲಿ ಅವಳನ್ನು ಮಾತನಾಡಿಸಲು ಯತ್ನಿಸಿದ. ಏಕೋ ಏನೋ ಪ್ರತಿಭಾವಂತೆ ಬುರಕಥಾ ಕಲಾವಿದೆ ಈ ಗೋಪಾಳನ ಮೂರನೆ ಹೆಂಡ್ತಿಯಾಗಲು ಒಪ್ಪಿಕೊಂಡುಬಿಟ್ಟಳು. ಆದರೆ ಇದೇ ಗೋಪಾಳ ಆಕೆಯನ್ನು ಮುಂದೆ ವಿಕೃತವಾಗಿ ಹಿಂಸಿಸುವುದು ದುರಂತವಾದದ್ದು. ತಂಗಡಿ ಗಿಡದ ಮುಂದೆ ಕುಳ್ಳಿರಿಸಿ ಊರ ದಿನ್ನೆಯಲ್ಲಿ ಅರಿಶಿಣ ದಾರ ಕಟ್ಟಿಕೊಂಡು ಗೋಪಾಳಯ್ಯನಿಗೂ ಚಿಕ್ಕಮ್ಮನಿಗೂ ಮದುವೆ ಆಗಿಹೋಯಿತು. ಇದ್ದ ಮೂರು ಮಕ್ಕಳು ಮದುವೆಯಾಗಿ ಹೋದಮ್ಯಾಲೆ ಒಂಟಿಯಾಗಿರಲು ಸಾಧ್ಯವಾಗದ ಕಾರಣ



ಅಜ್ಜಿ ಈಬೂತಿ ನಾರಕ್ಕಯಿಈಬೂತಯ್ಯ ತಾವು ಮೇಡಹಳ್ಳಿಗೆ ಹೋಗಿ ಅಲ್ಲಿಯೇ ಇರುವ ಕುಲದ ಬಳಗ ಸೇರಿಕೊಂಡಿರಲು ತೀರ್ಮಾನಿಸಿಕೊಂಡರು.

ಹೀಗೆ ಆಲದೇನಹಳ್ಳಿ ಬಿಟ್ಟು ಮೇಡಹಳ್ಳಿಗೆ ಬಂದು ತಿಮ್ಮರಾಯಗೌಡರ ದನದ ಕೊಟ್ಟಿಗೆಯ ಹಿಂದಿನ ವಪ್ಪಾರದಲ್ಲಿ ನೆಲೆಯೂರಿದ ತಾತ ಈಬೂತಯ್ಯ, ಅದೇ ಊರಿನ ದಕ್ಷಿಣಕ್ಕೆ ಗಿಡ್ಡೆಗೌಡನ ಕಣದ ಬಯಲಲ್ಲಿ ನಡುಪಯ್ಯನ ಬಳಗ ನೆಲೆಯೂರಿತ್ತು. ವರ್ಷಗಳು ಸಾಗಿಹೋದವು.

ಮೇಡಳ್ಳಿ ಎಲ್ಲ ಹಳ್ಳಿಗಳಂತಲ್ಲಾ. ವಿಶಿಷ್ಟವಾದ ಹಳ್ಳಿ ಸುತ್ತಲೂ ಮೂರು ಕೆರೆಗಳನ್ನು ಎದೆಗೊತ್ತುಕೊಂಡ ಮುತ್ತೈದೆ. ನೈಋತ್ಯಕ್ಕೆ ತಿಂಡ್ಲು ಕಾಡು, ಉತ್ತರಕ್ಕೆ ಚಿಗೌಡರ ಹೆಬ್ಬಂಡೆ ಬಯಲು ಅದರ ಬೆನ್ನಿಂದ ದೊಡ್ಡಕೆರೆ. (ಹೆಸರೆ ಹಾಗಿದೆ) ಅದರ ಕೆಳಗೆ ಕಾನೆ ಬಯಲು, ಕಾನೆ ಬಯಲ ಕೆಳಗೆ ಮೇಡಹಳ್ಳಿ, ಎಡ ಮಗ್ಗುಲಿಗೆ ಮಾದನಕೆರೆ, ದಕ್ಷಿಣ ಭಾರತದ ಭೂಪಟದಂತೆ ಹರಡಿಕೊಂಡಿದೆ. ಮಾದನಕೆರೆ ತುಂಬಿ ತುಳುಕಿದರೆ ಮೈಲುದ್ದದ ಗದ್ದೆ ಬಯಲನ್ನು ನೋಡಲು ನೂರು ಕಣ್ಣು ಬೇಕು. ಮಾದನಕೆರೆ ಹೆಗಲಿಗೆ ಒದಿನಿ ಕೆರೆ. ಈ ಪುಟ್ಟ ಕೆರೆಗೆ ಒದಿನಿ ಕೆರೆ ಅಂತ ಹೆಸರಿಟ್ಟವರಾರು ಗೊತ್ತಿಲ್ಲ. ಈ ಕೆರೆಗಳ ದಂಡೆಯಲ್ಲೇ ಮೇಡಹಳ್ಳಿ, ಊರಲ್ಲಿದ್ದ ಏಳೆಂಟು ದೊಡ್ಡ ಮನೆಗಳು ಇನ್ನೂ ಬೇರೆ ಬೇರೆ ಆಗದೆ ಕೂಡು ಕುಟುಂಬಗಳಾಗಿ ನಿಂತಿವೆ. ಚಿಗೌಡರು, ತಿಮ್ಮರಾಯಗೌಡ, ನಂಜುಂಡಗೌಡ, ಸ್ವಾಮೇಗೌಡ ಊರೊಳಗೆ ಹರಡಿಕೊಂಡಿದ್ದರೆ ಊರಿನ ದಕ್ಷಿಣಕ್ಕೆ ಸಂಪೂರ್ಣವಾಗಿ ಗಿಡೇಗೌಡನ ಹೊಲ-ಮನೆ ಬಯಲು. ಊರ ಮಧ್ಯೆ ಗಿಡ್ಡೆಗೌಡನ ಬಯಲನ್ನು ಮತ್ತು ಊರ ಉಳಿದವರನ್ನು ವಿಭಜಿಸುವುದು ಒಂದು ಓಣಿ ರಸ್ತೆ. ಊರೊಳಗಿನ ಯಾವ ಗೌಡರನ್ನೂ ಸೇರದೆ ಕೇವಲ ಗಿಡ್ಡೆಗೌಡನ ಕಣದ ಬಯಲ ಸುತ್ತ ಗೂಡು ಕಟ್ಟಿಕೊಂಡಿತ್ತು. ಊರೊಳಗಿನ ನೈಋತ್ಯ ಮೂಲೆ ಹೊಲಗೇರಿ, ನಾಲೆ ದು ಮನೆಗಳು ಮಾತ್ರ ನಲ್ಲಪ್ಪ, ಮಿಂಚಾಮಿ, ಯಂಕಟರೊಣಪ್ಪ, ಗುಂಜೂರಯ್ಯ ಈ ಮನೆಗಳು ಊರಗೌಡರೊಟ್ಟಿಗೆ ಆರಂಭ (ವ್ಯವಸಾಯ) ಮಾಡಿಕೊಂಡಿತ್ತು. ಆದರೆ ಊರೆಂಬೊ ಊರೊಳಗಿದ್ದರೂ ಈ ಜಂಗಾಲು ಬಳಗ ಊರೂರು ಸುತ್ತುತ್ತಲೇ ಇತ್ತು. ಗಂಡಸರು ಕೆಲವೊಮ್ಮೆ ಹೆಂಗಸು-ಮಕ್ಕಳನ್ನು ಬಿಟ್ಟು ದೂರ ದೂರದ ಹಳ್ಳಿಗೆ ಹೊರಟುಬಿಡುತ್ತಿದ್ದರು. ಮೂರು ನಾಲ್ಕು ತಿಂಗಳಿಗೆ ಜೋಳಿಗೆ ದವಸದೊಂದಿಗೆ ವಾಪಸ್ಸು ಬರುತ್ತಿದ್ದರೂ ಇದನ್ನು ಶಂಡ, ಶನ್ನ ಅಂತ ಕರೆಯುತ್ತಾರೆ.

ಶಂಡದಿಂದ ವಾಪಸ್ಸು ಬಂದ ಗಂಡಸರು ಶಂಡದಲ್ಲಿ ಬೇಡಿಕೊಂಡು ಬಂದ ದವಸವನ್ನು ಮಾರಿ ಹೆಂಡ್ತಿ-ಮಕ್ಕಳಿಗೂ ಹೆಂಡ ಕುಡಿಸಿ ರಾತ್ರಿಯೆಲ್ಲಾ ಹಾಡುತ್ತಿದ್ದರು. ಇವರು ರಾತ್ರಿ ಕುಡಿದ ಮತ್ತಿನಲ್ಲಿ ಹಾಡುತ್ತಿದ್ದರೆ ನಾಯಿಗಳು ಗೊಳ್ಳೆಕ್ಕುತ್ತಿದ್ದವು. ಕೆಲವೊಮ್ಮೆ ಊರ ಜನ ಬಂದು ಒದೆಯುತ್ತಿದ್ದರು. ಒದೆ ಬಿದ್ದ ಕೂಡಲೆ ಹಾಡಿನ ಸದ್ದು ನಿಂತು ಹೋಗುತ್ತಿತ್ತು.

ಒಮ್ಮೆ ನನ್ನ ತಾತ ದ್ಯಾವರಿಂಟಿ ನಡುಪಯ್ಯ ಶಂಡ ಹೋದ. ಮಾಮೂಲಿ ಶಂಡಕ್ಕೆ ಹೋದ ಕಡೆ ಟೆಂಟು ಹಾಕಿಕೊಳ್ಳುವುದು ಇಲ್ಲವಾದಲ್ಲಿ ಹಳೆ ದೇವಸ್ಥಾನ-



ಚಾವಡಿ-ಪಾಳು ಮಂಟಪಗಳನ್ನು ಹುಡುಕಿಕೊಳ್ಳುವುದು ಸಾಮಾನ್ಯ ಸಂಗತಿ. ತಾತ ಚಿಂತಾಮಣಿ ಸೀಮೆಗೆ ಹೊರಟವನು ಚೊಕ್ಕಹಳ್ಳಿ ಮೂಲೆಯ ಪಾಳು ಮಂಟಪದಲ್ಲಿ ಚಿಕ್ಕ ಹೆಂಡ್ತಿ ಮಾರಕ್ಕನೊಂದಿಗೆ ಬೀಡುಬಿಟ್ಟ. ಎರಡು ಮೂರು ದಿನ ಚೊಕ್ಕಹಳ್ಳಿ ಸುತ್ತಲ ಊರ ತಿರುಗಿ ನಾಲ್ಕು ಸೇರು ಹಸಿಟ್ಟು-ನುಚ್ಚು ಗಂಟು ಕಟ್ಟಿಕೊಂಡು ಚೊಕ್ಕಹಳ್ಳಿ ಬಿಡಬೇಕೆಂದವನಿಗೆ ತೊಡೆ ಸಂದಿಯಲ್ಲಿ ಕುರು ಎದ್ದಿದೆ. ಮುಂದಲ ಪ್ರಯಾಣ ನಿಲ್ಲಿಸಿದ ತಾತ ನೋವಿನಿಂದ ತತ್ತರಿಸಿದ. ಬಯಲ ಸುತ್ತಿ ಸೊಪ್ಪುರಸ ಹಚ್ಚಿಕೊಂಡರೂ ಕಡಿಮೆಯಾಗದ ಕುರ ರಾಗಿ ಮುದ್ದೆಯಷ್ಟು ಗಾತ್ರವಾಗಿ

ತಾತ ಬಾಯಿ ಬಾಯಿ ಬಡಿದುಕೊಂಡ. ಒಂದು ಹೆಜ್ಜೆ ಇಡಲಾಗುತ್ತಿಲ್ಲ. ಕೊನೆಗೆ ಚಿಕ್ಕ ಹೆಂಡ್ತಿ ಮಾರಕ್ಕನನ್ನು ತಬ್ಬಿ ತಾನು ಬದುಕುವುದಿಲ್ಲಾ ಎಂದು ಹೇಳಿದ. ಮಾರಕ್ಕ ಊರೊಳಗೆ ಹೋಗಿ ಬೇಡಿ ತಾತನಿಗೆ ತುತ್ತು ತಿನಿಸಿ-ಒಡೆದು ಹೋದ ಅರ್ಧ ಮಡಿಕೆಯಲ್ಲಿ ನೀರು ಕಾಯಿಸಿ ಬಟ್ಟೆಯನ್ನು ಅದ್ದಿ ಅದ್ದಿ ಅವನ ಮೈ ತೊಳೆಯುತ್ತಿದ್ದಳು.

ಸಂಜೆ ಎರಡು ಮೈಲು ನಡೆದು ತಕಾರಿಯೊಳಗ ಹೆಂಡ ತಂದು ಕುಡಿಸುತ್ತಿದ್ದಳು. ಕುರ ಹೊಡೆಯಲಿಲ್ಲಾ. ತಾತ ಗಂತೆಯೊಳಗೆ ಹೇತುಕೊಳ್ಳುತ್ತಿದ್ದ. ಮಾರಕ್ಕೆ ಅವನ ಹೇಲನ್ನು ಬಾಚುತ್ತಿದ್ದಳು. ಗಂತೆಯನ್ನು ಪಕ್ಕದ ಕುಂಟೆಯಲ್ಲಿ ತೊಳೆಯುತ್ತಿದ್ದಳು. ಕುರಕ್ಕೆ ರಸ ಹಚ್ಚುತ್ತಿದ್ದಳು. ಬೇಡಿ ತಂದು ಹಿಟ್ಟು ತಿನಿಸುತ್ತಿದ್ದಳು. ಆದರೂ ನಡುಪಯ್ಯ ಆಕೆ ಬರುವುದು ತಡವಾದರೆ 'ಯಾವ ಮಂಕಾಡನತ್ರ ಮಲಗಿದ್ದೆ ನನ್ನ ಸೂಳೆ' ಎಂದು ಅಬ್ಬರಿಸುತ್ತಿದ್ದ, ನೋವಿಗೆ ಕಣ್ಣೀರಿಡುತ್ತಿದ್ದ. ಅವನೆಷ್ಟೆ ಬೈಯ್ದರೂ ಸಿಟ್ಟು ಮಾಡಿಕೊಳ್ಳದ ಮಾರಕ್ಕೆ ಅವನ ತಲೆಯ ಹೇನನ್ನೂ ಹೆಕ್ಕುತ್ತಿದ್ದಳು. ಅವನ ಪುಟಗೋಸಿ ಬದಲಾಯಿಸುತ್ತಿದ್ದಳು. ತಡೆಯಲಾರದ ಕುರದ ನೋವಿನಿಂದ ಸಾಯುವುದು ಖಚಿತವೆಂದು ತಿಳಿದ ನಡುಪಯ್ಯ ಹೆಂಡತಿಗೆ ಮೇಡಳ್ಳಿಗೆ ಸುದ್ದಿ ಮುಟ್ಟಿಸಿ ತನ್ನ ಬಳಗವನ್ನು ಕರೆತರಲು ಮಾರಕ್ಕನನ್ನೇ ಕಳುಹಿಸಿದ.

ಹಸಿ ಬೆಳಿಗ್ಗೆ ಕಾಲುದಾರಿಗಳಲ್ಲೇ ಹೊರಟ ಮಾರಕ್ಕ ಗೊಟ್ಟಿಪುರದತ್ತಿರ ಬಂದಾಗ ಗೊಟ್ಟಿಪುರದ ಕೆರೆ ದಂಡೆಯಲ್ಲಿ ಹಗಲು ವೇಷ ಕಟ್ಟಿಕೊಳ್ಳುತ್ತಿದ್ದ ರಾತಗುದ್ದನ ತಂಡ ಕಾಣಿಸಿತು. ರಾತಗುದ್ದ ಜಂಗಮನಂತೆ ಕಾವಿ ಬಟ್ಟೆ ಹಾಕಿಕೊಂಡು ವಿಭೂತಿ ಹಚ್ಚಿಕೊಂಡು ಗೊಟ್ಟಿಪುರದ ಏರಿ ಮೇಲೆ ಸೂರ್ಯನಿಗೆ ಕೈ ಮುಗಿಯುತ್ತಿದ್ದ. ಅಲ್ಲಿಗೆ ಬಂದ ಮಾರಕ್ಕ ಕಣ್ಣೀರಿಟ್ಟಳು. ನಡುಪಯ್ಯನ ವಿಚಿತ್ರ ಹುಣ್ಣಿಗೆ ಮರುಗಿದ ರಾತಗುದ್ದೋಡು ಮರುದಿನ ಮೇಡಹಳ್ಳಿಯ ನಡುಪಯ್ಯನ ಬಳಗಕ್ಕೆ ಸುದ್ದಿ ಮುಟ್ಟಿಸುವುದಾಗಿ ಭರವಸೆ ಕೊಟ್ಟು ಮಾರಕ್ಕನನ್ನು ಚೊಕ್ಕಹಳ್ಳಿಗೆ ವಾಪಸ್ಸು ಕಳುಹಿಸಿದ. ಮೇಡಹಳ್ಳಿಗೆ ಮುಟ್ಟಿದಾಗ ಊರಿಗೆ ಊರೆ ಮಲಗಿತ್ತು. ರಾತಗುದ್ದ ಶಿಲ್ಲಿಂಗಿ ಕರಿಗುರಪ್ಪನ ಗೂಡ್ಲ ಹತ್ತಿರ ಬಂದು ತಮ್ಮುಡಾ ಗುರ ಎಂದು ಕೂಗಿದಾಗ ಕರಿಗುರಪ್ಪ ಏನು ರಾತಗುದ್ದನ್ನ ಏನಾಯ್ತು ಎಂದಾಗ ಮಾರಕ್ಕ ಹೇಳಿದ ಎಲ್ಲಾ ವಿವರಗಳನ್ನೂ ಮುಟ್ಟಿಸಿದ ರಾತಗುಡ್ಡ, ಕಗ್ಗತ್ತಲ ರಾತ್ರಿ ಕಳೆದ ನಂತರ ಮುಂಜಾನೆ ಹೊರಡುವಂತೆ ಹೆಂಡ್ತಿ ಪಟಾಮಕ್ಕೆ ಹೇಳಿದರೂ ಕೇಳದೆ ತನ್ನ ಜೋಳಿಗೆ- ಬೆತ್ತಗಂತೆ ಹೆಗಲಿಗೇರಿಸಿಕೊಂಡು ಹೊರಟೇಬಿಟ್ಟ ನಡುಪಯ್ಯನ ಚಿಕ್ಕ ತಮ್ಮ ಕರಿಗುಡ್ಡ,



ಬೆಳಿಗ್ಗೆ ಸುದ್ದಿ ತಿಳಿದ ನಡುಪಯ್ಯನ ಬಳಗ ಚೊಕ್ಕಹಳ್ಳಿ ಕಡೆ ಹೊರಟಿತು. ಈಬೂತಿ ಎಂಕಟಮ್ಮ-ನಾರಕ್ಕ ಸಹ ಚೊಕ್ಕಹಳ್ಳಿಯತ್ತ ನಡೆದರು. ಚೊಕ್ಕಹಳ್ಳಿ ದಿನ್ನೆ ಪಾಳುಮಂಟಪ ಮುಟ್ಟಿದಾಗ ರಾತ್ರಿಯಾಗಿತ್ತು. ಕರಾಳ ಕತ್ತಲಲ್ಲಿ ಎಣ್ಣೆ ದೀಪ ಉರಿಯುತ್ತಿತ್ತು. ದೀಪದ ಬೆಳಕಿನಲ್ಲಿ ನಡುಪಯ್ಯ ಮಲಗಿದ್ದ. ಎಲ್ಲರೂ ಬಿಕ್ಕಿ ಬಿಕ್ಕಿ ಅತ್ತರೂ, ಮಾತನಾಡಿಸಿದರೂ ನಡುಪಯ್ಯ ಹಾಗೆ ನಿಶ್ಚೇಷ್ಟವಾಗಿ ನೋಡುತ್ತಲಿದ್ದ. ಸ್ವಲ್ಪ ಹೊತ್ತಿನಲ್ಲೇ ಊರೊಳಗೆ ಹೋಗಿದ್ದ

ಮಾರಕ್ಕೆ ಜೋಳಿಗೆ ತುಂಬಾ ಮುದ್ದೆ ಚೂರು ತಕಾರಿ ಸಾರೊತ್ತು ಬಂದಳು. ಮಬ್ಬು ಬೆಳಕಿನಲ್ಲಿಯೇ ಹಿಟ್ಟುಂಡವರು ಹಾಳು ಮಂಟಪದ ಮೂಲೆಗಳಲ್ಲಿ ಕುಳಿತರು.

ದ್ಯಾವರಿಂಟಿ ತಿರುಬಾತಮು ನಡುಪಯ್ಯನ ಮರಣ ಶಯ್ಯೆಯ ವಿಷಯ ತಿಳಿದ ಎರಡು ಮೂರು ಕೇಳಿಕೆ ತಂಡಗಳು ಚೊಕ್ಕಹಳ್ಳಿಗೆ ಬಂದವು. ನಡುಪಯ್ಯನ ತೊಡೆ ಸಂದಿನ ಕುರ ಒಡೆದು ಕೀವು ರಕ್ತ ಸುರಿದು ಇಡೀ ಪಾಳು ಮಂಟಪದೊಳಗೆ ದುರ್ವಾಸನೆ ತುಂಬಿಕೊಂಡು ಎಲ್ಲರೂ ಮಂಟಪದಾಚೆ ಮರಗಳ ಕೆಳಗೆ ಟೆಂಟು ಹಾಕಿಕೊಂಡರು. ಮಾರಕ್ಕೆ ನಡುಪಯ್ಯನ ತೊಡೆ ಸಂದಿ ಆಗಾಗ್ಗೆ ತೊಳೆಯುತ್ತಾ ಅವನ ಪುಟಗೋಸಿ ಬದಲಾಯಿಸುತ್ತಿದ್ದಳು.

ಸಂಜೆಯಾಗುತ್ತಿದ್ದಂತೆ ತಮ್ಮ ಕರಿಗುರಪ್ಪ ಅಣ್ಣನಿಗೆ ಹೆಂಡ ತರುತ್ತಿದ್ದರೆ ತಾತ ಈಬೂತಪ್ಪ ಮತ್ತು ನಡುಪಯ್ಯನ ಮಕ್ಕಳು ಪಾಳು ಬಾವಿಗಳಿಂದ ಆಮೆಗಳನ್ನು, ಪೊದೆಗಳಿಂದ ಮುಂಗುಸಿ-ಅಳಿಲುಗಳನ್ನು ಚೀಲಗಳಲ್ಲಿ ತುಂಬಿಸಿಕೊಂಡು ಬರುತ್ತಿದ್ದರು. ನಡಪಯ್ಯನ-ಸೊಸೆಗಳು ಬಯಲಲ್ಲಿ ಕಾರ ಅರೆದರೆ ಸಾರು ತಯಾರಿಸುವುದು ಮಾಮೂಲಿ ಗಂಡಸರ ಮೆಚ್ಚಿನ ಖಯಾಲಿಯಾಗಿತ್ತು.

ಮೂವತ್ತು-ನಲವತ್ತು ಮಂದಿ ಬಯಲಲ್ಲೇ ಕುಡಿದು-ಹಿಟ್ಟುಂಡು ನಂತರ ಹಾಡುತ್ತಿದ್ದರು. ತಲಕಾಯಲಕೊಂಡದ ಕರಿಭಂಟೋಡು ಹಳ್ಳಿ ರಾಣಿ ಕೇಳಿಕೆ ಹಾಡಿ ತಾತನನ್ನು ಕೇಳಿಕೆ ಪದಗಳಲ್ಲಿ ಹೊಗಳುತ್ತಿದ್ದ. ತೇಲುಗಣ್ಣು ಬಿಟ್ಟ ತಾತ ನಡುಪಯ್ಯ ಕೊನೆ ಕ್ಷಣಗಳನ್ನು ಎಣಿಸುತ್ತಿದ್ದ. ಕೇಳಿಕೆ ಕರಿಭಂಟೋಡು ಹಳೆ ಸೀರೆ ಕಟ್ಟಿಕೊಂಡು ಹಳ್ಳಿ ರಾಣಿ ನೃತ್ಯ ಮಾಡುತ್ತಿದ್ದಂತೆ ಮಾರಕ್ಕ 'ಅಬ್ಬಾ ಕರಿಗುಪ್ಪ, ಆಗೋಯ್ತು' ಎಂದಾಗ

ಬಯಲ ಕೇಳಿಕೆ ನಿಂತೋಯಿತು.

'ಕತ್ತಲ ಕಾನೆಯೊಳಗೆ ಈಶ್ವರನು ರಾಘವ ಕಾಣದಂಗೆ ತೇಲಿಹೋದನೇ... ರಾಘವ ನಾರಕ್ಕೆ ಬುರಕತೆಯ ಮಟ್ಟಿನಲ್ಲಿ ಹಾಡುತ್ತಿದ್ದರೆ, ನಡುಪಯ್ಯನ ಚಿಕ್ಕ ತಮ್ಮ ಕರಿಗುಪ್ಪ ಅಣ್ಣನ ಮೇಲೆ ಬಿದ್ದು ರೋಧಿಸುತ್ತಿದ್ದ. ಬೆಳಿಗ್ಗೆ ಸೂರ್ಯನ ಬಿಸಿಲು ಮಿನುಗುತ್ತಿದ್ದಂತೆ ಹೆಣ ಹೂಳಲು ಪ್ರಶಸ್ತವಾದ ಮರಳು ಕಾಲುವೆಯನ್ನು ಹುಡುಕಿ ಬಂದವರು ಹೂಳುವ ಸ್ಥಳದ ಬಗ್ಗೆ ತಿಳಿಸುವಾಗ 'ಊರ ಜನ ಮಣ್ಣ ಮಾಡೋದಕ್ಕೆ ಬಿಡಲ್ಲಾ ಅವರ ಕಾಣದಂಗ ಕಾರ್ಯ ಮುಗಸಾಣು' ಎಂದ ಈಬೂತಪ್ಪ. ಎಲ್ಲರೂ ಅಲ್ಲಿ ಹೂಳಾಣು- ಇಲ್ಲಿ ಹೂಳಾಣು ಎಂದು ಮಾತನಾಡುವಾಗ ಕರಿಗುರುವ ಅಣ್ಣನ ಹೆಣವನ್ನು ಮೇಡಹಳ್ಳಿಗೆ ಕೊಂಡೊಯ್ಯುವುದಾಗಿ ಹೇಳಿದಾಗ ಎಲ್ಲರೂ ಚಕಿತರಾದರು.' ನಮ್ಮ ವಂಸದ ದ್ಯಾವು



ನನ್ನ ಅಣ್ಣ-ನಾ ಹೋಗಿ ಗಿಡ್ಡೆಗೌಡನ ಕಾಲಿಡ್ಕೊಂಡು ಬಂಡೀ ತತ್ತೀನಿ. ಆಮ್ಯಾಕ ಅಣ್ಣನ ಸಮಾಧಿ ಮ್ಯಾಡನಾಗೆ ಆಗ್ಲಿ. ಕರಿಗುರಪ್ಪನ ಮಾತಿಗೆ ನನ್ನ ದೊಡ್ಡಪ್ಪನೂ ಒಪ್ಪಿದ ಮ್ಯಾಲೆ ಎಲ್ಲರೂ ಸುಮ್ಮನಾದರು.

ಅದೇ ಸಂಜೆಗೆ ಮೇಡಹಳ್ಳಿಗೆ ಬಂದ ಕರಿಗುರುವ ತನ್ನ ಧಣಿ ಗಿಡೇಗೌಡನ ಬಳಿ ಅಲವತ್ತುಗೊಂಡು ಎತ್ತುಗಾಡಿ ಕೇಳಿದಾಗ ಗಿಡೇಗೌಡ ಇಲ್ಲ ಎನ್ನಲಿಲ್ಲ. ಅದರ ಜೊತೆಗೆ ತಾನು ಪಂಚೆ ಕಟ್ಟಿಕೊಂಡು ಬಂಡಿ ಹತ್ತಿದ.

ಜಂಗಾಲರ ಕುಲದೊಳಗೆ ಯಾರು ಕೇಳದ ನೋಡದ ಘಟನೆ ನಡೆದೇ ಹೋಯಿತು. ಮೊದಲ ಬಾರಿಗೆ ನನ್ನ ಅಲೆಮಾರಿ ತಾತನ ಶವವನ್ನು ಬಂಡಿಯಲ್ಲಿಟ್ಟುಕೊಂಡು ಮೆರವಣಿಗೆಯಂತೆ ಬರುತ್ತಿದ್ದರೆ ನಡುಪಯ್ಯನ ಬಳಗ ಹಿಂದೆ ಜೋಳಿಗೆ ಹೆಗಲೇರಿಸಿಕೊಂಡು ಹಾಡಿಕೊಂಡು ಬರುತ್ತಿತ್ತು.

ಬೇರಾವಹಳ್ಳಿಯ ಯಾವುದೇ ಸ್ಮಶಾನದಲ್ಲಿ ಹೆಣ ಹೂಳಲು ಅವಕಾಶವಿಲ್ಲದ ಅಲೆಮಾರಿ ಕುಲಕ್ಕೆ ಗಿಡೇಗೌಡನ ಮುಂದಾಳತ್ವದಲ್ಲಿ ಸಮಾಧಿಗೆ ಅವಕಾಶವೂ ಸಿಕ್ಕಿಹೋಯಿತು. ಇಡೀ ಊರಿಗೆ ಊರೇ ಹೊಲಗದ್ದೆಗಳಲ್ಲಿ ತುಂಬಿಕೊಂಡಿದ್ದರೆ ಜಂಗಾಲ ಬಳಗ ಮತ್ತು ಗಿಡೇಗೌಡ ದ್ಯಾವರಿಂಟಿ ನಡುಪಯ್ಯನನ್ನು ಮಣ್ಣಿನ ತೊಟ್ಟಲಿಗೆ ಬೀಳ್ಕೊಟ್ಟಿತು. 'ಲೇ ಇಷ್ಟೇ ಗಿಟ್ಟೇಗೌಡ್ರು ಜಂಗಾಲೋನಾಗುಟ್ಟವೆ' ಎಂದೂ ಊರು ಮೂದಲಿಸುವುದು ಸಾಮಾನ್ಯ ಸಂಗತಿಯಾಗಿತ್ತು. ಅಲೆಮಾರಿಗಳ ಕಣ್ಣಲ್ಲಿ ಗಿಡ್ಡೆಗೌಡ 'ಕಾಪು ತಂಡಿ, ಒಕ್ಕಲ ತಾಯಿ'ಯಾಗಿದ್ದ. ಆದರೂ ಗಿಡ್ಡೆಗೌಡನ ಈ ಆಸಕ್ತಿಗೆ ಬೇರೆ ಬೇರೆ ಕತೆಗಳು ಹುಟ್ಟಿಕೊಂಡಿದ್ದವು.

[ಅಗ್ನಿ-ವಾರಪತ್ರಿಕೆ]

**ತುಮಕೂರು ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ**

**-ಡಾ. ಓ. ನಾಗರಾಜು**

ಕರ್ನಾಟಕದ ಪೂರ್ವ ಭಾಗದ ಮೈದಾನ ಪ್ರದೇಶದಲ್ಲಿ ಗುರುತಿಸಿಕೊಂಡಿರುವ ಹಲವು ಜಿಲ್ಲೆಗಳಲ್ಲಿ ಒಂದಾದ ತುಮಕೂರು, ರಾಜ್ಯದ ಆಗ್ನೆಯ ಭಾಗದಲ್ಲಿದೆ. ಇದು ರಾಜಧಾನಿ ಬೆಂಗಳೂರಿನಿಂದ ೪೪ ಮೈಲಿ

ಅಂತರದಲ್ಲಿದೆ. ತುಮಕೂರು ಜಿಲ್ಲೆಯು ಕರ್ನಾಟಕದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ದಾಖಲಿಸಬಹುದಾದ ಚರಿತ್ರೆಯನ್ನು ಹೊಂದಿದೆ. ಕಲ್ಪತರುವಿನ ಬೀಡಾಗಿದೆ. ಸಂಸ್ಕೃತಿಯ ತವರೂರಾಗಿದೆ. ಜಿಲ್ಲೆಯ ಕೆಲವು ತಾಲ್ಲೂಕುಗಳ ರೈತರಿಗೆ ಹೇಮಾವತಿ ಜನ ಸಂಜೀವಿನಿಯಾಗಿದೆ.

ಜಿಲ್ಲೆಯ ಹೆಸರಾದ ತುಮಕೂರು' ಎಂಬ ಪದವು ಸುಂದರವೂ, ವಿಶಿಷ್ಟವೂ ಅರ್ಥಪೂರ್ಣವೂ ಆಗಿದೆ. ಕ್ರಿ.ಶ.೧೦ನೇ ಶತಮಾನದ ಶಾಸನವೊಂದರಲ್ಲಿ 'ತುಮ್ಮೆಗೂರು' (ತುಂಬೆವೂರು) ಎಂದು ಉಲ್ಲೇಖಗೊಂಡಿದೆ. ತುಂಬೆ ಹೂವಿನ ಗಿಡಗಳ ಆಗರವಾಗಿದ್ದ ಪ್ರದೇಶಕ್ಕೆ ಈ ಹೆಸರು ಬಂದಿರುವ ಸಾಧ್ಯತೆಯಿದೆ. ಅಲ್ಲದೆ ಇಂದಿನ ಕೈದಾಳ ಗ್ರಾಮವು ಹಿಂದೆ 'ಕ್ರೀಡಾಪುರ' ಎಂಬ ಹೆಸರನ್ನು ಪಡೆದಿತ್ತು. ಗೂಳೂರು ಮತ್ತು ಕ್ರೀಡಾಪುರ ಗ್ರಾಮಗಳನ್ನು ಕೇಂದ್ರವಾಗಿಟ್ಟುಕೊಂಡು ಗೂಳೂರು ಸಂಸ್ಥಾನದ ಪಾಳೆಯಗಾರರು ಆಳ್ವಿಕೆ ನಡೆಸುತ್ತಿದ್ದರು. ಆಗ ತುಮಕೂರು ನಗರವಾಗುವ ಮೊದಲು ಈ ಸ್ಥಳದಲ್ಲಿ ಟುಮುಕಿ(ತಮಟೆ) ಬಾರಿಸುವ ಒಂದು ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿತ್ತು. ಅವರು ಪಾಳೆಗಾರರ ಆಳ್ವಿಕೆಯಲ್ಲಿ ತಮಟೆ ಬಾರಿಸುವ ಕಾಯಕದಲ್ಲಿ ತೊಡಗಿ ಶತ್ರುಗಳ ಆಗಮನದ ಸೂಚನೆ ನೀಡುತ್ತಿದ್ದರು. ದೇಶ ಸಂರಕ್ಷಣೆಯ ನಿಟ್ಟಿನಲ್ಲಿ ತಮಟೆ ಬಾರಿಸುವವರ ಶ್ರಮ ಮುಖ್ಯವಾಗಿತ್ತೆಂದು ಕಾಣುತ್ತದೆ. ಹೀಗಾಗಿ ಈ ಗ್ರಾಮವು ಇವರಿಗೆ ಉಡುಗೊರೆಯಾಗಿ ನೀಡಲಾಗಿ ಟುಮುಕಿ ಬಾರಿಸುವವರ ವಾಸಸ್ಥಳವು ಟುಮುವೂರು, ತುಮಕೂರು ಆಗಿ ಪರಿವರ್ತನೆಗೊಂಡಿತು. ಪರಂಗಿಯವರ ಭಾಷೆಯಲ್ಲಿ ಟುಂಕೂರು ಆಗಿ ಜನಬಳಕೆಯಲ್ಲಿ ತುಂಕೂರು ಆಗಿದೆ. ಅನೇಕ ವಿದ್ವಾಂಸರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಹತ್ತು ತಾಲ್ಲೂಕುಗಳನ್ನು ಒಳಗೊಂಡ ತುಮಕೂರು ಜಿಲ್ಲೆಯು ಉತ್ತರ ದಕ್ಷಿಣವಾಗಿ ೧೦೨ ಮೈಲಿಗಳಷ್ಟು ಉದ್ದವಾಗಿಯೂ, ಪೂರ್ವ ಪಶ್ಚಿಮವಾಗಿ ೬೭ ಮೈಲಿಗಳಷ್ಟು ವಿಸ್ತಾರತೆಯನ್ನು ೧೦೬೪೭೫೫ ಹೆಕ್ಟೇರಿನ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ೨೦೦೧ನೇ ಜನಗಣತಿಯ ಪ್ರಕಾರ ೨೫,೮೯,೫೧೬ ಜನಸಂಖ್ಯೆ ಹೊಂದಿದ್ದು, ಮಹಿಳೆಯರು ೧೨,೬೭,೫೭೫ ಮತ್ತು ಪುರುಷರು ೧೩,೧೧,೯೪೧ ಸಂಖ್ಯೆಯಲ್ಲಿದ್ದಾರೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಜಿಲ್ಲೆಯ ಜನಸಂಖ್ಯೆಯ ಪ್ರಮಾಣ ಶೇ.೪.೮೯ರಷ್ಟು ಇರುವುದು ಕಂಡುಬರುತ್ತದೆ.



ತುಮಕೂರು ಜಿಲ್ಲೆಯ ಉತ್ತರಕ್ಕೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಿದೆ. ತೆಲುಗು ಭಾಷೆಯ ಪ್ರಭಾವಕ್ಕೆ ಸಿಲುಕಿರುವ ಪಾವಗಡ, ಮಧುಗಿರಿ ತಾಲ್ಲೂಕುಗಳು ಆಂಧ್ರದ ಗಡಿಯನ್ನು ಸಂಧಿಸುತ್ತವೆ. ಪೂರ್ವಕ್ಕೆ ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ಎಲ್ಲೆಯಾಗಿದ್ದು, ದೊಡ್ಡಬಳ್ಳಾಪುರ ನೆಲಮಂಗಲ ತಾಲ್ಲೂಕುಗಳ ಗಡಿಯಲ್ಲಿ ಕೊರಟಗೆರೆ, ತುಮಕೂರು ತಾಲ್ಲೂಕುಗಳನ್ನು ಸಂಧಿಸುತ್ತವೆ. ಈಶಾನ್ಯ ಭಾಗದಲ್ಲೂ ಈ ಜಿಲ್ಲೆಯು

ಆಂಧ್ರದ ಅನಂತಪುರ ಜಿಲ್ಲೆಯನ್ನು ಕೂಡಿಕೊಳ್ಳುತ್ತದೆ. ಪಶ್ಚಿಮಕ್ಕೆ ಚಿಕ್ಕಮಗಳೂರು ಜಿಲ್ಲೆ, ಹಾಸನ ಜಿಲ್ಲೆಗಳು ಕಂಡು ಬರುತ್ತವೆ. ವಾಯುವ್ಯಕ್ಕೆ ಚಿತ್ರದುರ್ಗ ಜಿಲ್ಲೆಯಿದೆ. ದಕ್ಷಿಣ ಭಾಗದಲ್ಲಿ ಮಂಡ್ಯ ಜಿಲ್ಲೆಯಿದ್ದು ಅದರ ನಾಗಮಂಗಲ ತಾಲ್ಲೂಕನ್ನು ಜಿಲ್ಲೆಯ ಕುಣಿಗಲ್ ತಾಲ್ಲೂಕು ಸಂಧಿಸುತ್ತದೆ. ಮಧುಗಿರಿ, ಶಿರಾ ಮೂಲಕ ಹಾದುಹೋಗುವ ರಸ್ತೆಗಳು ಆಂಧ್ರದ ಮಡಕಶಿರಾದಾಚೆಯ ಪಾವಗಡಕ್ಕೆ ತೆಲುಗು ಭಾಷೆಯು ಹೆಚ್ಚು ಬಳಕೆಯಾಗುತ್ತಿದ್ದು, ಭಾಷಾವಾರು ಪ್ರಾಂತ್ಯ ವಿಂಗಡಣೆಯ ಸಂದರ್ಭದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಮತ್ತು ಮಡಕಶಿರಾ ತಾಲ್ಲೂಕು, ಆಂಧ್ರ ಮತ್ತು ಕರ್ನಾಟಕ ರಾಜ್ಯಗಳ ಅವಕೃಪೆಗೆ ಒಳಗಾಗಿ ಅಲ್ಲಿರುವ ಜನರು ಮತ್ತು ಭಾಷೆ ಆಡಳಿತಾತ್ಮಕ ಸಮಸ್ಯೆ ಎದುರಿಸುತ್ತಿರುವುದು ಕಂಡು ಬರುತ್ತದೆ.

ತುಮಕೂರು ಜಿಲ್ಲೆಯು ಹತ್ತು ತಾಲ್ಲೂಕುಗಳನ್ನು ಒಳಗೊಂಡಂತೆ ತುಮಕೂರು ಗ್ರಾಮಾಂತರ, ಹುಲಿಯೂರುದುರ್ಗ, ಬೆಳ್ಳಾವಿ, ಕಳ್ಳಂಬೆಳ್ಳ ಕ್ಷೇತ್ರಗಳು ಸೇರಿ ಒಟ್ಟು ಹದಿನಾಲ್ಕು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ತುಮಕೂರು ಲೋಕಸಭಾ ಕ್ಷೇತ್ರವಾಗಿದ್ದು ಜಿಲ್ಲೆಯ ಕೊರಟಗೆರೆ, ಮಧುಗಿರಿ ತಾಲ್ಲೂಕುಗಳು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಕ್ಕೂ, ಶಿರಾ, ಪಾವಡ ತಾಲ್ಲೂಕುಗಳು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತವೆ.

ಪ್ರಾಗೈತಿಹಾಸಕ್ಕೆ ಸಂಬಂಧಿಸಿದಂತೆ ಜಿಲ್ಲೆಯು ಮಹತ್ವದ್ದಾಗಿದೆ. ಆದಿಹಳೆಯ ಶಿಲಾಯುಗಕ್ಕೆ ಸೇರಿದವುಗಳೆಂದು ಹೇಳಲಾಗುತ್ತಿರುವ ಶಿಲಾಯುಧಗಳಾದ ಕೊಡಲಿ, ಮಚ್ಚು, ಕತ್ತಿ, ಸೀಳುಕತ್ತಿ ಮತ್ತು ಚೌಕಾಕಾರದ ಉಪಕರಣಗಳು ತಿಪಟೂರು ತಾಲ್ಲೂಕಿನ ಕಿಬ್ಬನಹಳ್ಳಿ, ಬಿಳಿಗೆರೆ ಸನಿಹದಲ್ಲಿ ದೊರೆತಿವೆ.

### ಚಾರಿತ್ರಿಕ

ಕರ್ನಾಟಕದ ಇತಿಹಾಸದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿರುವ ತುಮಕೂರು ಜಿಲ್ಲೆಯ ವಿವಿಧೆಡೆಯಲ್ಲಿ ಅನೇಕ ಪಾಳೆಯಗಾರರು, ಸಾಮಂತರು ಸಮರ್ಥ ಆಳ್ವಿಕೆ ಮಾಡಿರುವುದಕ್ಕೆ ಸಮೃದ್ಧ ಮಾಹಿತಿ ಲಭ್ಯವಿದೆ. ಜಿಲ್ಲೆಯಲ್ಲಿ ಮೊದಲು ಆಳ್ವಿಕೆ ನಡೆಸಿದರೆಂದು ಹೆಗ್ಗಳಿಕೆಗೆ ಪಾತ್ರರಾದ ತಲಕಾಡಿನ ಗಂಗರಿಂದ ಹಿಡಿದು ರಾಷ್ಟ್ರಕೂಟರು, ನೊಳಂಬರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು, ಮೊಘಲರು, ಮರಾಠರು, ಬ್ರಿಟೀಷರು ಆಡಳಿತ ನಡೆಸಿರುವುದಾಗಿ ತಿಳಿದು ಬರುತ್ತದೆ.



ಅವರು ನಿರ್ಮಿಸಿರುವ ಕೋಟೆ ಕೊತ್ತಲು, ದೇವಾಲಯ, ಕೆರೆ, ಕಟ್ಟೆ, ಕುಂಟೆಗಳು ಇಂದಿಗೂ ಸಾಕ್ಷಿಯಾಗಿವೆ.

ಜಿಲ್ಲೆಯಲ್ಲಿ ಆಳ್ವಿಕೆಗೆ ಒಳಪಟ್ಟ ಪ್ರಮುಖ ಸಂಸ್ಥಾನಗಳೆಂದರೆ ಪಾವಗಡ, ಗುಬ್ಬಿ ಹೊಸಹಳ್ಳಿ, ಹೊಳವನಹಳ್ಳಿ, ಹಾಗಲವಾಡಿ, ನಿಡಗಲ್ಲು ಮತ್ತು ಬಿಜ್ಜವರ ಮಹಾನಾಡು ಅಧಿಕಾರದ ಕೇಂದ್ರಸ್ಥಳಗಳಾಗಿದ್ದವು. ಈ ಪ್ರದೇಶಗಳಲ್ಲದೆ, ಮಧುಗಿರಿ, ಮಿಡಿಗೇಶಿ, ಸುವರ್ಣಗಿರಿ, ದೇವರಾಯನದುರ್ಗ, ಚನ್ನರಾಯನದುರ್ಗ, ಹುಲಿಯೂರುದುರ್ಗ, ಶಿರಾ, ಚಿಕ್ಕನಾಯಕನಹಳ್ಳಿ ಮುಂತಾದ ಕಡೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕೋಟೆ ಕೊತ್ತಲಗಳು, ಮೂಕ ಸಾಕ್ಷಿಯಾಗಿ ಆಳಿ ಹೋದ ರಾಜರ ಕತೆಗಳನ್ನು ಹೇಳುತ್ತಲಿವೆ. ಜಿಲ್ಲೆಯ ಈಶಾನ್ಯ ಭಾಗದಲ್ಲಿ ಕಂಡುಬರುವ ಪಾವಗಡವು ತಾಲ್ಲೂಕು ಕೇಂದ್ರವಾಗಿದೆ. ಬಳ್ಳಾರಿಯಿಂದ ಚಿತ್ರದುರ್ಗವು ಜಿಲ್ಲೆಯಾಗಿ ಮಾರ್ಪಟ್ಟಾಗ ತುಮಕೂರು ಜಿಲ್ಲೆಯ ವ್ಯಾಪ್ತಿಗೆ ತಾಲ್ಲೂಕು ಕೇಂದ್ರವಾಗಿ ಪರಿವರ್ತನೆ ಹೊಂದಿತು. ಹಿಂದೆ ಇದೇ ಪಾವಗಡವು ವಿಜಯನಗರದ ಅರಸರ ಕೃಪಾಕಟಾಕ್ಷಕ್ಕೆ ಒಳಗಾಗಿ ಅವರ ಸೇವಾನಿರತರಾಗಿದ್ದ ಬಲ್ಲಪ್ಪನಾಯಕರ ಪಾವಗಡ ಕೋಟೆಯು ಶಿಥಿಲವಾಗದೆ ಈಗಲೂ ಶೋಭಿಸುತ್ತಿದೆ. ಗುಬ್ಬಿಗೆ ಅನತಿ ದೂರದಲ್ಲಿರುವ ಗುಬ್ಬಿಹೊಸಹಳ್ಳಿಯಲ್ಲಿ ಕಾಳಚಿಕ್ಕಪ್ಪಗೌಡರು ಪಾಳೆಯ ನಿರ್ಮಿಸಿ ಆಳಿರುವುದಾಗಿ ತಿಳಿದು ಬರುತ್ತದೆ. ಇದೇ ಸಂಸ್ಥಾನವನ್ನು ಆಳುತ್ತಿದ್ದ ಹೊನ್ನಪ್ಪಗೌಡನು ಇಂದಿನ ಪಟ್ಟಣವನ್ನು ಸ್ಥಾಪನೆ ಮಾಡಿದನೆಂದು ಸ್ಥಳೀಯ

ಇತಿಹಾಸದಿಂದ ತಿಳಿದುಬರುವುದು.

ಹೊಳವನಹಳ್ಳಿಯು ಕೊರಟಗೆರೆ ತಾಲ್ಲೂಕಿನ ಒಂದು ಹೋಬಳಿ ಕೇಂದ್ರವಾಗಿದೆ. ಹಿಂದೆ ಇದೊಂದು ಪಾಳೇಗಾರರ ಸಂಸ್ಥಾನವಾಗಿತ್ತು. ಇದನ್ನು ಹೊಳವೇಗೌಡನೆಂಬ ಪಾಳೆಗಾರ ಆಳುತ್ತಿದ್ದನು. ಕೊರಮಪುರ ಎಂದು ಕರೆಯಲ್ಪಡುತ್ತಿದ್ದ ಈ ಊರನ್ನು ಹೊಳವನಹಳ್ಳಿ ಎಂದು ಮರುನಾಮಕರಣ ಮಾಡಿದನು. ಹೊಳವೇಗೌಡನ ನಂತರ ಅಧಿಕಾರಕ್ಕೆ ಬಂದ ರಣಭೈರೇಗೌಡನು ಹೊಳವನಹಳ್ಳಿಯಿಂದ ರಾಜಧಾನಿಯನ್ನು ಕೊರಟಗೆರೆಗೆ ಸ್ಥಳಾಂತರಿಸಿದನು. ಈಗಲೂ ಆತನಿಂದ ನಿರ್ಮಾಣವಾದ ಕೋಟೆ, ಗಂಗಾಧರೇಶ್ವರ ಗುಡಿ ಕಾಣಸಿಗುವವು. ಇದೇ ತಾಲ್ಲೂಕಿನಲ್ಲಿಯೇ ಸುವರ್ಣಗಿರಿ ಎಂಬ ಬೆಟ್ಟವಿದೆ. ಇಂದು ಸಿದ್ದರಬೆಟ್ಟ ಎಂದು ಹೆಸರಾಗಿ ಔಷಧ ಗಿಡಮೂಲಿಕೆಗಳ ಆಗರವಾಗಿದೆ. ಹಿಂದೆ ಈ ಗಿರಿಯಲ್ಲಿ ಕೋಟೆ, ರಾಜ್ಯ ಕಟ್ಟಿ ಕುರಂಗರಾಯನೆಂಬ ರಾಜನು ಆಳುತ್ತಿದ್ದನು. ಇವನು ಮಾದಿಗ ಜಾತಿಗೆ ಸೇರಿದವನಾಗಿದ್ದು ತನ್ನ ಆಡಳಿತಾವಧಿಯಲ್ಲಿ ಚರ್ಮನಾಣ್ಯ ಚಲಾವಣೆಗೆ ತಂದಿದ್ದನೆಂದು ಪ್ರತೀತಿಯಿದೆ. ಯೋಗಿಸಿದ್ದೇಶ್ವರನು ಈತನ ಸಮಕಾಲೀನರೆಂದು ಈತನ ಗುರುಗಳೆಂದು ಕೇಳಿಬರುವುದಲ್ಲದೆ, ಕುರಂಗರಾಯನು ಸ್ವತಃ ಯೋಗಿಯಾಗಿದ್ದನು. ಆಧ್ಯಾತ್ಮ ಚಿಂತಕನಾಗಿ ರಸ ಸಿದ್ಧನೂ ಆಗಿ ಸುವರ್ಣಗಿಡಮೂಲಿಕೆಯಿಂದ ಚಿನ್ನ ತಯಾರಿಸುವ ವಿದ್ಯೆಯನ್ನು ಬಲ್ಲವನಾಗಿದ್ದನು. ಇಂದಿಗೂ ಈತನ ಹೆಸರಿನ 'ಕುರಂಕೋಟೆ' ಎಂಬ ಗ್ರಾಮವಿದೆ.

ಈತನ ಉಪಪತ್ನಿ ನೆಲೆಸಿದ್ದ 'ಹೊಲತಾಳು' ಎಂಬ ಗ್ರಾಮವಿದೆ. ಸುವರ್ಣಗಿರಿಯ ಮೇಲೆ ಚರ್ಮನಾಣ್ಯ ತಯಾರಿಕೆಗೆಂದು ನಿರ್ಮಿಸಿದ್ದ ಗಲ್ಲೆಬಾನಿ ಕೊಳವಿದೆ. ಶಿವನಗುಡಿ, ಅರಮನೆ, ಆಳುಮನೆ,ಕೋಟೆಕೊತ್ತಲಗಳ ಅವಶೇಷಗಳಿವೆ. ಇದೇ ಗಿರಿಯಲ್ಲಿ ಸುವರ್ಣಮುಖಿ ನದಿ ಉಗಮಿಸುತ್ತದೆ.

ಇಂದು ನಿಡುಗಲ್ ಪಾವಗಡ ತಾಲ್ಲೂಕಿನ ಹೋಬಳಿ ಕೇಂದ್ರವಾಗಿದೆ. ಹಿಂದೆ ಇದನ್ನು ಕೇಂದ್ರವಾಗಿಟ್ಟುಕೊಂಡು ಗಂಗರು, ನೊಳಂಬರು, ಪಲ್ಲವರು, ಚಾಲುಕ್ಯರು, ಹೊಯ್ಸಳರು ಆಳಿದ್ದರು. ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಸಂಸ್ಥಾನವು ಎರಿಮಾದ ನಾಯಕನಿಂದ ಆರಂಭಗೊಂಡಿತು. ಕಾಲಾನಂತರದಲ್ಲಿ ಚಿಕ್ಕನಾಯಕನಹಳ್ಳಿಗೆ ಅಧಿಕಾರ ಸ್ಥಳಾಂತರವಾಯಿತು. ಮಧುಗಿರಿಯು ತುಮಕೂರು ಜಿಲ್ಲೆಯ ಉಪವಿಭಾಗ ಕೇಂದ್ರವಾಗಿರುವುದಲ್ಲದೆ, ಶೈಕ್ಷಣಿಕ ಜಿಲ್ಲೆಯೂ ಆಗಿದೆ. ಇದು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾದ ವಿಶಿಷ್ಟ ಪರಂಪರೆಯನ್ನು ಹೊಂದಿದೆ. ಕ್ರಿ.ಶ.೧೬ನೇ ಶತಮಾನದಲ್ಲಿದ್ದ ಪಾಳೆಯಗಾರರು ವಿಜಯನಗರದ ಅರಸರ ಮನ್ನಣೆಗೆ ಪಾತ್ರರಾಗಿದ್ದು ಮುಮ್ಮಡಿ ಪಟ್ಟಣ, ಬಿಜ್ಜವರ, ಮಧುಗಿರಿ ಸಂಸ್ಥಾನಗಳಲ್ಲಿ ಆಕರ್ಷಕ ಆಳ್ವಿಕೆ ನಡೆಸಿ ಮಹಾನಾಡ ಪ್ರಭುಗಳೆಂದು ಹೆಸರು ಪಡೆದಿದ್ದರು. ಮುಮ್ಮಡಿ ಚಿಕ್ಕಪ್ಪಗೌಡರು (ಸಪೇಂದ್ರ) ಬಿಜ್ಜಮರದಿಂದ ಮಧುಗಿರಿಗೆ ರಾಜಧಾನಿಯನ್ನು ಸ್ಥಳಾಂತರಿಸಿದರು. ಅಲ್ಲದೆ ತನ್ನ ದಳವಾಯಿಯಾಗಿದ್ದ ಮಾದಿಗ ಜಾತಿಯ ಕುರಂಗರಾಯನನ್ನು ಸಾಮಂತ ರಾಜನಾಗಿ ಆಳ್ವಿಕೆ ನಡೆಸಲು ಸುವರ್ಣಗಿರಿಗೆ ನೇಮಕ ಮಾಡಿದನು. ಕಾಲಾನಂತರದಲ್ಲಿ ಮಧುಗಿರಿಯು ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಹೈದರಾಲಿಯು ಮಧುಗಿರಿ ಕೋಟೆಯನ್ನು ವಶಪಡಿಸಿಕೊಂಡು ಜೀರ್ಣೋದ್ಧಾರ ಮಾಡಿಸಿ ಸಮರ್ಥವಾಗಿ ಅಧಿಕಾರ ನಡೆಸಿದನು. ಇದೆ ಹೈದರಾಲಿಯು ಸುವರ್ಣಗಿರಿಯ ರಾಜ ಕುರಂಗರಾಯನ ಸ್ನೇಹಿತನಾಗಿದ್ದನು ಮತ್ತು ಅತಿಥಿಯಾಗಿ ಆಗಾಗ ಸುವರ್ಣಗಿರಿಗೆ ಬರುತ್ತಿದ್ದನೆಂದು ಐತಿಹ್ಯ ಮೂಲಗಳು ತಿಳಿಸುತ್ತವೆ.

ಹಾಗೆಯೇ ಮಿಡಿಗೇಶಿಯನ್ನು ನಾಗೀರೆಡ್ಡಿ ಎಂಬ ಪಾಳೆಗಾರರು ಹುಲಿಯೂರು ದುರ್ಗವನ್ನು ಕೆಂಪೇಗೌಡನು ಆಳುತ್ತಿದ್ದ ಬಗ್ಗೆ ಇತಿಹಾಸದಲ್ಲಿ ದಾಖಲೆಯಿದೆ. ತುಮಕೂರು ಜಿಲ್ಲೆಯು ಹಲವು ಕಾರಣಗಳಿಗೆ, ವಿಶಿಷ್ಟತೆಗೆ ಹೆಸರುವಾಸಿಯಾಗಿದೆ. ಮಧುಗಿರಿಯು ಪ್ರಪಂಚದಲ್ಲೇ ಎರಡನೆಯ ಏಕಾಗ್ರಶಿಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಏಳು ಸುತ್ತಿನ ಕೋಟೆಯಿಂದ ಸುತ್ತುವರಿಯಲ್ಪಟ್ಟ ಏಕಶಿಲಾ ಬೆಟ್ಟವೂ ೩೯೫೦ ಅಡಿಗಳಷ್ಟು ಎತ್ತರವಿದೆ. ಮತ್ತು ಏಷ್ಯಾ ಖಂಡದಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಮಧುಗಿರಿಯು ರುಚಿಯಾದ ದಾಳಿಂಬೆಗೆ ನಾಡಿನಲ್ಲೇ ಹೆಸರಾಗಿದೆ.

ತುಮಕೂರು ನಗರಕ್ಕೆ ೮ ಕಿ.ಮೀ ದೂರದಲ್ಲಿ ದೇವರಾಯನದುರ್ಗವಿದೆ. ಇಲ್ಲಿ ದೇವರಾಯನೆಂಬ ರಾಜನು ಆಳುತ್ತಿದ್ದನು. ಹಾಗೆಯೇ ಈ ಗಿರಿಯು ಸಮುದ್ರಮಟ್ಟದಿಂದ ೩೮೯೬ ಅಡಿ ಎತ್ತರವಿದ್ದು, ತುದಿ ಭಾಗವು ಬೇಸಿಗೆಯ ಕಾಲದಲ್ಲಿ ತಂಪಾದ ಹವೆಯನ್ನು

ಹೊಂದುವುದರಿಂದ ಕರ್ನಾಟಕದ ಗಿರಿಧಾಮಗಳಲ್ಲಿ ಒಂದೆನಿಸಿದೆ. ನಿಸರ್ಗ ಸಂಪತ್ತಿನಿಂದ ಕಂಗೊಳಿಸುತ್ತಿದೆ. ಇದರ ಬುಡದಲ್ಲಿರುವ ನಾಮದಚಿಲುಮೆಯು ಪುರಾಣ ಪ್ರಸಿದ್ಧವಾಗಿದೆ. ಈ ಗಿರಿಯಲ್ಲಿ ಜಯಮಂಗಲಿ ಮತ್ತು ಶಿಂಷಾ ನದಿಗಳು ಉಗಮಿಸುತ್ತವೆ.

**ಧಾರ್ಮಿಕತೆ**

ತುಮಕೂರು ಜಿಲ್ಲೆಯು ಧಾರ್ಮಿಕ ಕ್ಷೇತ್ರಕ್ಕೆ ತನ್ನದೇ ಆದ ವಿಶೇಷ ಮುಡಿಪು ಸಲ್ಲಿಸುತ್ತಲಿದೆ. ವಿವಿಧ ಧರ್ಮಗಳ, ಮಠಮಾನ್ಯಗಳ ಸಮ್ಮಿಲನವಾದ ಯೋಗಭೂಮಿ ಇದಾಗಿದೆ. ಹಿಂದೂ, ಮುಸ್ಲಿಂ, ಜೈನ, ಕ್ರೈಸ್ತರ ಕೊಡುಗೆ ಜಿಲ್ಲೆಗೆ ಅಪಾರವಾಗಿ ಸಂದಿದೆ. ವೈಷ್ಣವ, ವೀರಶೈವ ಪರಂಪರೆಯ ಮಠಗಳು, ಆಶ್ರಮಗಳು, ದೇವಾಲಯಗಳು ಇಂದಿಗೂ ಕಾಣಸಿಗುತ್ತವೆ. ತುಮಕೂರು ಸಮೀಪದ ಕ್ಯಾತ್ಸಂದ್ರದಲ್ಲಿರುವ ಸಿದ್ಧಗಂಗಾ ಮಠವು ಜಿಲ್ಲೆಗೆ ಒಂದು ಧಾರ್ಮಿಕ ಕಿರೀಟದಂತಿದೆ. ತ್ರಿದಾಸೋಹ (ಅನ್ನ, ಆಶ್ರಯ, ವಿದ್ಯೆ)ಕ್ಕೆ ಪ್ರಸಿದ್ಧವಾಗಿದೆ. ಈ ಮಠವು ಶ್ರೀ ಗೋಸಲ ಸಿದ್ಧೇಶ್ವರ ಸ್ವಾಮಿಗಳ ತಪೋಬಲದಿಂದ ವಿಶೇಷವಾಗಿ ಗುರುತಿಸಿಕೊಂಡಿದೆ. ಇಂದು ಮಠಾಧೀಶರಾದ ಶತಾಯುಷಿ ಶಿವಕುಮಾರ ಸ್ವಾಮಿಗಳಿಂದ ಮಠವು ಮತ್ತಷ್ಟು ಧಾರ್ಮಿಕತೆಗೆ ಹೆಸರಾಗಿದೆ. ಕುಣಿಗಲ್ ತಾಲ್ಲೂಕಿನಲ್ಲಿ ಯಡಿಯೂರು ಒಂದು ಧಾರ್ಮಿಕ ಯಾತ್ರಾಸ್ಥಳವಾಗಿದ್ದು ವೀರಶೈವ ಪರಂಪರೆಯನ್ನು ಪ್ರತಿನಿಧಿಸುತ್ತದೆ. ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಗಳು ಸಜೀವ ಸಮಾಧಿಯಾದ ಕಾರಣ ಈ ಕ್ಷೇತ್ರವು ಪಾವನಭೂಮಿಯೆನಿಸಿದೆ. ತುಮಕೂರು ನಗರದ ಚಿಕ್ಕಪೇಟೆಯಲ್ಲಿ ಹಿರೇಮಠವಿದೆ. ಇದು ಪುರಾತನ ಕಾಲದಿಂದಲೂ ಧಾರ್ಮಿಕ ಮತ್ತು ಸಾಮಾಜಿಕ ಸಮಾನತೆಗೆ ಒತ್ತುಕೊಡುತ್ತಿದೆ. ಅದೇ ರೀತಿ ರಾಮಕೃಷ್ಣ ಪರಮಹಂಸ, ವಿವೇಕಾನಂದ ಆಧ್ಯಾತ್ಮ ತತ್ವಗಳನ್ನು ಜನಸಾಮಾನ್ಯರಿಗೂ ತಲುಪಿಸುವಲ್ಲಿ ಯಶಸ್ವಿ ಹಾದಿ ಹಿಡಿದಿರುವ ಶ್ರೀ ಕರಿಬಸವೇಶ್ವರ ಮಠ, ತಾಂತ್ರಿಕತೆಗೆ ಹೆಸರಾದ ಬಾರ್‌ಲೈನ್ ರೋಡ್‌ನಲ್ಲಿರುವ ಶ್ರೀ ಚೌಡೇಶ್ವರಿ, ಕ್ಯಾತ್ಸಂದ್ರದಲ್ಲಿರುವ ಶ್ರೀ ಚೌಡೇಶ್ವರಿ ಮುಂತಾದ ದೇವಾಲಯಗಳಲ್ಲಿ ತಾಂತ್ರಿಕ ಮೂಲಾಚರಣೆಯ ಸೂಕ್ಷ್ಮಗಳು ತಿಳಿದು ಬರುತ್ತವೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗೋಡೆಕೆರೆಯಲ್ಲಿ ಪ್ರಾಚೀನ ವೀರಶೈವ ಸಂಸ್ಥಾನ ಮಠವಿದೆ. ಇದರ ಆಶ್ರಯದಲ್ಲಿ ಹಲವು ಶಿಕ್ಷಣ ಸಂಸ್ಥೆಗಳೂ ಇವೆ. ತಿಪಟೂರು ತಾಲ್ಲೂಕಿನ ಕೆರೆಕೋಡಿ ರಂಗಾಪುರ ಮಠವು ೩೦೦ ವರ್ಷಗಳ ಇತಿಹಾಸ ಹೊಂದಿದೆ. ಇದು ಶೈವ ವೈಷ್ಣವ ಮತಗಳ ಸಾಮರಸ್ಯದ ಕೇಂದ್ರವಾಗಿದೆ.

ಕೋಟೆನಾಯಕನಹಳ್ಳಿಯಲ್ಲಿ ಶ್ರೀ ಪರಪ್ಪ ಸ್ವಾಮಿಗಳಿಂದ ಸ್ಥಾಪಿತವಾದ ದೇವಾಂಗದವರ ಒಂದು ಆಶ್ರಮವಿದೆ. ಇಲ್ಲಿ ಬನಶಂಕರಿ ದೇವಾಲಯವನ್ನು ಅದ್ಭುತವಾಗಿ ಕಟ್ಟಲಾಗಿದೆ. ತುರುವೇಕೆರೆ ತಾಲ್ಲೂಕಿನ

ಮಾದಿಹಳ್ಳಿಯಲ್ಲಿ ಬದರಿಕಾಶ್ರಮವಿದ್ದು ಇಲ್ಲಿ ರಾಮಕೃಷ್ಣ ಪರಮಹಂಸ, ಶಾರದಾದೇವಿ, ವಿವೇಕಾನಂದರ ವಾಣಿಯನ್ನು ಬಿತ್ತರಿಸಲಾಗುತ್ತಿದೆ. ಈ ಆಶ್ರಮವು ವಿದೇಶಗಳಲ್ಲಿ ಶಾಖೆಗಳನ್ನು ಹೊಂದಿದೆ. ಇಲ್ಲಿನ ಆಶ್ರಮದಲ್ಲಿ ವಿದೇಶಿ ಮಹಿಳೆಯೊಬ್ಬರು ಸ್ವಾಮೀಜಿಯಾಗಿರುವುದು ವಿಶೇಷವಾಗಿದೆ.



ಹಾಗೆಯೇ ಪಾವಗಡದಲ್ಲಿ ಜಪಾನಂದ ಸ್ವಾಮೀಜಿಯವರು ಧಾರ್ಮಿಕತೆಗಿಂತ ಹೆಚ್ಚಿನದಾಗಿ ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವುದು ಮೆಚ್ಚುಗೆಯ ವಿಷಯವಾಗಿದೆ.

ತಿಪಟೂರು ತಾಲ್ಲೂಕಿನ ದಸರಿಘಟ್ಟದಲ್ಲಿ ಆದಿಚುಂಚನಗಿರಿಯ ಶಾಖಾ ಮಠವಿದೆ. ಶಿರಾ ತಾಲ್ಲೂಕಿನ ಪಟ್ಟನಾಯಕನಹಳ್ಳಿಯಲ್ಲಿ ಶ್ರೀ ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಸಂಸ್ಥಾನ ಮಠವಿದೆ. ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳ ಗಡಿ ಭಾಗದಲ್ಲಿ ಚಂದ್ರಭಾವಿ ಮಠವಿದೆ. ಪಾವಗಡದಲ್ಲಿ ಶನಿಮಹಾತ್ಮ ದೇವಾಲಯದ ಆಡಳಿತ ಮಂಡಳಿಯು ಸಮಾಜ ಸೇವೆಯಲ್ಲಿ ನಿರತವಾಗಿ ಅತ್ಯಂತ ಆಕರ್ಷಕ ಕೇಂದ್ರವಾಗಿಟ್ಟುಕೊಂಡು ಜನರನ್ನು ಸೆಳೆಯುತ್ತಿದೆ. ಕುಣಿಗಲ್ ತಾಲ್ಲೂಕಿನ ಬೆಟ್ಟಹಳ್ಳಿಯಲ್ಲಿ ಶ್ರೀ ಉರಿಗದ್ದಿಗೇಶ್ವರ ಮಠ, ಕೊರಟಗೆರೆ ತಾಲ್ಲೂಕಿನ ಸಿದ್ಧರಬೆಟ್ಟದ ಬೂದಗವಿ ಮಠ, ಬಾಳೆಹೊನ್ನೂರು ಶಾಖಾಮಠ, ಜಂಪೇನಹಳ್ಳಿ ಸಮೀಪದ ರಂಗಾವಧೂತರ ಆಶ್ರಮ, ತುಮಕೂರು ತಾಲ್ಲೂಕಿನ ಹೆಬ್ಬೂರಿನ ವೀರಶೈವ ಮಠ, ಕೆಗೇರಿಯಲ್ಲಿ ಹೊಸದಾಗಿ ಸ್ಥಾಪಿತವಾದ ಮಠ, ಹೀಗೆ ಜಿಲ್ಲೆಯಾದ್ಯಂತ ಮಠ, ಆಶ್ರಮಗಳು, ಶೈವ, ವೀರಶೈವ, ವೈಷ್ಣವ ಮತಗಳ ಧಾರ್ಮಿಕತೆಯನ್ನು ಬಿತ್ತರಿಸುವ ಕೇಂದ್ರ ಸ್ಥಳಗಳಾಗಿವೆ. ಪ್ರಾಗೈತಿಹಾಸಕ್ಕೆ ಹೆಸರಾದ ಹಿರೇಗುಂಡಗಲ್ಲು ಗ್ರಾಮದಲ್ಲಿ ವ್ಯಾಸರಾಯರಿಂದ ಸ್ಥಾಪಿತವಾದ ಆಂಜನೇಯಸ್ವಾಮಿ, ಹನುಮಂತಗಿರಿ, (ಎಂ.ಗೊಲ್ಲಹಳ್ಳಿ)ಯ ಆಂಜನೇಯ ಸ್ವಾಮಿ ಸನ್ನಿಧಿಗೆ ನಾಡ ಪರಂಪರೆಯ ಪ್ರತೀಕವೆನಿಸಿದೆ. ಹಾಗೆಯೇ ಶಿರಾ ತಾಲ್ಲೂಕಿನ ಸೀಬಿ ಕ್ಷೇತ್ರ, ಕೊರಟಗೆರೆ ತಾಲ್ಲೂಕಿನ ಕ್ಯಾಮೇನಹಳ್ಳಿ ಮುಮ್ಮುಖಿ ಆಂಜನೇಯಸ್ವಾಮಿ ಕ್ಷೇತ್ರ ಮತ್ತು ಗೊರವನಹಳ್ಳಿ ಲಕ್ಷ್ಮಿದೇವಿಯವರ ಸುಕ್ಷೇತ್ರಗಳು ನಾಡಿನ ಗಮನ ಸೆಳೆದಿವೆ.

ತುಮಕೂರು ಜಿಲ್ಲೆಗೆ ಕ್ರೈಸ್ತರ ಕೊಡುಗೆಯೂ ಅಪಾರವಾಗಿ ಸಂದಿದೆ. ಕ್ಯಾಥೊಲಿಕ್ ಮತ್ತು ಪ್ರಾಟೆಸ್ಟಂಟ್ ಪಂಗಡದ ಧರ್ಮಪ್ರಚಾರಕರು ಜಿಲ್ಲೆಯಾದ್ಯಂತ ಪ್ರಚಾರದಲ್ಲಿ ತೊಡಗಿದ್ದುದಾಗಿ ವಿವರಗಳು ಹೇರಳವಾಗಿ ಸಿಗುತ್ತವೆ. ಕ್ರೈಸ್ತಧರ್ಮ ಪ್ರಚಾರಕ್ಕೆ ತುಮಕೂರು ಜಿಲ್ಲೆ ಮುಕ್ತ ಅವಕಾಶ ಮಾಡಿಕೊಟ್ಟಿತ್ತು. ಇದಕ್ಕೆ ಸಾಕ್ಷಿ ಎಂಬಂತೆ ಈ ಎರಡು ಪಂಗಡದ ಚರ್ಚುಗಳು ತುಮಕೂರು ನಗರದ ಹೃದಯಭಾಗದಲ್ಲಿವೆ. ತುಮಕೂರು ಮತ್ತು ಗುಬ್ಬಿಗಳನ್ನು

ಕೇಂದ್ರವಾಗಿಟ್ಟುಕೊಂಡಿದ್ದ ಕ್ರೈಸ್ತ ಮಿಷನರಿಗಳು ವ್ಯಾಪಕ ಧರ್ಮ ಪ್ರಚಾರ ನಡೆಸಿವೆ. ಥಾಮಸ್ ಹಡ್ಸ್ ವೆಸ್ಲಿಯವರು ಸ್ವಾತಂತ್ರ್ಯ ಪೂರ್ವದಿಂದಲೂ ಕ್ರೈಸ್ತ ಧರ್ಮ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ.

ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಕ್ಯಾಪ್ಟನ್ ಡಾಬ್‌ರು ಆ ಧರ್ಮಕ್ಕೆ ಹೆಚ್ಚು ಒತ್ತುಕೊಟ್ಟಿದ್ದರು. ಇವರ ಹೆಸರಿನಲ್ಲಿ ಡಾಟ್ಸ್ ಬಂಗಲೆ (ಜಿಲ್ಲಾಧಿಕಾರಿಗಳ ಬಂಗಲೆ) ಹಾಗೂ ಡಾಬಸ್‌ಪೇಟೆ ಇವರ ಕೊಡುಗೆ. ವೆಸ್ಲಿ ಹೆಸರಿನ ಚರ್ಚ್ ಆಜಾದ್ ಚೌಕದಲ್ಲಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ಕ್ರೈಸ್ತ ಧರ್ಮವನ್ನು ಸಾಮಾಜಿಕ, ಶೈಕ್ಷಣಿಕ, ವೈದ್ಯಕೀಯ ಸೇವೆ ಮಾಡುತ್ತಲೇ ಪ್ರಚಾರ ಮಾಡಿರುವುದಕ್ಕೆ ನಿದರ್ಶನಗಳಿವೆ. ನಗರದ ಶಿರಾಗೇಟ್‌ನಲ್ಲಿರುವ ಯೂನಿಯನ್ ಕ್ರಿಶ್ಚಿಯನ್ ವಿದ್ಯಾಸಂಸ್ಥೆ ಒಂದು ಸ್ಮಾರಕದಂತಿದೆ. ಜಿಲ್ಲೆಯ ಮೊದಲ ಕ್ರೈಸ್ತ ಮತಾವಲಂಬಿ ಎಂಬ ಹೆಸರಿಗೆ ಪಾತ್ರರಾದ ಸಿಂಗೋನಹಳ್ಳಿಯ



ಮಡಿವಾಳ ಚಿಕ್ಕಣ್ಣನವರ ಬಗ್ಗೆ ಮಾಸ್ತಿಯವರ ಸಣ್ಣಕಥೆಗಳು ಕೃತಿಯಲ್ಲಿ ವಿವರಗಳು ಸಿಗುತ್ತವೆ.

ತುಮಕೂರು ಜಿಲ್ಲೆಯಲ್ಲಿ ಜೈನರ ಸೇವೆಯೂ ಅಪಾರವಾಗಿತ್ತು. ಇಲ್ಲಿ ಜೈನರು ಪ್ರಬಲರಾಗಿದ್ದರು ಎಂಬುದಕ್ಕೆ ನಗರ ಮತ್ತು ಹೊರವಲಯಗಳಲ್ಲಿ ಕಾಣಸಿಗುವ ಜಿನಮಂದಿರಗಳೇ ಸಾಕ್ಷಿ. ತುಮಕೂರು ನಗರದಿಂದ ೭ ಮೈಲಿ ದೂರದಲ್ಲಿರುವ ಮಂದರಗಿರಿ(ಮಸದಿಬೆಟ್ಟ)ಯು ಜೈನರ ಪವಿತ್ರ ಸ್ಥಳವಾಗಿದೆ. ಬೆಟ್ಟದ ಮೇಲೆ ಅನೇಕ ಜಿನ ಮಂದಿರಗಳಿವೆ. ಕೊರಟಗೆರೆ ತಾಲ್ಲೂಕಿನ ತೋವಿನಕೆರೆ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜೈನರಿದ್ದರು. ಜೈನಧರ್ಮದ ಚಂದ್ರ ಸಾಗರವರ್ಣಿಯು ಜೈನರಾಮಾಯಣ, ಜೈನ ಮಹಾಭಾರತ ಹೆಸರಿನ ಕೃತಿಗಳನ್ನು ರಚಿಸಿರುವನು. ಈತ ತೋವಿನಕೆರೆಯಲ್ಲಿ ನೆಲೆಸಿದ್ದನೆಂದು ಮಾಹಿತಿಗಳು ಹೇಳುತ್ತವೆ. ಜೈನರು ಹಿಂದೆ ಸಾಹಿತ್ಯ ರಚನೆಯಲ್ಲಿ ತೊಡಗಿಕೊಳ್ಳುತ್ತಿದ್ದರು.

ಇಂದು ಬಹುತೇಕರು ಪುಸ್ತಕದ ಅಂಗಡಿಗಳನ್ನು ಬೃಹತ್ ಪ್ರಮಾಣದಲ್ಲಿ ತೆರೆದು ಅದೇ ರೀತಿಯಲ್ಲಿ ಸರಸ್ವತಿ ಸೇವೆ ಮಾಡುತ್ತಿರುವರು. ಶೈವ, ವೈಷ್ಣವ, ಪರಂಪರೆಯ ತಾತ್ವಿಕ ವಿಚಾರಗಳನ್ನು ಪ್ರಚಾರ ಪಡಿಸುವಂಥ ನೇಗಲಾಲದ ಶ್ರೀ ಬಸವೇಶ್ವರ ಸಂಘ ಮಲ್ಲೇಶ್ವರ ಪುರದ ಹರಳೇಶ್ವರಮಠ, ಚನ್ನರಾಯನದುರ್ಗದ ಮುರಾರಿಮಠ, ಗೌರಗಾನಹಳ್ಳಿ ಕ್ರಾಸ್‌ನಲ್ಲಿ ಶ್ರೀ ಚಿಕ್ಕಪ್ಪಯ್ಯರಿಂದ ಸ್ಥಾಪಿತವಾದ ಹರಳಯ್ಯನ ಆಶ್ರಮ ಮುಂತಾದ ಮಠಗಳ ಆಶ್ರಮಗಳಿವೆ. ಹಾಗೆಯೇ ಇಸ್ಲಾಂ ಧರ್ಮದವರೂ ಜಿಲ್ಲೆಯಲ್ಲಿ ವ್ಯಾಪಕವಾಗಿ ಕಂಡುಬರುವರು. ಹೈದರಾಲಿ, ಟಿಪ್ಪುಸುಲ್ತಾನರ ಆಳ್ವಿಕೆಯಲ್ಲಿ ತುಮಕೂರು ಜಿಲ್ಲೆಯ ಬಹುತೇಕ ಭೂಭಾಗಗಳು ಅಧೀನವಾಗಿದ್ದವು. ಪರಿಣಾಮವಾಗಿ ಮುಸಲ್ಮಾನರ ಸಂಖ್ಯೆ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಶಿರಾ ಪಟ್ಟಣವನ್ನು ಗೆದ್ದುದರಿಂದ ಹೈದರಾಲಿಗೆ ಶಿರಾದ ನವಾಬ ಎಂಬ ಬಿರುದು ಬಂದಿದೆ. ಮಧುಗಿರಿಯಲ್ಲಿ ಈತನು ಮಾಡಿದ ಸಾಧನೆಗಳು ಅಚ್ಚಳಿಯದೆ

ಉಳಿದುಕೊಂಡಿವೆ. ಇಂದಿಗೂ ಅನೇಕ ಮುಸಲ್ಮಾನ ಬಾಂಧವರು ರಾಜಕೀಯ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವರು.

ಜಿಲ್ಲೆಯಾದ್ಯಂತ ಶೈವ ವೈಷ್ಣವ, ಹನುಮನಾಥ ಪಂಥಗಳ ದೇವಾಲಯಗಳು ಯಥೇಚ್ಛವಾಗಿ ಕಾಣಸಿಗುತ್ತವೆ. ಹೀಗೆ ಜಿಲ್ಲೆಯು ಧಾರ್ಮಿಕತೆಗೆ ತುಂಬಾ

ಹೆಸರುವಾಸಿಯಾಗಿದೆ.

**ಸಾಂಸ್ಕೃತಿಕತೆ**

ತುಮಕೂರು ಜಿಲ್ಲೆಯು ರಂಗಭೂಮಿ, ಚಲನಚಿತ್ರರಂಗ, ಸಾಹಿತ್ಯ, ವಾಸ್ತುಶಿಲ್ಪ, ಚಿತ್ರಕಲೆ ಮತ್ತು ಜನಪದ ಕಲೆಗಳಂತಹ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಗಣನೀಯ ಸ್ಥಾನವನ್ನು ಪಡೆದುಕೊಂಡು ಪ್ರಖ್ಯಾತವಾಗಿದೆ.

ರಂಗಭೂಮಿಯಲ್ಲಂತೂ ಜಿಲ್ಲೆಯು ಶ್ರೀಮಂತವಾಗಿದೆ. ರಾಜ್ಯ ಮತ್ತು ರಾಷ್ಟ್ರಕ್ಕೆ ಅಪಾರ ಕೊಡುಗೆ ನೀಡಿದೆ. ಅನೇಕ ನಾಟಕ ಕಂಪನಿಗಳು ಕ್ರಿಯಾತ್ಮಕ ಕಲೆಗೆ ಮತ್ತು



ಪ್ರಸಿದ್ಧಿಗೆ ಕಾರಣೀಭೂತವಾಗಿವೆ. ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘವು ಗುಬ್ಬಿಯಲ್ಲಿ ಸ್ಥಾಪನೆಗೊಂಡು ಇತಿಹಾಸ, ಸಾಮಾಜಿಕ ಅಂಶಗಳಿಗೆ ಒತ್ತುಕೊಟ್ಟು ವಿವಿಧ ನಾಟಕಗಳನ್ನು ಪ್ರದರ್ಶಿಸಿದೆ. ಈ ನಾಟಕ ಕಂಪನಿಯನ್ನು ಸ್ಥಾಪಿಸಿದವರು ಗುಬ್ಬಿಯ ಚಂದಣ್ಣನವರು ಹಾಗೂ ಅಬ್ದುಲ್ ಅಜೀತ್ ಸಾಹೇಬ್ರು, ಸಾಹುಕಾರ ನೀಲಕಂಠಪ್ಪನವರು ಇದೇ ನಾಟಕ ಕಂಪನಿಯಲ್ಲಿ ನಟರಾಗಿ ಗುರ್ತಿಸಿಕೊಂಡ ಗುಬ್ಬಿ ವೀರಣ್ಣನವರು ಜನಪ್ರಿಯರಾಗುತ್ತಾ ಕಂಪನಿಯ ಮಾಲೀಕರೇ ಆಗಿಬಿಟ್ಟರು. ರಾಜ್ಯಾದ್ಯಂತ ಹೆಸರು ಮಾಡಿದರು. ಚಿಕ್ಕನಾಯಕನಹಳ್ಳಿಯ ಅಭಿನವ ಭಕ್ತ ಶಿರೋಮಣಿ ಶ್ರೀ ಸಿ.ಬಿ.ಮಲ್ಲಪ್ಪನವರ ಶ್ರೀ ಚಂದ್ರ ಮೌಳೇಶ್ವರ ಕೃಪಾಪೋಷಿತ ನಾಟಕ ಸಭಾವು, ಗುಬ್ಬಿ ವೀರಣ್ಣನವರ ನಾಟಕ ಕಂಪನಿಯಲ್ಲಿ ವಿಲೀನಗೊಂಡಿತು. ಇವರಿಬ್ಬರೂ ಜೊತೆಯಾಗಿ ರಂಗಭೂಮಿ ಸೇವೆ ಮಾಡತೊಡಗಿದರು. ಇವರ ಪರಿಶ್ರಮದಿಂದ ಕಲೆ ಉಳಿಯಿತಲ್ಲದೆ ಅನೇಕ ಕಲಾವಿದರು ಹೆಸರು ಪಡೆದರು. ಡಾ||ರಾಜಕುಮಾರ್‌ರಂತಹ ಕನ್ನಡದ ಮೇರು ನಟರು ಗುಬ್ಬಿ ನಾಟಕ ಕಂಪನಿಯ ಗರಡಿಯಲ್ಲಿ ಪಳಗಿದವರು ಎಂದರೆ ಆಶ್ಚರ್ಯವಾಗುವುದು.

ತುಮಕೂರಿನಲ್ಲಿ ಶ್ರೀ ಪಿ.ವಿ.ಸೀತಾರಾಮಯ್ಯರಿಂದ “ಶ್ರೀ ಸೀತಾ ಮನೋಹರ ಕರ್ನಾಟಕ ನಾಟಕ ಮಂಡಳಿ'ಯು ಸ್ಥಾಪನೆಯಾಗಿ ಅಮೋಘ ಸೇವೆ ಸಲ್ಲಿಸಿತು. ಹಾಗೆಯೇ ತುಮಕೂರು ಶಿವಪ್ಪ ಶಾಸ್ತ್ರಿಗಳ

ಚಾಮುಂಡೇಶ್ವರಿ ನಾಟಕ ಸಂಘ, ಗುಬ್ಬಿ ಬಾಲಕ ಕಲಾವರ್ಧಿನಿ ನಾಟಕ ಸಂಘ ಮತ್ತು ಜಯಗೌರಿ ನಾಟಕ ಸಂಘಗಳು ರಂಗಭೂಮಿಯಲ್ಲಿ ಸಕ್ರಿಯವಾಗಿದ್ದ ನಾಟಕ ಕಂಪನಿಗಳು, ಎನ್.ಗಂಗಾಧರರಾಯ, ಎಂ.ಸುಬ್ಬರಾವ್, ಕೆ.ಹಿರಣ್ಣಯ್ಯ, ಮಾಸ್ಟರ್ ಹಿರಣ್ಣಯ್ಯ, ನರಸಿಂಹರಾಜು ಮುಂತಾದ ಕಲಾವಿದರು ಈ ಜಿಲ್ಲೆಯ ರಂಗಭೂಮಿ ಕೊಡುಗೆ.

ಚಲನಚಿತ್ರರಂಗದ ವಿವಿಧ ನೆಲೆಗಳಲ್ಲಿ ರಾಜಾಶಂಕರ್, ಪಿ.ಶೇಷಾದ್ರಿ, ಬಿ.ಮೈಲಾರಿರಾವ್, ಈಶ್ವರಪ್ಪ, ಕುಣಿಗಲ್ ರಾಮನಾಥ್, ಶಕ್ತಿ ಪ್ರಸಾದ್, ನಾಡೋಜ ಡಾ.ಬರಗೂರು ರಾಮಚಂದ್ರಪ್ಪ, ಕುಣಿಗಲ್ ನಾಗಭೂಷಣ್, ಜಗ್ಗೇಶ್, ಲಿಂಗದೇವರು ಹಳೆಮನೆ, ಅರ್ಜುನ್‌ಸರ್ಜಾ, ಎನ್.ಸುಕುಮಾರ್, ರಾಜವರ್ಧನ್, ನಟರಾಜ್, ಮಯೂರ

ಗೋವಿಂದರಾಜು, ಮಂಜುಳ, ಎಸ್.ಕೆ.ಪದ್ಮ, ಉಮಾಶ್ರಿ, ಲೋಹಿತಾಶ್ವ, ಸಂಚಾರಿ ವಿಜಯ್ ಮುಂತಾದವರು ಗುರುತಿಸಿಕೊಂಡು ಹೆಸರು ಮಾಡಿದ್ದಾರೆ. ಹಿಂದಿ ಚಲನಚಿತ್ರರಂಗದ ಅಪೂರ್ವ ಸಾಧನೆಗಳಾಗಿ ತುಮಕೂರು ತಾಲ್ಲೂಕಿನ ಹೊನ್ನುಡಿಕೆ ಗ್ರಾಮದಲ್ಲಿ ಜನಿಸಿದ ಮಹಾರುದ್ರಶೆಟ್ಟಿ ಅವರಿಗೆ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ, ಜಿಲ್ಲೆಗೆ ಕೀರ್ತಿ ಬಂದಂತಾಗಿದೆ.

ಕನ್ನಡ ಸಾರಸ್ವತ ಲೋಕಕ್ಕೆ, ವಿಜ್ಞಾನ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿಕೊಟ್ಟವರು ಬೆಳ್ಳಾವಿ ವೆಂಕಟನಾರಾಯಣಪ್ಪನವರು. ಅಲ್ಲದೆ ಬೆಳ್ಳಾವಿಯ ನರಹರಿ ಶಾಸ್ತ್ರಿಗಳು, ಕನ್ನಡದ ಕಣ್ವ ಬಿ.ಎಂ.ಶ್ರೀ, ತೀನಂಶ್ರೀ, ತೀ.ನಂ.ಶಂಕರನಾರಾಯಣ, ಮಾ.ನಾ.ಚೌಡಪ್ಪ, ಕೆ.ವೆಂಕಟರಾಮಪ್ಪ, ಕ.ವೆಂ.ರಾಘವಾಚಾರ್, ಬಿ.ಶಿವಮೂರ್ತಿ, ಡಿ.ಎಲ್.ಎನ್, ಪ್ರಧಾನ ಗುರುದತ್ತ, ಪಿ.ವಿ.ನಾರಾಯಣ, ರಂಗಾರೆಡ್ಡಿ ಕೋಡಿರಾಂಪುರ, ಜಿ.ಎನ್.ನಾಗರಾಜು,



ಜಿ.ಎನ್.ಮೋಹನ್, ಸಿ.ಕೆ.ಮಹೇಂದ್ರನಂದನವನ, ಜಿ.ಇಂದ್ರಕುಮಾರ, ದೊಡ್ಡರಂಗೇಗೌಡ, ಸಾ.ಶಿ.ಮರುಳಯ್ಯ, ಎಸ್.ಜಿ.ಸಿದ್ದರಾಮಯ್ಯ, ಹೆಚ್.ಜಿ.ಸಣ್ಣಗುಡ್ಡಯ್ಯ, ಕೆ.ಜಿ.ನಾಗರಾಜಪ್ಪ, ಸಿ.ಯತಿರಾಜು,

ಡಾ.ಎಚ್.ಎಸ್.ನಿರಂಜನರಾಧ್ಯ, ಕೆ.ದೊರೈರಾಜ್, ನಟರಾಜ್ ಹುಳಿಯಾರ್, ಬಿಳಿಗೆರೆ ಕೃಷ್ಣಮೂರ್ತಿ, ಎನ್.ನಾಗಪ್ಪ, ಕೆ.ಬಿ.ಸಿದ್ದಯ್ಯ, ವಡ್ಡಗೆರೆ ನಾಗರಾಜಯ್ಯ, ತುಂಬಾಡಿ ರಾಮಯ್ಯ, ಡಾ.ಓ.ನಾಗರಾಜು, ಗರುಗದೊಡ್ಡಿ ನಟರಾಜ್, ಬಾ.ಹ.ರಮಾಕುಮಾರಿ, ಮಲ್ಲಿಕಾ ಬಸವರಾಜು, ಲಲಿತಾ ಸಿದ್ಧಬಸವಯ್ಯ, ಎಂ.ಸಿ.ಲಲಿತಾ, ಶೈಲಾನಾಗರಾಜು, ಅನ್ನಪೂರ್ಣ ವೆಂಕಟನಂಜಪ್ಪ, ಸಾ.ಚಿ.ರಾಜ್‌ಕುಮಾರ್, ಉಗಮ ಶ್ರೀನಿವಾಸ್, ಎನ್.ಡಿ.ರಂಗರಾಜು, ಯುವಬರಹಗಾರರಾದ ಡಾ.ಬಗ್ಗನಡು ನಾಗಭೂಷಣ್, ನೀ.ಹ.ರವಿಕುಮಾರ್, ಶಿವಣ್ಣ ತಿಮ್ಲಾಪುರ ಮುಂತಾದ ಬರಹಗಾರರನ್ನು ಸಾಹಿತಿ, ಕವಿ, ಸಂಶೋಧಕರನ್ನು ಜಿಲ್ಲೆ ಕೊಡುಗೆಯಾಗಿ ನೀಡಿದೆ.

ವಾಸ್ತು ಶಿಲ್ಪಕಲೆಯ ವಿಷಯಕ್ಕೆ ಬಂದಾಗ ತುಮಕೂರಿನಲ್ಲಿ ಹೊಯ್ಸಳರ ಖ್ಯಾತಿಗೆ, ಹೊಯ್ಸಳರ ಕಲಾವೈಭವಕ್ಕೆ ಕಾರಣರಾದವರೆಂದರೆ ಅಮರ ಶಿಲ್ಪಿ ಜಕಣಾಚಾರಿ ಮತ್ತು ಡಕಣಾಚಾರಿಗಳು ಇವರು ತುಮಕೂರು ಜಿಲ್ಲೆಯ ಗೂಳೂರಿನ ಮೂಲದವರು ಎಂಬುದು ಹೆಮ್ಮೆಯ ಸಂಗತಿ. ಅಲ್ಲದೆ ರೂವಾರಿ ಬೈಚೋಜ, ರೂವಾರಿ ಹೊನ್ನೋಜರೂ ಇದೇ ಜಿಲ್ಲೆಯ ಹೆಸರಾಂತ ಶಿಲ್ಪಿಗಳು. ಶಿಲ್ಪಿಗಳ ನೆರವಿನಿಂದ ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡ ಶ್ರೀ ಲಕ್ಷ್ಮೀಕಾಂತ ಸ್ವಾಮಿ ದೇವಾಲಯವು ತುಮಕೂರಿನ ಚಿಕ್ಕಪೇಟೆಯಲ್ಲಿದೆ. ಹಾಗೆಯೇ ಚೋಳರು, ನೊಳಂಬರು ಮತ್ತು ಹೊಯ್ಸಳರ ಕಾಲದಲ್ಲಿ ಕಟ್ಟಲ್ಪಟ್ಟ ದೇವಾಲಯಗಳು ಜಿಲ್ಲೆಯಲ್ಲಿ ಕಂಡು ಬರುತ್ತವೆ. ನೊಣವಿನಕೆರೆ, ಅರಳಗುಪ್ಪೆ, ನಾಗಲಾಪುರ, ತಂಡಗ, ಹುಲಿಕಲ್ಲು, ಹೊನ್ನುಡಿಕೆ, ಹೊನ್ನೇನಹಳ್ಳಿ, ಮಧುಗಿರಿ ಮುಂತಾದ ಕಡೆಗಳಲ್ಲಿ ದೇವಾಲಯಗಳಿರುವುದು ಕಂಡು ಬರುತ್ತದೆ.

ನಂಜುಂಡ ಶಿವಯೋಗಿ ಮತ್ತು ಕಲಾ ಜ್ಯೋತಿಯೆಂದೇ ಬಿರುದಾಂಕಿತ ಮಧುಗಿರಿ ರಾಮುರವರ ಚಿತ್ರಕಲಾಸೇವೆ ಅವಿಸ್ಮರಣೀಯ. ಸಿದ್ಧಗಂಗಾ ಮಠದಲ್ಲಿರುವ ವರ್ಣ ಚಿತ್ರಗಳು ಮಧುಗಿರಿ ರಾಮು ಅವರ ಕಲಾ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಂತಿದೆ. ಹಾಗೆಯೇ ವ್ಯಂಗ್ಯ ಚಿತ್ರಕ್ಕೆ ಡಿ.ಆರ್.ಪ್ರಸನ್ನಮೂರ್ತಿ, ವರ್ಣಚಿತ್ರ, ತೈಲಚಿತ್ರಕ್ಕೆ ಹೆಚ್.ಎಸ್.ನೀಲಕಂಠಯ್ಯ, ರೇಖಾಚಿತ್ರಕ್ಕೆ ಹೆಚ್.ಎನ್.ರಾಜಕುಮಾರ್, ಕೋಟೆಕುಮಾರ್, ಡೇವಿಡ್, ಚಿತ್ರಕಲಾವಿದ ಎಸ್.ರಾಜು ಹೆಸರಾಗಿದ್ದಾರೆ.

ಜಿಲ್ಲೆಯು ಜನಪದ ವಿದ್ವಾಂಸರನ್ನು ಕಲಾವಿದರನ್ನು ಅಭಿಮಾನಿಗಳನ್ನು ಸಮೃದ್ಧವಾಗಿ ಪಡೆದಿದೆ. ಚಿಕ್ಕಣ್ಣ ಯಣ್ಣೆಕಟ್ಟೆ, ಕಂಟಲಗೆರೆ ಸಣ್ಣಹೊನ್ನಯ್ಯ, ಮ.ಲ.ನ.ಮೂರ್ತಿ, ಎಂ.ಸಿ.ನರಸಿಂಹಮೂರ್ತಿ, ಗಂಗಾಧರಗೌಡ, ಸೂರನಹಳ್ಳಿ ಶಿವರಾಮಯ್ಯ, ಮೈಲಾರಪ್ಪ, ಕೆ.ಲಕ್ಷ್ಮಣದಾಸ್ ಮುಂತಾದ ಜನಪದ ವಿದ್ವಾಂಸರು ಕಲಾವಿದರೂ ಆಗಿರುವುದು ವಿಶೇಷ. ಹಾಗೆಯೇ ಜಿಲ್ಲೆಯಲ್ಲಿ ಕರಪಾಲಮೇಳ, ಸೋಮನಕುಣಿತ, ನಂದಿಧ್ವಜ

ಕುಣಿತ, ವೀರಗಾಸೆ ಕುಣಿತ, ಕೋಲಾಟ, ಬಯಲಾಟ, ಹಲಗೆವಾದ್ಯ ಮುಂತಾದ ಕಲೆಗಳು ಜೀವಂತವಾಗಿವೆ. ದಂಡಿನಶಿವರದ ಹೊನ್ನಮ್ಮನ ಸೋಮಗಳು ಮತ್ತು ಕಂಟಲಗೆರೆ, ಮಲ್ಲಿಗೆರೆಯ ಸೋಮಗಳು ರಾಜ್ಯದಲ್ಲೇ ಹೆಸರುವಾಸಿಯಾಗಿವೆ.

ತುಮಕೂರು ಜಿಲ್ಲೆಯು ಮಾನವನ ಬೌದ್ಧಿಕ ವಿಕಾಸಕ್ಕೆ, ವ್ಯಕ್ತಿತ್ವ ವಿಕಾಸಕ್ಕೆ, ಕಲಿಕೆಯ ಬೀಜ ಬಿತ್ತುವ ಶೈಕ್ಷಣಿಕ ಕೇಂದ್ರಗಳನ್ನು ಹೊಂದಿದೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ವಿಶ್ವವಿದ್ಯಾಲಯದವರೆಗೆ ಶಿಕ್ಷಣ ಲಭಿಸುತ್ತಿದೆ. ತಾಂತ್ರಿಕ, ವೈದ್ಯಕೀಯ ಶಿಕ್ಷಣ ಕೇಂದ್ರಗಳಿವೆ. ಹೀಗೆ ತುಮಕೂರು ಜಿಲ್ಲೆಯು ಭೌಗೋಳಿಕ, ಚಾರಿತ್ರಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕವಾದ ಭವ್ಯ ಹಾಗೂ ಶ್ರೀಮಂತ ಪರಂಪರೆಯನ್ನು ಪಡೆದುಕೊಂಡಿದೆ.

**ಕೊರೋನಾ ಕತ್ತಲಿಗೆ ಮನದ ಬೆಳಕು**

**- ಆಶಾರಾಣಿ ಕೆ**

ಇದು ಕೊರೊನಾ ಸಂಧಿಕಾಲ. ಕಣ್ಣಿಗೆ ಕಾಣದ ಸಣ್ಣ ಕ್ರಿಮಿಯೊಂದು ಇಡೀ ಜಗತ್ತನ್ನು ಆವರಿಸುವ ಮೂಲಕ ಮನುಷ್ಯನನ್ನು ಕಂಗೆಡಿಸಿ ಕಗ್ಗತ್ತಲಿಗೆ ನೂಕಿದೆ. ಆ ಕತ್ತಲಲ್ಲೇ ಮನುಷ್ಯನಿಂದು ಬೆಳಕನ್ನು ಅರಸುವ ಆ ಮೂಲಕ ಬದುಕನ್ನು ಅರ್ಥಪೂರ್ಣಗೊಳಿಸಿಕೊಳ್ಳಬೇಕಾದ ಪರ್ವಕಾಲದಲ್ಲಿದ್ದಾನೆ. ಜಾತಿ, ಧರ್ಮ, ಮದ್ದು- ಗುಂಡು, ಅಣ್ವಸ್ತ್ರಗಳಡಿಯಲ್ಲಿ ಶ್ರೇಷ್ಠತೆಯ ಶಕ್ತಿ ಸಾಮರ್ಥ್ಯದ ಕೇಕೆ ಹಾಕುತ್ತಾ ಇಡೀ ಜಗತ್ತನ್ನು ಗೆದ್ದಿರುವ ಅಹಂನಲ್ಲಿ ಬೀಗುತ್ತಿದ್ದ ಆತನಿಂದು ಅಕ್ಷರಶಃ ಸೋತು ಕಂಗಾಲಾಗಿ ಕೂತಿದ್ದಾನೆ. ಇನ್ನಾದರೂ ತಾನೇ ಶ್ರೇಷ್ಠನೆಂಬ ಶಕ್ತಿ ಸಾಮರ್ಥ್ಯದ ಭ್ರಮೆಯ ಕತ್ತಲಿಂದ ವಾಸ್ತವದ ಬೆಳಕನ್ನು ಅರಸಬೇಕಿದೆ ಆತ.

ದೇಶ, ಭಾಷೆ, ಜಾತಿ-ಮತಗಳ ಮಾನದಂಡಗಳಡಿಯಲ್ಲಿ ತನ್ನನ್ನು ತಾನು ಬಂಧಿಸಿಕೊಂಡಿದ್ದವ ದೇಶಾತೀತ-ಧರ್ಮಾತೀತ, ಜಾತ್ಯಾತೀತವಾಗಿ ಮುಟ್ಟದ, ಆತಂಕಿಸುವ ಅನುಮಾನಿಸುವ ಸ್ಥಿತಿಯಲ್ಲಿದ್ದು, ಇಡೀ ಮನುಕುಲವೇ ಒಟ್ಟಾಗಿ ಹೋರಾಡಬೇಕಿರುವ ಅನಿವಾರ್ಯತೆಯಿದೆ. ಆದರೆ ಇಂತಹ ಸಂದಿಗ್ಧ ಸಮಯದಲ್ಲೂ ಧರ್ಮದ ಭೂತವೊಂದು ಮನುಷ್ಯನನ್ನು ಬೆಂಬಿಡದೆ ಕಾಡುತ್ತಿರುವುದು ನಿಜಕ್ಕೂ ವಿಕೃತತೆಯ ಪರಮಾವಧಿಯೇ ಹೌದು, ನಮ್ಮದೇ ಆದ ನಾಡಿನಲ್ಲಿ ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಬಹುದೊಡ್ಡ ಪರಂಪರೆಯೇ ಇದೆ. ಅಂತಹದೊಂದು ಪರಂಪರೆಯೇ ನಶಿಸಿ ಹೋಗುತ್ತಿರುವ ಈ ದಿನಮಾನಗಳಲ್ಲಿ ಪ್ರತಿಯೊಂದು ವಿಚಾರವು ದಿಢೀರನೆ ಧರ್ಮದೊಳಕ್ಕೆ ತಳಕು ಹಾಕಿಕೊಂಡುಬಿಡುತ್ತದೆ. ಪ್ರಸ್ತುತ ಕೊರೋನಾಗಿಂತ ವೇಗವಾಗಿ ಹಬ್ಬುತ್ತಿರುವ ಕೋಮು ವೈರಸ್‌ಗಳು, ಯಾವುದೇ ದೇಶ, ಭಾಷೆ, ಜಾತಿ, ಧರ್ಮಗಳ ಮಿತಿಯಿಲ್ಲದೆ ಹಬ್ಬುತ್ತಿರುವ ಕೊರೋನಾ ವೈರಸ್ಸನ್ನು ಯಾವುದೋ ಒಂದು ಧಾರ್ಮಿಕ ಗುಂಪು ಹಬ್ಬಿಸುತ್ತಿದೆ ಎಂದು ಆರೋಪಿಸುತ್ತಿದೆ. ನಿಜಾಮುದ್ದೀನ್ ನಂಜು, 'ತಬ್ಲಿಗಿಗಳ ಜಿಹಾದ್', ಎಂದೆಲ್ಲಾ ವಿವರಿಸಿ ವರ್ಣಿಸುತ್ತಾ ಇಡೀ ಮುಸ್ಲಿಂ ಸಮುದಾಯವನ್ನು ಕೊರೋನಾ ವಾಹಕರು ಎಂದು ಬಿಂಬಿಸುತ್ತಿರುವ ಕೆಲ ಮಾಧ್ಯಮಗಳು, ಕೆಲವು ಪ್ರಚೋದನಾಕಾರಿಗಳು ಸಮಾಜದಲ್ಲಿ ಕೋಮು ವೈಷಮ್ಯವನ್ನು ಹರಡುತ್ತಾ, ಕೋಮು ಸಾಮರಸ್ಯವನ್ನು ಕದಡುತ್ತಿದ್ದಾರೆ. ಇತ್ತೀಚೆಗೆ ಭಾನು ಮುಷಾಕ್‌ರು ಈ ತಬ್ಲಿಗಿ ಜಮಾತ್‌ನ ಬಗೆಗೆ ಕೆಲವೊಂದು ವಿಚಾರಗಳನ್ನು ಹಂಚಿಕೊಂಡಿದ್ದರು. ಅವರು ಉಲ್ಲೇಖಿಸಿರುವ ಪ್ರಕಾರ ತಲ್ಲಿಗಿ ಜಮಾತ್ ಇಸ್ಲಾಂ ನ್ಯಾಯವ್ಯವಸ್ಥೆಯ ಬಗ್ಗೆ ಕೂಡಾ ಮಾತನಾಡದ ಹಿಂಸೆ ಮತ್ತು ಕ್ರೌರ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸಿರುವ ಪ್ರಯಾಣ ಎಂಬುದನ್ನು ಮುಖ್ಯ

ಕಾರ್ಯಸೂಚಿಯನ್ನಾಗಿಸಿಕೊಂಡಿರುವ, ಸಮಾಜದ ಅತ್ಯಂತ ಕೆಳಸ್ತರದ ಜನರ ನಡುವೆ ಕೆಲಸ ಹಮ್ಮಿಕೊಂಡಿರುವ ಒಂದು ಮಿಷನರಿ ಸಂಸ್ಥೆಯಾಗಿದ್ದು, ಇದು ಯಾವುದೋ ಒಂದು ಉಗ್ರಗಾಮಿ ಸಂಘಟನೆಯಲ್ಲ. ಅದು ಪ್ರತಿಬಾರಿಯಂತೆ ಈ ಬಾರಿಯು ಧಾರ್ಮಿಕ ಸಭೆಯೊಂದನ್ನು ಆಯೋಜಿಸಿಕೊಂಡಿದ್ದು, ಅದಕ್ಕೆ ಸರ್ಕಾರದ ವತಿಯಿಂದ ಪೂರ್ವಾನುಮತಿಯನ್ನು ಪಡೆದಿತ್ತು. ನಂತರದಲ್ಲಿ ಸರ್ಕಾರದ ಆದೇಶವನ್ನು ಪಾಲನೆ ಮಾಡಿತ್ತು ಎಂಬುದು ಗಮನಿಸಬೇಕಾದ ವಿಚಾರ. ಇನ್ನು ಲಾಕ್‌ಡೌನ್‌ಗೆ ಮುಂಚಿತವಾಗಿ ದೇಶದಲ್ಲಿ ಉಳಿದ ಧಾರ್ಮಿಕ ಕೇಂದ್ರಗಳಂತೆ ತನ್ನ ಕಾರ್ಯವನ್ನು ನಿರ್ವಹಿಸಿದ್ದ ಈ ಜಮಾತ್ ಕೇಂದ್ರದಲ್ಲಿ ಭಾಗವಹಿಸಿದ್ದವರ ಸಂಖ್ಯೆ ಹೆಚ್ಚಾಗಿದ್ದು ನಂತರದಲ್ಲಿ ಅವರುಗಳು ಸ್ವಸ್ಥಾನಗಳಿಗೆ ತಲುಪುವಲ್ಲಿ, ಅವರೇ ಖುದ್ದಾಗಿ ಮಾಹಿತಿಯನ್ನು ನೀಡುವಲ್ಲಿ ಗೊಂದಲವೇರ್ಪಟ್ಟಿರಬಹುದೇನೋ. ಅದರ ಹೊರತಾಗಿ ತಲ್ಲಿಗಿ ಜಮಾತಾಗಲಿ, ತಬಿಗಿಗಳಾಗಲಿ ಉದ್ದೇಶಪೂರ್ವಕವಾಗಿ ಏನೋ ಸಂಚು ರೂಪಿಸಿರುವುದು ಸ್ಪಷ್ಟವಾಗುವುದಿಲ್ಲ. ಇದರ ಹೊರತಾಗಿಯೂ ತಬ್ಲಿಗಿಗಳನ್ನು ಕೊರೋನಾ ಜಿಹಾದಿಗಳನ್ನಾಗಿ ನೋಡಲು ಪ್ರೇರೇಪಿಸುತ್ತಿರುವುದು ಕೋಮು ಸೌಹಾರ್ದವನ್ನು ಕದಡುವ ಹುನ್ನಾರದ ಹೊರತು ಮತ್ತೇನೂ ಅಲ್ಲ. ಇನ್ನು ಮೊನ್ನೆಮೊನ್ನೆಯಷ್ಟೆ ಇದೇ ಕೋಮುನೆಲೆಯಲ್ಲಿ ಇಡೀ ನಾಗರಿಕ ಸಮಾಜವೇ ನಾಚಿಕೆಪಡುವಂಥ ಎರಡು ಘಟನೆಗಳು ಬೆಂಗಳೂರಿನ ಸಾದಿಕ್‌ಪಾಳ್ಯ ಮತ್ತು ಪಾದರಾಯನಪುರದಲ್ಲಿ ನಡೆದವು. ತಮ್ಮ ಜೀವ ಉಳಿಸಲು ಬಂದವರ ಮೇಲೆರಗಿದ ಅಲ್ಲಿನ ಕೆಲ ವಿಧ್ವಂಸಕರು ಅಕ್ಷರಶಃ ಆ ಸ್ಥಳಗಳನ್ನು ರಣಾಂಗಣವಾಗಿಸಿದ್ದರು.

ವೈದ್ಯೋ ನಾರಾಯಣೋ ಹರಿ: ಎಂಬ ಸಾಲು ಅಕ್ಷರಶಃ ಸತ್ಯವಾಗುತ್ತಿರುವ ಸಮಯವಿದು. ಮನುಷ್ಯನನ್ನು ಸಂಕಷ್ಟಗಳಿಂದ ಪಾರು ಮಾಡಬೇಕಾದ ಭಗವಂತನು ಬೀಗ ಜಡಿಸಿಕೊಂಡು ದೇವಾಲಯದ ಒಳಗಿರುವ ಸಂದರ್ಭದಲ್ಲಿ ತನ್ನವರ ಕಾಳಜಿಯನ್ನು ತೊರೆದು ಕೊರೋನಾ ವೈರಸ್‌ನಿಂದ ಜೀವ ಸಂಕುಲವನ್ನು ಉಳಿಸುವ ನಿಟ್ಟಿನಲ್ಲಿ ಹೋರಾಡುತ್ತಿರುವ ವೈದ್ಯರು, ವೈದ್ಯಕೀಯ ಸಿಬ್ಬಂದಿಗಳು, ಪೌರಕಾರ್ಮಿಕರು, ಪೊಲೀಸರು ಜಗತ್ತಿನ ಎಲ್ಲಾ ದೇವರು ಧರ್ಮಗಳ ಆಶಯವನ್ನು ಪಸರಿಸುತ್ತಿದ್ದಾರೆ. (ದೇವರಿಗಾದರೂ ದುಷ್ಟ ಶಿಕ್ಷಣೆ, ಶಿಷ್ಟ ರಕ್ಷಣೆ ಎಂಬ ಮಾನದಂಡವಾದರೂ ಇದೆಯೇನೋ. ಆದರೆ ವೈದ್ಯರಾರು ಆ ಮಾನದಂಡವನ್ನು ಅನುಸರಿಸುತ್ತಿಲ್ಲ) ಅಂತಹ ವೈದ್ಯಕೀಯ ಸಿಬ್ಬಂದಿ ಮೇಲೆ ಕ್ರೂರಿಗಳಂತೆ ಎಗರಿಬಿದ್ದ ಆ ಜನ ಅಕ್ಷರಶಃ ಮೃಗೀಯವಾಗಿ ವರ್ತಿಸಿದ್ದರು. ಇನ್ನು ಸಾಧಿಕ್ ಪಾಳ್ಯದಲ್ಲೂ ಆರೋಗ್ಯ ಮಾಹಿತಿಯನ್ನು ಕಲೆಹಾಕಲು ಹೋದ ಆಶಾ ಕಾರ್ಯಕರ್ತೆಯರ ಮೇಲೆ ಅಲ್ಲಿಯ ಜನರು ದಾಳಿ ಮಾಡಿದ್ದರು. ಮುಸ್ಲಿಮರನ್ನು ಕೊರೋನಾ ವಾಹಕರನ್ನಾಗಿ ಕಾಣುತ್ತಿರುವುದು ಎಷ್ಟು ಅಮಾನವೀಯವೋ, ತಮ್ಮ ಜೀವ ಉಳಿಸಲು ಬಂದ ಜೀವ ರಕ್ಷಕರನ್ನು ಇಷ್ಟು ಅಮಾನುಷವಾಗಿ ನಡೆಸಿಕೊಳ್ಳುತ್ತಿರುವುದು ಅದಕ್ಕಿಂತ ಅಮಾನವೀಯವಾದುದು, ಅನಾಗರಿಕ ವರ್ತನೆ ಹೌದು. ಹೊಟ್ಟೆಗೆ ಅನ್ನ ತಿನ್ನುವ ಯಾರೂ ಮಾಡದ ಇಂತಹ ಅನಾಗರಿಕ ವರ್ತನೆ ತೋರಿದ ಈ ದುಷ್ಕರ್ಮಿಗಳಿಗೆ ಕ್ಷಮೆಯೂ ಇಲ್ಲ. ಹೌದಾದರೂ ಇಂತಹ

ಘಟನೆಗಳಾದರೂ ಸಂಭವಿಸಿದ್ದು ಏಕೆ ಎಂಬ ಪ್ರಶ್ನೆಯೂ ಇದರ ಬೆನ್ನಲ್ಲೇ ಹುಟ್ಟದಿರಲಾರದು. ಮುಸ್ಲಿಂರನ್ನು ಕೊರೋನಾ ವಾಹಕರೆಂಬಂತೆ ಬಿಂಬಿಸುತ್ತಿರುವವರನ್ನು ಬಿಟ್ಟು, ಕೋಮು ವೈರಸ್‌ಗಳನ್ನು ಸೃಷ್ಟಿಸುತ್ತಿರುವ ಮಾಧ್ಯಮಗಳನ್ನು ಬಿಟ್ಟು, ಮಾಹಿತಿ ಕಲೆ ಹಾಕಲು ಬಂದ ಆಶಾಕಾರ್ಯಕರ್ತೆಯರು NRC ಬಗ್ಗೆ ಮಾಹಿತಿ ಕಲೆ ಹಾಕಲು ಬಂದಿದ್ದಾರೆ ಎಂದು ಅಲ್ಲಿಯ ಜನರನ್ನು ದಾರಿ ತಪ್ಪಿಸಿದವರನ್ನು ಬಿಟ್ಟು, ತಮ್ಮ ರಾಜಕೀಯ ಹಿತಾಸಕ್ತಿಗಳಿಗಾಗಿ ಇಂತಹ ಮೇಲಾಟಗಳನ್ನಾಡುವ ರಾಜಕಾರಣಿಗಳನ್ನು ಬಿಟ್ಟು, ಬಹುಶಃ ಈ ಎರಡು ಘಟನೆಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲವೇನೊ ಗೊತ್ತಿಲ್ಲ. ಈ ಸಂದರ್ಭ ನಿಸಾರ್‌ರ ಕವನದ ಸಾಲು ನೆನಪಾಗುತ್ತದೆ. ವೃತ್ತದಲ್ಲಿ ಉನ್ಮತ್ತರಾದ ನಿಮ್ಮ ಕುಡಿತ, ಕುಣಿತ, ಕೂಟಗಳು, ಕೆಣಕಿ ಕುಣಿಕೆ ಎಸೆದಿದ್ದರೂ ಪಂಚೆಂದ್ರಿಯಕ್ಕೆ ಲಗಾಮು ಜಡಿದು ಜಾರದೆ ನಿಮ್ಮತ್ತ ಸಂಯಮವನ್ನೇ ಪೋಷಿಸಿ ಸಾಕುತ್ತಾ ರೇಖೆಯಲ್ಲೇ ದೊಂಬರಾಟ ನಡೆಸುವುದಿದೆ ನೋಡಿ ಅದು ಬಲು ಕಷ್ಟದ ಕೆಲಸ. ಇವತ್ತಿಗೆ ತಾಳ್ಮೆ ಸಂಯಮದ ರೇಖೆಯನ್ನು ದಾಟಿ ವಿಜೃಂಭಿಸುತ್ತಿರುವ ಮಂದಿ ಒಂದು ಕಡೆಯಾದರೆ, ಪ್ರಚೋದನೆಯ ಮೂಲಕ ವಿಕೃತ ಆನಂದ ಪಡೆಯುವವರು ಮತ್ತೊಂದು ಕಡೆ. ಒಟ್ಟಾರೆ ಇವರ ಅಂತಿಮ ಉದ್ದೇಶ ನಾಡಿನುದ್ದಕ್ಕೂ ಹಬ್ಬಿನಿಂತ ಹಿಂದೂ ಮುಸ್ಲಿಂ ಭಾವೈಕ್ಯತೆಯನ್ನು ಕದಡುವುದೇ ಆಗಿದ್ದು, ಇಂಥ ಕಿಡಿಗೇಡಿಗಳನ್ನು ಹಿಂದುವೋ ಮುಸ್ಲಿಂನೋ ಆಗಿ ಗುರುತಿಸುವುದರಲ್ಲಿ ಅರ್ಥವೇ ಇಲ್ಲ ಎಂದೆನಿಸುತ್ತದೆ. ಹಿಂದೂ ಧರ್ಮವಾಗಲಿ ಮುಸ್ಲಿಂ ಧರ್ಮವಾಗಲಿ ಅಥವಾ ಜಗತ್ತಿನ ಯಾವುದೇ ಧರ್ಮಗಳಾಗಲಿ ಹಿಂಸೆ, ಕ್ರೌರ್ಯವನ್ನು ಪ್ರತಿಪಾದಿಸಿಲ್ಲ. ಒಪ್ಪುವುದೂ ಇಲ್ಲ ಕೂಡ. ಒಬ್ಬ ವ್ಯಕ್ತಿ ಹಿಂದುವೋ, ಸಿಖ್, ಮುಸ್ಲಿಂನೋ, ಕ್ರೈಸ್ತ ಧರ್ಮಿಯನೋ ಆಗುವುದು ಆ ಧರ್ಮದ ಮೌಲ್ಯಗಳಿಗೆ ಬದ್ಧನಾದಾಗ ಮಾತ್ರ ಆ ಧರ್ಮದ ತಾತ್ವಿಕತೆಯನ್ನು ಪ್ರಶ್ನಿಸುವ ಅಪಮಾನಿಸುವ ಇಂತಹ ಕಿಡಿಗೇಡಿಗಳನ್ನು ಮನುಕುಲದ ರಕ್ಷಣೆಗಾಗಿ, ಒಳಿತಿಗಾಗಿ, ಶಾಂತಿಗಾಗಿ, ಜನ್ಮತಳೆದ ಧರ್ಮಗಳಡಿಯಲ್ಲಿ ಗುರುತಿಸುವುದು ಎಷ್ಟು ಸೂಕ್ತ. ಸಾವಿರಾರು ಜನರ ಕಷ್ಟಗಳಿಗೆ ಮಿಡಿಯುತ್ತ ಸಾವಿರಾರು ಜನರ ಜೀವ ಉಳಿಸಲು ಹೋರಾಡುತ್ತಿರುವ ಮನುಕುಲದ ರಕ್ಷಣೆಗಾಗಿ ನಿಂತಿರುವ ಅಸಂಖ್ಯ ಮಂದಿ ಎರಡೂ ಧರ್ಮಗಳಲ್ಲಿದ್ದಾರೆ. ಆಯಾ ಧರ್ಮಗಳ ಆಶಯಗಳಿಗೆ ಅನುಗುಣವಾಗಿ ಬದುಕುತ್ತಿರುವ ಇಂತಹವರನ್ನು ಈ ಧರ್ಮಗಳಡಿಯಲ್ಲಿ ಗುರುತಿಸಬಹುದೇ ಹೊರತು, ಜೀವ ತೆಗೆಯಲು ಹೇಸದ ಕಿಡಿಗೇಡಿಗಳನ್ನಲ್ಲ. ಹಳ್ಳಿಗಾಡಿನ ಮನೆ ಮನೆಗಳಿಗೂ ಕೋಮು ವೈರಸ್ಸನ್ನು ತೀವ್ರ ವೇಗದಲ್ಲಿ ಹಬ್ಬಿಸುತ್ತಿರುವ ಇವರು ಕೊರೋನಾ ವೈರಸ್‌ಗಿಂತ ಅಪಾಯಕಾರಿಗಳು ಹೌದು.

ಮನುಕುಲವೇ ಸಂಕಷ್ಟ ಎದುರಿಸುತ್ತಿರುವ ಇಂತಹ ಸಂದಿಗ್ಧ ಸಮಯದಲ್ಲಿ ಕೋಮುದ್ವೇಷಕ್ಕಿಂತ ಗಂಭೀರವಾದ ಸಮಸ್ಯೆಗಳು ನಮ್ಮೊಡನಿವೆ. ಮೂರು ಹೊತ್ತು ಹೊಟ್ಟೆಗಿರುವ ಜನರು ತಮ್ಮ ಬದುಕಿನ ಲಯ ತಪ್ಪಿಹೋಗಿರುವ ನಿಟ್ಟಿನಲ್ಲಿ ಪರಿತಪಿಸುತ್ತಿದ್ದಾರೆ. ಸದಾ ದುಡಿತದ ಒತ್ತಡದಲ್ಲಿದ್ದ ಮನೆ ಮಂದಿಯ ಜೊತೆಗೆ ಮುಕ್ತವಾಗಿ ಮಾತನಾಡಲು ಬೆರೆಯಲು ಅವಕಾಶ ಇಲ್ಲದವರಿಗೆ ದೊರೆತ ಈ ಅವಕಾಶವು ಎಷ್ಟು

ಸದುಪಯೋಗವಾಗಿದೆಯೋ ಗೊತ್ತಿಲ್ಲ? ತಾನು ತನ್ನದು ಎಂಬ ನಿರ್ಬಂಧದ ಗೋಡೆ ಕಟ್ಟಿಕೊಳ್ಳುತ್ತಲೇ ಬಂದ ಆತ ಅದನ್ನು ಕೆಡವಿ ತನ್ನನ್ನು, ತನ್ನವರನ್ನು, ತನ್ನ ಸುತ್ತಲಿನವರನ್ನು ಅರಿಯುವ ನಿಟ್ಟಿನಲ್ಲಿ ಪ್ರಯತ್ನಿಸಿದ್ದರೆ ಕಡುಕಷ್ಟದಲ್ಲಿ ನಿಂತವರಿಗೆ ತನ್ನ ಕೈಲಾದಷ್ಟು ಪ್ರೀತಿ, ಅನುಕಂಪ ಕರುಣೆ ತೋರುವ ಕಾಳಜಿ ಮರೆಯದಿದ್ದರೆ ತಾನು ತನ್ನದು ಎಂಬ ನಿರ್ಬಂಧದ ಗೋಡೆಯನ್ನು ಕೆಡವಿ, ಪ್ರೀತಿ ಬಾಂಧವ್ಯದ ಸೇತುವೆಯನ್ನು ಕಟ್ಟಿಕೊಳ್ಳದಿದ್ದರೆ ಉಳಿಗಾಲವಿಲ್ಲ. ಇದಿಷ್ಟು ಭವ್ಯ ಭಾರತದ ಕಥೆಯಾದರೆ ಬೆವರಿನ ಭಾರತದ ಕಥೆ ಬೇರೆಯದ್ದೇ ಇದೆ. ವಿಮಾನದಿಂದ ಹಾರಿ ಬಂದವರಿಂದ ಅಕ್ಷರಶಃ ಬೀದಿ ಪಾಲಾಗಿರುವ ಕೂಲಿ ಕಾರ್ಮಿಕರ ಬದುಕು ಹಸಿವಿನಿಂದ ಪರಿತಪಿಸುತ್ತಿದೆ. ಹಸಿವು ಮತ್ತು ಆರೋಗ್ಯ ಯಾವತ್ತಿಗೂ ಭಾರತದ ಪ್ರಮುಖ ಸಮಸ್ಯೆಗಳೇ ಹೌದು. ಕೊರೋನಾ ಕಾಲದಲ್ಲಿ ಮತ್ತಷ್ಟು ಅನಾವರಣಗೊಳ್ಳುತ್ತಿದೆಯಷ್ಟೆ. ಜೀವನಕ್ಕಿಂತ ಜೀವವೇ ಮುಖ್ಯ ಎಂದು ಸಾರಿದ ಸರ್ಕಾರ ಕೊರೊನಾ ವೈರಸ್‌ನಿಂದ ಲಾಕ್‌ಡೌನ್‌ನಂತಹ ನಿರ್ಧಾರ ತಳೆದದ್ದು ಸೂಕ್ತವಾದುದೇನೋ ಹೌದು. ಆದರೆ ಹಸಿವಿನ ವೈರಸ್ ಇಂತಹ ಕೂಲಿ ಕಾರ್ಮಿಕರನ್ನು ಕೊಲ್ಲುವುದಾದರೆ ಲಾಕ್‌ಡೌನ್ ಯಶಸ್ವಿಯಾಗುವುದಾದರೂ ಹೇಗೆ. ವೈರಸ್ ಪೀಡಿತ ವ್ಯವಸ್ಥೆ ಇನ್ನಾದರೂ ಬದಲಾಗಿ ಆರೋಗ್ಯ, ಹಸಿವಿನ ನಿಟ್ಟಿನಲ್ಲಿ ಭಾರತವನ್ನು ಸದೃಢವನ್ನಾಗಿ ಕಟ್ಟಬೇಕಿದೆ. ಕೊರೋನಾ, ಕೊರೋನಾದಿಂದ ಸೃಷ್ಟಿಯಾಗಿರುವ ಅಸಂಖ್ಯ ಸಮಸ್ಯೆಗಳು ನಮ್ಮೆಲ್ಲರ ಆದ್ಯತೆಗಳಾಗಬೇಕು. ಕೊರೋನಾ ಕೇವಲ ದೈಹಿಕವಾಗಿ ಮಾತ್ರ ಬಾಧಿಸುತ್ತಿಲ್ಲ. ಮಾನಸಿಕವಾಗಿಯೂ ಮನುಷ್ಯನನ್ನು ಖಿನ್ನವಾಗಿಸುತ್ತಿದೆ. ದುರ್ಬಲವನ್ನಾಗಿಸುತ್ತಿದೆ. ಈ ನಿಟ್ಟಿನಲ್ಲಿ ಇಡೀ ಮನುಕುಲವೇ ಪ್ರಬಲವಾಗಬೇಕಿದೆ. ದೇಶ-ಭಾಷೆ, ಜಾತಿ-ಧರ್ಮಗಳಾಚೆ ನಿಂತು ಒಗ್ಗಟ್ಟಾಗಿ ಹೋರಾಡಿದಾಗ ಮಾತ್ರ ಕೊಲೆಪಾತಕ ವೈರಸ್‌ನ್ನು ಜಗತ್ತಿನಿಂದ ದೂರಾಗಿಸಲು ಸಾಧ್ಯ. ಮನುಷ್ಯ ಈ ನಿಟ್ಟಿನಲ್ಲಿ ಯಶಸ್ವಿಯಾಗಿ ನಿಂತ ಕ್ಷಣ ಈ ಜಗದಿಂದ ದೂರಾಗಿ ಹೋಗುವ ಮೊದಲು ಕೊರೊನಾದ ಕಿವಿಮಾತು ಹೀಗಿರಬಹುದೇನೋ. ನಿಮ್ಮ ಮನುಷ್ಯ ಸಂಕುಲವನ್ನು ನರಳಾಡಿಸಿ ನಿರ್ನಾಮ ಮಾಡಲು ನನ್ನ ವೈರಸ್ ಸಂಕುಲವೇ ಇದೆ. ಹಾಗಾಗಿ ನಿಮ್ಮನ್ನು ನೀವೆ ದ್ವೇಷಿಸಿಕೊಂಡು ಕಾದು ಕೊಂದುಕೊಳ್ಳುವ ನಿಟ್ಟಿನಲ್ಲಿ ಮದ್ದು, ಗುಂಡು, ಅಣ್ವಸ್ತ್ರಗಳನ್ನು ಸಂಗ್ರಹಿಸಿಕೊಳ್ಳುವ ಬದಲು ನಿಮ್ಮ ನಿಜವಾದ ಶತ್ರುಗಳಾದ ನಮ್ಮನ್ನು ಎದುರಿಸುವ ನಿಟ್ಟಿನಲ್ಲಿ ನಿಮ್ಮ ಶಕ್ತಿ(ವೈದ್ಯಕೀಯ ಸೌಲಭ್ಯಗಳು)ಯನ್ನು ಹೆಚ್ಚಿಸಿಕೊಂಡು ಬೀಗಿ ಇಲ್ಲವಾದರೆ ಮನುಕುಲದ ನಾಶ ಖಚಿತವೆಂದು.

**[ಪ್ರಜಾಪ್ರಗತಿ- ೨೦೨೦]**

**ಅಭಿವ್ಯಕ್ತಿ ಸ್ವಾತಂತ್ರ್ಯದ ಗ್ರಹಿಕೆ**

**ಅರವಿಂದ. ಇ**

ವಾಲಿಯನ್ನು ಕೊಂದ ರಾಮ ನ್ಯಾಯವಂತನೆ?

ಶೂದ್ರತಪಸ್ವಿಯನ್ನು ಕೊಂದ ರಾಮ ಧರ್ಮರಕ್ಷಕನೆ?

ಲಂಕಾ ದಹನದ ರಾಮ ಲೋಕಪೂಜ್ಯನೆ?

ಸೀತೆಯನ್ನು ಅರಣ್ಯಕ್ಕಟ್ಟಿದ ರಾಮ ಪುರುಷೋತ್ತಮನೆ?

ರಾಮಭಜನೆಯಿಂದ ಮೋಕ್ಷ ದೊರೆಯುವುದೇ?

ನನ್ನ ನಾಲ್ಕನೇ ಸೆಮಿಸ್ಟರ್‌ನ ಕಿರುಪ್ರಬಂಧ ರಚಿಸಲು ಭಾರತೀಯರಿಗೆ ಭಗವಂತರೆಷ್ಟು' ಎನ್ನುವ ಕೃತಿಯನ್ನು ಓದುತ್ತಿದ್ದೆ. ಕಾಕತಾಳೀಯವೆಂಬಂತೆ ಅಂದೇ ಶ್ರೀರಾಮನವಮಿಯೂ ಕೂಡ ಬಂದಿತ್ತು. ಈ ಸಂದರ್ಭದಲ್ಲಿ ಈ ಪ್ರಶ್ನೆಗಳನ್ನು ನಾನು ನನ್ನ ವಾಟ್ಸಾಪ್ ಸ್ಟೇಟಸ್ ಹಾಕಿಕೊಂಡಿದ್ದೆ. ಇದಕ್ಕೆ ಗೆಳೆಯನೊಬ್ಬ 'ಯಾವುದಾದರೂ ಮಸೀದಿಗೆ ಹೋಗಿ ಮುಂಜಿ ಮಾಡಿಸಿಕೊಂಡು ಜೀವನ ಮಾಡು, ನೀನು ಹಿಂದೂ ಧರ್ಮದಲ್ಲಿ ಇರುವುದಕ್ಕೆ ನಾಲಾಯಕ್ಕು ಎಂದು ಪ್ರತಿಕ್ರಿಯಿಸಿದ್ದ. ಅಷ್ಟೇ ಅಲ್ಲದೆ, ಇನ್ನೊಂದು ಬಾರಿ ನನ್ನ ಧರ್ಮದ ಬಗ್ಗೆ ಪೋಸ್ಟ್ ಹಾಕಬೇಡ, ಹಾಕಿದ್ರೆ ಹುಡುಕಿಕೊಂಡು ಬಂದು ಹೊಡಿತೀನಿ, ನಿಮ್ಮಂತ ನನ್ನ ಮಕ್ಕಳು ಇರುವುದರಿಂದಲೇ ನನ್ನ ದೇಶ ಹಿಂಗೆ ಇರೋದು, ನಾನೊಬ್ಬ ಹಿಂದೂ ಧರ್ಮದಲ್ಲಿ ಹುಟ್ಟುವುದಕ್ಕೂ, ಹಿಂದೂ ಎಂದು ಹೇಳಿಕೊಳ್ಳುವುದಕ್ಕೂ ಧಮ್ ಬೇಕಲೇ ಗುಬಾಲ್ಟ್' ಎಂದೂ ಪ್ರತಿಕ್ರಿಯಿಸುತ್ತಾ ಬೆದರಿಕೆ ಕೂಡಾ ಹಾಕಿದ್ದ. ಇದು ಧರ್ಮರಕ್ಷಕರು ಎಂದು ಸ್ವಯಂಘೋಷಿಸಿಕೊಂಡಿರುವವರ ಧರ್ಮರಕ್ಷಣೆಯ ವಿಧಾನ ಹಾಗೂ ಧರ್ಮದ ಭಾಷೆ. ಇಷ್ಟಕ್ಕೇ ಇವರ ಒಣ ಆರ್ಭಟ ನಿಲ್ಲದೇ ಇನ್ನೂ ಅಸಭ್ಯವಾಗಿ, ಅಶ್ಲೀಲವಾಗಿ ಮುಂದುವರೆಯುತ್ತದೆ.

ಈ ಪ್ರತಿಕ್ರಿಯೆಯಿಂದ ದಂಗಾದ ನಾನು ಏನಾದರೂ ತಪ್ಪು ಮಾಹಿತಿ ಹಾಕಿದ್ದೆನೆ ಅಥವಾ ಶ್ರೀರಾಮನಿಗೇನಾದರೂ ಅವಹೇಳನ ಮಾಡಿದ್ದೇನೆ, ಇಲ್ಲ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತರುವ ಅಂಶವೇನಾದರೂ ಇದೆಯೇ ಎಂದು ಪ್ರಶ್ನಿಸಿಕೊಂಡೆ. ಅಲ್ಲದೆ, ಯಾವ ಕಾರಣಕ್ಕಾಗಿ ಆತ ಈ ರೀತಿ ಪ್ರತಿಕ್ರಿಯಿಸಿದ ಎಂದು ತಿಳಿದುಕೊಳ್ಳುವುದೇ ಕಷ್ಟವಾಯಿತು.

ನಾನು ಕೇಳಿದ ಪ್ರಶ್ನೆಯಲ್ಲಿ ಹುಡುಕಿದರೂ ಹಿಂದೂ ಧರ್ಮಕ್ಕೆ ಅವಹೇಳನವಾಗಿರುವ ಯಾವುದೇ ಒಂದು ಅಂಶ ಇಲ್ಲ. ಇಲ್ಲಿ ಧರ್ಮರಕ್ಷಕರಿಗೆ ಪ್ರಶ್ನೆ ಯಾವುದು? ಅವಹೇಳನಕಾರಿ ಸಂಗತಿ ಯಾವುದು ಎಂಬ ವ್ಯತ್ಯಾಸ ಕೂಡ ತಿಳಿಯದಷ್ಟು ಅಮಾಯಕತನವೇ ಅಥವಾ ಧರ್ಮದ ಬಗೆಗಿನ ಅಂಧಭಕ್ತಿಯೇ? ಯಾವುದು ಅವರ ಮನಸ್ಸನ್ನು ಇಷ್ಟು ಕಲುಷಿತಗೊಳಿಸಿರುವುದು ಎಂದು ಚಿಂತಿತನಾದೆ. ಅವನ ಪ್ರತಿಕ್ರಿಯೆಗೆ

ಮರು ಉತ್ತರ ನೀಡಿದರೆ ಇನ್ನೆಂಥ ನುಡಿಮುತ್ತುಗಳು ಉದುರುವವೋ ಎಂದು ಭಯಗೊಂಡು ಅಲ್ಲಿಗೆ ನಿಲ್ಲಿಸಿದೆ.

ನನ್ನ ಗೆಳೆಯನ ಈ ಪ್ರತಿಕ್ರಿಯೆಗೆ ಸಗಣಿಯ ಜೊತೆ ಸರಸವಾಡುವುದಕ್ಕಿಂತ ಗಂಧದ ಜೊತೆ ಗುದ್ದಾಡುವುದೇ ಲೇಸು ಎಂಬ ಕುವೆಂಪು ಅವರ ವಾಣಿಯಂತೆ ಕಿರುನಗೆಯನ್ನಷ್ಟೇ ಸೂಸಿ ಸುಮ್ಮನಾದೆ. ಏಕೆಂದರೆ ಇದು ನನಗೆ ಕೇವಲ ಆತನೊಬ್ಬನ ಪ್ರತಿಕ್ರಿಯೆಯಾಗಿರಲಿಲ್ಲ. ಇನ್ನೂ ಹಲವರು ಬೇರೆ ಬೇರೆ ವಿಧದಲ್ಲಿ ಪ್ರತಿಕ್ರಿಯಿಸಿ ಹಾಗೆ ಪ್ರಶ್ನಿಸಿರುವುದೇ ತಪ್ಪು ಎಂಬ ತೀರ್ಪನ್ನೇ ನೀಡಿದ್ದರು. ಅಷ್ಟೇ ಅಲ್ಲದೆ ಶ್ರೀರಾಮ ಮಾಡಿದ್ದೇ ಸರಿ ಎಂಬ ಷರಾ ಕೂಡ ಹಾಕಿದ್ದರು.

ಇಲ್ಲಿ ಯಾವುದೇ ಧರ್ಮದ ಬಗ್ಗೆ ಪ್ರಶ್ನಿಸುವುದಿರಲಿ ಅದರ ಬಗ್ಗೆ ಚಕಾರವೆತ್ತುವುದೂ ಕೂಡ ಅಪಾಯಕಾರಿಯೇ ಎನ್ನಿಸಿತು. ಇದು ಧರ್ಮಕ್ಕೆ ಮಾತ್ರ ಸೀಮಿತವಲ್ಲ. ಆಳುವ ಪ್ರಭುತ್ವವನ್ನು ಪ್ರಶ್ನಿಸಿದರೂ ಕೂಡ ಇಂತಹ ಬೆದರಿಕೆ ಉತ್ತರಗಳೇ ನಮಗೆ ಸಿಗುವುದು. ಭಾರತ ಬೃಹತ್ ಪ್ರಜಾಪ್ರಭುತ್ವ ದೇಶ. ಆದರೆ ಇಲ್ಲಿ ಪ್ರಜೆಗಳ ಮತಕ್ಕೆ ನೆಲೆಯೂ ಇಲ್ಲ, ಬೆಲೆಯೂ ಇಲ್ಲ. ವೈಚಾರಿಕವಾಗಿ ಪ್ರಶ್ನಿಸುವಾಗ, ಪ್ರಭುತ್ವವನ್ನು ಪ್ರಶ್ನಿಸುವಾಗ ಬರುವ ಇಂತಹ ಉತ್ತರಗಳು ಪ್ರಶ್ನಿಸುವವರ ಪ್ರಶ್ನಿಸುವ ಧ್ವನಿಯನ್ನೂ ಹುದುಗಿಸುತ್ತವೆ ಎಂದಾಗ ನಾವು ಎಂತಹ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ ಎಂದು ಆತಂಕವಾಗುತ್ತದೆ. ನಾವಿರುವ ಸಮಾಜ ಸಹಿಷ್ಣು ಸಮಾಜವಾ ಎನಿಸುತ್ತದೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಎಲ್ಲರಿಗೂ ಅಭಿಪ್ರಾಯ, ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಇರಬೇಕಲ್ಲವೇ? ಈ ಅಭಿವ್ಯಕ್ತಿ ಸ್ವಾತಂತ್ರ್ಯವೇ ಇಲ್ಲವಾದಾಗ ಪ್ರಭುಪ್ರಭುತ್ವಕ್ಕಿರುವ ನೆಲೆಯಾದರೂ ಯಾವುದು?

ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವಾಗ ಅಷ್ಟಕ್ಕೂ ಇವರು ಈ ರೀತಿ ವರ್ತಿಸುವುದಾದರೂ ಏಕೆ? ಅವರ ಈ ವರ್ತನೆಗೆ ಕಾರಣವೇನು? ಈ ರೀತಿ ತಯಾರಾಗಲು ಅವರ ಮೇಲೆ ಬೀರಿದ ಪ್ರಭಾವವಾದರೂ ಯಾವುದು? ಯಾವ ಕಾರಣಕ್ಕಾಗಿ, ಯಾವ ದೃಷ್ಟಿಕೋನದಲ್ಲಿ ಹೀಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಪ್ರಶ್ನಿಸುವ ಧ್ವನಿಗಳನ್ನು ಹತ್ತಿಕ್ಕುತ್ತಿದ್ದಾರೆ ಎಂಬ ಪ್ರಶ್ನೆಗಳು ಏಳುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಸವಾಲಿನ ಕೆಲಸವೇ.

ಪ್ರಶ್ನಿಸದೇ ಏನನ್ನೂ ಒಪ್ಪಬೇಡ, ಯಾರೂ ಪ್ರಶ್ನಾತೀತರಲ್ಲ, ಯಾವ ಧರ್ಮ ಸಿದ್ಧಾಂತವೂ ಪ್ರಶ್ನಾತೀತವಲ್ಲ. ಸಾಮಾಜಿಕ ಸ್ವಾಸ್ಥ್ಯ ಮುಖ್ಯವಾದಾಗ ಇವರು ಎಲ್ಲವನ್ನೂ ಕುರುಡು ಕುರುಡಾಗಿಯೇ ನಂಬುತ್ತಿದ್ದಾರೆ ಎನಿಸುತ್ತದೆ. ಅಷ್ಟೇ ಅಲ್ಲದೆ ಯಾವುದೋ ಒಂದು ಮತದ ಸನ್ನಿಗೋ ಅಥವಾ ಸಿದ್ದಾಂತದ ಕಾರ್ಯಕರ್ತರಾದಾಗ ಸಹಜವಾಗಿಯೇ ವಿರುದ್ಧವಾದ ಅಭಿಪ್ರಾಯಗಳನ್ನು ಒಪ್ಪುವುದಕ್ಕೆ ಸಿದ್ಧರಿರುವುದಿಲ್ಲ. ಒಂದು ಸಿದ್ಧಾಂತ, ಮೃತ, ರಾಜಕೀಯ ಪಕ್ಷದ ಕಾರ್ಯಕರ್ತರಾದಾಗ, ನಿರ್ದಿಷ್ಟವಾದ ಪೂರ್ವಾಗ್ರಹಕ್ಕೆ ಒಳಗಾದಾಗ ನಾವು ಏನು ಮಾಡುತ್ತಿದ್ದೇವೆ ಎಂಬುದು ನಮಗೆ ಅರಿವೇ ಇರುವುದಿಲ್ಲ. ಪೂರ್ವಾಗ್ರಹಪೀಡಿತರಾದಾಗ, ಸಿದ್ಧಾಂತಕ್ಕೆ ಕಟಿಬದ್ಧರಾದಾಗ ಆಲೋಚನಾ ಹೀನರಾಗುತ್ತೇವೆ. ಹೀಗಿರುವಾಗ ನಾವು ಪ್ರಶ್ನಿಸುವ ಮನೋಭಾವವೇ ಕಳೆದುಕೊಳ್ಳುತ್ತೇವೆ. ಇವೆಲ್ಲವುಗಳಿಗಿಂತ ಮಾನವೀಯತೆಯೇ ಅಂತಿಮ ಸತ್ಯ. ಮಾನವೀಯ ಗುಣವನ್ನು

ಮೈಗೂಡಿಸಿಕೊಳ್ಳದಿದ್ದರೆ ಸಿದ್ಧಾಂತದ ಅಥವಾ ಪಕ್ಷದ ಕಾರ್ಯಕರ್ತರಾಗಿಯೇ ಉಳಿದುಬಿಡುವ ಸಾಧ್ಯತೆಗಳು ಹೆಚ್ಚು. ಇದು ನಮ್ಮನ್ನು ಅಮಾನವೀಯರನ್ನಾಗಿ ಮಾಡುತ್ತದೆ. ಆದ್ದರಿಂದ ಸಿದ್ಧಾಂತದ ಒಣ ಪ್ರತಿಪಾದಕರಾಗದೆ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಮಾನವೀಯ ಗುಣ ಬೆಳೆಸಿಕೊಳ್ಳುವುದು ಅಗತ್ಯ.

ಕಾಲ್ಪನಿಕ ಜಗತ್ತು ಹಾಗೂ ಸಂಗತಿಗಳು ಪ್ರಬಲವಾದಾಗ ವಾಸ್ತವ ಜಗತ್ತು ಹಾಗೂ ವಾಸ್ತವಿಕ ಸಂಗತಿಗಳು ನಮಗೆ ಅರಿವಿಗೆ ಬರುವುದಿಲ್ಲ. ಯಾವುದೋ ಒಂದು ವ್ಯವಸ್ಥೆ ಇಲ್ಲವೇ ಪ್ರಭುತ್ವ ಜನರನ್ನು ಯೋಚಿಸದ ಹಾಗೆ ಮಾಡಿ, ಅವರನ್ನು ತಮ್ಮ ಸಿದ್ಧಾಂತದ ಅಥವಾ ಧರ್ಮದ, ಅಭಿಪ್ರಾಯದ ಗ್ರಾಹಕರನ್ನಾಗಿ ಮಾಡಿಕೊಳ್ಳುತ್ತವೆ, ನಾವು ಗ್ರಾಹಕರಾದಾಗ ಅವರು ನೀಡಿದ್ದನ್ನಷ್ಟೇ ಸ್ವೀಕರಿಸಬೇಕು. ಕೆಡುಕಿಗೆ ರೆಕ್ಕೆಗಳಿವೆ. ಒಳಿತಿಗೆ ಇರುವೆಯ ವೇಗ ಕೆಡುಕು ಬಹಳ ಬೇಗ ಜನರನ್ನು ತಲುಪಿ ಒಳಿತಿನ ಜಾಗವನ್ನು ಆಕ್ರಮಿಸಿಕೊಂಡಿರುತ್ತದೆ. ನಿಧಾನವಾದ ಒಳಿತಿನಿಂದ ಇಂತಹ ಸ್ಥಿತಿಗೆ ಕಾರಣವಾಗಿರಲೂಬಹುದು. ಮನುಷ್ಯ ವಾಸ್ತವಿಕ ಲೋಕವನ್ನು ಸುಳ್ಳು ಎಂದು ಭಾವಿಸಿ, ಕಾಲ್ಪನಿಕ ಲೋಕವನ್ನೇ ನಿಜವೆಂದು ಭ್ರಮಸಿ ಬದುಕುತ್ತಿರುತ್ತಾನೆ. ಇದರಿಂದ ಅವನು ಮತ್ತೊಬ್ಬರ ಧ್ವನಿ ಹತ್ತಿಕ್ಕುವ ಪ್ರಯತ್ನ ನಡೆಸುತ್ತಿರಬಹುದು.

ಧರ್ಮ ಎಂದರೆ ಕೇವಲ ಹಿಂದೂ, ಕ್ರೈಸ್ತ, ಇಸ್ಲಾಂ ಅಲ್ಲ. ಇವು ಮತಗಳೇ ಹೊರತು ಧರ್ಮಗಳಲ್ಲ ಎಂಬುದು ತಿಳಿಯಬೇಕಾಗುತ್ತದೆ. ಧರ್ಮ ಎಂದರೆ ನಿಯಮ, ಪುಣ್ಯ, ಕರ್ತವ್ಯ, ಗುಣ, ನ್ಯಾಯ, ನಿಷ್ಠೆ, ದಯೆ, ರೀತಿ ನೆರವಿನ ಗುಣ, ಸಹಾಯ ಮಾಡುವ ಮನಸ್ಥಿತಿ ಎಂಬುದನ್ನು ಅರಿಯಬೇಕಿದೆ.ಸಾಕ್ರಟಿಸ್ ಹೇಳುವಂತೆ ಯಾವ ವಿಚಾರವನ್ನು ಒಬ್ಬ ವ್ಯಕ್ತಿಯಲ್ಲಿ ಹೊರಗಿನಿಂದ ತುರುಕಲು ಸಾಧ್ಯವಿಲ್ಲ. ಅದು ಅಂತರಾಳದಿಂದಲೇ ಬರಬೇಕು. ಪ್ರತಿಯೊಂದರ ಅರಿವು ಬಯಸುವುದು ಮನುಷ್ಯನ ಮೂಲಭೂತ ಗುಣವಾಗಬೇಕು.

ಸಮಾಜವಾದಿ ಮಾಸಿಕ 'ಹೊಸಮನುಷ್ಯ'ದ 'ಯುವಲಹರಿ' ಅಂಕಣದಲ್ಲಿ ೨೦೧೯ರ ಮೇ ಸಂಚಿಕೆಯಲ್ಲಿ ಪ್ರಕಟ.

**ಪಂಪನ ಪದ್ಯವೊಂದರ ಎರಡು ನೋಟ ಕ್ರಮಗಳು: ಕುಂತಿಯೆಂಬ ಕನ್ಯೆ**

**- ಶ್ರೀಧರ, ಆರ್. ಎ.**

ಸಾಹಿತ್ಯ ಪಠ್ಯವೊಂದು ತನ್ನ ಅರ್ಥ ಮತ್ತು ಗಂಭೀರತೆಯನ್ನು ದೇಶ-ಕಾಲಕ್ಕೆ ಅನುಗುಣವಾಗಿ ಸೃಜನಶೀಲ ಓದುಗರಿಂದ ಬದಲಾಯಿಸಿಕೊಳ್ಳುತ್ತಲೇ ವರ್ತಮಾನಕ್ಕೆ ಮುಖಾಮುಖಿಯಾಗುತ್ತದೆ. ಈ ನಿಟ್ಟಿನಲ್ಲಿ ಪಂಪನನ್ನು ನಾವು ಹತ್ತನೇ ಶತಮಾನದಲ್ಲಿ ಕಳೆದುಕೊಂಡಿದ್ದರೂ, ಈತನ ಅಭ್ಯಾಸದ ಅವಶ್ಯಕತೆ ಇಂದಿಗೂ ಇದೆ. ಈತನ ಮಹತ್ವದ ಕೃತಿಯಾದ 'ಪಂಪ ಭಾರತಂ' (ವಿಕ್ರಮಾರ್ಜುನ ವಿಜಯಂ) ಇಂದಿಗೂ ತನ್ನ ಅರ್ಥ ಸಾಧ್ಯತೆಗಳನ್ನು ಹಿಗ್ಗಿಸಿಕೊಳ್ಳುತ್ತಲೇ ವರ್ತಮಾನಕ್ಕೆ ಮುಖಾಮುಖಿಯಾಗಿ ಸಾಗಿಬಂದಿರುವ ಕೃತಿ. ಈ ಲೇಖನ ಕುಂತಿಯೆಂಬ ಕನ್ಯ ಕೈಗೊಂಡ ಯೋಜನೆಯ ಸುತ್ತ ಸುತ್ತುವರೆದಿದೆ. ಅದಕ್ಕೆ ನಿದರ್ಶನವೆಂಬಂತೆ ಈ ಕೆಳಗಿನ ಪದ್ಯವನ್ನು ನೋಡಬಹುದು.

ಕಂ|| ಬಂದು ಸುರನದಿಯ ನೀರೊಳ್

ಮಿಂದಿನನಂ ನೋಡಿ ನಿನ್ನ ದೊರೆಯನೆ ಮಗನ |

ಕ್ಕೆಂದಾಹ್ವಾನಂಗೆಯ್ಯಲೊ

ಡಂ ದಲ್ ಧರೆಗಿದನೆಂದು ದಶತಕಿರಣಂ ||

ಪದ್ಯದ ಪದಾರ್ಥವನ್ನು ಡಿ.ಎಲ್.ಎನ್ ಹೀಗೆ ಕಟ್ಟಿಕೊಟ್ಟಿದ್ದಾರೆ.

ಬಂದು, ಸುರನದಿಯ ನೀರೊಳ್ ಮಿಂದು-ಗಂಗಾನದಿಯ ನೀರಿನಲ್ಲಿ ಸ್ನಾನಮಾಡಿ, ಇನನಂ ನೋಡಿ-ಸೂರ್ಯನನ್ನು ನೋಡಿ, ನಿನ್ನ ದೊರೆಯನೆ-ನಿನಗೆ ಸಾಟಿಯಾಗಿರುವವನೇ, ಮಗನಕ್ಕೆ-ಮಗನಾಗಲಿ, ಎಂದು, ಆಹ್ವಾನಂಗೆಯ್ಯಲೊಡಂ- ಆಹ್ವಾನ ಮಾಡಿದಕೂಡಲೇ, ದಲ್-ನಿಜವಾಗಿಯೂ ದಶತಕಿರಣಂ-ಸಹಸ್ರ ಕಿರಣನಾದ ಸೂರ್ಯನು, ಅಂದು, ಧರೆಗಿದು-ಭೂಮಿಗೆ ಅವತರಿಸಿದನು. (ಪಂಪ ಭಾರತದೀಪಿಕೆ .ಡಿ.ಎಲ್.ಎನ್.ಪ್ರಥಮಾಶ್ವಾಸ. ಪದ್ಯ ೯೧)

ಕುಂತಿ ಕರ್ಣನ ಜನನಕ್ಕೆ ಉತ್ಸಾಹ ಭರಿತಳಾಗಿ ಗಂಗಾ ನದಿಯ ತಟಕ್ಕೆ ಬಂದಿರುವುದನ್ನು ಈ ಪದ್ಯ ತಿಳಿಸುತ್ತದೆ. ಓರ್ವ ಬಲಶಾಲಿ ಪುತ್ರನ ಜನನಕ್ಕೆ ಸೂರ್ಯನಿಗೆ ಆಮಂತ್ರಣ ನೀಡುವ ಪದ್ಯವಿದು. ಆದರೆ ಕರ್ಣನ ಈ ಜನನದಿಂದ ಓದುಗರಿಗೆ ಈ ಪದ್ಯ ಮುಂದಾಲೋಚನೆಯನ್ನು ಮಾಡಿಸದೇ ಇರಲಾರದು. ಅಂದರೆ ಮುಂದೆ ನಡೆಯಲಿರುವ ಮಹಾಭಾರತದ ಯುದ್ಧದಲ್ಲಿ ಅಣ್ಣ-ತಮ್ಮ (ಕರ್ಣ-ಅರ್ಜುನ)ನ ನಡುವೆ

ಶೌರ್ಯ-ಪರಾಕ್ರಮ, ಕರುಣೆ, ಪ್ರತಿಷ್ಠೆಗಳನ್ನು ಪ್ರದರ್ಶಿಸುತ್ತಾ ಕದನ ಮಾಡಿಸಲು ಓರ್ವ ಬಲಶಾಲಿಯ ಜನನಕ್ಕೆ ನಾಂದಿಹಾಡುತ್ತಿದೆ ಎಂಬಂತೆ ಭಾಸವಾಗುತ್ತದೆ. ಅಲ್ಲದೆ ಮಾನಕ್ಕೆ ಅಂಜಿ ಹೆತ್ತ ಮಗುವನ್ನು ಕಳೆದುಕೊಳ್ಳುವ ಕುಂತಿ: ಮುಂದೊಂದು ದಿನ ತನ್ನ ಐದು ಜನ ಮಕ್ಕಳ ಕ್ಷೇಮಕ್ಕಾಗಿ, ಕಳೆದುಕೊಂಡ ಮಗನಿಂದ (ಕರ್ಣ) 'ತೊಟ್ಟ ಬಾಣ ತೊಡದಿರು ಮಗನೇ' ಎಂಬ ಪ್ರಮಾಣವನ್ನು ಸ್ವೀಕರಿಸಲು ಸಜ್ಜಾಗುತ್ತಿದೆಯೇನೊ ಅನಿಸುತ್ತದೆ. ಕುಂತಿ ತನ್ನ ಮಗನ ಬಗ್ಗೆ ಯಾವ ಪೂರ್ವಗ್ರಹ ಕಲ್ಪನೆಗಳನ್ನು ಹೊಂದಿಲ್ಲದ ಸಂದರ್ಭವಿದು. ಆದರೆ ಈ ಪದ್ಯ ಕೊಡುವ ಅರ್ಥವೇ ಬೇರೆ. ಅದು ಇಂತಿದೆ.

ಇಲ್ಲಿಯ ಸಾಲನ್ನು ಗಮನಿಸಿ 'ಬಂದು ಸುರನದಿಯ ನೀರೊಳ್ ಮಿಂದು' ಅಂದರೆ ಕುಂತಿ ಗಂಗಾನದಿಯ ನೀರಿನಲ್ಲಿ ಸ್ನಾನಮಾಡಿ ಸೂರ್ಯನನ್ನು ಆಹ್ವಾನಿಸುತ್ತಾಳೆ. ಆಕೆಗೆ ಶುಭ ಕಾರ್ಯಕ್ಕೆ ನೀರಿನಲ್ಲಿ ಸ್ನಾನ ಮಾಡಿ ತೊಡಗಬೇಕೆಂಬುದಿದೆ. ಅದು ಆಕೆಯ ಜಾಣತನ. ಆದರೆ, ಅದರ ನಂತರದ ಪರಿಣಾಮ ಹೇಗಿರುತ್ತೇ ಎಂಬುದು ತಿಳಿಯದ ದಡ್ಡತನವೂ ಇದೆ. ಇಲ್ಲಿ ಕುಂತಿಗೆ ದುರ್ವಾಸಮುನಿಯ ಮಂತ್ರವೊಂದನ್ನು ಪರೀಕ್ಷಿಸುವ ಕುತೂಹಲ ಮತ್ತು ಸಂಶಯವಿತ್ತೇ? ಆ ಮಂತ್ರವೊಂದು ಮೌಢ್ಯವೆಂದು ಪರೀಕ್ಷಿಸಿದಳೆ? ಹಾಗೆ ಪರೀಕ್ಷಿಸಿದ್ದರೆ ಕುಂತಿ ವೈಚಾರಿಕತೆಗೆ ಹತ್ತಿರದವಳೆ? ಎಂಬಿತ್ಯಾದಿ ಪ್ರಶ್ನೆಗಳು ಕಾಡುತ್ತವೆ. ಆಕೆ ಮಗುವನ್ನು ಪಡೆಯಲು ಸೂರ್ಯನನ್ನು ಆಹ್ವಾನಿಸುತ್ತಿರುವುದಂತೂ ನಿಜ. ಅದು ಆಕೆಯ ಗುರಿ. ಆದರೂ ಅದು ಕೇವಲ ಅಲ್ಪ ಕಾಲದ ಗುರಿಯಾಗುತ್ತದೆ.

ನಂತರದ ಸಾಲನ್ನು ಗಮನಿಸಿ, 'ದೊರೆಯನೆ ಮಗನಕ್ಕೆಂದಾಹ್ವಾನಂಗೆಯ್ಯಲೊಡಂ' ಎಂಬ ಪ್ರಸ್ತಾಪವಿದೆ. ಅಂದರೆ ನಿನಗೆ ಸಾಟಿಯಾಗಿಯೇ ಹೋಲುವಂತಹ ಮಗನನ್ನು ಪ್ರಸಾದಿಸು ಎನ್ನುತ್ತಾಳೆ. ಕುಂತಿಯ ಆಸೆ ಬಹಳ ಅಗಾಧವಾದುದು ಅನಿಸುತ್ತದೆ. ಕುಂತಿ ಹೀಗೆ ಬೇಡಿರುವುದರಲ್ಲಿ ಇಂದಿನ ಯಾವ ಮಹಿಳೆಯ ಆಸೆ ಅಭಿಲಾಷೆಗಳಿಗಿಂತಲೂ, ಕುಂತಿಯ ಆಸೆ ಕಡಿಮೆಯಿಲ್ಲ ಅನಿಸುತ್ತದೆ. ಅಂದರೆ ಇಂದಿನ ಮಹಿಳೆಯರು ತನ್ನನ್ನು ಮದುವೆಯಾಗುವ ಗಂಡ ಹಾಗಿರಬೇಕು, ಹುಟ್ಟುವ ಮಕ್ಕಳೀಗಿರಬೇಕು ಎಂದು ಸಾಮಾನ್ಯವಾಗಿ ಕನಸು ಕಾಣುವುದುಂಟು. ಅದು ಆಗುತ್ತದೋ ಅಥವ ಇಲ್ಲವೋ ಬೇರೆಯ ಪ್ರಶ್ನೆ. ಇಲ್ಲಿ ಪುರಾಣದ ಕುಂತಿಯಂತೂ ಕನಸು ಕಾಣುತ್ತಿಲ್ಲ. ಬದಲಾಗಿ ಮಗುವನ್ನು ಸಾಕ್ಷಾತ್ಕರಿಸಿಕೊಳ್ಳುವ ಬಗೆಯಿದೆ.

ನಂತರದ ಸಾಲು 'ದಲ್ ಧರೆಗಿಳಿದನಂದು ದಶಶತಕಿರಣಂ' ಅಂದರೆ, ನಿಜವಾಗಿಯೂ ಸಹಸ್ರಕಿರಣನಾದ ಸೂರ್ಯನು ಭೂಮಿಗೆ ಅವತರಿಸಿದನು ಎಂಬ ಅರ್ಥವನ್ನು ಡಿ. ಎಲ್. ಎನ್ ಹೇಳುತ್ತಾರೆ. ಇಲ್ಲಿ ಸೂರ್ಯ ನಿಷ್ಠಾವಂತನಾಗಿ ಕಾಣಿಸುತ್ತಾನೆ. ಇದು ಆತನಲ್ಲಿರುವ ಎಚ್ಚರ ಮತ್ತು ಆಹ್ವಾನಿಸಿದ ಕಾರ್ಯವನ್ನು ಮುಗಿಸಿಕೊಂಡು ಹೋಗುವ ಕರ್ತವ್ಯ. ಅರ್ಕನು ಭೂಮಿಗಿಳಿಯುವುದಕ್ಕೂ ಮೊದಲು ಕುಂತಿಯ ಧೈರ್ಯೋದ್ದೇಶದ ನೋಟಕ್ರಮ ಒಂದಿತ್ತು. ಅದು ಸೂರ್ಯನನ್ನು ಆಹ್ವಾನಿಸುವ ನೋಟ, ಆದರೆ ಸೂರ್ಯನ ಪ್ರತ್ಯಕ್ಷದ ನಂತರ ಕುಂತಿಯ ಸ್ಥಿತಿ ಅಸ್ತವ್ಯಸ್ತಗೊಂಡಿದೆ. ಅದು ಆಕೆಯ

ಮೊದಲ ನೋಟ. ಇಲ್ಲಿ ಆ ಇನ್ನೊಂದು ನೋಟ ಯಾವುದು? ಎಂಬ ಪ್ರಶ್ನೆ ಕಾಡುತ್ತದೆ. ಉದಾಹರಣೆಗೆ 'ಕೊಡಗೂಸುತನದ ಭಯದಿಂ ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನ' ಇಲ್ಲಿ ಕುಂತಿಗೆ ಜ್ಞಾನೋದಯವಾಗಿ ತನ್ನ ತಪ್ಪಿನ ಅರಿವು ತಿಳಿದಿದೆ. ಅದು ಯಾವ ತಪ್ಪಿನ ಅರಿವೆಂದರೆ ನಾನಿನ್ನೂ ಕನ್ಯ ಎಂಬ ತಪ್ಪಿನ ಅರಿವು, ಅಥವ ವಿವಾಹಕ್ಕೂ ಮೊದಲೇ ಮಗುವನ್ನು ಪಡೆದರೇ ಲೋಕ ನನ್ನನ್ನು ನೋಡುವ ಆಡುವ ಕ್ರಮದ ಅರಿವು. ಇದು ಆಕೆಯ ಎರಡನೆಯ ನೋಟ. ಈ ಕಾರಣಕ್ಕಾಗಿ ಆಕೆಯ ಬೆವರು ಗಂಗಾನದಿ ತುಂಬಿ ಎರಡೂ ದಡಗಳನ್ನು ತೀಡಿಕೊಂಡು ಹರಿಯಿತು ಎಂದು ಪಂಪನ ವರ್ಣನೆಯಿದೆ. ಅದು ಪಂಪನ ಕಲ್ಪನಾ ಶಕ್ತಿ ಎಷ್ಟಿತ್ತೆಂಬುದು ತಿಳಿಯುತ್ತದೆ.

ಆದರೆ ಇಲ್ಲಿ ಸೂರ್ಯ ಕುಂತಿಯ ಭಯದ ಬೆವರಿಕೆಯನ್ನಾಗಲಿ ಅಥವ ಆಕೆಯ ಕೊಡಗೂಸುತನಕ್ಕಾಗಲಿ ಮನಸೋತವನಲ್ಲ. ಆ ಕಾರಣಕ್ಕಾಗಿ ಸೂರ್ಯನಿಗೆ ಕುಂತಿಯ ಮೇಲೆ ಕರುಣೆಯಿಲ್ಲ ಎನ್ನುವುದು ಅಸಾಧ್ಯ ಸೂರ್ಯನು ತನ್ನ ಭಾರವನ್ನು ಇಳಿಸಿಕೊಂಡು ಹೋಗುವಂತೆ ಉದಾಹರಿಸುವ ಸಾಲಿದು. 'ನಿನಗಕ್ಕೆಂಬುದುಮೊದವಿದ ಗರ್ಭದೊಳಂಬುಜಮಿತ್ರನನೆ ಪೋಲ್ವ ಮಗನೊಗೆತಂದಂ' ಅಂದರೆ ನನ್ನನ್ನೇ ಹೋಲುವ ಮಗ ನಿನಗಾಗಲೀ ಎಂದು ಕರ್ಣನನ್ನು ಪ್ರಸಾದಿಸಿ ಹೊರಡುತ್ತಾನೆ. ಆದರೆ ಸೂರ್ಯ ತನ್ನ ಭಾರವನ್ನು ಎಂದಿಗೂ ಕಡಿಮೆ ಮಾಡಿಕೊಳ್ಳುವುದೇ ಇಲ್ಲ. ಮಗನ ಸಂಕಷ್ಟಗಳಿಗೆ ಪರಿಹಾರದ ಸೂಚನೆಗಳನ್ನು ನೀಡಲು ಮತ್ತೆ-ಮತ್ತೆ ಭಾರತದುದ್ದಕ್ಕೂ ಕಂಡು ಬರುವ ನಿಷ್ಠಾವಂತ.ಇದು ತಂದೆಯಾದವನಿಗೆ ಮಗನ ಮೇಲಿರುವ ಜವಾಬ್ದಾರಿಯನ್ನು ತೋರಿಸುತ್ತದೆ. ಇಲ್ಲಿ ತಪ್ಪು ಮಾಡಿದ ಕುಂತಿ ಶಿಕ್ಷೆಯನ್ನು ಅನುಭವಿಸುತ್ತಾಳೆ. ಈ ತಪ್ಪಿನ ಪ್ರತಿಫಲವೆಂಬಂತೆ ಪಾಂಡುವನ್ನು ಮದುವೆಯಾಗುವವರೆಗೂ ಉಳಿದ ಮಂತ್ರಗಳ ಸಹವಾಸದ ಕನಸು ಕಾಣದಿರುವುದು. ಇದು ಆಕೆ ಕಲಿತ ಅನುಭವದ ಪಾಠ.

ಇಲ್ಲಿ ಓದುಗರು ಧರಿಸಿರುವ ಭಾವಗಳಲ್ಲಿ ಕುಂತಿಗೆ ಹುಡುಗಾಟಿಕೆ, ಅವಿವೇಕಿತನ, ಸಮಯ ಪ್ರಜ್ಞೆಯ ಕೊರತೆ ಕಾಡುತ್ತದೆ. ಆದರೆ ಆಕೆಗೆ ಬಯಕೆಯ ಆಹ್ವಾನದ ಸ್ವಾತಂತ್ರ್ಯವೂ ಇದೆ ಎಂಬುದನ್ನು ಗಮನಿಸಬೇಕಾಗಿದೆ. ಆ ಸ್ವಾತಂತ್ರ್ಯ ದುರ್ವಾಸಮುನಿಗಳಿಂದ ಸಿಕ್ಕಿದಂತಿದೆ ಅದು ದಿಟ. ಆದರೆ ಕುಂತಿಗೆ ಎಲ್ಲಿ? ಯಾವಾಗ? ಮತ್ತು ಅದು ನನಗೆ ಈ ಸ್ಥಿತಿಯಲ್ಲಿ ಒಗ್ಗುತ್ತದೆಯೇ? ಎಂಬ ಪರಿವೇ ಇಲ್ಲದವಳಾಗಿ ಕಷ್ಟದ ಬಲೆಗೆ ಬೀಳುತ್ತಾಳೆ. ಅದು ಕೇವಲ ಪುರಾಣದ ಕುಂತಿಯೊಬ್ಬಳ ಕಥೆಯಲ್ಲ. ಅದು ವರ್ತಮಾನದಲ್ಲಿ ನಮ್ಮೆಲ್ಲರ ನಡುವೆ ನಡೆಯುತ್ತಿರುವ ದೈನಂದಿನ ದುಃಖದ ಕಥೆಯೂ ಹೌದು. ಶಸ್ತ್ರಾಸ್ತ್ರಗಳ ವಿದ್ಯೆ ಕಲಿಸುವ ಗುರು ಶಿಷ್ಯರಿಗೆ ಯಾವ ಅಸ್ತ್ರ ಯಾವ ಸಮಯದಲ್ಲಿ ಪ್ರಯೋಗಿಸಬೇಕು ಎಂಬ ತಿಳಿವಳಿಕೆ ಕೊಟ್ಟಿರುತ್ತಾನೆ. ಆದರೆ ದುರ್ವಾಸಮುನಿ ಕುಂತಿಗೆ ಯಾವ ಮಂತ್ರ ಯಾವ ಸಮಯದಲ್ಲಿ ಸ್ಮರಿಸಿ ಯಾರನ್ನು ಆಹ್ವಾನಿಸಬೇಕು ಎಂಬ ತಿಳುವಳಿಕೆಯನ್ನು ಕೊಟ್ಟಿಲ್ಲವೆ? ಕೊಟ್ಟಿದ್ದರೆ ಯಾಕೆ ಹೀಗೆ?. ಅದು ಆಕೆಯ ತುಚ್ಛಮಟ್ಟದ ಯೋಚನೆ

ಎನ್ನಲೆ? ಅಥವ ಬಾಲ್ಯದ ತುಂಟತನಗಳೆನ್ನಲೆ? ಎಂಬಿತ್ಯಾದಿ ಪ್ರಶ್ನೆಗಳು ಕಾಡುತ್ತವೆ.

ನಮ್ಮ ಹಿರಿಯರು ಕುಂತಿ ಮತ್ತು ಸೂರ್ಯ ಎಂಬಿತ್ಯಾದಿ ಪಾತ್ರಗಳನ್ನಿಟ್ಟುಕೊಂಡು ಅನೇಕ ಕಥೆಗಳನ್ನು ಹೊಣಿದಿದ್ದಾರೆ. ಆದರೆಆ ಕಥೆಗಳು ವರ್ತಮಾನದ ಕಡೆಗೆ ಎಷ್ಟು ಬೆಳಕು ಚೆಲ್ಲುತ್ತಿವೆ ಎಂಬುದು ಬಹಳ ಮುಖ್ಯ. ಅಲ್ಲದೇ ಹೀಗೆ ಕಟ್ಟಿದ ಅನೇಕ ಕಥೆಗಳು ಇಂದಿಗೂ ಜಾತಿ, ಧರ್ಮ, ಸಮಾನತೆ, ಲಿಂಗ ತಾರತಮ್ಯ ಹಾಗೂ ಪ್ರಭುತ್ವಗಳ ವಿರುದ್ಧವೂ ಇದಿರುಗೊಂಡು ಬೆಳಕು ಚೆಲ್ಲುತ್ತವೆ. ಇದಕ್ಕೆ ನಿದರ್ಶನ ಪಂಪಭಾರತವೇ ಸಾಕು.

**ಕೊರೋನಾ; ಲಾಕ್‌ಡೌನ್ ಮತ್ತು ಕಾವ್ಯಧ್ಯಾನ**

**ಲಕ್ಷ್ಮೀಕಾಂತ್ ಎಲ್. ವಿ.**

ಮಹಾಮಾರಿ ಕೊರೋನಾ ಪ್ರಭಾವ ಇಡೀ ಜಗತ್ತನ್ನೇ ತಲ್ಲಣಗೊಳಿಸಿರುವುದು ಎಲ್ಲರಿಗೂ ತಿಳಿದೇ ಇದೆ. ಇದೇ ಸಂದರ್ಭದಲ್ಲಿ ಲಾಕ್‌ಡೌನ್ ಆಗಿ ಬರೋಬ್ಬರಿ ಎರಡು ತಿಂಗಳಾಗುತ್ತಿದೆ. ಜನಜೀವನ ಅಸ್ತವ್ಯಸ್ತಗೊಂಡಿರುವುದು ವಾಸ್ತವ ಸಂಗತಿ. ಕೆಲವು ಜನರು ಒಂದೊತ್ತಿನ ಊಟಕ್ಕೂ ಪರದಾಡಿದ್ದು ಕಣ್ಣ ಮುಂದೆಯೇ ಇದೆ. ಇದೇ ಸಂದರ್ಭದಲ್ಲಿ ಸರ್ಕಾರ, ಸಂಘ-ಸಂಸ್ಥೆಗಳು, ಜನಪ್ರತಿನಿಧಿಗಳು ಬಡವರಿಗೆ ಆಹಾರ, ದಿನಸಿ ಒದಗಿಸುವಲ್ಲಿ ಯಶಸ್ವಿಯಾಗಿವೆ. ವಲಸೆ ಬಂದು ಲಾಕ್‌ಡೌನ್‌ನಿಂದ ಸಿಲುಕಿಕೊಂಡಿದ್ದ ಲಕ್ಷಾಂತರ ಕಾರ್ಮಿಕರ ಬದುಕು ಇಂದು ಮೂರಾಬಟ್ಟೆಯಾಗಿದೆ. ಹೀಗೆ ಜನರೆಲ್ಲ ಮನೆಯಲ್ಲೇ ಬಂಧಿಯಾಗಿರಬೇಕಾದ ಪರಿಸ್ಥಿತಿ ಎದುರಾಗಿದೆ. ಇದೀಗ ಲಾಕ್‌ಡೌನ್ ರಿಲೀಫ್‌ನಿಂದ ಕೊಂಚ ನಿಟ್ಟುಸಿರು ಬಿಟ್ಟಿದ್ದರೂ ಮಹಾಮಾರಿಯ ಭಯ ಇನ್ನೂ ಹಾಗೆಯೇ ಇದೆ.

**ವೇದಿಕೆ ಕಾರ್ಯಕ್ರಮಗಳಿಗೆ ಕೊಕ್; ಆನ್‌ಲೈನ್‌ಗೆ ಜೈ:**

ಲಾಕ್‌ಡೌನ್‌ನಲ್ಲಿ ಮನೆಯಲ್ಲೇ ಇದ್ದು ಅಭ್ಯಾಸವೇ ಇರದ ನಮ್ಮ ಜನಕ್ಕೆ ಏನು ಮಾಡುವುದೆಂದು ತಿಳಿಯದೆ ಟಿ.ವಿ., ಚೌಕಾಬಾರ, ಕೇರಂ ಅಂತೆಲ್ಲಾ ಮೊರೆ ಹೋಗಿದ್ದರು. ಇದರ ನಡುವೆ ಕವಿಮನಗಳು ಭಾವನಾ ಲೋಕವನ್ನೇ ತೆರೆದಿಟ್ಟಿದ್ದಾರೆ. ಏಕೆಂದರೆ ಈ ಮೊದಲು ವೇದಿಕೆ ಮೇಲಿನ ಕಾರ್ಯಕ್ರಮ ಕವಿಗೋಷ್ಠಿಯಲ್ಲಿ ಮನದ ಭಾವಗಳನ್ನು ಹಂಚಿಕೊಳ್ಳುವ ಅವಕಾಶ ಸಿಗುತ್ತಿತ್ತು. ಆದರೆ ಈಗ ಲಾಕ್‌ಡೌನ್‌ನಿಂದಾಗಿ ಯಾವುದೇ ಕಾರ್ಯಕ್ರಮ ನಡೆಯುತ್ತಿಲ್ಲ. ಆದಾಗ್ಯೂ ಕವಿಭಾವ ಮುಂದುವರೆದಿದೆ. ಅದಕ್ಕಾಗಿ ಹಲವಾರು ದಾರಿಗಳನ್ನು ಹುಡುಕಿಕೊಂಡಿದ್ದಾರೆ. ಸಾಹಿತ್ಯ ಪರಂಪರೆಯ ಕೊಂಡಿಯನ್ನು ಕಳಚದಂತೆ ಕವಿಗಳು ಬಹಳ ಉತ್ಸುಕರಾಗಿ ಕವಿತೆ ಕಟ್ಟುತ್ತಿರುವುದನ್ನು ಕಾಣಬಹುದು. ಇದಕ್ಕಾಗಿ ಹುಡುಕಿಕೊಂಡಿದ್ದು ಆನ್‌ಲೈನ್ ಮೂಲಕ, ಜಾಲತಾಣಗಳ ಮೂಲಕ ನಡೆದ ಕವಿಗೋಷ್ಠಿ, ಸ್ಪರ್ಧೆಗಳು,

ಸಾಹಿತ್ಯಕ್ಕೆ ಬಂದರೆ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಕನ್ನಡ ಸಾಹಿತ್ಯವು ಹೊಸ ಹುಟ್ಟನ್ನು ಪಡೆದು ಹಳೆಗನ್ನಡ ನಡುಗನ್ನಡ ಸಾಹಿತ್ಯಕ್ಕಿಂತ ಬೇರೆಯಾದ ನವೋದಯ ಸಾಹಿತ್ಯವೆಂದು ಹೊಸ ಸಾಹಿತ್ಯ ಪ್ರಕಾರದಲ್ಲಿ ಕಾಣಿಸಿಕೊಂಡಿತು. ಇದು ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಕಾವ್ಯ, ಕವನ, ಭಾವಗೀತೆ, ಹೀಗೆ ವಿವಿಧ ಪ್ರಕಾರಗಳಲ್ಲಿ ಬಹುಬೇಗ ಅಭಿವೃದ್ಧಿ ಪಡೆದು ವಿಫುಲ ಸಾಹಿತ್ಯ ಬೆಳವಣಿಗೆಗೆ ಕಾರಣವಾಯಿತು. ಇಂತಹ ಹಾದಿಯಲ್ಲಿ ಸಾಗಿರುವ ನಮ್ಮ

ಯುವಕವಿಗಳು ಸಾಹಿತ್ಯ ಪ್ರಕಾರವನ್ನು ಮುಂದುವರೆಸಿಕೊಂಡು ಉಳಿಸಿ ಬೆಳೆಸಿಕೊಂಡು ಸಾಗುತ್ತಿದ್ದಾರೆ. ಹಾಗಾದರೆ ಪ್ರಸ್ತುತ ಕವಿ ಹೃದಯಗಳು ಈ ಲಾಕ್‌ಡೌನ್ ಸಂದರ್ಭದಲ್ಲಿ ಸಾಹಿತ್ಯ ಯಾನ ಹೇಗೆ ನಡೆಸಿದ್ದಾರೆ..?

**ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಕಾವ್ಯಧಾರೆ:**

ಅದೊಂದು ಕಾಲವಿತ್ತು. ವೇದಿಕೆಯೊಂದನ್ನು ಸಿದ್ಧಪಡಿಸಿ ವಿವಿಧ ಭಾಗಗಳ ಕವಿಗಳನ್ನು ಆಹ್ವಾನಿಸಿ ಅವರಿಗೆ ವಸತಿ, ಊಟದ ವ್ಯವಸ್ಥೆ ಕಲ್ಪಿಸಿ ಕವಿಗೋಷ್ಠಿ ನಡೆಸಲಾಗುತ್ತಿತ್ತು. ಅದರಲ್ಲಿ ಭಾಗವಹಿಸಿದ ಕವಿಗಳ ಸಾಹಿತ್ಯವನ್ನು ಪ್ರಸ್ತುತ ಪಡಿಸಲಾಗುತ್ತಿತ್ತು. ಆದರೆ ಇದೀಗ ಕಾಲ ಬದಲಾಗಿದೆ. ಎಲ್ಲವನ್ನೂ ಬದಲಾವಣೆಯತ್ತ ಕೊಂಡೊಯ್ಯುತ್ತಿದೆ. ಬದಲಾವಣೆ ಜಗದ ನಿಯಮ. ಪ್ರಸ್ತುತ ಕೊರೋನಾ ಪ್ರಭಾವದಿಂದ ಪ್ರತಿಯೊಬ್ಬರೂ ಮನೆಯಲ್ಲಿಯೇ ಇರಬೇಕಾದ ಅನಿವಾರ್ಯತೆ ಇದೆ. ಈ ನಡುವೆ ಕಾವ್ಯ ಹೊಸ ರೂಪವನ್ನೇ ಪಡೆದುಕೊಳ್ಳಲಾರಂಭಿಸಿದೆ. ಸಾಹಿತ್ಯದ ಹೊಸ ಜಗತ್ತು ತೆರೆಯಲಾರಂಭಿಸಿದೆ. ಇದಕ್ಕೆ ಪೂರಕ ಎಂಬಂತೆ ಅಗ್ಗದ ಇಂಟರ್‌ನೆಟ್ ಸಿಗುತ್ತಿರುವುದರಿಂದ ಸಾಹಿತ್ಯಕ್ಕೆ ಸಾಮಾಜಿಕ ಜಾಲತಾಣಗಳ ಸ್ಪರ್ಶ ನೀಡುತ್ತಾ ಹೊಸ ಭಾವಲೋಕವನ್ನೇ ಸೃಷ್ಟಿಸುತ್ತಿದ್ದಾರೆ ನಮ್ಮ ಕವಿಗಳು.

ಇದಕ್ಕೆಂದೇ ಕೆಲವೊಂದು ಸಂಘಟಿತ ವಲಯಗಳು ಕಾವ್ಯಧಾರೆಯನ್ನು ಹರಿಸಲು ಸಾಮಾಜಿಕ ಜಾಲತಾಣಗಳನ್ನೇ ವೇದಿಕೆಯನ್ನಾಗಿಸಿಕೊಂಡು ಆನ್‌ಲೈನ್ ಮೂಲಕ ಕವಿತೆಗಳ ವಾಚನ, ರಚನೆ, ಸಂಯೋಜನೆ ಒಳಗೊಂಡಂತೆ ವಿವಿಧ ಆಯಾಮಗಳಲ್ಲಿ ಸ್ಪರ್ಧೆಗಳನ್ನು ನಡೆಸುತ್ತಾ ಬಂದಿವೆ. ಆನ್‌ಲೈನ್ ಮೂಲಕ ಕವಿಗೋಷ್ಠಿ, ಕಥಾಗೋಷ್ಠಿ, ನ್ಯಾನೋ ಕಥೆಗಳು, ಭಾವಗೀತೆಗಳು, ಚುಟುಕು, ಗಜಲ್, ಹಾಯ್ಕುಗಳು ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳ ಸ್ಪರ್ಧೆಗಳನ್ನು ಆಯೋಜಿಸುತ್ತಿವೆ. ಇದಕ್ಕೆ ಪೂರಕವಾಗಿ ರಾಜ್ಯದಾದ್ಯಂತ ಅಲ್ಲದೆ ದೇಶದ ವಿವಿಧ ಭಾಗಗಳಲ್ಲಿನ ಯುವಕವಿಗಳಿಂದ ಹಿಡಿದು ಹಿರಿಯ ಕವಿಗಳೆಲ್ಲರೂ ಇಂತಹ ಅವಕಾಶಗಳನ್ನು ಬಳಸಿಕೊಂಡು ಸಾಹಿತ್ಯಯಾನದಲ್ಲಿ ಸಾಗಿದ್ದಾರೆ. ಇದು ಒಂಥರಾ ವಿಶಿಷ್ಟ ಎನಿಸುವುದಲ್ಲದೆ ಎಲ್ಲರ ಕವಿತೆಗಳನ್ನೂ, ಸಾಹಿತ್ಯವನ್ನೂ ಒಂದೇ ಸೂರಿನಡಿಯಲ್ಲಿ ಸ್ವಾದಿಸುವ ಅವಕಾಶ ಸಿಕ್ಕಂತಾಗಿದೆ. ಇಲ್ಲಿ ಬಗೆ ಬಗೆಯ, ವಿಭಿನ್ನ ಆಲೋಚನೆಗಳ ಕವಿಭಾವ, ಪದಭಾವವನ್ನು ಸವಿಯಬಹುದಾಗಿದೆ.

**ಆರ್ಥಿಕವಾಗಿ ಉತ್ತಮ ವ್ಯವಸ್ಥೆ:**

ಒಂದೆಡೆ ಇದು ಪುಸ್ತಕಗಳನ್ನು ಓದುವ ಅಭಿರುಚಿಯನ್ನು ದೂರಮಾಡುತ್ತದೆ ಎನಿಸುತ್ತದೆಯಾದರೂ ಪ್ರಸ್ತುತ ಸನ್ನಿವೇಶ ಹಾಗೂ ಆಧುನಿಕ ಯುಗದ ಈ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಈ ವ್ಯವಸ್ಥೆ ಉತ್ತಮ ಎಂದೆನಿಸುತ್ತದೆ. ಆರ್ಥಿಕವಾಗಿಯೂ ಇದು ಉತ್ತಮ ವ್ಯವಸ್ಥೆ. ಒಂದೇ ವೇದಿಕೆಯಲ್ಲಿ ನೂರಾರು ಕವಿಗಳ ಬರಹಗಳನ್ನು ಕಾಣಬಹುದಾಗಿದೆ. ಅದ್ಭುತ ಎನಿಸುವ ಪದಗುಚ್ಛ, ಭಾವತೀವ್ರತೆಯ ಸಾಲುಗಳು, ಭಾವ ವೈವಿಧ್ಯತೆ, ಭಾಷಾ ವೈವಿಧ್ಯತೆಯುಳ್ಳ ಕವಿತೆಗಳು

ಎಂಥವರನ್ನೂ ಆಕರ್ಷಿಸದೇ ಇರದು. ಒಬ್ಬರಿಗೊಬ್ಬರು ಪೈಪೋಟಿಗೆ ನಿಂತಂತೆ ಮೂಡುವ ಕವಿತೆಗಳು ಓದುಗರನ್ನು, ಕೇಳುಗರನ್ನು ಒಂದು ಹೊಸ ಲೋಕಕ್ಕೆ ಕೊಂಡೊಯ್ದಿದ್ದಂತೂ ಸತ್ಯ.

ಸಣ್ಣ ಉದಾಹರಣೆ ಕೊಡುವುದಾದರೆ ಖ್ಯಾತ ಸಂಗೀತಗಾರರಾದ ಪ್ರವೀಣ್ ಡಿ ರಾವ್ ಅವರ 'ಸಂ ಯೋಚನೆ. ಇದರಲ್ಲಿ ಸುಮಾರು ನೂರಕ್ಕೂ ಹೆಚ್ಚು ಸಂಗೀತಗಾರರು ವಿವಿಧ ಯುವ ಹಾಗೂ ಹಿರಿಯ ಕವಿಗಳು ಬರೆದ ಕವಿತೆಗಳನ್ನು, ಭಾವಗೀತೆಗಳನ್ನು ಸಂಗೀತ ಸಂಯೋಜನೆ ಮಾಡಿ ಹಾಡಿದ್ದು ವಿಶೇಷ ಎನಿಸಿತು. ಅದೂ ಕೂಡ ಫೇಸ್‌ಬುಕ್ ಲೈವ್‌ನಲ್ಲಿ ಈ ವಿನೂತನ ಕಾರ್ಯಕ್ರಮ ನಡೆದದ್ದು. ಇಷ್ಟಲ್ಲದೆ ಕವನ ವಾಚನ, ವಾಟ್ಸಾಫ್ ಕಥೆಗಳಂಥ ಭಿನ್ನ ಸಾಹಿತ್ಯ ಕಾರ್ಯಕ್ರಮಗಳು ಆನ್‌ಲೈನ್ ಮೂಲಕ ನಡೆಸಿದ್ದು ವಿನೂತನ ಪ್ರಯತ್ನದ ಜೊತೆಗೆ ಲಾಕ್‌ಡೌನ್‌ನ್ನು ಸದುಪಯೋಗಪಡಿಸಿಕೊಂಡ ಪರಿಯಾಗಿತ್ತು. ಇಲ್ಲಿ ಕನ್ನಡ ಸಾಹಿತ್ಯ ಎಷ್ಟರಮಟ್ಟಿಗೆ ತನ್ನದೇ ಆದ ಛಾಪನ್ನು ಮೂಡಿಸುತ್ತಿದೆ ಎಂಬುದನ್ನು ಬಿಂಬಿಸುತ್ತಿತ್ತು.

**ಕಾವ್ಯಧ್ಯಾನದ ಸವಿಭಾವ:**

ಇನ್ನೂ ಕೆಲ ಕವಿಗಳು ವಾಸ್ತವ ಸ್ಥಿತಿಯನ್ನು ಎತ್ತಿ ಹಿಡಿಯುವಂತಹ ಕವಿತೆಗಳನ್ನು ಬರೆದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದು ಬಹುತೇಕ ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಹೀಗೆ ಬರೆದ ಕೆಲವೊಂದು ಆಪ್ತ ಕವಿತೆಗಳು ನಿಮ್ಮ ಮನಸಿಗೂ ಹಿಡಿಸುತ್ತವೆ. ಅಂತಹ ಆಯ್ದ ಕವಿತೆಗಳು ಇಲ್ಲಿವೆ.

ಬಡತನ ನಿರ್ಮೂಲನೆ ಮಾಡುತ್ತಿಲ್ಲ ಅಮ್ಮ

ಬಡವರ ನಿರ್ಮೂಲನೆ ಮಾಡುತ್ತಾರೆ ಅವರು..

ಹೆಚ್ಚು ಕಣ್ಣೀರು ತುಳುಕಿಸಬೇಡ ಅಮ್ಮ

ನಗರದ ರಸ್ತೆ ತೊಳೆಯಲು ನಿನ್ನ ಕಣ್ಣೀರು ಕೇಳಬಹುದು ಅವರು..

ಈ ಬಡತನವೇ ಹೀಗೆ ದೇಹಕ್ಕೆ ಉಸಿರು ಬೇಡವಾದಂತೆ ಅಮ್ಮ

ನಾಳೆ ನಾವು ಸತ್ತರೆ ಹಸಿವಿಗೂ ಅವಮಾನ ಮಾಡಬಹುದು ಅವರು..

ಸಾಕು ಎದ್ದೇಳು ನಗರ ಸಹವಾಸ ನಮಗೆ ಬೇಡ ಅಮ್ಮ

ಇಲ್ಲೇ ಉಳಿದರೆ ಬಡವರ ಬದುಕು ಖಾಸಗೀಕರಣ ಮಾಡಬಹುದು ಅವರು.

ಹೀಗೆಂದು ಕನಕಗಿರಿಯ ಅಲ್ಲಾಗಿರಿರಾಜ್ ಬಡತನದ ವಾಸ್ತವತೆಯನ್ನು ಕವಿತೆ ಮೂಲಕ ತೋರಿಸಿದ್ದಾರೆ.

ಮನಸೆಂಬ ಗೋಪುರಕೆ

ಬಂಗಾರ ಕಳಸವು ನೀನು

ಶೃಂಗಾರ ರಸದೌತಣಕೆ

ಜೊತೆಯಾಗು ಇನ್ನೂ !!

ರತಿಯಾಗಿ ನಾನು ಇಲ್ಲಿ

ಸಂಭ್ರಮಿಸಬೇಕಿದೇ ..

ಸಾವಿರ ಕನಸಲು ನಿನ್ನಾ

ಜೊತೆ ಕುಣಿಯಬೇಕಿದೇ



ಹೀಗೆಂದು ಸಿ.ಬಿ ಹುಂಡಿಯ ಚ.ನಂ.ಪ್ರಕಾಶ್ ಅವರು ತಮ್ಮ ಕವಿತೆಯಲ್ಲಿ ಭಾವಗಳನ್ನು ಹಂಚಿಕೊಂಡಿದ್ದಾರೆ.

ಬೊಗಸೆ ಕಣ್ಣಿಂದ ಹನಿ ಜಾರದಿರಲಿ ಕಂದ

ಕೋಟಿ ಕನಸುಗಳು ಕರಗಿ ಹೋದಾವು..

ಬಡತನ ಸಿರಿತನ ಯಾವುದು ಶಾಶ್ವತವಲ್ಲ

ಕಾಲಚಕ್ರದ ಉರುಳು ಮತ್ತೆ ತಿರುಗೀತು..

ನೋವು ನಿನ್ನದಲ್ಲ ಹಣವಂತನ ಅಹಂಕಾರ

ಇನ್ನು ಬಡತನದ ಬೇಗೆ ಕರಗದೆ ಉಳಿದೀತೆ..

ಅಳುವಿರದ ಮೊಗವೇ ನಿನಗೆ ಅಂದ ಚೆಂದ

ನಗುವಿನ ಒಡವೆಯೇ ನಿನಗೆ ಸದಾ ಸಿರಿಗಂಧ..

ಹೀಗೆ ಅಳುವ ಕಂದಮ್ಮನನ್ನು ಓಲೈಸುವ ರೀತಿಯಲ್ಲಿ ಲಕ್ಷ್ಮೀಕಾಂತ್ ಅವರು ಕವಿತೆಯಲ್ಲಿ ಸಮಾಧಾನಿಸುವ ಪ್ರಯತ್ನ ಮಾಡಿದ್ದಾರೆ.

ಮಳೆಯು ಬಂತು ನೋಡ

ಸೊಗಸು ತಂತು ನೋಡ

ಬರಡು, ಬರಡು ಎಂದು ಬಾಯಿ ಬಿಡುತ್ತಿದ್ದ

ಒಲವು ಮಳೆಯ ಬಂತು ನೋಡ

ಒಡಲೊಳಗಿನ ಕಿಚ್ಚು ಒಡಲೊಳಗ ಸತ್ತು

ಚಿಗುರೊಡೆಯತಾವ ಹೂ, ಹಣ್ಣು ಮರವು

ಕೈ ಹಿಡಿದು ಕರೆದು ಸಿರಿಯ ತೋರತಾವು

ಹೀಗೆ ಪ್ರಕೃತಿಯ ಸೌಂದರ್ಯವನ್ನು ಪದಗಳಲ್ಲಿ ಹಿಡಿದಿಡುವ ಪ್ರಯತ್ನ ಡಾ. ಸದಾಶಿವ ದೊಡಮನಿ ಅವರು ಮಾಡಿದ್ದಾರೆ.

ಹೀಗೆ ಕವಿತೆಗಳ ಮಹಾಪೂರವೇ ಆನ್‌ಲೈನ್‌ನಲ್ಲಿ ಹರಿದು ಬಂದಿದ್ದವು. ಒಂದಕ್ಕಿಂತ ಒಂದು ಅದ್ಭುತ ಕವಿತೆಗಳು. ಜೀವನದ ವಾಸ್ತವ ಸ್ಥಿತಿಗತಿಯನ್ನು ಎತ್ತಿ ಹಿಡಿಯುವ ಕವಿತೆಗಳು ಒಂದೆಡೆಯಾದರೆ, ಪ್ರೇಮದ ನವಿರಾದ ಭಾವನೆಗಳನ್ನು ವ್ಯಕ್ತಪಡಿಸುವ ಪ್ರೀತಿಯ ಕವಿತೆಗಳು ಮತ್ತೊಂದೆಡೆ; ಪ್ರಕೃತಿಯ ಸೌಂದರ್ಯ ಬಣ್ಣಿಸುವ ಕವಿತೆಗಳಿಗೇನು ಬರವಿರಲಿಲ್ಲ. ಹೀಗೆ ನೂರಾರು ಕವಿಗಳು ತಮ್ಮ ಮನದ ಭಾವನೆಗಳನ್ನು ಪದಗಳಲ್ಲಿ ಪೋಣಿಸಿ ಭಾವಗಳಿಗೆ ಬಣ್ಣ ಹಚ್ಚಿದ ಸೊಗಸಾದ ಕವಿತೆಗಳನ್ನು ಓದುವ ಭಾಗ್ಯ ಈ ಲಾಕ್‌ಡೌನ್‌ನಲ್ಲಿ ಸಾಧ್ಯವಾಯಿತು. ಇಷ್ಟಲ್ಲದೆ. ಸಾಹಿತ್ಯದ ಪ್ರಕಾರಗಳಾದ ಭಾವಗೀತೆ, ಹಾಯ್ಕು, ಗಜಲ್, ಚುಟುಕು, ಕಥೆ, ನ್ಯಾನೋ ಕಥೆಗಳಂತಹ ವಿವಿಧತೆಗಳನ್ನು ಮನೆಯಲ್ಲೇ ಇದ್ದುಕೊಂಡು ಕೇಳುವ, ಓದುವ, ನೋಡುವ, ಭಾಗವಹಿಸುವ ಭಾಗ್ಯ ನಮ್ಮೆಲ್ಲರದ್ದಾಗಿತ್ತು.

**ಭಯವಿರದ ಸಾಹಿತ್ಯಯಾನ ಸರಾಗವಾಗಿ ಸಾಗಿದೆ:**

ಒಟ್ಟಾರೆ ಮಹಾಮಾರಿ ಕೊರೋನಾ ಪ್ರಭಾವದಿಂದ ಎಲ್ಲೆಡೆ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು ಸತ್ಯವೇ ಆದರೂ ಸಾಹಿತ್ಯಕ್ಕೆ ಮಾತ್ರ ಯಾವ ಭಯವೂ ಇರದೇ ಸರಾಗವಾಗಿ ಆನ್‌ಲೈನ್ ಮೂಲಕ ಹರಿದು ಬಂದಿತ್ತು. ಕಾವ್ಯದ ರಸಧಾರೆಯೇ

ಜಿನುಗಿ ಮನೆಯಲ್ಲೇ ಕುಳಿತು ಬೋರಾಗಿದ್ದ ಮನಗಳಿಗೆ ಕಾವ್ಯ ಧ್ಯಾನದ ಮೂಲಕ ನೆಮ್ಮದಿ ಕೊಟ್ಟಿದ್ದಂತು ಸುಳ್ಳಲ್ಲ. ಕವಿ, ಕವಿಭಾವದ ಮೂಲಕ ಹರಿಯುವ ಕವಿತೆಗಳಿಗೆ ಎಂತಹ ಶಕ್ತಿ ಇರುತ್ತದೆ ಎಂಬುದಕ್ಕೆ ಈ ಲಾಕ್‌ಡೌನ್ ಉದಾಹರಣೆಯಾಗಿದ್ದೂ ನಿಜ. ಯಾರು ಲಾಕ್‌ಡೌನ್ ಸಮಯವನ್ನು ಸದುಪಯೋಗ ಮಾಡಿಕೊಂಡರೋ ಗೊತ್ತಿಲ್ಲ; ಆದರೆ ಕವಿಗಳು, ಬಳಗಗಳು ಕಾವ್ಯದ ರಸದೌತಣ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿವೆ. ಇಂತಹ ಸಾಹಿತ್ಯ ಯಾನ ಇನ್ನೂ ಹೀಗೇ ಮುಂದುವರೆಯಲಿ ಎಂಬುದು ನಮ್ಮೆಲ್ಲರ ಆಶಯ.

**[ಪ್ರಜಾಪ್ರಗತಿ ೨೦೨೦]**

**ದೀಪಾವಳಿ ಬಂಜಾರರಿಗೆ ಪವಿತ್ರ ಹಬ್ಬ**

**- ಜಿ. ಪಳನಿಸ್ವಾಮಿ ಜಾಗೇರಿ**

ವಿಶ್ವದ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂದರೆ, ಅದು ಭಾರತ, ಹಾಗೂ ಯಾವೊಂದು ರಾಷ್ಟ್ರವೂ ಹೊಂದಿರದ ವಿವಿಧ ಧರ್ಮ, ಜನಾಂಗ, ಭಾಷೆ, ಸಂಸ್ಕೃತಿ, ಆಚಾರ-ವಿಚಾರಗಳನ್ನು ಭಾರತ ಹೊಂದಿದೆ. ಇವೆಲ್ಲದರ ಪೋಷಣೆ, ಘೋಷಣೆಗೆ 'ವಿವಿಧತೆಯಲ್ಲಿ ಏಕತೆಯನ್ನು, ಸಮಾನತೆಯನ್ನು ಕಾಣುವ, ಪಡೆಯುವ ಸಂವಿಧಾನಾತ್ಮಕ ಸ್ವಾತಂತ್ರ್ಯವನ್ನು ಪಡೆದಿದೆ'. ಈ ನಿಟ್ಟಿನಲ್ಲಿ ಪ್ರತಿ ನಿತ್ಯವೂ ಸಹ ಭಾರತಾಂಬೆಗೆ ಹಬ್ಬೋತ್ಸವವೇ ಆಗಿದೆ. ಈ ಹಬ್ಬಗಳಲ್ಲಿ ಧಾರ್ಮಿಕ ಹಬ್ಬ, ರಾಷ್ಟ್ರೀಯ ಹಬ್ಬ ಮತ್ತು ವೈಯಕ್ತಿಕ ಹುಟ್ಟುಹಬ್ಬಗಳು ಪ್ರಮುಖವಾಗಿದೆ. ಇಂತಹ ಹಬ್ಬಗಳಲ್ಲಿ ರಾಷ್ಟ್ರೀಯ ಹಬ್ಬಗಳು ದೇಶದ ತುಂಬೆಲ್ಲಾ ಒಂದೇತೆರನಾಗಿದ್ದರೆ, ಧಾರ್ಮಿಕ ಮತ್ತು ಹುಟ್ಟುಹಬ್ಬಗಳು ಆಯಾ ಪ್ರಾಂತ್ಯ, ಭಾಷೆ, ಧರ್ಮ, ಜನಾಂಗಕ್ಕೆ ಅನುಗುಣವಾಗಿ ವಿವಿಧ ರೀತಿಯಲ್ಲಿ ಆಚರಿಸಲ್ಪಡುತ್ತದೆ. ಹುಟ್ಟು ಹಬ್ಬಗಳು ಆಯಾ ಮನೆ ವ್ಯಕ್ತಿಗೆ ಸೀಮಿತವಾಗುತ್ತವೆ. ಆದರೆ, ಧಾರ್ಮಿಕ ಹಬ್ಬಗಳು ಒಂದು ಧರ್ಮಕ್ಕೆ ಸೀಮಿತವಾಗಿರುತ್ತದೆ. ಭಾರತದಲ್ಲಿ ಹಿಂದೂ ಧರ್ಮೀಯರು ಆಚರಿಸುವ ದೀಪಾವಳಿ “ಹಿಂದುಗಳಿಗೆ ಪವಿತ್ರ ಹಬ್ಬ'. ಈ ಹಬ್ಬವನ್ನು ಹಿಂದೂ ಧರ್ಮದಲ್ಲಿರುವ ಅನೇಕ ಜನಾಂಗದವರು, ಭಾಷಿಗರು, ತಮ್ಮ ಸಂಸ್ಕೃತಿಗೆ ಅನುಸಾರವಾಗಿ ಆಚರಣೆ ಮಾಡುತ್ತಿದ್ದರು. ಪ್ರಸ್ತುತ ಅಂತಹ ಆಚರಣೆಗಳಿಗೆ, ಬ್ರಾಹ್ಮಣ ಸಂಸ್ಕೃತಿಯು ಟಿ.ವಿ ಮಾಧ್ಯಮಗಳ ಮೂಲಕ ಸ್ಥಿತ್ಯಂತರ ಗೊಳಿಸುತ್ತಿದ್ದರೂ, ಬ್ರಾಹ್ಮಣ ಸಂಸ್ಕೃತಿಯಲ್ಲಿ ಹೊಯ್ದಾಡಿದರೂ, ತಮ್ಮ ಪಾರಂಪರಿಕ ಹಬ್ಬಗಳ ಆಚರಣೆಯನ್ನು, ಅಲ್ಲಲ್ಲಿ ಮಾಸಿದ ನೆರಳಾಗಿ ಉಳಿಸಿಕೊಂಡಿರುವ ಬಹುತೇಕ ಸಂಸ್ಕೃತಿಗಳಲ್ಲಿ ಬುಡಕಟ್ಟು ಲಂಬಾಣಿಗಳ ಸಂಸ್ಕೃತಿಯೂ ಸಹ ಪ್ರಮುಖವಾಗಿದೆ.

ಭಾರತದಲ್ಲಿ ಇವರನ್ನು ಆಯಾ ಪ್ರಾಂತ್ಯದ ಭಾಷೆಗಳಲ್ಲಿ ಅವರ ಬದುಕು, ಕಸುಬುಗಳನ್ನು ಆಧರಿಸಿ ೨೭ ಪರಾಯ ಹೆಸರುಗಳಿಂದ ಕರೆಯುತ್ತಾರೆ. ಇವರು ದೇಶದ ಯಾವುದೇ ಮೂಲೆಯಲ್ಲಿದ್ದರೂ ಸಹ ತಮ್ಮ ಆಚಾರ-ವಿಚಾರ, ಉಡುಗೆ- ತೊಡುಗೆ, ಭಾಷೆಗಳಲ್ಲಿ ಸಾಮ್ಯತೆಯನ್ನು ತಕ್ಕ ಮಟ್ಟಿಗೆ ಉಳಿಸಿಕೊಂಡಿದ್ದಾರೆ. ತಮ್ಮನ್ನು ಇವರು 'ಗೋರ್' ಎಂದು ಕರೆದುಕೊಳ್ಳುತ್ತಾರೆ. ಗೋರ್ ಎಂದರೆ 'ಸುಂದರರು' (ಕೆಂಪಿನವರು) ಎಂದರ್ಥ ನೀಡುತ್ತದೆ. ಇವರ ಮಹಿಳೆಯರ ಉಡುಗೆ-ತೊಡುಗೆಗಳೇ ಕಲಾತ್ಮಕವಾದ ಕೈ ಕಸೂತಿ ಕಲೆಯಿಂದ ಶೋಭಿಸುತ್ತಿರುತ್ತವೆ. ಇಂತಹ ಕಸೂತಿ-ಭರಿತ ಉಡುಗೆ-ತೊಡುಗೆಗಳು ಅಲ್ಲಲ್ಲಿ ನಶಿಸುತ್ತಿರುವ ಸಂದರ್ಭದಲ್ಲಿ ಹಬ್ಬ-ಹರಿದಿನಗಳ ಮೂಲ ಆಚರಣೆಗಳ ಒಂದಿಷ್ಟು ತುಣುಕುಗಳು ತಮ್ಮ ಉಡುಗೆ-ತೊಡುಗೆಗಳ ಮೂಲಕ

ಕಾಣಸಿಗುತ್ತವೆ. ಅಂತಹ ಹಬ್ಬಗಳಲ್ಲಿ ಕಾರ್ತೀಕಮಾಸದ ಅಮಾವಾಸ್ಯೆಯ ಹಿಂದಿನ ಮತ್ತು ಮುಂದಿನ ದಿನದಲ್ಲಿ ಬರುವ 'ದೀಪಾವಳಿ' ಪ್ರಮುಖ ಹಬ್ಬವಾಗಿದೆ. ಬಂಜಾರ ಜನಾಂಗದವರು ಆಚರಿಸುವ ಹಬ್ಬಗಳಲ್ಲಿ 'ದೀಪಾವಳಿ'ಯು ಬಹಳ ವಿಶೇಷತೆಗಳನ್ನು ಹೊಂದಿರುವ ಪ್ರಮುಖ-ಪವಿತ್ರ ಹಬ್ಬವಾಗಿದೆ. ಈ ಹಬ್ಬವನ್ನು ದವಾಳಿ' ಎಂದು ಕರೆಯುತ್ತಾರೆ. ಈ 'ದವಾಳಿ'ಯ ವಿಶೇಷತೆಗಳು ಬಹಳವಾಗಿ ಗಮನ ಸೆಳೆಯುತ್ತದೆ.

ಪ್ರತಿಯೊಬ್ಬರೂ ತಾಂಡಾದಲ್ಲಿ 'ವರಿ' ನೀಡಿ ಹಬ್ಬಕ್ಕೆ ಸೇರ್ಪಡೆಯಾಗುತ್ತಾರೆ. ಹೊಸಬಟ್ಟೆ, ಪಟಾಕಿಗಳೊಂದಿಗೆ ಸಂಭ್ರಮಿಸುತ್ತಾರೆ. ಇವರಿಗೆ ಹಬ್ಬ ಪ್ರಾರಂಭವಾಗುವುದೇ ದೀಪಾವಳಿಯ ಅಮಾವಾಸ್ಯೆ ದಿನ. ಈ ದಿನದ ಆಚರಣೆಯ ಉದ್ದೇಶ ಸ್ಪಷ್ಟವಾಗಿ ತಿಳಿಯದಾಗಿದೆ. ಈ ದಿನವನ್ನು ಕಾಳಿಮಾಸ್ ಎಂದು ಕರೆಯುತ್ತಾರೆ. ಕಾಳಿ+ಅಮಾವಸೆ ಸೇರಿ ಕಾಳಿಮಾಸ್ ಆಗಿರಬಹುದು ! ಕಾಳಿ ಎಂಬುದು ದೇವತೆಯೋ ? ಅಥವಾ ನರಕಾಸುರನನ್ನು ಶ್ರೀ ಕೃಷ್ಣನು ವಧೆ ಮಾಡಿದ್ದರ ಖುಷಿಗಾಗಿಯೋ ಅಥವಾ ಬಲಿಚಕ್ರವರ್ತಿಯನ್ನು ಸಂಹರಿಸಲು ಶಕ್ತಿದೇವತೆಗಳಿಗಾಗಿ ಮೊರೆ ಇಟ್ಟದ್ದರ ಫಲವಾಗಿಯೋ ಈ ಹಬ್ಬದ ಆಚರಣೆಯ ಸ್ಪಷ್ಟತೆ ತಿಳಿಯದಾಗಿದೆ. ಒಟ್ಟಿನಲ್ಲಿ ಅಂದಿನ ಹಬ್ಬದ ಆಚರಣೆಯಲ್ಲಿ ಆಡಿನ ಬಲಿ ನೀಡುತ್ತಾರೆ. ಅಮಾವಾಸ್ಯೆ ದಿನ ಆಡನ್ನು ಬಲಿಕೊಟ್ಟು ಸೊಳೊಯಿ-ಮಾಂಸದ ಖಾದ್ಯವನ್ನು ತಯಾರಿಸಿ, ಅದಕ್ಕೆ ಸರಾಪು ಸುರಿದು, ಹಣ್ಣು, ಕಾಯಿ, ಗಂಧದ ಕಡ್ಡಿ, ಕರ್ಪೂರ ಹಚ್ಚಿ ಪೂಜಿಸುತ್ತಾರೆ. ಆ ದಿನದಲ್ಲಿ ಬಂದ ಕಾಳಿಮಾಸ್‌ನನ್ನು ಸ್ಮರಿಸಿ ತಮ್ಮ ಎಳೆಯನ್ನು ಕಾಯುವಂತೆಯೂ, ತಮ್ಮನ್ನು, ತಾಂಡಾದ ಜನತೆಯನ್ನು, ದನ-ಕುರಿ, ಹೊಲಗದ್ದೆ ಇವುಗಳ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಕೈ ಮುಗಿದು ಬೇಡಿಕೊಳ್ಳುತ್ತಾರೆ. ನಂತರ ತಮ್ಮ ತಮ್ಮ ಮಾಂಸದ ಪಾಲುಗಳನ್ನು ಪಡೆದು ಮನೆಗೆಹೋಗಿ ಅಡುಗೆಮಾಡಿ ಸೇವಿಸುತ್ತಾರೆ.

**ದೀಪಾವಳಿಯಲ್ಲಿ ಕಿಶೋರಿಯರು**

ಎಲ್ಲರಿಗಿಂತ 'ದೀಪಾವಳಿ ಹಬ್ಬ' ಹೆಣ್ಣು ಮಕ್ಕಳಿಗೆ ಬಹಳ ವಿಶೇಷವಾಗಿರುತ್ತದೆ. ಅಂದು ಕಾಳಿಮಾಸ್ (ದೀಪಾವಳಿ ಅಮಾವಾಸ್ಯೆ) ದಿನ ಮದುವೆಯಾಗದ ಹೆಣ್ಣುಮಕ್ಕಳು ಊರನಾಯ್ಕನ ಮನೆ ಮುಂದೆ ಸೇರಿ, ಅಲ್ಲಿಂದ ಒಂದಚ್ಚು ಬೆಲ್ಲ, ಅಕ್ಕಿ ಮತ್ತು ಕಾಣಿಕೆಗಳನ್ನು ಪಡೆದುಕೊಳ್ಳುತ್ತಾರೆ. ನಂತರ ಎಲ್ಲಾ ಹೆಣ್ಣುಮಕ್ಕಳ ಮನೆಯಿಂದ ಒಂದಚ್ಚು ಬೆಲ್ಲ, ಅಕ್ಕಿ, ಮತ್ತು ವಂತಿಕೆಯ ಹಣ ಪಡೆದು ಅದನ್ನು ಶೇಖರಿಸಿ ಊರನಾಯಕನ ಮನೆಯಲ್ಲಿ ಅಥವಾ ಇತ್ತೀಚೆಗೆ ಅನುಕೂಲವಿರುವ ಮನೆಯಲ್ಲಿ ರಾತ್ರಿಯಲ್ಲಿ ಒಟ್ಟಾಗಿ ಸೇರಿ, ಹಾಡು ಕುಣಿತ ಮಾಡಿಕೊಂಡು ಮಲಗಿದ್ದು ಮಾರನೆ ಬೆಳಗ್ಗೆ ಸರಿಸುಮಾರು ನಾಲ್ಕರ ತಾಸಿಗೆ ಏಳುತ್ತಾರೆ, ನಂತರ ಸ್ನಾನಕ್ಕೆ ನೀರು ಕಾಯಿಸಿ ಅಲ್ಲಿರುವ ಒಬ್ಬ ಚಿಕ್ಕ ಗಂಡು ಮಗುವಿಗೆ ಸ್ನಾನಮಾಡಿಸುತ್ತಾರೆ. ನಂತರ ಎಲ್ಲಾ ಹುಡುಗಿಯರು ಸ್ನಾನ ಮಾಡಿ, ಸಿಹಿ ಬೆಲ್ಲದ ಅನ್ನವನ್ನು ಮಾಡಿ, ದೀಪಾವಳಿ ಹಬ್ಬದ ದೇವತೆಗೆ ನೈವೇದ್ಯವಿಟ್ಟು ನಂತರ ಎಲ್ಲರೂ ಅವರವರ ಮನೆಗೆ ಬೆಲ್ಲದ

ಅನ್ನವನ್ನು ಸಮಪಾಲಿನೊಂದಿಗೆ ಕೊಂಡೊಯ್ಯುತ್ತಾರೆ. ಹಾಗೆಯೇ ನಾಯ್ಕನ ಮನೆಗೂ ಒಂದು ಪಾಲು ಸಿಹಿ ಅನ್ನ ಕಳುಹಿಸಲಾಗುತ್ತದೆ.

ದೀಪಾವಳಿ ಬಂಜಾರರಿಗೆ ಪವಿತ್ರ ಹಬ್ಬ ೨೫೫

ಎರಡನೆಯ ದಿನ ಬಲಿ ಪಾಡ್ಯಮಿಯನ್ನು ಆಚರಿಸುವಲ್ಲಿ ಮನೆಯಲ್ಲಿ ಪೂಜೆ ಪುರಸ್ಕಾರಗಳನ್ನು ಮಾಡಿ, ಮಧ್ಯಾಹ್ನದ ಹೊತ್ತಿಗೆ ಮತ್ತೆ ಹೆಣ್ಣು ಮಕ್ಕಳು ಹಿಂದಿನ ದಿನದ ಉಳಿತಾಯದ ಹಣದಲ್ಲಿ ಮೀರುಭೂಕ್ಯನ ದೇವಸ್ಥಾನದಲ್ಲಿ ಕಾಯಿ-ಹಣ್ಣು, ಕರ್ಪೂರದಿಂದ ಪೂಜಿಸುತ್ತಾರೆ. ನಂತರ ಹೂವು ಕೀಳಲು, ಗಂಡು ಹುಡುಗರ ಕಣ್ಣು ತಪ್ಪಿಸಿ, ಹೆಣ್ಣು ಮಕ್ಕಳು ಹೂವು ಇರುವಲ್ಲಿಗೆ ಹೋಗುತ್ತಾರೆ. ಪಡ್ಡೆ ಹುಡುಗರು ಅವುಗಳನ್ನು ಧ್ವಂಸ ಮಾಡುತ್ತಾರೆ. ಆದರೆ ಕಿಲಾಡಿ ಹೆಣ್ಣುಮಕ್ಕಳು ಹೇಗೋ ನಾಯ್ಕನ ಮನೆಗೆ ಆ ಹೂಗಳನ್ನು ತಂದು ಜೋಪಾನ ಮಾಡಿ, ಊರ ಹಿರಿಯ ಮಹಿಳೆಯರ ಸಹಾಯ ಪಡೆದು, 'ಗೋದನೋಪೂಚೇರ್' ಅಂದರೆ ಕಂಚಿನ ತಟ್ಟೆಯಲ್ಲಿ ಹಸೀಟು ಹಾಕಿ ಮತ್ತು ಒಂದು ದೀಪವನ್ನಿಟ್ಟು ಕೆಂಪುನೀರು ಮಾಡಿಕೊಂಡು ಹಾಡು ಹೇಳುತ್ತಾ ಹಿರಿಯ ಮಹಿಳೆಯರೊಂದಿಗೆ ನಾಯ್ಕನ ಮನೆಯ ಮುಂದೆ ಮೊದಲ ಶಾಸ್ತ್ರ ಪ್ರಾರಂಭಿಸುತ್ತಾರೆ. ಗೊಬ್ಬರದ ಉಂಡೆ ಮಾಡಿಟ್ಟು ಅದರ ಸುತ್ತ ರಂಗೋಲೆ ಹಾಕಿ, ಗೊಬ್ಬರದ ಮೇಲೆ ಹೂವು ಸಿಕ್ಕಿಸಿಹೋಗುತ್ತಾರೆ.

ಹೀಗೆಯೆ ಎಲ್ಲರ ಮನೆ ಮನೆಗೂ ಹೋಗಿ ಶಾಸ್ತ್ರ ಮಾಡಿ ಬರುತ್ತಾರೆ. ನಂತರ ಮುಸ್ಸಂಜೆಯ ವೇಳೆಗಾಗಲೇ ಈ ಕುವರಿಯರು ತಟ್ಟೆಯಲ್ಲಿ ಹರಳೆಣ್ಣೆ ದೀಪ ಇಟ್ಟು 'ಮೇರಾ'ಮಾಡುತ್ತಾರೆ. ಅಂದರೆ ತನ್ನ ಸಂಬಂಧಿಕರಲ್ಲಿಗೆ ಹೋಗಿ, ಅವರ ಸಂಬಂಧವನ್ನು ಹೇಳಿ ಕಿರು ಕಾಣಿಕೆ ಪಡೆಯುತ್ತಾರೆ. ಉದಾ: ದೊಡ್ಡಪ್ಪನ ಹತ್ತಿರ ಹೋದಾಗ ಹೀಗೆ ಹೇಳುತ್ತಾಳೆ 'ಮೊಟಾ-ಪು, ಕೋರ್ ದವಾಳಿ-ತೋನ ಮೇರಾ...! ಅಂದರೆ ದೊಡ್ಡಪ್ಪ, ಕುವರಿ ದೀಪಾವಳಿಯ ಶುಭಾಶಯಗಳು, ನಿನ್ನ ಆಶೀರ್ವಾದ ಕೋರುವೆ ಎಂದರ್ಥವಾಗುತ್ತದೆ. ಆ ಹೆಣ್ಣು ಮಕ್ಕಳಿಗೆ ಹಿರಿಯರು ತಮ್ಮ ಕಿರು ಕಾಣಿಕೆಯನ್ನು ಹಣದ ರೂಪದಲ್ಲಿ ನೀಡಿ ಆಶೀರ್ವದಿಸುತ್ತಾರೆ. ಬಂದ ಶುಭಕಾಣಿಕೆಯನ್ನು ಕುವರಿಯರು ಶೇಖರಿಸಿ ಕೋಳಿ, ಕುರಿ, ಆಡು ಹೀಗೆ ತೆಗೆದುಬಿಡುತ್ತಾರೆ. ಇದರಿಂದ ಹೆಣ್ಣು ಮಕ್ಕಳಲ್ಲಿ ಒಂದಾಣೆಗೆ, ಎರಡಾಣೆ ಮಾಡುವ ಕಲೆಯನ್ನು ಬೆಳೆಸುತ್ತಾರೆ. ಹೆಣ್ಣುಮಕ್ಕಳು ದೀಪಾವಳಿಯಲ್ಲಿ ತಮ್ಮ ಸಂಪ್ರದಾಯದ ರೂಢಿಗಳ ಆಚರಣೆಯನ್ನು ಅಲ್ಲಲ್ಲಿ ಮಾಡುತ್ತಿರುವುದು ಕಾಣಸಿಗುತ್ತದೆ.

## ಕುವರರ ಪಾತ್ರ

ಹೆಣ್ಣು ಮಕ್ಕಳ ಸಂಭ್ರಮದಲ್ಲಿ ಅಡ್ಡಗಾಲಾಕುವುದೇ ಇವರ ಕೆಲಸ. ಕೈಯಲ್ಲಿರುವಷ್ಟು ಪಟಾಕಿಗಳು, ಚಟ ಚಟ, ಪಟ ಪಟ, ಢಂ ಡಿಸ್, ಫುಸ್, ಚಟ್-ಪಟ್ ಹೀಗೆ ವಿವಿಧ ಶಬ್ದಗಳನ್ನು ಮಾಡಿಸುತ್ತಾ ಅಮಾವಾಸ್ಯೆ ದಿನದಿಂದ

ಸಂಭ್ರಮಿಸುತ್ತಾರೆ. ಅಮಾವಾಸ್ಯೆ ದಿನದ ಸಂಜೆಯಲ್ಲಿ 'ಹೆಣ್ಣುಮಕ್ಕಳು ಸ್ನಾನಕ್ಕೆ ತಂದ ನೀರಿಗೆ ಗೊಬ್ಬರ ಹಾಕುವುದು'. ನೀರಿನ ಬೋರ್‌ವೆಲ್‌ಹತ್ತಿರ ದೆವ್ವದ ತರ ನಟಿಸುವುದು, ಭಯಪಡಿಸುವುದು. ಹೀಗೆಲ್ಲಾ ಕಾಟ ಕೊಟ್ಟರೂ ಹೆಣ್ಣುಮಕ್ಕಳು, ಇವೆಲ್ಲಾ ನಮ್ಮೂರ ಹುಡುಗರ ಪೆದ್ದಾಟವೆಂದು ತಿಳಿದಿರುತ್ತದೆ. ಕೆಲವೊಮ್ಮೆ ಗೊಬ್ಬರವನ್ನು ನೀರಿಗೆ ಕಲಸುವಾಗ ಸಿಕ್ಕಿಬಿದ್ದರೆ ಕುವರರು 'ಗೂಸಾನೂ' ತಿನ್ನುತ್ತಾರೆ. ಬೈಗಳಾನು ತಿನ್ನುತ್ತಾರೆ, ಅವರ ಸಾಮರ್ಥ್ಯ ಚಾಕ-ಚಕ್ಯತೆ ಅವರನ್ನು ಕಾಪಾಡುತ್ತದೆ.



ನಂತರ ಬೆಳಗಿನ ಜಾವದಲ್ಲಿ ಕುವರಿಯರು ಕುವರರಿಗೆ ಮಾಡಿಸುವ ಸ್ನಾನಕ್ಕಾಗಿ ನನಗೆ, ನಿನಗೆ ಎಂದು ಕಾಯುತ್ತಾರೆ. ಆದರೆ ಜಾಣ ಹೆಣ್ಣುಮಕ್ಕಳು ತರಲೆಗಳನ್ನು ದೂರ ಇಟ್ಟು, ಸಣ್ಣ ಪುಟ್ಟ ಪಾಪುಗಳಿಗೆ ಸ್ನಾನ ಮಾಡಿಸುತ್ತಾರೆ. ಆಗ ಹುಡುಗರು ಮೋಸ, ಅನ್ಯಾಯ, ಎಂದು ಕೂಗಿಕೊಂಡು ಬಂದದಾರಿಗೆ ಸುಂಕವಿಲ್ಲವೆಂದು ಹೊರಟು ಹೋಗುತ್ತಾರೆ.

**'ಡಬಕಾ' ಸತ್ತವರಿಗೆ ಅನ್ನ ಸಂತರ್ಪಣೆ**

ಸತ್ತ ತಂದೆ-ತಾಯಿ, ತಾತಾ-ಅಜ್ಜಿ, ಚಿಕ್ಕಪ್ಪ-ದೊಡ್ಡಪ್ಪ ಹೀಗೆ ದಾಯಾದಿಗಳನ್ನು ದೇವರಲ್ಲಿ ಸೇರಿಸಿ ಪೂಜಿಸುವ ಕಾರ್ಯಕ್ರಮ. ಇದು ಬಲಿಪಾಡ್ಯಮಿಯ ದಿನ ನಡೆಯುವಂಥದ್ದು. ಅಮಾವಾಸ್ಯೆಯ ಮಾರನೇ ದಿನ, ಮಾಂಸ, ಮದ್ಯ ಇವುಗಳು ಯಾವುದೂ ಸೋಕುವುದಿಲ್ಲ. ಅದನ್ನೆಲ್ಲಾ ಹಿಂದಿನ ದಿನವೇ ಮುಗಿಸಿ, ಮಾರನೇ ದಿನ ಮನೆಯನ್ನು ಶುದ್ದೀಕರಿಸಿ, ಮಡಿಬಟ್ಟೆ ಉಟ್ಟು, ಅಡಿಗೆ ಒಲೆಯನ್ನು ಶೃಂಗರಿಸಿ, ಕೀ ಮಾಡುತ್ತಾರೆ. ಅಂದರೆ, ಅಕ್ಕಿಯನ್ನು ನುಚ್ಚು ಮಾಡಿ ತಯಾರಿಸಿದ ಬೆಲ್ಲದನ್ನವನ್ನು ಕಂಚಿನ ತಟ್ಟೆಯಲ್ಲಿಟ್ಟು, ನಾಡಹಸುವಿನ ತುಪ್ಪವನ್ನು ಶ್ರದ್ಧೆಯಿಂದ-ಮಡಿಯಿಂದ ಮಾಡಿಟ್ಟದ್ದನ್ನು ಅದರಲ್ಲಿ ಹಾಕಿ, ಸತ್ತವರು ಏನೇನು ತಿನ್ನುತ್ತಿದ್ದರು, ಉಡುತ್ತಿದ್ದರು, ಅದನ್ನೆಲ್ಲಾ (ಮಾಂಸ ಖಾದ್ಯವನ್ನು ಬಿಟ್ಟು) ಒಲೆ ಮುಂದೆ ಇಟ್ಟು, ತಮ್ಮ ಕುಟುಂಬ- ಪರಿವಾರದವರ ಸಮ್ಮುಖದಲ್ಲಿ ಮನೆಯ ಹಿರಿಯ ಮಗನು, ತಟ್ಟೆಯಲ್ಲಿರುವ ತುಪ್ಪದ(ಲಾಕ್ಸಿ) ಅನ್ನಕ್ಕೆ ತನ್ನ ಬಲಗೈಯ ಐದು ಬೆರಳನ್ನಿಟ್ಟು, ಸತ್ತ ಎಲ್ಲಾ ತಂದೆ ತಾಯಿ, ಅಜ್ಜ-ಅಜ್ಜಿ (ದಾಯಾದಿಗಳ ಹೆಸರನ್ನು ಕ್ರಮಬದ್ಧವಾಗಿ ಹೇಳಿ, ದೈವೀಶ್ವರೂಪಿಗಳಾದ ನೀವೆಲ್ಲರೂ ಸ್ವೀಕರಿಸಿ ಎಂದು ಕೇಳಿಕೊಂಡು ಅನ್ನದ ಉಂಡೆ ಕಟ್ಟಿ, ಅದನ್ನು ಬೆಂಕಿ ಕೆಂಡದ ಮೇಲೆ ಇಟ್ಟು, ತುಪ್ಪ ಸುರಿಯುತ್ತಾರೆ. ನಂತರ ತೊಳಚಿ ಹಾಗೂ ಸಾಮ್ರಾಣಿಯನ್ನು ಕೆಂಡದ ಮೇಲಿನ ಉಂಡೆಗೆ ಹಾಕುತ್ತಾರೆ. ಆದರೆ ಬೆಂಕಿ ಹತ್ತಬಾರದು. ಹೀಗೆ ಸತ್ತವರಿಗೆ ಒಂದು ಉಂಡೆ, ದೀಪಾವಳಿಗೆ ಒಂದು, ಕುಲದೇವತೆಗೊಂದರಂತೆ

ಮೂರು/ಐದು ಉಂಡೆಗಳನ್ನು ಅಗ್ನಿಗೆ ಸಮರ್ಪಿಸುತ್ತಾರೆ. ಹಣ್ಣುಕಾಯಿ ಕರ್ಪೂರದಿಂದ ಪೂಜಿಸುತ್ತಾ ಎಲ್ಲರೂ ಕುಕ್ಕರಕಾಲಲ್ಲಿ ಕುಳಿತು ಕೈಮುಗಿಯುತ್ತಾರೆ. ನಂತರ ಪ್ರಸಾದ ಹಂಚುತ್ತಾರೆ.

ಇಂತಹ ಕಾರ್ಯಕ್ರಮಗಳು ಎಲ್ಲರ ಮನೆಯಲ್ಲಿ ನಡೆಯುತ್ತದೆ. ಈ ಸಂದರ್ಭದಲ್ಲಿ ತಾಂಡಾದವರು ಒಂದು ಮನೆಯಾದ ಮೇಲೆ ಮತ್ತೊಂದು ಮನೆಗೆ ಪೂಜೆಗೆಂದು ಹೊರಡುತ್ತಾರೆ. ಈ ಪೂಜೆಯಾದ ನಂತರ ಪುರುಷರು ಮತ್ತು ಯುವಕರು 'ಲಗೋರಿ' ಆಡಲು ಹೊರಟರೆ, ಮಹಿಳೆಯರು ನೃತ್ಯ ಮಾಡಲು ಹೋಗುತ್ತಾರೆ. ಹೆಣ್ಣು ಮಕ್ಕಳು ಹೂವು ಕೀಳಲು ಹೋಗುತ್ತಾರೆ.

**ಲಗೋರಿ ಆಟ : ಬೆಳಿಗ್ಗೆಡಬಕಾರ್ ಕಾರ್ಯಕ್ರಮ ಮುಗಿದ ಮೇಲೆ**

ಬಲಿ-ಪಾಡ್ಯಮಿಯ ದಿನ ಪುರುಷರು ಯುವಕರು ಒಂದೆಡೆ ಸೇರುತ್ತಾರೆ. ಈ ಗಂಡಸರ ಕೂಟದಲ್ಲಿ ಭೂಕ್ಯಾ ಮತ್ತು ಮೂಡ್ ಗೋತ್ರವೆಂಬ ಎರಡು ಸಮ ತಂಡಗಳಾಗಿ ಮಾಡಿಕೊಳ್ಳುತ್ತಾರೆ.



“ಸಾತಾ-ಲಗೋರಿ” ಗಾಗಿ ಏಳು ಮಡಿಕೆ ಬಿಲ್ಲೆಗಳನ್ನು ತಯಾರಿಸಿಕೊಳ್ಳುತ್ತಾರೆ. ಚೆಂಡನ್ನು ದಾರದಿಂದ ಎಣೆದು ಬೇಸ್‌ಬಾಲ್‌ನಷ್ಟು ದಪ್ಪದ ಚೆಂಡನ್ನು ತಯಾರಿಸುತ್ತಾರೆ. ಈ ಚೆಂಡನ್ನು ಊರ ನಾಯ್ಕ ಆದವನು ಕಲಾತ್ಮಕವಾಗಿ ಹೊಲಿಸಿಟ್ಟಿರುತ್ತಾರೆ. ಆಟವಾಡುವ ಸ್ಥಳವನ್ನು ನಾಯ್ಕನ ಮನೆ ಮುಂದೆ ಅಥವಾ ಗುರುತಿಸಿದ ಬೀದಿಯಲ್ಲಿ ಈ ಆಟವಾಡುತ್ತಾರೆ. ಆಟವಾಡುವ ಸ್ಥಳದಲ್ಲಿರುವ ಹಿತ್ತಲು-ಚಾವಡಿಗಳಿಗೆ ಚೆಂಡು ನುಗ್ಗಿದರೆ ನೂಕು ನುಗ್ಗಲು ಆದಾಗ ಮುರಿದು ಬಿದ್ದರೆ ಅದನ್ನು ಸಂಬಂಧಿಸಿದ ಮನೆಯವರು ಸಹ ಕೇಳುವಹಾಗಿಲ್ಲ.

**ಆಟಕ್ಕೆ ಬೇಕಾದ ಸಲಕರಣೆ :** ಚೆಂಡು, ಇದನ್ನು 'ದಡಿ' ಎನ್ನುವರು, ಪಿಟ್ಟಿಯಾ ಕ್ರಿಕೆಟ್ ಬ್ಯಾಟ್, ಏಳು ಮಡಿಕೆ ಬಿಲ್ಲೆಗಳು (ಸಾತಾ-ಲಗೋರಿ).

**ತಂಡದ ರಚನಾ ನಿಯಮ :** ಭೂಕ್ಯ ಮತ್ತು ಮೂಡ್ ಗೋತ್ರದ ಸಮಾನ ಯುವಕರ ಎರಡು ತಂಡ ರಚಿಸುತ್ತಾರೆ. ಮತ್ತು ಹಿರಿಯರು ಇದರಲ್ಲಿ ಸೇರಿಕೊಂಡಿರುತ್ತಾರೆ. ಮಡಿಕೆ ಬಿಲ್ಲೆ ಜೋಡಿಸಲು, ಚೆಂಡು ಹೊಡೆಯಲು, ಬ್ಯಾಟ್ ಹಿಡಿಯಲು ಒಬ್ಬೊಬ್ಬ ಪೊದು (ಮಧ್ಯಸ್ತಿಕ) ಆಟಗಾರರಿರುತ್ತಾರೆ. ಈ ಮೂರು ಜನ ಎರಡು ಕಡೆಗೂ ಮನರಂಜನಾತ್ಮಕವಾದ ಆಟವನ್ನು ನಿಷ್ಪಕ್ಷಪಾತವಾಗಿ ನಡೆಸಿಕೊಡುತ್ತಾರೆ.

**ಆಟದ, ಕ್ಷೇತ್ರ ನಿರ್ಮಾಣ :** ಗುರುತಿಸಿದ ಸ್ಥಳದಲ್ಲಿ ಸಾತಾ(ಏಳು) ಮಡಿಕೆ ಬಿಲ್ಲೆಯನ್ನು ಒಂದರ ಮೇಲೊಂದರಂತೆ ಇಡುವ ಜಾಗವು, ಆಟದ ಮಧ್ಯ ಸ್ಥಳವಾಗಿರುತ್ತದೆ. ಈ ಸ್ಥಳದಿಂದ ಸುಮಾರು ೧೦ರಿಂದ ೧೨

ಮೀಟರ್ ದೂರದಲ್ಲಿ ಚೆಂಡಿನಿಂದ ಮಡಿಕೆ ಬಿಲ್ಲೆಯನ್ನು ಹೊಡೆದುರುಳಿಸಲು ಗುತಿಸಿಕೊಳ್ಳಬೇಕು. ಅದರಿಂದ ಮುಂದಕ್ಕೆ ಸುಮಾರು ೧೦ ಮೀಟರ್‌ಗಿಂತ ಗರಿಷ್ಟದಷ್ಟು ಅಗಲದ ಸ್ಥಳವಕಾಶವನ್ನು ಸುಮಾರು ೪೦ರಿಂದ ೬೦ ಮೀಟರ್ ನಷ್ಟು ಉದ್ದಕ್ಕೂ ಇದ್ದರೆ ಒಳ್ಳೆಯದು. ಸ್ವಲ್ಪ ಹೆಚ್ಚ ಕಡಿಮೆ ಸ್ಥಳ ಇದ್ದರೂ ಸಹ ಆಟವಾಡಬಹುದು.

**ನಿಯಮ :** ಆಟದ ಪ್ರಾರಂಭ: ಟಾಸ್ ಹಾಕಿ ಅಲ್ಲಿ ಚೆಂಡು ಹೊಡೆಯುವವನು ಮತ್ತು ಚೆಂಡು ಹಿಡಿಯುವವರನ್ನು ಗುರುತಿಸಿಕೊಳ್ಳುತ್ತಾರೆ. ಟಾಸ್ ಹಾಕುವುದನ್ನು ನೀಲಿ-ಸೂಕಿ ಎಂದು ಕರೆಯುತ್ತಾರೆ, ಟಾಸ್ ಗೆದ್ದವನು ಆಕ್ರಮಣ ಕಾರಿ ಆಟಕ್ಕಾಗಿ ಅಂಕವನ್ನು ಗಳಿಸಲು ಸಾಧ್ಯವಾಗುವುದರಿಂದ, ಚೆಂಡಿನಿಂದ ಸಾತಾ-ಲಗೋರಿ ಹೊಡೆಯಲು ಆಯ್ಕೆ ಮಾಡಿಕೊಳ್ಳುತ್ತಾನೆ. ಟಾಸ್ ಗೆದ್ದವರು ಸರದಿಯಂತೆ ಮೂರು ಅವಕಾಶಗಳನ್ನು ಹೊಂದಿರುತ್ತಾರೆ. ಈ ಅವಕಾಶದಲ್ಲಿ ಮೊದುವಿನ ( ಮಧ್ಯಸ್ಥಿಕೆ) ಆಟಗಾರರು ಸಹ ಸೇರಿಕೊಳ್ಳುತ್ತಾರೆ. ಹಾಗೂ ಆಟದ ಉದ್ಘಾಟನೆಯನ್ನು ಊರ- ನಾಯ್ಕ' ನಿಂದ ಪ್ರಾರಂಭಿಸುತ್ತಾರೆ. ಇವರಿಂದಲೂ ಸಹ ಸಾತಾ-ಲಗೋರಿ ಬಿದ್ದರೆ ಆಟ ಮುಂದುವರೆಯುತ್ತದೆ. ಬೀಳದಿದ್ದರೆ ಸರದಿಯಂತೆ ಸಾತಾ-ಲಗೋರಿಯನ್ನು ಉರುಳಿಸಲು ಪ್ರಯತ್ನಿಸುತ್ತಾರೆ. ಈ ಸಂದರ್ಭದಲ್ಲಿ ಸಾತಾ-ಲಗೋರಿ ಹೊಡೆಯುವಾಗ ಮತ್ತೊಂದು ತಂಡ ಅದರ ಹಿಂದೆ ನಿಂತು ಚೆಂಡನ್ನು ಹಿಡಿಯುತ್ತಾರೆ. ಹೊಡೆತದ ರಭಸದಲ್ಲಿ ಬಂದ ಚೆಂಡು ಮೂರು ಬಾರಿ ನೆಲಕ್ಕೆ ಪುಟಿಸಿ ಬರದೆ ನೇರವಾಗಿ ಒಮ್ಮೆ



ಪುಟಿದು ಬಂದದ್ದನ್ನು ಹಿಡಿದುಕೊಂಡರೆ, ಹೊಡೆತಗಾರನ ಸರದಿಯು ಅಲ್ಲಿಗೆ ಕಡಿತಗೊಳ್ಳುತ್ತದೆ. ಹೀಗೆ ತಮ್ಮ ಎಲ್ಲಾ ಸರದಿಗಳನ್ನು ತೆಗೆದುಕೊಂಡು ಸಾತಾ-ಲಗೋರಿ ಉರುಳಿಸದಿದ್ದರೆ ಚೆಂಡು ಹಿಡಿದ ತಂಡವು ಹೊಡೆಯುವ ಸರದಿಯನ್ನು ಪಡೆಯಲು ಅರ್ಹರಾಗುತ್ತಾರೆ.

ಸಾತಾ-ಲಗೋರಿ ಉರುಳಿಸಿದ ತಂಡ 'ಸಾತಾ ಲಗೋರಿ' ಎಂದು ಹೇಳಿ ನೆಲದಿಂದ ತಕ್ಷಣ ಮಣ್ಣು ಸ್ವಲ್ಪ ಪಡೆದು, ತಾತ್ಕಾಲಿಕವಾಗಿ ತಾನು ಸಜ್ಜಾಗಲು ಅವಕಾಶ ಕೋರುತ್ತಾನೆ. ಇದನ್ನು ಖಾರ್' ಎಂದು ಕರೆಯುತ್ತಾರೆ. ಹೀಗೆ ಖಾರ್ ತೆಗೆದುಕೊಳ್ಳದೇ ಇದ್ದಾಗ ಚೆಂಡು ಬೀಸುವ ಮಧ್ಯಸ್ಥಿಕನು ಕೆಲವೊಮ್ಮೆ ಚೆಂಡಿನಿಂದ ಹೊಡೆದ ಏಟು ತಾಕಿದಾಗ ವಿರುದ್ಧ ತಂಡಕ್ಕೆ ಸಾತಾ-ಲಗೋರಿ ಹೊಡೆಯುವ ಅವಕಾಶ ಮಾಡಿಕೊಡಬೇಕು. ಸಾಮಾನ್ಯವಾಗಿ ಎಲ್ಲರೂ ಸಹ 'ಖಾರ್' ತೆಗೆದುಕೊಳ್ಳುತ್ತಾರೆ. ಹೀಗೆ ಖಾರ್ ತೆಗೆದುಕೊಂಡವರು ವೇಗವಾಗಿ ಸುಮಾರು ೧೦ರಿಂದ ೩೦ ಮೀಟ ದೂರದಲ್ಲಿ ಬ್ಯಾಟ್ ಹಿಡಿಯುವವನ ಹಿಂದೆ ಎರಡು ತಂಡದವರೂ ಸಹ ಹೋಗಿ ನಿಂತುಕೊಳ್ಳುತ್ತಾರೆ. ಮಧ್ಯಸ್ಥಳದಿಂದ ನಿಂತು ಚೆಂಡು ಬೀಸುಗಾರನಿಂದ, ಬ್ಯಾಟ್ ಹಿಡಿದವನ ಕಡೆ ಚೆಂಡನ್ನು ಬೀಸುತ್ತಾನೆ. ಅದನ್ನು ಬ್ಯಾಟ್ ನಿಂದ ತಡೆದು, ಚೆಂಡು ಎತ್ತಿಹಾಕುವವ (ರಕ್ಷಣಾತ್ಮಕ) ನಿಗೆ ಸಹಾಯ ಮಾಡುತ್ತಾನೆ. ಹೀಗೆ ಬೀಸುಗಾರನಿಂದ ಬಂದ ಚೆಂಡನ್ನು

ತಮ್ಮ ಆಕ್ರಮಣಕಾರಿ ತಂಡ ಕಾಲಿನ ಪಾದಗಳಿಂದ ಒತ್ತಿಹಿಡಿದು, ಇಲ್ಲವೇ ಪಾದಗಳಿಂದ ಮುಂದಿನ ದೂರದ ಸ್ಥಳಗಳಲ್ಲಿ ತಳ್ಳಿಕೊಂಡು ಹೋಗುತ್ತಾರೆ. ಈ ಸಂದರ್ಭದಲ್ಲಿ ಲಗೋರಿ ಜೋಡಿಸುವವನು ಸಾತಾ-ಲಗೋರಿಯನ್ನು ಹೊಡೆದುರುಳಿಸಿದ ಸ್ಥಳದಲ್ಲಿ ಬಿಲ್ಲೆಗಳನ್ನು ಮತ್ತೆ ಜೋಡಿಸುತ್ತಾನೆ. ಅದಕ್ಕಾಗಿ ಅವನು ಅನತಿ ದೂರದಲ್ಲಿರುವ, ಯಾವುದಾದರೂ ಹಿತ್ತಲು ಅಥವಾ ಮರೆಯಾದ ಗೋಡೆಗಳಲ್ಲಿ ಅವಿತುಕೊಂಡು ಇರುತ್ತಾನೆ. ಚೆಂಡು ದೂರಕ್ಕೆ ಹೋದಕೂಡಲೇ ಅದನ್ನು ತಂದು ಅಲ್ಲಿ ಜೋಡಿಸಿ ಸಾತಾ-ಲಗೋರಿ ಎಂದು ಹೇಳುತ್ತಾನೆ. ಹೀಗೆ ಮಾಡಿದಾಗ ಒಂದು ಅಂಕ ಆಕ್ರಮಣಕಾರಿ ಆಟಗಾರರಿಗೆ ಸಿಗುವುದು. ನಂತರ ಮತ್ತೆ ಸಾತಾ-ಲಗೋರಿ ಹೊಡೆದುರುಳಿಸುವ ಅವಕಾಶವನ್ನು ಪಡೆಯುತ್ತಾರೆ. ಲಗೋರಿ ಜೋಡಿಸುವಾಗ ಹಿಡಿತಗಾರ ಮತ್ತು ಡಿಪೇನ್ ಆಟಗಾರರಿಂದ ಮರಳಿ ಚೆಂಡು ಬಂದರೆ ಅದರಿಂದ ಲಗೋರಿ ಜೋಡಿಸುವವನು ಹೊಡೆತ ತಿಂದರೆ, ಆಟವು ಹಿಡಿತಗಾರರ ಪಾಲಾಗಿ, ಲಗೋರಿಯನ್ನು ಹೊಡೆದುರುಳಿಸುವ ಅವಕಾಶವನ್ನು ಪಡೆಯುತ್ತಾರೆ. ಇದೊಂದು ಒರಟು ಆಟವಾಗಿರುತ್ತದೆ. ಗಾಯಗಳಾದರೂ ಸಹಿಸಿಕೊಳ್ಳಬೇಕಾಗುತ್ತದೆ. ಗುಂಪಿನಲ್ಲಿ ಕಾಲಿನಿಂದ ಚೆಂಡು ಬಂಧಿಸಲ್ಪಡುತ್ತದೆ. ಆಗ ಎಸೆತಗಾರ ಅದನ್ನು ಬೇಧಿಸಿ, ಕಾಲಿನಿಂದ ಚೆಂಡನ್ನು ಹೊರತೆಗೆದು ಇಲ್ಲವೇ, ಚೆಂಡು ಬ್ಯಾಟ್ ಹಿಡಿತಗಾರನ ಹಿಂದೆ ಬಂದ ಕೂಡಲೇ, ಒದೆಯುವವರ ಕಾಲಿಗೆ ಚೆಂಡು ಸಿಗುವ ಮೊದಲು ಅದನ್ನು ಎಸೆತಗಾರನಿಗೆ ತಲುಪಿಸುತ್ತಾರೆ. ಆಟ ಚಾಲ್ತಿಯಲ್ಲಿದ್ದಾಗ ಚೆಂಡು ಸಾತಾ-ಲಗೋರಿ ಜೋಡಿಸುವ ಮೊದಲು ಲಗೋರಿ ಜೋಡಿಸುವವನಿಗೆ, ಬ್ಯಾಟ್ ಮ್ಯಾನ್‌ಗೆ, ಒಡೆಯುವವನ ಮೊಣಕಾಲಿಗಿಂತ ಮೇಲೆ ಶರೀರದ ಯಾವುದೇ ಅಂಗಕ್ಕೆ ತಾಕಿದರೂ ಸಹ, ವಿರುದ್ಧ



ತಂಡದವರಿಗೆ ಆಟ ಬಿಟ್ಟುಕೊಡಬೇಕು. ಆಟವು ಸಾತಾ-ಲಗೋರಿಯನ್ನು ಹೊಡೆದುರುಳಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ಈ ಮಧ್ಯಸ್ಥಿಕೆಯ ಮೂವರು ಆಟಗಾರರು ತಮ್ಮ ಜಾಣತನದಿಂದ ಎರಡು ತಂಡಕ್ಕೂ ಸಂತೋಷ ಪಡಿಸುತ್ತಾರೆ. ಆಟದ ಮೊದಲು ಬೆಲ್ಲದನ್ನವನ್ನು ಇಟ್ಟು ದೀಪಾವಳಿಯ ಹೆಸರೇಳಿ ಆಟ ಪ್ರಾರಂಭಿಸಿ, ಕೊನೆಯಲ್ಲಿ ಹಣ್ಣು ಕಾಯಿಯಿಂದ ಆಟದ ಸಾಮಾನುಗಳಿಗೆ ಪೂಜಿಸಿ ಕೈಮುಗಿದು ಹೊರಡುತ್ತಾರೆ. ಬಂದ ದೀಪಾವಳಿಯನ್ನು ಸಂತೋಷದಿಂದ ಬರಮಾಡಿಕೊಂಡು ಸುಮಧುರ ನೆನಪುಗಳೊಂದಿಗೆ ಆಚರಣಾ ಪದ್ಧತಿಗಳು ಸಾಗುತ್ತಿದ್ದವು. ಆ ಜಾಗದಲ್ಲಿ ಇಂದು ಕ್ರಿಕೆಟ್ ಆವರಿಸಿದೆ.

**ಮಹಿಳೆಯರ ಪಾತ್ರ:** ದೀಪಾವಳಿಯ ಸಂಭ್ರಮ-ಸಡಗರ ಮಹಿಳೆಯರಿಗೇನೆ ಮೀಸಲು, ಇವರು ತಮ್ಮ ಉಡುಗೆ-ತೊಡುಗೆಗಳನ್ನು ತಮ್ಮ ಕೈ-ಕಸೂತಿ ಮೂಲಕ ಕನ್ನಡಿ, ಕವಡೆ, ಬೆಳ್ಳಿನಾಣ್ಯಗಳನ್ನು ಜೋಡಿಸಿಟ್ಟು ಕಲಾತ್ಮಕವಾಗಿ, ಆಕರ್ಷಿಸುವಂತೆ ಉಡುಗೆ-ತೊಡುಗೆಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಇಂತಹ ಉಡುಗೆ

ತೊಡುಗೆಗಳನ್ನು ತಯಾರಿಸಲು ಕೇವಲ ಒಂದೆರಡು ದಿನ ಸಾಲುವುದಿಲ್ಲ ಆರುತಿಂಗಳಾದರೂ ಬೇಕಾಗುತ್ತಿತ್ತು. ದುಬಾರಿಯಾಗಿದ್ದರೂ ಸಹ ದೀಪಾವಳಿಗೆ ತಮ್ಮ ಉಡುಗೆ ತೊಡುಗೆಗಳನ್ನು ತಯಾರಿಸಿಕೊಂಡು ಹಬ್ಬದಲ್ಲಿ ಹಾಕಿ ಸಂಭ್ರಮಿಸುವುದೆಂದರೆ ಅದೆಲ್ಲಿಲ್ಲದ ಆನಂದ. ಹೀಗೆ ತಮಗಷ್ಟೆಯಲ್ಲದೇ ಹೆಣ್ಣು ಮಕ್ಕಳಿಗಾಗಿ ತಾಯಿಂದಿರು ಮತ್ತು ತಾಯಿಂದಿರಿಗಾಗಿ ಹೆಣ್ಣು ಮಕ್ಕಳು ಸಹ ಕಸೂತಿಯನ್ನು ಮಾಡಿ ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳುತ್ತಿದ್ದರು. ಈ ನಡುವೆ ಹಬ್ಬ ಸಮೀಪಿಸಿದಂತೆ ಮನೆಗೆ ಸುಣ್ಣ-ಬಣ್ಣ ಹಚ್ಚಿ, ಮನೆಯ ಅಂದ-ಚೆಂದಕ್ಕೆ ಕಾರಣವಾಗುತ್ತಾರೆ. ರುಚಿ-ಸವಿರುಚಿಯಾದ ಅಡಿಗೆ ಪಾಕವನ್ನು ಮಾಡಿ ತನ್ನ ಮನೆಮಂದಿಯನ್ನು ಸಂತೋಷಗೊಳಿಸುತ್ತಾರೆ.

**ನೃತ್ಯ:** ಲಂಬಾಣಿ ಮಹಿಳೆಯರು ಕಸೂತಿ ಕಲಾಕಾರರಷ್ಟೆಯಲ್ಲದೆ, ನೃತ್ಯ ಕಲಾವಿದರೂ ಸಹ ಆಗಿರುತ್ತಾರೆ. ವರ್ಷಕ್ಕೊಮ್ಮೆ ಬರುವ ಹಬ್ಬಗಳಲ್ಲಿ ತಮ್ಮ ವಿಶೇಷ ನೃತ್ಯಗಳನ್ನು ಮಾಡುವಾಗ ರಾಜ ಮಹಾರಾಜರುಗಳು, ಗ್ರಾಮದ ಮುಖಂಡರುಗಳು ನೃತ್ಯವನ್ನು ಮೆಚ್ಚಿ ಕೊಡುತ್ತಿದ್ದ ಒಂದಿಷ್ಟು ಹಣದಿಂದ ದೇವರಪೂಜೆ ಮಾಡಿ ಉಳಿದ ಹಣವನ್ನು ತಾವು ಸಹ ಇಟ್ಟುಕೊಳ್ಳುವ ಸಂಪ್ರದಾಯವಿತ್ತು. ಅದುವೇ ವರ್ಷದ ದೀಪಾವಳಿಯ ಹಬ್ಬದಲ್ಲಿ ಮಾತ್ರ ಆದರೆ, ಇಂದೂ ಸಹ ಇವರ ಕಲೆಯನ್ನು ಉಳಿಸಲು ಅಲ್ಲಲ್ಲಿ ಉತ್ತೇಜನ ನೀಡಲಾಗಿದೆ. ಉದಾ:- ಸಾಂಸ್ಕೃತಿಕ ಸಮ್ಮೇಳನ, ದಸರಾ ಮೆರವಣಿಗೆ ಹಾಗೂ ಯಾವುದಾದರೂ ಸಭೆ ಸಮಾರಂಭಗಳಲ್ಲಿ ಈ ನೃತ್ಯ ಕಾಣಸಿಗುತ್ತದೆ. ಅಂತಹ ನೃತ್ಯವನ್ನು ವೃತ್ತಾಕಾರವಾಗಿ ಒಂದೇ ತೆರನಾದ ನಟನೆಯಲ್ಲಿ ಹಾಡನ್ನು ಹಾಡುತ್ತಾ, ಸಂದರ್ಭಕ್ಕೆ ತಕ್ಕ ಸಾಹಿತ್ಯ ಜೋಡಣೆ ಮಾಡಿಕೊಳ್ಳುವ ಜಾಣತನವಿದೆ. ಇಂತಹ ನೃತ್ಯ ದೀಪಾವಳಿಯ ದಿನ ಗ್ರಾಮಗಳಲ್ಲಿ ನಡೆಯುತಿತ್ತು. ಅದೂ ಸಹ ಕಾಲ- ಕ್ರಮೇಣ ಮಾಯವಾಗುತ್ತಿದೆ. ಹೀಗೆ ತಾಂಡಾದವರೆಲ್ಲಾ ಒಟ್ಟಾಗಿ ಸೇರಿ ಆಚರಿಸುವ ಈ 'ದೀಪಾವಳಿ-ಹಬ್ಬಕ್ಕೆ ವಲಸೆ ಹೋಗಿದ್ದರೂ ಸಹ ಮರಳಿ ತನ್ನ ತಾಂಡಾವನ್ನು

ಸೇರುವುದು, ಮೂರಾಸು, ನಾಲಕ್ಕಾಸು ಸಂಪಾದನೆ ಮಾಡಿ, ಸಾಲದಿದ್ದರೆ ಸಾಲಮಾಡಿಯಾದರೂ ಹೊಸ ಬಟ್ಟೆ ಖರೀದಿಸಿ ಉಡುವುದು, ತಮ್ಮ ಸಾಂಪ್ರದಾಯಿಕ ಹಬ್ಬದ ಆಚರಣೆಯಲ್ಲಿ ಅವರ ಬದುಕನ್ನು ಕಟ್ಟಿಕೊಂಡಿರುವುದನ್ನು ಕಾಣಬಹುದು. 'ತನ್ನ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅತೀವವಾದ ಅಭಿಮಾನವಿರುವುದರಿಂದ. ಇವರ ಮದುವೆಯ ಸಂಸ್ಕೃತಿ ಹೆಚ್ಚು ಶ್ರೀಮಂತಿಕೆಯಿಂದ ಕೂಡಿದೆ. ಎಲ್ಲವೂ ಆಧುನಿಕ ಟಿ.ವಿ. ಮಾಧ್ಯಮಗಳಿಂದ ಯಾವುದು ಸರಿ, ಯಾವುದು ತಪ್ಪು ಎಂದು ತಿಳಿಯದೇ. ಸ್ವಾಮೀಜಿಗಳು, ಹೇಳುವ ಸಂಪ್ರದಾಯಗಳು ಇಂತಹ ಸಂಸ್ಕೃತಿಯ ಅಳಿವಿಗೆ ಕಾರಣವಾಗುತ್ತಿದೆ. ಈ ನಡುವೆ ಸಂಸ್ಕೃತಿ ಇಲಾಖೆ, ಪ್ರಚಾರ ಮಾಧ್ಯಮಗಳು ಒಂದಿಷ್ಟು ಅದರ ಕಲಾವೈಭವಕ್ಕೆ ಕಾರಣವಾದರೆ, ಮುಂದಿನ ಪೀಳಿಗೆಯಲ್ಲಿ ಹಳೆ ಬೇರು-ಹೊಸ ಚಿಗುರನ್ನು ಕಾಣಬಹುದಾಗಿದೆ. ಈ ದೀಪಾವಳಿ ಹಬ್ಬದ ಆಚರಣೆಗಳಲ್ಲಿ ಇತ್ತೀಚೆಗೆ ವಿವಿಧ ಗ್ರಾಮಗಳಲ್ಲಿ ಅಮಾವಾಸ್ಯೆಯ ದಿನ ಮಾಂಸ ಮಾಡುವುದು ವೈದಿಕ ಧರ್ಮದಲ್ಲಿ ಸಲ್ಲುವುದಿಲ್ಲವೆಂದು ಹೆದರಿ, ಅಮಾವಾಸ್ಯೆಯ ಹಿಂದಿನ ಅಥವಾ ಮುಂದಿನ ದಿನಗಳಲ್ಲಿ ಕಾಳಿ-ಮಾಸ್( ಮರಿ ಕುಯ್ದು) ಹಬ್ಬವನ್ನು ಆಚರಿಸುತ್ತಾರೆ.

**ದಲಿತ ಚಳವಳಿಯ ಒಡನಾಟ ಒಂದು ಅವಲೋಕನ**

**ಟಿ. ತಿಪ್ಪೇಸ್ವಾಮಿ ಕೆರೆಯಾಗಳಹಳ್ಳಿ**

ನಾನು ಎಸ್‌ಎಸ್‌ಎಲ್‌ಸಿ ಉತ್ತೀರ್ಣನಾಗಿ ೧೯೮೪-೮೫ನೇ ಸಾಲಿಗೆ ಕಲಾ ಕಾಲೇಜು ಚಿತ್ರದುರ್ಗ, ಇಲ್ಲಿ ಪ್ರಥಮ ಪಿಯುಸಿಗೆ ದಾಖಲಾದೆನು. ಕರುವಿನಕಟ್ಟೆ ಸರ್ಕಲ್ ಹತ್ತಿರ ವಾಸ ಮಾಡಲು ಒಂದು ಸಣ್ಣ ಕೊಠಡಿ ಇತ್ತು. ಸರ್ಕಾರಿ ಆಸ್ಪತ್ರೆಯ ಹಿಂಭಾಗದಲ್ಲಿ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ನಿಲಯ ಇತ್ತು. ಆ ವಿದ್ಯಾರ್ಥಿ ನಿಲಯದಲ್ಲಿ ಊಟ ಮಾಡಿಕೊಂಡು ಹೋಗಿ ವಾಸ ಮಾಡುತ್ತಿದ್ದೆನು. ಒಂದು ದಿನ ಡಿಎಸ್‌ಎಸ್‌ನ ಹೋರಾಟಗಾರರು ಮತ್ತು ಕಾರ್ಯಕರ್ತರು ವಿದ್ಯಾರ್ಥಿ ನಿಲಯಕ್ಕೆ ಬಂದು ನಾಳೆ ಸ್ಟ್ರೈಕ್ ಇದೆ, ನೀವೆಲ್ಲರೂ ಬರಬೇಕೆಂದು ಭಾಷಣ ಮಾಡಿ ಕರಪತ್ರವನ್ನು ಹಂಚಿ ಗೋಡೆಗೆ ಅಂಟಿಸಿ ಹೋದರು. ನಾನು ಶ್ರದ್ಧಾ ಭಕ್ತಿಯಿಂದ ಓದಿಕೊಂಡು ಕೊಠಡಿಗೆ ಬಂದೆನು. ನನಗೆ ರಾತ್ರಿಯೆಲ್ಲಾ ಮನಸ್ಸಿಗೆ ನಿದ್ರೆ ಇಲ್ಲದೆ ಡಿಎಸ್‌ಎಸ್ ಎಂದರೇನು? ಇದರ ಹೋರಾಟ ಯಾರ ಪರವಾಗಿ ಇರುತ್ತದೆ ಎಂದು ಚಿಂತಿಸಿದೆ. ಏಕೆಂದರೆ ನಾನು ಹೊಳಲ್ಕೆರೆ ತಾಲ್ಲೂಕಿನ ಹೊರಕೆರೆದೇವರಪುರದ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರಬೇಕಾದರೆ ನನಗೆ ಇಂಗ್ಲಿಷ್ ಶಿಕ್ಷಕರಾದ ಆರ್.ಶಿವರುದ್ರಪ್ಪನವರು ಆರ್‌ಎಸ್‌ಎಸ್ ಸಂಘಟನೆಯಲ್ಲಿ ಇದ್ದರು. ಅವರು ಪ್ರೌಢಶಾಲೆ ಮತ್ತು ಊರಿನ ಕೆಲವು ಹುಡುಗರನ್ನು ಸೇರಿಸಿಕೊಂಡು ಒಂದು ಬಾವುಟ ನೆಟ್ಟು ದೇಶದ ಬಗ್ಗೆ ದೇಶಸೇವೆಯ ಬಗ್ಗೆ ಭಾಷಣ ಮಾಡುತ್ತಿದ್ದರು. ನನಗೆ ಅತ್ಯಂತ ಅಚ್ಚುಮೆಚ್ಚಿನ ಶಿಕ್ಷಕರು ಆಗಿದ್ದರಿಂದ ಕೆಲವು ದಿನ ಹೋಗಿ ಬಂದು ಒಂದು ದಿನ ಶಾಶ್ವತವಾಗಿ ಹೋಗುವುದನ್ನು ನಿಲ್ಲಿಸಿಬಿಟ್ಟೆನು.

ಡಿಎಸ್‌ಎಸ್ ಬಗ್ಗೆ ಕೆಲವು ಗೆಳೆಯರನ್ನು ಕೇಳಿದೆನು. ಯಾರು ಕೂಡ ಸ್ಪಷ್ಟವಾಗಿ ಅದರ ಗುರಿ ಉದ್ದೇಶದ ಬಗ್ಗೆ ಹೇಳಲಿಲ್ಲ. ಅದೇ ಡಿಎಸ್‌ಎಸ್‌ನವರು ಬೆಳಗ್ಗೆ ವಿದ್ಯಾರ್ಥಿ ನಿಲಯಕ್ಕೆ ಬಂದು ನಮ್ಮನ್ನು ಅಡ್ಡಗಟ್ಟಿ ಬಲವಂತವಾಗಿ ಕರೆದುಕೊಂಡು ಹೋದರು. ಚಿತ್ರದುರ್ಗ ಜಿಲ್ಲೆಯ ಯಾವುದೂ ಒಂದು ಹಳ್ಳಿಯಲ್ಲಿ ದಲಿತರನ್ನು ಹೊಡೆದಿದ್ದರಂತೆ, ಬಹಿಷ್ಕಾರ ಹಾಕಿದರಂತೆ ಇದನ್ನು ಪ್ರತಿಭಟಿಸಿ ಜಿಲ್ಲಾಧಿಕಾರಿಗಳವರಿಗೆ ಒಂದು ಮನವಿ ಪತ್ರವನ್ನು ಕೊಡುವುದಾಗಿ ಈ ಹೋರಾಟ ನಿಗದಿಯಾಗಿತ್ತು. ಹೊಳಲ್ಕೆರೆ ರಸ್ತೆಯ ಗಾಯತ್ರಿ ಭವನದವರೆಗೆ ಘೋಷಣೆ ಕೂಗುತ್ತಾ ವಿದ್ಯಾರ್ಥಿಗಳು ಮತ್ತು ಹಳ್ಳಿಯಿಂದ ಬಂದ ಜನಸಾಗರ ಮೆರವಣಿಗೆ ಹೊರಟಿತ್ತು. ನಾವು ಸಾಲಾಗಿ ಹೋಗುತ್ತಿದ್ದೆವು. ಡಿಎಸ್‌ಎಸ್ ಜಿಂದಾಬಾಂದ್, ಡಿಎಸ್‌ಎಫ್ ಜಿಂದಾಬಾದ್, ಡಾ.ಬಿ.ಆರ್.ಅಂಬೇಡ್ಕ ಜಿಂದಾಬಾದ್, ಎಲ್ಲಿಯವರೆಗೆ ಹೋರಾಟ ಗೆಲ್ಲುವವರೆಗೆ ಹೋರಾಟ, ರಕ್ತವನ್ನು

ಚೆಲ್ಲುತ್ತೇವೆ ನ್ಯಾಯವನ್ನು ಗೆಲ್ಲುತ್ತೇವೆ, ಏನೇ ಬರಲಿ ಒಗ್ಗಟ್ಟು ಇರಲಿ, ಶಾಂತಿ ಶಿಸ್ತು ಎಂದು ಒಬ್ಬರು ಮುಂದೆ ಹೇಳಿದರೆ ನಾವೆಲ್ಲ ಹಿಂದಿಂದೆ ಘೋಷಣೆ ಕೂಗುತ್ತಿದ್ದೆವು. ಡಿಸಿ ಕಚೇರಿಯ ಹತ್ತಿರ ಮೆರವಣಿಗೆ ಬಂದಿತು. ಅಲ್ಲಿ ದಲಿತ ಕಲಾಮಂಡಳಿಯವರು ಹೋರಾಟದ ಹಾಡುಗಳನ್ನು ಹಾಡುತ್ತಿದ್ದರು. ನನಗೆ ಈ ಹಾಡುಗಳು, ಈ ಘೋಷಣೆಗಳು ಹೊಸದಾಗಿ ಕಂಡು ಬಂದವು. ನನಗೆ ಇನ್ನೂ ನೆನಪು ಇದೆ ಡಿಎಸ್‌ಎಸ್‌ನ ಜಯಣ್ಣ ಭಾಷಣ ಮಾಡಿದರು. ಭಾಷಣದ ವಸ್ತು ವಿಚಾರ ಏನೆಂದರೆ ಯಾವುದೂ ಜಾತ್ರೆಯಲ್ಲಿ ದಲಿತರು ಕೋಣ ಕಡಿಯುವುದಿಲ್ಲವೆಂದು ನಿರ್ಧಾರ ಮಾಡಿದ್ದರಂತೆ, ಬೇರೆ ಜಾತಿಯವರು ಹಠಕ್ಕೆ ಬಿದ್ದು ಕೋಣ ಕಡಿಯಲೇಬೇಕು ಎಂದು ಒತ್ತಾಯ ಮಾಡಿದರಂತೆ. ಮಾತಿಗೆ ಮಾತು ಬೆಳೆದು ಹೊಡೆದಾಟ, ಬಡಿದಾಟ ನಡೆಯಿತಂತೆ, ಕೋಣ ಕಡಿಯದಿದ್ದಕ್ಕೆ ಬಹಿಷ್ಕಾರ ಹಾಕಿದ್ದರಂತೆ. ಅಲ್ಲಿಗೆ ನಾವು ಈಗಾಗಲೇ ಹೋಗಿ ಬಂದಿದ್ದೇವೆ. ಪೊಲೀಸ್ ಕೇಸ್ ಕೂಡ ಆಗಿದೆ. ಇದಕ್ಕೆ ಡಿ.ಸಿ.ಯವರು ಪೊಲೀಸ್ ಇಲಾಖೆಯವರು ಸೂಕ್ತ ಕ್ರಮ ಕೈಗೊಂಡು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಜಯಣ್ಣನವರು ಜೋರು ಧ್ವನಿಯಲ್ಲಿ ಭಾಷಣ ಮಾಡಿ ಜೈ ಭೀಮ್ ಎಂದು ನಿಲ್ಲಿಸಿದರು. ಆ ಮೇಲೆ ದುರುಗೇಶಣ್ಣ, ಸಿ.ಕೆ.ಮಹೇಶ ಅವರು ಮಾತನಾಡಿದರು. ಅಲ್ಲಿಗೆ ಆ ದಿನ ಸ್ಟ್ರೈಕ್ ಮುಕ್ತಾಯವಾಯಿತು.

೧೫.೦೮.೧೯೮೪ನೇ ಇಸವಿ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮ ೧೪.೦೮.೧೯೮೪ ರಂದು ಇದೇ ಡಿಎಸ್‌ಎಸ್ ಹೋರಾಟಗಾರರು ಕರಪತ್ರ ಹಿಡಿದು ನಮ್ಮ ವಿದ್ಯಾರ್ಥಿ ನಿಲಯಕ್ಕೆ ಬಂದರು. ದಲಿತರಿಗೆ ಸ್ವಾತಂತ್ರ್ಯ, ಸಮಾನತೆ ಸಿಕ್ಕಿಲ್ಲ. ಹಾಗಾಗಿ ನಾವು ಈ ಸ್ವಾತಂತ್ರ್ಯ ದಿನಾಚರಣೆಯನ್ನು ಬಹಿಷ್ಕರಿಸಬೇಕು. ನಾವು ಯಾರು ಕೂಡ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಬಾರದು. ನಾವು ನಾಳೆ ಬೆಳಗ್ಗೆ ಇಲ್ಲಿಗೆ ಬರುತ್ತೇವೆ. ನೀವೆಲ್ಲರೂ ಮೆರವಣಿಗೆ, ಬಹಿಷ್ಕಾರಕ್ಕೆ ಬರಬೇಕೆಂದು ಭಾಷಣ ಮಾಡಿದರು. ನಾನು ಬೆಳಗ್ಗೆ ವಿದ್ಯಾರ್ಥಿ ನಿಲಯಕ್ಕೆ ಬಂದಾಗ ಗೋವಿಂದಪ್ಪ ಮತ್ತು ಗೌರಿ ರುಚಿ ರುಚಿಯಾಗಿ ಮಂಡಕ್ಕಿ ಒಗ್ಗರಣೆ ಮಾಡಿದ್ದರು. ನಾವೆಲ್ಲ ಗೆಳೆಯರು ತಿಂಡಿ ತಿನ್ನಬೇಕಾದರೆ ಡಿಎಸ್‌ಎಸ್‌ನ ಹೋರಾಟಗಾರರು ಮತ್ತು ಕಾರ್ಯಕರ್ತರು ಅಲ್ಲಿಗೆ ಬಂದು ತಿಂಡಿ ತಿಂದು ಹೋಗುವವರನ್ನು ಅಡ್ಡಗಟ್ಟಿ ಒಂದು ಕಡೆ ಕಲೆ ಹಾಕುತ್ತಿದ್ದರು. ಕೆಲವರು ನುಸುಳಿಕೊಂಡು ತಪ್ಪಿಸಿಕೊಂಡು ಹೋದರು. ಆದರೆ ನಾನು ಮಾತ್ರ ಬಹಳ ಕುತೂಹಲದಿಂದ ಡಿಎಸ್‌ಎಸ್ ಮೆರವಣಿಗೆಯಲ್ಲಿ ಭಾಗವಹಿಸಿದೆನು. ಆ ದಿನ ಡಿಎಸ್‌ಎಸ್ ಕಾರ್ಯಕರ್ತರು, ಹೋರಾಟಗಾರರು ಸ್ವಾತಂತ್ರ್ಯ ದಿನಾಚರಣೆಯಂದು ಅದೇ ಘೋಷಣೆಗಳನ್ನು ಕೂಗಿಕೊಂಡು ಕಾರ್ಯಕ್ರಮ ನಡೆಯುವಲ್ಲಿಗೆ ಮೆರವಣಿಗೆ ಬಂದಿತು. ಜಯಣ್ಣನವರು ಸೇರಿದಂತೆ ಡಿಎಸ್‌ಎಸ್‌ನ ಮುಖಂಡರನ್ನು ಪೊಲೀಸರು ಬಂಧಿಸಿ ಕರೆದುಕೊಂಡು ಹೋದರು. ವಿದ್ಯಾರ್ಥಿಗಳು ಮತ್ತು ಕೆಲವು ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದೆವು, ಆಗಿನ ಜಿಲ್ಲಾ ಮಂತ್ರಿ ಭಾಷಣ ಮಾಡಲು ಮೈಕ್ ಸರಿಮಾಡಿಕೊಳ್ಳುತ್ತಿದ್ದರು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ಕೆಲವರು ಹೊಟ್ಟೆಯಲ್ಲಿ, ಜೇಬಿನಲ್ಲಿ ಬಚ್ಚಿಟ್ಟುಕೊಂಡಿದ್ದ ಕಪ್ಪು ಬಾವುಟವನ್ನು ಪ್ರದರ್ಶನ ಮಾಡಿ ಜಿಲ್ಲಾ ಮಂತ್ರಿಗಳಿಗೆ ಧಿಕ್ಕಾರ, ಪೊಲೀಸರಿಗೆ ಧಿಕ್ಕಾರ ಎಂದು ಕೂಗಿದರು.

ಅಷ್ಟರಲ್ಲಿ ಪೊಲೀಸರು ಕೆಲವು ವಿದ್ಯಾರ್ಥಿಗಳನ್ನು, ಕಾರ್ಯಕರ್ತರನ್ನು ಬಂಧಿಸಿ ಕರೆದುಕೊಂಡು ಹೋದರು. ಸಾಯಂಕಾಲವಾದರೂ ಬಿಡಲಿಲ್ಲ. ಕೆಲವರು ನಮಗೆ ಹಸಿವು ಆಗಿದೆ ತಿಂಡಿ ಊಟ ಬೇಕೆಂದು ದಾಂಧಲೆ ಮಾಡಿದರು. ಪೊಲೀಸರು ಚಿತ್ರಾನ್ನ ಕಟ್ಟಿಸಿಕೊಂಡು ಬಂದು ನಮಗೆ ಹಂಚಿದರು. ಅದನ್ನು ನಾವೆಲ್ಲರೂ ಊಟ ಮಾಡಿದೆವು. ಆ ನಂತರ ನಮ್ಮನ್ನು ಸಂಜೆ ಏಳು ಗಂಟೆಗೆ ಬಿಡುಗಡೆ ಮಾಡಲಾಯಿತು.

ಅಲ್ಲಿಂದ ಡಿಎಸ್ಎಸ್‌ನ ನಂಟು ಗಟ್ಟಿಯಾಯಿತು. ಪದವಿ ಪೂರ್ವ ಹಂತ ಮುಗಿದು ಪದವಿಗೆ ದಾಖಲಾದೆನು. ಬಿ.ಪಿ.ತಿಪ್ಪೇಸ್ವಾಮಿ, ಎನ್.ತಿಪ್ಪೇಸ್ವಾಮಿ, ಚಿತ್ರಲಿಂಗಸ್ವಾಮಿ, ರಾಜಕುಮಾರ್, ಬೀಸನಹಳ್ಳಿ ಜಯಣ್ಣ, ಬೆಳಗಟ್ಟ ನಾಗರಾಜ್, ಪಾರ್ಥಸಾರಥಿ, ಬೆಳ್ಳಿಬಟ್ಟು ಚಂದ್ರಣ್ಣ, ಧರ್ಮಣ್ಣ ಇವರೆಲ್ಲರ ಪರಿಚಯವಾಯಿತು. ಡಿಎಸ್ಎಸ್‌ನ ಆಗಿನ ಕಾರ್ಯಕರ್ತರು ಹೋರಾಟಗಾರರು ಆದ ಡಿಎಸ್ಎಸ್ ಜಯಣ್ಣ, ಸಿ.ಕೆ.ಮಹೇಶ್, ಮಾಯಣ್ಣ, ದುರುಗೇಶಣ್ಣ, ಎಸ್.ಹನುಮಂತಪ್ಪ, ಸಿ.ಎ.ಚಿಕ್ಕಣ್ಣ ಎಸ್.ಹನುಮಂತಪ್ಪ ರಾಮುಗೋಸಾಯಿ, ಜಾಲಿಕಟ್ಟೆ ಹನುಮಂತಣ್ಣ, ಗುಬ್ಬಿ ಹನುಮಂತಪ್ಪ, ಟಿ.ರಾಮು, ಡಿ.ಟಿ.ರಾಜಗಿರಿ ಇವರ ಪರಿಚಯ ಬಂಧುತ್ವ ಹತ್ತಿರವಾಯಿತು. ಅಂದಿನಿಂದ ಡಿಎಸ್ಎಸ್ ಯಾವುದೇ ಕಾರ್ಯಕ್ರಮ ಹೋರಾಟ ಎಂದ ತಕ್ಷಣ ನಾನು ಅಲ್ಲಿ ಹಾಜರಿರುತ್ತಿದ್ದೆನು. ಏಕೆಂದರೆ ಈ ಚಳುವಳಿ ಬಡವರ, ದಲಿತರ, ಅಸ್ಪೃಶ್ಯರ, ಮಹಿಳೆಯರ ಪರವಾಗಿತ್ತು. ಬುದ್ಧ, ಬಸವ ಅಂಬೇಡ್ಕರ್‌ರ ತತ್ವ ಸಿದ್ಧಾಂತದ ಮೇಲೆ ನಿಂತಿತ್ತು. ಹಾಗೂ ನ್ಯಾಯಪರವಾಗಿತ್ತು. ಸಂವಿಧಾನದ ಸವಲತ್ತುಗಳು ದಲಿತರಿಗೆ ದಕ್ಕಬೇಕು, ದಲಿತರು ವಿದ್ಯಾವಂತರಾಗಬೇಕು ಎಂಬಂತಹ ಗುರಿ ಉದ್ದೇಶಗಳು ಡಿಎಸ್ಎಸ್‌ನಲ್ಲಿ ಮತ್ತು ಹೋರಾಟಗಾರರಲ್ಲಿ ಇತ್ತು. ದಲಿತರಿಗೆ ನಿಜವಾದ ರಕ್ಷಣೆ, ನ್ಯಾಯ, ಇಲ್ಲಿ ದೊರಕುತಿತ್ತು. ಆ ದಶಕದಲ್ಲಿ ಡಿಸಿ, ಎಸ್‌ಪಿ, ಎಂ.ಎಲ್.ಎ, ಎಂ.ಪಿ, ಸರ್ಕಾರಿ ಅಧಿಕಾರಿಗಳ ಮೈಯಲ್ಲಿ ನಡುಕ ತರಿಸುವಂತಹ ಹೋರಾಟ ಡಿಎಸ್ಎಸ್‌ನ ಕಾರ್ಯಕರ್ತರಲ್ಲಿ ಮತ್ತು ಹೋರಾಟದಲ್ಲಿ ಇತ್ತು.

ಬೆಂಗಳೂರು ಚಲೋ ಕಾರ್ಯಕ್ರಮ ನಿಗದಿಯಾಗಿತ್ತು. ಆಗ ಡಿಎಸ್ಎಸ್‌ನ ಮುಖಂಡರು ಹೋರಾಟಗಾರರು ವಿದ್ಯಾರ್ಥಿನಿಲಯಕ್ಕೆ ಬಂದು ಬೆಂಗಳೂರು ಚಲೋ ಕಾರ್ಯದ ಬಗ್ಗೆ ಭಾಷಣ ಮಾಡಿ ಕರಪತ್ರ ಹಂಚಿ, ನೀವೆಲ್ಲರೂ ಈ ದಿನ ಸಾಯಂಕಾಲ ರೈಲ್ವೆ ಸ್ಟೇಷನ್‌ಗೆ ಬರಬೇಕು. ಅಲ್ಲಿಂದ ರೈಲಿನಲ್ಲಿ ಬೆಂಗಳೂರಿಗೆ ಹೋಗಬೇಕು. ಬೆಂಗಳೂರಿನಲ್ಲಿ ಒಂದು ಬೆಂಗಳೂರು ಚಲೋ ಕಾರ್ಯಕ್ರಮವಿದೆ ಬರಬೇಕೆಂದು ಕರೆ ಕೊಟ್ಟರು. ನನಗೆ ಆ ದಿನ ಸಡಗರ ಸಂಭ್ರಮ. ಏನೆಂದರೆ ನಾನು ಬೆಂಗಳೂರು ನೋಡಬೇಕು, ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂಬ ಮಹಾದಾಸೆಯಿಂದ ಗೆಳೆಯರೊಂದಿಗೆ ರೈಲ್ವೆ ಸ್ಟೇಷನ್‌ಗೆ ಬಂದೆವು. ಚಿತ್ರದುರ್ಗದ ರಸ್ತೆಯಲ್ಲಿ ಡಿಎಸ್ಎಸ್ ಹೋರಾಟಗಾರರು ಕಾರ್ಯಕರ್ತರು ಇರುವೆ ಸಾಲು ಬಂದಂತೆ ರೈಲ್ವೆ ಸ್ಟೇಷನ್‌ಗೆ ಬಂದರು. ನಿಲ್ಲಲು, ಕುಳಿತುಕೊಳ್ಳಲು ಅಲ್ಲಿ ಜಾಗವಿರಲಿಲ್ಲ. ದಲಿತ ಕಲಾಮಂಡಳಿಯ ಹುಲ್ಲೂರು ಕುಮಾರಣ್ಣ, ಕಂಪಾಲಿ ತಿಪ್ಪೇಸ್ವಾಮಿ, ಶಿವಮೂರ್ತಿ ಹೋರಾಟದ

ಹಾಡುಗಳನ್ನು ಹಾಡುತ್ತಿದ್ದರು, ನಾವು ಕೂಡ ಹಿಮ್ಮೇಳದಲ್ಲಿ ಹೇಳುತ್ತಿದ್ದೆವು. ಕೆಲ ಸಮಯದ ನಂತರ ನನ್ನ ಕಣ್ಣಿಗೆ ನೇತಾಡುವ ಗಂಟೆ ಕಾಣಿಸುತಿತ್ತು. ನೇರವಾಗಿ ಹೋದವನೆ ಮೂರು ಸಾರಿ ಗಂಟೆಯನ್ನು ಢಣ ಢಣ ಢಣ ಎಂದು ಬಾರಿಸಿ ಕಣ್ಣುಮುಚ್ಚಿ ಕೈ ಮುಗಿದುಕೊಂಡು ನಿಂತುಕೊಂಡೆನು. ರೈಲ್ವೆ ಇಲಾಖೆಯವರು ನನ್ನ ರಟ್ಟೆ ಹಿಡಿದು ಎಳೆದುಕೊಂಡು ಹೋಗುತ್ತಿದ್ದರೆ ಜನರೆಲ್ಲ ರೈಲು ಬಂತು ಎಂದು ಕೂಗುತ್ತಾ ರೈಲು ಹತ್ತಲು ಸಜ್ಜಾದರು. ನನ್ನನ್ನು ರೈಲ್ವೆ ಇಲಾಖೆಯವರು ಎಳೆದುಕೊಂಡು ಹೋಗುತ್ತಿರುವುದನ್ನು ಗಮನಿಸಿದ ಗೆಳೆಯರು ಕೈ ಬಿಡಿ ಸರ್ ಅವನಿಗೆ ಗೊತ್ತಿಲ್ಲ ಎಂದು ಕ್ಷಮೆ ಕೇಳಿದರು. ರೈಲು ಬಂತು ಎಲ್ಲರೂ ಹತ್ತಿಕೊಂಡು ಹೋರಾಟದ ಹಾಡುಗಳನ್ನು ಹಾಡಿಕೊಂಡು ಬೆಂಗಳೂರು ತಲುಪಿದೆವು. ಕಬ್ಬನ್‌ಪಾರ್ಕ್‌ನಲ್ಲಿ ತಿಂಡಿ ವ್ಯವಸ್ಥೆ ಮಾಡಲಾಯಿತು. ತಿಂಡಿ ತಿಂದು ಮೆರವಣಿಗೆಯಲ್ಲಿ ಕಾಲೇಜಿನ ಆವರಣದ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬಂದೆವು. ದಲಿತ ಕಲಾಮಂಡಳಿಯವರು ಹೋರಾಟದ ಹಾಡುಗಳನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಭೆಯಲ್ಲಿ ಪ್ರೊ.ಬಿ.ಕೃಷ್ಣಪ್ಪ, ಮಾವಳ್ಳಿ ಶಂಕರ್, ಡಿ.ಜಿ.ಸಾಗರ್, ಶ್ರೀಧರ್ ಕಲಿವೀರ್, ಕೋಲಾರ ಮುನಿಯಪ್ಪ, ಚಿತ್ರದುರ್ಗ ಜಯಣ್ಣ, ಸಿ.ಕೆ.ಮಹೇಶ್ ಭಾಷಣ ಮಾಡಿದರು. ಅಲ್ಲಿಗೆ ಬೆಂಗಳೂರು ಚಲೋ ಕಾರ್ಯಕ್ರಮ ಮುಕ್ತಾಯವಾಯಿತು.

ಚಿತ್ರದುರ್ಗ ಜಿಲ್ಲೆ ಭರಮಸಾಗರ ಹೋಬಳಿ ಗೋಪನಾಳ್ ಗ್ರಾಮಕ್ಕೆ ಡಿಎಸ್‌ಎಸ್ ಕಾಲು ನಡಿಗೆ ಜಾತಾ ಇತ್ತು. ದಲಿತ ಕಲಾಮಂಡಳಿಯವರು ಹೋರಾಟದ ಈ ಹಾಡನ್ನು ಹಾಡುತ್ತಿದ್ದರು.

ಕೊಲೆ ಸುಲಿಗೆ ನಾಡೊಳಗೆ ಅವಮಾನ ಅತ್ಯಾಚಾರ
ನಾಡಲ್ಲವೋ ಇದು ವಿಷದ ಸಮುದ್ರ
ವಿಷದ ಸಮುದ್ರವನ್ನು ಕಡೆಯುತ್ತಾ ಬಂದೆವು ನಾವು
ಹಾರುತ್ತಾ ಕಾಣದೆ ಕಗ್ಗಲ್ಲಾಗಿ ನಿಂತೆವಲ್ಲೊ
ಹಾಲು ಮಾರುವ ಬೀದಿ, ನೂಲು ಮಾರುವ ಬೀದಿ
ಅಕ್ಕ ತಂಗಿಯರ ಕೇರಿ ಅಣ್ಣ-ತಮ್ಮಂದಿರ ಕೇರಿ
ಊರೂರು ತಿರುಗಿ ಈ ಊರಿಗೆ ಬಂದೆವಲ್ಲೊ
ಚಿತ್ರದುರ್ಗ ಜಿಲ್ಲೆಯ ಭರಮಸಾಗರ ಹೋಬಳಿ
ಗೋಪನಹಳ್ಳಿ ಗ್ರಾಮದಲ್ಲಿ
ಹತ್ತು ಸೇರು ಜೋಳವನ್ನು ಕಣದಲ್ಲಿ ಕದ್ದಾನೆಂದು
ನನ್ನ ತಮ್ಮ ನಾಗರಾಜನನ್ನು ಕೊಂದು ನೇಣು ಹಾಕಿದರಲ್ಲೊ

ನನ್ನ ತಮ್ಮ ದಲಿತನನ್ನು ಸುಟ್ಟು ಬೂದಿಮಾಡಿದರಲ್ಲೊ

ಈ ರೀತಿ ಹೋರಾಟದ ಹಾಡುಗಳನ್ನು ಹಾಡುತ್ತಾ ಗೋಪನಾಳ್ ಗ್ರಾಮಕ್ಕೆ ಬರಲಾಯಿತು. ಅಲ್ಲಿ ಈ ಕೊಲೆಗಡುಕರಿಗೆ ಶಿಕ್ಷೆ ಆಗಬೇಕು, ಗಡಿಪಾರು ಮಾಡಬೇಕು ಎಂದು ಡಿಎಸ್‌ಎಸ್ ಮುಖಂಡರು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ಒತ್ತಾಯ ಮಾಡಿದರು.

**ಅರಸರ ಕಾಲದ ವೈಭವ ಕಣ್ಮರೆ**

**ಕ. ತ್ಯಾಗರಾಜಪ್ಪ**

ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಯಿಂದಾಗಿ ರಾಜ್ಯದ ಗಡಿಯಲ್ಲಿ ಜಯಚಾಮರಾಜೇಂದ್ರ ಒಡೆಯರ್ ಕಾಲದಲ್ಲಿ ಸ್ಥಾಪಿಸಲಾಗಿದ್ದ ಪ್ರವೇಶದ್ವಾರ ಕಣ್ಮರೆಯಾಗಿ, ಸಂಚಾರಿಗಳ ಅನುಕೂಲಕ್ಕಾಗಿ ತೋಡಿಸಿದ್ದ ಭಾವಿ ಕಣ್ಮರೆಯಾಗಿದೆ.

ಮೈಸೂರು ಸಂಸ್ಥಾನದ ರಾಜ ಜಯಚಾಮರಾಜೇಂದ್ರ ಒಡೆಯರ್ ಮೈಸೂರು ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿದ್ದ ತನ್ನ ಗಡಿಗಳಲ್ಲಿ ವಿಶಿಷ್ಟವಾದ ಹೆಗ್ಗುರುತುಗಳನ್ನು ನಿರ್ಮಿಸಿದ್ದರು. ಮುಳಬಾಗಿಲು ತಾಲ್ಲೂಕಿನ ನಂಗಲಿ ಗಡಿಯಲ್ಲೂ ಆಂಧ್ರಪ್ರದೇಶದ ತಿರುಪತಿಗೆ ಹೋಗಿ ಬರುವ ಹಾಗೂ ಇದೇ ರಸ್ತೆಯ ಮೂಲಕ ನಡೆದು ಹೋಗುವ ಜನರ ಬಾಯಾರಿಕೆ ತಣಿಸಲು ೧೯೪೧ರಲ್ಲಿ ತೋಡಿಸಿದ್ದರು. ಆದರೆ, ಈ ಬಾವಿ ಇಂದು ಪಾಳು ಬಿದ್ದಿದೆ.

ಅಲ್ಲದೆ, ನಂಗಲಿ ಬಳಿ ರಾಜ್ಯದ ಗಡಿ ಸೂಚಿಸಲೆಂದು ೧೯೪೧ರಲ್ಲಿ ಗಂಡಭೇರುಂಡ ಪಕ್ಷಿಗಳ ಕೆತ್ತನೆ ಹೊಂದಿದ್ದ ಕಲ್ಲಿನ ಸ್ತಂಭಗಳ ಪ್ರವೇಶ ದ್ವಾರವನ್ನೂ ನಿರ್ಮಿಸಲಾಗಿತ್ತು. ಆದರೆ, ಪ್ರಾಚೀನ ಆಸ್ತಿಯನ್ನು ಕಾಪಾಡಿಕೊಳ್ಳಬೇಕಾದ ಅಧಿಕಾರಿಗಳು ಪ್ರವೇಶ ದ್ವಾರದ ಒಂದು ಕಲ್ಲೂ ಇಲ್ಲದಂತೆ ನಾಶಪಡಿಸಿದ್ದಾರೆ.ಜತೆಗೆ ಲಕ್ಷಾಂತರ ಮಂದಿಯ ದಾಹ ನೀಗಿಸಿದ್ದ ಬಾವಿಯೂ ಪಾಳಾಗಿರುವುದು ಸಾರ್ವಜನಿಕರ ಬೇಸರಕ್ಕೆ ಕಾರಣವಾಗಿದೆ.

ದಾಹ ತೀರಿಸುತ್ತಿದ್ದ ಬಾವಿ: ರಾಜ್ಯದ ಜನರು ಹಿಂದೆ ಕಾಲ್ನಡಿಗೆಯಲ್ಲಿ ತಿರುಪತಿ ಮತ್ತಿತರ ಪ್ರದೇಶಗಳಿಗೆ ಹೋಗಿ ಬರುತ್ತಿದ್ದರು. ಇದನ್ನು ಮನಗಂಡು ಅಂದಿನ ಜಯಚಾಮರಾಜೇಂದ್ರ ಒಡೆಯರ್ ಪ್ರವೇಶ ದ್ವಾರ ನಿರ್ಮಿಸಿ, ಕುಡಿಯುವ ನೀರಿಗಾಗಿ ಬಾವಿ ತೋಡಿಸಿದ್ದರು. ಆದರೆ ರಸ್ತೆ ಅಭಿವೃದ್ಧಿ ಸಮಯದಲ್ಲಿ ಇದನ್ನು ನಾಶಪಡಿಸಲಾಗಿದೆ ಎಂದು ಸ್ಥಳೀಯ ನಿವಾಸಿ ಸುಬ್ರಮಣಿ ಬೇಸರ ವ್ಯಕ್ತಪಡಿಸಿದರು.

**ಗತ ವೈಭವ ಅಳಿಯದಿರಲಿ**

ನಂಗಲಿಯನ್ನು ಹೊಯ್ಸಳರು, ಗಂಗರು ಆಳ್ವಿಕೆ ಮಾಡಿದ್ದರು. ನಂತರ ಮೈಸೂರು ದೊರೆಗಳು ನಂಗಲಿಯನ್ನು ಗುರುತಿಸುವಂತೆ ಮಾಡಿದ್ದರು. ಇಷ್ಟು ಪ್ರಾಚೀನ ಇತಿಹಾಸ ಇರುವ ನಂಗಲಿ ಗಡಿಯಲ್ಲಿರುವ ಮೈಸೂರು ದೊರೆಗಳ ಬಾವಿಗೆ ಪ್ರಾಚ್ಯ ವಸ್ತು ಇಲಾಖೆ ರಕ್ಷಣೆ ನೀಡಿ ಬಾವಿಯ ಸುತ್ತಲೂ ಕಟ್ಟೆಯನ್ನು ನಿರ್ಮಿಸಬೇಕು. ಇದರಿಂದ ಮುಂದಿನ ಪೀಳಿಗೆಗೆ ನಮ್ಮ ಗತ ವೈಭವವನ್ನು ತೋರಿಸಲು ಸಾಧ್ಯವಾಗುತ್ತದೆ ಎಂದು ಮುಳಬಾಗಿಲಿನ ಇತಿಹಾಸ ಪ್ರಾಧ್ಯಾಪಕ ಡಾ.ಜಿ.ಮುನಿವೆಂಕಟಪ್ಪ ತಿಳಿಸಿದರು.

## ಮರೆಯಾಗುತ್ತಿದೆ ಹೊಯ್ಸಳರ ದೇವಾಲಯ

ಶಾಸನ ಪಿತಾಮಹ ಬಿ.ಎಲ್.ರೈಸ್ ಅವರ ಶಾಸನಗಳ ಸಂಪುಟ ಎಂಬ ಪುಸ್ತಕದಲ್ಲಿ ೧೯೦೦ರಲ್ಲಿ ದಾಖಲು ಮಾಡಿರುವ ನಂಗಲಿ ರುಕ್ಮಿಣಿ ಸತ್ಯಭಾಮ ಸಮೇತ ವೇಣುಗೋಪಾಲ ಸ್ವಾಮಿ ದೇವಸ್ಥಾನ ಸಂಪೂರ್ಣವಾಗಿ ಕುಸಿದಿದೆ. ಕೆಲವೇ ದಿನಗಳಲ್ಲಿ ನಶಿಸಿ ಹೋಗುವ ಹಂತದಲ್ಲಿದೆ. ಗಂಗರು, ಚೋಳರು, ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದ್ದ ನಂಗಲಿ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ದಕ್ಷಿಣದ ಪುಲಿನಾಡು ಕೇಂದ್ರಕ್ಕೆ ನಂಗಲಿ ಒಳಪಟ್ಟಿತ್ತು ಎಂದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ೧೦೭೦- ೭೫ರ ಅವಧಿಯಲ್ಲಿ ಚಾಲುಕ್ಯ ಸೋಮೇಶ್ವರನಿಂದ ಮೊರೈವೀಡು ಎಂದು ಕರೆಸಿಕೊಂಡಿದ್ದ ನಂಗಲಿಯಲ್ಲಿ ಹೊಯ್ಸಳರು ದೇವಸ್ಥಾನ ನಿರ್ಮಿಸಿದ್ದರು. ಕಾಲಾನಂತರ ಅದು ಛತ್ರವಾಗಿ ಕೊನೆಗೆ ಬ್ರಾಹ್ಮಣರಿಗೆ ದಾನ ನೀಡಲಾಗಿತ್ತು. ಕ್ರಿ.ಶ.೧೨೮೦ರ ಕಾಲದಲ್ಲಿ ರಚನೆಯಾಗಿರುವ ಎರಡು ತಮಿಳು ಶಾಸನಗಳು ವೇಣುಗೋಪಾಲ ಸ್ವಾಮಿ ದೇವಾಲಯದ ಅಡಿಪಾಯದ ಮೇಲೆ ಇದೆ. ಈ ಶಾಸನದಲ್ಲಿ ದೇವಸ್ಥಾನವನ್ನು 'ವಿರ್ರಿವೃಂದ ಪೆರುಮಾಳ್' (ಗೋಪಾಲಕೃಷ್ಣ) ಎಂದು ಕರೆಯಲಾಗಿದೆ. ಇದು ಹೊಯ್ಸಳರ ವಿಷ್ಣುವರ್ಧನ ಅಥವಾ ಅದೇ ವಂಶದ ಮತ್ಯಾವುದೋ ರಾಜ ನಿರ್ಮಾಣ ಮಾಡಿರಬಹುದು ಎಂಬ ಮಾಹಿತಿ ಈ ಶಾಸನದಿಂದ ತಿಳಿಯುತ್ತದೆ ಎಂದು ಇತಿಹಾಸ ತಜ್ಞರು ಅಭಿಪ್ರಾಯಪಡುತ್ತಾರೆ.

ದೇವಸ್ಥಾನ ಕಾಲಾನಂತರ ನಂಗಲಿ ಮೂಲಕ ಇತರೆ ಪ್ರಾಂತ್ಯ ಹಾಗೂ ಪ್ರದೇಶಗಳಿಗೆ ಸಂಚರಿಸುವವರಿಗೆ ದೊಡ್ಡ ಧರ್ಮಛತ್ರವಾಗಿ ಮಾರ್ಪಾಡಾಯಿತು. ಆದರೆ, ಈಗ ಛತ್ರ ಅವನತಿಯ ಅಂಚಿನಲ್ಲಿದೆ. ಎಲ್ಲಾ ಗೋಡೆಗಳು ಕುಸಿದಿದೆ. ಕೆತ್ತನೆ ಮಾಡಿರುವ ಕಂಬಗಳು ಕೆಲವೇ ದಿನಗಳಲ್ಲಿ ಬಿದ್ದು ತನ್ನ ಮೂಲ ರೂಪವನ್ನೇ ಕಳೆದುಕೊಳ್ಳುವ ಹಂತ ತಲುಪಿದೆ. ಹಾಗೂ ಛತ್ರದ ಮುಂಭಾಗದ ಗೋಡೆ ಮಾತ್ರ ಗಟ್ಟಿಮುಟ್ಟಾಗಿದೆ. ಹಳೆಯ ಕಾಲದ ಸುಣ್ಣ ಮತ್ತು ಇಟ್ಟಿಗೆಗಳಿಂದ ನಿರ್ಮಾಣ ಮಾಡಿರುವ ಗೋಪುರ ಮಳೆಗಾಳಿ ಹೊಡೆತಕ್ಕೆ ಕೇವಲ ಅರ್ಧ ಮಾತ್ರ ಉಳಿದುಕೊಂಡಿದೆ. ಇನ್ನು ಗೋಪುರದ ಒಂದು ಭಾಗದಲ್ಲಿ ದೇವರ ವಿಗ್ರಹ ಎದ್ದು ಕಾಣುತ್ತಿದೆ. ಇನ್ನು ಛತ್ರದ ಒಳಗೆ ಲೆಕ್ಕವಿಲ್ಲದಷ್ಟು ಕಂಬಗಳಿಂದ ನಿರ್ಮಾಣವಾದ ವಿಶಾಲವಾದ ಪ್ರಾಂಗಣದಲ್ಲಿ ಸುತ್ತಲೂ ಗೋಡೆಗಳು ಇಲ್ಲದಿದ್ದರೂ, ಚಾವಣಿಯ ಮೇಲ್ಭಾಗದಲ್ಲಿ ಗೋಪುರಗಳ ಸರಮಾಲೆ ಇದೆ. ಕಟ್ಟಡದ ಒಳಗೆ ಮತ್ತು ಹೊರಗೆ ಗಿಡಗಂಟೆಗಳು ಬೆಳೆದಿವೆ. ಕಸ ಕಡ್ಡಿಯಿಂದ ಕೂಡಿದೆ. ಕಟ್ಟಡದ ಸುತ್ತಲೂ ತಂದು ಹಾಕಿರುವುದರಿಂದ ಕಟ್ಟಡದ ಸೌಂದರ್ಯ ಹಾಳಾಗಿದೆ.

ದೇವಸ್ಥಾನದ ಹಿಂಭಾಗದಲ್ಲಿ ಹಳೆಯ ಕಾಲದ ಒಂದು ಕುಡಿಯುವ ನೀರಿನ ಬಾವಿಯಿದೆ. ಸುತ್ತಲೂ ಹಾಕಿರುವ ಚಪ್ಪಡಿ ಕಲ್ಲುಗಳು ವಾಲಿಕೊಂಡಿವೆ. ಬಾವಿಯಲ್ಲಿ ಕೆಲವರು ಕಸ ಕಡ್ಡಿಯನ್ನು ತಂದು ಹಾಕಿರುವುದರಿಂದ ಬಾವಿಯೂ ಮುಚ್ಚಿಹೋಗುವ ಹಂತದಲ್ಲಿದೆ. ರಾಜರು ನಿರ್ಮಾಣ ಮಾಡಿರುವ ದೇವಸ್ಥಾನವನ್ನು ಪುರಾತತ್ವ ಮತ್ತು ಪ್ರಾಚ್ಯ ವಸ್ತು ಇಲಾಖೆಯವರು ದೇವಸ್ಥಾನದಲ್ಲಿರುವ ಹಳೆಯ ಕೆತ್ತನೆಗಳು, ಅಲಂಕಾರವಾದ ಕಂಬಗಳು, ಕಟ್ಟಡದ ಅಡಿಪಾಯದ ಮಣ್ಣಿನಲ್ಲಿ ಮುಚ್ಚಿಹೋಗಿರುವ ಎರಡು ತಮಿಳು

ಶಾಸನಗಳು ಹಾಗೂ ಪಕ್ಕದಲ್ಲಿಯೇ ಇರುವ ಶಾಸನ ಹಾಗೂ ವೀರಗಲ್ಲುಗಳನ್ನು ಕಾಪಾಡಿ ಒಂದು ಕಡೆ ಸಂಗ್ರಹ ಮಾಡಿದರೆ ಮುಂದಿನ ತಲೆಮಾರಿಗೆ ಇತಿಹಾಸವನ್ನು ಉಳಿಸಿದಂತಾಗುತ್ತದೆ.

**ರಾಜರ ಆಳ್ವಿಕೆ**

ನಂಗಲಿಯಲ್ಲಿ ಸಪ್ತ ಮಾತೃಕೆಯರ ವಿಗ್ರಹಗಳೂ ಇವೆ. ಶಾಕ್ತ, ಶೈವ ಮತ್ತು ವೈಷ್ಣವ ಪಂಥಗಳು ಇರುವುದು ಕಂಡುಬರುತ್ತದೆ. ದೇವಸ್ಥಾನದ ಸಮೀಪವೇ ಒಂದು ದೊಡ್ಡ ಬಂಡೆಯ ಮೇಲೆ ಶಾಸನವಿದೆ. ಗಾಳಿ, ಧೂಳು ಹಾಗೂ ಮಳೆಗೆ ಪಾಚಿ ಕಟ್ಟಿಕೊಂಡಿದೆ. ಪಕ್ಕದಲ್ಲಿಯೇ ತುರುಗಗಳನ್ನು ಕಾಪಾಡಲು ವೀರನೊಬ್ಬ ಕತ್ತಿ ಮತ್ತು ಬಿಲ್ಲು ಬಾಣವನ್ನು ಎತ್ತಿಕೊಂಡು ಶತ್ರುಗಳ ವಿರುದ್ಧ ಹೋರಾಡುತ್ತಿರುವ ವೀರಗಲ್ಲು ಇರುವುದನ್ನು ನೋಡಬಹುದು. ಇದರಿಂದ ನಂಗಲಿನಲ್ಲಿ ಅನೇಕ ರಾಜರು ಆಳ್ವಿಕೆ ಮಾಡಿರುವುದು ತಿಳಿಯುತ್ತದೆ ಎನ್ನುತ್ತಾರೆ ಇತಿಹಾಸ ತಜ್ಞಕೆ.ಆರ್.ನರಸಿಂಹನ್.

ಲೇಖಕರ ವಿಳಾಸ :

೧. ಪ್ರೊ ಮಲ್ಲೇಪುರಂ ಜಿ. ವೆಂಕಟೇಶ
ವಿಶ್ರಾಂತ ಕುಲಪತಿಗಳು
ನಂ.೨೯೬, 'ಪೂರ್ಣಪ್ರೀತಿ'
೧೦ನೇ ಮುಖ್ಯರಸ್ತೆ, ಎಂ.ಇ.ಐ. ಬಡಾವಣೆ
ಬಾಗಲಗುಂಟೆ, ಬೆಂಗಳೂರು - ೫೬೦ ೦೭೩

೨. ಡಾ. ಸಣ್ಣರಾಮ
ನಂ.೮೦, 'ಸಮತಾ'
೪ನೇ ತಿರುವು, ವಿದ್ಯಾನಗರ
ಶಿವಮೊಗ್ಗ - ೫೭೭ ೨೦೩

೩. ಕೆ.ಬಿ. ಸಿದ್ದಯ್ಯ, ಕವಿಗಳು
ಕನ್ನಡ ಸರ್ಕಾರಿ ಶಾಲೆ ಹಿಂಭಾಗ
ಉಪ್ಪಾರಹಳ್ಳಿ, ತುಮಕೂರು.

೪. ಡಾ. ಸಿದ್ಧಲಿಂಗಯ್ಯ
ವಿಶ್ರಾಂತ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು ವಿ.ವಿ.
ಬೆಂಗಳೂರು.

೫. ಶಿವಾಜಿ ಗಣೇಶನ್
ಹಿರಿಯ ಪತ್ರಕರ್ತ, ಟಿ-೬,
ಸಿಲ್ವರ್ ವೇವ್, ಎಲೈಟ್ ಅಪಾರ್ಟ್‌ಮೆಂಟ್
ಚರ್ಚ್ ಹಿಂಭಾಗ, ಕೆಂಗೇರಿ ಉಪನಗರ
ಬೆಂಗಳೂರು – ೫೬೦೦೬೦
ದೂ: ೯೮೪೫೬೦೬೯೫೨

೬. ಡಾ. ಮೂಡ್ನಾಕೂಡು ಚಿನ್ನಸ್ವಾಮಿ
ನಂ.೫೫೮, ಕಾವ್ಯಾಂಬುಧಿ,
೩ನೇ ಮುಖ್ಯರಸ್ತೆ, ಬೆಲ್ ಲೇಔಟ್
೨ನೇ ಹಂತ, ರಾಜರಾಜೇಶ್ವರಿ ನಗರ
ಬೆಂಗಳೂರು - ೫೬೦ ೦೯೮.

೭. ನಾಡೋಜ ಡಾ. ಕಮಲಾ ಹಂಪನಾ
ನಂ. ೧೦೭೯, ಸ್ವನಿಮಾ
೧೮-ಎ, ಮುಖ್ಯರಸ್ತೆ
೫ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು ೫೬೦೦೧೦

೮. ಶ್ರೀಮತಿ ಬಿ.ಟಿ. ಲಲಿತಾನಾಯಕ್
ನಂ.೨೨, ೧ನೇ ಮುಖ್ಯರಸ್ತೆ
೨ನೇ ಅಡ್ಡರಸ್ತೆ, ನ್ಯಾಯಾಧೀಶರ ಬಡಾವಣೆ
ಸಂಜಯನಗರ, ಆರ್.ಎಂ.ವಿ. ೨ನೇ ಹಂತ
ಬೆಂಗಳೂರು - ೫೬೦ ೦೯೪

೯. ಡಾ. ಬರಗೂರು ರಾಮಚಂದ್ರಪ್ಪ

ನಂ.೨೭೫, ೧೧ನೇ ಕ್ರಾಸ್

ಜೆ.ಪಿ.ನಗರ, ೨ನೇ ಹಂತ

ಬೆಂಗಳೂರು-೫೬೦ ೦೭೮

೧೧. ಡಾ. ಪ್ರಶಾಂತನಾಯಕ ಜಿ.

ಪ್ರಾಧ್ಯಾಪಕರು, ಕನ್ನಡ ಭಾರತಿ

ಕುವೆಂಪು ವಿಶ್ವವಿದ್ಯಾನಿಲಯ

ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ.

೧೨. ಡಾ. ಬಿ.ಎಂ. ಪುಟ್ಟಯ್ಯ

ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ

ಹಂಪಿ, ಹೊಸಪೇಟೆ ತಾಲ್ಲೂಕು

ಬಳ್ಳಾರಿ ಜಿಲ್ಲೆ

೧೩. ಡಾ. ಎಚ್.ಟಿ. ಪೋತೆ

ಪ್ರಾಧ್ಯಾಪಕರು ಮತ್ತು ನಿರ್ದೇಶಕರು

ಕನ್ನಡ ವಿಭಾಗ, ಕನ್ನಡ ಅಧ್ಯಯನ ಕೇಂದ್ರ

ಗುಲ್ಬರ್ಗಾ ವಿಶ್ವವಿದ್ಯಾನಿಲಯ ಕಲಬುರಗಿ ಜಿಲ್ಲೆ.

೧೪. ಡಾ. ಎಲ್. ಹನುಮಂತಯ್ಯ

ಖ್ಯಾತ ಕವಿಗಳು, 'ಮಹಾಯಾನ'

ನಂ.೩೩೨, ೩ನೇ ಹಂತ

೨ನೇ ಬ್ಲಾಕ್, ಬಸವೇಶ್ವರನಗರ

ಬೆಂಗಳೂರು-೫೬೦ ೦೭೯

೧೦. ಡಾ. ಶಿವಾನಂದ ಕೆಳಗಿನಮನಿ

ಪ್ರಾಧ್ಯಾಪಕರು, ಕನ್ನಡ ಭಾರತಿ

ಕುವೆಂಪು ವಿಶ್ವವಿದ್ಯಾನಿಲಯ

ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ

೧೫. ಡಾ. ವೆಂಕಟಗಿರಿ ದಳವಾಯಿ

ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ

ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ-೫೮೩೨೭೬

೧೬. ಡಾ. ಸಮತಾ ಬಿ. ದೇಶಮಾನೆ

ಪ್ರಾಧ್ಯಾಪಕರು, ಸಮಾಜಶಾಸ್ತ್ರ

ವಿಭಾಗ ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರು.

೧೭ ಡಾ. ಬಿ. ಗಂಗಾಧರ

ಪ್ರಾಧ್ಯಾಪಕರು, ಕನ್ನಡ ವಿಭಾಗ

ಜ್ಞಾನಭಾರತಿ, ಬೆಂಗಳೂರು ವಿ.ವಿ.

ಬೆಂಗಳೂರು.

೦೮. ಡಾ. ದು. ಸರಸ್ವತಿ
ನಂ.೦೦೧, ಆರ್.ಎಸ್.ಎಸ್.
ಶಾಂತಿನಿವಾಸ, ತುಮಕೂರು ರಸ್ತೆ,
ಯಶವಂತಪುರ
ಬೆಂಗಳೂರು ೫೬೦ ೦೨೨.

೦೯. ಓಂ ಪ್ರಕಾಶ್ ನಾಯಕ್
ನಂ.೨೨, ೧ನೇ ಮುಖ್ಯರಸ್ತೆ
೨ನೇ ರಸ್ತೆ, ಆರ್.ಎಂ.ವಿ. ೨ನೇ ಹಂತ
ಜುಡಿಶಿಯಲ್ ಲೇಔಟ್
ಸಂಜಯನಗರ
ಬೆಂಗಳೂರು - ೫೬೦ ೦೯೪

೧೦. ಡಾ. ಶಿವರಾಜ ಬ್ಯಾಡರಹಳ್ಳಿ
ಸಹಪ್ರಾಧ್ಯಾಪಕರು
ಆಕ್ಸ್‌ಫರ್ಡ್ ಕಾಲೇಜು
ಬೆಂಗಳೂರು ೫೬೦ ೦೦೨

೧೧. ಎನ್. ರವಿಕುಮಾರ್
ಸಂಪಾದಕ
ಶಿವಮೊಗ್ಗ ಟೆಲೆಕ್ಸ್ ದಿನಪತ್ರಿಕೆ
ಶಿವಮೊಗ್ಗ

೧೨. ಐಸಕ್ ಅರುಳ್ ಸಲ್ವ
ಸ್ಲಂಜಗತ್ತು ಮಾಸಪತ್ರಿಕೆ
ನಂ.೭೭೦, ೨ನೇ ಮುಖ್ಯರಸ್ತೆ
೨೩ನೇ ಅಡ್ಡರಸ್ತೆ, ಎಲ್.ಆರ್.ನಗರ
ಬೆಂಗಳೂರು- ೫೬೦ ೦೪೭

೧೩ ಹುಲಿಕುಂಟೆ ಮೂರ್ತಿ
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿಪೂರ್ವ ಕಾಲೇಜು
೧೮ನೇ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು ೫೬೦ ೦೧೨

೧೪. ಡಾ. ಆರ್.ವಿ. ಚಂದ್ರಶೇಖರ್
ಸಹಾಯಕ ಪ್ರಾಧ್ಯಾಪಕರು
ತಳಸಮುದಾಯಗಳ ಅಧ್ಯಯನ
ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ
ಭಾರತ ವಿಶ್ವವಿದ್ಯಾಲಯ,
ಬೆಂಗಳೂರು ೫೬೦೨೪೨

೧೫. ಪ್ರದೀಪ್ ಎಲ್, ಮಾಲ್ಗುಡಿ
ನಂ.೨೧, ಎಂ.ಬಿ.ಎಸ್. ಬಿಲ್ಡಿಂಗ್
ರೂಂ.ನಂ.೧, ೧ನೇ ಮಹಡಿ

೧೧ನೇ ಅಡ್ಡರಸ್ತೆ, ವಿಲ್ಸನ್‌ಗಾರ್ಡನ್

ಬೆಂಗಳೂರು ೫೬೦ ೦೨೭

೧೬. ಡಾ. ಅರುಣ್ ಜೋಳದ ಕೂಡ್ಲಿಗಿ

ಸಂಶೋಧನಾರ್ಥಿ

ಹಂಪಿ ವಿಶ್ವವಿದ್ಯಾನಿಲಯ, ಹಂಪಿ

ಹೊಸಪೇಟೆ ತಾಲ್ಲೂಕು

ಬಳ್ಳಾರಿ ಜಿಲ್ಲೆ.

೧೭. ಗುರುಪ್ರಸಾದ್ ಕಂಟಲಗೆರೆ

ಮಲಗೊಂಡನಹಳ್ಳಿ ಅಂಚೆ

ಚಿಕ್ಕನಾಯಕನಹಳ್ಳಿ ತಾಲ್ಲೂಕು

ತುಮಕೂರು ಜಿಲ್ಲೆ

೧೮. ಗೋವಿಂದರಾಜು ಎಂ. ಕಲ್ಲೂರು

ಸಂಶೋಧನಾ ವಿದ್ಯಾರ್ಥಿ

ಡಾ. ಡಿ.ವಿ. ಗುಂಡಪ್ಪ ಕನ್ನಡ

ಅಧ್ಯಯನ ಮತ್ತು ಸಂಶೋಧನಾ ಕೇಂದ್ರ

ತುಮಕೂರು ವಿಶ್ವವಿದ್ಯಾಲಯ

ತುಮಕೂರು-೫೭೨ ೧೦೩

೧೯. ಎಸ್.ಕೆ. ಮಂಜುನಾಥ್

ಸಂಶೋಧನಾ ವಿದ್ಯಾರ್ಥಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ

ಮಾನಸ ಗಂಗೋತ್ರಿ ಮೈಸೂರು – ೫೭೦ ೦೦೬

೨೦, ಮಂಜುನಾಥ ವಿ.ಎಂ

ವೆಂಕಟಾಲ, ಲೇಕ್‌ವ್ಯೂ ರೆಸಿಡೆನ್ಸಿ

ಯಲಹಂಕ ಪೋಸ್ಟ್

ಬೆಂಗಳೂರು- ೫೬೦ ೦೬೪

೨೧. ಬಿ.ಆರ್. ಭಾಸ್ಕರ ಪ್ರಸಾದ್

ನಂ.೪೨೧, ಲೋಹಿತ್ ನಗರ

ಕಸಬಾ ಹೋಬಳಿ-೫೬೨ ೧೨೩

ನೆಲಮಂಗಲ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆ.

೨೨. ಡಾ. ನಾಗಭೂಷಣ ಬಗ್ಗನಡು

ಸಹಾಯಕ ಪ್ರಾಧ್ಯಾಪಕರು

ಡಾ.ಡಿ.ವಿ.ಗುಂಡಪ್ಪ

ಕನ್ನಡ ಅಧ್ಯಯನ ಕೇಂದ್ರ,

ತುಮಕೂರು ವಿಶ್ವವಿದ್ಯಾಲಯ

ತುಮಕೂರು

೨೩ ಅಪ್ಪಗೆರೆ ಸೋಮಶೇಖ

ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ

ಕಡಗಂಚಿ, ಆಳಂದ ರಸ್ತೆ

ಕಲಬುರಗಿ ೫೮೫೮೨೬

ಮೊ- ೯೯೦೨೯೩೩೭೭೨

೩೪. ಡಾ. ವಡ್ಡಗೆರೆ ನಾಗರಾಜಯ್ಯ
ನಂ. ೩೮೮, 'ಬುದ್ಧಭೂಮಿ',
೧ನೇ ಮುಖ್ಯರಸ್ತೆ,
ಜಗಜ್ಯೋತಿನಗರ, ಜ್ಞಾನಭಾರತಿ ಅಂಚೆ,
ಬೆಂಗಳೂರು ೫೬೦೦೫೬.
ಮೊ. - ೯೪೪೮೫೩೮೪೧೨,
೮೭೨೨೭೨೪೧೭೪

೩೫, ಡಾ. ಬಾಲಗುರುಮೂರ್ತಿ
ಬೋಧಿವೃಕ್ಷ, ನಂ.೨೭, ವೈಟ್ ಸಿಟಿ
ಲೇಔಟ್, ವೀರಗೋ ನಗರ ಅಂಚೆ
ಬೆಂಗಳೂರು-೫೬೦೦೪೯

೩೬. ಡಾ. ಓ. ನಾಗರಾಜು
ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೊರಟಗೆರೆ, ತುಮಕೂರು
ಮೊ. ೯೪೪೮೬೫೯೬೪೬

೩೭ ಶ್ರೀಮತಿ ಆಶಾರಾಣಿ ಕೆ.
ಅತಿಥಿ ಉಪನ್ಯಾಸಕಿ
ವಿಶ್ವವಿದ್ಯಾಲಯ ವಿಜ್ಞಾನ ಕಾಲೇಜು
ತುಮಕೂರು ವಿಶ್ವವಿದ್ಯಾಲಯ
ತುಮಕೂರು

೩೮ ಅರವಿಂದ ಇ.
ಸಂಶೋಧನಾ ವಿದ್ಯಾರ್ಥಿ
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ
ಕೇಂದ್ರ, ತುಮಕೂರು ವಿಶ್ವವಿದ್ಯಾಲಯ
ತುಮಕೂರು

೩೯. ಶ್ರೀಧರ ಆರ್. ವಿ.
ಸಂಶೋಧನಾರ್ಥಿ
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ
ಮತ್ತು ಸಂಶೋಧನಾ ಕೇಂದ್ರ
ತುಮಕೂರು ವಿಶ್ವವಿದ್ಯಾಲಯ
ತುಮಕೂರು

೪೦, ಲಕ್ಷ್ಮೀಕಾಂತ್ ಎಲ್. ವಿ.
ದ್ವಿತೀಯ ದರ್ಜೆ ಸಹಾಯಕರು
ತುಮಕೂರು ವಿಶ್ವವಿದ್ಯಾಲಯ
ತುಮಕೂರು
ಮೊ-೯೯೪೫೮೦೩೪೩೪

೪೧ ಜಿ. ಪಳನಿಸ್ವಾಮಿ ಜಾಗೇರಿ
ಆರ್. ಬಿ. ತಾಂಡ, ಜಾಗೇರಿ

ಸತ್ತೇಗಾಲ ಅಂಚೆ

ಕೊಳ್ಳೇಗಾಲ ತಾಲ್ಲೂಕು

ಮೊ. - ೮೧೦೫೫೩೨೬೧೩

೪೧. ಟಿ. ತಿಪ್ಪೇಸ್ವಾಮಿ ಕೆರೆಯಾಗಳಹಳ್ಳಿ

ಕನ್ನಡ ಉಪನ್ಯಾಸಕರು

ಸರ್ಕಾರಿ ಬಾಲಕಿಯರ ಪದವಿ ಪೂರ್ವ

ಕಾಲೇಜು, ಚಿತ್ರದುರ್ಗ

ಮೊ-೯೮೪೫೦೯೬೨೪೭

೪೨. ಕೆ. ತ್ಯಾಗರಾಜಪ್ಪ

ನಂಗಲಿ ಕೊತ್ತೂರು

ಮುಳಬಾಗಿಲು ತಾಲ್ಲೂಕು,

ಕೋಲಾರ

**ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು**

**ಕಾರ್ಯಕಾರಿ ಸಮಿತಿ**

**ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು**

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ವ.ಚ. ಚನ್ನೇಗೌಡ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷರು

ಶ್ರೀ ಮಾಯಣ್ಣ, ಬೆಂಗಳೂರು ನಗರ

ಶ್ರೀ ಚಿ.ಮಾ.ಸುಧಾಕರ, ಬೆಂ. ಗ್ರಾಮಾಂತರ

ಶ್ರೀ ಸಿಂ.ಲಿಂ. ನಾಗರಾಜ್, ರಾಮನಗರ

ಶ್ರೀ ನಾಗಾನಂದ ಕೆಂಪರಾಜ್, ಕೋಲಾರ

ಶ್ರೀ ಕೈವಾರ ಎನ್. ಶ್ರೀನಿವಾಸ, ಚಿಕ್ಕಬಳ್ಳಾಪುರ

ಶ್ರೀಮತಿ ಬಾ.ಹ. ರಮಾಕುಮಾರಿ, ತುಮಕೂರು

ಡಾ. ದೊಡ್ಡಮಲ್ಲಯ್ಯ, ಚಿತ್ರದುರ್ಗ

ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ದಾವಣಗೆರೆ

ಶ್ರೀ ಡಿ.ಬಿ. ಶಂಕರಪ್ಪ, ಶಿವಮೊಗ್ಗ

ಡಾ. ವೈ.ಡಿ. ರಾಜಣ್ಣ, ಮೈಸೂರು '

ಶ್ರೀ ಬಿ.ಎಸ್. ವಿನಯ್, ಚಾಮರಾಜನಗರ

ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ, ಮಂಡ್ಯ

ಶ್ರೀ ನಾಯಕರಹಳ್ಳಿ ಮಂಜೇಗೌಡ, ಹಾಸನ

ಶ್ರೀ ಬಿ.ಎಸ್. ಲೋಕೇಶ ಸಾಗರ್, ಕೊಡಗು

ಶ್ರೀ ಕುಂದೂರು ಅಶೋಕ, ಚಿಕ್ಕಮಗಳೂರು

ಶ್ರೀ ಸುರೇಶ ಚನಶೆಟ್ಟಿ, ಬೀದರ್

ಡಾ.ಬಸವಪ್ರಭುಪಾಟೀಲ ಬೆಟ್ಟದೂರು,ರಾಯಚೂರು

ಶ್ರೀ ರಾಜಶೇಖರ ಗು. ಅಂಗಡಿ, ಕೊಪ್ಪಳ

ಶ್ರೀ ಸಿದ್ಧರಾಮ ಕಲ್ಮಠ, ಬಳ್ಳಾರಿ

ಶ್ರೀಬಸವರಾಜ ಸಿದ್ರಾಮಪ್ಪ ಮಸೂತಿ, ಮಹಾರಾಷ್ಟ್ರ

ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ

ಡಾ.ತಮಿಳ್ಸೆಲ್ವಿ,ತಮಿಳುನಾಡು

ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ

ಶ್ರೀ ಮಲ್ಲಿಕಾರ್ಜುನ ಬದಾಮಿ, ಗೋವಾ

ಬಳನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು :

ಡಾ. ಚಂದ್ರಶೇಖರ ಕಂಬಾರ

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ. :

ಡಾ. ಗೀತಾ ವಸಂತ

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ

ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಯಪರ

ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ, ಬಾಗಲಕೋಟೆ

ಡಾ. ಲಿಂಗರಾಜ ರು, ಅಂಗಡಿ, ಧಾರವಾಡ

ಶ್ರೀ ಲಿಂಗಯ್ಯ ಬಿ. ಹಿರೇಮಠ, ಹಾವೇರಿ

ಶ್ರೀ ಶರಣು ಗೋಗೇರಿ, ಗದಗ

ಶ್ರೀ ಅರವಿಂದ ಕರ್ಕಿಕೋಡಿ, ಉತ್ತರ ಕನ್ನಡ

ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ

ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ, ಯಾದಗಿರಿ

ಡಾ. ರಮೇಶ ಲಂಡನಕರ

ಸರ್ಕಾರದ ಪ್ರತಿನಿಧಿ :

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :

ಡಾ. ವಸುಂಧರಾ ಭೂಪತಿ ಮತ್ತು

ಡಾ. ಎಸ್.ಪಿ. ಉಮಾದೇವಿ

ಪರಿಶಿಷ್ಟ ಜಾತಿ ಪ್ರತಿನಿಧಿಗಳು :

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು

ಶ್ರೀ ಪಿ.ಎ. ಮೇಘಣ್ಣನವರ

ಪರಿಶಿಷ್ಟ ಪಂಗಡ ಪ್ರತಿನಿಧಿ :

ಡಾ. ನೀಲಗಿರಿ ತಳವಾರ

ಸಂಘಸಂಸ್ಥೆಗಳ ಪ್ರತಿನಿಧಿ :

ಶ್ರೀ ಶೇಖರಗೌಡ ಮಾಲಿಪಾಟೀಲ



ನೂರೈದು ವರ್ಷಗಳ ಭವ್ಯ ಇತಿಹಾಸದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಅವಧಿಯುದ್ದಕ್ಕೂ ಅನೇಕ ಮೈಲಿಗಲ್ಲುಗಳನ್ನು ದಾಟಿದೆ ಮತ್ತು ನೆಟ್ಟಿದೆ. ಪ್ರಸ್ತುತ ಪ್ರಕಟವಾಗುತ್ತಿರುವ ದಲಿತ ಸಾಹಿತ್ಯ ಸಂಪುಟಗಳು ಅಂಥ ಇನ್ನೊಂದು ಮಹತ್ವದ ಹಾಗೂ ಐತಿಹಾಸಿಕ ಎನಿಸುವಂಥ ಮೈಲಿಗಲ್ಲು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ ಘಟ್ಟಗಳ ಹಾಗೆಯೇ ೧೯೭೦-೮೦ರ ದಶಕದಲ್ಲಿ ಆರಂಭವಾದ ಬಂಡಾಯ ಹಾಗೂ ದಲಿತ ಪಂಥಗಳೂ ಅತ್ಯಂತ ಪ್ರಮುಖ ಘಟ್ಟಗಳು. ಬಂಡಾಯ ಹಾಗೂ ದಲಿತ ಪಂಥಗಳ ಕಾಲದಲ್ಲಿ ಕನ್ನಡದಲ್ಲಿ ಅನೇಕ ಮಹತ್ವದ ಕೃತಿಗಳು ಪ್ರಕಟವಾಗಿವೆ. ಆದರೆ, ಪ್ರಾತಿನಿಧಿಕ ದಲಿತ ಬರವಣಿಗೆಗಳನ್ನು ಒಳಗೊಂಡ ಸಂಪುಟಗಳು ಇದುವರೆಗೆ ಬಂದಿರಲಿಲ್ಲ. ಈಗ ನಿಮ್ಮ ಕೈಯಲ್ಲಿ ಆ ಸಂಪುಟಗಳು ಇವೆ. ಇವು ಕನ್ನಡದ ದಲಿತ ಲೋಕವನ್ನು, ಸಂವೇದನೆಯನ್ನು ಅರ್ಥ ಮಾಡಿಕೊಳ್ಳಲು ನೆರವಾದರೆ ಪರಿಷತ್ತು ಕೃತಾರ್ಥ. ನನ್ನ ಕಾಲದಲ್ಲಿ ಇದೆಲ್ಲ ಆಯಿತು ಎಂಬುದು ನನ್ನ ಹೆಮ್ಮೆ.

**ನಾಡೋಜ ಡಾ. ಮನು ಬಳಿಗಾರ್**
ಅಧ್ಯಕ್ಷರು

ರೂ.೩೦೦/-


**ಕನ್ನಡ ಸಾಹಿತ್ಯ ಪರಿಷತ್ತು**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.